ಸಂಪುಟ 5.I

ಸಮಗ್ರ

1947

ಪ್ರಥಮ ಸಂಚಿಕೆ 6-1-1947

ಸಂಚಿಕೆ ಸಂಖ್ಯೆ 1 ರಿಂದ 25

ಸಂಚಿಕೆ 23 ಮಿಸ್ಸಿಂಗ್

ಪುಟ ಸಂಖ್ಯೆ 1 ರಿಂದ 306

ಜೈಹಿಂದ್ Reg. No.M. 4746

ಸಮತೆ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಕಟ್ಟು ೬ ಸಂಚಿಕೆ ೧ ಬಳ್ಳಾರಿ ಜನವರಿ ೬ ಸೋಮವಾರ ೧೯೪೭ ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವು.

ಮಹಾತ್ಮ ಗಾಂಧಿಯವರ ಯಾತ್ರೆ

ಪೂರ್ವ ಬಂಗಾಳದ ನೀಡಿತ ಹಳ್ಳಿಗಳಲ್ಲಿ ಹಿಂದೂ, ಮುಸ್ಲಿಂ ಐಕ್ಯತೆಗಾಗಿ ಕೈಗೊಂಡ ಗಾಂಧೀಜೀಯಾತ್ರೆಯು ಜನವರಿ ೨ ನೆಯ ದಿನಾಂಕ ಗುರುವಾರದಿಂದ ಪ್ರಾರಂಭವಾಗಿದೆ. ತಾವು ಸಂದರ್ಶಿಸಲಿರುವ ಹಳ್ಳಿಗಳಲ್ಲಿ ಸಾಯಂಕಾಲ ೪-೩೦ ಕ್ಕೆ ಪ್ರಾರ್ಥನಾ ಸಭೆಯು ನಡೆಯುವುದು. ಹಿಂದೂವಿನ ಮನೆಯಲ್ಲಾಗಲಿ ಮುಸ್ಲಿಂರ ಮನೆಯಲ್ಲಾಗಲಿ, ತಾವು ತಂಗುವರು. ವಿಶೇಷ ಸಂದರ್ಭಕ್ಕಾಗಿ ಇಬ್ಬರು ಹೊರಲಿಕ್ಕೆ ಸಾಧ್ಯವಾದ ಚಾಪೆಯು ಗುಡಿಸಲೊಂದು ಗಾಂಧೀಜಿಯವರೊಡನೆ ಹೋಗುವುದು. (ಮಡಚಬಹುದು) ಸಣ್ಣ ಹಾಸಿಗೆಯೊಂದನ್ನು ತೆಗೆದುಕೊಂಡು ಹೋಗುವರು. ವೃತ್ತಪತ್ರಿಕಾ ಕರ್ತರೂ ಹಿಂಬಾಲಿಸುವಂತೆ ಕಾಣುತ್ತದೆ. ಪ್ರತಿನಿತ್ಯ ಸಾಯಂಕಾಲ ಆದಿನದ ವಿವರಗಳನ್ನು ಕೊಡಲಾಗುವುದು. ಈಗಿನ ಕಾರ್ಯಕ್ರಮದಂತೆ ೨೬ ಹಳ್ಳಿಗಳನ್ನು ಸಂದರ್ಶಿಸುವ ವ್ಯವಸ್ಥೆಯಾಗಿದೆ. ಫಿಬ್ರವರಿ ೧ ನೆಯ ತಾರೀಕಿನೆಯ ಹಳ್ಳಿಯಾದ ನಾರಿಯನ್ನು ಸಂದರ್ಶಿಸಿ ಯಾತ್ರೆಯನ್ನು ಮುಗಿಸಬಹುದು.

ಯಾತ್ರೆಯು ಪ್ರಾರಂಭವಾದ ಪ್ರಥಮ ದಿನ ಶ್ರೀರಾಂಪುರಕ್ಕೆ 2½ ಮೈಲಿ ದೂರದಲ್ಲಿರುವ ಚಾಂದಿಪುರಕ್ಕೆ ಬಂದರು. ಅಲ್ಲಿ 7ನೆಯ ತಾ. ವರೆಗೆ ಇರುವರು

ಗಾಂಧೀಜೀಯೊಡನೆ ಮಾತುಕತೆ.

ಕಾಂಗ್ರೆಸ್ ಅಧ್ಯಕ್ಷರಾದ ಆಚಾರ್ಯಕೃಪಾಲಿನಿ, ಕಾರ್ಯದರ್ಶಿಗಳಾದ ಶಂಕರರಾವದೇವ ಇವರು, ಪಂಡಿತ ಜವಹರಲಾಲ ನೆಹರೂರೊಡನೆ ಶ್ರೀರಾಂಪುರಕ್ಕೆ ತೆರಳಿ ಮಹಾತ್ಮ ಗಾಂಧಿಯವರೊಡನೆ ಸದ್ಯದ ರಾಜಕೀಯವನ್ನು ಕುರಿತು ಎರಡುದಿನಗಳವರೆವಿಗೆ ವಿಚಾರ ವಿಮರ್ಶೆ ನಡೆಸಿದರು. ಘಟನಾ ಸಮಿತಿಯು ಬೇರೆ ಬೇರೆ ಗುಂಪುಗಳಲ್ಲಿ ವಿಭಾಗವಾಗಿ ಕೆಲಸ ನಡೆಸುವ ವಿಷಯ, ಅಸಾಂ ಮತ್ತು ಸರಹದ್ದು ಪ್ರಾಂತಗಳ ಬಿ. ಸಿ. ಗುಂಪುಗಳಲ್ಲಿ ಸೇರಬೇಕೊ ಬೇಡವೂ ಎಂಬ ಅಂಶ. ಬ್ರಿಟಿಷ್ ಸರಕಾರದವರು ಡಿಶಂಬರ್ 6 ಕ್ಕೆ ಹೊರಡಿಸಿದ ಪ್ರಕಟನೆಯನ್ನು ಒಪ್ಪಬೇಕೂ ಬೇಡವೂ ಎಂಬಪ್ರಶ್ನೆ- ಇವುಗಳೆಲ್ಲಾ ಮಹಾತ್ಮ ಗಾಂಧಿಯವರು ಸಮರ್ಪಕವಾವ ಉತ್ತರಗಳನ್ನಿತ್ತಿರುವುದಾಗಿ ಗೊತ್ತಾಗಿದೆ. ಈ ಮಾತುಕತೆಗಳ ನಂತರ ಮುಖಂಡರು ದೆಹಲಿಗೆ ಹಿಂದಿರುಗಿದರು.

ಚೀನದಲ್ಲಿ ಹೊಸ ರಾಜ್ಯ ಘಟನೆ
—ಅಮೇರಿಕಾ ರಷ್ಯಾ ತಿಕ್ಕಾಟ—

ಚೀನದ ಘಟನಾ ಸಮಿತಿಯು ೪೦ ದಿನಗಳವರೆಗೂ ಸಭೆ ನಡೆಸಿ ಹೊಸ ರಾಜ್ಯ ಘಟನೆಗೆ ಕಳೆದ ವಾರ ಒಮ್ಮತದ ಒಪ್ಪಿಗೆ ಕೊಟ್ಟಿತು. ೧೪೪೫ ಸದಸ್ಯರು ಹಾಜರಿದ್ದರು. ೧೯೪೬ ನೆಯ ಡಿಶಂಬರ್ ೨೫ ರಿಂದ ಜಾರಿಯಲ್ಲಿ ಬರಲಿದೆ. ಈಗ ಸ್ವೀಕೃತವಾಗಿರುವ ಸ್ಥಿರ ಘಟನೆಯು ೧೯೩೬ ರಲ್ಲಿಯೇ ಸಿದ್ಧವಾಗಿದ್ದಿತು. ಜಪಾನ್-ಚೀನಾ ಯುದ್ಧದ ಕಾರಣ ಇದು ಮುಂದೆ ಬಿದ್ದಿತು. ಚಿಯಾಂಗ್ ಕೇಶಕರ ಕ್ಯುಮಿನ್ ಟಾಂಗ ಪಕ್ಷದ ಸಂಪೂರ್ಣ ಬೆಂಬಲವು ಇದಕ್ಕುಂಟು. ಚೀನದ ಮತ್ತೊಂದು ದೊಡ್ಡ ಪಕ್ಷವಾದ ಕಮ್ಯೂನಿಷ್ಟರು ಇದನ್ನು ಬಹಿಷ್ಕರಿಸುವರಲ್ಲದೆ, ಅಧಿಕಾರಿಗಳ ಮೇಲೆ ಯುದ್ಧವನ್ನೇ ಹೂಡಿರುವರು. ಚಿಯಾಂಗರಿಗೆ ಅಮೇರಿಕಾದ ಬೆಂಬಲವಿದ್ದು ಹಣ ಮತ್ತು ಯುದ್ಧ ಸಾಮಗ್ರಿಗಳ ಪೂರೈಕೆಯಾಗುತ್ತಲಿದೆ. ಕಮ್ಯೂನಿಷ್ಟರಿಗೆ ರಷ್ಯಾದ ಬೆಂಬಲವಿದೆ. ಆದರೆ ಅವರು ಅಷ್ಟು ಸಹಾಯ ಮಾಡುತ್ತಲಿಲ್ಲ. ಅಂತರಾಷ್ಟ್ರೀಯದ ವಾತಾವರಣದಲ್ಲಿ ಅಮೇರಿಕಾ ರಷ್ಯಾಗಳ ಮಧ್ಯೆ ತಿಕ್ಕಾಟ ಉಂಟಾಗಿ ದೊಡ್ಡ ಯುದ್ಧವೇ ಸಂಭವಿಸಿದರೂ ಆಶ್ಚರ್ಯವಿಲ್ಲ.

ಮದ್ರಾಸ್ ಗವರ್ನರ ಬಳ್ಳಾರಿ ಯಾತ್ರೆ

ಮದ್ರಾಸ್ ಗವರ್ನರರವರಾದ ಸರ್ ಆರ್ಚಿಬಾಲ್ಡ್ ನೈರವರು ತಮ್ಮ ಪತ್ನಿಯೊಂದಿಗೆ ಬಳ್ಳಾರಿಯನ್ನು ಜನವರಿ ೧೧, ೧೨, ೧೩ ಸಂದರ್ಶಿಸಿ ಜಿಲ್ಲೆಯಲ್ಲಿನ ಅನೇಕ ಕಟ್ಟಡಗಳುಶಂಕು ಸ್ಥಾಪನೆ ನೆರವೇರಿಸಲಿರುವರು. ಕಂಪ್ಲಿಯಲ್ಲಿ ಪ್ರಸೂತಿಕಾ ಗೃಹದ ಶಂಕು ಸ್ಥಾಪನೆಯನ್ನು ಗವರ್ನರರ ಶ್ರೀಮತಿಯವರು ನೆರವೇರಿಸುವರು. ಗವರ್ನರರು ಮುಂಚೆ ತಿಳಿಸದೆ ಒಂದೆರಡು ಹಳ್ಳಿಗಳನ್ನು ಸಂದರ್ಶಿಸಲಿರುವ ಕಾರಣ ಬಳ್ಳಾರಿಯ ಸುತ್ತು ಮುತ್ತಲ ಹಳ್ಳಿಗಳೆಲ್ಲಾ ಸ್ವಚ್ಛವಾಗುತ್ತಲಿವೆ. ಬಳ್ಳಾರಿಯಲ್ಲೂ ಬಾಹ್ಯ ಶೃಂಗಾರವು ನಡೆದಿದೆ.

ಮುಸ್ಲಿಂಲೀಗಿಗೆ ಔದಾರ್ಯತೋರಿಸಿರಿ
ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದ ನಿರ್ಣಯ

ಕಾಂಗ್ರೆಸ್ ಮುಖಂಡರು ಗಾಂಧೀಜಿಯವರ ಬಳಿ ಹೋದಾಗ ಮುಸ್ಲಿಂಲೀಗಿಗೆ ಔದಾರ್ಯವನ್ನು ತೋರಿಸಿ- ಬ್ರಿಟಿಷ್ ಸರ್ಕಾರದ ಡಿಶಂಬರ್ ೬ ನೆಯ ದಿನಾಂಕದ ಸೂಚನೆಯನ್ನು ಒಪ್ಪಬೇಕೆಂದು ಗಾಂಧೀಜಿಯವರು ಹೇಳಿದಂತೆ ಪ್ರಕಟವಾಗಿದೆ. ತಾತ್ವಿಕವಾಗಿ ಇದನ್ನು ಒಪ್ಪಬಹುದಾದರೂ- ಗುಂಪುಗಳಲ್ಲಿರುವ ಪ್ರಾಂತಗಳ ಸ್ವಾಯತ್ತತೆಯನ್ನು ಕಾಪಾಡಬಹುದೆಂದು ಮಹಾತ್ಮರ ನಂಬಿಕೆಯುಂಟು. ಗಾಂಧೀಜೀಯವರ ಈ ಅಭಿಪ್ರಾಯವನ್ನು ಕಾಂಗ್ರೆಸ್ ಅಧ್ಯಕ್ಷರೂ, ನೆಹರೂರವರೂ ಒಪ್ಪಿರುವಂತೆ ವ್ಯಕ್ತಪಟ್ಟಿದೆ. ದೆಹಲಿಯಲ್ಲಿ ಕೂಡುವ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ನಿರ್ಣಯದ ಸ್ವರೂಪವು ಲೀಗಿಗೆ ಔದರ್ಯವನ್ನು ತೋರಿಸುವಂಥಾದ್ದಿರುವುದೆಂದು ಊಹಿಸಲಾಗಿದೆ.

ಶ್ರೀ ಜಗಜೀವನರಾಂ

ದೆಹಲಿಯಲ್ಲಿರುವ ತಾತ್ಕಾಲಿಕ ಸರಕಾರದ ಕೂಲಿಕಾರ ಖಾತೆಯ ಮಂತ್ರಿಗಳಾದ ಶ್ರೀ ಜಗಜೀವನರಾಮರು ದಕ್ಷಿಣ ಹಿಂದೂಸ್ತಾನದ ಸಂಚಾರವನ್ನು ಮುಗಿಸಿ ದೆಹಲಿಗೆ ಮರಳಿದರು. ಅವರು ಬಂದಾಗ ಹರಿಜನರಿಗಾಗಿ ಅನೇಕ ದೇವಾಲಯಗಳು ತೆರೆಯಲ್ಪಟ್ಟವು. ತಿರುವಾರೂರಿನ ತ್ಯಾಗರಾಜ ದೇವಸ್ಥಾನವು ಇವುಗಳಲ್ಲಿ ಪ್ರಶಿದ್ಧವಾದುದು.

ಕಾಶ್ಮೀರದಲ್ಲಿ ರಾಷ್ಟ್ರೀಯ ಪರಿಷತ್ತಿನವರೂ ಹೈದರಾಬಾದಿನಲ್ಲಿ ಸಂಸ್ಥಾನ ಕಾಂಗ್ರೆಸಿನವರೂ, ತಮ್ಮತಮ್ಮ ಸಂಸ್ಥಾನಗಳಲ್ಲಿನ ಚುನಾವಣೆಗಳನ್ನು ಬಹಿಷ್ಕರಿಸಿರುವರು-

---

ನಡುಗಾಲ ಸರಕಾರದಲ್ಲಿ ಮಂತ್ರಿಗಳಾಗಿ ನಿಯಮಿಸಲ್ಪಟ್ಟ ಮೌಲಾನಾ ಆಜಾದರವರಿಗೆ ಜ್ವರವು ಬರುತ್ತಲಿದ್ದು ನಿಶ್ಯಕ್ತರಾಗಿದ್ದಾರೆ.

THE NAVA BHARAT
ನವಭಾರತ
ಸಂಪಾದಕ-ಟಿ.ಪಿ.ಕೇಶವರಾವ್

10th Year of Publication.

6th JANUARY 1947

ಶುದ್ಧ ಅವಿವೇಕ.

ಕಾಳು ಮನೆಗೆ ತರಲಿರುವ ಕಷ್ಟಗಳು

ಸೀದಾ ಪ್ರದೇಶಗಳಲ್ಲಿ ನೆಲಸಿರುವ ರೈತರು- ಸೀದಾದ ಹೊರಗಿರುವ ತಮ್ಮ ಹೊಲಗಳಿಂದ ಕಾಳು ತೆಗೆದುಕೊಂಡು ಬರಲು ಎಷ್ಟು ಭವಣೆಪಡಬೇಕೆಂಬುದನ್ನು- ಅನುಭವಿಸುವವನೇ ಹೇಳಬೇಕು- ರೈತನಿಗೆ ಇಂಥಾ ಸರ್ವೆ ನಂಬರದ ಇಂತಿಷ್ಟು ಹೊಲವಿದೆಯೆಂಬುದನ್ನೂ, ಇಂಥಾ ಕಾಳು ಬೆಳೆದಿರುವನೆಂಬುದನ್ನೂ, ಗ್ರಾಮದೇವತೆಗಳಾದ ಗೌಡ, ಶಾನುಭೋಗರು ಪ್ರಮಾಣಪತ್ರ ಕೊಡಬೇಕು. ಇದಾದ ಮೇಲೆ ರೇಷನ್ ಅಧಿಕಾರಿಗಳಿಂದ ಒಂದು ಫಾರಂ ತಂದು ಎಲ್ಲಾ ಕಲಮುಗಳನ್ನೂ ತುಂಬಿ- ಅಪ್ಪಣೆ ಚೀಟಿ ಪಡೆಯಬೇಕ ಇದರ ಮೇಲೆ ಹೆಚ್ಚು ಧಾನ್ಯವನ್ನು ಸೊಸೈಟಿಯವರಿಗಾಗಲಿ, ಡಿಪೋದವರಿಗಾಗಲಿ, ಕೊಡುವ ವಿಷಯ- ಅವರು ತಮ್ಮಿಷ್ಟಬಂದಾಗ ಒರುತ್ತಾರೆ. ಇವೆಲ್ಲಾ ಆಗುವುದರೊಳಗೆ- ಕಾಳು, ಮಳೆ ಬಿಸಿಲು- ಕಳ್ಳರ ಕಾಟಕ್ಕೆಳಿಗಾಗಿ ಸಣ್ಣಗಾಗುತ್ತಾ ಹೋಗುವುದು. ಈ ಪದ್ಧತಿಯಿಂದ ಅನಾವಶ್ಯಕವಾಗಿ ಸಂಭವಿಸುತ್ತಲಿರುವ ಅಲಸ್ಯವನ್ನು ತಪ್ಪಿಸಿ ಕಾಳನ್ನು ಮನೆಗೆ ತರಲು ಶೀಘ್ರವಾಗಿ ಅಪ್ಪಣೆ ಚೀಟಿ (Permits) ಗಳನ್ನು ಕೊಡಿರೆಂದು ಕಳೆದವಾರ ಬಳ್ಳಾರಿ ಜಿಲ್ಲಾ ಕಲೆಕ್ಟರವರನ್ನು ನೂರಾರು ಜನರು ಬಂದು ಕೇಳಿ ಮೊರೆ ಇಟ್ಟರು. ಅವರು ತಕ್ಕ ಶೀಘ್ರವಾದ ಏರ್ಪಾಟು ಮಾಡುವೆವೆಂದು ಆಶ್ವಾಸನವಿತ್ತರು.

"ಇದರಲ್ಲಿ ಅಲಸ್ಯವಾಗುವುದು ಸಹಜವಿದೆ- ನನಗೆ ಅನೇಕ ದೂರುಗಳು ಬಂದಿವೆ. ಆದರೆ ರೈತರು ಮೊದಲೇ ಅರ್ಜಿ ಇಟ್ಟುಕೊಳ್ಳುವುದು ಒಳ್ಳೆಯದು" ಎಂದು ಮದ್ರಾಸ್ ಸರ್ಕಾರದವರು ರೈತರಿಗೆ ಸಲಹೆ ಇತ್ತಿರುವರು-

ಇವರು ತಮ್ಮ **ಶುದ್ಧ ಅವಿವೇಕವನ್ನು** ಹೊರಗೆಡವಿದ್ದಾರೆ. ಅಧಿಕಾರಿಗಳೂ, ಮಂತ್ರಿವರ್ಗದ ಕೆಲವರೂ, ತಾವು ಸರ್ವಜ್ಞರೆಂದು ಭಾವಿಸಿರುವಂತೆ ಕಾಣುತ್ತದೆ- ರೈತರಿಗೆ ಕಾಳನ್ನು ತರಲು ಬಾಧೆ ಇಷ್ಟೇಕೆ ಮಾಡಬೇಕು? ಫಸಲು ಬರುವ ರುತುಮಾನಗಳನ್ನು ತಿಂಗಳುಗಟ್ಲೆ ಮುಂಚೆಯೇ ಅರಿತು, ಎಲ್ಲಾ ಸೌಕರ್ಯಗಳನ್ನು ಹೊಂದಿದ ಸರ್ಕಾರದವರು ಶೀಘ್ರ ಏರ್ಪಾಟುಗಳನ್ನೇಕೆ ಮಾಡಲಿಲ್ಲ? ಸರಕಾರದ ಅಧಿಕಾರಿಗಳ ಅಲಕ್ಷ್ಯೆಯಿಂದ ರೈತರಿಗೆ ಇಷ್ಟುತೊಂದರೆಯಾಗುತ್ತಲಿದೆ ಉದಾಹರಣಾರ್ಥವಾಗಿ ಬಳ್ಳಾರಿ ಸೀದಾ ಭಾಗದಲ್ಲಿರುವ ೫೦ ರೈತರಿಗೆ ಪರ್ಮಿಟ್ ಕೊಡುವ ಕೆಲಸವನ್ನು ಒಂದೇ ದಿನದಲ್ಲಿ ಮುಗಿಸಬಹುದು. ಕೆಲವರು ಉದ್ದೇಶ ಪೂರ್ವಕವಾಗಿ ರೈತರಿಗೆ ತೊಂದರೆ ಕೊಡುತ್ತಿರುವರೆಂದು ಹೇಳಲಾಗುತ್ತಿದೆ. ಪ್ರಜೆಗಳ ಪ್ರತಿನಿಧಿಗಳೆಂದು ಹೇಳಿಕೊಳ್ಳುತ್ತಿರುವ ಕಾಂಗ್ರೆಸ್ ಸರಕಾರದ ಕಾಲದಲ್ಲೂ ಹೀಗಾಗುತ್ತಿರುವುದು ದುರ್ದೈವ-

---

—ಖಾದಿ- ಪ್ರಸಾರ ಯೋಜನೆ—

ಬಳ್ಳಾರಿ ಜಿಲ್ಲಾ ಕುರುಗೋಡು ಕೇಂದ್ರದಲ್ಲಿ ಸ್ಥಾಪಿತವಾದ ಖಾದಿಕೇಂದ್ರಕ್ಕಾಗಿ ಬೆಂಬಲಕೊಡಲು ಜಿಲ್ಲಾಗ್ರಾಮಸೇವಾ ಸಂಘದ ವತಿಯಿಂದ ಶ್ರೀ ಕೆ. ರಾಮಚಂದ್ರಗುಪ್ತರವರು, ಹರಪನಹಳ್ಳಿ ಹಡಗಲಿ- ಕೂಡ್ಲಿಗಿ ತಾಲೂಕಿನ ಕೆಲಭಾಗಗಳಲ್ಲಿ ಸಂಚರಿಸಿ- ಸೇರುಗಳ ರೂಪದಿಂದ ರೂ. 500/- ಸಂಗ್ರಹಿಸಿದರು.

ಲೇಬರ್ ಶಾಲೋಪಾಧ್ಯಾಯರ ಮೊರೆ. ಸರ್ಕಾರದ ಉತ್ತರ.

ಮದ್ರಾಸ್ ಪ್ರಾಂತೀಯ ಲೇಬರ್ ಶಾಲೋಪಾಧ್ಯಾಯರ ಸಂಘದ ಬೇಡಿಕೆಗಳಿಗೆ ಮದ್ರಾಸ್ ಸರ್ಕಾರದವರು ಈ ಪ್ರಕಾರ ಉತ್ತರ ಕೊಟ್ಟಿರುವರು. (Government of Madras, Development Department Memorandum No. 41180-P 11/46—7 Dated 7th November 1946)

1) ಉಪಾಧ್ಯಾಯರನ್ನೆಲ್ಲಾ ಕಾಯಂಮಾಡುವುದೆಂದು?

ಉತ್ತರ:— ಶೇಕಡ 50 ಭಾಗದ ಉಪಾಧ್ಯಾಯರನ್ನು ಕಾಯಂ ಮಾಡಲಾಗಿದೆ. ಇನ್ನುಳಿದವರ ಪ್ರಶ್ನೆಯನ್ನು ಬರುವ ವರ್ಷ ವಿಚಾರಿಸಲಾಗುವುದು.

2) ಪ್ರಾಂತೀಯ ಮತ್ತು ಜಿಲ್ಲಾ ಲೇಬರ್ ಸಲಹೆಸಮಿತಿಗಳಲ್ಲಿ ಈ ಸಂಘಕ್ಕೂ ಜಿಲ್ಲಾಸಂಘಗಳಿಗೂ ಪ್ರಾತಿನಿಧ್ಯ ಕೊಡುವಿರಾ?

ಉತ್ತರ:— ಈ ಸಲಹೆ ಸಮಿತಿಗಳು ಅಸಫಿಕಾರೀ ಸಂಸ್ಥೆಗಳಿರುವ ಕಾರಣ ಮತ್ತು ಉಪಾಧ್ಯಾಯರಿಗೆ ತಮ್ಮ ಕುಂದು ಕೊರತೆಗಳನ್ನು ನುಂದಿಡಲು ಸಂಘಗಳಿರುವ ಕಾರಣ– ಪ್ರಾತಿನಿಧ್ಯ ಕೊಡಬೇಕೆಂಬುವುದು ಸರ್ಕಾರಕ್ಕೆ ಅಗತ್ಯವೆಂದು ಕಾಣುವುದಿಲ್ಲ

3) ಉಪಾಧ್ಯಾಯರ ಸರ್ವಿಸ್, ಸೀನಿಯಾರ್ಟಿ ವಿಷಯಗಳಲ್ಲಿ ಸಮಾನಾದ ಮತ್ತು ಸಾರ್ವತ್ರಿಕವಾದ ನೀತಿಯನ್ನವಲಂಬಿಸುವಿರಾ?

ಉತ್ತರ:— ಲೇಬರ್ ಕಮೀಶನರವರು ಕಲೆಕ್ಟರವರಿಗೆ ಈ ವಿಷಯಕ್ಕೆ ತಕ್ಕ ಸೂಚನೆಗಳನ್ನು ಕೊಟ್ಟಿರುವರು. ಇದರಲ್ಲೇನಾದರೂ ಪಕ್ಷಪಾತವುಂಟಾಗಿದ್ದರೆ, ಸಂಬಂಧಿಸಿದ ಕಲೆಕ್ಟರವರಿಗೆ ಆ ಲೋಪಗಳನ್ನು ತೋರಿಸಬಹುದು.

4) ಲೇಬರ್ ಶಾಲೆಗಳಲ್ಲಿ ಬೇಸಿಕ್ ಎಜುಕೇಶನ್ ಜಾರಿಯಲ್ಲಿ ತರುವಿರಾ?

ಉತ್ತರ:— ಈ ವಿದ್ಯಾವಿಧಾನದಲ್ಲಿ ತರಬೇತಿ ಹೊಂದಿದವರು ದೊರೆಯುವವರೆಗೆ ಈ ಯೋಜನೆಯನ್ನು ಸರ್ಕಾರದವರು ಜಾರಿಯಲ್ಲಿ ತರುವುದಿಲ್ಲ.

5) ಲೇಬರ್ ಶಾಲಾಕ್ಷೇತ್ರಗಳಲ್ಲೆಲ್ಲಾ ನಿರ್ಬಂಧ ವಿದ್ಯಾಭ್ಯಾಸವನ್ನು (Compulsory Education) ಜಾರಿಯಲ್ಲಿ ತರುವುದಿಲ್ಲವೇಕೆ? ಸರಕಾರದವರು ಹಾಕಿಕೊಟ್ಟ ನೀತಿಯಪ್ರಕಾರಕ್ಕೆ ವಿದ್ಯಾಖಾತೆಯ ಪ್ರಧಾನರು (Director of Public Instruction) ಕೆಲಸ್ಥಳಗಳನ್ನಾರಿಸಿ ನಿರ್ಬಂಧ ವಿದ್ಯಾಭ್ಯಾಸಕ್ರಮವನ್ನು ಜಾರಿಯಲ್ಲಿ ತರುವರು. ಅಂಥ ಸ್ಥಳಗಳಲ್ಲಿ ಲೇಬರ್ ಶಾಲೆಗಳಿದ್ದರೆ, ಅವು ಈ ಕ್ರಮದ ಜಾರಿಯಲ್ಲಿ ಬರುವವು.

6) ಸಂಘಕ್ಕೆ ಮನ್ನಣೆ ಕೊಡುವ ವಿಷಯ—

ಕೆಲ ಅಂಶಗಳ ಸ್ಪಷ್ಟೀಕರಣ ಬೇಕಾಗಿದ್ದ ಕಾರಣ ಇದನ್ನು ಮುಂದು ವರಿಸಲಾಗಿದೆ (Recognition)

7) ಉಪಾಧ್ಯಾಯರ ಸಂಬಳದ ಹೆಚ್ಚಳಕ್ಕೇನನ್ನುವಿರಿ?

ಉತ್ತರ:— ನಾನ್ ಗೆಜೆಟೆಡ್ ಆಫೀಸರ್ಸರಲ್ಲಿ ಲೇಬರ್ ಉಪಾಧ್ಯಾಯರು ಬರಲಿರುವ ಕಾರಣ– ಈ ಪ್ರಶ್ನೆಯೆಲ್ಲಾ ವಿಚಾರದಲ್ಲಿದೆ.

8) 25 ಹರಿಜನಬಾಲಕರಿರುವ ಪ್ರತಿಯೊಂದು ಹಳ್ಳಿಯಲ್ಲಿಯೂ ಲೇಬರ್ ಶಾಲಾ ಸ್ಥಾಪನೆಯ ವಿಷಯ.

ಉತ್ತರ:— ಎಲ್ಲೆಲ್ಲಿ ಅಗತ್ಯವೋ ಅಲ್ಲಿ ಲೇಬರ್ ಶಾಲೆಗಳ ಸ್ಥಾಪನೆಯಾಗಲಿದೆ ಹರಿಜನರಿಗೆ ಆಯಾ ಊರುಗಳಲ್ಲಿ ವಿದ್ಯಾಸೌಕರ್ಯಗಳು ಬೇರೆ ಇಲ್ಲವಾದರೆ– ವಿಚಾರಮಾಡಲಾಗುವುದು.

9) ವಿದ್ಯಾವಿಷಯಗಳಲ್ಲಿ ಅನುಭವ ಹೊಂದಿದವರನ್ನು ಜಿಲ್ಲಾ ಲೇಬರ್ ಆಫೀಸರಾಗಿ ನಿಯಮಿಸುವ ವಿಷಯ

ಉತ್ತರ:— ಇದು ಅಗತ್ಯವೆಂದು ಸರಕಾರಕ್ಕನಿಸುವುದಿಲ್ಲ.

10) ಕಟ್ಟಡ ಮತ್ತು ಉಪಕರಣಗಳ ಪೂರೈಕೆ–

ಉತ್ತರ:— ಅಗತ್ಯವಿದ್ದ ಸ್ಥಳಗಳಲ್ಲೆಲ್ಲಾ ಚರ್ಯೆಯನ್ನು ತೆಗೆದುಕೊಳ್ಳಲಾಗುತ್ತಿದೆ.

11) ಹಾಸ್ಟೆಲ್ ಸ್ಥಾಪನೆಯ ವಿಷಯ—

ಹೊಸಹಾಸ್ಟಲ್ ಸ್ಥಾಪನೆಯ ವಿಷಯಕ್ಕೆ ಲೇಬರ್ ಕಮೀಶನರವರಿಂದ ಬಂದ ಸೂಚನೆಗಳನ್ನು ಸರ್ಕಾರವು ವಿಚಾರಿಸುವುದು.

12) ರಿಟೈರಾಗುವ ವಯಸ್ಸನ್ನು 55 ರಿಂದ 60 ಕ್ಕೆ ಏರಿಸಬೇಕು.

ಉತ್ತರ:— ಯೋಗ್ಯವಾದ ಜನರ ವಿಷಯದಲ್ಲಿ ಪ್ರತ್ಯೇಕವಾಗಿ ಸೌಲಭ್ಯವನ್ನು ತೋರಿಸಲಾಗುತ್ತಿರುವದೆಂದೂ ಲೇಬರ್ ಕಮೀಶನರವರು ನಿಯಮಕ್ಕೇನೂ ಉಪನಿಯಮವು ಅನಾವಶ್ಯಕವೆಂದೂ ತಿಳಿಸುತ್ತಾ ಅಭಿಪ್ರಾಯಪಟ್ಟಿರುವರು—

ಲೇಬರ್ ಕಮೀಶನರವರ ಈ ಅಭಿಪ್ರಾಯವನ್ನು ಸರ್ಕಾರದವರು ಒಪ್ಪಿರುವರು.

ಕೆ ಜಿ. ಮೆನನ್
ಡೆಪ್ಯುಟಿ ಸೆಕ್ರೆಟರಿ ಟು ಗವರ್ನಮೆಂಟ

ಕರುಳ ಕೊರಗು"

ಬೆಲೆ 1-4-0 **ದೊರೆಯುವ ಸ್ಥಳ**– ಜೀವನ ಪುಸ್ತಕಾಲಯ ಗದಗ, ಧಾರವಾಡ, ಬಾಗಲಕೋಟೆ,

ಲೇಖಕರು— ಭೀಮಭಾರತೀಸುತ –ಯಾ– ವಿಜಯೇಂದ್ರ ಶಾಸುಭೋಗ—

ವಿಮರ್ಶೆ– ಲೇಖಕರು ಜಿಲ್ಲೆಯ ತರುಣ ಸಾಹಿತಿಗಳಲ್ಲೊಬ್ಬರು. ದೇಶಾಭಿಮಾನ, ಭಾಷಾಭಿಮಾನಗಳಿಗೇನೂ ಕೊರತೆಯಿಲ್ಲ. ಇವುಗಳ ಪ್ರದರ್ಶನಕ್ಕೆ ಸ್ಥಾನವಾನವು ಅಡ್ಡಬಂದಿಲ್ಲ, ಪ್ರಾರಂಭವಲ್ಲಿಯೇ ಶ್ರೀ ಆಲೂರ ವೆಂಕಟರಾವ, ಬೇಂದ್ರೆ, ಮುದವೀಡ ಕೃಷ್ಣರಾಯರ ಆಶೀರ್ವಾದ ದೊರೆಯಿತೆಂದರೆ ಭವಿಷ್ಯವು ಉಜ್ವಲವಿರಬೇಕೆಂದರ್ಥವಾಗುವುದು–

ಬೇಂದ್ರೆಯವರಂದಿದ್ದಾರೆ.

"ಕರುಳ ಕೊರಗು" ಹೊಸಗನ್ನಡಮಾತಿನಲ್ಲಿ ಹೊರಬೊಮ್ಮಿದರೂ, ಅದಕ್ಕೆ ಹಳಗನ್ನಡದ ಸಂಸ್ಕಾರವುಂಟು. ಅದು ಭಾವದಭಾಷೆ. ಆದುದರಿಂದಲೇ ಅದಕ್ಕೆ ವಚನಗಳ ವಿಲಾಸ ತಗಲಿದೆ. ಈ ಭಾವವಿಲಾಸದ ವಿವಿಧ ವಿನ್ಯಾಸ ಕನ್ನಡ ಅಭಿಮಾನಿಗಳಾದ ಎಲ್ಲಕುಲ ರಸಿಕರ ಕರುಳಿಗೂ ಕೊರಗನ್ನು ಉಂಟುಮಾಡದೆ ಇರಲಾರದು ಎಂದು ನನಗೆ ಭರವಸೆಯಿದೆ–

ಶ್ರೀ ಮುದವೀಡು ಕೃಷ್ಣರಾಯರು ಹೀಗೆ ಆಶೀರ್ವಾದವಿತ್ತಿರುವರು

"ಬಳ್ಳಾ ಜಿಲ್ಲಾ ಆಂಧ್ರದೇಶದಲ್ಲಿ ಎಂದು ಸಾಧಿಸಬಯಸುವವರು ಆಜಿಲ್ಲೆಯೊಳಗಿನ ಒಂದು ಹಳ್ಳಿಯ ಶಾಸುಭೋಗರೊಬ್ಬರು ಬರೆದ ಈ ಕನ್ನಡ ಪುಸ್ತಕವನ್ನು ನೋಡಿ ನಾಚಿಕೊಳ್ಳಬೇಕು. ಕನ್ನಡನಾಡಿನ ಪ್ರತಿಭಾವಂತಕ್ಷೇತ್ರ ಬಳ್ಳಾರಿಜಿಲ್ಲೆಯೆಂಬುದನ್ನು ನಾನು ಬಹುದಿನಗಳಿಂದ ಬಲ್ಲೆ. ಇದನ್ನು ಎಷ್ಟೋಕಡೆಗೆ' ಎಷ್ಟೋಸಾರಿ, ಘಂಟಾಘೋಷವಾಗಿ ಸಾರಿದ್ದೇನೆ- ಈ ನನ್ನ ಸುಸ್ಥಿತ ಸಿದ್ಧಾಂತಕ್ಕೆ ಪ್ರಮಾಣ ಭೂತವಾಗಿ ಶ್ರೀ ವಿಜಯೇಂದ್ರರ ಹೊಸಕನ್ನಡ ಪುಸ್ತಕವು ಬೆಳಕಿಗೆ ಬಂದಿರುವುದನ್ನು ಕಂಡು ನನಗೆ ಒಂದು ಬಗೆಯಹಿಗ್ಗು—"

ಇಷ್ಟಾದನಂತರ, ನಾವೇನೂ ಹೇಳಬಯಸುವುದಿಲ್ಲ. ಭಾಷೆಯು ಸರಳವಾಗಿ ಎಲ್ಲರೂ ಅರ್ಥಮಾಡಿಕೊಳ್ಳುವಂತಿದೆ- ಹಂಪೆಯ ಕ್ಷೇತ್ರದವರ್ಣನೆ ಬೇರೆ-ಸಾಕಷ್ಟು ಮನರಂಜಕವಿದೆ. ಕನ್ನಡಿಗರು, ಅದರಲ್ಲೂ, ಒಳ್ಳಾರಿಯವರು ಇದಕ್ಕೆ ಪ್ರೋತ್ಸಾಹವೀಯಬೇಕು ಶಬ್ದಗಳು ಒಂದಕ್ಕೊಂದು ಕೂಡಿ, ಕೆಲ ಮುದ್ರಣ ದೋಷಗಳ ಪ್ರವೇಶವಾಗಿದೆ. ಮುಂದಿನ ಆವೃತ್ತಿಯಲ್ಲಿ ಇವುಗಳನ್ನು ಸುಧಾರಿಸುವರೆಂದು ನಂಬಿದ್ದೇವೆ.

ಟಿ. ಬಿ. ಕೆ.

'ಹರಿಜನ' ಪತ್ರಿಕೆಯ ಲೇಖನಗಳು

(೧) ಹೊಳೆಯುವದೆಲ್ಲ ಚಿನ್ನವಲ್ಲ

ಕತ್ತಲು ಕವಿದೊಡನೆ, ಕಿಸಾನ ಆಶ್ರಮಕ್ಕೆ ಮಸೂರಿಯ ದೀಪಗಳು ಪರ್ವತದ ಕೊರಳಿನ ಸುದೀರ್ಘ ವಿದ್ಯುತ್‌ದಾಮದಂತೆ ಚಕಚಕಿಸುವದು ಕಾಣಿಸುತ್ತದೆ. ಅಲ್ಲಿ ಬೆಳಕಿಡಿದ ದಿವ್ಯವಾದ ಮನೆಗಳಿವೆ; ಮಾರುಮಾರಿಗೆ ವಿದ್ಯುದ್ದೀಪ ಸ್ತಂಭಗಳಿಂದ ಪ್ರಕಾಶಮಾನವಾಗಿರುವ ಮೋಟಾರ ಹಾಗು ರಿಕ್ಷಾ ರಸ್ತೆಗಳಿವೆ; ಪೂರ್ವ ಪಶ್ಚಿಮಗಳ ಸಮಸ್ತ ಮೋಡಿ ಸಿಂಗಾರಗಳಿಂದ ದೊಡಗೂಡಿದ ಝಗ್ಗೆಂಬ ಅಂಗಡಿಗಳ ಸಾಲು, ಸಿನೇಮಾಗಳು, ನೃತ್ಯಾಲಯಗಳು—ಎಲ್ಲವೂ ಉಜ್ವಲವಾಗಿ, ಸ್ವಚ್ಛವಾಗಿ ಮೆರೆಯುತ್ತಿವೆ. ಆದರೆ ಈ ಆನಂದ ತುಂದಿಲವಾದ ಜಗತ್ತನ್ನು ಸ್ವಚ್ಛವಾಗಿರಿಸುವವರೊ? ಅವರು ಕತ್ತಲು ತಂಬಿದ, ನೀರು ಒಸರುವ ಮನೆಗಳಲ್ಲಿ ಸಾರ್ವಜನಿಕ ಮೂತ್ರಾಶಯ ಪಾಯಖಾನೆಗಳ ಸಾಮೀಪ್ಯದಲ್ಲಿ ಭರಣಿಯಲ್ಲಿರುವ ಉಪ್ಪಿನ ಕಾಯಿಯಂತೆ ವಾಸಿಸುತ್ತಾರೆ. ಅಲ್ಲಿ ವಿದ್ಯುದ್ದೀಪಗಳಿಲ್ಲ; ಬಚ್ಚಲು ಮನೆಗಳಿಲ್ಲ; ಅನಿರ್ಮಲತೆ, ದುಃಖ ಇವು ಹೊರತು ಬೇರೇನೂ ಇಲ್ಲ. ಶಾರೀರಕ ಕಥವಾ ಅನಿರ್ಮಲ ಕಲಸಗಳನ್ನು ಮಾಡಿ ಅರಿಯದ ಶ್ರೀಮಂತರಿಗೆ ಮೀಯುವ ಕೆರೆಗಳೇನು, ತೊಟ್ಟಿಗಳೇನು, ನಳಗಳೇನು, ಅಂಗವಸ್ತ್ರಗಳೇನು, ಸಾಬೂನೇನು! ಆದರೆ ಅವರ ಪಾಯಖಾನೆಗಳನ್ನೂ ಪೀಕದಾನಿಗಳನ್ನೂ ಶುದ್ಧಮಾಡುವವರಿಗೆ, ಅವರ ಹೊಲಸುಗಳನ್ನು ಹೊತ್ತುಕೊಂಡು ಹೋಗುವವರಿಗೆ ಮಾತ್ರ ಸ್ನಾನಕ್ಕೂ ಬಟ್ಟೆ ಒಗೆಯುವದಕ್ಕೂ ಕುಡಿಯುವದಕ್ಕೂ ಹೊಲಸು ಕೊಳೆದ ಹೊರತು ಬೇರೇನೂ ಇಲ್ಲ ಮತ್ತು ಆ ಹೊಲಸು ಕೊಳೆಯೆಂದರೆ, ಕಾಗುಣಿಕ ಪಾತಕನೇ, ಅವರು ತಮ್ಮ ಭಂಗಿ ಕೆಲಸದ ಎಲ್ಲ ಹೊಲಸು ಬಕೀಟು, ಡಬ್ಬಿಗಳನ್ನು ತೊಳೆಯುವ ನಳ ಅಥವಾ ಚರಂಡಿಯಲ್ಲದೆ ಬೇರಾವುದೂ ಅಲ್ಲ!!

ಓ ಮಸೂರಿಯ ಶ್ರೀಮಂತ ಜನಗಳಿರಾ! ನಿಮ್ಮ ಆರಾಮು ಜೀವನದ ರೀತಿ ನೀತಿಗಳಿಂದ ಯಾವ "ಜಾಡಮಾಲಿ"ಗಳ ಅವಶ್ಯಕತೆಯುಂಟಾಗಿದೆಯೋ ಮತ್ತು ಯಾರು ನಿಮ್ಮ ಸುಂದರ ಭವನಗಳನ್ನು ಪರಿಶುದ್ಧವಾಗಿಯೂ ನಿರ್ಮಲವಾಗಿಯೂ ಇಡುವರೋ ಅಂಥ ಮಾನವ ಪ್ರಾಣಿಗಳ ಪಾಲಿಗೆ ಬಂದ ವಸತಿಗಳನ್ನು ನೋಡಲು ನನ್ನ ಸಂಗಡ ಬರುವಿರಾ?

ಓರಣವಾದ ಪೇಟೆಯಿಂದ ಹೊರಬಿದ್ದು, ಈ ಇಳಿಜಾರಾದ ಇಕ್ಕಟ್ಟಿನ ದಾರಿಯಲ್ಲಿ ಇಳಿದು ಬನ್ನಿರಿ—ಅಲ್ಲಿ ದೀಪವಿಲ್ಲ, ಇರುಳಲ್ಲಿ ಅಲ್ಲಿ ನಡೆಯುವದು ಅಪಾಯಕರವೆನ್ನುತ್ತಾರೆ, ಎಚ್ಚರಿಕೆ! ಇಲ್ಲಿದೆ ವಸತಿಗೃಹಗಳ ಒಂದು ಸಾಲು. (ಮಸೂರಿಯಲ್ಲಿ ಅಂಥ ವಸತಿಗಳು ಹೆಚ್ಚು ಕಡಿಮೆ ಇಪ್ಪತ್ತಿವೆ.) ಹಾಂ, ನೀವು ಮೂಗು ಹಿಡಿಯುತ್ತೀರಿ—ಏಕೆಂದರೆ ಇಲ್ಲಿ ಉದ್ದಕ್ಕೂ ಸಾರ್ವಜನಿಕ ಪಾಯಖಾನೆಗಳಿವೆ. ಆದರೆ ಈ ಕೋಣೆಗಳಲ್ಲೊಂದರೊಳಗೆ ಇಣಿಕಿರಿ. ಅದಕ್ಕೆ ಕಿಟಕಿಗಳಿಲ್ಲವಾದುದರಿಂದ ಸಹಸಾ ನಿಮಗೆ ಏನೂ ಕಾಣುವದಿಲ್ಲ ನಿಜ ಒಳಗೆ ಕಾಲಿಡಲು ಹಿಂದೆ ಮುಂದೆ ನೋಡುತ್ತೀರಾ? ಛೇ ಛೇ ನೀವು ಒಳಗೆ ಬಂಲೇಬೇಕು. ಎಚ್ಚರಿಕೆ! ಬಾಗಿಲ ಸಂದಿಯಲ್ಲೇ ಇರುವ ಒಲೆಯಲ್ಲಿ ದುರ್ದೈವಿ ಸ್ತ್ರೀಯೊಬ್ಬಳು ಸುಡಲೆತ್ತಿ ನಿಂತಿರುವ ರೊಟ್ಟಿಯ ಮೇಲೆ ಎಲ್ಲದರೂ ಕಾಲಿಟ್ಟೀರಾ! ಅಲ್ಲದೆ ಆ ಒಲೆಯ ಮೇಲಿನ ವರೆಗೂ ಪಸರಿಸಿದಂತಿರುವ ಹಾಸಿಗೆಯ ಮೇಲೆಲ್ಲಾದರೂ ಮುಗ್ಗರಿಸಿಬಿದ್ದೀರಿ! ಆ ಹಾಸಿಗೆ ಸುಟ್ಟು ಹೋಗದ್ದೇದೊಡ್ಡ ಚಮತ್ಕಾರ! ಈಗ ಈ ಅರೆಬೆಳಕಿನಲ್ಲಿ ಕಾಣುವ ಅಭ್ಯಾಸ ನಿಮ್ಮ ಕಣ್ಣಿಗೆ ಆಗಿರಬೇಕು. ಕೋಣೆ

ಯ ಎಲ್ಲ ಬದಿಗೂ ಕಣ್ಣಾಡಿಸಿರಿ. ಇನ್ನೆಷ್ಟು ಹಾಸಿಗೆಗಳು, ಹಳೆ ಪೆಟ್ಟಿಗೆಗಳು, ಬುಟ್ಟಿಗಳು, ಹರುಕು ಬಟ್ಟೆಗಳು ಎಲ್ಲವೂ ಒಂದೇ ರಾಶಿಯಲ್ಲಿ ನೂಕು ನುಗ್ಗಲಾಗಿ ಬಿದ್ದಿವೆ. ಅಲ್ಲಲ್ಲಿ ಮಾನುಷ ಜೀವಿಗಳು ಹೇಗೋ ಹೇಗೋ ಕುಳಿತುಕೊಂಡಿರುವದನ್ನೂ ಕಾಣುವಿರಿ. ಈ ಕೋಣೆಯ ಆಕಾರವನ್ನು ಅಂದಾಜು ಮಾಡೋಣ ೧೦ ಘೂಟ ಅಗಲ ೧೫ ಘೂಟ ಉದ್ದ ಈದ್ದರೆ ಬಹಳವಾಯಿತು. ಅದರಲ್ಲಿ ವಾಸಿಸುವ ಜನರೋ ಎಷ್ಟು ಮಂದಿ? ಹದಿನೈದು ಸ್ತ್ರೀ ಪುರುಷ ಬಾಲಕರು. ಒಲೆಯಿಂದ ಹೊರಡುತಿರುವ ಹೊಗೆಯಿಂದ ನಿಮಗೆ ಉಸಿರು ಕಟ್ಟುತಿದೆ—ಹೊರಗೆ ಹೋಗಿ ಸ್ವಚ್ಛ ಹವೆಯಲ್ಲಿ ಉಸಿರಾಡಲು ಹವಣಿಸುತ್ತೀರಿ. ಆದರೆ ಹೊರಗಾದರೂ ಸ್ವಚ್ಛಹವೆಯೆಲ್ಲಿ? ಕೋಣೆಯ ಗೋಡೆಯ ಆಬದಿಯಲ್ಲಿರುವದೇನಿದು? ಸಾರ್ವಜನಿಕ ಮೂತ್ರಾಶಯಗಳ ಒಂದು ಸಾಲು ಮತ್ತು ಅದರಿಂಬಾಗಿ ಸಾರ್ವಜನಿಕ ಪಾಯಖಾನೆಗಳು. ಎದೆಗುಂದಬೇಡಿರಿ; ಇಷ್ಟು ದೂರ ಬಂದಿದ್ದೀರಂತೆ, ಉಳಿದುದೆಲ್ಲವನ್ನು ಗಟ್ಟಿ ಮನಸು ಮಾಡಿ ನೋಡಿಯೇ ಹೋಗಿರಿ. ಇಲ್ಲದೆ ಆ ಕೊಳಚೆಕೊಂದು ಅದರಲ್ಲಿ ಎಲ್ಲ ಹೊಲಸು ಬಕೇಟುಗಳನ್ನೂ ತೊಳೆಯಲಾಗುತ್ತದೆ. ಅದರ ನೀರನೊಂದು ಗುಟುಕು ಕುಡಿದು ನೋಡುವಿರಾ? ಅನರು ನಿಮಗೆ ಕೊಡಬಹುದಾದ್ದರಲ್ಲೆಲ್ಲ ಇದು ಅತಿ ಶುದ್ಧವಾದುದು. ಇಲ್ಲಿ ಗಂಡಸರು, ಹೆಂಗಸರು, ಮಕ್ಕಳು ಕುಡಿಯಬೇಕು, ಮೀಯಬೇಕು, ತೊಳೆಯಬೇಕು ಇದೆಲ್ಲ ತುಸು ವಿಚಿತ್ರವೆಂದು ತೋರುತಿರಬಹುದು ನಿಮಗೆ, ಅಲ್ಲವೆ? ನೀವು ಜಾರಿಕೊಳ್ಳಲು ಬಯಸುತಿರಬಹುದು. ಒಳ್ಳೇದು, ಆದರೆ ಆ ಹೊಂಡದಾಚಿಗಿನ ಒಂದು ಕೋಣೆಯನ್ನಂತೂನೋಡಿ ಹೋಗಿರಿ. ಎಚ್ಚರಿಕೆಯಿಂದ ಕಾಲಿಡಿರಿ. ನೆಲ ಬಹಳ ತಗ್ಗಾಗಿದೆ, ಹೊಂಡದ ಕೊಳೆ ನೀರೊಸರಿ ಬಹಳ ತೇವವೂ ಆಗಿದೆ. ಇದಕ್ಕೇನೋ ಒಂದು ಕಿಟಕಿಯುಂಟು. ಆದರೆ ಅದರ ಹತ್ತರ ಹೋದಗೀದೀರಿ. ಗೋಡೆ ಬಿರುಕು ಬಿಟ್ಟಿದೆ. ಸದ್ಯದಲ್ಲೇ ಅದೀ ಗುಡ್ಡದಿಂದ ಕೆಳಗುರುಳಲಿರುವಂತೆ ತೋರುವದು.

ಸಾಕು. ಇನ್ನು ಬೇಕಾದರೆ ನೀವು ನಿಮ್ಮರಮಣೀಯ ಉದ್ಯಾನದಲ್ಲಿರುವ ನಿರ್ಮಲವಾಸ ಗೃಹಕ್ಕೆ ಮರಳಿರಿ. ಆದರೆ ಈ ಶ್ರೀಮದ್ಗಂಭೀರ ಮಸೂರಿಯ ಜಾಜ್ವಲ್ಯಮಾನ ಶಿಖರಗಳಲ್ಲಿರುವ ಈ ಕರಿಗಪ್ಪು ಕಲೆಯನ್ನು ತೊಡೆದು ಹಾಕಿದಲ್ಲದೆ ಈ ಸಂದರ್ಶನದ ನೆನಹು ನಿಮ್ಮ ಹೃದಯಕ್ಕೆ ಶಾಂತಿಯನ್ನು ಕೊಡದಿರಲಿ!

ಕಿಸಾನ ಆಶ್ರಮ ಮೀರಾ ಬೆನ್

(೨) ಜಾತೀಯ ಸೌಹಾರ್ದ ಬೆಳಿಸಲು ನೌಖಾಲಿಯಲ್ಲಿ ಉಳಿಯುವೆ

ಪ್ರಾರ್ಥನಾನಂತರ ಮಹಾತ್ಮರ ಭಾಷಣ

ಶ್ರೀರಾಮಪುರದಲ್ಲಿ ಪ್ರಾರ್ಥನೆಯ ನಂತರ ಮಹಾತ್ಮಾ ಗಾಂಧಿಯವರು ಭಾಷಣಮಾಡುತ್ತ ಹೀಗೆ ಹೇಳಿದರು.

"ಬಂಗಾಲ ಸರಕಾರದ ಹೆಸರು ಕೆಡಿಸಿ ಅಪಕೀರ್ತಿಗೆ ಗುರಿ ಮಾಡಲು ನಾನು ಇಲ್ಲಿಗೆ ಬಂದಿಲ್ಲ ಬಂಗಾಲ ಸರಕಾರದ ಎಷ್ಟೋ ಮಂತ್ರಿಗಳೂ ಅಧಿಕಾರಿಗಳೂ ನನ್ನ ಮಿತ್ರರಿದ್ದಾರೆ. ನಾನು ಇಲ್ಲಿ ಇರುವದು ಅವರು ಮಾಡುತ್ತಿರುವ ಒಳ್ಳೇಕೆಲಸದಲ್ಲಿ ವಿಘ್ನವನ್ನೊಡ್ಡಹತ್ತಿದೆ ಎಂದು ಅವರಿಗೆ ಅನಿಸಿದರೆ ಅವರು ಹಾಗೆ ನನಗೆ ತಿಳಿಸಲು ಅಡ್ಡಿಇಲ್ಲ. ನಾನು ಮುಸ್ಲಿಂಲೀಗಿನ ಅಥವಾ ಲೀಗ ಮಂತ್ರಿಮಂಡಳದ ಹೆಸರು ಕೆಡಿಸಲು ಇಲ್ಲಿಗೆ ಬಂದಿಲ್ಲ. ಅಕ್ಟೋಬರ ತಿಂಗಳಿಂದ ಜಾತೀಯ ಸೌಹಾರ್ದಕ್ಕೆ ಭಂಗ ಬಂದಿದೆ. ಅದನ್ನು ಪುನಃ ಪ್ರಸ್ಥಾಪಿಸುವದೇ ನನ್ನ ನೌಖಾಲಿಯಲ್ಲಿ ಇರುವ ಒಂದೇ ಒಂದು ಉದ್ದೇಶವಾಗಿದೆ. ಬಿಹಾರ ಮುಸ್ಲಿಂಲೀಗಿನವರು ಬಿಹಾರ ಗಲಭೆಗಳ ಬಗ್ಗೆ ಸಿದ್ಧಪಡಿಸಿದ ವರದಿಯು ಮೊನ್ನೆ ನನಗೆ ಮುಟ್ಟಿದೆ. ನಾನು ಅದನ್ನು ಆಸ್ಥೆಯಿಂದ ಓದಿರುವೆ. ಆ ವರದಿಯಲ್ಲಿ ಬರೆದ ಅರ್ಧ

ದಷ್ಟು ಸತ್ಯವಿದ್ದರೂ ನನಗೆ ಈ ಜಗತ್ತಿನಲ್ಲಿ ಬದುಕಿ ಉಳಿಯಲು ಅಧಿಕಾರವೇ ಇಲ್ಲ. ಜನರ ಆಸ್ತಿಯ ಹಾಗೂ ಪ್ರಾಣಹಾನಿಯ ವಿವರಗಳನ್ನು ಅತಿರಂಜಿತವಾಗಿ ಆ ವರದಿಯಲ್ಲಿ ಕೊಡಲಾಗಿದೆ.

ಬಿಹಾರಕ್ಕೆ ನೀವು ಹೋಗದೆ ಬಂಗಾಲಕ್ಕೆ ಬರುವ ಕಾರಣವೇನು ಎಂದು ಕೆಲವರು ಕೇಳುತ್ತಾರೆ. ನಾನು ಅವರಿಗೆ ಇಷ್ಟೇ ಉತ್ತರ ಕೊಡಬಲ್ಲೆ. ನಾನು ಶ್ರೀ ರಾಮಪುರದಲ್ಲಿದ್ದರೂ ಬಿಹಾರದಲ್ಲಿಯ ಕೆಲಸ ಮಾಡಬಲ್ಲೆ. ಬಿಹಾರದಲ್ಲಿ ಕಾಂಗ್ರೆಸ ಮಂತ್ರಿಮಂಡಲವಿದೆ. ಅವರ ಮೇಲೆ ನಾನು ಇಲ್ಲಿ ಕುಳಿತು ಗಲಭೆಯಲ್ಲಿ ಹಾನಿಗೀಡಾದ ಜಾತಿಯ ಜನರಿಗೆ ಯೋಗ್ಯ ಪರಿಹಾರಕೊಡಲು ಜಾತೀಯ ಸೌಹಾರ್ದ ಸ್ಥಾಪಿಸಲು ಒತ್ತಾಯಪಡಿಸಬಹುದು. ಬಿಹಾರದಲ್ಲಿ ಗಲಭೆಯಾದಸುದ್ದಿ ಕೇಳಿದಕೂಡಲೆ ನಾನು ನನ್ನ ಆಹಾರವನ್ನು ಕಡಿಮೆ ಮಾಡಿದೆ. ಅಲ್ಲಿಯ ಪರಿಸ್ಥಿತಿ ಶಾಂತವಾದ ಸುದ್ದಿಯನ್ನು ಕೇಳಿದ ನಂತರವೇ ಪುನಃ ಆಹಾರಸೇವನೆ ಪ್ರಾರಂಭಿಸಿದ್ದೇನೆ ಆದುದರಿಂದ ನಾನು ಬಿಹಾರಕ್ಕೆ ಹೋಗುವ ಅಗತ್ಯ ಇರಲಿಲ್ಲವೆಂದು ನನಗೆ ಅನಿಸುವದು.

(೩) ಶಂಕರಾಚಾರ್ಯರಂತೆ ಗಾಂಧೀಜಿಯ ಪಾದ ಸಂಚಾರ.

ಹೊಸ ವರುಷದೊಂದಿಗೆ ಮಹಾತ್ಮರ ಸಂಚಾರ ಕಾರ್ಯಕ್ರಮವೂ ಪ್ರಾರಂಭವಾಗಬಹುದು. ಪಂ. ನೆಹರೂರೊಡನೆ ಮಹಾತ್ಮರ ಮಾತುಕತೆಗಳು ಶೀಘ್ರ ತಾರೀಖಿನೊಳಗಾಗಿ ಮುಗಿದರೆ ಗಾಂಧೀಯವರ ಸಂಚಾರ ಕಾರ್ಯಕ್ರಮವು ಅದಕ್ಕೂ ಬೇಗನೆ ಪ್ರಾರಂಭವಾಗಬಹುದು.

ಈ ಸಂಚಾರಕ್ಕಾಗಿ ಎಲ್ಲ ಸಿದ್ಧತೆಗಳೂ ಮುಗಿದಿವೆ. ಮಹಾತ್ಮರ ದಂಡೀಯಾತ್ರೆಗಿಂತ ಈ ಸಂಚಾರವು ಕಠಿನ ಯಾತ್ರೆಯಾಗಬಹುದು ಶ್ರೀ ಶಂಕರಾಚಾರ್ಯರು, ಭೋಟಾನಾಗಪುರದ ಗೊಂಡಾರಣ್ಯದೊಳಗಿಂದ ಹಾಯ್ದು ಕಾಶಿಯಾತ್ರೆಯನ್ನು ಮಾಡಿದಂತೆ ತಮ್ಮ ಈ ಸಂಚಾರವಾಗುವದೆಂದು ಮಹಾತ್ಮರು ಹೇಳುತ್ತಿದ್ದಾರೆ.ಮಹಾತ್ಮರಿಗೆ ಇದೊಂದು ದಿವ್ಯವೇ ಆಗಿದೆ. ಇದರಲ್ಲಿ ಅವರು ಯಶಸ್ವಿಗಳಾದರೆ ಅವರ ಜೀವನದ ಧ್ಯೇಯವೆ ಸಫಲವಾಗುವದು. ಚಳಿಗಾಲದ ಕುಳಿರ್ಗಾಳಿ ಬೀಸುತ್ತಿದ್ದರೂ ಮಹಾತ್ಮರು ತಮ್ಮೊಡನೆ ತೀರ ಕಡಿಮೆ ವಸ್ತುಗಳನ್ನೂ ಒಯ್ಯಲಿರುವರು. ಪ್ರಸಂಗ ಬಂದರೆ ಮಹಾತ್ಮರು ತಮ್ಮ ಅಡಿಗೆಯನ್ನು ತಾವೇ ಮಾಡಿಕೊಳ್ಳುವರು. ಮಹಾತ್ಮರೇ ಒಮ್ಮೆ ಆಡಿದಂತೆ 'ಕೇವಲ ಶಿಫ್ರಲಿಪಿಕಾರರಲ್ಲ ಆದರೆ ಕರ್ತವ್ಯದಕ್ಷರೂ ಆಗಿರುವ' ಪರಶುರಾಮರೂ ದುಭಾಷಿ ಪ್ರೊ. ನಿರ್ಮಲ ಬೋಸರೂ ಮಹಾತ್ಮರನ್ನು ಹಿಂಬಾಲಿಸುವರು.

ನೌಖಾಲಿ ಜಿಲ್ಲೆಯಲ್ಲಿ ನೂರಕ್ಕೆ ಐಂಶದಷ್ಟು ಜನ ಮುಸ್ಲಿಂರಿದ್ದಾರೆ. ಮಹಾತ್ಮರು ಪ್ರಾಮುಖ್ಯವಾಗಿ ಇವರನ್ನೇ ಕಂಡು ಮಾತಾಡಲಿರುವರು. ಆದ್ದರಿಂದ ಗಾಂಧಿಜಿಯವರು ತಮ್ಮೊಡನೆ ಹುನಾರನೆಂಬ ಮುಸ್ಲಿಂ ಸದ್ಗೃಹಸ್ಥನನ್ನು ಕರೆದುಕೊಂಡು ಹೋಗುವರು. ಹುನಾರನು ಮಹಾತ್ಮರೊಡನೆ ಸಂಚರಿಸಲು ತಾನಾಗಿಯೆ ಒಪ್ಪಿದ್ದಾನೆ.

ಕಠಿಣ ಯಾತ್ರೆ

ನಡುಗಿಸುವ ಚಳಿ, ಅಂಕಡೊಂಕಾದ ಸೀಳುದಾರಿ, ಅಡಕೆ-ತೆಂಗಿನ ದಟ್ಟವಾದ ಬನಗಳು, ಕಂಗೆಡಿಸುವ ಬಿದುರಿನ ಸಂಕಗಳು ಇವನ್ನೆಲ್ಲ ಎದುರಿಸಿ ಮಹಾತ್ಮರು ಸಂಚಾರ ಮಾಡಬೇಕಾಗಿದೆ

" ಶ್ರೀ ಶಂಕರಾಚಾರ್ಯರಂತೆ ಮಹಾತ್ಮರೂ ಈ ಎಲ್ಲ ತೊಂದರೆಗಳನ್ನು ಎದುರಿಸುವರು. ಜನಾಂಗ ಜನಾಂಗಗಳ ಮಾನವರಲ್ಲಿ ನಿರ್ಮಿತವಾದ ಪ್ರತಿಬಂಧವನ್ನು ಮಹಾತ್ಮರು ನಷ್ಟವಾಗಿಸುವರು. ಭಾರತದ ಭವಿತವ್ಯಕ್ಕೆ ಕಲಂಕ ತಂದಿರುವ ಈಗಿನ ಜಾತಿಗಳಲ್ಲಿಯ ಪರಸ್ಪರ ದುಸ್ಸಂಧವನ್ನು ಮಹಾತ್ಮರು ನೀಗಿಸುವರು.

ಅವರು ಉಭಯ ಪಂಗಡಗಳ ಮನೋರಚನೆಯನ್ನು ಸಾಧಿಸಿ ಅವುಗಳಲ್ಲಿ ಸೌಹಾರ್ದವನ್ನುಂಟು ಮಾಡುವರು ಇದರ ಪರಿಣಾಮವು ಭಾರತದ ಮೇಲಷ್ಟೇ ಆಗದೆ ಜಗತ್ತಿನ ಮೇಲೆ ಆಗುವದು. ಇದೊಂದು ದಿವ್ಯಸಂಚಾರಕ್ಕಾಗಿ ಗಾಂಧೀಜಿಯವರು ಸಿದ್ಧರಾಗಿ ನಿಂತಿರುವಾಗ ಅವರ ಭಕ್ತರು ಕಳವಳದಿಂದ ಬಂದು ದರ್ಶನ ಪಡೆದು ಕಣ್ಣೀರುದುರಿಸುತ್ತ ಹಿಂತಿರುಗುತ್ತಿದ್ದಾರೆ. ಮಹಾತ್ಮರದು ದೃಢನಿರ್ಧಾರ. ಮಹಾತ್ಮರು ತಮ್ಮ ಎಂಥ ಭಕ್ತನನ್ನೂ ಸಂಚಾರದಲ್ಲಿ ಸಂಗಡ ಕರೆದುಕೊಂಡು ಹೋಗುವದಿಲ್ಲ. ಅವರನ್ನು ಅನುಸರಿಸಲೆಂದು ಇಲ್ಲಿಗೆ ಬಂದ ಜನ ನಿರಾಶೆಯಿಂದ ಹಿಂತಿರುಗುತ್ತಿದೆ. ಡಿಸೆಂಬರ ೨೦ ನೇ ತಾರೀಖಿನಿಂದ ಮಹಾತ್ಮರನ್ನು ಕಾಣದಿದ್ದ ಶ್ರೀಮತಿ ಅವಾಗಾಂಧಿಯವರು ಒಂದು ರಾತ್ರಿ ಇಲ್ಲಿ ಉಳಿಯಬೇಕೆಂದು ಬಂದಿದ್ದರು. ಆದರೆ ಮಹಾತ್ಮರ ಆದೇಶದಂತೆ ಅವರೂ ಖಾಜಿರವಿಲಕ್ಕೆ ಕೂಡಲೆ ಹಿಂತಿರುಗಬೇಕಾಯಿತು. ಮಹಾತ್ಮರು ತಮ್ಮ ಸಂಗಡ ಗೀತಾ, ಕುರಾಣ, ಬಾಯಬಲಗಳನ್ನು ಒಯ್ಯುವರು ಎಂದು ಅವರ ಆಶ್ರಮವಾಸಿಯೊಬ್ಬನು ಹೇಳಿದನು.

ಸಂಚಾರವು ಪ್ರತಿದಿನ ಮುಂಜಾನೆ ಪ್ರಾರಂಭವಾಗುವದು. ತಂಡವೊಂದು ಮುಂಚಿತವಾಗಿ ಹೋಗಿ ಗಾಂಧೀಜಿಯವರು ಮಧ್ಯಾಹ್ನ ಉಳಿದುಕೊಳ್ಳುವ ಹಳ್ಳಿಯಲ್ಲಿ ಎಲ್ಲ ವ್ಯವಸ್ಥೆಯಿರುತ್ತದೆ. ಅಲ್ಲಿ ಮಹಾತ್ಮರ ಊಟವಾದ ನಂತರ ಪುನಃ ಸಾಯಂಪ್ರಾರ್ಥನೆಯ ವರೆಗೆ ಅವರ ಸಂಚಾರ ನಡೆಯುವದು. ಸಾಯಂಪ್ರಾರ್ಥನೆ ನಡೆಯುವ ಗ್ರಾಮದಲ್ಲಿಯೆ ಮಹಾತ್ಮರು ಹಳ್ಳಿಗಳಲ್ಲಿ ಸಂಚರಿಸಿ ಹಳ್ಳಿಗರ ಪ್ರತಿಕ್ರಿಯೆಗಳನ್ನು ಅರಿತುಕೊಳ್ಳುವರು. ಮಹಾತ್ಮರ ಆರೋಗ್ಯವು ಕುಗ್ಗದಿದ್ದರೆ ಅವರ ಸಂಚಾರ ದೀರ್ಘಕಾಲ ನಡೆಯಬಹುದು.

ನವಭಾರತಕ್ಕೆ ಚಂದಾದಾರರಾಗಿರಿ

(೪) ರಾಷ್ಟ್ರೀಕರಣ.

ಮಂತ್ರಿಮಂಡಲಗಳ ಕೈಯಲ್ಲಿ ಅಲ್ಪಸ್ವಲ್ಪ ಅಧಿಕಾರ ಬಂದಂದಿನಿಂದ ಎಷ್ಟೋ ಉದ್ಯೋಗ ಹಾಗೂ ಸರ್ವೀಸಗಳ ರಾಷ್ಟ್ರೀಕರಣಮಾಡುವ ಮಾತುಗಳು ಬಹಳವಾಗಿ ನಡೆದಿವೆ. ರಾಷ್ಟ್ರೀಕರಣ ಬಗ್ಗೆ ನಡೆದ ಚರ್ಚೆಯನ್ನು ನೋಡಿದರೆ ರಾಷ್ಟ್ರೀಕರಣದ ನಿಜವಾದ ಅಂತಿಮ ಗುರಿಯ ಉದ್ದೇಶದ ಬಗ್ಗೆ ಸ್ಪಷ್ಟವಾದ ಕಲ್ಪನೆ ಪುರಸ್ಕರ್ತರಿಗೆ ಇಲ್ಲವೆಂದೇ ಹೇಳಬೇಕಾಗುವದು. ರಾಷ್ಟ್ರೀಕರಣದ ಬಗ್ಗೆ ಕೆಲವು ಮೂಲಭೂತ ತತ್ವಗಳನ್ನು ಇಲ್ಲಿ ಕೊಡಲಾಗಿದೆ.

ರಾಷ್ಟ್ರೀಕರಣ ಈ ಶಬ್ದದಿಂದ ನಿಜವಾದ ರಾಜಕೀಯ ಅಧಿಕಾರವು ಜನತೆಗೇ ಸೇರಿದ್ದು ಎಂದು ಗ್ರಹಿತ ಹಿಡಿದು ಸಾಗಬೇಕಾಗುವದು. ಎಲ್ಲಕ್ಕೂ ಮೊದಲು ನಮ್ಮ ಆಡಳಿತೆಯನ್ನು ಸಾಗಿಸುವ ಅನುಭವ ಪೂರ್ಣ ಜ್ಞಾನವಿರಬೇಕಾದುದು ಅಗತ್ಯ. ಈ ಅನುಭವವು ಹಳ್ಳಿಗರು ತಮ್ಮ ಗ್ರಾಮ ಪಂಚಾಯತಿಗಳನ್ನು ಸಂಘಟಿತ ರೀತಿಯಲ್ಲಿ ನಡೆಸಿಕೊಂಡು ಬರುವದರಿಂದ ಹಳ್ಳಿಗರಿಗೆ ದೊರೆಯುವದು.

ಇಂಥ ಅನುಭವ ಪಡೆದ ಹಳ್ಳಿಗರೇ ಜಿಲ್ಲೆಯ ಆಡಳಿತಾಧಿಕಾರ ವಹಿಸಬೇಕು. ಅವರಲ್ಲಿಯೇ ಹೆಚ್ಚು ಕುಶಲರಾದವರು ಪ್ರಾಂತಿಕ ಶಾಸನಸಭೆ ಸಾರ್ವಜನಿಕ ಸೇವೆಗಾಗಿ ಮುಂದೆ ಬರಬೇಕು ಈ ರೀತಿಯಲ್ಲಿ ಪ್ರಾಂತಿಕ ಆಡಳಿತೆಯ ತಳವು ಸುಸಂಘಟಿತ ಗ್ರಾಮಪಂಚಾಯತಿ, ಹಾಗೂ ಆಡಳಿತಗಾರರು ಹಳ್ಳಿಗಳ ಸಂಪೂರ್ಣ ಜೀವನದ ಅನುಭವ ಪಡೆದವರು, ಇದ್ದುದಾಧರೆ ಇಂಥ ಪ್ರಾಂತಿಕ ಸರಕಾರ, ಕೇಂದ್ರಸರಕಾರವು ಹಳ್ಳಿಗರ ಹಿತಕ್ಕಾಗಿ ಕಾರ್ಯತತ್ಪರವಾಗುವಂತೆ ಕೇಂದ್ರ ಸರಕಾರದಮೇಲೆ ಒಂದು ರೀತಿಯ ನಿಯಂತ್ರಣ ನಡೆಸಬಹುದು.

ರಾಷ್ಟ್ರದ ಸರಕಾರವು ಈ ರೀತಿಯಿಂದ ಅನುಭವಪಡದ ಸುಶಿಕ್ಷಿತ ದೇಶಸೇವಕರ ಕೈಯಲ್ಲಿದ್ದರೆ, ಆಗ ಅಂಥವರು ಲಕ್ಷಾಂತರ ಜನರ ಹಿತಸಂಬಂಧಗಳನ್ನೂ

ಒಳ್ಳೇ ಆಸ್ಥೆಯಿಂದ ನೋಡುವರೆಂಬ ವಿಶ್ವಾಸವು ಜನತೆಯಲ್ಲಿ ಮೂಡುವದು. ಆಗ ನಾವು 'ರಾಷ್ಟ್ರೀಯ ಸರಕಾರ' 'ರಾಷ್ಟ್ರೀಕರಣ' ವೆಂದು ಹೇಳುವದೂ, ರಾಷ್ಟ್ರೀಕರಣದಿಂದ ಕೋಟ್ಯಂತರ ಜನರ ಕಲ್ಯಾಣದ ಯೋಜನೆ ಮಾಡುವದೂ ಸರಿಯಾಗುವದು. ಇಂಥ ಹಳ್ಳಿಗಳೇ ಆಧಾರವಾಗಿರುವ ನಿಯಂತ್ರಿತ ಕೇಂದ್ರ ಸರಕಾರವು ಅಸ್ತಿತ್ವದಲ್ಲಿರದಾಗ 'ರಾಷ್ಟ್ರೀಕರಣವೆಂದರೆ ಅದೊಂದು ಶ್ರೀಮಂತರಿಗೆ ಬಡವರನ್ನು ಸುಲಿಯಲು ಸಾಧನ ಮಾರ್ಗವೆಂದು ಹೇಳಬಹುದು. ಉದಾಹರಣಾರ್ಥ ಇತ್ತೀಚೆಗೆ ಆಕಾಶ ಮಾರ್ಗಗಳ ರಾಷ್ಟ್ರೀಕರಣದ ಬಗ್ಗೆ ಬಹಳ ಚರ್ಚೆ ನಡೆಯಿತು. ಈ ಆಕಾಶ ಮಾರ್ಗಗಳು ಸದ್ಯಕ್ಕಂತೂ ಹಳ್ಳಿಗರಿಗೆ ಏನೂ ಉಪಯೋಗ ಮಾಡುವದೂ ಇಲ್ಲ. ಆದ್ದರಿಂದ ಸದ್ಯಕ್ಕೆ ಅವುಗಳು ಶ್ರೀಮಂತರ ಒಡೆತನದಲ್ಲಿರುವವು. ಅವುಗಳ ಉಪಯೋಗವನ್ನಾದರೂ ಶ್ರೀಮಂತರ ವರ್ಗದವರೇ ಮಾಡುತ್ತಿರುವರು. ಆದುದರಿಂದ ಈ ಆಕಾಶಮಾರ್ಗಗಳ ಸರಕಾರಿ ನಿಯಂತ್ರಣವೆಂದರೆ ಸರಕಾರದವರು ಶ್ರೀಮಂತರ ಸಲುವಾಗಿ ಈ ಮಾರ್ಗಗಳು ಅನುಕೂಲವಾಗುವಂತೆ ಹಣ, ಹಾಗೂ ವಿಚಾರ ವೆಚ್ಚ ಮಾಡಬೇಕು ಸರಕಾರವು ಹಣವೆಚ್ಚ ಮಾಡಲು ಸಿದ್ಧವಾದ ಕೂಡಲೇ ಮತ್ತೆ ಕೆಲವು ಶ್ರೀಮಂತರು ಸರಕಾರಕ್ಕೆ ಸಹಾಯಕ್ಕಾಗಿ ಓಡಿ ಬರುವರು. ಆಕಾಶಮಾರ್ಗ ರಾಷ್ಟ್ರೀಕರಣವಾದೊಡನೆ, ವಿಮಾನ ತಳದವರೆಗೆ ಲೈನು ಮಾರ್ಗ ಹಾಕಿಸುವದು ಮೊದಲಾದ ಕಾರ್ಯಗಳನ್ನು ಶ್ರೀಮಂತ ವರ್ಗದವರು ಸರಕಾದವಿಂದ ಗುತ್ತಿಗೆ ಹಿಡಿದು ಸರಕಾರದ ನಿಧಿಯನ್ನು ಸುಲಿಯ ಹತ್ತುವರು. ಸರಕಾರದವರ ವಶಕ್ಕೆ ಸದ್ಯಕ್ಕೆ ಇರುವ ನಿಧಿಯು ಬಡಜನತೆ ಕಲ್ಯಾಣದ ಸಲುವಾಗಿ ವೆಚ್ಚಮಾಡಲು ಇದೆ. ಈ ನಿಧಿಯಿಂದ ಶ್ರೀಮಂತರಿಗಾಗಿ ಆಕಾಶಮಾರ್ಗ ಸೌಕರ್ಯಗಳನ್ನು ಒದಗಿಸಲು ಹಣ ವೆಚ್ಚಮಾಡುವದು ಸರಿಯಾಗಲಾರದು. ಕೆಲವು ಶ್ರೀಮಂತರು ಇಂಥ 'ಸರ್ವೀಸ' ನಡೆಸಿ ಇನ್ನುಳಿದ ಕೆಲವು ಶ್ರೀಮಂತರಿಂದ ಹಣ ಸೆಳೆದುಕೊಳ್ಳುತ್ತಿದ್ದರೆ ಅದು ಖಾಸಗಿ ಕಂಪನಿಗಳ ಕಾರ್ಯ ಅದು ಕೆಲ ದಿನಸಾಗಲೊಲ್ಲದೇಕೆ, ಹಳ್ಳಿಗಳನ್ನೇ ಆಧಾರ ವಾಗಿಟ್ಟುಕೊಂಡ ರಾಷ್ಟ್ರೀಯ ಸರಕಾರ ಸ್ಥಾಪನೆಯಾದಮೇಲೆ ಇಂಥ ಸರ್ವೀಸಗಳನ್ನೂ ರಾಷ್ಟ್ರೀಕರಣ ಮಾಡುವಬಗ್ಗೆ ವಿಚಾರ ಮಾಡಲು ಬೇಕಾದಷ್ಟು ಸಮಯ ದೊರೆಯುವದು.

(ಜೆ. ಸಿ. ಕುಮಾರಪ್ಪಾ)

ಜನ್ಮ ಭೂಮಿ.

ದೂರ ದೂರ ದೇಶದಿಂದ
ಮರಳಿ ಬರುವ ಕಾಲದಲ್ಲಿ
ನನ್ನ ನಾಡು– ಜನ್ಮಭೂಮಿ
ಎಂದು ತಾನೆ ಎಂದು ಕೊಳದ
ತನ್ನ ಎದೆಯ ಉರಿಸಿ ಕೊಳದ
ಸತ್ತ ಮನದ ಮನುಜನಿಂದು
ಉಸಿರ ಪಿಡಿದು ಇಹನೆ ಇಂದು ?
ಪೋಗಿನೋಡು ಇರುವೊಡೆ,
ಬಿರುದು ಗಿರುದು ಇದ್ದರೇನು,
ಗರುವದಿಂದ ಮೆರೆದರೇನು,
ಮೇರೆವರಿದು ಹರಿಯುವಂತೆ
ಆಶೆತಾನು ಹಿಂಗುವಂತೆ
ಸಿರಿಯು ಅವನಲಿದ್ದರೇನು ?
ಬಿರುದು ಗಿರುದು ಸಿರಿಯ ಗಿರಿಯೆ
ಕಿಚ್ಚಿಗಿಕ್ಕು ಅದನು ಎಲ್ಲ,
ಕವಿಯು ಅದನ ಹಾಡಲಾರ
ಕೀರ್ತಿಗವನ ಹೆಸರು ಇಲ್ಲ,
ಬದುಕಿದಾಗ ಇಲ್ಲವೆಸರು,
ಸತ್ತಮೇಲೆ ಸಾವನವನು,
ಎರಡು ರೀತಿ ಸಾವಿನಲ್ಲಿ,
ಅಳುವು ಇಲ್ಲಿ, ಹಾಡು ಇಲ್ಲಿ,
ಮಣ್ಣುದೇಹ ಮಣ್ಣಿನೊಳಗೆ!

Scott ಕವಿಯ 'Breathes there the man with soul so dead' ಎಂಬ ಕವಿತೆಯ ಭಾವಾನುವಾದ.

ಕ. ಗು.

ಹೊಸಪೇಟೆ

(ನಮ್ಮ ಸುದ್ದಿಗಾರರಿಂದ)

ಜನವರಿ ೨ ನೆಯ ದಿನಾಂಕ ಸರ್ಕಲ್ ಕಾಂಗ್ರೆಸ್ ಸಮಿತಿ ಸಮಾವೇಶದಲ್ಲಿ ದಿವಂಗತ ಪಂಡಿತ ಮೂಲ ವೀಯರ ಬಗ್ಗೆ ದುಃಖ ಸೂಚಕ ತೀರ್ಮಾನವಾಯಿತು. ಗ್ರಾಮ ಸಮಿತಿಗಳ ಕಾರ್ಯ ಕಲಾಪಗಳನ್ನು ಕುರಿತು ವಿಚಾರಿಸಲು ಫಿರ್ಕಾಕ್ಕೆ ಇಬ್ಬರು ನಿಯಮಿತ ರಾಗಬೇಕೆಂದಾಯಿತು. ನೆಲ್ಲು, ಬೆಲ್ಲ ನೆಲಗಡಲೆ ಬೆಲೆಯ ನಿಯಂತ್ರಣದಿಂದ ರೈತರಿಗೆ ನಷ್ಟ ಸಂಭವಿಸುವ ಕಾರಣ ಪರಿಹಾರ ರೂಪದಿಂದ ಸಮಸ್ತರಿಗೂ ಅನುಕೂಲ ಮಾಡಬೇಕೆಂಬ ನಿರ್ಣಯವಾಯಿತು. ಮದ್ರಾಸ್ ಸರ್ಕಾರದ ಪ್ರಕಟನ ಶಾಖೆಯ ಕರಪತ್ರಗಳು ಬಳ್ಳಾರಿ ಜಿಲ್ಲೆಗೆ ಕನ್ನಡ ಭಾಷೆಯಲ್ಲಿ ಪೂರೈಕೆಯಾಗಬೇಕು. ಸ್ಥಾನಿಕ ಸಂಸ್ಥೆಗಳ ಚುನಾವಣೆಗೆ ಕಾಂಗ್ರೆಸ್‌ನವರಿಗೆ ಕೊಡಲಿರುವ ಬಣ್ಣದ ಪೆಟ್ಟಿಗೆಗೆ ಆಂಧ್ರ ಪ್ರಾಂತೀಯ ಕಾಂಗ್ರೆಸ್ ಸಮಿತಿಯನ್ನು ಕೇಳಬೇಕೆಂಬುದು ಅನ್ಯಾಯ ಖಂಡನೀಯ. ಶೀಘ್ರವಾಗಿ ಕರ್ನಾಟಕ ಸಮಿತಿಯ ಮೂಸ್ಯವಾಗಬೇಕು.—

ಶ್ರೀ ಲಕ್ಷ್ಮಣಮೂರ್ತಿಯವರ ಅಧ್ಯಕ್ಷತೆಯಲ್ಲಿ ಚಿಲ್ಲರೆ ವ್ಯಾಪಾರಿಗಳ ಸಂಘದ ಸ್ಥಾಪನೆಯಾಯಿತು. ದೇ. ಭ. ತಿರುಮಲರಾಯರ ಭಾಷಣವಾಯಿತು.

—ಹೂವಿನಹಡಗಲಿ—

ಇಲ್ಲಿಯ ಹೈಸ್ಕೂಲಿನಲ್ಲಿ ಮುಖ್ಯೋಪಾಧ್ಯಾಯರಾದ ಶ್ರೀ ವೆಂಕಟಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ಆಹಾನಿತ ಭಾಷಣಕಾರರಾದ ಶ್ರೀ ವಿ.ಬೆಂ.ಇಂದ್ರ ಶಾಸನ ಭೋಗರು ಕರ್ನಾಟಕದ ಪುಸ್ತಕಾಧ್ಯಯನ ಸಾಹಿತಿಗಳಾದ ಆಲೂರು ವೆಂಕಟರಾಯರ 'ಕರ್ನಾಟಕತ್ವ' ಮೇಲೆ ಆಧಾರಪಟ್ಟ 'ಕನ್ನಡಸಾಹಿತ್ಯ ಮತ್ತು ಕರ್ನಾಟಕದ' ವಿಷಯದ ಮೇಲೆ ಸ್ವಾರಸ್ಯವಾಗಿ ಉಪನ್ಯಾಸಿಸಿದರು

ಮಳೆಯಿಂದ ನಷ್ಟ:— ಹಡಗಲಿ ತಾಲೂಕು ಬಾಚಿಗೊಂಡನಹಳ್ಳಿ, ತಂಬ್ರಹಳ್ಳಿ, ಹಂಪಸಾಗರ, ಮತ್ತು ಅಜುಬಾಜು ಗ್ರಾಮಗಳಲ್ಲಿ ವಿಶೇಷ ಮಳೆಗರೆದು ದೊಡ್ಡದೊಡ್ಡ ಮರಗಳು ಉರುಳಿಬಿದ್ದು ಕೆಲ ದನಕರಗಳು ಸತ್ತಿವೆ. ಪೈರು ಪಚ್ಚೆಗೆ ನಷ್ಟವಾಗಿದೆ. ಅಧಿಕಾರಿಗಳು ಶೀಘ್ರ ಜಮೀ ತೆಗೆದುಕೊಳ್ಳಬೇಕು.

ಹೆಬ್ಬಾಳ (ಗುಡಗೇರಿ)

೨೬-೧೨-೪೬ ನೆಯ ದಿನಾಂಕ ಶ್ರೀ ವಿ. ಜಿ. ಅಂಗಡಿಯವರ ಮೂಲಕ ನಮ್ಮೂರ ಪಾಠಶಾಲೆಯಲ್ಲಿ ಹರಿಜನ ಬಾಲಕರ ಪ್ರವೇಶವಾಗಿ, ಉಪಾಧ್ಯಾಯರು ಅವರನ್ನು ಆದರದಿಂದ ಬರಮಾಡಿಕೊಂಡು ಅಕ್ಷರಾಭ್ಯಾಸಕ್ಕೆ ಹಚ್ಚಿದರು. ಶ್ರೀಮನ್ ಮಲ್ಲಪ್ಪ ಹಾವೇರಿ. ಲಲಾಟಪ್ಪ ಅಕ್ಕಿ ಇವರು ಉದಾರವಾಗಿ ಮಕ್ಕಳಿಗೆ ಪಠ್ಯ ಪುಸ್ತಕಗಳನ್ನು ಕೊಡಿಸಿದರು. ಈ ಸಮಾರಂಭದಿಂದ ಸುಧಾರಕರಿಗೆಲ್ಲಾ ಸಂತೋಷವಾಗಿ ಉತ್ತೇಜನ ದೊರೆತಂತಾಗಿದೆ [ಕಾರ್ಯದರ್ಶಿ- ಗ್ರಾಮಸೇವಾ ಸಂಘ]

ಅ. ಕ ಆಯುರ್ವೇದ ಮಹಾಸಭೆ.

ಅಖಿಲಕರ್ನಾಟಕ ಆಯುರ್ವೇದ ಮಹಾಸಭೆಯು ಜನವರಿ ೬ ಮತ್ತು ೯ ನೆಯ ದಿನಾಂಕ ಗದಗದಲ್ಲಿ ಸಮಾವೇಶವಾಗಲಿದೆ. ಬೊಂಬಾಯಿ ಆರೋಗ್ಯಖಾತೆಯ ಮಂತ್ರಿಗಳಾದ ಡಾಕ್ಟರ್ ಎಂ. ಡಿ. ಗಿಲ್ಡರ್ ರವರು ಮಹಾಸಭೆಯ ಮತ್ತು ಮದ್ರಾಸ್ ಆರೋಗ್ಯ ಮಂತ್ರಿಗಳಾದ ಶ್ರೀಮತಿ ರುಕ್ಮಿಣಿಲಕ್ಷ್ಮೀ ಪತಿಯವರು ಆಯುರ್ವೇದ ಪ್ರದರ್ಶನದ ಉದ್ಘಾಟನೆಯನ್ನು ನಡೆಸುವರು.

ಸುಭಾಸ್
ರಾಷ್ಟ್ರಗೀತೆ
ಸಿದ್ಧವಾಯಿತು ಬೆಲೆ ೦-೮-೦
ನವಭಾರತ— ಕಾರ್ಯಾಲಯ, ಬಳ್ಳಾರಿ.

The Rayalaseema Bank Limited, Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:— ಬಳ್ಳಾರಿ ಜಿಲ್ಲಾ:- ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ, ಬಳ್ಳಾರಿ, ಹಡಗಲಿ, ಕೂಡ್ಲಿಗಿ, ಆದವಾನಿ. **ಅನಂತಪುರ:-** ಅನಂತಪುರ, ಬೆಳಗುಪ್ಪ, ಧರ್ಮಾವರಂ, ಕದಿರಿ, ಪಾಮಿಡಿ, ತಿಮ್ಮನಚೆರ್ಲ, ಉರವಕೊಂಡ, ಹಿಂದೂಪುರ, ಗುತ್ತಿ. **ಕರ್ನೂಲು:-** ಕರ್ನೂಲು ಪತ್ತಿಕೊಂಡ. **ಕಡಪ:-** ರಾಜಂಪೇಟಿ, ಕಡಪ. **ಚಿತ್ತೂರು:-** ಚಿತ್ತೂರು, ಮದನಪಲ್ಲಿ, ತಿರುಪತಿ, ನಾಗರಿ, ವಾಯಲ್ಪಾಡು.

ಫಿಕ್ಸೆಡ್ ಡಿಪಾಜಿಟ್‌ನ ಬಡ್ಡೀದರ:— 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2ವರ್ಷಗಳಿಗೆ 3½%.
ಕರೆಂಟು ಅಕೌಂಟು: 1%, **ಸೇವಿಂಗ್ಸ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.
ಮಾಸಿಕ ಪ್ರಾವಿಡೆಂಟ ಫಂಡ ಡಿಪಾಜಿಟ್:- 3%. **ಬಿ ವಿ. ಶೇಷಗಿರಿರಾವ್, ಕಾರ್ಯದರ್ಶಿ.**

—ರಾಷ್ಟ್ರೀಯ ಪುಸ್ತಕಗಳು.—

—: ಕಾಂಗ್ರೆಸ್ ಸ್ವರೂಪ ದರ್ಶನ:—

ರಾಷ್ಟ್ರೀಯ ಶಿಕ್ಷಣ	0—8—0
ಅಸ್ಪೃಶ್ಯತಾ-ನಿವಾರಣೆ	0-12—0
ಪ್ರಾಂತಭಾಷೆ- ರಾಷ್ಟ್ರಭಾಷೆ	0—6—0
ಖಾದಿ	0—8—0
ಕಾಂಗ್ರೆಸ್ ಮತ್ತು ಸ್ವಯಂಸೇವಕದಳ	0-10-0
ಸತ್ಯಾಗ್ರಹ(ಇತಿಹಾಸ-ತಂತ್ರ)	3-8 -0

ವಿ. ಪಿ. ಖರ್ಚು ಬೇರೆ. ಇನ್ನು ಅನೇಕ ಪುಸ್ತಕಗಳು ದೊರೆಯುತ್ತವೆ.—

ನವಭಾರತ, — ಕಾರ್ಯಾಲಯ ಬಳ್ಳಾರಿ.

ಅಂಧವಾದ ಮುದ್ರಣ ಸರಳ ಕನ್ನಡ ಭಾಷೆ.

ಶಾಲಿವಾಹನ ಶಕೆ ೧೮೬೯ ನೆಯ ಸರ್ವಜಿತು ಸಂ

ಶ್ರೀ ಕೊಟ್ಟೂರು ಗುರು
—ಬಸವೇಶ್ವರ ಪಂಚಾಂಗ—

ಶಾಸ್ತ್ರವೇತ್ತರಿಂದ ಗುಣಿಸಲ್ಪಟ್ಟು ಪರಿಶೋಧಿತವಾಗಿ ಪ್ರಕಟವಾಗಿದೆ. ಇದರ ಆದಾಯದಿಂದ ಧರ್ಮಾರ್ಥ ಜ್ಯೋತಿಷ್ಯ ಪಾಠಶಾಲೆಯ ಪೋಷಣೆಯಾಗಲಿರುವದರಿಂದ ಸರ್ವರೂ ಪ್ರೋತ್ಸಾಹಿಸಲು ಕೋರಿದೆ.

ಬೆಲೆ, ೦—೧೦—೦ ಗುರುಬಸವೇಶ್ವರ
ಧರ್ಮಾರ್ಥ ಜ್ಯೋತಿಷ್ಯ, ಪಾಠಶಾಲೆ
ಕೊಟ್ಟೂರು (ಬಳ್ಳಾರಿ ಜಿಲ್ಲಾ.)

NAVA BHARAT, BELLARY. Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5-0-0	One Year 5—0—0
6 ತಿಂಗಳಿಗೆ 3-0-0	Six months 3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

SRI.....

.....

.....

Printed at Krishna Press Bellary QH No. B 17 FOR (Q.H. No. B-5.)
Edited & Published by T. B. KESHAVARAO.

13

12

ಜೈಹಿಂದ್ Reg. No.M. 4746

ನವಚೇತನ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಸಂಪುಟ ೬ ಸಂಚಿಕೆ ೨ ಬಳ್ಳಾರಿ ಜನವರಿ ೧೩ ಸೋಮವಾರ ೧೯೪೭ ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವು.

ಶ್ರೀಮತಿ ಕೃಪಾಲಿನಿಯವರ ಅಪಹಾರ ಪ್ರಯತ್ನ

ಕಾಂಗ್ರೆಸ್ ಅಧ್ಯಕ್ಷರಾದ ಶ್ರೀಕೃಪಾಲಿನಿಯವರ ಪತ್ನಿಯಾದ ಶ್ರೀಮತಿ ಸುಚೇತಾ ಕೃಪಾಲಿನಿಯವರು ನೌಖಾಲೀ ಜಿಲ್ಲೆಯ ದತ್ತಪಾರಾದಲ್ಲಿ ಕೆಲಸ ಸಾಗಿಸಿರುವರು. ಅವರನ್ನಪಹರಿಸಲು ಮುಸಲ್ಮಾನ ಪುಂಡರ ಗುಮೂಹವೊಂದು ಕಳೆದ ವಾರ ಧಾವಿಸಿ ನಡೆದಿದ್ದಿತು. ಈ ಸುದ್ದಿಯನ್ನು ಡಾಕ್ಟರ್ ದಾಸಗುಪ್ತರಿಗೆ ಅವರ ಹಳೆಯ ಮುಸಲ್ಮಾನ ಸ್ನೇಹಿತನೊಬ್ಬನು ಮೊದಲೇ ತಿಳಿಸಿದ್ದನು. ಡಾ. ಗುಪ್ತರು ಸಶಸ್ತ್ರ ಸೈನಿಕರೊಂದಿಗೆ ಬಂದು ಪುಂಡರನ್ನು ಹೊಡೆದೋಡಿಸಿ ಸ್ತ್ರೀಯರನ್ನು ಸಂರಕ್ಷಿಸಿದರೆಂದು ಗಾಂಧೀಜಿಯವರೊಡನೆ ಸಾಗಿದ ಒಬ್ಬ ಕಾರ್ಯಕರ್ತನು ತಿಳಿಸಿದನು.

ಗಾಂಧೀಜಿ— ಯಾತ್ರೆ

ಪೂರ್ವಬಂಗಾಳದಲ್ಲಿ ಹಿಂದೂ- ಮುಸಲ್ಮಾನ ಮೈತ್ರಿಗಾಗಿ ಹಳ್ಳಿಗಳ ಪ್ರಯಾಣವನ್ನು ಕೈಗೊಂಡ ಮಹಾತ್ಮಗಾಂಧಿಯವರು 7 ನೆಯ ತಾ. ಮಸೀಮ ಪುರಕ್ಕೂ ಅಲ್ಲಿಂದ 8 ನೆಯ ತಾ. ಫತ್ತೆಪುರಕ್ಕೂ ಬೇಟಿ ಇತ್ತರು. 2 ನೆಯ ತಾ. ಸಾಯಂಪ್ರಾರ್ಥನೆಯ ಸಮಯದಲ್ಲಿ ರಾ ಮು ನಾ ಮ, ಭಜನೆಯಾರಂಭವಾಗುತ್ತಿರುವಂತೆಯೇ ಮುಸಲ್ಮಾನರೆಲ್ಲಾ ಎದ್ದುಹೋದರು. ಇದರಿಂದ ಗಾಂಧೀಜಿಯವರು ವಿಷಾದಗೊಂಡು ವಿವಿಧ ಧರ್ಮಗಳವರು ಬೇರೆ ಬೇರೆ ಹೆಸರುಗಳಿಂದ ಪ್ರಾರ್ಥಿಸಿದರೆ ಒಬ್ಬರನೊಬ್ಬರು ದ್ವೇಷಿಸಬಾರದೆಂದರು.

ಬ್ರಿಟಿಷ್ ಪ್ರಕಟನೆಯು ಸ್ವೀಕಾರ

ಕಾಂಗ್ರೆಸ್ ಗೊತ್ತುವಳಿ

ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಿಂದ ಸೂಚಿಸಲ್ಪಟ್ಟ ನಿರ್ಣಯವು ಮಾನ್ಯವಾಯಿತು. 99 ಜನಪರವಾಗಿಯೂ 52 ಜನ ವಿರೋಧವಾಗಿಯೂ ಮತದಾನ ಮಾಡಿದರು. ಸಮತಾವಾದಿಗಳು ಶ್ರೀ ಜಯಪ್ರಕಾಶರ ನೇತೃತ್ವದಲ್ಲಿ ತೆರವನ್ನು ವಿರೋಧಿಸಿದರು. ಬ್ರಿಟಿಷ್ ಸರ್ಕಾರದ ಡಿಶಂಬರ್ 6 ನೆಯ ತಾ. ಪ್ರಕಟನೆಯನ್ನು ಸ್ವೀಕರಿಸಿ, ರಾಜ್ಯಘಟನೆಗಾಗಿ ಗುಂಪುಗಳಲ್ಲಿ ವಿಭಾಗವಾಗತಕ್ಕದ್ದೆಂದೂ, ಪ್ರಾಂತಗಳು ತಮ್ಮ ಸ್ವಾಯತ್ತತೆಯನ್ನುಪಯೋಗಿಸಿ ತಮ್ಮ ಹಿತವಿರೋಧವಾದ ಘಟನೆಯಾದರೆ ಪ್ರತಿಭಟಿಸಬೇಕೆಂದು ಕಾಂಗ್ರೆಸ್ ಸೂಚಿಸಿತು.

ಪಡುವಣ-ಪವನ

ಪಡುವಣ ದೆಶೆಯಿಂ
ಸಡಗರ ದಿಂದಲಿ
ತೀಡಿತು ಮೂಯದ ಎಲರೊಂದು
ಬಾಡಿತು ಭಾರತ
ನೋಡಿತು ಸಡುಗುತ
ನುಡಿಯುತ ಕಡು ಅಚ್ಚರಿ' ಯೆಂದು
ಬೆಡಗಿನ ಬಾಲೆಯ
ನಡಗೆಯ ತೆರದಿಂ
ನಿಡುಕುತ ಬೀಸಿತು ಬಿಂಕದಲಿ
ಬೀಸಿದ ಮಾತ್ರಕೆ
ಮೋಸದ ಜಾಲವು
ದೇಶವ ಸುತ್ತಿತು ನವಿದೋರಿ ॥
ಅಡಗಿತು ವಿದ್ಯೆಯು
ಉಡುಗಿತು ಧರ್ಮವು
ಪಡುವಣ ವಾಯ್ವುವಿನಾರ್ಭಟಕೆ
ನೈಜದಿ ಪರಿಕಿಸೆ
ಸೋಜಿಗವೆನಿಪುದು
ಮೂಡಿದ ದೆಸೆಯಿಂ ಮಿಗೆಸೆನೆಯೇ ॥
ತಾಪವು ಹೆಚ್ಚಿತು
ಪಾಪವು ಮಿಗಿಯಿತು
ಆ ಪರಿ ಪಡುವಣ ಪವನದಲಿ ॥
ಹಿಂದಿನ ಕಾಲದ
ಚಂದದಿ ಮೆರೆದಿಹ
ಹಿಂದೂದೇಶದ ದೆಶೆಯಿಂದು ॥
ಕುಗ್ಗುತ ಬಂದಿತು
ಕುಂಪಣಿ ಮಕುಟದ
ಅಂಘ್ರಿಯೆ ಕುಂದಿತು ಸಲೆ—ನೊಂದು
ಮೋಸವ ನವಿಯಜ
ದೇಶಿಯರನು ಪರ
ದಾಸ್ಯದಿ ಕೆಡಹಿತು ಸುಳಿಗಾಳಿ !
ದೇಶ ಮುಖಂಡರು
ಈಶನ ನೆನೆದರು
"ಬೀಸದಿರಲಿ ಆ ವಿಷಗಾಳಿ"

[ಕೆ. ಯಂ. ಶಿ. ಶರ್ಮ]

ಐ. ಶಿ. ಯಸ್. ಮತ್ತು ಪೋಲೀಸ್ ಅಧಿಕಾರಿಗಳಿಗೆ ಪರಿಹಾರ ದ್ರವ್ಯ

ಗೃಹಪಾತೆಯ ಮಂತ್ರಿಗಳಾದ ಸರ್ದಾರ ವಲ್ಲಭಭಾಯಿಪಟೇಲರೊಡನೆ ಚರ್ಚಿಸಲು ಭಾರತ ಉಪ ಮಂತ್ರಿಗಳಾದ ಮಿ॥ ಹೆಂಡರ್ಸನ್‌ರವರು ಬಂದಿದ್ದಾರೆ. ಈಗ ಸುಮಾರು ೧೦೦೦ ಐ. ಶಿ. ಯಸ್. ಅಧಿಕಾರಿಗಳಿದ್ದು ಅವರಲ್ಲಿ ಅರ್ಧಜನರು ಬಿಳಿಯರಿದ್ದಾರೆ. ಇಂಡಿಯನ್ ಪೋಲೀಸ್‌ನಲ್ಲಿ ೫೯೫ ಅಧಿಕಾರಿಗಳಿದ್ದು ಶೇಕಡ ೬೦ ಜನರು ಬ್ರಿಟಿಷರಿದ್ದಾರೆ ೧೬ ವರ್ಷಗಳ ಸರ್ವೀಸಾದವರಿಗೆ ೬೦೦೦ ಪೌಂಡುಗಳನ್ನು (ರೂ. ೧,೨೦,೦೦೦) ಕೊಡಬೇಕೆಂದು ಸೂಚಿಸಿದ್ದಾರೆ. ಹೊಸರಾಜ್ಯಘಟನೆಯನ್ವಯ ಇಲ್ಲಿ ಹೊಂದಿಕೊಂಡಿರುವವರು ಇರಬಹುದು. ತಮ್ಮ ತಮ್ಮ ದೇಶಗಳಿಗೆ ಹೋಗಬೇಕೆನ್ನುವವರು ಹೊರಡಬಹುದು.

ಬಟ್ಟೆ ಲೈಸೆನ್ಸ್

ಮದ್ರಾಸ್ ಸರ್ಕಾರದವರು ಕೈಮಗ್ಗದ ಬಟ್ಟೆಗಳಬೆಲೆಯನ್ನು ನಿಯಂತ್ರಿಸುವವರಿದ್ದಾರೆ ಲೈಸೆನ್ಸ್ ಕೊಡುವ ಅಧಿಕಾರವು ಜಿಲ್ಲಾ ಕಲೆಕ್ಟರವರಿಗೆ ಬಂದಿದೆ. ಈ ತಿಂಗಳಲ್ಲಿ ಇನ್‌ಸ್ಪೆಕ್ಟಿಂಗ್ ಟೆಕ್ಸ್‌ಟೈಲ ಆಫೀಸರು ಬಂದೊಡನೆ ಲೈಸೆನ್ಸ್ ಕೊಡುವ, ಕೆಲವರ ತೆಗೆದುಹಾಕುವ ಕೆಲಸ ಪ್ರಾರಂಭವಾಗುವುದು.

ಬರ್ಮಾದ ಮಂತ್ರಿಗಳಾದ ಆಂಗಸಾನ್‌ರವರು ದೆಹಲಿಯಲ್ಲಿ ಪಂ. ಜವಹರಲಾಲರನ್ನೂ, ಕರಾಚಿಯಲ್ಲಿ ಜಿನ್ನಾರವರನ್ನೂ ಕಂಡರು. ಮೌಂಗ್ಡಾ ಎಂಬ ಬರ್ಮಾ ಪ್ರದೇಶವನ್ನು ಪಾಕಿಸ್ತಾನವಾದ ಬಂಗಾಳ ಪ್ರದೇಶದಲ್ಲಿ ಸೇರಿಸಿಕೊಳ್ಳಲಾಗುವುದಿಲ್ಲವೆಂಬುದನ್ನು ಜಿನ್ನಾರು ಪ್ರಕಟಿಸಿ ಆಂಗಸಾನರ ಸಂಶಯಗಳನ್ನು ನಿವಾರಿಸಿದ್ದಾರೆ— ಆಂಗಸಾನರವರು ಇಂಗ್ಲೆಂಡಿಗೆ ಬ್ರಿಟಿಷ್ ಸರ್ಕಾರದ ಮಂತ್ರಿಗಳೊಡನೆ ವಿಚಾರವಿನಿಮಯ ಮಾಡಲು ಹೊರಟಿರು.

ಪತ್ರವ್ಯವಹಾರ:— ನವಭಾರತ ಸಂಪಾದಕರಿಗೆ-

(1)

ಮದ್ರಾಸ್ ಸರ್ಕಾರದ ಕನ್ನಡ ಪತ್ರಿಕೆ ಮಂಗಳೂರಿನಲ್ಲಿ

ಮದ್ರಾಸ್ ಸರ್ಕಾರದ ಮುಖಪತ್ರ (Madras Information) ವನ್ನು ಇಂಗ್ಲಿಷ್, ತೆಲುಗು, ತಮಿಳು, ಭಾಷೆಗಳಲ್ಲಿ ಹೊರಡಲು ಸರ್ಕಾರದವರೇರ್ಪಡಿಸಿರುವರು ಅದರ ಕನ್ನಡ ಭಾಗವನ್ನು ಮಂಗಳೂರಿಂದ ಹೊರಡಿಸಲು ಸನ್ನಾಹಗಳಾಗುತ್ತಿವೆ. ಮಂಗಳೂರಿಗಿಂತಲೂ ಬಳ್ಳಾರಿ ಜಿಲ್ಲೆಯು ಹೆಚ್ಚಿನ ಕನ್ನಡಜನಸಂಖ್ಯೆಯನ್ನೊಳಗೊಂಡು ವಿದ್ಯಾವಿಷಯಗಳಿಂದ ಹಿಂದುಳಿದಿವೆ. ಅಲ್ಲದೆ ಬಳ್ಳಾರಿಗೆ ಉಳಿದಕನ್ನಡ ಜಿಲ್ಲೆಗಳು ಹತ್ತಿರವಿದ್ದು ಪ್ರಚಾರಕಾರ್ಯಭಾಗವು ಇಲ್ಲಿಂದ ಚನ್ನಾಗಿ ಸಾಗಲು ಅನುಕೂಲವಿದೆ. ಆದರೆ ಹಟನಿರೀಕ್ಷಕನದ ಸ್ವಭಾವವನ್ನೊಳಗೊಂಡು, ನಿಜವಾದ ಅಂಶಗಳಿಗೆ ಕುರುಡರಂತೆ ವರ್ತಿಸುವ ಮಂತ್ರಿವರ್ಗದಲ್ಲಿನ ಕೆಲ ಆಂಧ್ರ ಮುಖ್ಯರಿಂದ ಕನ್ನಡಿಗರ ಹಿತವಾಗುವುದು ಕಷ್ಟ [ಕನ್ನಡಿಗ]

(2) ನೆಲ್ಲಿನ — ಬಿಲೆ

ಮದ್ರಾಸ್ ಸರ್ಕಾರದವರು ನೆಲ್ಲಿನ ಗೂಡೆಯೊಂದಕ್ಕೆ 8 ರೂ. ಪ್ರಕಾರ ನಿಶ್ಚಯಿಸಿರುವುದು ರೈತರ ಹಿತಕ್ಕೆ ವಿಘಾತವಾದುದೂ, ಅವರನ್ನು ಅಶಯನಷ್ಟಕ್ಕೆ ಗುರಿಪಡಿಸುವುದೂ ಆಗಿದೆ. ಬಳ್ಳಾರಿ ಜಿಲ್ಲೆಯ ಮಟ್ಟಿಗೆ ಹೇಳಬೇಕೆಂದರೆ, ಇಲ್ಲಿ ಎಕರೆಯೊಂದಕ್ಕೆ 150/- ಖರ್ಚು ತಗಲುತ್ತದೆ. ಎಕರೆಗೆ ಸರಾಸರಿ 20 ಗೂಡೆ ನೆಲ್ಲಾದರೆ ಸರಕಾರದ ಲೆಕ್ಕದ ಪ್ರಕಾರಕ್ಕೆ 160/- ಆಯಿತು. ಸರಕಾರದ ತಣಕಟ್ಟಿದನಂತರ ರೈತರಿಗೆ ಉಳಿಯುವದೇನು? ರೈತನನ್ನು ನಿತ್ಯ ಸಂಕಟಕ್ಕೆ ಗುರಿಪಡಿಸುವ ಕಾಯ್ದೆಗಳನ್ನು ಕಾಂಗ್ರೆಸ್ ಪ್ರಚಾರಸರ್ಕಾರವು ಮಾಡುತ್ತಿರುವದೆಂದರೆ ಯಾರಿಗೆ ವ್ಯಸನವಾಗುವುದಿಲ್ಲ? ಬೆಲ್ಲದ ಬೆಲೆಯ ನಿಯಂತ್ರಣ-ಕಬ್ಬಿನ ಬೆಲೆಯ ನಿಯಂತ್ರಣ ಕಣ್ಮುಚ್ಚಿಕೊಂಡು ಪರಿಸ್ಥಿತಿಯ ವಿವೇಚನೆಯಿಲ್ಲದೆ ಮಾಡುತಿರುವರು. ಇಂಥಾ ಅನನುಭವೀ ಅಧಿಕಾರಿಗಳಿಂದ ರೈತರಿಗೇನು ಹಿತವಾದೀತು? ಇದು ಹಳ್ಳಿಗರ, ರೈತರ, ಗ್ರಾಮೋದ್ಧಾರದ ಲಕ್ಷಣವೇ? [ನೊಂದರೈತ]

ಅಯ್ಯನಹಳ್ಳಿ ರೈತ ಸಭೆ

ಶ್ರೀ ಇಜಾರಿ ಸಿರಸಪ್ಪನವರ ಅಧ್ಯಕ್ಷತೆಯಲ್ಲಿ ಅಯ್ಯನಹಳ್ಳಿಯ ಕಾ. ಗಿಂ ಹಳ್ಳಿಗರ ರೈತರ ಸಭೆಯು ಕೂಡಿದ್ದಿತು ಪ್ರಾತಃಕಾಲ ನಗರ ಸಂಕೀರ್ತನೆ, ಧ್ವಜವಂದನೆಯಾಯಿತು. ಸಾಯಂಕಾಲ ಸೂತ್ರಯಜ್ಞವನಂತರ ಶ್ರೀ ಬ. ಮ. ಅಜ್ಜಯ್ಯನವರು ರೈತಸಭೆಯ ಪ್ರಾರಂಭೋತ್ಸವವನ್ನು ನೆರವೇರಿಸುತ್ತಾ ಪ್ರಜಾಸರಕಾರವು ರೈತರ ಕುಂದುಕೊರತೆಗಳನ್ನು ವಿಚಾರಿಸಿ ತಕ್ಕ ಪರಿಹಾರವನ್ನು ಕೊಡಬೇಕೆಂದರು. ಶ್ರೀ ಟಿ. ಯಸ್. ಗುರುಲಿಂಗಪ್ಪ ಮತ್ತು ಕೊಟ್ಟೂರು ವಿದ್ಯಾರ್ಥಿ ಕಾಂಗ್ರೆಸ್ ಪ್ರತಿನಿಧಿಗಳು ರೈತರ ಹಿತಾಹಿತಗಳನ್ನು ಕುರಿತು ವಿವೇಚಿಸಿದರು. ಶ್ರೀ ದೇವೇಂದ್ರಪ್ಪನವರು ತಮ್ಮ ಮಾರ್ಮಿಕ ಭಾಷಣದಲ್ಲಿ ರೈತರು ನಷ್ಟಕ್ಕೊಳಗಾಗಿರುವಂಶವನ್ನು ಸೂಚಿಸಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ರೈತರು ಸದ್ಯಕ್ಕೆ ಎದುರಿಸಬೇಕಾದ ಸಮಸ್ಯೆಗಳನ್ನು ವಿವರಿಸಿ, ಅಧಿಕಾರಿಗಳ ಮುಂದೆ ತಿಪ್ಪ ಮಂಡಲದ ಮೂಲಕ ಬೇಡಿಕೆಗಳನ್ನು ಮಂಡಿಸಲು ಉಪದೇಶಿಸಿದರು. ಈ ಸಲಹೆಯು ಪ್ರಸನ್ನವಾಯಿತು. ರೈತರ ಹಿತಕ್ಕೆ ಸಂಬಂಧಿಸಿದ ಗಣ್ಯ ನಿರ್ಣಯಗಳಾದವು ಧ್ವಜಾರೋಹಣ ಭಾರ ಮನ್ನಣೆಗಳಿಂದ ಸಭೆಯು ಮುಗಿಯಿತು.

ನಿಜಾಮರಾಜ್ಯ ಸರ್ಕಾರದ ಮುಸಲ್ಮಾನ ಮಂತ್ರಿಗಳು ತಮ್ಮ ತಮ್ಮ ಜಾತಿಗಳಲ್ಲಿನ ಮುಖ್ಯ ಪದವಿಗಳಿಗೆಲ್ಲಾ ಮುಸಲ್ಮಾನ ಅಧಿಕಾರಗಳನ್ನು ನಿಯಮಿಸುತ್ತಿರುವದೇ ಒಳಮೇ ನಾರ್ತಿ ಸಂಸ್ಥೆಯು ತಿಳಿಸುತ್ತದೆ.

ವಿಜ್ಞಾನ ಕಾಂಗ್ರೆಸ್ಸಿನಲ್ಲಿ ಪಂ. ನೆಹರೂರ ಭಾಷಣ

ಹೊಸದಿಲ್ಲಿ— ವಿಜ್ಞಾನವೆಂದರೆ ಒಬ್ಬನು ವೈಯಕ್ತಿಕವಾಗಿ ನಡೆಸುವ ಸತ್ಯ ಶೋಧನೆಯಲ್ಲ. ಸಮಾಜದ ದೃಷ್ಟಿಯಿಂದ ಅದನ್ನು ಸಾಧಿಸಿದಲ್ಲಿ ಅದರ ಬೆಲೆ ಇನ್ನೂ ಹೆಚ್ಚುವದು. ಹಸಿದವನಿಗೆ ಸತ್ಯ- ದೇವರುಗಳ ಅರ್ಥವಾಗುವದಿಲ್ಲ. ಅವನಿಗೆ ಬೇಕಾದದ್ದು ಅನ್ನ. ಭಾರತವೀಗ ಕ್ಷುಧಾರ್ತ ದೇಶವಾಗಿದೆ. ಹಸಿದು ಕಂಗಾಲಾದ ಕೋಟ್ಯವಧಿ ಭಾರತೀಯರಿಗೆ ನೀವು ಸತ್ಯಗಳ ವಿಷಯಕ್ಕಾಗಲೀ ಜೀವಿಸಲು ಇತರ ಸುಂದರ ವಸ್ತುಗಳ ಬಗ್ಗೆಯಾಗಲಿ ಹೇಳಿದರೆ ಅವರಿಗೆ ಅದರಿಂದೇನು ಪ್ರಯೋಜನ? (ಕೇಳಿರಿ ಕೇಳಿರಿ) ಸಾವು ಅವರಿಗೆ ಅನ್ನಸಂಪಾದಿಸಿ ಕೊಡಬೇಕು. ಒಟ್ಟಿಗೆ ವಸತಿ ಸೌಕರ್ಯ, ಶಿಕ್ಷಣ ಮುಂತಾದ ಜೀವನಾವಶ್ಯಕತೆಗಳನ್ನೂ ಒದಗಿಸಬೇಕು. ಇದನ್ನು ಸಾಧಿಸಿದನಂತರ ನಾವು ಬೇಕಾದರೆ ದೇವರು, ವೇದಾಂತಗಳ ಬಗ್ಗೆ ಚರ್ಚೆ ನಡೆಸಬಹುದು. ವಿಜ್ಞಾನವೀಗ ಭಾರತದ ೪೦ ಕೋಟಿ ಜನರನ್ನು ಗಮನಿಸಬೇಕಾಗಿದೆ ಮೊಡ್ಡ ಪ್ರಮಾಣದ ಸಹಕಾರಿ ಯೋಜನೆಯಿಂದ ಸಾಗಿದರೆ ಇದು ಸಾಧ್ಯ.

ಭಾರತದ ಸ್ವಾತಂತ್ರ್ಯವು ಸ್ಥಿರವಾಗಿರುವಾಗ, ಭಾರತದಲ್ಲಿ ವಿಜ್ಞಾನವೂ ಪ್ರಾಧಾನ್ಯಸ್ಥಿತಿಯನ್ನು ಹೊಂದಲಿರುವ ಈ ಸಮಯದಲ್ಲಿ ಭಾರತವು ಸರ್ವಾಂಗೀಣ ಅಭಿವೃದ್ಧಿಯನ್ನು ಸುನ್ಯವಸ್ಥಿತವಾಗಿ ಸಾಧಿಸಿಕೊಂಡು ಅದಷ್ಟು ಬೇಗನೆ ತನ್ನ ಸಮಸ್ಯೆಗಳನ್ನು ಬಿಡಿಸಲಿಚ್ಛಿಸುವದಲ್ಲದೆ ತನ್ನಲ್ಲಿಯ ವೈಜ್ಞಾನಿಕ ಮನೋವೃತ್ತಿಯನ್ನು ಬೆಳೆಸಿಕೊಳ್ಳುವದು ಎಂದು ನಮ್ಮ ಸರಕಾರದ ಉಪಾಧ್ಯಕ್ಷರಾದ ಪಂ. ಜವಾಹಿರಲಾಲರು ಭಾರತೀಯ ವಿಜ್ಞಾನ ಕಾಂಗ್ರೆಸ್ಸಿನಲ್ಲಿ ಇಂದು ಅಧ್ಯಕ್ಷ ಸ್ಥಾನದಿಂದ ಅಪ್ಪಣೆ ಕೊಡಿಸಿದರು.

ಇನ್ನುಮೇಲೆ ಬಿರುದುಗಳಿಲ್ಲ

ಸರ್, ದಿವಾನಬಹದೂರ್, ರಾವಬಹದೂರ್, ರಾವಸಾಹೇಬ ವಗೈರೆ ಬಿರುದುಗಳನ್ನು ಭಾರತೀಯರಿಗೆ ಬ್ರಿಟಿಷ್ ಸರಕಾರವು ಕೊಡುವ ಪದ್ಧತಿ ಇದ್ದಿತು. ಆದರೆ ನಡುಗಾಲ ಸರಕಾರದ ಮಂತ್ರಿಗಳ ಸಲಹೆಯಿಂದ ಇನ್ನುಮೇಲೆ ಇಂಥಾ ಬಿರುದುಗಳಿಗಾಗಿ ಬ್ರಿಟಿಷ್ ಸರಕಾರಕ್ಕೆ ಸಿಫಾರ್ಸ ಮಾಡಬಾರದೆಂದು ವೈಸ್ರಾಯರು ನಿಶ್ಚಯಿಸಿರುವರು. ಅಂದರೆ ಬ್ರಿಟಿಷ್ ರಾಜಪ್ರಭುತ್ವದ ಬಾಲ ಬಡೆಯುವವರು ಇಲ್ಲದಾದರು—

ಶರತಬೋಸರ ರಾಜೀನಾಮೆ

ಕಾಂಗ್ರೆಸ್ ಕಾರ್ಯಕಾರೀಸಮಿತಿಯು ಎ. ಐ. ಸಿ. ಸಿಗೆ ಬ್ರಿಟಿಷ್ ಸರಕಾರದ ಡಿಸಂಬರ್ ೬ ನೆಯ ತಾ. ಹೇಳಿಕೆಯನ್ನು ಮಾನ್ಯಮಾಡಲು ಹೇಳಿದ್ದೂ, ಎ. ಐ. ಸಿ. ಸಿ. ಯು ಮಾನ್ಯಮಾಡಿದ್ದೂ ದೇಶವಿಘಾತಕವಿದೆಯೆಂದು ತಮ್ಮ ನಿಷೇಧವನ್ನು ಸೂಚಿಸಲು ಕಾಂಗ್ರೆಸ್ ಕಾರ್ಯಕಾರಿಸಮಿತಿಗೆ ಶ್ರೀ ಶರತಬೋಸರು ರಾಜೀನಾಮೆ ಕೊಟ್ಟಿರುವರು.

ಜಾತೀಯ ಜಗಳ

ಜೋಬಾಯಿಯಲ್ಲಿ ಜಾತೀಯವಂಗೆಯು ಅಲ್ಪರೀತಿಯಲ್ಲಿ ಸಾಗಿಯೇ ಇದೆ ಪ್ರತಿನಿತ್ಯವೂ ಚಾಕುವಿನ ಇರಿತಗಳೂ, ಒಬ್ಬಿಬ್ಬರ ಮರಣವೂ ಸಂಭವಿಸುತ್ತಲೇ ಇದೆ. ಮಾದರ ಬಾಯಿಯಲ್ಲಿ, ಅಗ್ನಿಶಾಮಕ ಪಡೆಯ ಈ ವಿಭಾಗಗಳಲ್ಲಿ ಇತರ ಕಲ್ಲಿನ ತೂರಾಟ ಸಾಗಿದೆ ಜೊಂಬಾಯಿ ಸರಕಾರದವರು ಲೂಟಿ ಕೊಳ್ಳೆಗೊಳಗಾದವರಿಗೆ ಹಾನಿಯುಂಟುಮಾಡಿದ ಸಮಾಜದವರಿಂದಲೇ ನಷ್ಟ ತುಂಬಿಕೊಡುವೆನೆಂದು ಪ್ರಕಟಿಸಿದ್ದಾರೆ.

ಸ್ವಾತಂತ್ರ್ಯ ಸಂಗ್ರಾಮ

ಫಾನ್ಸ್— ಇಂಡೋಚೀನಗಳ ಮಧ್ಯೆನಡೆಯುತ್ತಿರುವ ಸ್ವಾತಂತ್ರ್ಯಸಂಗ್ರಾಮವು ಭೀಕರ ಸ್ವರೂಪಕ್ಕೆ ಬರುತ್ತಲಿದೆ. ಈ ಯುದ್ಧವು ನಿಲ್ಲುವವರೆಗು ಶಾಂತಿಯಮಾತುಕತೆಗಳು ನಡೆಸಗೊಡುವುದಿಲ್ಲವೆಂದು ಫ್ರಾನ್ಸಿನ ಮಂತ್ರಿಗಳು ಹೇಳಿದ್ದಾರೆ.

ಸ್ವಾತಂತ್ರ್ಯ ದಾನಕ್ಕೆ ಬ್ರಿಟಿಶರ ಇಚ್ಛೆಯಿಲ್ಲ

ಜಯಪ್ರಕಾಶರ ಹೇಳಿಕೆ

ಭಾರತದಲ್ಲಿಯ ಮತಭೇದ ಜಾತೀಯ ಸ್ವರೂಪದ್ದಲ್ಲ, ಎಡಬಲ ಪಕ್ಷಗಳಲ್ಲಿ ಉಂಟಾದದ್ದಲ್ಲ. ಅದರೆ ರಾಷ್ಟ್ರೀಯ ಮತ್ತು ಪ್ರತಿಗಾಮಿ ಶಕ್ತಿಗಳಲ್ಲಿಯ ಮತ ಭೇದವಾಗಿದೆ. ಈ ಪ್ರತಿಗಾಮಿ ಶಕ್ತಿಗಳಲ್ಲಿ ಜಾತೀಯ ಸಂಸ್ಥೆಯೂ ಸೇರಿದೆ, ನರೇಂದ್ರರೂ ಸೇರಿದ್ದಾರೆ. ಇವರಿಗೆ ಬ್ರಿಟಿಶರ ಬೆಂಬಲವಿದೆಯೆಂದು ಶ್ರೀ ಜಯಪ್ರಕಾಶ ನಾರಾಯಣರು ಕಾಶ್ಮೀರದಿಂದ ಹಿಂತಿರುಗಿ ಬಂದ ನಂತರ ಅ. ಸ್ಯೆ. ಕ್ಕೆ ಇತ್ತ ಸಂದರ್ಶನದಲ್ಲಿ ಹೇಳಿದರು.

ಭಾರತದಲ್ಲಿ ಪ್ರಜಾತಂತ್ರದ ಸಾಮ್ಯವಾದೀ ಸರಕಾರವು ಸ್ಥಾಪಿತವಾಗಬೇಕು. ಹೀಗಾಗುವ ಮೊದಲು ಇಲ್ಲಿಯ ಬ್ರಿಟಿಶ್– ರಾಜ್ಯವು ನಷ್ಟವಾಗಬೇಕು. ಕ್ರಾಂತಿಯಿಲ್ಲದೆ ಅದು ನಷ್ಟವಾಗಲಾರದು ಎಂದು ನನಗೆ ಖಂಡಿತವಾಗಿದೆ.

ಬ್ರಿಟಿಶರಿಗೆ ಭಾರತಕ್ಕೆ ಸ್ವಾತಂತ್ರ್ಯ ಕೊಡುವ ಇಚ್ಛೆಯಿಲ್ಲೆಂದು ಅನೇಕ ಸಂಗತಿಗಳಿಂದ ಸಿದ್ಧಪಡಿಸಬಹುದು. ಬ್ರಿಟಿಶ ಸರಕಾರವೂ ಅದರ ಪ್ರತಿನಿಧಿಗಳೂ ಜಾತೀಯ ಸಂಸ್ಥೆಗಳನ್ನು ಪ್ರೋತ್ಸಾಹಿಸುತ್ತಾರೆ ಲೀಗಿನ ಪಟಿಪಾರಿತನಕ್ಕೆ ಬೆಲೆ ಕೊಡುತ್ತಾರೆ. ತೀರ ಇತ್ತೀಚಿನ ಉದಾಹರಣೆಯೆಂದರೆ ಬ್ರಿಟಿಶ ಸರಕಾರದ ಪ್ರತಿನಿಧಿಯಾದ ಆದನೇ ತಾರೀಖಿನ ಪ್ರಕಟನೆ– ಸಂಸ್ಥಾನಗಳಲ್ಲಿಯ ಪ್ರಜಾ ಚಳವಳಿಗಳನ್ನು ಹತ್ತಿಕ್ಕಲು ಸೈನ್ಯರಾಯರೂ ರಾಜಕೀಯ ಖಾತೆಯವರೂ ನರೇಂದ್ರರೊಡನೆ ಒಳಸಂಚು ನಡೆಸಿದ್ದಾರೆ. ಈಸ್ಟ್ರಸಂಗದಲ್ಲ ಈ ವ್ಯಾಪ್ತಿಯಲ್ಲಿಯ ಪೋಲೀಸ ರಾಜ್ಯವನ್ನೂ ನಾನು ಉಲ್ಲೇಖಿಸಬಲಾರೆ.

ಭಾರತ ಸ್ವಾತಂತ್ರ್ಯವನ್ನು ವಿಳಂಬಿಸಲು ಬ್ರಿಟಿಶರು ಪ್ರತಿಗಾಮಿ ಶಕ್ತಿಗಳನ್ನು ಉಪಯೋಗಿಸುತ್ತಿದ್ದಾರೆಂಬುದಕ್ಕೆ ಕೆಲ ಸಂಗತಿಗಳನ್ನು ಈಗ ಹೇಳಿದ್ದಾಯಿತು. ಇನ್ನು ವಿಭಜನೆ ಅಧಿವೇಶನದಲ್ಲಿ ಪಂ. ನೆಹರೂರವರೇ ಲೀಗವನ್ನು ರಾಜ ಪಕ್ಷವೆಂದು ಕರೆದರು ಸಿಂಧ ಗವರ್ನರರು ಚುನಾವಣೆಯಲ್ಲಿ ಲೀಗಿಗೆ ಬಹಿರಂಗವಾಗಿ ಸಹಾಯಮಾಡಿದ್ದಾರೆ. ಬ್ರಿಟಿಶರ ಸ್ವರೂಪ ದರ್ಶನಕ್ಕೆ ಇವಿಷ್ಟೇ ಸಂಗತಿಗಳು ಸಾಕು.

ಪಂ. ನೆಹರೂರು ಬ್ರಿಟಿಶ ಅಶ್ವಾಸನಗಳನ್ನು ಬಹಳವಾಗಿ ನೆಚ್ಚುವರು ಎಂಬುದು ನಮ್ಮ ಅವರಲ್ಲಿರುವ ಭೇದ.

ಬಿಹಾರಿನಲ್ಲಾದ ನಷ್ಟ

ಬೀಹಾರಿನ ಶಿಷ್ಟಮಂಡಳವೊಂದು ಗಾಂಧೀಜಿ ಬಳಿ ಬಂದು ಅಲ್ಲಿ ನಡೆದ ಪರಿಹಾರ ಕಾರ್ಯಕ್ರಮದ ಬಗ್ಗೆ ವರದಿಯನ್ನೊಪ್ಪಿಸಿದೆ. ಮುಸ್ಲಿಂಲೀಗಿನವರು ನಡೆಸಿದ ಅಪಪ್ರಚಾರದಿಂದ ಪರಿಹಾರಕಾರ್ಯಕ್ರಮಕ್ಕೆ ಒಳ್ಳೆ ತೊಂದರೆಯುಂಟಾಗಿದೆ "ನೀವು ಬಂಗಾಳಕ್ಕೆ ಬನ್ನಿರಿ, ನಿಮಗೆ ಭೂಮಿಗಳನ್ನೂ ಮನೆಗಳನ್ನೂ, ಕೊಡಲಾಗುತ್ತದೆ" ಎಂದು ಅನಾಥಗೃಹಗಳಲ್ಲಿ ಲೀಗಿನವರು ಪ್ರಚಾರ ನಡೆಸಿದ್ದಾರೆ ನಿರಾಶ್ರಿತರಿಗೆ ಮನೆಕಟ್ಟಿಕೊಳ್ಳಲು ೩೦ ರೂ. ೬೫೦ ರಿಂದ ೭೦೦ ಮತ್ತು ಇತರ ಆವಶ್ಯಕವಸ್ತುಗಳನ್ನು ಕೊಳ್ಳಲು ೨೦೦ ರೂ. ಕೊಡಲಾಗುತ್ತಿದೆ. ಬೀಹಾರಿನ ರೆವಿನ್ಯೂಮಂತ್ರಿಗಳಾದ ಕೃಷ್ಣವಲ್ಲಭಸಹಾಯರು ವೃತ್ತಪತ್ರಿಕೆಗಳಿಗೆ ಕೊಟ್ಟ ಹೇಳಿಕೆಯ ಪ್ರಕಾರಕ್ಕೆ ಅಲ್ಲಿ ೫೦೦೦ ಜನರು ಸತ್ತಿರುವರು. ಅದರಲ್ಲಿ ೬೫೦ ಹಿಂದೂಗಳಿಗುವರು. ೨೬೦ ಜನರು ಮಿಲಿಟರಿ ಗುಂಡಿನ ಹೊಡೆತಕ್ಕೆ ಸಿಕ್ಕು ಸತ್ತರು. ೭೫೦ ಹಳ್ಳಿಗಳಲ್ಲಿ ೩೭೫೦ ಮನೆಗಳು ನಷ್ಟವಾಗಿವೆ ೧,೧೫೦೦ ಜನರು ನಿರಾಶ್ರಿತ ಶರಣಾಲಯಗಳಲ್ಲಿರುವರು. ಕೆಲವರು ಬಂಗಾಳಕ್ಕೆ ಹೋಗಿದ್ದಾರೆ.

'ಹರಿಜನ' ಪತ್ರಿಕೆಯ ಲೇಖನಗಳು

ನಮ್ಮ ಆರ್ಥಿಕ ಧೋರಣ

(ಶ್ರೀ ಜೆ. ಸಿ. ಕುಮಾರಪ್ಪ)

ಲೋಕಪ್ರತಿನಿಧಿಕ ಮಂತ್ರಿಮಂಡಲಗಳೆಂದು ಕರೆಯಲ್ಪಡುವ ಮಂತ್ರಿಮಂಡಲಗಳು ಸ್ಥಾಪನೆಯಾದಂದಿನಿಂದ ಆ ಮಂತ್ರಿಗಳು ಅನುಸರಿಸತಕ್ಕ ಧೋರಣಗಳ ಬಗ್ಗೆ ಜನತೆಯ ಮನಸು ಚಲವಿಚಲವಾಗಹತ್ತಿದೆ. ಔದ್ಯೋಗಿಕ ಕೇಂದ್ರೀಕರಣದ ಪ್ರಶ್ನೆಗೆ ಪ್ರಮುಖ ಸ್ಥಾನ ತಂದಿರುವ ಮದ್ರಾಸದಲ್ಲಿಯ ಜವಳಿ ಗಿರಣಿಗಳ ಅಭಿವೃದ್ಧಿಯ ಸಂಬಂಧದಲ್ಲಿ ಸದ್ಯದಲ್ಲಿ ಬಹಳ ಮಟ್ಟಿಗೆ ಅಬದ್ಧ ಚರ್ಚೆ ಸಾಗಿದೆ.

ಔದ್ಯೋಗಿಕ ಕೇಂದ್ರೀಕರಣದಿಂದ ಸಾಮ್ರಾಜ್ಯತ್ವದ ಉಗಮವೆಂಬದನ್ನೂ ಇದೀಗ ಆ ಸಾಮ್ರಾಜ್ಯತ್ವದ ಕೊನೆಯ ಅವಸ್ಥೆಯಲ್ಲಿ ಸಾಮ್ರಾಜತ್ವದ ಸಹಾಯವಿಲ್ಲದೆ ಕೇಂದ್ರೀಕೃತ ಉದ್ಯೋಗ ಧಂದೆಗಳು ಬಾಳಲಾರವೆಂಬುದನ್ನೂ ಸಾಮಾನ್ಯವಾಗಿ ತಿಳಿಯಲಾಗುವುದಿಲ್ಲ.

ಉತ್ಪಾದನೆಯ ಕೇಂದ್ರೀಕರಣ ಪದ್ಧತಿಯನ್ನು ಇಂಗ್ಲಂಡು ಅನುಸರಿಸಲು ಪ್ರಾರಂಭಿಸಿದಾಗ ಗ್ರೇಟ ಬ್ರಿಟನು ಸಾಮ್ರಾಜ್ಯವಿರಲಿಲ್ಲ. ಇಂಗ್ಲಂಡಿನ ಆರ್ಥಿಕ ಜೀವನ ವಿಕೇಂದ್ರೀಕೃತ ಉತ್ಪಾದನ ಪದ್ಧತಿಯನ್ನವಲಂಬಿಸಿತ್ತು. ಅದೊಳ್ಳೆ ಸುಸಂಸ್ಕೃತ ರಾಷ್ಟ್ರವಾಗಿತ್ತಲ್ಲದೆ ಅದರ ನೀತಿಮತ್ತೆಯ ತಳಹದಿಯೂ ಸುಭದ್ರವಾಗಿತ್ತು. ಮಾನವ ಪ್ರಗತಿಗಾಗಿ ಅದು ಸಲ್ಲಿಸಿದ ಮಹತ್ಪದ ಸೇವೆಯ ಸಂಬಂಧದಲ್ಲಿ ನಾವು ವಿಚಾರ ಮಾಡುವಾಗೆಲ್ಲ ಔದ್ಯೋಗಿಕ ಕಾಯಿದೆ ಸ್ವೀಕೃತವಾದ ಕಾಲಕ್ಕಿಂತ ಮೊದಲಿನ ಕಾಲಕ್ಕೆ ನಾವು ಹೋಗಬೇಕಾಗುವುದು. ಅದರ ಸಾಹಿತ್ಯ ಕ್ಷೇತ್ರದಲ್ಲಿ ಶೇಕ್ಸಪಿಯರ್, ಮಿಲ್ಟನ್ ಹೆಸರಾಂತ ಸಾಹಿತಿಗಳಿದ್ದರು. ಸರ್ ಜೋಶಿಯಾ ರಿನಾಲ್ಡ್ಸರಂಥ ಸುವಿಖ್ಯಾತ ಕಲಾ ಕೋವಿದರು ಹತೊಂಭತ್ತನೆಯ ಶತಮಾನಕ್ಕಿಂತ ಮೊದಲೆ ಕೀರ್ತಿವೇತ್ತರು. ಸರ್ ಕ್ರಿಸ್ಟೋಫರ ರೆನ್ ಮತ್ತು ಅವರಂಥವರು ತಮ್ಮ ಶಿಲ್ಪಕಲೆಯಲ್ಲಿ ಸ್ಫೂರ್ತಿಪಡೆಯಲು ಜವಳಿ ಗಿರಣಿಯನ್ನು ನೋಡಿರಲಿಲ್ಲ ಕೂಡ. ತಮ್ಮ ಸಿದ್ಧಾಂತಗಳಿಗಾಗಿ ಪ್ರಾಣವನ್ನು ಕೂಡ ಧಾರೆಯೆರೆಯಲು ಸಿದ್ಧರಾಗಿದ್ದ ಬ್ರಿಟಿಶ ಸತ್ಯಾಗ್ರಹಿ ಲ್ಯಾಟಿಮೊರರಂಥ ನೈತಿಕ ಶಿಖಾಮಣಿಗಳು ಉಗಿಯಂತ್ರಗಳ ಶಕ್ತಿಯನ್ನೆಂದೂ ನೋಡಿರಲಿಲ್ಲ. ಆರ್ಥಿಕ ಮತ್ತು ಆಧಿಭೌತಿಕ ವೈಭವ ಎಷ್ಟೇ ಕಣ್ಣುಕುಕ್ಕಿಸುವಂತಹದಿದ್ದರೂ ಸಾಂಸ್ಕೃತಿಕ ದೃಷ್ಟಿಯಿಂದ ವಿಕ್ಟೋರಿಯಾ ಕಾಲ ಬ್ರಿಟಿಶ ಇತಿಹಾಸದಲ್ಲಿ ಅತ್ಯಂತ ಕಾರ್ಗತ್ತಲೆಯ ಯುಗವೆಂದು ಹೇಳಬಹುದು. ಔದ್ಯೋಗಿಕ ಕ್ರಾಂತಿಯ ನಂತರ ಗ್ರೇಟಬ್ರಿಟನ್ನು ಇಡೀ ಜಗತ್ತನ್ನು ಪಾದಾಕ್ರಾಂತ ಮಾಡಿದರೂ ತನ್ನ ಆತ್ಮವನ್ನು ಕಳೆದುಕೊಂಡಿತು. ಹೀಗೇಕಾಯಿತು?

ಗ್ರೇಟ ಬ್ರಿಟನ್ನು ಜವಳಿ ಉದ್ಯೋಗದಲ್ಲಿ ಕೇಂದ್ರೀಕೃತ ಉತ್ಪಾದನ ಪದ್ಧತಿಯನ್ನು ಪ್ರಾರಂಭಿಸಿ ತನ್ನ ಕಚ್ಚಾ ಮಾಲುಗಳಿಗಾಗಿ ಅಮೇರಿಕೆಯ ದಕ್ಷಿಣ ಸಂಸ್ಥಾನಗಳೊಡನೆ ವ್ಯಾಪಾರಿಕೊಂಡ ವ್ಯವಹಾರಗಳನ್ನು ಅಭಿವೃದ್ಧಿಪಡಿಸುತಿರುವಾಗ ಅದರ ಪರಿಸ್ಥಿತಿ ಅಭದ್ರವಾಗಿದ್ದಿತು. ಅಮೇರಿಕೆಯಲ್ಲಿ ಯಾದವೀ ಯುದ್ಧ ನಡೆದಾಗ ಅಮೇರಿಕೆಯ ಅರಳೆ ಸ್ಥಾಂಬಿಸ್ಥರೆಗೆ ಬಾರದಂತಾಗಿ ಇಂಗ್ಲಂಡಿನ ಉದ್ಯೋಗಕ್ಕೆ

ತನ್ನ ಉದ್ಯೋಗ ಧಂದೆಗಳು ನಡೆಯಬೇಕಾದರೆ ಕಚ್ಚಾ ಮಾಲುಗಳ ಉತ್ಪಾದನೆ ತನ್ನ ನೇರವಾದ ಅಧೀನದಲ್ಲಿಯೆ ಇರಬೇಕೆಂಬುದನ್ನು ಅದು ಕಂಡು ಕೊಂಡಿತು. ಆದುದರಿಂದ ಅದು ಅರಳಿ ಪೂರೈಕೆಗಾಗಿ ಹಿಂದುಸ್ತಾನದತ್ತ ತನ್ನ ಲಕ್ಷ್ಯ ಹೊರಳಿಸಿತು. ಮತ್ತು ತನ್ನ ಸಿದ್ಧ ಸರಕುಗಳಿಗಾಗಿ ಪೇಟೆಗಳನ್ನೂ ತನ್ನ ನೇರವಾದ ರಾಜಕೀಯ ನಿಯಂತ್ರಣದಲ್ಲಿಡಬೇಕೆಂದು ನಿರ್ಧರಿಸಿತ್ತು. ಬ್ರಿಟಿಷ ಸಾಮ್ರಾಜ್ಯತ್ವದ ಜನನಕಾಲವಿದು.

ಗಿರಣಿಗಾರರಿಗೆ ತಮ್ಮ ವೆಚ್ಚದ ಬಹ್ವಂಶವನ್ನು ಹಿಂದೀ ಕಂದಾಯದ ಮೇಲೆ ಹಾಕಲು ಅವಕಾಶ ದೊರೆತದ್ದರಿಂದ ಈ ವ್ಯವಸ್ಥೆ ಸಮಾಧಾನಕರವೆಂದೆನಿಸಹತ್ತಿತು. ಉದ್ದ ಎಳೆಯ ಹತ್ತಿಯ ಉತ್ಪಾದನೆಯ ಸಂಶೋಧನೆ ವೆಚ್ಚ, ಬಾಡಿಗೆ ದರ ಮುಂತಾದವುಗಳಲ್ಲಿಯ ಪಕ್ಷಪಾತ, ಹಡಗ ಸಾರಿಗೆಯ ಭೋರಣ ಮುಂತಾದವುಗಳೆಲ್ಲ ಬ್ರಿಟಿಶ್ ಕಾರಖಾನೆದಾರರಿಗೆ ಅನುಕೂಲವಾಗುವ ದೃಷ್ಟಿಯಿಂದಲೆ ನಿಯಂತ್ರಿಸಲ್ಪಟ್ಟವು. ಈ ರೀತಿಯಾಗಿ ಅವರ ಉತ್ಪಾದನ ವೆಚ್ಚವನ್ನು ಬಹಳ ಕಡಮೆ ಇಡಲಾಯಿತು.

ಹಿಂಸೆ ಮತ್ತು ಅದರ ವೆಚ್ಚ

ಇವುಗಳಲ್ಲದೆ ಕೇಂದ್ರೀಕೃತ ಉತ್ಪಾದನೆ ಸುಸ್ಥಿತಿಯಿಂದ ಸಾಗುವದಕ್ಕೆ ಕೇಂದ್ರೀಕೃತ ಉದ್ಯೋಗಗಳಲ್ಲಿ ಕಚ್ಚಾ ಸರಕುಗಳ ನಿಯಂತ್ರಣ ಮತ್ತು ಪೇಟೆಗಳ ನಿಯಂತ್ರಣ ಅತ್ಯವಶ್ಯವೆಂಬುದನ್ನು ನಾವು ತೋರಿಸಿ ಕೊಟ್ಟಿದ್ದೇವೆ. ಇದನ್ನು ಒಸ್ಪಿದಡೆ, ಕಚ್ಚಾಸರಕು ಹಾಗು ಪೇಟೆಗಳ ನಿಯಂತ್ರಣೆಗಾಗಿ ಕಚ್ಚಾ ಸರಕುಗಳ ಉತ್ಪಾದಕರ ಮೇಲೆ ಮತ್ತು ಗಿರಾಕಿಗಳ ಮೇಲೆ ರಾಜಕೀಯ ಪ್ರಭುತ್ವವನ್ನು ಪಡೆಯಲಿಕ್ಕೆ ಬೇಕೆಂಬುದು ಸ್ವತಃ ಸಿದ್ಧವಾಗುತ್ತದೆ. ಇಂಥ ರಾಜಕೀಯ ಅಧಿಕಾರವನ್ನು ಇಂದು ಪಡೆಯಬೇಕಾದರೆ ಹಿಂಸಾ ಮಾರ್ಗದಿಂದಲೆ ಸಾಧ್ಯವಿದೆ. ಈ ಅಧಿಕಾರವನ್ನು ಕಾರ್ಯಕ್ಷಮ ಮಾಡಬೇಕಾದರೆ ಭೂ—ಜಲ—ವಾಯು ಪಡೆಗಳನ್ನಿಡಬೇಕಾಗುತ್ತದೆ. ಚೊಕ್ಕವಾದ ಲೆಕ್ಕದ ಪದ್ಧತಿಯನ್ನನುಸರಿಸುವದಾದರೆ ಈ ಭೂ—ಜಲ—ವಾಯುಪಡೆಗಳ ವೆಚ್ಚವೆಲ್ಲ ಕೇಂದ್ರೀಕೃತ ಪದ್ಧತಿಯ ಮೇಲೆಯೇ ಬೀಳಬೇಕಾಗುವದು. ಕಾಲ ಕಾಲಕ್ಕೆ ಯುದ್ಧಗಳನ್ನೂ ಹೋರಾಡಬೇಕಾಗುವದು. ಈ ಯುದ್ಧಗಳ ವೆಚ್ಚದ ಭಾರವೂ ಈ ಕೇಂದ್ರೀಕೃತ ಉತ್ಪಾದನೆಯ ಪದ್ಧತಿಯ ಮೇಲೆಯೇ ಬೀಳಬೇಕಾಗುವದು. ಈ ರೀತಿ ಉತ್ಪಾದನೆಯ ಮೇಲೆಯೇ ಈ ವೆಚ್ಚ ಬೀಳುತ್ತದೆ. ಈ ಯೆಲ್ಲ ವೆಚ್ಚಗಳನ್ನು ಯೋಗ್ಯ ರೀತಿಯಿಂದ ಆಯಾ ಕಾರಖಾನೆಗಳ ಮೇಲೆ ಹಾಕಿದ್ದಾದರೆ ಗಿರಣಿಗಳಲ್ಲಿಯ ಉತ್ಪಾದನೆಯ ವೆಚ್ಚ ಮಿತಿಮೀರಿ ಬೆಳೆದು ವಿಕೇಂದ್ರೀಕೃತ ಕಡಿಮೆ ವೆಚ್ಚದಲ್ಲಿ ತಯಾರಾದ ಸರಕುಗಳೊಡನೆ ಸ್ಪರ್ಧಿಸುವುದು ಅವುಗಳಿಗೆ ಶಕ್ಯವಾಗಲಾರದೆಂಬುದು ನಮಗೆ ಸಹಜವಾಗಿ ಗೊತ್ತಾಗಬಹುದು.

ನಮ್ಮ ಜೀವಮಾನ ಕಾಲದಲ್ಲಿಯೇ ಜಪಾನದಲ್ಲಿಯ ಡಿದ್ಯೋಗಿಕರಣದ ಅನುಭವವೂ ಇದೇ ಬಗೆಯದಾಗಿರುವದು. ಮಂಚೂರಿಯಾ ಮತ್ತು ಚೀನದ ಮೇಲೆ ರಾಜಕೀಯ ನಿಯಂತ್ರಣವಿರುವದರ ಅವಶ್ಯಕತೆ ಅದಕ್ಕೆನಿಸುತ್ತದೆ. ಇಂದಿನ ಜಾಗತಿಕ ಯುದ್ಧಗಳಿಗೆ ಪ್ರಕೋಪಕ ಕಾರಣಗಳಿವು. ನಮ್ಮ ದೇಶವೂ ಈ ಅತಿನಿಂದ್ಯ ಚಟುವಟಿಕೆಗಳಲ್ಲಿ ಭಾಗಿಯಾಗಬೇಕೆಂದು ನಾವು ಬಯಸುವೆವೊ? ಇಲ್ಲದಿದ್ದರೆ ಖಾಸಗೀ ಲಾಭಕ್ಕಾಗಿ ಜನಸಾಮಾನ್ಯರ ಉಪಯೋಗದ ವಸ್ತುಗಳಲ್ಲಿ ಕೇಂದ್ರೀಕರಣ ಪದ್ಧತಿಯಿಂದ ನಾವು ಸಂಪೂರ್ಣವಾಗಿ ಅಲಿಪ್ತ ಉಳಿಯಕ್ಕಾದ್ದು.

ಅಪ್ರಾಮಾಣಿಕತೆ.

ಹಿಂದೂಸ್ತಾನದಿಂದ ಕಚ್ಚಾಮಾಲು ಪಡೆಯಬೇಕೆಂಬುದನ್ನು ನಿರ್ಧರಿಸಿ ಮ್ಯಾಂಚೆಸ್ಟರ ಗಿರಣಿಗಳಿಗಾಗಿ ನಡೆಯುವ ಸಂಶೋಧನೆಗಳಿನ್ನೆಲ್ಲ ಹಿಂದೀ ಕರ ರೊಪಾಯನ ಮೇಲೆಯೇ ವೆಚ್ಚದ ಭಾರವನ್ನು ಹೊರಿಸಬೇಕೆಂದು ಗೊತ್ತುಪಡಿಸಿದನಂತರ ಹಿಂದೂಸ್ತಾನ

ದಲ್ಲಿ ಬೆಳೆದ ಹತ್ತಿಯನ್ನು ಮ್ಯಾಂಚೆಸ್ಟರಕ್ಕೆ ಕಳಿಸುವದಕ್ಕಾಗಿ ವಾಹನ ಸೌಕರ್ಯವನ್ನೊದಗಿಸುವದವಶ್ಯವಾಯಿತು. ಇದಕ್ಕಾಗಿ ಅವರು ರೈಲು, ಹೆದ್ದಾರಿಗಳನ್ನು ಹಾಕುವ ಕಾರ್ಯಕ್ರಮವನ್ನು ಭರದಿಂದ ಪ್ರಾರಂಭಿಸಿದರು. ದೇಶವನ್ನು ಅಭಿವೃದ್ಧಿಗೊಳಿಸುವ ನೆವದಿಂದ ಇದಕ್ಕಾಗಿ ಕೋಟ್ಯವಧಿ ರೂಪಾಯಿಗಳನ್ನು ವೆಚ್ಚಮಾಡಲಾಯಿತು. ಆ ಕಾಲದಲ್ಲಿ ಹಿಂದೂಸ್ತಾನದಲ್ಲಿಯ ಒಳಪೇಟೆಗಳಿಗೆಲ್ಲ ಸರಕುಗಳನ್ನು ಕಳಿಸುವದಕ್ಕಾಗಿ ನಿಜವಾಗಿ ಜಲಮಾರ್ಗಗಳ ಅವಶ್ಯಕತೆ ಹೆಚ್ಚಾಗಿದ್ದಿತು. ಈ ಅನುಕೂಲತೆಯನ್ನೊದಗಿಸಿಕೊಡದೆ ಪರಕೀಯ ಹಿತಸಂಬಂಧಗಳ ಕಡೆಗೇ ಹೆಚ್ಚು ಗಮನಕೊಡಲಾಯಿತು ಮತ್ತು ಅವರ ಕಲ್ಯಾಣಕ್ಕಾಗಿ ಕೋಟ್ಯವಧಿ ರೂಪಾಯಿಗಳನ್ನು ವೆಚ್ಚ ಮಾಡಲಾಯಿತು.

ಅರಳಿ ಸಂಶೋಧನೆಗಾಗಿ ಮಾಡಿದ ವೆಚ್ಚವನ್ನು ಮತ್ತು ರೇಲು ಮಾರ್ಗಗಳಿಗಾಗಿ ಮಾಡಿದ ವೆಚ್ಚವನ್ನು ಮುಂತಾದ್ದೆಲ್ಲ ನ್ಯಾಯವಾಗಿ ಮ್ಯಾಂಚೆಸ್ಟರ ಗಿರಣಿಕಾರರ ಮೇಲೆ ಹಾಕಬೇಕಿದ್ದಿತು. ಅವರು ಈ ವೆಚ್ಚವನ್ನು ವಹಿಸಿದ್ದರೆ ಮ್ಯಾಂಚೆಸ್ಟರ ಬಟ್ಟೆಗಳನ್ನು ಹಿಂದುಸ್ತಾನದಲ್ಲಿ ಕೈನೂಲು ಕೈಮಗ್ಗಗಳ ಬಟ್ಟೆಗಳಿಗಿಂತ ಕಡಮೆ ದರಗಳಿಗೆ ಮಾರುವದು ಸಾಧ್ಯವಾಗುತ್ತಿರಲಿಲ್ಲ. ಸರಕಾರದ ಸಹಾಯದಿಂದ ಈ ರೀತಿ ಉತ್ಪಾದನೆಯ ವೆಚ್ಚವನ್ನು ತೆತ್ತಿ ಅದನ್ನು ಕಡಮೆ ಮಾಡುವದೇನು. 'ಸೈಪುಣ್ಯ' ವಲ್ಲ ಅದರಿಂದ ಲೂಟಿಯು. ಕಚ್ಚಾ ಸರಕುಗಳ ನಿಯಂತ್ರಣವನ್ನು ಗಿರಣಿಗಾರರ ಕೈಯಲ್ಲಿತ್ತುವದರ ಅವಶ್ಯಕತೆ ಸಾಮ್ರಾಜ್ಯತ್ವಕ್ಕೆಳಿಸುವದೆಂಬದನ್ನೂ ಮತ್ತು ವೆಚ್ಚವನ್ನು ಕಡಮೆಮಾಡಲು ಹಾಗು ಕರಪದಿಂದ ಎತ್ತಿದ ಹಣವನ್ನು ಆ ವೆಚ್ಚದ ಕೆಲ ಅಂಶಕ್ಕಾಗಿ ಉಪಯೋಗಿಸುವದು ಅವ್ಯಾವಹಾರಿಕತೆಗೆ ಎಳಸುವದೆಂಬದನ್ನು ನಾವು ಈವರೆಗೆ ಅರಿತಿದ್ದಾಯಿತು. ಈ ರೀತಿಯಾಗಿ ಕೇಂದ್ರೀಕೃತ ಉತ್ಪಾದನೆ ಸಾಮ್ರಾಜ್ಯತ್ವ ಮತ್ತು ಶೋಷಣೆಗೆ ಕಾರಣವಾಗುವದು.

ಇದನ್ನು ವಿವರಿಸುವಾ. ಪಲ್ಲಡ ಫಿರ್ಕಾದಲ್ಲಿ ನಾನು ಸಂಚರಿಸುವಾಗ ಓರ್ವ ಉತ್ಸಾಹೀವ್ಯಕ್ತಿಯನ್ನು ನೋಡಿದೆ. ಅವನು ಹಳೆಯ ಒಂದು ಎಂಜಿನಿನಿಂದ ಆರು ಮಗ್ಗಗಳನ್ನು ನಡೆಸುತಿದ್ದನು. ಅವನು ತನ್ನ ಉಪಕರಣಗಳಿಗಾಗಿ ೨೦-೨೫ ಸಾವಿರ ರೂಪಾಯಿಗಳನ್ನು ವೆಚ್ಚ ಮಾಡಿದ್ದನು. ಕೊಯಿಮುತ್ತೂರಿನಿಂದ ಪೂರೈಸಲ್ಪಡುವ ನೂಲಿನ ಸೀದಾದಿಂದ ಅವನು ತಿಂಗಳಲ್ಲಿ ಕೇವಲ ೧೫ ದಿನ ಮಾತ್ರ ತನ್ನ ಮಗ್ಗಗಳನ್ನು ನಡೆಸಲು ಸಮರ್ಥನಾಗಿದ್ದನು. ಅವನು ತನ್ನ ಅವಶ್ಯಕತೆಗಳನ್ನು ನನ್ನಮುಂದೆ ಹೇಳುತ್ತ ಮತ್ತೆ ಈಗಿನ ಅರ್ಧದಷ್ಟು ನೂಲಿನ ಸೀದಾತನಕ ಸಿಕ್ಕಿದ್ದಾದರೆ ಇಡೀ ತಿಂಗಳು ತನ್ನ ಮಗ್ಗಗಳನ್ನು ನಡೆಸಿ ಉತ್ಪಾದನೆಯ ವೆಚ್ಚವನ್ನು ಬಹಳ ಮಟ್ಟಿಗೆ ಕಡಮೆ ಮಾಡಬಲ್ಲೆನೆಂದೂ ಗಿರಣಿ ಉತ್ಪಾದನೆಯ ವೆಚ್ಚಕ್ಕಿಂತಲೂ ಕಡಮೆ ಮಾಡಬಲ್ಲೆನೆಂದೂ ತಿಳಿಸಿದನು. ಅವನಿಗೆ ಬೇಕಾಗುವ ಉದ್ದ ಕೆಚ್ಚಿಗೆಯ ನೂಲು ಕೊಯಿಮುತ್ತೂರಿನಿಂದ ಅವನಿಗೆ ಬರುತಿದ್ದಿತು. ಅವನಷ್ಟಿದ್ದ ಸರಕುಗಳೆಲ್ಲ ನೆಲ್ಲೂರಿನ ಸುತ್ತುಮುತ್ತಲ ಹಳ್ಳಿಗಳಲ್ಲಿ ಮಾರಾಟಾಗುತಿದ್ದವು. ಕಾಲಾಂತರದಲ್ಲಿ ತನ್ನ ಕಚ್ಚಾ ಮಾಲಿಗಾಗಿ ಕೊಯಿಮುತ್ತೂರ ಗಿರಣಿಗಾರರ ಮೇಲೆ ನಿಯಂತ್ರಣ ಹಾಕುವದು ಅವನಿಗೆ ಅಸಿವಾಸ್ಯವಾಗುವದು. ತಮ್ಮ ಬಂಡೂಕಿನ ಬಲುಮೆಯಿಂದ ಅವನಿಗೆ ಬೇಕಾಗುವಷ್ಟು ನೂಲನ್ನು ದೊರಕಿಸುವ ಗುಂಡಜನರವರು ಅವನಲ್ಲಿದ್ದರೆ ಎಂತಹ ಜವಳಿ ಗಿರಣಿಗಳಿಗಿಂತ ಹೆಚ್ಚು ಕಾರ್ಯಕ್ಷಮತೆಯಿಂದ ಅವನು ತನ್ನ ಗಿರಣಿಯನ್ನು ನಡೆಸಲು ಸಮರ್ಥನಾಗುವನು. ಇದೇ ರೀತಿಯಾಗಿ ತನ್ನ ಸರಕುಗಳನ್ನು ಕಳಿಸಲು ಅವನಿಗೆ ಅನ್ಯ ದರಗಳಲ್ಲಿ ವಾಹನ ಸೌಕರ್ಯ ಸಿಕ್ಕಿದ್ದಾದರೆ ಜವಳಿ ಗಿರಣಿಸರಕುಗಳಿಗಿಂತ ಕಡಮೆ ದರಗಳಿಂದ ಅವನು ತನ್ನ ಬಟ್ಟೆಗಳನ್ನು ಮಾರಬಲ್ಲನು. ಎಲ್ಲ ಕೇಂದ್ರೀಕೃತ ಉದ್ಯೋಗಗಳ ಸ್ಥೂಲ ಸ್ವರೂಪವಿದು. ತಮ್ಮ ಅಸ್ತಿ

ತ್ವವನ್ನುಳಿಸಿಕೊಳ್ಳುವುದಕ್ಕಾಗಿ ಅವು ಸಾಮ್ರಾಜ್ಯತ್ವ ಮತ್ತು ಶೋಷಣೆಯ ಮಾರ್ಗವನ್ನವಲಂಬಿಸಬೇಕಾಗುವದು.

ಆಹಾರ ಪದಾರ್ಥ ವಿರುದ್ಧ ಕಚ್ಚಾ ಸರಕು

ಗಿರಣಿಗಳಿಗಾಗಿ ಕಚ್ಚಾ ಸರಕನ್ನು ಬೆಳೆಯಲಿಕ್ಕೆ ಸಾರ್ವಜನಿಕ ಹಣವನ್ನು ವೆಚ್ಚ ಮಾಡಿ ಒಕ್ಕಲತನ ಕಾಲೇಜುಗಳಲ್ಲಿ ಸಂಶೋಧನ ನಡೆಸಬೇಕಾಗುತ್ತಿದ್ದಿತಲ್ಲದೆ ಆಹಾರ ಪದಾರ್ಥಗಳನ್ನು ಬೆಳೆವ ಹೊಲಗಳಲ್ಲಿಯೂ ಅತಿಕ್ರಮಣ ಮಾಡಬೇಕಾಗುತಿದ್ದಿತು. ಮಲಬಾರಿನ ಪಾಯಾನೂರ ಫಿರ್ಕಾದಲ್ಲಿ ನಾನು ಸಂಚರಿಸುತಿದ್ದಾಗ ಅನೇಕ ಹಳ್ಳಿಗಳಲ್ಲಿ ಭತ್ತದ ಗದ್ದೆಗಳು ಸುಮಾರು ೧೯೦ ಕ್ಕೆ ೨೦ ರಷ್ಟು ಕಡಮೆಯಾಗಿವೆಂದೂ ಅವುಗಳ ಸ್ಥಳದಲ್ಲಿ ಟೆಂಗಿನ ಬನ ಮಾರ್ಪಟ್ಟಿದೆಂದೂ ಅಲ್ಲಿನ ಜನರು ನನಗೆ ಹೇಳಿದರು. ಈ ಟೆಂಗಿನ ಗಿಡಗಳಾದರೆ ಆಹಾರಕ್ಕಾಗಿ ಬೆಳೆಸಲ್ಪಟ್ಟಿರಲಿಲ್ಲ. ಆದರೆ ಎಣ್ಣೆ ಗಿರಣಿಗಳಿಗೆ ಕೊಬ್ಬರಿಯನ್ನು ಒದಗಿಸಲು ಬೆಳೆಸಲ್ಪಟ್ಟಿದ್ದವು. ಆ ಎಣ್ಣೆ ಗಿರಣಿಗಳಾದರೊ ಸಾಬೂನಿಗಾಗಿ ಕೊಬ್ಬರಿಯನ್ನುಪಯೋಗಿಸುತಿದ್ದವು. ಈ ರೀತಿಯಾಗಿ ಭತ್ತದ ಗದ್ದೆಗಳು ಸಾಬೂನ ಉತ್ಪಾದಕ ಭೂಮಿಗಳಾಗಿ ಪರಿವರ್ತಿಸಲ್ಪಟ್ಟವು. ಹೀಗೆ ಬೆಳೆಗಳ ಪರಿವರ್ತನವಾಗುತ್ತ ನಡೆದರೆ. ಕಾಲಕಾಲಕ್ಕೆ ಬರಬಿದ್ದರೆ ಆಶ್ಚರ್ಯವೇನು ?

ಮಲಬಾರಿನಲ್ಲಿ ಮಕ್ಕಳು ಕೆಂದೀ ಕೂದಲುಗಳನ್ನು ಬಿಟ್ಟುಕೊಂಡು ಓಡಾಡುತಿರುವುದನ್ನೂ ನಾನು ನೋಡಿದೆ. ಹೀಗೇಕೆಂದು ನಾನು ಕೇಳಿದಾಗ ಮೊದಲು ಈ ಎಲ್ಲ ಮಕ್ಕಳು ಕೊಬ್ಬರಿಎಣ್ಣೆಯಲ್ಲಿ ಸ್ನಾನ ಮಾಡುತಿದ್ದರೆಂದೂ ಕೂದಲಕ್ಕೆಲ್ಲ ಬೇಕಾದಷ್ಟು ಕೊಬ್ಬರಿಎಣ್ಣೆ ಹಚ್ಚಿಕೊಳ್ಳುತ್ತಿದರೆಂದೂ ಹೇಳಲಾಯಿತು. ಸುದ್ರಾಸಿನಲ್ಲಿಯಷ್ಟು ತುಟ್ಟಿ ಭಾರಣೆಯಿಂದಲೆ ಸಾಮಾನ್ಯವಾಗಿ ಕೊಬ್ಬರಿಗಳ ವ್ಯಾಪಾರ ಇಲ್ಲಿ ನಡೆಯುತಿರುವದರಿಂದ ಈ ಮಕ್ಕಳಿಗೆ ಅಂಗಮರ್ದನಕ್ಕಾಗಿ ಕೊಬ್ಬರಿ ಎಣ್ಣೆ ಸಿಕ್ಕುವುದಿಲ್ಲ. ಈ ರೀತಿಯಾಗಿ ಜನತೆಯ ವ್ಯಾಪಕ ಬೇಡಿಕೆಗಳ ಮೇಲೆ ಕೇಂದ್ರೀಕೃತ ಉದ್ಯೋಗಗಳು ಅತಿಕ್ರಮಣ ಮಾಡಿ ಅವರನ್ನು ಉಪವಾಸ ಕೆಡಹುವವಲ್ಲದೆ ಆರೋಗ್ಯವನ್ನೂ ಕೆಡಿಸುವವು.

ಹಣಪ್ರಧಾನ ಆರ್ಥಿಕ ಪದ್ಧತಿ

ಈ ಬಗೆಯ ಹಣಪ್ರಧಾನ ಆರ್ಥಿಕ ಪದ್ಧತಿಯ ಸಹಾಯದಿಂದ ಅಯಾ ಜನರಿಗೆ ಗೊತ್ತಾಗದಂತೆಯೆ ಇವನ್ನೆಲ್ಲ ಮಾಡಲಾಗುತ್ತದೆ. ಪದಾರ್ಥಗಳ ವಿಶೇಷತಃ ಪ್ರಾಥಮಿಕ ಅವಶ್ಯಕತೆಯ ಪದಾರ್ಥಗಳ ಬೆಲೆಯನ್ನು ಹಣದ ರೂಪವಾಗಿ ಕಟ್ಟುವದು ಸುರಕ್ಷಿತ ಪದ್ಧತಿಯಲ್ಲ. ಉದಾಹರಣೆಗೆ ಪೂರ್ವವಾಗಿ ಅವನಾಶಿ ಫಿರ್ಕಾದಲ್ಲಿ ದೊರೆಯುತಿರುವ ಹಾಲಿನ ಬಹ್ವಂಶವನ್ನು ಕೊಯಿಮತ್ತೂರಿಗೆ ಕಳಿಸಲಾಗುತ್ತದೆ. ಒಂದು ಪೌಂಡು ಹಾಲಿನ ಬೆಲೆ ಅದು ಕೊಡುತಿರುವ ಪೌಷ್ಟಿಕತೆಯಲ್ಲಿದೆ. ಹಾಲು ಇದ್ದವನು ಅದನ್ನು ತನ್ನ ಮಗುವಿಗೆ ಕೊಟ್ಟರೆ ಆ ಮಗುವಿನ ಶರೀರ ಬೆಳೆವಣಿಗೆಗೆ ಅವಶ್ಯಕವಾದ ಪೌಷ್ಟಿಕ ಸತ್ವ ಅದಕ್ಕೆ ಸಿಕ್ಕುತಾಗುವದು. ಹಾಲನ್ನು ಗಿರಣಿಗಾರ ಕುಡಿಯಲಿ ಇಲ್ಲವೆ ಅದನ್ನು ಉತ್ಪಾದಿಸುವವನ ಮಗು ಕುಡಿಯಲಿ ಅವರ ಸ್ವಾಭಾವಿಕ ಪೌಷ್ಟಿಕ ಸತ್ವದ ಬೆಲೆ ಒಂದೇ ಬಗೆಯದಾಗುವದು. ಒಂದು ದೃಷ್ಟಿಯಿಂದ ಬೆಳೆಯುವ ಮಗುವಿಗೆ ಕೊಟ್ಟ ಹಾಲಿನ ಬೆಲೆ ಮೊನ್ನಾನಿಗೆ ಕೊಟ್ಟ ಹಾಲಿನ ಬೆಲೆಗಿಂತ ಹೆಚ್ಚೆಂದೇ ಹೇಳಬೇಕಾಗುವದು. ಕೊಯಿಮತ್ತೂರಿನಲ್ಲಿಯ ಗಿರಣಿ ಒಡೆಯರು ಒಂದು ಪೌಂಡ ಹಾಲಿಗೆ ಎಂಟಾಣೆ ಕೊಡುವರೆಂದು ಅವನಾಶಿಯಲ್ಲಿಯ ಹಾಲಿನ ಉತ್ಪಾದಕನು ತನ್ನ ಮಗನಿಗೆ ಹಾಲಿನಂಥ ಪೌಷ್ಟಿಕ ಆಹಾರ ಪದಾರ್ಥವನ್ನು ಕೊಡದೆ ಕೋಯಿಮತ್ತೂರಿಗೆ ಅದನ್ನು ಕಳಿಸಿಬಿಡುವನು. ಹೀಗೆ ಮಾಡುವಾಗ ತನ್ನ ಮಗುವಿನ ಭಾವೀ ಆರೋಗ್ಯವನ್ನು ತಾನು ಮಾರಿಕೊಳ್ಳುವನೆಂದು ಅವನಿಗೆ ಹೊಳೆಯುವುದಿಲ್ಲ. ಇದುವರೆಗೂ ಗ್ರಾಮೋದ್ಯೋಗದ ವಿಷಯಗಳ ವಿಚಾರ ಮಾಡುವಾಗ ಕೇಂದ್ರೀಕೃತ ಉದ್ಯೋಗಗಳು ಜೀವಗಳ ಕಾರ್ಯಕ್ಷಮತೆ ಅಥವಾ

ಅವುಗಳ ಹಣದ ಮೌಲ್ಯಗಳು ಮಾತ್ರವೆ ನಮ್ಮ ನಿರ್ಧಾರಕ್ಕೆ ಮುಖ್ಯ ಪ್ರಮಾಣ ಸಾಧನಗಳಾಗಲಾರವೆಂಬದನ್ನು ನಾವು ಲಕ್ಷದಲ್ಲಿಡಬೇಕು. ಆಯಾ ಪದಾರ್ಥಗಳ ವ್ಯಾಪಾರಿ ಮೌಲ್ಯವೇನೇ ಇದ್ದರೂ ಅದನ್ನು ಲಕ್ಷಿಸದೆ ಜನತೆಯ ಕಲ್ಯಾಣದ ದೃಷ್ಟಿಯಿಂದಲೆ ನಾವು ವಿಚಾರಮಾಡಬೇಕಾಗುವುದು. ಕೆಲ ಸಂದರ್ಭಗಳಲ್ಲಿ ತಮ್ಮ ಸ್ವಂತ ಹಿತಸಂಬಂಧಗಳಿಗೆ ಆ ಕ್ಷಣಕ್ಕೆ ವಿರೋಧಕವಾಗಿ ತೋರುವ ಸಂಗತಿಗಳನ್ನು ಮಾಡಲು ಕೂಡ ನಾವು ಜನತೆಯ ಮನಸ್ಸನ್ನೊಲಿಸಬೇಕಾಗುತ್ತದೆ.

ಹಣದ ಸಂಚಯ

ಉತ್ಪಾದನೆಯಲ್ಲಿ ಕೇಂದ್ರೀಕೃತ ಪದ್ಧತಿಗಳನ್ನು ನುಸರಿಸುವದರಿಂದ ಹಣವೂ ಕೇಂದ್ರೀಕೃತವಾಗಹತ್ತುವದು. ಬಡತನದಲ್ಲಿ ಬಳಲುವ ಹಿಂದುಸ್ತಾನದಂಥ ರಾಷ್ಟ್ರದಲ್ಲಿ ಹಣ ಒತ್ತಟ್ಟಿಗೆ ಕೂಡುವದು ಇಷ್ಟವಲ್ಲ. ಹಣದ ಹಂಚಿಕೆ ಹೆಚ್ಚು ಚೆನ್ನಾಗಿ ಆಗಬೇಕಾಗುವದು ವಿಕೇಂದ್ರೀಕೃತ ಉದ್ಯೋಗಗಳ ವೈಶಿಷ್ಟ್ಯವೇ ಹಣದ ಹಂಚಿಕೆಯೆಂದು ಹೇಳಬಹುದು. ಹಿಂದೂಸ್ತಾನದಲ್ಲಿ ಈ ಸಾಧ್ಯಸಂಪತ್ತು ಸಿದ್ಧ ಸಂಪತ್ತನ್ನಾಗಿ ಪರಿವರ್ತಿಸಬೇಕಾಗಿದೆ. ಕುಂಬಾರ ತನಗೆ ದೊರೆಯಬಹುದಾದ ಮಣ್ಣನ್ನು ಅನಿಬಂಧವಾಗಿ ಪಡೆದು ನಿತ್ಯೋಪಯೋಗಿ ವಸ್ತುಗಳನ್ನು ಮಾಡುತ್ತಾನೆ. ಬೆಲೆಯಿಲ್ಲದ ಮಣ್ಣನ್ನು ತನ್ನ ಕೌಶಲ್ಯ ಮತ್ತು ಪರಿಶ್ರಮದಿಂದ ಸಂಪತ್ತನ್ನಾಗಿ ಅವನು ಮಾರ್ಪಡಿಸಬೇಕಾಗುತ್ತದೆ. ಹಿಂದೂಸ್ತಾನಕ್ಕೆ ಅತ್ಯಂತ ಉಚಿತವಾದ ಮಾರ್ಗವಿದು.

ಕೇಂದ್ರೀಕೃತ ಉದ್ಯೋಗಗಳ ಸ್ಥಾನ

ಇದರಿಂದ ಕೇಂದ್ರೀಕೃತ ಉತ್ಪಾದನೆಗೇ ನಾವು ವಿರುದ್ಧವಿರುವೆವೆಂದಲ್ಲ. ಖಾಸಗಿ ಒಡೆತನದಲ್ಲಿ ಉತ್ಪಾದನೆಯು ಕೇಂದ್ರೀಕರಣವಾದರೆ ನಾವು ನೋಲೆ ವಿವರಿಸಿದ ಪರಿಣಾಮಗಳೆಲ್ಲ ಆಗುವವು. ಆದರೆ ರೈಲ್ವೆ ಸಾರಿಗೆ, ಯಾಂತ್ರಿಕ ಶಕ್ತಿಯ ಸೌಕರ್ಯ ಮೊದಲಾದಕೆಲ ಉದ್ಯೋಗಗಳು ಸ್ವಭಾವತಃ ತುತ್ತಿಗೆ ಸ್ವರೂಪದ ಉದ್ಯೋಗಗಳಾಗಿರುವವು. ಇವನ್ನೆಲ್ಲ ಸರಕಾರದವರು ಕೇವಲ ಸೇವಾಭಾವನೆಯಿಂದ ನಡೆಸಬೇಕಲ್ಲದೆ ಲಾಭದ ದೃಷ್ಟಿಯಿಂದಲ್ಲ. ಅದೇ ರೀತಿಯಾಗಿ ನೀರಿನ ಪೂರೈಕೆ, ನೈಸರ್ಗಿಕ ಸಂಪತ್ತಿನ ಉಪಭೋಗ ಮತ್ತು ಉಳಿದ ಭಾರೀ ಉದ್ಯೋಗಗಳನ್ನು ಸರಕಾರದವರು ನಡೆಸಬಹುದು. ಅಥವಾ ಸರಕಾರದ ನಿಯಂತ್ರಣದಲ್ಲಿ ಕೇಂದ್ರೀಕೃತ ಉತ್ಪಾದನೆಯು ಪದ್ಧತಿಯಿಂದ ಅವು ನಡೆಯಬಲ್ಲವು. ಅದರೆ ನಾವು ಹೇಳುವದಿಷ್ಟೆ, ಜನೋಪಯೋಗಿ ಸರಕುಗಳ ಉತ್ಪಾದನೆ ಖಾಸಗಿ ಒಡೆತನದಲ್ಲಿ ನಡೆದಿರುವಾಗ ಉತ್ಪಾದನೆಯು ಕೇಂದ್ರೀಕೃತ ಪದ್ಧತಿಯಿರತಕ್ಕದ್ದಲ್ಲ. ಆದುದರಿಂದ ಹಿಂದುಸ್ತಾನವು ಸಾಮ್ರಾಜ್ಯತ್ವದ ತಿರುಗಣಿ ಮಡುವಿನಲ್ಲಿ ಸಿಕ್ಕದಂತೆ ನೋಡಿಕೊಳ್ಳುವದೆ ಮದ್ರಾಸ ಜವಳಿ ಧೋರಣದ ಉದ್ದೇಶದ ಅರ್ಥ. ನಮ್ಮ ಜೀವಮಾನ ಕಾಲದಲ್ಲಿಯೆ ಕೇಂದ್ರೀಕೃತ ಉತ್ಪಾದನೆಯ ಪದ್ಧತಿಯನ್ನು ಅನುಸರಿಸಿದ್ದರಿಂದ ಜಪಾನವು ಸಾಮ್ರಾಜ್ಯತ್ವಕ್ಕೆ ಬಲಿಬಿದ್ದಿತೆಂಬುದನ್ನು ನಾವು ಕಂಡುಕೊಂಡಿದ್ದೇವೆ.

ಮಾರ್ಗದರ್ಶನ

ಎರಡನೆ ಪ್ರಾಂತಗಳು ಬೇರೆ ಧೋರಣವನ್ನು ನುಸರಿಸುತಿವೆಯೆಂದು, ಯೋಗ್ಯವೆಂದು ನಮಗೆನಿಸುವ ಮಾರ್ಗವನ್ನು ಬಿಟ್ಟುಗೊಡುವದು ಜಾಣತನವಲ್ಲ. ರಕ್ತಪಿಪಾಸೆ ಮತ್ತು ಲಾಭದಾಸೆಯನ್ನು ಹುಟ್ಟಿಸಿ ನಾಗರಿಕನ ವ್ಯಕ್ತಿತ್ವದ ಅಭಿವೃದ್ಧಿಗೇ ಕೇಂದ್ರೀಕೃತ ಉದ್ಯೋಗೀಕರಣವು ಹಾನಿಯನ್ನುಂಟು ಮಾಡುತಿದ್ದರೆ, ಅವನ್ನು ತಡೆಯಲು ತೆಗೆದುಕೊಳ್ಳುವ ಯಾವದೇ ಮಾರ್ಗವೂ ಅಕ್ಷೇಪಕರವಾಗಲಾರದು. ಈ ಸಂಬಂಧದಲ್ಲಿ ಮದ್ರಾಸಕ್ಕೆ ಮಾರ್ಗದರ್ಶನದ ಅವಕಾಶ ದೊರೆತರೆ ವಿಶೇಷಾಧಿಕಾರವೊಂದು ದೊರೆತಿರೆಂದು ಅದು ತಿಳಿಸಬೇಕಾಗುವದು.

ಜನತೆಯ ಮುಂದೆ ಇಟ್ಟ ಈ ಧೋರಣವನ್ನನುಸರಿಸುವದರಿಂದ ಅವರು ಸ್ವಾಭಿಮಾನ, ಅಹಿಂಸೆ ಮತ್ತು ಪ್ರಾಮಾಣಿಕತೆಯ ತಳಹದಿಯಲ್ಲಿ ಸ್ಥಾಪಿತ

ವಾದ ಸ್ವಾವಲಂಬನದ ಉದಾಹರಣೆಯನ್ನು ಹಾಕಿ ಕೊಟ್ಟಂತಾಗುವದು. ಕೇವಲ ಹಿಂದೂಸ್ತಾನಕ್ಕೆ ಮಾತ್ರವಲ್ಲದೆ ಇಡೀ ಜಗತ್ತಿಗೆ ಮದ್ರಾಸ ಮಾರ್ಗದ ಶಕನ ಮಾಡಿದಂತಾಗುವದು. ಅನಿರ್ಬಂಧಿತ ಕೇಂದ್ರೀಕರಣ ಪದ್ಧತಿಯಿಂದ ಜರ್ಜರಿತವಾದ ಸದ್ಯದ ಜಗತ್ತಿಗೆ ಇದೇ ತಾರಕವಾಗಿದೆ.

ಪ್ರಜಾಪ್ರಭುತ್ವ

ಆರ್ಥಿಕ ಕ್ಷೇತ್ರದಲ್ಲಿ ಉತ್ಪಾದನೆಯ ಕೇಂದ್ರೀಕರಣ ಪದ್ಧತಿಯನ್ನವಲಂಬಿಸುವದರಿಂದ ಕೊನೆಗೆ ಏಕಾಧಿಕಾರಿತ್ವವೆ ಪ್ರಸ್ಥಾಪಿತವಾಗುವದಲ್ಲದೆ ಪ್ರಜಾಪ್ರಭುತ್ವ ಪ್ರಸ್ಥಾಪಿತವಾಗಲಾರದು. ಆಚಾರ್ಯ ಕೃಪಲಾನಿಯವರು ಮಿರತ ಕಾಂಗ್ರೆಸಿನ ಅಧ್ಯಕ್ಷಸ್ಥಾನದಿಂದ ಇದನ್ನೆ ಹೇಳಿದ್ದಾರೆ. ಪ್ರಜಾಪ್ರಭುತ್ವದ ಶಿಕ್ಷಣ ಪಡೆಯಬೇಕಾದರೆ ಉತ್ಪಾದನೆಯ ವಿಕೇಂದ್ರೀಕರಣ ಅನಿವಾರ್ಯವಾಗಿದೆ. ಎಲ್ಲ ಬಗೆಯ ಕೇಂದ್ರೀಕರಣದಿಂದ ಅಧಿಕಾರದ ಕೇಂದ್ರೀಕರಣವೂ ಆಗುವದು. ಅಧಿಕಾರದ ಕೇಂದ್ರೀಕರಣವು ಪ್ರಜಾಪ್ರಭುತ್ವಕ್ಕೆ ವಿರೋಧಿಯಾಗಿದೆ.

ಜನಾಬ್ ಅಬ್ದುಲ ರಜಾಕ್‌ಸಾಹೇಬ್

ಬಳ್ಳಾರಿ ಪುರಸಭಾಧ್ಯಕ್ಷರಾದರು

ಜನಾಬ್ ಅಬ್ದುಲ್ ರಾವುಫ್‌ಸಾಹೇಬರ ನಿಧನದಿಂದ ಖಾಲಿಯಾದ ಪುರಸಭಾಧ್ಯಕ್ಷ ಪದವಿಗೆ ಜನಾಬ ಅಬ್ದುಲ್‌ರಜಾಕ್ ಸಾಹೇಬರು 4-1-47 ನೆಯ ಪುರಸಭೆಯಲ್ಲಿ ಆರಿಸಲ್ಪಟ್ಟರು. ಜಲೀಲ್ ಸಾಹೇಬರು ಅಧ್ಯಕ್ಷಪದವಿಯನ್ನುವಹಿಸಿ-ಈ ಆಯ್ಕೆಯನ್ನುನಡೆಸಿ ಉಪಾಧ್ಯಾಕ್ಷರಾದವರು ಅಧ್ಯಕ್ಷಪದವಿಗೆ ನಿಲ್ಲುವಾರದೆಂಬ ಆಕ್ಷೇಪಣೆಯನ್ನು ನಿಯಮಬಾಹ್ಯಮಾಡಿದರು. 8 ಜನ ಕೌನ್ಸಿಲರು ಈರೂಲಿಂಗ್ ಕೊಟ್ಟಕಾರಣ ಹೊರಬಿದ್ದರು.

ಇಂಡೋ—ಚೀನಾದಲ್ಲಿ ಹೋರಾಟ

ಸಾಮ್ರಾಜ್ಯವಾದೀ ಫ್ರಾನ್ಸ ದೇಶವು ಬಹಳ ದಿನದ ಗಡಿಯಲ್ಲಿರುವ ಇಂಡೋ ಚೀನಾದ ಮೇಲೆ ತನ್ನ ಹಿಡಿತವನ್ನು ಬಲಪಡಿಸಿಕೊಳ್ಳಲು ಅಲ್ಲಿಯ ಪ್ರಜೆಗಳ ಮೇಲೆ ಯುದ್ಧವನ್ನೇ ಹೂಡಿದೆ. ಪ್ರಜೆಗಳ ಸ್ವಾತಂತ್ರ್ಯ ಹೋರಾಟದ ವಿಷಯಕ್ಕೆ ತಮಗೆ ಸಂಪೂರ್ಣ ಸಹಾನುಭೂತಿಯಿರುವದೆಂದೂ, ಏಟನಾಮು ಪ್ರಜಾರಾಜ್ಯಕ್ಕೆ ಬೆಂಬಲ ಕೊಡಲು ಇಡೀ ಬರ್ಮಾದೇಶವೇ ಸಿದ್ಧವಿರುವದೆಂದೂ, ಅಲ್ಲಿಯ ನಡುಗಾಲ ಮಂತ್ರಿಗಳಾದ ಯು ಸಾರವರು ಹೇಳಿರುವರು.

A. I. W. C. Grand Fete.

ಅಖಿಲಭಾರತ ಮಹಿಳಾಶಾಖೆ

ಬಳ್ಳಾರಿಯ ಮಹೋತ್ಸವ

5-1-47 ನೆಯ ತಾ. ಮುನಿಸಿಪಲ್ ಹೈಸ್ಕೂಲ್‌ದಲ್ಲಿ ಕಲೆಕ್ಟರವರಾದ ಶ್ರೀ ಅನಂತರಾಮನ್‌ರವರ ಅಧ್ಯಕ್ಷತೆಯಲ್ಲಿ ಶ್ರೀಮತಿ ವ್ಯಾಕ್‌ರವರು ಇದರ ಪ್ರಾರಂಭೋತ್ಸವ ನಡೆಸಿದರು. ಇಬ್ಬರೂ ಶುಭಾಶಯಗಳಿಂದ ಪ್ರೌಢ ವಿದ್ಯಾಭ್ಯಾಸದ ಕಾರ್ಯಕ್ರಮವನ್ನು ಕೈಗೊಂಡ ಮಹಿಳಾಸಭೆಯವರಿಗೆ ಯಶಸ್ಸನ್ನು ಕೋರಿದರು. ಅಧ್ಯಕ್ಷಿಯರಾದ ಶ್ರೀಮತಿರಾಯರ್ ಕಾರ್ಯದರ್ಶಿಗಳಾದ ಶ್ರೀಮತಿ ಮುತ್ತಣ್ಣನವರು ಸಂಘದ ಕಾರ್ಯಪ್ರಣಾಲಿಯನ್ನು ಸಂಕ್ಷಿಪ್ತವಾಗಿ ವಿವರಿಸಿದರು. ಈ ಮಹೋತ್ಸವದಲ್ಲಿ ಅನೇಕ ಮನರಂಜಕ ಕಾರ್ಯಕ್ರಮಗಳಿದ್ದು- ನಗರದ ಸ್ತ್ರೀಪುರುಷರನ್ನಾಕರ್ಷಿಸಿದವು. ಪ್ರದರ್ಶನ- ವ್ಯಾವಸಾಯಿಕ ವಿದ್ಯಾಭ್ಯಾಸ ಸಂಬಂಧೀ ಸಾಹಿತ್ಯ -ನಕ್ಷೆ ಸ್ತ್ರೀಯರಿಂದ ತಯಾರಿಸಲ್ಪಟ್ಟ ವಸ್ತುಗಳು ಸಂಭ್ರಮಂಗಣದಲ್ಲಿ ಏರ್ಪಟ್ಟಿದ್ದವು. ಬಾಲಸ ಹರಿಕಥೆ ಜನಾಕರ್ಷಿಸಿತ್ತು.

The Rayalaseema Bank Limited, Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:— ಬಳ್ಳಾರಿ ಜಿಲ್ಲಾ:- ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ, ಬಳ್ಳಾರಿ, ಹಡಗಲಿ, ಕೂಡ್ಲಿಗಿ, ಆದವಾನಿ. **ಅನಂತಪುರ:-** ಅನಂತಪುರ, ಬೆಳಗುಪ್ಪ, ಧರ್ಮಾವರಂ, ಕದಿರಿ, ಪಾಮಿಡಿ, ತಿಮ್ಮನಚೆರ್ಲ, ಉರವಕೊಂಡ, ಹಿಂದೂಪುರ, ಗುತ್ತಿ. **ಕರ್ನೂಲು:-** ಕರ್ನೂಲು ಪತ್ತಿಕೊಂಡ.
ಕಡಪ:- ರಾಜಂಪೇಟೆ, ಕಡಪ. **ಚಿತ್ತೂರು:-** ಚಿತ್ತೂರು, ಮದನಪಲ್ಲಿ, ತಿರುಪತಿ, ನಾಗರಿ, ವಾಯಲ್ಪಾಡು.

ಫಿಕ್ಸೆಡ್ ಡಿಪಾಜಿಟ್‌ನ ಬಡ್ಡೀದರ:— 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2ವರ್ಷಗಳಿಗೆ 3½%.
ಕರೆಂಟು ಅಕೌಂಟು: 1%. ಸೇವಿಂಗ್ಸ ಬ್ಯಾಂಕು: 2% ಕ್ಯಾಷ್ ಸರ್ಟಿಫಿಕೇಟುಗಳು: 3½%.
ಮಾಸಿಕ ಸ್ಪಾವಿಡೆಂಟ ಫಂಡ ಡಿಪಾಜಿಟ್:- 3%. ಬಿ. ವಿ. ಶೇಷಗಿರಿರಾವ್, ಕಾರ್ಯದರ್ಶಿ.

—ರಾಷ್ಟ್ರೀಯ ಪುಸ್ತಕಗಳು.—

—: ಕಾಂಗ್ರೆಸ್ ಸ್ವರೂಪ ದರ್ಶನ:—

ರಾಷ್ಟ್ರೀಯ ಶಿಕ್ಷಣ	0—8—0
ಅಸ್ಪೃಶ್ಯತಾ-ನಿವಾರಣೆ	0-12—0
ಪ್ರಾಂತಭಾಷೆ- ರಾಷ್ಟ್ರಭಾಷೆ	0—6—0
ಖಾದಿ	0—8—0
ಕಾಂಗ್ರೆಸ್ ಮತ್ತು ಸ್ವಯಂಸೇವಕದಳ	0-10-0
ಸತ್ಯಾಗ್ರಹ(ಇತಿಹಾಸ-ತಂತ್ರ)	3-8 -0

ವಿ. ಪಿ. ಖರ್ಚು ಬೇರೆ. ಇನ್ನು ಅನೇಕ ಪುಸ್ತಕಗಳು ಸಿಕ್ಕುತ್ತವೆ.—

ನವಭಾರತ, — ಕಾರ್ಯಾಲಯ ಬಳ್ಳಾರಿ.

ಅಂದಪಾದ ಮುದ್ರಣ ಸರಳ ಕನ್ನಡ ಭಾಷೆ.
ಶಾಲಿವಾಹನ ಶಕೆ ೧೮೬೯ ನೆಯ ಸರ್ವಜಿತು ಸಂ

ಶ್ರೀ ಕೊಟ್ಟೂರು ಗುರು
—ಬಸವೇಶ್ವರ ಪಂಚಾಂಗ—

ಶಾಸ್ತ್ರವೇತ್ತರಿಂದ ಗುಣಿಸಲ್ಪಟ್ಟು ಪರಿಶೋಧಿತವಾಗಿ ಪ್ರಕಟವಾಗಿದೆ. ಇದರ ಆದಾಯದಿಂದ ಧರ್ಮಾರ್ಥ ಜ್ಯೋತಿಷ್ಯ ಪಾಠಶಾಲೆಯು ಪೋಷಣೆಯಾಗಲಿರುವದರಿಂದ ಸರ್ವರೂ ಪ್ರೋತ್ಸಾಹಿಸಲು ಕೋರಿದೆ.

ಬೆಲೆ, ೦—೧೦—೦ ಗುರುಬಸವೇಶ್ವರ
ಧರ್ಮಾರ್ಥ ಜ್ಯೋತಿಷ್ಯ, ಪಾಠಶಾಲೆ
ಕೊಟ್ಟೂರು (ಬಳ್ಳಾರಿ ಜಿಲ್ಲಾ.)

NAVA BHARAT, BELLARY. Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು.	Subscription Rates
ವರ್ಷಕ್ಕೆ 5-0-0	One Year 5—0—0
೬ ತಿಂಗಳಿಗೆ 3-0-0	Six months 3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To
SRI.....
.....
.....

Printed at Krishna Press Bellary QH No. B 17 FOR (Q.H. No. B-5.)
Edited & Published by T. B. KESHAVARAO

ಜೈಹಿಂದ್ Reg. No.M. 4748

ನವಚೈತನ್ಯ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಕಟ್ಟು ೬ ಸಂಚಿಕೆ ೩ | ಬಳ್ಳಾರಿ ಜನವರಿ ೨೦ ಸೋಮವಾರ ೧೯೪೨ | ಸಂಪಾದಕ ಮತ್ತು ಪ್ರಕಾಶಕ ಟಿ. ಬಿ ಕೇಶವರಾವು.

ಪೂರ್ವ ಬಂಗಾಳದಲ್ಲಿ
ಮಹಾತ್ಮರ ಸಂಚಾರ ಕಾರ್ಯಕ್ರಮ

ಜನವರಿ ೮ ನೆಯ ದಿನಾಂಕ ಫತಹಪುರದಲ್ಲಿ ಮಹಾತ್ಮರು ೮೦ ವರ್ಷವಯಸ್ಸಿನ ವೃದ್ಧಗೃಹಸ್ಥ ನಾದ ಮೌಲ್ವಿ ಇಬ್ರಾಹಿಮ್‌ರ ಅತಿಥಿಗಳಾಗಿದ್ದರು. ಅಲ್ಲಿ ಮುಸಲ್ಮಾನರು ಬೆಹಳ ಆದರದಿಂದ ಬೀಳ್ಕೊಟ್ಟುದನ್ನು ಗಾಂಧೀಜಿಯವರು ಹೊಗಳಿದರು ೯ ನೆಯ ದತ್ತಪಾರಪಾರಕ್ಕೆ ಆಗಮಿಸಿ ಅಡಿಕೆ ತೆಂಗುಗಳಿಂದ ನಿಬಿಡವಾದ ತೋಟದ ಗುಡಿಸಲಿನಲ್ಲಿ ವಾಸಿಸಿದರು ಖಾದರಕ್ಷೆಗಳನ್ನೂ ಅವರು ಧರಿಸದಿರುವ ಕಾರಣ ಅವರವಾದಗಳಿಂದ ರಕ್ತ ಸುರಿಯುತ್ತಲಿದೆ. ಅವರ ಕಾಲುಗಳಿಗೆ ಬ್ಯಾಂಡೇಜ್ ಕಟ್ಟಲಾಗಿದೆ. ಹೋದೆಡೆಯಲ್ಲೆಲ್ಲಾ ಪ್ರಾರ್ಥನಾ ಸಭೆಗಳಲ್ಲಿ ಹಿಂದೂ-ಮುಸಲ್ಮಾನ ಐಕ್ಯಮತ್ಯಕ್ಕಾಗಿ ಕೋರುತ್ತಿರುವರು. ಅವರ ಸಂಚಾರ ಕಾರ್ಯಕ್ರಮವು ಹೀಗಿದೆ

ಜನೇವರಿ ೧೦ ಜಗದೂರಿಗೆ ನೇ ದಿನಾಂಕ ಲಮೇಚಾರ, ೧೨ ನೇ ದಿನಾಂಕ ಕರಪಾರಾ, ೧೩ ನೇ ದಿನಾಂಕ ಶಹಪುರ, ೧೪ ನೇ ದಿನಾಂಕ ಖಾತಿಲಪುರ ೧೫ ನೇ ದಿನಾಂಕ ನಾರಾಯಣಪುರ, ೧೬ ನೇ ದಿನಾಂಕ ಹಸಫರಿಯಾ; ೧೭ ನೇ ದಿನಾಂಕ ಜಾರಕೋಟಿ ೧೮ ನೇ ದಿನಾಂಕ ಅತಾಖೋರಾ; ದಿನಾಂಕ ೧೯ ಶಿರಂಪಿ, ದಿನಾಂಕ ೨೦ ಕೇಥೂರಿ; ದಿನಾಂಕ ೨೧ ಪಾನಿಯಾಲಾ, ದಿನಾಂಕ ೨೨ ದಾಕಾ; ದಿನಾಂಕ ೨೩ ಮುರಾಯಿಮು, ದಿನಾಂಕ ೨೪ ಹಸನಾಬಾದ (ತಿಪ್ಪೇರಾ ಜಿಲ್ಲೆ) ದಿನಾಂಕ ೨೫ ಮಹಮ್ಮದಪುರ (ನೌಖಾಲಿ ಜಿಲ್ಲೆ) ದಿನಾಂಕ ೨೬ ಪಲ್ಲಾ, ದಿನಾಂಕ ೨೭ ಬಾಗಲ ಕೋಟೆ, ದಿನಾಕ ೨೮ ಫಟಿಕೀ ಪಂಚಗಾವ ದಿನಾಂಕ ೨೯ ಫೋಆರ, ದಿನಾಂಕ ೩೦ ಜೋಯಾಗ, ದಿನಾಂಕ ೩೧ ಅಮಕಿ; ಫೆಬ್ರುವರಿ ೧ ನವೋರಿ.

ಮಾರ್ಗದಲ್ಲಿ ಹತ್ತುವ ಚಿಕ್ಕಚಿಕ್ಕ ಕೆಲವು ಹಳ್ಳಿಗಳಿಗೆ ಸಂದರ್ಶನ ಕೊಡಲು ಆಗದಿರಬಹುದು ಎಂದು ತಿಳಿಯುತ್ತದೆ.

ಭಾರತದ ರಾಜಕೀಯ.

ಕಾಂಗ್ರೆಸ್ ಸಮಿತಿಯಾದೀ ಪಕ್ಷದ ಮುಖಂಡ ರಾದ ಶ್ರೀ ಜಯಪ್ರಕಾಶ ನಾರಾಯಣರ ಭಾಷಣಗಳನ್ನು ಪ್ರಸಿದ್ಧಿಪಡಿಸಬಾರದೆಂದು (ಅವು ಹಿಂಸಾಪ್ರಚೋದಕವಾಗಿವೆಯೆಂದು ಸರಕಾರದ ಅಭಿಪ್ರಾಯ) ಪಂಜಾಬ ಸರಕಾರದವರು ಆಜ್ಞಾಪಿಸಿದ್ದಾರೆ.

ಶ್ರೀ ವೀರಾಸ್ವಾಮಿಯವರ ರಾಜೀನಾಮೆ

ಮದ್ರಾಸ್ ಮಂತ್ರಿಗಳಲ್ಲಿ ಅರಣ್ಯಶಾಖೆಯ ಜವಾಬ್ದಾರಿಯನ್ನು ವಹಿಸಿದ ಶ್ರೀ ವೀರಾಸ್ವಾಮಿಯವರು ಅನಾರೋಗ್ಯದ ಮೂಲಕ ರಾಜೀನಾಮೆಕೊಟ್ಟಿರುವರು. ಅವರ ಸ್ಥಳಕ್ಕೆ ಬೇರೊಬ್ಬರನ್ನು ಈವಾರಾಂತ್ಯದೊಳಗಾಗಿ ನಿಯಮಿಸಲಿರುವರೆಂದು ಮುಖ್ಯಮಂತ್ರಿಗಳಾದ ಶ್ರೀ ವೀರಾಸ್ವಾಮಿಯವರು ತಿಳಿಸುತ್ತಾರೆ.

ಮದ್ರಾಸ್ ಪ್ರಾಂತೀಯ

ಲೇಬರ್ ಶಾಲೋಪಾಧ್ಯಾಯರ ಸಭೆ

ವೆಲ್ಲೂರಲ್ಲಿ ಶ್ರೀ ವಿ. ರಾಘವಯನವರ ಅಧ್ಯಕ್ಷತೆಯಲ್ಲಿ 19—1—47 ಪ್ರಾತಃಕಾಲ ಸೇರಲಿದೆ. ವಿದ್ಯಾಖಾತೆಯ ಮಂತ್ರಿಗಳಾದ ಶ್ರೀ ಟಿ. ಯಸ್. ಅವಿನಾಶಲಿಂಗಂರವರು ಪ್ರಾರಂಭೋತ್ಸವ ಮಾಡಲಿದ್ದಾರೆ.

ಕನ್ನಡಕ್ಕೆ—ಪ್ರೋತ್ಸಾಹ

ಹೈದರಾಬಾದ ಸಂಸ್ಥಾನದ ಆಡಳಿತ ಸಮಿತಿಯ ಅಧ್ಯಕ್ಷರಾದ ಸರ್ ವಿಜರ್ಜ ಇಸ್ಮಾಯಿಲ್‌ರವರು ರಾಯಚೂರು ಕರ್ನಾಟಕ ತರುಣ ಸಂಘದ ಅಡಿಗಲ್ಲು ಕೂಡಿಸುವ ಸಮಾರಂಭದಲ್ಲಿ ಅರ್ಪಿಸಿದ ಮಾನಪತ್ರಕ್ಕೆ ಉತ್ತರರೂಪವಾಗಿ ಹೇಳುತ್ತಾ ಪ್ರಜರ ಮಾತೃಭಾಷೆಯನ್ನು ಸರಕಾರವು ಮರೆಯುವಂತಿಲ್ಲವೆಂದೂ, ಕನ್ನಡಕ್ಕೂ ಕೂಡ ಪಾಠಶಾಲೆಯನ್ನು ಕೊಡಲು ಸರಕಾರವು ಸಿದ್ಧವಿರುವನೆಂದೂ ಆಶ್ವಾಸನವಿತ್ತರು

ರಾಜಕೀಯ ಶಾಖೆಯೊಂದು ಬರೀ ಬಿಳಿಯರನ್ನೊಳಗೊಂಡಿದ್ದ ಕೇಂದ್ರ ಶಾಖೆಯನ್ನು ತೆಗೆಸುವಾಕುವ ಆಲೋಚನೆ ನಡೆದಿದೆ. ಗಡಿನಾಡಿನ ಅಧಿಕಾರಿಗಳಲ್ಲಿ ಬದಲಾವಣೆ ಮಾಡುವ ಸಲುವಾಗಿ ಪಂಡಿತ ಜವಹರಲಾಲರು ಗಡಿನಾಡ ಗವರ್ನರ್ ಮತ್ತು ಮುಖ್ಯಮಂತ್ರಿ ಖಾನಸಾಹೇಬರೊಡನೆ ವಿಚಾರ ವಿನಿಮಯ ಮಾಡುತ್ತಲಿರುವರು.

ಕೆಳುಪ್ಪಿ (ಕೊಡ್ಲಿಗೆ)

ಗ್ರಾಮ ರೈತರ ಸಭೆಯು ಸೇರೀ ತೀರ್ಮಾನಗಳನ್ನು ಮಾಡಿದರು. ಬೆಲ್ಲದ ನಿಯಂತ್ರಣ ಮಾಡಿದ ನಂತರ ಹಳ್ಳಿಗಳಲ್ಲಿ ಬೆಲ್ಲ ಸಿಗುವದಿಲ್ಲವಾದ್ದರಿಂದ ಬೆಲ್ಲವನ್ನು ಒದಗಿಸಬೇಕು. ಬೆಂಕಿಪೆಟ್ಟಿಗೆಗಳ ಅಭಾವ ದೂರಮಾಡಬೇಕು. ಕಾಳು ವಸೂಲಿ ಶೀಘ್ರದಲ್ಲಿ ನುಗಿಸಬೇಕು. ಬಟ್ಟೆ ಪೂರೈಕೆ ಇತ್ಯರ್ಥವಾಗಬೇಕು. ನೆಲಗಡಲೆ ಧಾರಣೆ ನಮಗೆ ಸಮೀಪನಾದ ದಾವಣಗೆರೆ (ಮೈಸೂರು) ಯಲ್ಲಿ ಹೆಚ್ಚಿದೆ. ಆ ಪ್ರಕಾರಕ್ಕೆ ಇಲ್ಲಿಯ ಧಾರಣೆ ನಿಗದಿ ಮಾಡಬೇಕು ಮೆ ಗ್ರಾಳು ನುಗ್ಗು ಇನ್ನಿತರ ಸ್ಥಳಗಳಲ್ಲಾದ ತೀರ್ಮಾನಗಳನ್ನು ಕಾರ್ಯರೂಪದಲ್ಲಿ ತರಬೇಕು.

ನಾರಾಯಣದೇವರಕೆರೆ

16ನೆಯ ದಿನಾಂಕ ಶ್ರೀ ಪಂಚವಿನಾಯಕನಸ್ವಾಮಿಯ ಅಧ್ಯಕ್ಷತೆಯಲ್ಲಿನಡೆದ ಸಾರ್ವಜನಿಕ ಸಭೆಯಲ್ಲಿ ಶ್ರೀ ಗಂಗಾಪತಿಯವರು ಶ್ರೀಜನರಾಜ ಹೆಗಡೆಯವರ ಪರಿಚಯ ಮಾಡಿಸಿದನಂತರ ಶ್ರೀಗಳಾದ ಮರಿಸ್ವಾಮಯ್ಯ ಮತ್ತು ವಕೀಲ ಶೇಷಗಿರಿಯಾಚಾರ್ಯರು ಅಂಕೆ ಸಂಖೆಗಳಿಂದ ತಿಮಲಾಪುರ ಅಣೆಕಟ್ಟಿನ ಲಾಭ, ಮೇಳಾಪುರದಿಂದಾಗುವ ನಷ್ಟಗಳನ್ನು ತಡೆಯಲು ಸಾಧ್ಯವಾದ್ರೆ ಶ್ರೀಹೆಗ್ಡೆಯವರನ್ನು ಕೋರಿದರು. ಶ್ರೀ ಹೆಗಡೆಯವರು ಕನ್ನಡನಾಡ ನಿರ್ಮಾಣವಾಗದೆ ಮುಕ್ತಿಯಿಲ್ಲ. ನೀವು ಸತ್ಯಾಗ್ರಹಮಾಡಿ ಅಣೆಕಟ್ಟಿನ ಯೋಜನೆಯನ್ನು ಬದಲಿಸಿರಿ ನಮ್ಮ ಪ್ರತಿನಿಧಿಗಳು ಅಲ್ಪ ಸಂಖ್ಯಾಕರಿರುವ ಕಾರಣ ಸಾಕಷ್ಟು ಪುಷ್ಟಿ ನೋರೆಯುವಂತಿಲ್ಲ ಎಲ್ಲರೂ ಕನ್ನಡ ಪ್ರಾಂತ ನಿರ್ಮಾಣಕ್ಕೆ ಸಹಾಯಮಾಡಿರಿ ಎಂದರು ಆಭಾರ ಮನ್ನಣೆಯ ನಂತರ ಸಭೆಯು ಮುಗಿಯಿತು.

ಕಮ್ಯೂನಿಸ್ಟ ಪಾರ್ಟಿಯ ಕಛೇರಿಗಳನ್ನು ಬೊಂಬಾಯಿ, ಕಲ್ಕತ್ತ, ದೆಲ್ಲಿ, ಕರಾಚಿಗಳಲ್ಲಿ ಶೋಧಿಸಿ ಸೈನ್ಯಸಂಬಂಧವಾಗಿ ಪ್ರಕಟವಾಗಿದ್ದ ಲೇಖನಪತ್ರಿಕೆಗಳನ್ನೂ ಇತರ ಸಾಹಿತ್ಯವನ್ನೂ ಪೋಲೀಸರೊಯ್ದರು.

ಬಳ್ಳಾರಿಯಲ್ಲಿ
ಮದ್ರಾಸ್ ಗವರ್ನರರು

೧೧-೧-೪೭ ಶನಿವಾರ:—

ಈ ಪ್ರಾತಃಕಾಲ ಗವರ್ನರರು ತಮ್ಮ ಸತೀ ಮಣಿಯೊಡನೆ ಪರಿವಾರದವರೊಂದಿಗೆ ಗುಂತಕಲ್ಲಿಂದ ಸ್ಪೆಶಲ್ ಗಾಡಿಯಲ್ಲಿ ಬಂದರು. ಸುಮಾರು ಪ್ರಾ.೮ಕ್ಕೆ ಕಲೆಕ್ಟರ್ ಅನಂತರಾಮನ್ ಡಿ. ಯಸ್. ಪಿ. ಅಬ್ದುಲ್ ರಹಿಮಾನ ಸಾಹೇಬರು ಅವರನ್ನು ಕಲೆತು ಸ್ವಾಗತಿಸಿದರು. ಪ್ರಾ. ೮ಗರಿ ವ್ಯವಸಾಯ ಕೇಂದ್ರಕ್ಕೆ ಹೋದರು. ಅಲ್ಲಿ ಸೂಪರಿಂಟಕಾದ ಶ್ರೀ ಸಿ. ಕೃಷ್ಣರಾಯರು ಸರಳ ಭಾಷೆಯುಅಲ್ಲಿ ನಡೆದ ಸಂಶೋಧನೆ, ಬೆಳೆ, ಬೀಜದ ಅಭಿವೃದ್ಧಿ, ದನಗಳ ಪೀಳಿಗೆ, ಭೂಗುಣ ಸುಮಾರು ೨ ಗಂಟೆಯವರೆವಿಗೂ ಹೇಳಿ ಎಲ್ಲಾ ಭಾಗಗಳನ್ನೂ ತೋರಿಸಿದರು. ಗವರ್ನರ ಸತಿಯವರು ವಿಕ್ಟೋರಿಯಾ ವುಮನ್ಸ ಫೋಷಾ ಆಸ್ಪತ್ರೆ ಶಿಶುಪೋಷಣ ಕೇಂದ್ರಗಳನ್ನು ಸಂದರ್ಶಿಸಿ, ಸೆಂಟಮೇರಿಯವರ ಭವ್ಯವಾದ ಆಸ್ಪತ್ರೆಯನ್ನು ಸಂದರ್ಶಿಸಿ ಎಲ್ಲಾ ಕಡೆಗೂ ಸಲಹೆ ಸೂಚನೆಗಳನ್ನಿತ್ತರು. ಸಾಯಂಕಾಲ ಪತಿ ಪತ್ನಿಯರಿಬ್ಬರೂ ಮಲೇರಿಯಾ ನಿವಾರಣಾ ಕೇಂದ್ರ ಜೂನಿಯರ್ ಸರ್ಟಿಫೈಡ್ ಶಾಲೆಯನ್ನು ಸಂದರ್ಶಿಸಿ ಎಲ್ಲಾ ವಿಷಯಗಳನ್ನು ಅರಿತರು.

೧೨-೧-೪೭ ಭಾನುವಾರ:—

ಕಂಪ್ಲಿಯಲ್ಲಿ ಪ್ರಸೂತಿಕಾ ಗೃಹದ ಶಂಕುಸ್ಥಾಪನೆ.

ಗವರ್ನರರು ಕುಡತಿನಿಗೆ ಹೋಗಿ ಅಲ್ಲಿ ಕಂಬಳಿ ನೆಯ್ಗೆಯ ಸಮಸ್ತ ವಿವರಗಳನ್ನು ಸ್ವತಃ ನುಗ್ಗಗಳಿರುವ ಕೇಂದ್ರಗಳಿಗೆ ಹೋಗಿ ಪರೀಕ್ಷಿಸಿ ಅರಿತರು. ಗವರ್ನರ ಸತಿಯವರು ಕಂಪ್ಲಿಯಲ್ಲಿ ಪ್ರಸೂತಿಕಾ ಗೃಹದ ಶಂಕುಸ್ಥಾಪನೆ ನೆರವೇರಿಸುತ್ತಾ ಇಂಥಾ ಕಾರ್ಯಗಳಿಗೆ ಹೆಚ್ಚು ಹೆಚ್ಚಾಗಿ ಜನತೆಯಿಂದ ಪುಷ್ಟಿ ದೊರೆಯಬೇಕೆಂದು ಆಶಿಸಿದರು. ಪಂಚಾಯ್ತು ಬೋರ್ಡ್ ಅಧ್ಯಕ್ಷರಾದ ಶ್ರೀ ಜಿ. ವೆಂಕೋಬರಾಯುಡು ಒಂದು ಮಾನಪತ್ರವನ್ನೋದಿ ಕಂಪ್ಲಿಯ ಪುರಜನರಿಂದ ವಿದ್ಯಾ ವೈದ್ಯಕೀಯ ಕಾರ್ಯಗಳಿಗಾಗಿ ದೊರೆತ ದ್ರವ್ಯ ಸಹಾಯ ಪ್ರೋತ್ಸಾಹದ ವಿವರಗಳನ್ನು ಕೊಟ್ಟು ಗವರ್ನರ ಸತಿಯನ್ನು ಅಭಿನಂದಿಸಿದರು. ಶೀಟ್ ಮೋತೀಲಾಲರು ತಮ್ಮ ಪಿತೃಗಳ ಸ್ಮರಣಾರ್ಥವಾಗಿ ಕಟ್ಟಿಸುತ್ತಲಿರುವ (ಸುಮಾರು ೨೫ ಸಾವಿರ ರೂ. ಖರ್ಚಿನಿಂದ) ಹೈಸ್ಕೂಲ್ ಕಟ್ಟಡದ ಬಳಿ ಗವರ್ನರ ಸತೀಮಣಿಯವರಿಗೆ ಹಾರವನ್ನು ಸಮರ್ಪಿಸಲಾಯಿತು. ದಾರಿಯಲ್ಲಿ ದೇವಲಾಪುರ ಗ್ರಾಮವನ್ನು ಸಂದರ್ಶಿಸಿ ಅನೇಕ ಮನೆಗಳಲ್ಲಿ ಹೊಕ್ಕು ನೈತರ ಕಷ್ಟ ಗಳನ್ನರಿತು, ಜಿಲ್ಲಾ ಬೋರ್ಡು ಶಾಲೆಯ ಕ್ಷೀಣಸ್ಥಿತಿಯನ್ನು ನೋಡಿ ವಿಷಾದವನ್ನು ವ್ಯಕ್ತಪಡಿಸಿದರು.

ಸಾಯಂಕಾಲ ಇಬ್ಬರೂ ಕೂಡಿ ಮ್ಯೂಕ್ ಸ್ವೀಡಿಯಂ ಸಭೆಗೆ ಒಂದು ಪುರಪಾಲಕ ಸಂಘದ ಮಾನಪತ್ರವನ್ನು ಸ್ವೀಕರಿಸಿದರು.

"ನೀವು ನೀರು, ದೀಪ, ಒಳ್ಳೆಯರಸ್ತೆ, ಶಾಲೆಯ ಕಟ್ಟಡಗಳ ಕೊರತೆಯನ್ನು ಸೂಚಿಸಿರುವಿರಿ. ಇದು ನನಗೆ ಸಂಬಂಧಿಸಿದ್ದಲ್ಲ. ನಿಮ್ಮಿಂದ ಆರಿಸಲ್ಪಟ್ಟ ಪ್ರಜಾಪ್ರತಿನಿಧಿಗಳ ಮಂತ್ರಿವರ್ಗವು ಈಗ ಅಸ್ತಿತ್ವದಲ್ಲಿದೆ. ಅವರು ನನ್ನೊಡನೆ ಬಹಳ ಸ್ನೇಹದಿಂದಿರುವರು ಅವರಿಂದ ಈಕೆಲಸಗಳಾಗುವದೆಂಬುದರಲ್ಲಿ ಸಂಶಯವೇ ಇಲ್ಲ. ನಾನು ಎಲ್ಲೇಹೋಗಲಿ, ಎಲ್ಲರೂ ಈ ಪ್ರಕಾರವಾಗಿ ಹಣಕೇಳಲು ಪ್ರಾರಂಭಿಸುವರು. ಎಲ್ಲಾ ಲೆಕ್ಕ ಹಾಕಿದರೆ ೧೦೦ ಕೋಟಿ ರೂಗಳಾಗಲಿ ಸಾಲಲಿಕ್ಕಿಲ್ಲ. ಆದಾಯಕ್ಕನುಸಾರವಾಗಿ ಖರ್ಚು ಮಾಡಬೇಕಾಗುತ್ತದೆ ಆದರೂ ನಿಮ್ಮ ಬೇಡಿಕೆಗಳನ್ನು ಒಂದೇ ಸಮನಾಗಿ ಮಂಡಿಸುತ್ತಲೇ ಇದ್ದರೆ ಒಂದು ಕಾಲಕ್ಕಾದರೂ ನಿಮ್ಮ ಕೋರಿಕೆಗಳು ಈಡೇರುತ್ತವೆ. ಇಂಥಾ ಆಂದೋಳನದಿಂದ ಕೊನೆಯಲ್ಲಿ ಫಲಿತಾಂಶವಾಗುವುದು." ಶ್ರೀ ಎಂ. ಜಿ. ವೆಂಕಟೇಶಯ್ಯನವರು ಕನ್ನಡದಲ್ಲಿಯೂ, ಶ್ರೀ ಥಾಯಪ್ಪನವರು ತೆಲುಗಿನಲ್ಲಿಯೂ ಬಾಷಿತ್ ಸಾಹೇಬರು ಉರ್ದುವಿನಲ್ಲಿಯೂ ಭಾಷಾಂತರ ಮಾಡಿದರು. ಶ್ರೀ ಸುಂದರವರದನ್‌ರವರು ಎಲ್ಲರನ್ನೂ ವಂದಿಸಿದರು.

೧೫-೧-೪೭ ಸೋಮವಾರ:—

ಶ್ರೀಮತಿ ಗುಡದೂರು ಲಕ್ಷ್ಮೀದೇವಮ್ಮ ಪ್ರಸೂತಿಕಾಗೃಹದ ಶಂಕುಸ್ಥಾಪನೆ.

ಗವರ್ನರಸಾಹೇಬರು ಪ್ರಾತಃಕಾಲ ಸಿರುಗುಪ್ಪೆ ವ್ಯವಸಾಯ ಕೇಂದ್ರವನ್ನು ಸಂದರ್ಶಿಸಿ, ಮುಧ್ಯಾನ್ಹ ತ್ಪರ ಕ್ರಿಕೆಟ್ ಮೈದಾನದಲ್ಲಿ ಸ್ಪೇಡಿಯಿಂದ ಶಂಕು ಸ್ಥಾಪನೆಮಾಡಿದರು. ಜಿಲ್ಲಾ ಜೆಡ್ಜರು ಅದರ ಸಂಕ್ಷಿಪ್ತ ಚರಿತ್ರೆಯನ್ನು ವಿವರಿಸಿದರು. ಸಾಯಂಕಾಲ ಆರಿ ವೂರ ಜೈಲನ್ನು ನೋಡಿ ಸೂಪರೆಂಟರಿಗೆ ಕಕ್ಷಾಸಾಜನ ಗಳನ್ನು ಕೊಟ್ಟರು ಶ್ರೀಮತಿಯವರು ಪ್ರಾತಃಕಾಲ ಕಾಲುಬಜಾರದಲ್ಲಿನ ಶಿಶುಪೋಷಣ ಕೇಂದ್ರಕ್ಕೆ ಭೇಟ್ಟಿ ಕೊಟ್ಟು ದೊಡ್ಡಆಸ್ಪತ್ರೆಯ ಆವರಣದಲ್ಲಿ ಪ್ರಸೂತಿಕಾ ಗೃಹದ ಶಂಕುಸ್ಥಾಪನೆ ಮಾಡಲು ಬಂದರು ಇದಕ್ಕಾಗಿ ಶ್ರೀ ಗುಡದೂರು ತಿಮ್ಮಪ್ಪನವರು, ತಮ್ಮ ಪತ್ನಿಯಾದ ಶ್ರೀಮತಿ ಲಕ್ಷ್ಮೀದೇವಮ್ಮನವರ ಹೆಸರಿನಲ್ಲಿ ಖಿನ್ನಾವಿರ ರೂಗಳವರೆವಿಗೂ ಖರ್ಚುಮಾಡಿ ಒಂದು ಕಟ್ಟಡ ಮತ್ತು ಕಕ್ಕೂಲುಪಕರಣಗಳನ್ನು ದಾನಮಾಡಲು ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿ ಗವರ್ನರ ಪತ್ನಿಯವರನ್ನು ಶಂಕುಸ್ಥಾಪನೆ ಮಾಡಲೊಪ್ಪಿಸ್ವಕ್ಕಾಗಿ ವಂದಿಸಿದರು. ಇಂಥಾಕಾರ್ಯಗಳಿಗೆ ದಾತೃಗಳು ಮುಂದೆಬರಬೇಕೆಂದು ಗವರ್ನರ ಪತ್ನಿಯರು ಆಶಿಸಿದರು. D. M. O. ರು ವಂದನಾರ್ಪಣೆ ಮಾಡಿದರು. ಕಾನ್ವೆಂಟ್, ಸೆಂಟ್ ಜೋಸಫ್ಸಗರ್ಲ್ಸ್ ಸ್ಕೂಲ್, ಸಾಯಂಕಾಲ ಲೇಡೀ ವ್ ಕ್ಲಬ್‌ಗೆ ಭೇಟಿ ಕೊಟ್ಟರು.

೧೬-೧-೪೭ ಮಂಗಳವಾರ:—

ಸೆಂಟ್ರಲ್ ಕೋ ಆಪರೇಟಿವ್ ಬ್ಯಾಂಕ್ ಕಟ್ಟಿಸಿದ ಶಂಕುಸ್ಥಾಪನೆಯು ಈವ್ಯಾತಃಕಾಲ ನೆರವೇರಿತು ಫಂಸಿಯಸ್ನೊಂದಿಗೆ ಮುಧ್ಯಾನ್ಹದ ಸಕಿ ಪತಿಯವರು ಬ್ಬರೂ ತುಂಗಭದ್ರಾಯೋಜನೆಯ ಭಾಗಕ್ಕೆ ಭೇಟಿ ಕೊಟ್ಟು ಚೀಫ್ ಎಂಜಿನಿಯರ್ ಗೋವಿಂದರಾಜ ಯ್ಯಂಗಾರ್‌ರವರಿಂದ ಎಲ್ಲಾ ವಿವರಗಳನ್ನೂ ಅರಿತರು ಸಚಿವರು ಸರ್ಕಾರದ ಆಸ್ಪತ್ರೆಯ ಆವರಣದಲ್ಲಿ ಜೊನವಾರ್ಡಿನ ಅವರಣೋತ್ಸವವನ್ನು ಮಾಡಿದರು. ರಾವಬಹದೂರ ಶ್ರೀ ವೈ. ಮಹಾಬಲೇಶ್ವರಪ್ಪನವರು ಒಂದು ಚಿಕ್ಕ ಮೂನಪಕ್ಕವನ್ನೋದಿ ರಿಡ್ಡಾಕ್ಸಾನ್ ಚಟು ವಟಿಕೆಗಳನ್ನು ವಿವೇದಿಸಿದರು.

ಲಿಂಗಾರೆಡ್ಡಿ—ಗವರ್ನರರೆ ಸಂಭಾಷಣೆ

ರಾಯಲಸೀಮ ಮಹಾಸಭೆ ಕಾರ್ಯದರ್ಶಿಗ ಳಾದ ಶ್ರೀ ಲಿಂಗಾರೆಡ್ಡಿಯವರು ಗವರ್ನರರೊಡನೆ ಸಂಭಾಷಿಸಿ ಈ ಕೆಳಗಿನಂಶಗಳನ್ನು, ಹಿಂದುಳಿದ ಈ ಜಿಲ್ಲೆಗಳ ಆರ್ಥಿಕಾಭಿವೃದ್ಧಿಯನ್ನು ಸಾಧಿಸಲು ಗವರ್ನರನ್ನು ಕೋರಿದರು—

ರಾಯಲಸೀಮೆ ಜಿಲ್ಲೆಗಳಲ್ಲಿ ಮೆಡಿಕಲ್ ಇಂಜಿನೀರಿಂಗ್ ಮತ್ತು ಸಾಕಷ್ಟು ಫಸ್ಟ್‌ಗ್ರೇಡ್ ಕಾಲೇಜುಗಳನ್ನು ತೆರೆಯಬೇಕು. ತುಂಗಭದ್ರಾಯೋಜನೆಯ ಪ್ಯಾಪೆಲೆಲ್ ಭಾನಲ್ ಕಾರ್ಯನೆರವೇರಿಸುವಂತಾಗಬೇಕು. ಈ ಜಿಲ್ಲೆಗಳ ಆಹಾರ ಪರಿಸ್ಥಿತಿಯನ್ನು ಸುಧಾರಿಸಲು ಸರ್ಕಾರವು ಮುಂದಿಟ್ಟಿರುವ ೬ೀವಾವರಿ ಕೆಲಸಗಳನ್ನು ಆರಂಭಿಸಿ ಮುಗಿಸಬೇಕು. ರಾಯದುರ್ಗ-ಕಲ್ಯಾಣದುರ್ಗದ ರೈಲ್ವೆ ಬೇಡಿಕೆಗಳನ್ನು ಮುಂದಿಡುತ್ತಾ-ಫ್ಲೆವನಸಿಪ್ಪಾ ಪ್ರಾಜೆಕ್ಟಿನಿಂದ ೫೦,೦೦೦ ಎಕರೆ ನೀರಾವರಿಯಾಗಬೇಕೆಂಬುದನ್ನು ಸೂಚಿಸಿ-ಈ ವರ್ಷದ ಅಂದಾಜಾಪಟ್ಟಿಯಲ್ಲಿ ಅದನ್ನು ಸೇರಿಸಬೇಕೆಂದರು. ಈ ಜಿಲ್ಲೆಗಳಲ್ಲಿನ ಪ್ರಾಥಮಿಕ ಶಿಕ್ಷಣ ಸರ್ಕಾರದ ವಕ್ರದೃಷ್ಟಿಗಾಗಿ ರೆಡ್ಡಿಯವರು ವಿಷಾದವನ್ನು ಸೂಚಿಸಿ, ಇತರ ಜಿಲ್ಲೆಗಳ ಬಾಲಕರಂತೆ ನಮ್ಮವರಿಗೆ ಕಾಲೇಜುಗಳಲ್ಲೂ ಸ್ಥಳ ಮೀಸಲು ಇರಿಸಿಲ್ಲವೆಂದರು. ಈ ಗಿರುವ ಇಂಡಸ್ಟ್ರಿಯಲ್ ಶಾಲೆಯನ್ನು ವಿಸ್ತರಿಸಿ ಆಟೋಮೊಬೈಲ್ ಎಲೆಕ್ಟ್ರಿಕ್ ಕಾಮೆಗಳನ್ನು ತೆರೆಯಬೇಕೆಂದೂ ಕೈದಿಗಳಿಗಾಗಿಟ್ಟಿರುವ ಕೃಷಿತೋಗಾಲಯವನ್ನು ಸಾರ್ವಜನಿಕರ ಅನುಕೂಲಕ್ಕೂ ಇಡಬೇಕೆಂದು ಸೂಚಿಸಿದರು.

ಸುಹಾತ್ಕರ ಒಂದು ಪತ್ರ

ರಾಜಕೋಟದ ಶ್ರೀ ನಾರಾಯಣದಾಸ ಗಾಂಧಿ ಯವರಿಗೆ ಗಾಂಧೀಜಿಯವರು ಹೀಗೆ ಬರೆದಿದ್ದಾರೆ–

"ನಾನು ನನ್ನ ನಿತ್ಯದ ಅಹಾರವನ್ನು ಸೇವಿ ಸಲು ಪ್ರಾರಂಭಿಸಿರುವದರಿಂದ ಚಿಂತೆಗೆ ಎಡೆಯಿಲ್ಲ. ಮಾನವನು ವಿಚಾರಮಯ ಜೀವನವನ್ನು ನಡೆಸುತ್ತಿದ್ದಾಗ ನಿಜವಾಗಿ ಹೇಳಬೇಕೆಂದರೆ ಚಿಂತೆಗೆ ಎಡೆ ಇರುವದೇ ಇಲ್ಲ ನನ್ನ ನಿತ್ಯದ ಕಾರ್ಯವು ನನ್ನ ಜೀವನದಲ್ಲಿಯೇ ಅತಿ ಜಟಿಲವೂ ಕಷ್ಟಕರವೂ ಆಗಿದೆ.

"ಕಾರಿರುಳು ಮನೆ ದೂರ ದಾರಿಹೋಕಮ್ಮ" ಎಂಬುದನ್ನು ನಾನೀಗ ಸಂಪೂರ್ಣ ಸತ್ಯದ ಅನುಭವದಿಂದ ಹಾಡಬಲ್ಲೆ.

ಇಂಥ ಕಾರ್ಯಕ್ಷೇತ್ರವನ್ನು ನಾನು ನನ್ನ ಜೀವನದಲ್ಲಿ ಎಂದಿಗೂ ಕಂಡಿರಲಿಲ್ಲ. ಶಾಸ್ತ್ರಿಯು ಸುದೀರ್ಘ ವಾದಂತೆ ತೋರುತ್ತದೆ. ನಾನು ನಿರಾಶೆ ಹೊಂದಿಲ್ಲ, ದಿಕ್ಕೆಟ್ಟಿಲ್ಲವೆಂಬುದೊಂದೆ ನನಗೆ ಸಮಾಧಾನ, ಬೇಕಾದುದನ್ನೆಲ್ಲವನ್ನು ನಾನು ಸಿದ್ಧನಾಗಿದ್ದೇನೆ. "ಮಾಡು ಇಲ್ಲವೆ ಮಡಿ" ಎಂಬುವರ ಪರೀಕ್ಷೆ ಇಲ್ಲಿ ನಡೆಯಬೇಕಾಗಿದೆ. ಇಲ್ಲ ಮಾತು ಎಂಬುದಕ್ಕೆ ಹಿಂದು ಗಳೂ ಮುಸ್ಲಿಂರೂ ಸೌಹಾರ್ದದಿಂದ ಶಾಂತಿಯ ಬಾಳಲು ಕಲಿಯಬೇಕು ಎಂಬ ಅರ್ಥ. ಇಲ್ಲದಿದ್ದರೆ ನಾನು ಈ ಪ್ರಯತ್ನದಲ್ಲಿ ಮಡಿಯಬೇಕು ಇದು ನಿಜವಾಗಿಯೂ ಕಠಿನ ಕೆಲಸ ದೇವರ ಇಚ್ಛೆಯಿದ್ದಂತಾಗಲಿ

ಈ ಪವಿತ್ರ ಕಾರ್ಯದಲ್ಲಿ ನನ್ನ ಸಂಗಡಿಗರೆಲ್ಲ ಸಂತೋಷದಿಂದ ಸಮರಸರಾಗಿದ್ದಾರೆ. ಅವರಲ್ಲಿಯಾವನೊಬ್ಬನು ತಾನು ನೋಕಂಕೆನಿಸಿದರೆ ಹಿಂದಿರುಗಲು ಸ್ವತಂತ್ರನಿದ್ದಾನೆ. ಪ್ರತಿಯೊಬ್ಬನೂ ತನ್ನ ಹಣ್ಣಿಯನ್ನು ತಾನೇ ಅರಿಸಿಕೊಂಡಿದ್ದಾನೆ. ಪ್ರತಿಯೊಬ್ಬನಿಗೂ ಒಬ್ಬ ಬಂಗಾಲಿ ದುಭಾಷಿ ಇದ್ದಾನೆ. ಕನೂ (ನಾರಾಯಣದಾಸರ ಮಗ) ನನ್ನು ಅವನ ಹೆಂಡತಿ ಆವಾ ಇರುವ ಹಳ್ಳಿಯನ್ನೂ ಬಿಟ್ಟು ಬೇರೊಂದು ಹಳ್ಳಿಗೆ ಕಳಿಸಲಾಗಿದೆ. ನಾನು ಇನ್ನೂ ದೂರದ ನಮ್ಮ ದಿಯಿಲ್ಲದ ಹಳ್ಳಿಯಲ್ಲಿದ್ದೇನೆ. ಪರಶುರಾಮನಿರುವ ಛಾವಣಿಯ ತೊಂಬೆಯ ಮೂಲಕ ಅವನನ್ನು ಒಬ್ಬನನ್ನೇ ಬಿಡುವದು ಅಸಾಧ್ಯವಾಗಿದೆ. ಅವ್ವನಿಂದ ಅವನು ನನ್ನ ಜೊತೆಗಿದ್ದಾನೆ ಅವನು ಶಾಂತ ಕಾರ್ಯ ಕರ್ತನಾಗಿರುವನಲ್ಲದೆ ಚತುರ ಶೀಘ್ರಲಿಪಿಕಾರನೂ ಆಗಿದ್ದಾನೆ. ಒಂಗಾಲಿ ಪ್ರಾಧ್ಯಾಪಕನೊಬ್ಬನು ನನ್ನ ಇನ್ನೊಬ್ಬ ಸಂಗಡಿಗನಾಗಿದ್ದಾನೆ. ಈ ಇಬ್ಬರೂ ನನ್ನ ಬೇಕು ಬೇಡಗಳನ್ನು ನೋಡಿಕೊಳ್ಳುತ್ತಿರುವರು. ಒಹುಶಃ ನನ್ನ ಇತರ ಸಂಗಡಿಗರೆಲ್ಲ ನನ್ನಿಂದ ಹತ್ತು ಮೈಲು ದೂರದಲ್ಲಿರುವರು. ಅವಶ್ಯವಿದ್ದಾಗ ಅವರು ಬಂದು ನನ್ನನ್ನು ಭೆಟ್ಟಿಯಾಗುವರು. ವ್ಯಾಕೇಲಾಲು ಸುಶಿಲಾ ನಾಯರ್, ಸುಶೀಲಾ ಪೈ ಇವರೆಲ್ಲ ಬೇರೆ ಬೇರೆ ಹಳ್ಳಿಗಳಲ್ಲಿದ್ದಾರೆ. ಕನೂ ನಮ್ಮ ದಿಯಿಂದಿದ್ದಾನೆ ರಾಮಧುನಿ ಸಾಗಿಸಿದ್ದಾನೆ. ಅವನು ನಿಯಮಿತ ಜೀವನ ನಡೆಸುತ್ತಾನೆ. ದೇವರು ಅವನಿಗೆ ಉತ್ತಮ ದೇಹದಾರ್ಢ್ಯವನ್ನು ದಯಪಾಲಿಸಿದ್ದಾನೆ. ಅವಾಳ, ಶಕ್ತರ ಬಾವಾರೊಡನಿದ್ದಾಳೆ. ಅವಳು ಇಲ್ಲಿಂದ ಹದಿನಾರು ಮೈಲು ದೂರದಲ್ಲಿದ್ದಾಳೆ. ಬಾವಾರು ಅವಳ ಒಗ್ಗೆ ವಿಶೇಷ ಆಸ್ಥೆ ವಹಿಸಿದ್ದಾರೆ ಅವಳು ಅವರಿಗೆ ರುಚಿಯಾದ ಪದಾರ್ಥಗಳನ್ನು ಬೇಯಿಸಿ ಹಾಕುತ್ತಾಳೆ. ಬಂಗಾಲಿ ಮಹಿಳೆಯರಲ್ಲಿ ಉತ್ತಮ ಕಾರ್ಯಸಾಧಿಸಬಲ್ಲವಳಾಗಿದ್ದಾಳೆ. ನನ್ನನ್ನು ಬಿಟ್ಟು ಹೋಗುವಾಗ ಅವಳು ಒಮಳಿ ದುಃಖಿಸಿದಳು, ಆದರೆ ಅವಳ ಕರ್ತವ್ಯವೆಂಟಿದ್ದಿತು. ಅದರಿಂದ ನಾನು ಅವಳನ್ನು ನನ್ನಿಂದ ದೂರವಿಟ್ಟಿದ್ದೇನೆ. ನನಗೆ ಅವಳ ಸೇವೆಯ ಒಪ್ಪಿಸಿಕೊಳ್ಳುವ ದೂಢಿಯೆ ಆಗಿತ್ತೆಂದು ನಾನು ಒಮಿ-ಕೊಳ್ಳಬಿರೆನು. ಆದರೆ ಎರಡನೆಯವರ ಸೇವೆಯನ್ನು ಸ್ವೀಕರಿಸುವದು ಕಠೋರವ್ರತಕ್ಕೆ ಅಪಾಂಗವಾಮದ್ದು ನಾನು ಮಾಡಿದ್ದನ್ನೆಲ್ಲ ಕೇವಲ ಕರ್ತವ್ಯದೃಷ್ಟಿಯಿಂದಲೆ ಮಾಡಿರುವೆನೆಂಬುದು ನಿಮಗೆ ಈ ಕೆಯ ವಿವರದಿಂದನ್ನು ಕಂಡು ನೀವೆಲ್ಲ ಸಂತೋಷಿಸಬೇಕು. ನಾನೀಗ ಪೂರ್ಣವಾಗಿ ಒರೆದಾಯಿತು. ನೀವೆಲ್ಲ ನಿಮ್ಮ ನಿಮ್ಮ ಕಾಲ್ಗಳಲ್ಲಿ ನಿಲ್ಲುವಿರಾಗತಕ್ಕದ್ದು.

ಮದ್ರಾಸ್ ಸರ್ಕಾರದ ಜವಳಿ ಧೋರಣ.

(ಹರಿಜನ ಪತ್ರಿಕೆಯಿಂದ)

ಮದ್ರಾಸದ ಮುಖ್ಯ ಮಂತ್ರಿಗಳ, ಮದ್ರಾಸ ಸರ ಕಾರದ ಜವಳಿ ಧೋರಣೆಯ ವಿರುದ್ಧವಾಗಿ ಮದ್ರಾ ಸ 'ಹಿಂದೂ' ಪತ್ರಿಕೆಯ ಅಗ್ರಲೇಖದಿಂದ ವ್ಯಾ ಭವಾಗಿ ಇಂದಿನವರೆಗೆ ಅನೇಕ ಬಗೆಯ ಟೀಕೆ ಳು ಮಾಡಲ್ಪಟ್ಟಿವೆ. ಇದಕ್ಕೆ ಮುಖ್ಯ ಆಕ್ಷೇಪಕರು ಶಿಷ್ಟ ಹಿತಸಂಬಂಧವುಳ್ಳವರೆಂಬುದನ್ನು ಪ್ರತ್ಯೇಕ ಎಗಿ ಹೇಳಬೇಕಿಲ್ಲ. ಇದು ಸ್ವಾಭಾವಿಕವೂ ಇದೆ. ಎಮಾನ್ಯ ಪರಿಸ್ಥಿತಿಯಲ್ಲಿ ಇದು ಅಪೇಕ್ಷಣೀಯವೂ ಗಿದೆ. ಆದರೆ ಅವರು ಮುಂದೆ ಮಾಡಿಪ ವಾದ ಕಾರಣೆ ಣಾತ್ಮ ಅವಿಚಕ್ಷಣವಾಗಿದೆ. ಖಾದಿ ಯೋಜನೆಯ ಳಿಗಲಿ ಅದರ ಮು ಲ ಭೂ ತ ತತ್ವಗಳನ್ನಾಗಲಿ ಕ್ಷೇಪಿಸಲು ಯಾರೂ ಪ್ರಯತ್ನಿಸಿಲ್ಲ. ಇವೆರಡರಲ್ಲಿ ಅವರಿಗೆ ದೋಷಗಳೇನೂ ತೋರುವುದಿಲ್ಲೆಂಬುದು ಸ್ಪಷ್ಟವಾಗಿದೆ. ಅಲ್ಲದೆ ಖಾದಿಯ ಅಭಿವೃದ್ಧಿಯನ್ನೂ ಅದರ ಜತೆಯಲ್ಲಿಯೆ ಇಟ್ಟುಕೊಂಡಿರುವದರಿಂದ ಅದ ಕ್ಕೂ ಅವರ ಆಕ್ಷೇಪವಿಲ್ಲೆಂದು ತೋರುತ್ತದೆ. 'ಇದು ಶಕ್ಯವಿದೆಯೇ?' ಎಂಬುದೊಂದೇ ಪ್ರಶ್ನೆಯುಳಿದಂತಾ ಯಿತು. ಇದಕ್ಕೆ ಉತ್ತರ ಸರಳವಿದೆ. ಎರಡೂ ಮೂಲ ತಃ ಪರಸ್ಪರ ವಿರುದ್ಧವಿರುವುವು. ಮತ್ತು ಖಾದಿಯು ಗಿರಣಿಗಳೊಡನೆ ಸ್ಪರ್ಧಿಸಲಾರದು; ಅವುಗಳ ಜತೆಯ ಲ್ಲಿಯೆ ಅದು ಅಭಿವೃದ್ಧಿ ಹೊಂದಲಾರದೆಂದು ಗಾಂಧೀ ಜಿ ಆಗಾಗ ಬೇಳುತ್ತ ಬಂದಿರುವರು. ಅನುಭವದಿಂ ದಲೂ ಅದು ಸಿದ್ಧವಾಗಿದೆ. ಇಲಿ ಬೆಕ್ಕುಗಳನ್ನು ಕೂಡಿಯೆ ಸಾಕಬಹುದೆಂದೂ ನೀವು ಹೇಳಬಹುದಲ್ಲವೆ!

ಮದ್ರಾಸ ಯೋಜನೆಯ ವಿರುದ್ಧ ಎತ್ತಲ್ಪಟ್ಟ ಆಕ್ಷೇಪಗಳಲ್ಲಿ ಕೆಳಗಿನ ಮೂರು ಆ ಕ್ಷೇ ಪ ಗ ಳು ಮುಖ್ಯವಾಗಿವೆ.

೧) ಪ್ರಾಂತದಲ್ಲಿ ಬ ಟ್ಟೆ ಯ ಕೊರತೆಯಿರುವ ಸದ್ಯದ ಪರಿಸ್ಥಿತಿಯಲ್ಲಿ ಅದು ತೀರ ಅಕಾಲಿಕವಾಗಿದೆ

೨) ಇದರಿಂದ ಔದ್ಯೋಗಿಕ ಪ್ರಗತಿಗೆಲ್ಲ ತಡೆ ಯುಂಟಾಗುತ್ತದೆ ಮತ್ತು ಉಳಿದ ಎಲ್ಲ ಪ್ರಾಂತಗಳು ಭರದಿಂದ ಮುನ್ನುಗ್ಗುತಿರುವಾಗ ನಮ್ಮ ಪ್ರಾಂತ ಹಿಂದೆ ಬೀಳುತ್ತದೆ.

೩) ತನ್ನ ಅಭಿರುಚಿಗನುಸಾರವಾಗಿ ಬಟ್ಟೆ ಧರಿ ಸಿಕೊಳ್ಳುವ ಮಾನವನ ಸ್ವಾತಂತ್ರ್ಯಕ್ಕೆ ಇದರಿಂದ ಧಕ್ಕೆ ಬರುತ್ತದೆ. ಮತ್ತು ಕೆಲಸ ಮಾಡದಿರುವ ಸ್ವಾ ತಂತ್ರ್ಯಕ್ಕೂ ಧಕ್ಕೆ ಬರುತ್ತದೆ.

ಈ ಎಲ್ಲ ಆಕ್ಷೇಪಗಳನ್ನು ವಿ ಚಾ ರಿ ಸು ವಾ. ಮೊದಲನೆಯದಾಗಿ ಸದ್ಯದ ಬ ಟ್ಟೆ ಯ ಕೊರತೆಯ ಪ್ರಶ್ನೆಯನ್ನು ನಮ್ಮ ಮೇಲೆ ಹೇ ರ ಲಾ ಗಿದೆ ಈ ಕೊರತೆಗೆ ಕಾರಣವೇನು? ಯುದ್ಧ ಮೂಲಕ ಪರದೇ ಶೀ ಸರಕು ಬರುವದು ನಿಂತದ್ದರಿಂದಲ್ಲವೆ ಈ ಕೊರ ತೆಯುಂಟಾದುದು. ಮತ್ತೊಮ್ಮೆ ತಮ್ಮ ಸರಕುಗಳನ್ನು ನಮ್ಮಲ್ಲೆಲ್ಲ ಪ್ರಸಾರ ಮಾಡಿ ಬಿಡಲು ಆ ದೇಶಗಳಿ ಗೇನು ತಡ ಹತ್ತುವುದಿಲ್ಲ. ಅದೂ ಸ್ಪರ್ಧೆಯ ದರಗ ಳಿಂದ. ಇದೇ ಸಮಯದಲ್ಲಿ ನಮ್ಮ ಗಿರಣಿಗಾರರು ತಮ್ಮ ಗಿರಣಿಗಳನ್ನು ಬೆಳಿಸಿಕೊಂಡು ಇಲ್ಲವೆ ಹೊಸ ಗಿರಣಿಗಳನ್ನು ಹಾಕಿ ಅವರಿಗೆ ಮೊದಲೆ ಹೇಳಿಬಿಡ ಬೇಕೆಂದು ಬಯಸಿದ್ದಾರೆ. ಅಂದರೆ ವರಕೀಯ ಶೋ

೪ ಶೋಷಣೆಗೆ ನರ್ಗಾಯಿಸ

ಬೇಕೆಂದು ಬಯಸುತ್ತಾರೆ. ಈ ಬಗೆಯ ಸ್ಥಳಾಂತರದಿಂದ ಹಳ್ಳಿಗರಿಗೆ ಸಹಾಯವೆಂತಾಗಬಲ್ಲುದು? ತನ್ನ ದೇಶಬಾಂಧವನು ಅವನನ್ನು ಸುಲಿದರೇನು, ಪರಕೀಯನು ಸುಲಿದರೇನು? ಅವನಿಗೆ ಇಬ್ಬರ ಸುಲಿಗೆಯನ್ನು (ಅದು ಪರಕೀಯರದಿರಲಿ ಸ್ವಕೀಯರದಿರಲಿ) ತಡೆಯುವದೇ ಖಾದೀ ಯೋಜನೆಯ ಉದ್ದೇಶವಾಗಿದೆ. ಅಂದ ಬಳಿಕ ಅದಕ್ಕೆ ಸದ್ಯಕ್ಕಿಂತ ಅನುಕೂಲ ಕಾಲ ಬೇರೆ ಯಾವುದು ಬರಬಲ್ಲುದು? ಪರಕೀಯರಿಗೆ ಮತ್ತೆ ತಮ್ಮ ನಿಂದ್ಯ ವ್ಯಾಪಾರವನ್ನು ಕೈಕೊಳ್ಳಲು ಇನ್ನೂ ಬಹಳಕಾಲ ಬೇಕಾಗಬಹುದು. ಅವರಿಗೆ ಅದು ಸಾಧ್ಯವಾಗುವುದರೊಳಗಾಗಿ ನಾವು ನಮ್ಮ ಆರ್ಥಿಕ ಪರಿಸ್ಥಿತಿಯನ್ನು ಸರಿಪಡಿಸಿಕೊಳ್ಳಲು ಪ್ರಯತ್ನಿಸಬೇಕು. ಜಾಣತನದಿಂದ ಮತ್ತು ಜೆನ್ನಾಗಿ ವಿಚಾರಮಾಡಿ ಕೈಕೊಂಡ ರಾಷ್ಟ್ರರಚನೆಯ ಕಾರ್ಯದಿಂದಲೆ ಇದನ್ನು ಸಾಧಿಸಬಹುದಾಗಿದೆ. ಶೋಷಣೆಯ ಸ್ಥಳಾಂತರ ಮಾತ್ರದಿಂದ ಯಾವ ಬಗೆಯ ಸಹಾಯವೂ ಆಗದು. ಕೋಟ್ಯವಧಿ ನಿರುದ್ಯೋಗಿ ದೇಶಬಾಂಧವರ ಶ್ರಮವನ್ನು ಏಕೀಕರಿಸಿ ನಮ್ಮೀ ವಿಶಾಲ ರಾಷ್ಟ್ರನಿವಾಸಿಗಳ ಕಲ್ಯಾಣ ಕಾರ್ಯದಲ್ಲಿ ಅದನ್ನು ವೆಚ್ಚ ಮಾಡಬೇಕಾಗಿದೆ. ಈ ಪ್ರಚಂಡ ಜನಸಂಖ್ಯೆಯಲ್ಲಿ ಬಹುಸಂಖ್ಯಾಕರು ಹಿಂದುಸ್ತಾನದಲ್ಲಿಯ ೭೦ ಲಕ್ಷ ಹಳ್ಳಿಗಳಲ್ಲಿ ವಾಸಿಸುತಿರುವರು. 'ಮಾನವ ಸಮಾನತೆ' ಮತ್ತು 'ಪರಿಶ್ರಮದ ಗೌರವದ' ಪ್ರತೀಕವಾದ ಚರಕದ ಹೊರತು ಬೇರೆ ಯಾವದರಿಂದ ಗೌರವ ಮತ್ತು ಸ್ವಾಭಿಮಾನದಿಂದ ನಾವಿದನ್ನು ಸಾಧಿಸಬಲ್ಲೆವು.?

ನಮ್ಮ ಪ್ರಾಂತವಲ್ಲಿ ಬಟ್ಟೆಯೇ ಇಲ್ಲೆಂದು ಭಾವಿಸಿ ವಿವಾದ ಮಾಡಲಾಗುತ್ತದೆ. ನಮ್ಮ ಪ್ರಾಂತದಲ್ಲಿ ಇಂದಿಗೂ ನಮಗೆ ಬೇಕಾದುದಕ್ಕಿಂತ ಹೆಚ್ಚು ನೂಲು ಹೊರಡುತಿದ್ದರೂ ನಮ್ಮ ಪ್ರಾಂತದಲ್ಲಿರುವ ೫ ಲಕ್ಷ ಮಗ್ಗಗಳಿಗೆ ತಿಂಗಳಲ್ಲಿ ೨೦ ದಿನ ಕೆಲಸ ಸಿಕ್ಕುವುದಿಲ್ಲೆಂಬುದನ್ನು ನಾನು ಈ ಜನರ ಗಮನಕ್ಕೆ ತರಬಯಸುತ್ತೇನೆ. ಹೆಚ್ಚು ಕದುರುಗಳನ್ನು ಪಡೆಯುವದರಿಂದ ಇಲ್ಲವೆ ಹೆಚ್ಚು ಗಿರಣಿಗಳನ್ನು ಪ್ರಸ್ಥಾಪಿಸುವದರಿಂದ ಈ ಸಮಸ್ಯೆಯ ಪರಿಹಾರವೆಂತಾಗಬಹುದು? ಉಪವಾಸ ಬಳಲುವ ನೇಕಾರರಿಗೆ ಹೆಚ್ಚು ಕೆಲಸ ಕೊಟ್ಟು ಅದರಿಂದ ಹೆಚ್ಚು ಕೂಲಿ ಅವರಿಗೆ ನೋಡಿಯುವಂತೆ ಮಾಡಬೇಕು. ಗಿರಣಿ ನೂಲನ್ನು ಅವಲಂಬಿಸುವವರಿಗೆ ಅವರಿಗೆ ಈ ಲಾಭ ದೊರೆಯಲಾರದು. ಯಂತ್ರಗಳಿಂದ ಪ್ರಚಂಡ ಪ್ರಮಾಣದಲ್ಲಿ ನೂಲಿನ ಉತ್ಪಾದನೆಯಾಗುವದರಿಂದ ಅನೇಕರು ನಿರುದ್ಯೋಗಿಗಳಾಗಲಿಕ್ಕೆ ನಿಜವಾಗಿ ಕಾರಣವಾಗಿದೆ. ಹಳ್ಳಿಗಳಲ್ಲಿ ಹೆಚ್ಚೆಚ್ಚು ಚರಖಾಗಳನ್ನು ಸಂಸ್ಥಾಪಿಸಿ ಕಾಲಾಂತರದಲ್ಲಿ ಇದನ್ನು ಹೋಗಲಾಡಿಸಬಹುದು ಸುದೈವದಿಂದ ಉಳಿದವರಿಗಿಂತ ನಾವು ಈ ಮಾರ್ಗದಲ್ಲಿ ಬಹದೂರ ಮುಂದೆ ಹೋಗಿರುವೆವು. ನಮ್ಮೀ ಅನುಭವ ನಿರರ್ಥಕವಾಗಬಾರದು. ಪಾಶ್ಚಾತ್ಯ ನಾಗರಿಕತೆಯೆಂದು ಕರೆಸಿಕೊಳ್ಳುವ ನಾಗರಿಕತೆ ನಮ್ಮ ಮೇಲೆ ಹೆಚ್ಚುವರ್ಚಸ್ಸನ್ನು ಕೆಡುಹದಿದ್ದರೂ ನಮಗೆ ಮತ್ತೊಂದು ಅನುಕೂಲ ಪರಿಸ್ಥಿತಿಯಾಗಿದೆ. ನಮ್ಮ ಚರಖಗಳು ಹಾಳಾದ್ದರೂ ನಮ್ಮ ಮಗ್ಗಗಳು ಇನ್ನೂ ಸುಸ್ಥಿತಿಯಲ್ಲಿರವು. ನಮ್ಮಲ್ಲಿ ನೂರರಲ್ಲಿ ೯೦ ಕ್ಕಿಂತ ಹೆಚ್ಚು ಜನರು ಇನ್ನೂ ಕೈಮಗ್ಗದ ಬಟ್ಟೆಗಳನ್ನೇ ಧರಿಸುವರಲ್ಲದೆ ಧರಿಸುವದು ಒಳಿತೆಂದು ಭಾವಿಸುವರು. ಈ ರೀತಿಯಾಗಿ ನಮ್ಮ ಪ್ರಾಂತದಲ್ಲಿ ಬಟ್ಟೆಯ ಕೊರತೆಯಾಗದು. ಒಂದು ವೇಳೆ ಸ್ವಲ್ಪ ಕಡಿಮೆ ಬೀಳಬಹುದೆಂದು ಭಾವಿಸಿದರೂ ಚರಖಗಳಿಂದ ಹೆಚ್ಚು ನೂಲು ಹೊರಡುವದಕ್ಕೆ ಹೆಚ್ಚು ಪ್ರೋತ್ಸಾಹನೆ ಕೊಡಲು ಮತ್ತು ಈ ಸಂಬಂಧದ ಸಹಾಯ ಪಡೆಯಲು ನಾವು ಪ್ರಯತ್ನಿಸಬಾರದೊ? ಏನಾದರೂ ಅವಶ್ಯಕತೆಯೇ ಸಂತೋಷನೆಯ ಮೂಲವಲ್ಲವೆ?

ಅಹಿಂಸಾವಾದಿ ಹಾಗು ಎಡಪಂಥೀಯರ ಭಾವನೆಗಳನ್ನು ನೋಯಿಸ ಬಯಸದವನು ನಾನಾಗಿದ್ದರೂ ಬಟ್ಟೆಯ ಮಿತಿಮೀರಿದ ಧಾರಣೆ ಮತ್ತು ಕೊರತೆಯನ್ನು ನೋಡಿ ನಕ್ಕಶುಗಳನ್ನು ಸುರಿಸುತಿರುವ ನಮ್ಮ

ಬಂಡವಲುಗಾರ ಮಿತ್ರರನ್ನುದ್ದೇಶಿಸಿ ಈ ಮಾತು ಕೇಳಬಯಸುತ್ತೇನೆ. "ಯುದ್ಧ ಕಾಲದಲ್ಲಿ ತಮ್ಮಲ್ಲಿನ ನೂಲು ಮತ್ತು ಬಟ್ಟೆಯನ್ನು ಎಣಿಸಲಾರದಷ್ಟು ಬೆಲೆಗೆ ಮಾರಿ ಕೋಟಿಗಟ್ಟಲೆ ರೂಪಾಯಿಗಳಿಂದ ನಿಮ್ಮ ಬೊಕ್ಕಸವನ್ನು ತುಂಬಿಕೊಳ್ಳುವಾಗ ಮತ್ತು ಅದಾಯಕರ, ವಿಶೇಷ ಲಾಭಕರ ರೂಪವಾಗಿ ಸಾಮ್ರಾಜ್ಯ ಸರಕಾರದ ಬೊಕ್ಕಸವನ್ನೂ ತುಂಬುವಾಗ ನಿಮ್ಮ ಈ ದಯಾಭಾವನೆ ಎಲ್ಲಿ ಮಾಯವಾಗಿತ್ತು ?"

ಔದ್ಯೋಗಿಕ ಪ್ರಗತಿಯ ಮಾರ್ಗಕ್ಕೆ ತಡೆಯುಂಟಾಗುವದು ಮತ್ತು ನಮ್ಮ ಸ್ವಾಂತ ಹಿಂದೆ ಬೀಳುವದೆಂಬ ಎರಡನೆ ವಾದ ಸರಣಿಯ ಔಚಿತ್ಯವೇ ತಿಳಿಯದಾಗಿದೆ. ಯಾವುದೊಂದು ದೇಶದ ಪ್ರಗತಿಯು ಆ ದೇಶದಲ್ಲಿರುವ ಜವಳಿ ಗಿರಣಿಗಳನ್ನವಲಂಬಿಸಿದೆಯೊ ಇಲ್ಲವೆ ಆ ದೇಶದಲ್ಲಿಯ ಜನಸಾಮಾನ್ಯರ ಸ್ಥಾನವಾನಗಳನ್ನವಲಂಬಿಸುವದೊ ? ಆ ಪ್ರಗತಿಗೆ ಮಾನದಂಡವಾವುದು ? ಗಿರಣಿಗಳನ್ನು ಹೆಚ್ಚಿಸುವದು ಇಲ್ಲವೆ ಬಟ್ಟೆ ಅಥವಾ ನೂಲಿನ ಉತ್ಪಾದನೆಯನ್ನು ಹೇಳ್ಳಾಮಾಡುವದರಿಂದ ಕೋಟ್ಯಾವಧಿ ಜನರ ನಿರುದ್ಯೋಗತೆ ಮತ್ತು ಬಡತನ ಹಿಂಗಲಾರವು. ನಮ್ಮ ಸಮಸ್ಯೆಯ ಪರಿಹಾರವೂ ಆಗದು. ಆ ಬಗೆಯ ಸರಕುಗಳನ್ನು ನೀವು ಹೆಚ್ಚೆಚ್ಚು ಉತ್ಪಾದನ ಮಾಡುತ್ತ ಹೋದಂದೆ ಅವುಗಳಿಗಾಗಿ ಪೇಟೆಗಳನ್ನು ಹುಡುಕಲು ಹೆಚ್ಚೆಚ್ಚು ಸ್ಪರ್ಧೆ ನಡೆದು ಅದಕ್ಕಾಗಿ ಹೋರಾಟ ನಡೆಯುವುದು. ಈ ಹೋರಾಟ– ಅದು ಒಂದು ಸ್ವಾಂತದ ವಿರುದ್ಧ ಮತ್ತೊಂದು ಸ್ವಾಂತದ್ದಿರಲಿ – ಇಲ್ಲವೆ [ಯಾವದೊಂದು ದೇಶದ ನಿರ್ದಿಷ್ಟ ನೆರೆಯ ದೇಶದ ಗೂಡ ಇರಲಿ ಎಂದೂ ಕೊನೆಗಾಣದ ಹೋರಾಟವಾಗುವದು. ಅದರ ಮೂಲವನ್ನು ಹುಡುಕಿ ಆ ಮೂಲ ಕಾರಣವನ್ನೆ ನಾಶ ಮಾಡುವವರೆಗೆ ಆ ಹೋರಾಟ ನಡೆಯತಕ್ಕದ್ದೇ. ಇಲ್ಲದಿದ್ದರೆ ಎಲ್ಲ ಬಗೆಯ ಕಪಟೋಪಾಯಗಳನ್ನು ಸರಕುಗಳನ್ನು ನಾಶ ಮಾಡುವ ಉಪಾಯಗಳನ್ನು ಕೂಡ ಕೈಕೊಳ್ಳಬೇಕಾಗುವದು. ಕಾಫೀ ಪೇಟೆ ಇದಕ್ಕೆ ಒಳ್ಳೆ ಉದಾಹರಣೆಯಾಗಿದ್ದು ಇದನ್ನು ನಾವು ಅಲ್ಲಗಳೆಯುವಂತಿಲ್ಲ. ಧಾರಣೆಗಳ ಮಟ್ಟವನ್ನು ಕಾಯ್ದುಕೊಳ್ಳುವುದಕ್ಕಾಗಿ ಕಾಫಿಯಿಂದ ತುಂಬಿದ್ದ ಪ್ರಚಂಡ ಹಡಗಗಳನ್ನು ಮುಳುಗಿಸಿದ್ದು ನಮ್ಮ ನಾಗರಿಕತೆಗೆ ಕಲಂಕಪ್ರಾಯವಲ್ಲವೆ ? ಆದುದರಿಂದ ಆ ಬಗೆಯ ಔದ್ಯೋಗೀಕರಣಕ್ಕೆ ಬಟ್ಟೆ ತಕ್ಕುದಾದ ಕ್ಷೇತ್ರವಲ್ಲಿ. ಬೇರೆ ಬೇಕಾದಷ್ಟು ಇರುವವು.

ವೈಯಕ್ತಿಕ ಅಭಿರುಚಿ ಮತ್ತು ಸ್ವಾತಂತ್ರ್ಯಗಳ ಮೂರನೆ ತರ್ಕಸರಣಿಯೂ ಸಲ್ಲದು. ಅದನ್ನು ಮುಂದಿನ ವಾಕ್ಷಣ ಬರೆಸಿ ಒಗೆಯಬಹುದು. ಸಾಂಘಿಕ ಜೀವನದ ಮೇಲಾಗುವ ಪರಿಣಾಮಗಳನ್ನು ಲೆಕ್ಕಿಸದೆ ತಮ್ಮ ಸ್ವಂತ ಜೀವನದ ಬಗ್ಗೆ ಮಾತಾಡುವದು ಹಳೆಯಮಾತಾಗಿ ಹೋಗಿದೆ. ಜೀವನದ ಪ್ರತಿಯೊಂದು ಅಂಗದಲ್ಲಿ ಬದುಕಲು, ತನ್ನ ಇಚ್ಛೆಯಂತೆ ಇಂಥದೊಂದು ಸಂಗತಿಯನ್ನು ಮಾಡಲು ಇಲ್ಲವೆ ಮಾಡದಿರಲು ವೈಯಕ್ತಿಕ ಸ್ವಾತಂತ್ರ್ಯ ಸುಸಂಗತವಾಗಿರತಕ್ಕದ್ದು. ಅಂದರೆ ಇಡೀದೇಶದ ಪ್ರಗತಿಗೆ ಅದು ಸುಸಂಗತವಾಗಿರಬೇಕು. ವಿಶೇಷತಃ ಅತಿ ಕೀಳ ವ್ಯಕ್ತಿಯ ಉದ್ದಾರದ ದೃಷ್ಟಿಯಿಂದಲೂ ಅದು ಸುಸಂಗತವಾಗಿರತಕ್ಕದ್ದು. ಅವನ ಹಿತಸಂಬಂಧಗಳ ವಿರುದ್ಧವಾಗಿ ಅದೆಂದಿಗೂ ಇರಕೂಡದು. ಅತ್ಯಂತ ಕನಿಷ್ಠ ವ್ಯಕ್ತಿಯ ಹಿತವಾದ ನಾಗರಿಕತೆಯಲ್ಲಿಲ್ಲವೊ ಅದು ನಾಗರಿಕತೆಯೇ ಅಲ್ಲ; ಈ ಭೂತದಯಾಪರನಿಯಮಕ್ಕೆ ವೈಯಕ್ತಿಕ ಸ್ವಾತಂತ್ರ್ಯ ಯಾವಾಗಲೂ ಅಧೀನವಾಗಿರತಕ್ಕದ್ದು.

ಹಳ್ಳಿಗರ ಪರಿಸ್ಥಿತಿಯು ಸುಧಾರಿಸುವದಕ್ಕಾಗಿಯೇ ಮದ್ರಾಸದ ಈ ಜವಳಿ ಧೋರಣವಿದೆಂಬುದು ಈ ರೀತಿ ನಿಃಸಂಶಯವಾಗಿದೆ. ಸ್ವಾಭಿಮಾನ ಮತ್ತು ಗೌರವಗಳಿಗನುಸಾರವಾಗಿ ಸಮಾಜದಲ್ಲಿ ತನ್ನ ಉಚಿತಸ್ಥಾನ ಪಡೆಯಲು ಹಳ್ಳಿಗರಿಗೆ ಇದು ಸಹಾಯಕವಾಗಬೇಕೆಂಬ ಉದ್ದೇಶವಿದೆ. ಹಳ್ಳಿಗರಿಗೆ ಇದು ಅಪಾಯಕಾರಕವಾಗಿದೆಂದು ಹೇಳುವದು ಅಜ್ಞಾನ ಮೂಲಕವಿರಬಹುದು ಇಲ್ಲವೆ ಸ್ವಾರ್ಥಮೂಲಕವಾದುದಿರಬಹುದು.

ತುಂಗಭದ್ರಾ ಯೋಜನೆ

ಮದ್ರಾಸ್ ಸರ್ಕಾರದ ಛೀಫ್ ಎಂಜಿನಿಯರ್ ಗೋವಿಂದರಾಜಯ್ಯಂಗಾರ್ ಮತ್ತು ಗವರ್ನರೊಡನೆ ನಡೆದ ಸಂಭಾಷಣೆಯ ಸಂಕ್ಷಿಪ್ತ ವಿವರ:—

ಪ್ರ: ಇದು ಎಷ್ಟುಕಾಲದೊಳಗಾಗಿ ಮುಗಿಯಬಹುದು?

ಉ. ಇನ್ನು 5ವರ್ಷಗಳೊಳಗಾಗಿ ಮುಗಿಯಬಹುದೆಂದು ನನಗೆ ನಂಬಿಕೆಯುಂಟು.

ಪ್ರ. ಎಷ್ಟು ಹಳ್ಳಿಗಳು ಮುಳುಗಲಿವೆ?

ಉ. ೨೨ ಹಳ್ಳಿಗಳು.

ಪ್ರ. ರೈತರಿಗೇನು ಪರಿಹಾರ?

ಉ. ಅವರಿಗೆ ಪರಿಹಾರ ಕೊಡಲು ಸರ್ಕಾರವು ಒಂದು ಕೋಟಿ ರೂಪಾಯಿವರಿಗೂ ಖರ್ಚುಮಾಡಲಿದೆ.

ಪ್ರ. ನೀವು ಕೊಟ್ಟ ಪರಿಹಾರದಿಂದಲೆ ಅವರ ಹಣೆಯ ಬರಹವನ್ನು ಕಟ್ಟಿಬಿಡುವಿರಾ?

ಉ. ಅವರಿಗೆ ಅನ್ಯಾಯವೆಂದು ತೋರಿದರೆ ಅಪೀಲು ಮಾಡಿಕೊಳ್ಳಬಹುದು.

ಪ್ರ. ಶೀಘ್ರ ಕೆಲಸ ಸಾಗಿಸಲು ಇರುವ ತೊಂದರೆಗಳೇನು?

ಉ. ಯಂತ್ರಸಾಮಗ್ರಿ, ವಿದ್ಯುಚ್ಛಕ್ತಿಯ ಅಭಾವ. ನನ್ನನ್ನು ಸರ್ಕಾರದವರು ಇದಕ್ಕಾಗಿ ಇಂಗ್ಲೆಂಡು ಅಮೆರಿಕಾಗಳಿಗೆ ಕಳುಹಿಸಿದ್ದರು. ಸರಿಯಾದ ಏರ್ಪಾಟು ಮಾಡಿದ್ದೇನೆ. ಕೆಲಸವಾಡಲು ಒಂದೇ ಏಜನ್ಸಿ ಇದ್ದರೆ ಚನ್ನಾಗಿತ್ತು. ಹೈದರಾಬಾದಿನವರಿಂದ ಅಗಾಗ್ಯೆ ತೊಂದ್ರೆಗಳು ಬರುತ್ತಲಿವೆ. ಸರ್ ಮಿರ್ಜಾ ಇಸ್ಮಾಯಿಲ್‌ರವರು ಈಗ ಅಲ್ಲಿದ್ದು ನನಗೆ ಬಹಳ ಸಹಾಯವನ್ನು ಒದಗಿಸುತ್ತಲಿರುವರು. ಆದರೂ ಅವರ ಮನ ಒಲಿಸಲು ನಾವು ಆ ಕಡೆ ದೃಷ್ಟಿ ಇಟ್ಟಿದ್ದೇವೆ.

ಗವರ್ನರರು:—ಅತ್ತ ಕಡೆಯ ದೃಷ್ಟಿಯು ಹೆಚ್ಚುಬೇಡ ನಾವು ಮದ್ರಾಸಿನವರು. ನಮ್ಮಹಿತವನ್ನು ನಾವು ಹೆಚ್ಚು ಲಕ್ಷಿಸಬೇಕು.

ಪ್ರ. ಕೆಳಭಾಗ, ಮೇಲ್ಭಾಗ ಛಾನಲ್‌ಗಳಲ್ಲಿನ ವ್ಯತ್ಯಾಸವೇನು?

ಉ. ಕೆಳಭಾಗಕ್ಕಿಂತಲೂ ಮೇಲ್ಭಾಗದಿಂದ ಇನ್ನೆರಡು ಲಕ್ಷ ಎಕರೆಗಳ ನೀರಾವರಿಯಾದೀತು. ನೀರಿನ ಹಂಚಿಕೆಯಲ್ಲಿ ಗುದ್ದಾಟವಿದೆ. ಹೈದರಾಬಾದಿನವರು ಹೆಚ್ಚುನೀರು ಬಳಸಲು ಅವಕಾಶ ಕೊಡುವಂತಿಲ್ಲ. ಕೃಷ್ಣಾಯೋಜನೆ ಮೂಡಲವರು ನಿಶ್ಚಯಿಸಿದ್ದಾರೆ.

ಹಡಗಲೀ ತಾಲೂಕಿನಲ್ಲಿ

ಅಣೇಕಲ್ಲು ತುಫಾನಿನ ಅಪಘಾತ

ದಿ-೧೧-೧-೪೭ ರಲ್ಲಿ ಅಣೇಕಲ್ಲು ತುಫಾನಿನಿಂದ ನಷ್ಟಕ್ಕೀಡಾದ ಗ್ರಾಮಗಳು ಈ ಕೆಳಗಿನಂತಿವೆ ಬಾಚಿಗೊಂಡನಹಳ್ಳಿ ತಂಬರಹಳ್ಳಿಯಲ್ಲಿ ಆದ ಕಾಲಭೈರವನ ಸೃಷ್ಟಿ ನೋಟದಿಂದಲೇ ತುಂಬಿಕೊಡಲಾರದಷ್ಟು ಹಾನಿಯಾಗಿದೆ. ಆಹಾರ ವಸತಿ ಇರದೆ ರೈತರು ಗೋಳಾಡುತ್ತಾರೆ. ಜನತಾ ಸರಕಾರ ಪರಿಹಾರ ದ್ರವ್ಯ ಕೊಡಬೇಕು ಬಾಗೊಂಹಳ್ಳಿಗೆ ೫ ಸಾವಿರ ರೂ. ತಂಬರಹಳ್ಳಿ ೭ ಸಾವಿರ ರೂ. ಅಂಕಸಮುದ್ರಕ್ಕಿ ಸಾವಿರ ರೂ. ಮರಬ್ಬಿಹಾಳು ಐದುಸಾವಿರ ನಷ್ಟವಾಗಿದೆ ಡಣಾಯಕನಕೆರಿ ಗ್ರಾಮದಲ್ಲಿ ನೆಲ್ಲುಬೆಳೆ ಹಾಳಾಗಿ ಅಂದಾಜಿನಗಳು ಸತ್ತಿವೆ. ಹಂಪಾಪಟ್ಟಣದಲ್ಲಿ ೧೫ ಎಕ್ರೆ ನೆಲ್ಲು ಬೆಳೆ ಹಾಳಾಗಿದೆ. ದಿನಸ್ಯ ಹಣಾ ಮಾಸಿ ಮಾಡಿ ಆಹಾರಧಾನ್ಯ ರಿಯಾಲ್ತಿ ಕೊಡಲು ಸರ್ಕಾರಕ್ಕೆ ಕಲೆಕ್ಟರವರು ಶಿಫಾರಸ್ಸು ಮಾಡಬೇಕು.

ಹಡಗಲಿ ತಾಲೂಕಿನ ಆಹಾರಸಮಿತಿಗೆ

ಚಿಮ್ಮಿ ಎಣ್ಣೆಹಂಚುವಿಕೆಯಲ್ಲಿ ಬಹಳ ಅಸ್ತವ್ಯಸ್ತವಿದೆ ಎಂದೂ ಈ ಕೆಳಗಿನಂತಿದೆಯೆಂದೂ ತಿಳಿದುಬಂದಿದೆ. ಇದನ್ನು ಸರಿಪಡಿಸಿರಿ

ನವಭಾರತಕ್ಕೆ ಚಂದಾದಾರರಾಗಿರಿ

ಉದಾಹರಣೆಗಾಗಿ ಈಗ ಕೊಡುತ್ತಿರುವ ಎಣ್ಣೆಯ ಸಕ್ರಮವಲ್ಲದ ಪ್ರಮಾಣವನ್ನು ಈ ಕೆಳಗೆ ಕೊಡಲಾಗಿದೆ–

ಉತ್ತಂಗಿ– ೬೦೦ ಮನೆ. ೬೦ ಗ್ಯಾಲನ್ ಕೊಡುತ್ತಿರುವರು.

ತಂಬ್ರಹಳ್ಳಿ–೫೦೦ ,, ೫೫೦ ,, ,,
ಬಾಚೆನಳ್ಳಿ–೨೦೦ ,, ೬೦ ,, ,,
ನೆಲ್ಲುದ್ರಿ–೨೦೦ ,, ೨೫ ,, ,,
ಸೊನ್ನಾ ಸಕ್ರಿಹಳ್ಳಿ ೪೦೦ ,, ೨೫ ,, ,,

ಇದೆಂಥಾ ನ್ಯಾಯ ?

[ಈಗ ಎಣ್ಣೆಯ ಕ್ವಾಮವು ಅಷ್ಟಿಲ್ಲ-ಇದರ ರೇಷನ್ ಕೂಡ ತೆಗೆದುಹಾಕಬಹುದಾಗಿದೆ. ಆಹಾರ ಸಾಮಗ್ರಿಗಳಷ್ಟು ಕೊರತೆಯು ಇದಕ್ಕಿಲ್ಲ. ಸಂಬಂಧಿಸಿದವರು ಕಲೆಕ್ಟರ್ ಬಳಿ ಬಂದು ತಮ್ಮ ತಮ್ಮ ಕೋಟಾ ಹೆಚ್ಚಿಸಿಕೊಳ್ಳಬಹುದು– [ಸಂಪಾದಕ ನವಭಾರತ]

ಕೊಟ್ಟೂರು.

ಭಾರತ ವ್ಯಾಯಾಮ ಶಾಲೆಯ ದಶವಾರ್ಷಿಕ ಸಭೆಯು ಸೇರಿ ಕೆಳ ಅಧಿಕಾರೀವರ್ಗದವರನ್ನು ಆರಿಸಲಾಯಿತು. **ಅಧ್ಯಕ್ಷ** ಶ್ರೀ ಶೀಲವಂತರ ಗುರುಬಸಪ್ಪ **ಉಪಾಧ್ಯಕ್ಷ** ಶ್ರೀ ಕೊಟ್ಟೂರ ಶೆಟ್ರು **ಕಾರ್ಯದರ್ಶಿಗಳು** ಶ್ರೀ ರಾಮಚಂದ್ರರಾವ್ ಕೊಟ್ಟಪ್ಪ ವೈದ್ಯಕೀಯ ಸಲಹೆಗಾರರು ಡಾ. ಭುಜಂಗ್ ಸಂಚಾಲಕ ಶ್ರೀ ಶರಣಪ್ಪ ಕಾರ್ಯಕಾರೀಸಮಿತಿಗೆ ೯ ಸದಸ್ಯರನ್ನಾರಿಸಲಾಯಿತು. ಹರ್ಡೀಕರ ಮಂಜಪ್ಪನವರ ನಿಧನಕ್ಕೆ ದುಃಖ ಪ್ರದರ್ಶಿಸಲಾಯಿತು. ವಿದ್ಯಾರ್ಥಿ ವಸತಿಗೃಹವನ್ನು ವ್ಯಾಯಾಮಶಾಲೆಯ ಆವಾರದಲ್ಲಿ ಕಟ್ಟಲು ತೀರ್ಮಾನಿಸಲಾಯಿತು.

ಶ್ರೀ ಗುಡುದೂರು ತಿಮ್ಮಪ್ಪನವರ ದಾನ

ಬಿಲ್ಲಾ ಹೆಡ್ ಕ್ವಾರ್ಟರ್ಸ ಆಸ್ಪತ್ರೆಯ ಕಾಂಪೌಂಡಿನಲ್ಲಿ ಪ್ರಸೂತಿಕಾ ಗೃಹ (Maternity Home) ವನ್ನು ಕಟ್ಟಿಸಲು ಶ್ರೀ ಗು. ತಿಮ್ಮಪ್ಪ ನವರು ೫೫ ಸಾವಿರ ರೂಪಾಯಿಗಳ ದಾನನೂಡಿರುವರು.

ನಿಸರ್ಗ – ಚಿಕಿತ್ಸೆ.

ಉರುಳಿಕಾಂಚನ ನಿಸರ್ಗ ಚಿಕಿತ್ಸಾಲಯದ ಸಾಣ್ಯಾಸಿಕ ವರದಿ ಪ್ರಸಿದ್ಧವಾದಂದಿನಿಂದ ಆ ಆಲಯದಲ್ಲಿ ಪ್ರವೇಶ ಪಡೆಯಬಯಸುವ ಅನೇಕ ಜನರಿಂದ ಪತ್ರಗಳ ಸುರಿಮಳೆ ನಡೆದಿದೆಂದು ಡಾ. ಎ. ಕೆ. ಭಾಗವತರು ಅಲ್ಲಿಂದ ಬರೆಯುತ್ತಾರೆ. ಆದುದರಿಂದ ಉರಳಿ ಕಾಂಚನ ನಿಸರ್ಗ ಚಿಕಿತ್ಸಾಲಯವು ಕೇವಲ ಸ್ಥಳಿಕರಿಗಾಗಿ ಮುಖ್ಯವಾಗಿ ಇದೆಂಬುದನ್ನು ಸಾರ್ವಜನಿಕರಿಗೆ ತಿಳಿಸುವದು ಅವಶ್ಯವಾಗಿದೆ. ಆಸ್ಪತ್ರೆಯಲ್ಲಿ ಸ್ಥಳಿಕ ರೋಗಿಗಳಾಗಿಯೆ ಸಾಕಷ್ಟು ವಸತಿ ಸ್ಥಳವಿಲ್ಲದ್ದರಿಂದ ಕೇವಲ ಚಿಕಿತ್ಸೆಮಾಡಿ ಅಯಾರೋಗಿಗಳನ್ನು ಅವರವರ ಸ್ಥಳಗಳಿಗೆ ಕಳಿಸುವ ಏರ್ಪಾಡು ಮಾಡಲಾಗಿದೆ. ಆದುದರಿಂದ ಉರುಳಿ ಕಾಂಚನದಲ್ಲಿ ಪ್ರವೇಶ ದೊರೆಯುವಹಾಗಿಲ್ಲ ಅರ್ಜಿ ಮಾಡಿಕೊಳ್ಳಬಾರದೆಂದು ಸಾರ್ವಜನಿಕರಿಗೆ ವಿನಂತಿಸುತ್ತೇವೆ. ಪ್ರವೇಶ ದೊರೆಯಬಹುದೆಂಬ ಆಸೆಯಿಂದ ಅಲ್ಲಿಗೆ ಬರುವ ಸಾಹಸವನ್ನೂ ಮಾಡಬಾರದೆಂದು ಕೇಳಿಕೊಳ್ಳುತ್ತೇವೆ.

ಡಾ. ಭಾಗವತರ ನಿಸರ್ಗ ಚಿಕಿತ್ಸಾ ಪದ್ಧತಿಯಲ್ಲಿ ಆಸ್ಥೆಯಿದ್ದವರು ಅದನ್ನು ಎರಡು ಮೂರು ಪುಸ್ತಕಗಳಿಂದ ಪಡೆಯಬಹುದು. (ಈ ಪುಸ್ತಕಗಳ ಬೆಲೆ ಅಂಚೆ ವೆಚ್ಚ ಸಹಿತ ಅನುಕ್ರಮವಾಗಿ ೧೦ ಆಣೆ ೧೪ ಆಣೆ ಇರುವದು.) ಅಲ್ಲದೆ ಒಂದು ಇಂಗ್ಲಿಶ ಪ್ರಕಟನೆಯಿಂದಲೂ ಆ ಬಗ್ಗೆ ಸಂಗತಿಗಳು ಗೊತ್ತಾಗುವದು. ಈ ಇಂಗ್ಲಿಶ ಪ್ರಕಟನೆಯ ಬೆಲೆ ಅಂಚೆ ವೆಚ್ಚ ಸಹಿತ ೭ ಆಣೆ ಇದೆ ಡಾ. ಎ. ಕೆ. ಭಾಗವತ ನಿಸರ್ಗ ಚಿಕಿತ್ಸಕರು ಉರುಳಿಕಾಂಚನ ಜಿಲ್ಲಾ ಪುಣೆ ಇವರಿಗೆ ನೇರವಾಗಿ ಬರೆದುಕೊಳ್ಳಬೇಕು. ಪತ್ರದ ಸಂಗಡ ಅವಶ್ಯಕ ಹಣವನ್ನು ಅಂಚೆ ತಿಕಿಟಿನ ದ್ವಾರಾ ಇಲ್ಲವೆ ಮನಿ ಆರ್ಡರ ಮೂಲಕ ಕಳಿಸಿಕೊಡಬೇಕು. ವಿನಂತಿಯಿಂದ ಯಾವ ಬೇಡಿಕೆಗಳನ್ನೂ ಮನ್ನಿಸಲಾಗುವದಿಲ್ಲ. [ಹರಿಜನ]

ಬೇಕಾಗಿದೆ.

ಮದ್ಯನಿಷೇಧಕ್ಕಾಗಿ ಪುಟ್ಟ ಅಧಿಕಾರಿಗಳು.

5 ಅಡಿ 5 ಅಂಗುಲ ಎತ್ತರವಿರುವ, 32ರಿಂದ 34ಅಂಗುಲದ ಎದೆ ಅಳತೆಯಿದ್ದು ಹೆಚ್ಚಿಸಿದಾಗ 2ಅಂಗುಲ ವಿಸ್ತರಿಸುವ ಎದೆಯುಳ್ಳವರು ಮದ್ಯನಿಷೇಧ ಕಾರ್ಯಕ್ಕಾಗಿ **ಅನಂತಪುರ, ಕರ್ನೂಲು, ಬಳ್ಳಾರಿ, ಕಡಪಾ ಜಿಲ್ಲೆಗಳಲ್ಲಿ** ಪುಟ್ಟ ಅಧಿಕಾರಿಗಳಾಗಿ ನಿಯಮಿಸಲ್ಪಡಲು ಬೇಕಾಗಿದ್ದಾರೆ ಯುದ್ಧ ಕಾರ್ಯಗಳಲ್ಲಿ ದುಡಿದವರಾಗಿದ್ದರೆ ಅಸರ್ವಿಸ್ ಕೂಡ ಸೇರಿ ಅವರಿಗೆ 31 ವರ್ಷ ವಯಸ್ಸಿರಬೇಕು ಬೇರೆಯವರು 25 ವರ್ಷದ ವಯಸ್ಸಿನವರಾಗಿರಬೇಕು. ಉಮೇದುವಾರರು ಕೊನೆಯವಕ್ಷ V ಫಾರಂವರೆಗೆ ಓದಿದವರಿದ್ದು ತೆಲುಗಿನಲ್ಲಿ ಓದಲು ಬರೆಯಲು ತಿಳಿದವರಿರಬೇಕು ಕನ್ನಡ ತಿಳಿದವರಿಗೆ ಪ್ರಾಶಸ್ತ್ಯ ಕೊಡಲಾಗುವುದು

ಇವರಿಗೆ ಅರ್ಜಿಕೊಡಿರಿ

Deputy Commissioner
Prohibition (Enforcement)
MADRAS.

ಡೆಪ್ಯುಟಿ ಕಮೀಶನರ್
ಪ್ರೊಹಿಬಿಷನ್ (ಎನ್‌ಫೋರ್ಸಮೆಂಟ್)
ಮದ್ರಾಸ್.

ಬೇಕಾಗಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಮದ್ಯನಿಷೇಧ ಕಾರ್ಯಕ್ಕಾಗಿ ಹೊಸಪೇಟೆ ಭಾಗಕ್ಕೆ 30, ಬಳ್ಳಾರಿ ಭಾಗಕ್ಕೆ 30 ಒಟ್ಟಿನಲ್ಲಿ 60 ಜನ ಮದ್ಯ ನಿಷೇಧ ಕಾವಲುಗಾರರು (Prohibition Guards) ಬೇಕಾಗಿದ್ದಾರೆ. ಈ ಉದ್ಯೋಗವು 31-3-47ರವರೆಗಿದೆ. ತದನಂತರವೂ ಮುಂದುವರಿಯಬಹುದು.

2) ಅರ್ಜಿದಾರರಿಗೆ ಈ ಯೋಗ್ಯತೆಗಳಿರಬೇಕು. ಮಿಲಿಟರಿಯಲ್ಲಿ ದುಡಿದವರಿದ್ದರೆ **31ವರ್ಷವಯಸ್ಸು**, ಇತರರಾದರೆ 25 ವರ್ಷ ವಯಸ್ಸು. 5 ಅಡಿ 5 ಅಂಗುಲ ಎತ್ತರವಿದ್ದು 31ರಿಂದ 34ಅಂಗುಲ ಎದೆಯಳತೆ ಇರಬೇಕು. ಓದಲು, ಬರೆಯಲು ತೆಲುಗು ಬರಬೇಕು. ಇದರ ಜೊತೆಗೆ ಕನ್ನಡ ತಿಳಿದವರೂ ಇದ್ದರೆ ಪ್ರಾಶಸ್ತ್ಯವು ಕೊಡಲಾಗುತ್ತೆ.

3) ಈ ಉದ್ಯೋಗಕ್ಕೆ 22-1/3-29 ಸಂಬಳವನ್ನು ನಿಶ್ಚಯಿಸಲಾಗಿದೆ. ಆರಿಸಲ್ಪಟ್ಟು ನಿಯಮಿಸಲಾದ ಉಮೇದುವಾರರಿಗೆ ಪ್ರಾರಂಭದಿಂದ 2 ವರ್ಷಗಳವರೆಗೆ ಪುಕ್ಕಸ್ಪರ್ಧವಾಗಿ 18/- ಕೊಡಲಾಗುತ್ತೆ. ಸರ್ಕಾರದವರು ಆಗಾಗ್ಗೆ ಮುಂಜಾರು ಮಾಡಿದ ಸ್ಕೇಲ್ ಪ್ರಕಾರಕ್ಕೆ ಅಲೋಯೆನ್ಸ್ ಕೊಡಲಾಗುವುದು.

4) ವಯಸ್ಸು, ಯೋಗ್ಯತೆ, ಜಾತಿ, ತಿಳಿಸಭಾಷೆಗಳ ವಿವರಗಳನ್ನೊಳಗೊಂಡ ಅರ್ಜಿಗಳು ಹೊಸಪೇಟೆ ಸರ್ಕಲ್‌ನಲ್ಲಿರುವವರಾದರೆ **ಡೆಪ್ಯೂಟಿ ಪ್ರೋಹಿಬಿಷನ್ ಆಫೀಸರ್**, ಹೊಸಪೇಟೆ ಇವರಿಗೂ, ಬಳ್ಳಾರಿ ಸರ್ಕಲಿನವರಾದರೆ **ಡೆಪ್ಯೂಟಿ ಪ್ರೋಹಿಬಿಷನ್ ಆಫೀಸರ್** ಬಳ್ಳಾರಿ ಇವರಿಗೆ ಕೊಟ್ಟು ಹೊಸಪೇಟೆ, ಬಳ್ಳಾರಿಯ ಅಧಿಕಾರಿಗಳು ಬೇಡಿದಲ್ಲಿ ಕಾಲ್ಕೆ ಖರ್ಚಿನಿಂದ ಸಮಕ್ಷಮ ಭೆಟ್ಟಿಯಾಗಲು ಸಿದ್ಧರಿರಬೇಕು. ಕಾರಣವಿಲ್ಲದೆ ಯಾವ ಅರ್ಜಿಗಳನ್ನಾಗಲಿ ತಿರಸ್ಕರಿಸಲು ಡೆಪ್ಯುಟಿ ಪ್ರೊಹಿಬಿಷನ್ ಆಫೀಸರಿಗೆ ಅಧಿಕಾರವಿದೆ.

5) ಹೊಸಪೇಟೆ, ಬಳ್ಳಾರಿ ಸ್ಟೇಷನ್ ಹೌಸುಗಳಿಗೆ ಅರಿಸಲ್ಪಡುವುದಾದರೆ ಅರ್ಜಿ ಹಾಕಿದ ಉಮೇದುವಾರರು ಅಲ್ಲಿಯೂ ಕೆಲಸಮಾಡಲು ಸಿದ್ಧರಿರಬೇಕು.

The Rayalaseema Bank Limited, Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:— **ಬಳ್ಳಾರಿ ಜಿಲ್ಲಾ:-** ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ, ಬಳ್ಳಾರಿ, ಹಡಗಲಿ, ಕೂಡ್ಲಿಗಿ, ಆದವಾನಿ. **ಅನಂತಪುರ:-** ಅನಂತಪುರ, ಬೆಳಗುಪ್ಪ. ಧರ್ಮಾವರಂ, ಕದಿರಿ, ಪಾವಿಡಿ, ತಿಮ್ಮನಚೆಲ್ಲ, ಉರವಕೊಂಡ, ಹಿಂದೂಪುರ, ಗುತ್ತಿ. **ಕರ್ನೂಲು:-** ಕರ್ನೂಲು ಪತ್ತಿಕೊಂಡ. **ಕಡಪ:-** ರಾಜಂಪೇಟೆ, ಕಡಪ. **ಚಿತ್ತೂರು:-** ಚಿತ್ತೂರು, ಮದನಪಲ್ಲಿ, ತಿರುಪತಿ, ನಾಗರಿ, ವಾಯಲ್ಪಾಡು.

ಫಿಕ್ಸೆಡ್ ಡಿಪಾಜಿಟ್‌ನ ಬಡ್ಡೀದರ:— 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2 ವರ್ಷಗಳಿಗೆ 3½%.

ಕರೆಂಟು ಅಕೌಂಟು: 1%, **ಸೇವಿಂಗ್ಸ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.

ಮಾಸಿಕ ಪ್ರಾವಿಡೆಂಟ ಫಂಡ ಡಿಪಾಜಿಟ್:- 3%. **ಬಿ. ವಿ. ಶೇಷಗಿರಿರಾವ್, ಕಾರ್ಯದರ್ಶಿ.**

—ರಾಷ್ಟ್ರೀಯ ಪುಸ್ತಕಗಳು.—

—: ಕಾಂಗ್ರೆಸ್ ಸ್ವರೂಪ ದರ್ಶನ:—

ರಾಷ್ಟ್ರೀಯ ಶಿಕ್ಷಣ	0—3—0
ಅಸ್ಪೃಶ್ಯತಾ-ನಿವಾರಣೆ	0-12—0
ಪ್ರಾಂತಭಾಷೆ- ರಾಷ್ಟ್ರಭಾಷೆ	0—6—0
ಖಾದಿ	0—8—0
ಕಾಂಗ್ರೆಸ್ ಮತ್ತು ಸ್ವಯಂಸೇವಕದಳ	0-10-0
ಸತ್ಯಾಗ್ರಹ (ಇತಿಹಾಸ-ತಂತ್ರ)	3-8 -0

ಇ. ಸಿ. ಖರ್ಚು ಬೇರೆ. ಇನ್ನು ಅನೇಕ ಪುಸ್ತಕಗಳು ಸಿದ್ಧವಿರುತ್ತವೆ.—

ನವಭಾರತ, — ಕಾರ್ಯಾಲಯ ಬಳ್ಳಾರಿ.

ಅಮೋಘವಾದ ಗುಣಲಕ್ಷಣ ಸರಳ ಕನ್ನಡ ಭಾಷೆ.

ಶಾಲಿವಾಹನ ಶಕೆ ೧೮೬೯ ನೆಯ ಸರ್ವಜಿತು ಸಂ॥

ಶ್ರೀ ಕೊಟ್ಟೂರು ಗುರು
—ಬಸವೇಶ್ವರ ಪಂಚಾಂಗ—

ಶಾಸ್ತ್ರವೇತ್ತರಿಂದ ಗುಣಿಸಲ್ಪಟ್ಟು ಪುನರೀಕ್ಷಿತವಾಗಿ ಪ್ರಕಟವಾಗಿದೆ ಇದರ ಆದಾಯದಿಂದ ಧರ್ಮಾರ್ಥ ಜ್ಯೋತಿಷ್ಯ ಪಾಠಶಾಲೆಯ ಪೋಷಣೆಯಾಗಲಿರುವದರಿಂದ ಸರ್ವರೂ ಪ್ರೋತ್ಸಾಹಿಸಲು ಕೋರಿದೆ.

ಬೆಲೆ, ೦—೧೦—೦ ಗುರುಬಸವೇಶ್ವರ
ಧರ್ಮಾರ್ಥ ಜ್ಯೋತಿಷ್ಯ, ಪಾಠಶಾಲೆ
ಕೊಟ್ಟೂರು (ಬಳ್ಳಾರಿ ಜಿಲ್ಲಾ.)

NAVA BHARAT. BELLARY. Reg. No. M. 4746

ನವಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು. **Subscription Rates**

ವರ್ಷಕ್ಕೆ	5-0-0	One Year	5—0—0
6 ತಿಂಗಳಿಗೆ	3-0-0	Six months	3—0—0

ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ

Subscription will not be accepted for less than 6 months.

To

SRI.....

.....

.....

Printed at Krishna Press Bellary QH No. B 17 FOR (Q.H. No. B-5)
Edited & Published by T. B. KESHAVARAO

ಜೈಹಿಂದ್ Reg. No.M. 4746

ನವಚೇತನ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಕಟ್ಟು ೬ ಸಂಚಿಕೆ ೪ ಬಳ್ಳಾರಿ ಜನವರಿ ೨೭ ಸೋಮವಾರ ೧೯೪೭ ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವ್.

DANCE! DRAMA!! MUSIC!!!

Grandest Entertainment

KULAKARNI SHREENIVAS, B A

(Celebrated Indian Dancer)

At Prabhat Talkies Bellary.

27th January '47. Monday 6-30 P. M.

MENAKA, BALLET DANCES

27th January '47. Monday 9-30 P. M.

ARUNAGIRI, BALLET DANCES

At Star Talkies, Bellary.

28th Jan. '47 Wednesday 9-30 P. M.

'SAMSARA NOWKA'

(Social drama in Kannada)

Rates of Addmission:—

Reserved:— 5—15—0, 3—9—0

Unreserved:- 2-6-0, 1-12-0, 1-3-0, 0-9-0.

ನರ್ತನ! ನಾಟಕ!! ಗಾಯನ!!

ಅಪೂರ್ವ ಪ್ರದರ್ಶನ

ನೂರಾರು ಚಿತ್ರಗಳ ನೃತ್ಯ ನಿರ್ದೇಶಕರೂ ನರ್ತನ ಕಲಾಕೋವಿದರೂ ಆದ

ಶ್ರೀಮಾನ್ ಕುಲಕರ್ಣಿ ಶ್ರೀನಿವಾಸರು

ಬಳ್ಳಾರಿ ಪ್ರಭಾತ್ ಟಾಕೀಸಿನಲ್ಲಿ

ಸೋಮವಾರ 27-1-47 ಸಂಜೆ 6-30ಕ್ಕೆ—

ಮೇನಕಾ ವಿಜಯ ನೃತ್ಯ ಮತ್ತಿತರ ನರ್ತನ

ಸೋಮವಾರ 27-1-47 ರಾತ್ರಿ 9-30ಕ್ಕೆ—

ಅರುಣಗಿರಿ ನೃತ್ಯ ಮತ್ತಿತರ ನರ್ತನ

ಬಳ್ಳಾರಿ ಸ್ಟಾರ್ ಟಾಕೀಸಿನಲ್ಲಿ

ಬುಧವಾರ 29-1-47 ರಾತ್ರಿ 9-30ಕ್ಕೆ—

'ಸಂಸಾರನೌಕೆ' (ಕನ್ನಡ ನಾಟಕ) ಪ್ರದರ್ಶಿಸುವರು.

ದರಗಳು

5—15—0, 3—9—0, 2—6—0, 1—12—0, 1—3—0 ಮತ್ತು 0—9—0

'TYAGAIAH' WITH NAGAIAH

AT PRABHAT TALKIES From Monday, 27th Januaty 1947.



10th Year of Publication.

27th JANUARY 1947

ಕೆತ್ತಲೇ ವ್ಯಾಪಾರ (ಬ್ಲಾಕ್ ಮಾರ್ಕೆಟ್)

ಲಂಚದ ಹೆಚ್ಚಳ.

ಕಾಂಗ್ರೆಸ್ ಅಧಿಕಾರವು ಬಂದು ಆರು ತಿಂಗಳಾದರೂ ಇದು ನೀಗಲಿಲ್ಲವೆಂದೂ ಹಳ್ಳಿಗಳಲ್ಲಿ ನಡೆಯುವ ಕುಪದ್ಧತಿಗಳು ಯಥಾವತ್ತಾಗಿ ಸಾಗಿರುವವೆಂದೂ, ಲಂಚವು ಎಡೆತಡೆಯಿಲ್ಲದೆ ಸಾಗಿದೆಯೆಂದೂ ಶ್ರೀ ಜೆ. ಯಜ್ಞ. ಆಚಾರ್ಯರು ಬರೆದಿರುವರು. ಬೇರೊಂದೆಡೆಯಲ್ಲಿ ಪ್ರಕಟವಾದ ಅವರ ಲೇಖನದ ಅಂಶಗಳನ್ನೇ ಇದರಲ್ಲೂ ಕೊಟ್ಟಿರುತ್ತಾರೆ.

ಒಂದೇ ಊರಿನ, ಅಥವಾ ಒಂದೇ ಕ್ಷೇತ್ರದ ಪರಿಸ್ಥಿತಿಯನ್ನು ಲಕ್ಷಿಸಿದರೆ ಸಾಲದು. ಜಿಲ್ಲೆಯ ವಿವಿಧ ಭಾಗಗಳಲ್ಲಿ ವಿವಿಧ ರೀತಿಯ ಅಕ್ರಮಗಳು ನಡೆಯುತ್ತಲಿವೆ. ಪ್ರಾಂತದ ಅನೇಕ ಭಾಗಗಳಲ್ಲಿ ಅನೇಕ ಪ್ರಕಾರವಾಗಿ ದುಷ್ಟ ವಾತಾವರಣವು ಹಬ್ಬಿದೆ. ಈ ಕುಚಕ್ರದಲ್ಲಿ ಸತ್ಯವಂತರೆಂದೆನಿಸಿಕೊಂಡವರೂ ಸಿಕ್ಕಿ ಬಿದ್ದಿರುವರು. ಪ್ರಜೆಗಳಿಗಾಗಿ ಹೋರಾಟ ನಡೆಸುತ್ತೇವೆಂದು ಹೇಳಿ ಆರಿಸಿ ಬಂದ ಕೆಲ ಪ್ರತಿನಿಧಿಗಳೂ ಸ್ವಾರ್ಥಸಾಧನೆಯ ಕಾರ್ಯಗಳಲ್ಲಿ ಮಗ್ನರಾಗಿರುವರು. ಎಲ್ಲಿ ನೋಡಿದರೂ ಕಗ್ಗತ್ತಲೆಯು ಹಬ್ಬಿದೆ. ಕಚೇರಿಗಳಲ್ಲೇನು? ವ್ಯಾಪಾರೀ ಅಂಗಡಿಗಳಲ್ಲೇನು? ಸೊಸೈಟೀ ಡಿಪೋಗಳೇನು? ಎಲ್ಲಾ ಕಡೆಯಲ್ಲೂ ಸತ್ಯವಂತರೂ, ಕರ್ತವ್ಯನಿಷ್ಠರೂ ಅಭಾವವಾಗುತ್ತಿರುವರು. ಹಿಂದಿನಿಂದ ಕೈಯೊಡ್ಡುವ ಚಾಳಿಯು ಅಧಿಕವಾಗುತ್ತಲಿದೆ. ಯುದ್ಧ ಮುಗಿದು ಪ್ರಜಾಸರ್ಕಾರವು ರೂಢಿಯಲ್ಲಿ ಬಂದರೂ ಅನ್ಯಾಯ ಲಂಚಗಳ ಅಂತವಾಗದಿರುವುದನ್ನು ನೋಡಿದರೆ ವ್ಯಸನವಾಗುತ್ತದೆ. ಲಂಚದ ಸಮಿತಿಯೇನು ಮೂಡುತ್ತಿರುವುದೋ ದೇವರೇ ಬಲ್ಲ!! ಅಲ್ಲಲ್ಲಿ ಕೆಲವರಿಗೆ ಮೂದರೀ ಶಿಕ್ಷೆಯನ್ನು ಕೊಟ್ಟು ಕಾಂಗ್ರೆಸ್ ಸರ್ಕಾರವು ತನ್ನ ಬಿಗುವನ್ನು ಪ್ರದರ್ಶಿಸಿದ್ದರೆ ಲಂಚವಡಗಿ ಹೋಗುತ್ತಿತ್ತು. ಶಿಕ್ಷಾರ್ಹರಾದವರನ್ನು ಅಧಿಕಾರಿಗಳ ಗಮನಕ್ಕೆ ತರುವುದೂ ವ್ಯರ್ಥವೆಂಬ ಭಾವನೆಯು ಜನರಲ್ಲಿ ಹಬ್ಬಿಹೋಗಿದೆ. ಜನತೆಯಲ್ಲಿ ಅಸಹ್ಯ ಜಿಗುಪ್ಸೆ ಅಶಾಂತಿಗಳು ಹಬ್ಬುತ್ತಿರುವುದನ್ನು ಕಾಣುತ್ತಲಿದ್ದೇವೆ. ಹೆಚ್ಚಿಗೆ ಟೀಕಿಸುವುದನಾವಶ್ಯಕ. ಕಾಂಗ್ರೆಸ್ ಮಂತ್ರಿಗಳೂ, ಅವರ ಕಾರ್ಯದರ್ಶಿಗಳೂ ಹಳ್ಳಿಗಳಿಗೆ ಬಂದು ಅಲ್ಲಿ ನಿಜ ಸ್ಥಿತಿಯನ್ನು ಅಧಿಕಾರೇತರರಿಂದ ತಿಳಿದರೆ ಅವರಿಗೆ ಜ್ಞಾನೋದಯವಾಗುವುದರಲ್ಲಿ ಸಂಶಯವೇ ಇಲ್ಲ. ಅನೇಕ ಸಂದರ್ಭಗಳಲ್ಲಿ ಯಾವ ತಪ್ಪಿತಸ್ಥರ ಮೇಲೆ ಮೇಲಧಿಕಾರಿಗಳಿಗೆ ಅರ್ಜಿ ಇಡಲಾಗುವುದೋ ಮತ್ತೆ ಆ ಅರ್ಜಿಗಳು ವಿಚಾರಣೆಗಾಗಿ ತಪ್ಪಿತಸ್ಥ ಅಧಿಕಾರಿಗಳಿಗೇ ಬರುತ್ತವೆ. ಅವರು ಕೊಟ್ಟ ಹೇಳಿಕೆಯೇ ನ್ಯಾಯವೆಂದು ಮೇಲಧಿಕಾರಿಗಳು ನಂಬಿ ಅರ್ಜಿದಾರರ ಆವಾಜನೆಯು ವ್ಯರ್ಥವಾಗುತ್ತದೆ. ಇದು ಹೋಗಬೇಕು. ಕೆಲಸಾಮಾನ್ಯ ನಿಯಮಗಳನ್ನು ರಹಸವಾಗಿ ಪಾಲಿಸಿದರೆ ಮಾತ್ರ ಅನ್ಯಾಯಗಳ ಅಂತವಾದೀತು. ಇದನ್ನು ತಿಳಿಯದೆ ಹೋದರೆ ಹೇಗೆ? ಪ್ರಾಂತೀಯ ಅಧಿಕಾರೀ ಶಾಖೆಗಳಲ್ಲಿನ ಮುಖ್ಯರ ಅಜಾಗರೂಕತೆ, ಔದಾಸೀನ್ಯಗಳಿಂದ ಜಿಲ್ಲಾಧಿಕಾರಿಗಳೂ ಕೆಡುವರು. ಈ ಕಾರಣ ಮಂತ್ರಿಗಳೆಲ್ಲ ಜಿಗ್ಯ ವಿರಬೇಕು. ಇನ್ನೊಂದು ವಿಷಯ, ಅವರ ಗಮನಕ್ಕೆ ಬಂದ ಅತಿಮುಖ್ಯ ಅಂಶಗಳ ವಿಚಾರಣೆಗೆ ತಿಂಗಳುಗಟ್ಟಲೆ ತೆಗೆದುಕೊಳ್ಳಬಾರದು. ಶೀಘ್ರವಾಗಿ ಇತ್ಯರ್ಥ ಮಾಡಬೇಕು. ಸರ್ಕಾರವು ನಿಷ್ಪಕ್ಷಪಾತ ದೃಷ್ಟಿಯಿಂದ, ನಿರ್ದಾಕ್ಷಿಣ್ಯವಾಗಿ ವರ್ತಿಸುವದೆಂದು ಗೊತ್ತಾದಾಗ ಸತ್ಯವಾದೀ ಪ್ರಜೆಗಳ ಸಹಕಾರವು ದೊರೆಯುವುದು.

ಹುಬ್ಬಳ್ಳಿ ಭಾರತಗಿರಣಿ ಕೂಲಿಕಾರರೇ ಗಂಗೆತ್ತುಗಳಾಗಬೇಡಿರಿ.

ಪ್ರಿಯಬಂಧುಗಳೇ! ಎಲ್ಲಾ ಕೂಲಿಕಾರ ವರ್ಗದವರೇ

ಹುಬ್ಬಳ್ಳಿ ಭಾರತ ಗಿರಣಿ ಕಾಮುಗಾರರಲ್ಲಿ ನಾನು ಒಬ್ಬ ಹಳೇಕಾಮುಗಾರನಾಗಿರುವದರಿಂದ ತ ಮ ಗೆ ಸೂಚಿಸುವ ದೇನಂದರೆ, ನಿಮಗೆ ಸರಿತೋರಿದ ಹಕ್ಕಿಗಾಗಿ ಪ್ರಯೋಗಿಸಿ ರುವ ಸಂಪು ಯಶಸ್ಸು ಆಗಲೆಂದು ಹಾರೈಸುತ್ತೇನೆ.

ಸದ್ಯದ ಸಂಪು ಯೋಗ್ಯವಾದದ್ದಲ್ಲೆಂದು ಹೇಳುತ್ತಿರುವ ವರು ಮತ್ತು ಇತರ ಸಹದ್ಯೋಗಿಗಳು ಎಂಥವರೆನ್ನುವದು ರಾಮದುರ್ಗ ಸಂಸ್ಥಾನದೆಲ್ಲಿನ ದುರ್ಘನೆಯ ಕಾಲದಿಂದ ಇಲ್ಲಿಯವರಿಗು ನಡೆದ ಇತಿಹಾಸವನ್ನು ಕಾಮುಗಾರರಾದ ನಾವು ವಿಶಾಲದೃಷ್ಟಿಯಿಂದ ತಿಳಿದುಕೊಳ್ಳುವದು ನಮ್ಮ ಕರ್ತವ್ಯ ಇವರುಗಿರಣಿ ಒಡೆಯರಬಗಲು ಕೂ ನ್ನುವದು ನಿಮಗೆ ತಿಳಿದಿರ ಲು ಸಾಕು. ಇಂಥವರೊವಗೂಡಿ ಸ್ಥಾಪಿಸಿರುವ ಗಿರಣಿ ನುಜ್ಜೂರ ಸಂಘದಿಂದ ಯಾವ ಕಾಮುಗಾರನಿಗೆ ಸೌಖ್ಯವಾಗುವದಿಲ್ಲೆಂದು ನನ್ನ ನಿಚಾರ. ಅನೇಕ ವರ್ಷಗಳಿಂದ ಅನೇಕ ತರದ ಜಾಲ ಗಳನ್ನೊಡ್ಡಿ ೫೦ ವರ್ಷಗಳಿಂದ ಹುಬ್ಬಳ್ಳಿ ಭಾರತ ಗಿರಣಿಯಲ್ಲಿ ಕೆಲಸಮಾಡಿದ ಕಾಮುಗಾರರನ್ನು ದೇಶಾಂತರ ತಿರುಗುವಂತೆಮಾ ಡಿದ ಕಪಟವೇ ಪಥಾರಿಗಳನ್ನು ಇನ್ನೆಂತು ನಂಬುವದು? ಇಲ್ಲಿ ಯವರಿಗು ಸ್ವತಃ ಕಷ್ಟ ಪಟ್ಟ ಕಾಮುಗಾರರಿಗೆ ದೊರೆಯುವ ಮತ್ತು ದೊರೆತರುವ ಫಲವನ್ನು ಈ ಮೊದಲೇ ತಿಳಿಸಿರುವ ಧುರೀಣರಿಗಳು ಅನುಭವಿಸಬೇಕೆಂಬ ಯೋಜನೆಯಿಂದ ಈ ತರದ ಚದರಂಗದಾಟ ಹೂಡಿರುತ್ತಾರೆ, ಇಂಥಾ ಜೊಳ್ಳು ಶಾಸ್ತ್ರ ಗಳನ್ನು ಕೇಳುವ ಕಾಲ ಹಿಂದಾಯಿತು. ಇವನ್ನರಿಯದವರಿಂದ ಸಂಪೂರ್ಣ ಅರಿತ ಕಾಮುಗಾರರಿಗೆ ಉಪದೇಶಿಸುವದು ಮತ್ತು ಜಾಹಿರಾತ ಪಡೆಯುವದು ಬಹಳ ನಾಚಿಕೆಗೇಡಿತನ

ಬಂಧುಗಳೇ ಇತ್ತೀಚೆಗೆ ಗಂಗತ್ತಿನಂತೆ ಎರಡುಕಡೆ ಗೋಣು ಹಾಕುವರು ಕಲಿಯುವದೇ ಮತ್ತು ಬೆಳ್ಳಗಿರುವದೆಲ್ಲ ಹಾಲೆಂದು ಕರಿಯುವ ಸಾರಸಾರ ನಿಚಾರವನ್ನಾಡಿ ನಿಷ್ಕೂರ್ತಭಾ ವದಿಂದಲು, ಸತ್ಯ ಅಹಿಂಸೆ ಇಂದಲು ಹೋರಾಡುವದು ಕಲಿ ಯಿರಿ.

ಮ. ಗಾಂಧೀಯವರು ಬಿತ್ತಿರುವ ಅಹಿಂಸೆ ಎಂಬ ಶಸ್ತ್ರದಿಂದಲೇ ಪರಕೀಯರು (ಬಿಳಿಯರು) ನಮ್ಮ ದೇಶ ದಿಂದ ಕಾಲು ತೆಗಿಯಲಿಕ್ಕೆ ಒಪ್ಪಿರುವರು. ಅದರಂತೆ ನೀವಾ ವರು ಅಹಿಂಸೆ ಎಂಬ ಶಸ್ತ್ರ ದಿಂದ ಬಂಡವಾಳಗಾರರನ್ನು, ಸ್ವಾರ್ಥಸಾಧಕರನ್ನು ನಿರ್ಮೂಲ ಗೊಳಿಸಲಿಕ್ಕೆ ಇದು ಒಂದೇಲು ಪಾಯ ಆದಕಾರಣ ಈ ಹೋರಾಟವನ್ನು ಶಾಂತಿಯಿಂದ ಆಚ ರಿಸಿರಿ. ನಿಮ್ಮ ಕಾರ್ಯಕ್ಕೆ ವಿಘ್ನಗಳನ್ನೊಡುವದಲ್ಲದೆ, ನೀವರು ಶಾಂತತಾ ಭಂಗಮಾಡಿ ಈ ಆರೋಪ ನಿಮ್ಮ ಮೇಲೆ ಹೇರಲಿಕ್ಕೆ ಸಹ ತಯಾರಾಗಬಹುದೆಂದು ನನ್ನ ಹಿಂದಿನ ಅನುಭವ ದಯ ಮಾಡಿ ಎಚ್ಚರದಿಂದಿರಿ. ಅಹಿಂಸತ್ವವನ್ನು ಸೆಕ್ರೆಟರಿಯವರಾದ ಶ್ರೀ ಎಸ್. ಬಿ. ಹಿರೇಮಠರು ಒಂದುವೇಳೆ ಒಪ್ಪದಿದ್ದರೆ ಕಾಮುಗಾರರು ಸ್ವತಃ ಇ ದ ನ್ನು ಪಾಲಿಸುವದಕ್ಕೆ ವಿನಂತಿಸಿ ಕೊಳ್ಳಿರಿ.

ಶ್ರೀ ದೇವಪ್ಪೂರರು ಸದ್ಯದ ಎರಡು ಬೇಡಿಕೆಗಳು ಮಹ ತ್ವದವಲ್ಲೆಂದು ಸಂ. ಕ[illegible]ಳ ನೇ ದಿನಾಂಕದಲ್ಲಿ ಜಾಹೀರಾತ ಪಡಿಸಿರುವರು, ಆದರೆ ಅಂಥಾ ಅಲ್ಪ ಬೇಡಿಕೆಗಳಿಗಾಗಿ ಗಿರಣಿ ಒಡೆಯರು ಸಮ್ಮತಿಸದೆ ನಿಕೋಪಕ್ಕೆ ತಂದು ನಿಲ್ಲಿಸಿರುವ ಕಾರಣ ವೇನು? ಇದು ಯಾರ ತಪ್ಪು? ತಪ್ಪುಗಾರರನ್ನು ಜರಿಯದೇ ಒಪ್ಪುಳ್ಳವರನ್ನು ಟೀಕಿಸಿ ಈ ಎರಡು ಪಂಗಡಗಳ ಮಧ್ಯದಲ್ಲಿ ಸ್ವಾರ್ಥಿಗಳು ನಟನೆಮಾಡಿ ತಮ್ಮ ಬೊಜ್ಜು ಬೆಳಿಸಿಕೊಳ್ಳುವ ಗೋಜಿಗೆ ಹೋಗದೆ ಇನ್ನಾದರು ಸ್ವಚ್ಛವಾಗಿರಬೇಕೆಂದು ಪ್ರಾ ರ್ಥಿಸುವೆ.

ಹಳೇಕಾಮುಗಾರ,
ಶ್ಯಾಮಸುಂದರ ಚೇಳ್ಳಗುರ್ಕಿ

ಮಹಾತ್ಮಗಾಂಧಿ.

ಮಹಾತ್ಮಗಾಂಧಿಯವರ ಶಾಂತಿಸಂಚಾರವು ನವಖಾಲಿ ಜಿಲ್ಲೆಯಲ್ಲಿ ಹಾಗೆಯೇಸಾಗಿದೆ ನಿತೋಂಧಿಯಲ್ಲಿ ಮುಸಲ್ಮಾನರು ಹಿಂದುಗಳನ್ನು ಸಂರಕ್ಷಿಸುವನೆಂದು ಮಹಾತ್ಮಗಾಂಧಿಯವರಿಗೆ ಬರೆದುಕೊಟ್ಟರು. ಹಿಂದೂ-ಮುಸಲ್ಮಾನ್ ಸ್ನೇಹದ ಪ್ರಥಮ ಘಟನೆಯಿದು ಗಾಂಧೀಜಿಯವರ ಮುಸಲ್ಮಾನ್ ಶಿಷ್ಯಳಾದ ಅಮ್ತುನ್ ಸಲಾಂರವರು, ೩೫ ದಿನದ ಉಪವಾಸದನಂತರ ಅದನ್ನು ಕೊಂಕಿಗಾಣಿಸಿದರು.

ಭೈರವನತಿಪ್ಪ ಯೋಜನೆ.

(Bhyravanathippa Project)

ಕಲ್ಯಾಣದುರ್ಗ, ರಾಯದುರ್ಗ ತಾಲೂಕು ರೈತರಪರ ವಾಗಿ ಶ್ರೀ ಕೆ. ಯಲ್. ನರಸಿಂಗರಾಯರು ಮದ್ರಾಸ್ ಅಭಿವೃದ್ಧಿ ಖಾತೆಯ ಮಂತ್ರಿಗಳಿಗೆ ೩೧ ನೆಯ ದಿನಾಂಕ ಒಂದು ವಿಜ್ಞಪ್ತಿಯನ್ನರ್ಪಿಸಿ, ಈ ಯೋಜನೆಯನ್ನು ಶೀಘ್ರವಾಗಿ ಮುಗಿಸಲು ಕೇಳಿಕೊಂಡರು. ಅಲ್ಲದೆ ಕಲ್ಲುಗೋಡು ನೀರಾ ವರಿ ಕಾಲುವೆಯ ರಿಪೇರಿಮಾಡಲು ಸೂಚಿಸಿದರು. ಮಂತ್ರಿಗಳು ಅಲೋಚಿಸುವುದಾಗಿ ಹೇಳಿದರು.

Address delivered by The Hon'ble Shri. T. S. AVINASHILINGAM CHETTIAR Minister for Education at The Provincial Labour School Teachers' Conference held at VELLORE on 19th January, 1947.

Let me thank you for your kindly inviting me to open this conference. I am glad to get this opportunity of coming into contact with workers who are mostly employed in raising the status of a community in the unlift of which all of us are deeply interested. Before touching upon some of the aspects of our work in that direction, you would expect me to say just a few words about the revision of salaries to which you have been looking forward. The lower-paid officials among the Government servants as well as others have been deeply hit by the large rise in prices. The dearness allowance though good in itself has not helped them to get over their difficulties. There has been a feeling that the basic salaries shou d be raised. The Government have been giving their earnest and deep consideration in the matter. Consistent with their finances, they have gone to the maximum extent possible in the revision of salaries of their lower-paid servants It is the policy of this Government that the lower-paid services must be given a great deal of scope reaching higher rungs in the ladder. This scope they have tried to give in the many branches of their services. For the present, we are concerned only with the Education Department. The present salaries of the higher grade teachers is between 20-30 This has been raised for those who know craft to 30-55 It is not the intention of the Government that these higher grade teachers should remain higher grade teachers all their life. Opportunities have been provided to them to pass the S S.L C as well as the secondary grade training examinations so that they can have the opportunity of getting into that cadre.

The secondary grade itself has been started with Rs. 45 for those who know craft and they can raise up to Rs. 75 as against the present 31-55. You will appreciate the considerable enahancement of the salaries that has been made. In addition the Government have provided further scope to the secondary grade teachers. It is the intention of the Government to take a large number of secondary grade teachers from all managements as Junior Deputy Inspectors whose pay has been revised to Rs. 6 -120 and so, it is possible for a good and deligent higher grade teacher who continuously qualified himself and proves efficient to rise up to 120.

So far as L.Ts. are concerned, those with craft in Government service start with 85 and go up to

240. The selection to the first grade which was previously confined to 20 per cent has been enhanced to 33⅓ so that all normally efficient men can reach the maximum 240 without difficulty, and over above that they have got the scope of becoming D. E. Os. and Divisional Inspectors which are some of the highest posts in the Education Department.

Large increases have also been given to the local board teachers and grants to elementary schools have also been substantially increased. One great innovation has been made in the matter of giving grants to aided elementary schools. Till sometime back, grant to the aided higher elementary school teacher was only Rs. 14 and the secondary grade teacher only Rs. 18. Irrespective of the number of years of service of the teacher, he continued to get the same grant but in the present revision, not only has their grant been raised to 20 and 25 respectively but also they have been put on a definite time-scale. Another important concession has been given to the elementary school teachers and that is, a special allowance to the headmasters of elementary schools.

As far as the aided secondary schools are concerned, while the Government have advised the managements to give the local board scale of salaries to the teacher, they have come forward to pay on their side, half of the net cost on the basis of local board scales and expect the management to fulfil their obligation of paying the other half. So, it will be seen that the Government have gone a long way in improving the status of the teachers in the elementary and the secondary schools. The recent revision of salaries has cost the Government nearly 2½ crores and a large portion of this is accounted for by the Education Department itself.

The Government have tried to do their best for the teachers and they expect the teachers to do their part well and truly. It is unfortunate that there is a great deal of complaints of inefficiency and indifference in the working of our elementary schools. Unless we can satisfy the public that we are doing out part of the work sincerely, efficiently and well, it will be impossible for us to get their sympathy and consent to raise the status of the teacher. It is my earnest request that all of you should, with a sense of service and missionary zeal, put your shoulders to the wheel and contribute your best towards the education of our children.

It is the intention of the Government to raise the status of the teachers in all other possible ways also, but the real status of any person is raised not by others but by his own character, sincerity and service. And so, as one

of you and a brother in profession for nearly twenty years, I would earnestly beg of you to adopt in your own lives higher standards of purity and service so that the status of the teacher can be permanently raised. God willing, it is the object of this Government to create a type of education which will make our boys and girls manly, strong and fearless and for that purpose the teachers however humbly pleased, must carry with them ideals of purity service and fearlessness in their own lives. That is the surest way of raising our status in the eyes of the public. I would appeal to you in the name of this great country and in the name of the glorious future that we have to build for our great country and our children, to put forth your best efforts to this end.

ಹಳ್ಳಿಗಳಲ್ಲಿ ಆಹಾರ ಧಾನ್ಯಗಳ ಹಂಚುವಿಕೆಯ ಅವ್ಯವಸ್ಥೆ

(ಜೆ. ಹೆಚ್. ಆಚಾರ್ಯ—ಕಾರ್ಯದರ್ಶಿ. ವ್ಯವಸಾಯ ಸಂಘ ಸಜ್ಜೊಳ್ಳಿ)

ಹಳ್ಳಿಗಳ ರೇಷನ್ ವಿಧಾನವು ಬಹಳ ಲೋಪ ಭೂಯಿಷ್ಠವಾಗಿದ್ದು ಗ್ರಾಮೋದ್ಯೋಗಿಗಳು ಬರೆದು ಕೊಟ್ಟ ಎ. ಬಿ. ಸಿ. ತರಗತಿಯ ಪಟ್ಟಿಗಳ ಗೊಂದಲದಿಂದ ಹಳ್ಳಿಗರಿಗೆ ಕಷ್ಟವಾಗಿದೆ. ಹಳ್ಳಿಗಳಲ್ಲಿ ಕಾರ್ಡುಗಳ ಹಂಚುವಿಕೆಯಿಲ್ಲದೆ ಡೀಲರು ತನಗೆ ಬೇಕಾದ ಕೆಲವರಿಗೆ ಕೊಟ್ಟು ಲೆಕ್ಕದ ಪುಸ್ತಕದಲ್ಲಿ ಬಟ್ಟಾಡ ನೂಡಿದಂತೆ ಬರೆದುಕೊಂಡು ಅತಿಶಯ ಕಳ್ಳ ಪೇಟೆಗೆ ಕಾರಣವಾಗಿದೆ. ಸಾಕಷ್ಟು ಪ್ರತಿಭೆ ಇಲ್ಲದವರಿಗೆ ಅಕ್ಕಿ, ಎಣ್ಣೆ, ಸಕ್ಕರೆ ಸಿಗುವಂತಿಲ್ಲ. ಮದ್ರಾಸ್ ಸರ್ಕಾರದ ಕಂಟ್ರೋಲ್ ಪದ್ಧತಿಯಿಂದ ವ್ಯಾಪಾರಿಗಳಿಗೂ, ಉದ್ಯೋಗಿಗಳಿಗೂ ಲಾಭವಾಗುತ್ತಲಿದೆ. ಬೆಲ್ಲದ ಉದಾಹರಣೆಯೊಂದೇ ಸಾಕು. ಸರಕಾರದ ನಿಯಮಗಳೆಷ್ಟೇ ಕಠಿಣವಿರಲಿ. ಅವುಗಳನ್ನು ತಲೆ ಕೆಳಗೆ ಮಾಡುವ ಚತುರರಿದ್ದಾರೆ. ನಿಯಂತ್ರಿತ ಧಾರಣೆಯು ಪಟ್ಟಿಯಲ್ಲಿ ಮಾತ್ರ ನಮೂದಾಗುತ್ತದೆ. ಅದರೆ ಕೈಲಿಂದ ಕೊಡಬೇಕಾದುದು ಡಬಲ್. ಕೊಳ್ಳುವವರು ತೆರಬೇಕಾದ ನಷ್ಟವು ಅಷ್ಟಿಷ್ಟಲ್ಲ. ಅನೇಕ ಸಲ ಉತ್ಪಾದಕರು ಕಂಟ್ರೋಲ್ ಧಾರಣೆಯಿಂದ ವರ್ತಕರಿಗೆ ಮೂರಬೇಕಾದ ವಸ್ತುವು ಮಾಗುತ್ತದೆ. ಅಭಾವದ ಪರಿಸ್ಥಿತಿಯಲ್ಲಿ ಕಂಟ್ರೋಲ್ ಅಜ್ಞೆಗಳು ಅಮಲಿನಲ್ಲಿ ಬರುವುದೇ ಕಠಿಣ ಇದಕ್ಕಾಗಿ ಎಲ್ಲರೂ ಸಹಕರಿಸಬೇಕು. ಸುಧಾರಕರೂ, ಕಾಂಗ್ರೆಸ್‌ನವರೂ ಇಲ್ಲಿಗೇ ಟಿಗೆ ಕಾರಣರಾದವರ ಮತ್ತು ಕಾರಣವಾದಂಶಗಳನ್ನು ಕುರಿತು ತಮ್ಮ ನಿಶ್ಚಯಾಭಿಪ್ರಾಯವನ್ನು ಸ್ಥಾನಿಕ ಪರಿಸ್ಥಿತಿಯನ್ನವಲಕ್ಷಿಸಿ ಸರ್ಕಾರಕ್ಕೆ ವರದಿ ಮಾಡುತ್ತಿರಬೇಕು. ಅನೇಕ ಹಳ್ಳಿಗಳಲ್ಲಿ ಕೊಂತೆ ಸರಕಿಗೆ ಬಿಲ್ ಕೊಡುವ ಪದ್ಧತಿಯೇ ಇಲ್ಲ ಧಾರಣೆ ತಿಳಿಸುವ ಬೋರ್ಡುಗಳೂ ಇಲ್ಲ. ನಿಸ್ವಾರ್ಥ ಬುದ್ಧಿಯ ಸಮಾಜ ಸೇವಕರು ಅಲ್ಲಲ್ಲಿ ಹುಟ್ಟುವವರೆಗೆ ಈ ಅವ್ಯವಸ್ಥೆಯು ಹೇಗೆ ಸರಿಯೂದೀತು? ಪತ್ರಿಕಾ ಕರ್ತರಿಂದ ನಿಜಾಂಶಗಳ ಪ್ರಕಟನೆಗೆ ಬಹಳ ಸಹಾಯವಾಗುತ್ತದೆ. ಪ್ರಜಾ ಸರ್ಕಾರದವರು ಹಳ್ಳಿಗಳಲ್ಲಿ ಆಹಾರ ಧಾನ್ಯ ಎಣ್ಣೆಗಳ ಹಂಚುವಿಕೆಗೆ ಸಕ್ರಮ ಮತ್ತು ನ್ಯಾಯಪದ್ಧತಿಗಳನ್ನು ಅಮಲಿನಲ್ಲಿ ತರಲೇಬೇಕು.

ಹಬ್ಬೊಳ್ಳಿಯಲ್ಲಿ ಇಷ್ಟರಲ್ಲಿ ರೇಷನಿಂಗ್ ಜಾರಿಯಲ್ಲಿದೆ. ಜನಗಣನೆಯ ಫಿಕ್ಸ್ ಸಪ್ಲೈ ಅಧಿಕಾರಿಗಳ, ಗ್ರಾಮೋದ್ಯೋಗಿಗಳ ಅಭಿನುತದಿಂದಾಗಿ ಮುಖ್ಯರಾದ ಕೆಲವರಿಗೆ ಮಾತ್ರ 6 ಔನ್ಸ್ ಅಕ್ಕಿ ಕೊಡಲಾಗುತ್ತಲಿದೆ. ಮೆಕ್ಕೆ ಜೋಳ ಇತರ ಧಾನ್ಯ ಲೆಕ್ಕಗಳಲ್ಲಿ ಬರೆದುಕೊಳ್ಳುತ್ತಿಯವರು ಡೀಲರ್‌ಗಳ ಲೋಪಗಳನ್ನೆಲ್ಲಾ ಮುಚ್ಚಲು F.S.O. ರು ಸಂತೋಷದಿಂದ ಸಿದ್ಧರಿರುತ್ತಾರೆ ಸೈಕಲಿಗೆ ಭಯ, ಗಲಾಟೆ ನಡೆದರೆ ಸಿಪ್ಪೆಲ್ಲಿ ಕಾಲಿಯೆಂದು ಸಪ್ಲೈ ನಿಲ್ಲಿಸಿ ಬಿಡುತ್ತಾರೆ ಎಲ್ಲಾ ಕಡೆಯಲ್ಲೂ ಅಕ್ಕಿಯ ಸೀದಾ 8ರಿಂದ 10 ಔನ್ಸಿಗೆ ಹೆಚ್ಚಿರುವಾಗ ನಮ್ಮಲ್ಲಿ 6 ಔನ್ಸ್ ಸಿಗಿಳಿದಿದೆ. ನಾವು ಮೇಲಧಿಕಾರಿಗಳಿಗೆ ಬರೆದು ಕೊಂಡಿದ್ದೇವೆ. ನಮ್ಮ ಗೋಳಿನ ಕಥೆಯು ಪ್ರಕಾಶಕ್ಕೆ ಬರುವುದೇಕಷ್ಟ. ಪತ್ರಿಕಾ ಕರ್ತರೇ ನಮ್ಮನ್ನು ಕಾಪಾಡಬೇಕು.

ಜಾತೀಯತೆ

(ಸ್ವಗತದ ಗೊಣಗು:—ವೆಂಕೋಬ)

ಅಂತರ್ರಾಷ್ಟ್ರೀಯ ಪ್ರಪಂಚದಲ್ಲಿ ಕಪ್ಪು ಬಿಳಿ ವರ್ಣ ಭೇದವಿದ್ದರೆ- ನಮ್ಮಲ್ಲಿ ಹಿಂದೂ- ಮುಸ್ಲಿಂವಿಭೇದ ಮತಾಂತರ ಹೊಂದಿ ಬೇರೆ ಹೆಸರಿಟ್ಟುಕೊಂಡರೆ ನೋಡಿ, ಅವನ ಸಂಸ್ಕೃತಿಯೇ ಬೇರೆಯಾಗಿ- ಪ್ರತ್ಯೇಕಜನಾಂಗ (Separate Nation) ದಲ್ಲಿ ಸಮ್ಮಿಳಿತನಾಗುವನಂತೆ. ಭಾರತದಲ್ಲಿ ಹಿಂದೂಧರ್ಮದಲ್ಲಿ ಅನೇಕ ಪಂಗಡಗಳಿದ್ದು ನಮ್ಮಕ್ಷೇತ್ರದಲ್ಲಿ ಎದುರಿಸಬೇಕಾದ ಸಮಸ್ಯೆಯೆಂದರೆ **ಬ್ರಾಹ್ಮಣ ಬ್ರಾಹ್ಮಣೇತರ.**

ನಮ್ಮವೀರಯ್ಯ ಹೇಳೋದು. ಪ್ರಾಚೀನಕಾಲದಿಂದಲೂ ಬ್ರಾಹ್ಮಣನು ದೇಶದ ರಾಜಕೀಯದಲ್ಲಿ ಭಾಗವಹಿಸಿ, ತನಗನುಕೂಲವಾಗಿ ಸ್ವಾರ್ಥ ದೃಷ್ಟಿಯಿಂದ ವರ್ತಿಸಿರುವನು. ನಾಡಿನ ಗುಲಾಮಗಿರಿಗೆ ಬ್ರಾಹ್ಮಣನು ಕಾರಣ. ಬುದ್ಧನು ಸರ್ವಸಮತ್ವಧರ್ಮವನ್ನುಪದೇಶಿಸಿದಾಗ- ಅವನ ಮೇಲೆ ದಂಗೆಯೆದ್ದು- ಕೊನೆಯಲ್ಲಿ ಬುದ್ಧಧರ್ಮದವರನ್ನು ದೇಶದಿಂದ ಹೊರದೂಡಿಬಿಟ್ಟನರು ಬ್ರಾಹ್ಮಣರೇ! ಮುಸಲ್ಮಾನರೊಡನೆ ಸಹಕರಿಸಿ ಕೆಲಶತಮಾನ ಬ್ರಿಟಿಷರ ಆಳಿಕೆಗೆ ಸಹಾಯನುಮಾಡಿದರು. ರಾಜರಾಜರುಲ್ಲಿ ಜಗಳಗಳನ್ನಿಟ್ಟು ವ್ಯಾಪಾರಕ್ಕೆ ಬಂದ ಇಂಗ್ಲೀಷರನ್ನು ರಾಜರನ್ನಾಗಿ ಮಾಡಿದರು. ಅದರಿಂದ ಅಧಿಕಾರ ಸ್ಥಾನಗಳನ್ನು ಹೊಂದಿ ಈ ೧೫೦ ವರ್ಷಗಳಲ್ಲಿ ತಮ್ಮವರನ್ನೇ ಎಲ್ಲಾ ಶಾಖೆಗಳಲ್ಲೂ ತುಂಬಿದರು. ಈಗ ನಡೆಯುವ ಕಪಟ ನಾಟಕಕ್ಕೆಲ್ಲಾ ಇವರೇ ಕಾರಣರು. ಬ್ರಾಹ್ಮಣನಿಗೆ ಎರಡು ಕಡೆಯ ಆಟ (Double game) ಚನ್ನಾಗಿ ಬರುತ್ತೆ. ಹೊರಗಿನ ಕಳ್ಳನಿಗಿಂತಲೂ, ಮನೆಯ ಕಳ್ಳನು ಹೆಚ್ಚು ಅಪಾಯಕರವಿದ್ದಾನೆ

ನಾನು ಹೇಳೋದು ಇದರಲ್ಲಿ ತಥ್ಯಾಂಶವೂ ಇದೆ ಉತ್ಪ್ರೇಕ್ಷೆಯೂ ಇದೆ ದೇಶದ ದಾಸ್ಯಕ್ಕೆ ಇಲ್ಲಿ ನೆಲೆಸಿರುವ ಸರ್ವರೂ ಕಾರಣರು ದೇಶದ್ರೋಹಿಗಳಾದ ಜಯಚಂದ್ರ ಮೀರಜಾಫರ ಬ್ರಾಹ್ಮಣರಲ್ಲ. ಇಂಗ್ಲೀಷರೊಡನೆ ಯುದ್ಧಹೂಡಿದ ಪೇಷ್ವೆಗಳು, ವಿಜಯನಗರ ರಾಜ್ಯ ಸಂಸ್ಥಾಪಕ ವಿದ್ಯಾರಣ್ಯ ಇವರು ಬ್ರಾಹ್ಮಣರಲ್ಲವೆ? ಸ್ವಾತಂತ್ರ್ಯಸಂಗ್ರಾಮಕ್ಕಾಗಿ ಅಣಿಮಾಡಿದ ಅಣಿಮಾಡುತ್ತಿರುವ ಬೋಸ್, ಜವಹರಲಾಲ್ ಯಾರು? ದಾಸ್ಯಕ್ಕೆ ಸಹಾಯನುಮಾಡಿದ, ವಿಮೋಚನೆಗಾಗಿ ಯತ್ನಿಸಿದವರು ಎಲ್ಲಾ ಜನಾಂಗಗಳಲ್ಲಿಯೂ ಇದ್ದಾರೆ. ಇದಕ್ಕಾಗಿ ಒಂದೇ ಜನಾಂಗವನ್ನು ದೂಷಿಸುವ ಪ್ರವೃತ್ತಿಯು ಅಪೂರದರ್ಶಿತ್ವದ ಲಕ್ಷಣ—

ಈಗ ಕುಲ- ಕುಲಗಳಲ್ಲಿ ಭೇದದ ಕಟ್ಟು ಸಡಿಲವಾಗಿ ಹೋಗಿ ಸಮಾಜ ವ್ಯವಹಾರವು ಸುಗಮವೂ ಸರಳವೂ ಆಗಿದೆ. ಸರಕಾರಿ ನೌಕರಿ, ವ್ಯಾಪಾರ, ಬ್ಲಾಕ್ ಮಾರ್ಕೆಟ್ ಲಂಚಗಳಲ್ಲಿ ತೊಡಗಿರುವವರು ಬ್ರಾಹ್ಮಣರೂ ಇದ್ದಾರೆ. ಬ್ರಾಹ್ಮಣೇತರರೂ ಇದ್ದಾರೆ ಭಾರತಮಾತೆಯ ವಿಶಾಲ ವೃಕ್ಷದಲ್ಲಿ ವಿವಿಧ ಧರ್ಮಗಳು ಶಾಖೆಗಳಿದ್ದಂತೆ- ಭಗವಂತನಿಗೆ ಅನೇಕ ನಾಮಗಳಿದ್ದರೂ, ಎಲ್ಲಾ ಧರ್ಮಗಳವರ ಭಗವಂತನೂ ಒಬ್ಬನೇ. ಒಳ್ಳೆಯ- ಕೆಟ್ಟಕಾರ್ಯಗಳು ಯಾವ ಜಾತಿಯನರಿಂದ ಆಗಲಿ ಮಾನಾಪಮಾನಗಳಾಗುತ್ತವೆ. ಮೂಲತಃ ಇಂಥಾ ಜಗಳವಾಡಬೇಕು. ನೌಖಾಲಿ ಅತ್ಯಾಚಾರ ಹಿಂದೂ ಸ್ತ್ರೀಯರ ಮಾನಭಂಗ ಜ್ಞಾಪಿಸಿಕೊಂಡರೆ ಎಲ್ಲವನ್ನೂ ಮರೆಯಬೇಕಾಗುತ್ತದೆ. ದೇಶದ ಯಾವ ಭಾಗದಲ್ಲಿ ಏನಾದರೂ ದೇಶಾದ್ಯಂತವೂ ಅದರ ಪರಿಣಾಮವಾಗುತ್ತದೆ. ನಮ್ಮನಮ್ಮ ಜಗಳವು ಭಾರತಮಾತೆಯ ಶರೀರವನ್ನಿರಿದಂತೆ ಎಂದುಭಾವಿಸಿ ದೇಶದಸ್ವಾತಂತ್ರ್ಯಕ್ಕಾಗಿ ಎಲ್ಲರೂ ಹೋರಾಡೋಣ.

ಹಿಂದೂ-ಮುಸಲ್ಮಾನ ಸೌಹಾರ್ದಕ್ಕಾಗಿ ಗಡಿನಾಡ ಗಾಂಧೀಯನೆಂದೆನಿಸಿಕೊಂಡ ಖಾನ ಅಬ್ದುಲ್ ಗಫರಖಾನರು- ತಮ್ಮ ಅನುಯಾಯಿಗಳೊಂದಿಗೆ ಬೀಹಾರಿನ ಸಂತ್ರಸ್ತ ಪ್ರದೇಶಗಳಲ್ಲಿ ಸಂಚಾರವನ್ನಾರಂಭಿಸಿರುವರು.

ಮದ್ರಾಸ್ ಪ್ರಾಂತೀಯ

3. ನೆಯ ಲೇಬರ ಶಾಲೋಪಾಧ್ಯಾಯರ ಸಭೆ

ಈ ಸಭೆಯು ಜನವರಿ 18, 19 ನೆಯ ದಿನಾಂಕ ಉತ್ತರ ಆರ್ಕಾಟು ಜಿಲ್ಲೆಯ ವೆಲ್ಲೂರಲ್ಲಿ — ಮುಖ್ಯ ಪ್ರಧಾನ ಮಂತ್ರಿಗಳಾದ ಶ್ರೀ ಪ್ರಕಾಶಂರವರ ಪಾರ್ಲಿಮೆಂಟರಿ ಕಾರ್ಯದರ್ಶಿಗಳಾದ ಶ್ರೀ ವಿ. ರಾಘವಯ್ಯನವರ ಅಧ್ಯಕ್ಷತೆಯಲ್ಲಿ ಸೇರಿದ್ದಿತು. ಈ ಸಭೆಯ ಪ್ರಾರಂಭೋತ್ಸವವನ್ನು ಮದ್ರಾಸ್ ವಿದ್ಯಾಖಾತೆಯ ಮಂತ್ರಿಗಳಾದ ಶ್ರೀ ಟಿ. ಯಸ್. ಅವಿನಾಶಿಲಿಂಗಂ ಶೆಟ್ಟಿಯವರು ನೆರವೇರಿಸಿದರು. " ಹಿಂದುಳಿದವರ ವಿದ್ಯಾಭ್ಯಾಸದಲ್ಲಿ ಆಸಕ್ತರಾದ ನಿಮ್ಮೀಥಹವರೊಡನೆ ನನ್ನ ಸಂಬಂಧವನ್ನು ಬೆಳೆಸಿಕೊಳ್ಳಲು ನೀವು ಅವಕಾಶಕೊಟ್ಟಿದ್ದಕ್ಕಾಗಿ ನನಗೆ ಬಹಳ ಸಂತೋಷವಾಗಿದೆ ಕಡಮೆ ಸಂಬಳದ ನೌಕರರನ್ನೆಲ್ಲಾ ತೃಪ್ತರಾಗಿಟ್ಟು ಅವರ ದರ್ಜೆ– ಸಂಬಳಗಳನ್ನು ಹೆಚ್ಚಿಸುವುದೇ ನಮ್ಮ ಧ್ಯೇಯವಾಗಿರುವುದೆಂಬುದನ್ನು ನೀವು ಬಲ್ಲಿರಿ. ಹೈಯರ್‌ಗ್ರೇಡ ಅದವರು ಅದರಲ್ಲೇ ಕೊಳೆಯಬೇಕೆಂಬುದು ನಮ್ಮ ಇಚ್ಛೆಯಲ್ಲ. ಅವರು S. S. L. C. ಪಾಸುಮಾಡಬೇಕು. ಸೆಕಂಡರಿ ಪಾಸುನೂಡಬೇಕು. ಅವರಿಗೆ 45 ರಿಂದ 75 ರವರೆಗೆ ಸಂಬಳ ಕೊಡಲಾಗುವುದು, ಇನ್ನುಮೇಲೆ ಜೂನಿಯರ್ ಡೆಪ್ಯುಟಿಇನ್ಸ್ಪೆಕ್ಟರ್ ಆಫ್‌ಸ್ಕೂಲ್ಸ ಇವರನ್ನು ಸೆಕಂಡರಿ ಗ್ರೇಡ್ ಪಾಸ್ ಆದ ಉಪಾಧ್ಯಾಯವರ್ಗದಿಂದಲೇ ಆರಿಸಿ ಅವರಿಗೆ 60 ಇಂದ 120 ವರಿಗೂ ಮಾಸಿಕ ಸಂಬಳ ಕೊಡಲಾಗುವುದು. ಈ ಕಾರಣ ಇಂಥಾ ಅಮೂಲ್ಯ ಸಂಧಿಯನ್ನು ಉಪಾಧ್ಯಾಯರು ಕಳೆದುಕೊಳ್ಳಬಾರದು. L. T. ಪಾಸಾದವರು 85 ರಿಂದ 240 ರವರೆಗೂ ಏರಬಹುದು. ವಿದ್ಯಾಖಾತೆಯಲ್ಲಿ D. E. O. ಮತ್ತು ಡಿವಿಜನಲ್ ಇನ್ಸ್ಪೆಕ್ಟರ್ ಆಗಲು ಬರುತ್ತದೆ. ಗ್ರಾಂಟ್‌ಶಾಲೆ ಬೋರ್ಡುಶಾಲೆಗಳ ಉಪಾಧ್ಯಾಯರ ಸಂಬಳವನ್ನೂ ಹೆಚ್ಚಿಸಿರುತ್ತೇವೆ. ಸರ್ಕಾರದವರು ಉಪಾಧ್ಯಾಯರ ಏಳಿಗೆಗಾಗಿ ಮಾಡಬೇಕಾದುದನ್ನೆಲ್ಲಾ ಮಾಡಿರುವರು. ಇನ್ನು ಉಪಾಧ್ಯಾಯರು ತಮ್ಮ ಕರ್ತವ್ಯವನ್ನು ನೆರವೇರಿಸಿ ಶಾಲೆಗಳನ್ನಭಿವೃದ್ಧಿ ಮಾಡಬೇಕು. ಭಾವೀಜನಾಂಗವಾದ ಮಕ್ಕಳ ಹಿತವನ್ನು ನೀವು ಶ್ರದ್ಧೆಯಿಂದ ಸಾಧಿಸಬೇಕು. ಈ ಸರ್ಕಾರದ ಉದ್ದೇಶವು ಸರಿಯಾದ ವಿದ್ಯಾಭ್ಯಾಸದ ಪ್ರಚಾರದಿಂದ ನಮ್ಮ ಬಾಲಬಾಲೆಯರನ್ನು ದೈಹಿಕ ಮಾನಸಿಕವಾಗಿ ಸುಧೃಢರನ್ನಾಗಿ ಮಾಡುವುದಾಗಿದೆ. ಎಂದು ಸಾರಾಂಶಪೂರ್ವಕವಾಗಿ ಹೇಳಿದರು.

[ಈ ಪತ್ರಿಕೆಯ ಬೇರೊಂದೆಡೆಯಲ್ಲಿ ಇವರ ಭಾಷಣವನ್ನು ಪೂರ್ಣವಾಗಿ ಇಂಗ್ಲೀಷಿನಲ್ಲಿ ಪ್ರಕಟಿಸಿದ್ದೇವೆ]

ಸ್ವಾಗತ ಸಮಿತಿಯ ಪರವಾಗಿ ಈ ಭಾಗದ ಕಾಂಗ್ರೆಸ್ ಪ್ರಮುಖರಲ್ಲೊಬ್ಬರಾದ ಶ್ರೀ ಕಲ್ಯಾಣ ರಾಮಯ್ಯರ್‌ರವರು ಬಂದ ಅತಿಥಿಗಳಿಗೆಲ್ಲಾ ಸ್ವಾಗತ ಕೋರಿ ಉಪಾಧ್ಯಾಯರ ಕಷ್ಟಗಳನ್ನು ನಿವಾರಿಸಬೇಕೆಂದರು. ಅಧ್ಯಕ್ಷರಾದ ಶ್ರೀ ವಿ. ರಾಘವಯ್ಯನವರು ದೀರ್ಘಭಾಷಣವನ್ನು ಕೊಟ್ಟರು. ಅದರ ಸಾರಾಂಶವು ಹೀಗಿದೆ.

"ನಾವು ಮಂತ್ರಿಪರ್ಗವನ್ನು ಸ್ವೀಕರಿಸಿ ಆರು ತಿಂಗಳು ಮಾತ್ರವಾಗಿದೆ. ಅಷ್ಟರೊಳಗಾಗಿ ನಾವು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ೮ ಜಿಲ್ಲೆಗಳಲ್ಲಿ ಮತ್ತು ಪದಾರ್ಥಗಳ ನಿರೋಧದಿಂದ ಸರ್ಕಾರಕ್ಕೆ ಎರಡು ಕೋಟಿ ರೂ, ಗಳ ನಷ್ಟವಾಗಿದೆ ಮತ್ತೆ ೮ ಜಿಲ್ಲಾಗಳಲ್ಲಿ ಪಾನನಿರೋಧವಾಗಬೇಕಾಗಿದೆ. ಸಣ್ಣ ಪುಟ್ಟ ಕೆಲಸಗಳಿಗಾಗಿ ಕಛೇರಿಗಳಿಗೆ ಹೋದರೆ ರೈತರಿಂದ ಲಂಚಾ, ಮೂಮೂಲು ಕೇಳುವ ಅಭ್ಯಾಸವುಳ್ಳ ನಾನ್ ಗೆಜೆಟೆಡ್ ಆಫೇಸರ್ಸ ಎಂಬುವರು ಅಂದೋಳನ ಹೂಡಿ ಕೆಲಸ ಬೀಡುತ್ತೇವೆಂದರು. ಈಗಿನ ಸಮಯುಕ್ಕಿಂತಲೂ ಹೆಚ್ಚು ಕ್ಲಿಷ್ಟಸಮಯದಲ್ಲಿ ಅಂದರೆ ಯುದ್ಧ ಕಾಲದಲ್ಲಿ ತೆಪ್ಪಗೆ ಕುಳಿತಿದ್ದರು. ಈಗ ನಾವು ಬಂದಾಗ ಯಂಥವರೂ ತೊಂದರೆ ಕೊಡಲು ಪ್ರಾರಂಭಿಸಿದ್ದಾರೆ. ಎಲ್ಲರ ಜೀವನ ಮಟ್ಟವೂ ಏರಬೇಕೆಂಬ ಕಾಂಗ್ರೆಸ್ ಸರ್ಕಾರದ ಉದ್ದೇಶವು ಒಂದೇ ದಿನದಲ್ಲಿ

ಹೇಗೆ ಸಾಧಿಸಲಾದೀತು? ಆದರೂ ಸುಮಾರು ೫೦ ಲಕ್ಷಗಳಿಗಿಂತಲೂ ಹೆಚ್ಚು ಖರ್ಚುಮಾಡಿN. G. O. ರಿಗೆ ಸಂಬಳ ಹೆಚ್ಚಿಸಿದೆವು. ಕನ್ಯೂನಿಸ್ಟರೆಂಬ ರಷ್ಯಾ ದೇಶದ ತತ್ವಾನುಯಾಯಿಗಳು ನಮ್ಮ ಸರ್ಕಾರವನ್ನು ಬುಡಮೇಲು ಮಾಡಬೇಕೆಂದು ಇಚ್ಛಿಸಿರುವರು. ನಮ್ಮ ಸರ್ಕಾರವು ಪದಾರೂಢವಾದನಂತರ ನೂರಾರು ಸಂಪು (STRiKES) ಗಳನ್ನು ಹೂಡಲು ಇವರು ಮುಖ್ಯ ಪ್ರೇರಕರಾಗಿದ್ದಾರೆ. ಎಲ್ಲಾ ಕಡೆಯಲ್ಲೂ ಅಭಾವವಿರುವ ಪರಿಸ್ಥಿತಿಯಲ್ಲಿ, ಪ್ರಾಂತೀಯ ಸರ್ಕಾರವು ಭರಿಸಬೇಕಾದ ಖರ್ಚುಗಳೆಷ್ಟೋ ಇವೆ,

ಉಪಾಧ್ಯಾಯರ ವೃತ್ತಿಯು ಸುಧಾರಿಸಬೇಕೆಂದು ನಾವು ನಿಶ್ಚಿತ ದೃಷ್ಟಿಯುಳ್ಳವರಾಗಿದ್ದೇವೆ. ಇತರರಂತೆ ನೀವು ಶಾಶ್ವತಿಕ ಅತುಂತೆಯನ್ನು ಪ್ರಕಟಿಸದಿರುವುದು, ನನಗೆ ಸಂತೋಷದಾಯಿಗಿದೆ. ಕೂತು ಮಲಗಬೇಕು. ಸ್ವಲ್ಪಸ್ವಲ್ಪವಾಗಿ ಸಾಧಿಸಬೇಕು. ನಿಮ್ಮ ಕಲ್ಯಾಣವಾಗುವುದರಲ್ಲಿ ಸಂದೇಹವಿಲ್ಲ. ಎಂದು ಹೇಳಿ ತಮ್ಮ ಅಧ್ಯಕ್ಷ ಭಾಷಣವನ್ನು ಮುಗಿಸಿದರು.

ಪ್ರಾಂತೀಯ ಸಂಘಾಧ್ಯಕ್ಷರಾದ ಶ್ರೀ ಪಿ. ಸಿ. ರೆಡ್ಡಿಯವರು ಹೈಯರ್‌ಗ್ರೇಡ್ ಆದ ಉಪಾಧ್ಯಾಯರಿಗೆ ನೂತನ ವಿಧಾನದಿಂದ ಸಂಬಳವು ಹೆಚ್ಚಿಸಲ್ಪಟ್ಟಿಲ್ಲವೆಂದು ವಿದ್ಯಾಖಾತೆಯ ಮಂತ್ರಿಗಳ ಗಮನವನ್ನೆಳೆದರು. ಅದನ್ನು ಮಂತ್ರಿಗಳು ನೋಟ್ ಮಾಡಿಕೊಂಡರು. ಬಳ್ಳಾರಿ ಲೇಬರ್ ಉಪಾಧ್ಯಾಯರ ಸಂಘದ ಪ್ರತಿನಿಧಿಗಳಾದ ಶ್ರೀ ಟಿ. ಬಿ. ಕೇಶವರಾಯರು ಲೇಬರ್ ಶಾಲೋಪಾಧ್ಯಾಯರಿಗೆ ಕಂಫರ್ಟೇಷನ್, ಇಂಕ್ರಿಮೆಂಟ್, ಜಿ. ಪಿ ಯಫ್- ಸೌಕರ್ಯ ಜಿಲ್ಲೆ ಜಿಲ್ಲೆಗಳಲ್ಲಿರ ವ ವಿವಿಧಶೋಷಗಳನ್ನು ಕುರಿತು ಭಾಷಣಮಾಡಿ ಉಪಾಧ್ಯಾಯರ ಪರಿಸ್ಥಿತಿಯು ಇನ್ನೂ ಸುಧಾರಿಸಿಲ್ಲವೆಂದರು. ತಮಿಳು, ಆಂಧ್ರ, ಕೇರಳ ಪ್ರತಿನಿಧಿಗಳೂ ಕೂಡ ತೀರ್ಮಾನಗಳ ಚರ್ಚೆಯಲ್ಲಿ ಭಾಗವಹಿಸಿದರು.

ತೀರ್ಮಾನಗಳ ಸಾರಾಂಶ:—

(1) ಸರ್ವಿಸ್‌ಗೆ ಸೇರಿದಂದಿನಿಂದ ಎಲ್ಲಾ ಉಪಾಧ್ಯಾಯರನ್ನೂ ಕಾಯಂಮಾಡಿ ಅವರಿಗೆ ಪೇಷ್ ಬರಲು ಸಹಾಯ ಮಾಡಬೇಕು. ಪ್ರೊಬೇಷ್ ಸಮಯವು ಮುಗಿಯಿತೆಂದರೆ ಕಾಯಂ ಮಾಡಲು ಚರ್ಯೆಯನ್ನು ತೆಗೆದುಕೊಳ್ಳಬೇಕು.

(2) ಹೈಯ್ಯರ್‌ಗ್ರೇಡ್ ಉಪಾಧ್ಯಾಯರಿಗೆ ಈಗ ಕೊಟ್ಟಿರುವ ನೂತನ ವಿಧಾನದಿಂದ ೨ ರೂಲುಕ್ಸಾನಾಗುತ್ತದೆ. ಅವರಿಗೆ ತೃಪ್ತಿಕರವಾದ ಸ್ಕೇಲ್ ಪ್ರಕಟಿಸಬೇಕು.

(3) ಇನ್‌ಕ್ರಿಮೆಂಟುಗಳನ್ನು ಸಣ್ಣ ಪುಟ್ಟಕಾರಣಗಳಿಗಾಗಿ ಅನೇಕ ಜಿಲ್ಲೆಗಳಲ್ಲಿ ನಿಲ್ಲಿಸಿಬಿಟ್ಟಿರುವರು. ಶಾಲೆಯಲ್ಲಿ ಸಾಕಷ್ಟು ಹಾಜರಿ ಇಲ್ಲದಿದ್ರೆ ಉಪಾಧ್ಯಾಯರು ಜವಾಬ್ದಾರರೇ? ಇದಕ್ಕೆ ಇತರ ಊರಿನ ಕಾರಣಗಳುಂಟು. ಎಲ್ಲವೂ ಸಹಕರಿಸಬೇಕಾಗುತ್ತೆ. ಈಕಾರಣ ಬರಬೇಕಾದ ಇಂಕ್ರಿಮೆಂಟ್ ಶೀಘ್ರವಾಗಿ ಕೊಡಬೇಕು.

(4) ಸಂಘಕ್ಕೆ ಸರ್ಕಾರವು ಮನ್ನಣೆ (Recognition) ಕೊಡಬೇಕು:

(5) ಟಿ. ಎ. ಕಾಯಂ ಆದವರಿಗೆ ಸಂಬಳದ ರಜಾ ಸೌಕರ್ಯ, ಸಾಕಷ್ಟು ಕಂಟಿಂಜೆನ್ಸಿ ಸ್ಕೇಲ್‌ನಲ್ಲಿ ಹೆಚ್ಚಳ ಮತ್ತು ತಪ್ಪುಗಳ ಸುಧಾರಣ ಶಾಲೋಪಕರಣ ಮುಕ್ತಾಯಕ್ಕೆ ಎಲ್ಲಾ ದಿನಗಳ ಊಟದ ಸೌಕರ್ಯ ಮಗೈರೆ ಕುರಿತು ಸರ್ಕಾರವನ್ನು ಕೇಳಿ ಜಿಲ್ಲಾಧಿಕಾರಿಗಳು ಕೂಡಲೇ ಚರ್ಯೆತೆಗೆದುಕೊಳ್ಳುವಂತೆ ಮಾಡಲು ತೀರ್ಮಾನಗಳಾದವು.

ಅಧ್ಯಕ್ಷರಾದ ಶ್ರೀ ಪಿ. ಸಿ ರೆಡ್ಡಿಯವರು ಇಲ್ಲಿಯವರೆಗೆ ನಡೆದ ಪತ್ರವ್ಯವಹಾರ ಖರ್ಚು ವಿವರಿಸಿದರು ನಂತರ ಸರ್ಕಾರದವರಲ್ಲಿಗೆ ಶಿಷ್ಟಮಂಡಲವನ್ನು ಅತಿಶೀಘ್ರದಲ್ಲಿ ಒಯ್ದು, ಉಪಾಧ್ಯಾಯರ ಕುಂದುಕೊರತೆಗಳನ್ನು ನಿವೇದಿಸಲು ನಿಶ್ಚಿತವಾಯಿತು. 1947 ನೆಯ ವರ್ಷಕ್ಕೆ ಈ ಕೆಳಗಿನ ಅಧಿಕಾರೀವರ್ಗದ ಆಯ್ಕೆಯಾಯಿತು ಶ್ರೀ ಪಿ. ಸಿ. ರೆಡ್ಡಿಯವರು ಗೌರವ ಅಧ್ಯಕ್ಷರಾಗಿ

ಉಳಿದರು. ಉಪಾಧ್ಯಾಯವರ್ಗದಿಂದಲೇ ಅಧ್ಯಕ್ಷ ಕಾರ್ಯದರ್ಶಿ, ಕಾರ್ಯಕಾರೀ ಸಮಿತಿಯನ್ನಾರಿಸಿದರು. ಉತ್ತರ ಆರ್ಕಾಟಜಿಲ್ಲೆಯ ಶ್ರೀ ಡ್ಯಾನಿಯಲ್‌ರವರು ಪ್ರಾಂತೀಯ ಸಭಾಧ್ಯಕ್ಷರಾದರು. ಶ್ರೀ ಸುಬ್ಬಯ್ಯನವರು ಕಾರ್ಯದರ್ಶಿಗಳಾದರು 1947 ರಲ್ಲಿ ಪ್ರಾಂತೀಯ ಸಭೆಯನ್ನು ಬಳ್ಳಾರಿಯಲ್ಲಿ ಕೂಡಿಸಬೇಕೆಂದು ಶ್ರೀ ಕೇಶವರಾಯರು ಆಹ್ವಾನವಿತ್ತರು. ಆದರೆ ಹೋದ ವರ್ಷವೇ ಆಂಧ್ರರು ಕೇಳಿಕೊಂಡಿದ್ದ ಕಾರಣ ಮಚಲೀಪಟ್ಟಣದಲ್ಲಿ ಕೂಡಲು ನಿಶ್ಚಿತವಾಯಿತು. ಈ ಸಭೆಗೆ ಪ್ರಾಂತದ ಎಲ್ಲಾ ಭಾಗಗಳಿಂದಲೂ 300 ಉಪಾಧ್ಯಾಯ ಪ್ರತಿನಿಧಿಗಳು 30 ಸ್ತ್ರೀಯರೂ ಬಂದಿದ್ದರು.

ಬಳ್ಳಾರಿ ಸಂಗೀತ ಭವನ.

ತ್ಯಾಗರಾಜ ಶತಮಾನ ವರ್ಧಂತಿ N.G.O. ಭವನದಲ್ಲಿ ತ್ಯಾಗರಾಜ ಭವನದ ಶತಮಾನ ವರ್ಧಂತಿಯು ನೆರವೇರಿತು 16 ತಾ ನೆಯ ತ್ಯಾಗರಾಜರ ಭಾವ ಚಿತ್ರದಿಂದಲಂಕೃತವಾದ ರಥದ ಮೆರವಣಿಗೆಯಾಯಿತು ಸಾಯಂಕಾಲ ಶ್ರೀ ಅನಂತರಾಮನ್ (ಕಲೆಕ್ಟರ್) ರವರ ಅಧ್ಯಕ್ಷತೆಯಲ್ಲಿ ಶ್ರೀನಿವಾಸಯ್ಯರ್, ಭಾಯಪ್ಪ, ಮತ್ತು ನರಸಿಂಹಶಾಸ್ತ್ರಿಯವರು, ಶ್ರೀ ತ್ಯಾಗರಾಜರು ಕರ್ನಾಟಕ ಸಂಗೀತಕ್ಕೆ ಸಲ್ಲಿಸಿದ ಅಮೋಘ ಸೇವೆಯನ್ನು ಕುರಿತುಪ್ರಶಂಶಿಸಿದರು 17 ನೆಯ ತಾ. ಶ್ರೀನಿವಾಸಯ್ಯರ ಕೊಳಲಗಾನವಿದ್ದಿತು. ಇತರ ಸ್ಥಾನಿಕ ಗವಾಯಿಗಳ ಸಂಗೀತವೇರ್ಪಟ್ಟಿದ್ದಿತು.

ಬಳ್ಳಾರಿ ಗಾಂಧಿನಗರ ಶಾಲೆಯಲ್ಲಿ 17 ನೆಯ ತಾ. ಜಂಬುನಾಥನರ ಅಧ್ಯಕ್ಷತೆಯಲ್ಲಿ ಆರೋಗ್ಯ ಸಂಬಂಧವಾಗಿ ಶ್ರೀನಿವಾಸರಾಯರು ಮಾತಾಡಿದರು. ಶಾಲಾಬಾಲೆಯರಾದ ಇಂದಿರ, ವನಜಾಕ್ಷಿಯವರೂ ಮಾತಾಡಿದರು.

ನಾರಾಯಣದೇವರಕೆರೆ.

13 ನೆಯ ದಿನಾಂಕ ರಾತ್ರೆ ಹರಿಜನಕೇರಿಯಲ್ಲಿ ಬೆಂಕಿಬಿದ್ದು 20 ಗುಡಿಸಲುಗಳು ದಗ್ಧವಾದವು ಕೆಲ ಆಸ್ತಿಯೂ, ಆಹಾರಧಾನ್ಯಗಳೂ ನಾಶವಾದವು, ಒಟ್ಟಿನಲ್ಲಿ 1200/-ರೂಗಳ ನಷ್ಟವಾಗಿದೆ. ಸರ್ಕಾರದಿಂದ ತಕ್ಕ ಪರಿಹಾರವು ಶೀಘ್ರದಲ್ಲೇ ದೊರೆಯಬೇಕೆಂದು ಶ್ರೀ ಮರಿಸ್ವಾಮಯ್ಯಮಠದ ಪಾಟೀಲ ಇವರು ಕಲೆಕ್ಟರವರಿಗೂ ಸಂಬಂಧಿಸಿದ ಇತರ ಅಧಿಕಾರಿಗಳಿಗೂ ಬರೆದಿರುವರು.

ವಿದ್ಯಾರ್ಥಿ ಕಾಂಗ್ರೆಸ್.

ಶ್ರೀ ಬಸವರಾಜರಿಂದ ಜಿಲ್ಲಾಪ್ರಚಾರ ಕಾರ್ಯಕ್ರಮ

ಜಿಲ್ಲಾ ವಿದ್ಯಾರ್ಥಿಸಂಘದ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಬಸವರಾಜರು ಪಶ್ಚಿಮತಾಲೂಕುಗಳಲ್ಲಿ ಸಂಚರಿಸಿ ವಿದ್ಯಾರ್ಥಿಸಂಘದ ಹುಟ್ಟು ಧ್ಯೇಯ ಮತ್ತು ಜಿಲ್ಲಾ ವಿದ್ಯಾರ್ಥಿಗಳೆಲ್ಲಾ ಈ ಸಂಘದಾಶ್ರಯದಲ್ಲಿ ಸಂಘಟಿತರಾಗಬೇಕಾದ ಅವಶ್ಯಕತೆಯನ್ನು ಕುರಿತು ವಿವರಿಸಿದರು.

ಹರಪನಹಳ್ಳಿ- ಹಿಂದೂಸ್ತಾನೀ ಶಿಕ್ಷಕರಾದ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಮೃತ್ಯುಂಜಯ, ಮು. ಸಂಗಜ್ಜ ಸತ್ಯನಾರಾಯಣ ಇವರ ಭಾಷಣವಾಗಿ ಜಿಲ್ಲಾವಿದ್ಯಾರ್ಥಿಸಂಘದ ಸಮ್ಮೇಳನಕ್ಕೆ ಬೆಂಬಲಕೊಡಲು ನಿಶ್ಚಿತವಾಯಿತು.

ಹಡಗಲಿ- ಶ್ರೀ ಬಿಂದುರ ಅಧ್ಯಕ್ಷತೆಯಲ್ಲಿ ಬಸವರಾಜ್ ಮಾತಾಡಿದನಂತರ ರಾಮಭಟ್ಟ ಓಬಣ್ಣನವರ ಭಾಷಣಗಳಾದವು ಎಲ್ಲರೂ ಸಮ್ಮೇಳನಕ್ಕೆ ಪುಷ್ಟಿಕೊಡಲು ನಿಶ್ಚಯಿಸಿದರು.

ಕೊಟ್ಟೂರು- ಶ್ರೀ ಅಲಬೂರು ಶಿದ್ದಪ್ಪನವರ ಅಧ್ಯಕ್ಷತೆಯಲ್ಲಿ ಬಸವರಾಜರ ವಿವರಣೆಯನಂತರ ಸದಾಶಿವನ್, ವೀರಣ್ಣ ಬಿಂದು ಇವರು ವಿದ್ಯಾರ್ಥಿಗಳ ಕರ್ತವ್ಯ ಧರ್ಮವನ್ನು ಕುರಿತ ಭಾಷಣಗಳಾಗಿ ಸಮ್ಮೇಳನಕ್ಕೆ ಪುಷ್ಟಿ ದೊರೆಯಿತು.

ಕಂಪ್ಲಿ- ಶ್ರೀ ಶರಭಣ್ಣಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಬಸವರಾಜ್ ನುಕ್ತು ಹನುಮಂತರಾಯರು ಭಾಷಣಮಾಡಿ ವಿದ್ಯಾರ್ಥಿ ಕಾಂಗ್ರೆಸ್ ಬಲಪಡಿಸಲು ತೀರ್ಮಾನವಾಯಿತು.

ಸ್ವಾತಂತ್ರ್ಯ ಪ್ರತಿಜ್ಞೆ — ೧೯೪೭

ಸ್ವಾತಂತ್ರ್ಯದಿನ (ಜನವರಿ ೨೬, ೧೯೪೭)ದ ಆಚರಣೆಯ ಕಾಲಕ್ಕೆ ಈ ವರ್ಷ ಉಪಯೋಗಿಸಬೇಕಾದ ಪ್ರತಿಜ್ಞೆಯನ್ನು ಕೆಳಗೆ ಕೊಡಲಾಗಿದೆ. ಹಿಂದಿನ ಪ್ರತಿಜ್ಞೆಯಿಂದ "ಚಲೇಜಾವ" ಅಂಶವನ್ನಷ್ಟೆ ಈಬಾರಿ ಕಿತ್ತುಹಾಕಲಾಗಿದೆ. ಧ್ವಜವಂದನೆಯಾದ ನಂತರ ಜನರು ಗುಂಪಾಗಿ ಅಥವಾ ಒಬ್ಬೊಬ್ಬರಾಗಿ ಈ ಪ್ರತಿಜ್ಞೆಯನ್ನು ಕೈಕೊಳ್ಳಬೇಕೆಂದೂ ಭಾಷಣ ಮೊದಲಾದವುಗಳು ಇರಬಾರದೆಂದೂ ದೇಶದ ಸದ್ಯದ ಪರಿಸ್ಥಿತಿಯನ್ನು ಅನುಲಕ್ಷಿಸಿ ಅ. ಭಾ. ಕಾಂಗ್ರೆಸು ಆಜ್ಞಾಪಿಸಿದೆ.

ಇತರ ಯಾವದೇ ಜನತೆಗೆ ಇರುವಂತೆ ಹಿಂದೀ ಜನತೆಗೆ ಕೂಡ ತನ್ನ ಸ್ವಾತಂತ್ರ್ಯವನ್ನು ಮೊರಕಿಸಿಕೊಳ್ಳುವ' ತನ್ನ ಶ್ರಮದ ಫಲಗಳನ್ನು ಉಪಯೋಗಿಸುವ ಹಾಗೂ ಪೂರ್ಣ ಪ್ರಗತಿಯನ್ನು ಹೊಂದುವಂತೆ ಜೀವನಕ್ಕೆ ಅವಶ್ಯವಿರುವ ವಸ್ತುಗಳನ್ನು ಸಂಗ್ರಹಿಸಲು ಅವಕಾಶಗಳನ್ನು ಕಲ್ಪಿಸಿಕೊಳ್ಳುವ ಜನ್ಮಸಿದ್ಧ ಅಧಿಕಾರವಿದೆ ಎಂದು ನಾವು ನಂಬಿರುವೆವು. ಯಾವುದೇ ಒಂದು ಸರಕಾರವು ಬಂದು ಜನತೆಯ ಈ ಅಧಿಕಾರಗಳನ್ನು ಅಪಹರಿಸಿ ಅದನ್ನು ಬಗ್ಗು ಬಡಿಯಲು ಉಪಕ್ರಮಿಸಿದಲ್ಲಿ ಆ ಜನತೆಗೆ ಆ ಸರಕಾರದಲ್ಲಿ ಹೆಚ್ಚು ಕಡಿಮೆ ಮಾಡುವ ಅಥವಾ ಅದನ್ನು ಕಿತ್ತೊಗೆಯುವ ವಿಶೇಷ ಅಧಿಕಾರವಿದೆ, ಎಂಬುದರಲ್ಲಿ ಕೂಡ ನಮಗೆ ವಿಶ್ವಾಸವಿದೆ ಹಿಂದುಸ್ತಾನದಲ್ಲಿ ಬ್ರಿಟಿಶ ಸರಕಾರವು ಕೇವಲ ಹಿಂದೀ ಜನತೆಯ ಸ್ವಾತಂತ್ರ್ಯವನ್ನು ಅಪಹರಿಸಿರುವುದು ಮಾತ್ರವಲ್ಲದೆ ಬಹುಜನ ಸಮೂಹದ ಸರ್ವಸ್ವವನ್ನೂ ಸೂರೆಗೊಂಡು ಅದರ ಮೇಲೆಯೇ ನಿಂತುಕೊಂಡಿದೆ, ಹಾಗೂ ಹಿಂದುಸ್ತಾನವನ್ನು ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಮತ್ತು ಅಧ್ಯಾತ್ಮಿಕ ದೃಷ್ಟಿಗಳಿಂದ ನಾಶಗೊಳಿಸಿದೆ. ಆದುದರಿಂದ ಹಿಂದುಸ್ತಾನವು ಬ್ರಿಟನ್ನಿನೊಂದಿಗಿರುವ ತನ್ನ ಸಂಬಂಧವನ್ನು ಕಡಿದುಹಾಕಿ ಪೂರ್ಣ ಸ್ವರಾಜ್ಯ ಅಥವಾ ಸಂಪೂರ್ಣ ಸ್ವಾತಂತ್ರ್ಯ ಹೊಂದಬೇಕೆಂದು ನಾವು ಗಟ್ಟಿಯಾಗಿ ನಂಬಿದ್ದೇವೆ.

ನಮ್ಮ ಸ್ವಾತಂತ್ರ್ಯವನ್ನು ಸಂಪಾದಿಸುವಲ್ಲಿ ಹಿಂಸೆಯ ಪರಿಣಾಮಕಾರಕವಾದ ಮಾರ್ಗವಲ್ಲವೆಂಬುದನ್ನು ನಾವು ಒಪ್ಪುವೆವು. ಶಾಂತಿ ಹಾಗೂ ನ್ಯಾಯಬದ್ಧ ಮಾರ್ಗಗಳನ್ನನುಸರಿಸಿ ಹಿಂದುಸ್ತಾನವು ಶಕ್ತಿ ಹಾಗೂ ಅತ್ಮ ವಿಶ್ವಾಸಗಳನ್ನು ಗಳಿಸಿಕೊಂಡು ಸ್ವರಾಜ್ಯದ ದಾರಿಯಲ್ಲಿ ಬಹುದೂರ ಮುಂದೆ ಸಾಗಿದೆ ಈ ಮಾರ್ಗಗಳಿಗೆ ಅಂಟಿಕೊಂಡೇ ನಮ್ಮ ರಾಷ್ಟ್ರವು ತನ್ನ ಸ್ವಾತಂತ್ರ್ಯವನ್ನು ಸಂಪಾದಿಸುವುದು.

ಹಿಂದುಸ್ತಾನದ ಸ್ವಾತಂತ್ರ್ಯಕ್ಕೆ ನಾವು ಮತ್ತೊಮ್ಮೆ ಪ್ರತಿಜ್ಞೆಯನ್ನು ಮಾಡುತ್ತೇವೆ. ಪೂರ್ಣ ಸ್ವರಾಜ್ಯವನ್ನು ಹೊಂದುವ ತನಕ ಅಹಿಂಸಾತ್ಮಕವಾಗಿ ಸ್ವಾತಂತ್ರ್ಯ ಸಮರವನ್ನು ಸಾಗಿಸುವ ನಿರ್ಧಾರವನ್ನು ತ್ರೀಕರಣಪೂರ್ವಕವಾಗಿ ನಾವು ಮಾಡುತ್ತೇವೆ.

ಸಾಮೂನ್ಯವಾಗಿ ಅಹಿಂಸಾತ್ಮಕ ರೀತಿಯಿಂದ ವರ್ತಿಸಬೇಕಾದರೆ ಮತ್ತು ವಿಶೇಷತಃ ಅಹಿಂಸಾತ್ಮಕ ರೀತಿಯಿಂದ ನಿಷ್ಕಪಟವಾಗಿ ಕಾರ್ಯವನ್ನು ಕೈಕೊಳ್ಳಬೇಕಾದರೆ ಗಾಂಧೀಜಿಯವರು ದೇಶದ ಮುಂದೆ ಇಟ್ಟ ಹಾಗು ಕಾಂಗ್ರೆಸಿಗೆ ಒಪ್ಪಿತವಾದ ವಿಧಾಯಕ ಕಾರ್ಯಕ್ರಮವನ್ನು ಯಶಸ್ವಿ ರೀತಿಯಿಂದ ಮಾಡುವುದು ಅನಿವಾರ್ಯವೆಂಬುದರಲ್ಲಿ ನಮಗೆ ನಂಬಿಗೆ ಇದೆ. ಇವುಗಳಲ್ಲಿ ಖಾದಿ, ಜಾತೀಯ ಐಕ್ಯ ಮತ್ತು ಅಸ್ಪೃಶ್ಯತಾ ನಿವಾರಣೆ ಇವುಗಳು ಪ್ರಮುಖವಾದವುಗಳೆಂಬುದನ್ನು ನಾವು ತಿಳಿದಿರುವೆವು. ಜಾತಿ ಅಥವಾ ಪಂಥಗಳನ್ನು ಗಣನೆಗೆ ತಾರದೆ ವ್ಯಕ್ತಿಗಳಲ್ಲಿ ಪರಸ್ಪರ ಮೈತ್ರಿಯು ಉತ್ಪನ್ನವಾಗಿ ಬೆಳೆಯಲು ಸಹಕರಿಸುವಂತೆ ಎಲ್ಲ ಅವಕಾಶಗಳ ಉಪಯೋಗವನ್ನೂ ನಾವು ಮಾಡಿಕೊಳ್ಳುವೆವು. ದುರ್ಲಕ್ಷಿಸಲ್ಪಟ್ಟವರ ದಾರಿದ್ರ್ಯ ಮತ್ತು ಅಜ್ಞಾನಗಳನ್ನು ಹೋಗಲಾಡಿಸಿ ಅವರನ್ನು ಅಲ್ಲಿಂದ ಎತ್ತಲು ಪ್ರಯತ್ನಿಸುವೆವು, ಹಿಂದುಳಿದ ವರ್ಗದವರ ಹಾಗು ತಿರಸ್ಕೃತರೆಂದು ತಿಳಿಯಲ್ಪಡುವವರ ಹಿತಸಂರಕ್ಷಣೆಯನ್ನು ಮುಂದೆ ಸಾಗಿಸುವಲ್ಲಿ ಕೂಡ ನಾವು ಎಲ್ಲ ಮಾರ್ಗಗಳಿಂದಲೂ ಯತ್ನಿಸುವೆವು. ಸಾಮ್ಯಾಜ್ಯವಾದೀ ಪದ್ಧತಿಯನ್ನು ನಿರ್ನಾಮಗೊಳಿಸಲು ನಾವು ಬದ್ಧಸಂಕಲ್ಪರಾಗಿರುವೆವಾದರೂ ಇಂಗ್ಲೀಷ ಮನುಷ್ಯರೊಂದಿಗೆ ಅವರು ಅಧಿಕಾರಿಗಳಿರಲಿ ಅಥವಾ ಅಧಿಕಾರೇತರರಿರಲಿ ನಮ್ಮ ಜಗಳ ವಿಲ್ಲವೆಂದು ನಾವು ತಿಳಿಸುತ್ತೊಂದಿರುವೆವು. ಸವರ್ಣ ಹಿಂದೂಗಳು ಮತ್ತು ಪರಿಜನರ ನಡುವೆ ಇರುವ ತಾರತಮ್ಯಗಳನ್ನು ಕಿತ್ತು ಹಾಕಬೇಕೆಂದು ನಮಗೆ ಗೊತ್ತಿದೆ. ಈ ತಾರತಮ್ಯಗಳನ್ನು ಹಿಂದೂಗಳು ತಮ್ಮ ತಾವುಗಳ ನಡವಳಿಕೆಯಲ್ಲಿ ಬಿಡಬೇಕು. ಅಹಿಂಸಾತ್ಮಕ ನಡತೆಗೆ ಈ ತಾರತಮ್ಯಗಳು ಅತ್ಯವಶ್ಯವಾಗಿವೆ. ನಮ್ಮ ಧರ್ಮಗಳು ಬೇರೆ ಇದ್ದರು ಕೂಡ ನಾವು ಭಾರತಮಾತೆಯ ಮಕ್ಕಳಂತೆ ಸಮಾನವಾದ ರಾಷ್ಟ್ರೀಯತ್ವದಿಂದ ಮತ್ತು ಸಮಾನವಾದ ರಾಜಕೀಯ ಮತ್ತು ಆರ್ಥಿಕ ಹಿತಸಂಬಂಧಗಳಿಂದ ಕಟ್ಟಿಬಿದ್ದವರಂತೆ ನಮ್ಮ ಪರಸ್ಪರ ಸಂಬಂಧಗಳನ್ನಿಟ್ಟುಕೊಳ್ಳುವೆವು.

ಹಿಂದುಸ್ತಾನದ ೭,೦೨,೦೦೦ ಹಳ್ಳಿಗಳು ತಿರುಗಿ ಚೇತರಿಸುವಂತೆ ಮಾಡಲು ಹಾಗು ಜನತೆಯನ್ನು ಅರೆಯುತ್ತಿರುವ ಬಡತನವನ್ನು ನಿವಾರಿಸಲು ನಡೆದ ವಿಧಾಯಕ ಕಾರ್ಯದಲ್ಲಿ ಚರಖಾ ಮತ್ತು ಖಾದಿ ಇವುಗಳು ಅಖಂಡವಾದ ಭಾಗಗಳಾಗಿ

ವೆ. ಆದುದರಿಂದ ನಾವು ನಮ್ಮ ಸ್ವಂತದ ಉಪಯೋಗಕ್ಕೆ ಖಾದಿಯ ಹೊರತು ಬೇರಾವದನ್ನು ಉಪಯೋಗಿಸುವುದಿಲ್ಲ. ಶಕ್ಯವಿದ್ದಷ್ಟು ಮಟ್ಟಿಗೆ ಗ್ರಾಮೊದ್ಯೋಗಗಳಲ್ಲಿ ಸಿದ್ಧವಾದ ವಸ್ತುಗಳನ್ನೇ ಉಪಯೋಗಿಸುವಂತೆ ಪ್ರಯತ್ನಿಸುವೆವು. ವಿಧಾಯಕ ಕಾರ್ಯಕ್ರಮದ ಕೆಲವು ಕೆಲಸಗಳನ್ನು ಮಾಡಲು ನಾವು ಶಕ್ತಿ ಮೀರಿ ಯತ್ನಿಸುವೆವು.

ಸ್ವಾತಂತ್ರ್ಯಸಮರದಲ್ಲಿ ಭಾಗವಹಿಸಿ ಗಂಭೀರವಾದ ಕಷ್ಟ ಪರಂಪರೆಗಳನ್ನೆದುರಿಸಿದ, ಅಪಮಾನಕ್ಕೆ ಗುರಿಯಾದ, ಹಾಗು ತಮ್ಮ ಆಸ್ತಿಗಳನ್ನು ಕಳೆದುಕೊಳ್ಳುವುದಲ್ಲದೆ ಪ್ರಾಣವನ್ನೂ ನೀಡಿದ ನಮ್ಮ ಸಹಸ್ರಾವಧಿ ಬಂಧುಗಳಿಗೆ ನಾವು ನಮ್ಮ ಕೃತಜ್ಞತಾಪೂರ್ವಕವಾದ ಅಭಿನಂದನೆಯನ್ನು ಅರ್ಪಿಸುತ್ತೇವೆ. ನಮ್ಮ ಗುರಿಯನ್ನು ಸಾಧಿಸುವ ತನಕ ನಾವು ಎಲ್ಲಿಯೂ ವಿಶ್ರಾಂತಿಯನ್ನು ಹೊಂದಬಸೇಕ್ಷಸಬಾರದು ಎಂಬ ನಮ್ಮ ಕರ್ತವ್ಯದ ನೆನಪನ್ನು ಅವರ ಈ ತ್ಯಾಗಗಳು ಅನವರತ ನಮಗೆ ಮಾಡಿಕೊಡುತ್ತವೆ.

ಕಾಂಗ್ರೆಸಿನ ಧ್ಯೇಯ ಮತ್ತು ಧೋರಣೆಗಳನ್ನು ಶಿಸ್ತಿನಿಂದ ಮನ್ನಿಸುವೆನೆಂದು ನಾವು ಈ ದಿನ ಇನ್ನೊಮ್ಮೆ ಪ್ರತಿಜ್ಞೆಯನ್ನು ಮಾಡುತ್ತೇವೆ. ಭಾರತ ಸ್ವಾತಂತ್ರ್ಯ ಸಮರಕ್ಕಾಗಿ ಅಣಿಯಾಗಿ ಬಂದು ಮುಂದೆ ಬರಬಹುದಾದ ಕಾಂಗ್ರೆಸಿನ ಕರೆಗೆ ಓ ಕೊಡಲು ಸರ್ವಸಿದ್ಧತೆಯನ್ನೂ ನಾವು ಇಂದಿನಿಂದ ಮಾಡುತ್ತೇವೆ.

ಕಾಂಗ್ರೆಸ್ ಸಂಸ್ಥೆಯ ಘಟನೆ.

ಇದಕ್ಕಾಗಿ ಏರ್ಪಟ್ಟ ಘಟನಾ ಸಮಿತಿಯು ಕಾಂಗ್ರೆಸ್ ಘಟನೆಯಲ್ಲಿ ಯಾವ ಬದಲಾವಣೆಗಳನ್ನು ಮಾಡಬೇಕೆಂಬುದನ್ನು ಶೀಘ್ರದಲ್ಲಿಯೇ ಸೂಚಿಸಲಿದೆ. ಕಾಂಗ್ರೆಸ್ ಶಾಖೆಗಳಲ್ಲಿ ಧುರೀಣರಲ್ಲಿಯವ ಮತ ಭೇದಗಳಿಂದ ಗಾಂಧೀಜಿಯವರಿಗೂ, ಕಾಂಗ್ರೆಸ್ ಅಧ್ಯಕ್ಷರಿಗೂ ಕಳವಳವುಂಟಾಗಿದೆ. ನಾಲ್ಕಾಣೆ ಸದಸ್ಯತ್ವವು ಹೋಗಬೇಕೆಂಬ ಗಾಂಧೀಜಿಯವರ ಅಭಿಪ್ರಾಯಕ್ಕೆ ಪುಷ್ಟಿ ದೊರೆತಿಲ್ಲ.

ಸಮಿತಿಯವರ ಸಿಫಾರ್ಸ ಪ್ರಕಾರಕ್ಕೆ ಮೂರು ವಿಧದ ಸದಸ್ಯರಿರಬೇಕೆಂದು ಸೂಚಿತವಾಗಿದೆ. ನಾಲ್ಕಾಣೆ ಸದಸ್ಯರು, ನಿತ ಖಾದಿಧಾರಿಗಳು, ಮತ್ತು ವಿಧಾಯಕ ಕಾರ್ಯ ಕ್ರಮಗಳಲ್ಲಿ ತೊಡಗಿರುವರು. ಮೂರು ವರ್ಷಕ್ಕೊಂದುಸಲ ಚುನಾವಣೆಯು ನಡೆಯಬೇಕೆಂದು ಮತ್ತೊಂದು ಮುಖ್ಯ ಸೂಚನೆಯುಂಟು. ಈಗಿನ ವಾರ್ಷಿಕಾಧಿವೇಶನವು ಮೂರು ವರ್ಷಕ್ಕೊಂದು ಸಲ ನಡೆಯ ಬೇಕಾಗುತ್ತದೆ. ಕಾಂಗ್ರೆಸ್ ಕಾರ್ಯಕಾರೀ ಸಮಿತಿಯಲ್ಲಿ ೨೦ ಜನರಿರಬಹುದು.

ಯೂರೋಪಿಯನ್ ಅಧಿಕಾರಿಗಳ ಧನಲೋಭ.

ಭಾರತದ ಉಪಮಂತ್ರಿಗಳಾದ ಆರ್ಥರಹೆಂಡರ್ಸರವರು ಐ. ಶಿ. ಯಸ್. ಐ. ಪಿ. ಯಸ್. ಅಧಿಕಾರಿಗಳ ಸಂಬಂಧದಲ್ಲಿ ಮುಂದೆ ಮಾಡಿದ ಬೇಡಿಕೆಗಳು ಅಳತೆಗೆಟ್ಟವಿದ್ದ ಕಾರಣ- ಗೃಹಮಂತ್ರಿಗಳಾದ ಸರ್ದಾರವಲ್ಲಭಭಾಯಿ ಪಟೇಲರು ಅವುಗಳನ್ನು ನಿರಾಕರಿಸಿರುವರೆಂದು ಗೊತ್ತಾಗಿದೆ. ೧೬ ವರ್ಷ ನೌಕರಿಮಾಡಿ ೪೦ ವರ್ಷ ವಯಸ್ಸಿನ ಅಧಿಕಾರಿಗೆ ವರ್ಷಕ್ಕೆ ೬೦೦ ಪೌಂಡು ನಿಂಚಣಿ- ೬೦೦ ಪೌಂಡು ಪರಿಹಾರ ಬೇಡಿರುವರೆಂದೂ, ಇದರಿಂದ ಯಾವ ಅಧಿಕಾರಿಯಾದರೂ, ನಿವೃತ್ತನಾಗಿ ಹೊಸಜೀವನೋಪಾಯ ಕಲ್ಪಿಸಿಕೊಳ್ಳಲು ಮನಒಲಿಸಿದಂತಾಗುವದೆಂದೂ ಹೇಳಲಾಗಿದೆ. ಇಂಥಾ ಧನಲೋಭಿಗಳ ಇಚ್ಛೆಯಂತೆ ರೈಸರಿಗೆ ಸರ್ದಾರರು ತಮ್ಮನಿರ್ಧಾರಕ್ಕೆ ಅಂಟಿಕೊಂಡಿರುವರು.

ಆಂಧ್ರ ಪ್ರಾಂತ ನಿರ್ಮಾಣಕ್ಕಾಗಿ ವ್ಯಾಂತೀಯ ಕಾಂಗ್ರೆಸ್ ಸಮಿತಿ, ಘಟನಾ ಸಮಿತಿ ಆಂಧ್ರಸದಸ್ಯರ ಶಿಷ್ಟ ಮಂಡಳವು ಪಂಡಿತ ಜವಹರಲಾಲರನ್ನೆಗೆ ಹೋಗಿ ವ್ಯಾಂತ ನಿರ್ಮಾಣ ಗೊತ್ತುವಳಿಯನ್ನು ಕುರಿತು ಚರ್ಚಿಸಿತು.

ಕಲ್ಕತ್ತಾನಗರದಲ್ಲಿ ಇಂಡೋ-ಚೀನದ ಸ್ವಾತಂತ್ರ್ಯ ಹೋರಾಟಕ್ಕೆ ಸಹಾನು ಭೂತಿಯನ್ನು ಪ್ರದರ್ಶಿಸಲು ವಿದ್ಯಾರ್ಥಿಗಳ ಮೆರವಣಿಗೆಯು ಹೊರಟಾಗ ಅವರ ಮೇಲೆ ಗೋಲಿಬಾರ ಮಾಡಲಾಯಿತು. ಒಬ್ಬನು ಸತ್ತಿರುವನೆಂದೂ ೨೦೦ ಜನರಿಗೆ ಗಾಯವಾಗಿದೆ ಎಂದೂ ಪ್ರಕಟವಾಗಿದೆ.

ಜಗದ ವಾದ್ಯ ಪಿಳಿವೇ!

(ಕರೆದವ:—ಮರುಳುಶಿದ್ದಯ್ಯ, ಹಿರೇಮಾಖ್, ಕೊಟ್ಟೂರು.)

ಸುತ್ತು ತೊಮ್ಮೆ,
ಸುಳಿಯು ತೊಮ್ಮೆ,
ಹಾರು ತೊಮ್ಮೆ,
ಹಾಡು ನೀ॥೪॥
ಜಗವ ತಣಿಸೊ ನೀ ॥೧॥

ಮೊದಲ ಕಾಗೆಯಲ್ಲಿ ಬಳಿದು
ಮತ್ತೆ ನೀನೆ! ಬೇರೆ ಬಳಿದು
ಮೂಮರಂಗಳಲ್ಲಿ ಉಲಿದು
ಜಗವ ತಣಿಸೊ ನೀ ॥೨॥

ಮಾಗಿಯಲ್ಲಿ ಇಳಿದು ಹೋಗಿ
—ಇರುವುದೆಲ್ಲ ನೀಗಿ ನೀಗಿ
ನಿನ್ನ ರಾಗ ಕೂಗಿ ಕೂಗಿ
ಜಗವ ತಣಿಸೊ ನೀ ॥೩॥

ಮಧುವ ಮೊಸದಲ್ಲಿ ಅಡಿ
ಚಿಗುರುಗಳಲಿ ನಾಂಟ್ಯವಾಡಿ
'ಕೂ-ಕೂ' ದನಿಯ ಹಾಡಿ ಹಾಡಿ
ಜಗವ ತಣಿಸೊ ನೀ ॥೪॥

ತರುಗಳಲ್ಲಿ ಸುಳಿದು ಸುಳಿದು
ಅಲ್ಲಿ ಇಲ್ಲಿ ಅಲೆದು ಅಲೆದು
ಹಾಡುಗಳಲಿ ಕಾಲ ಕಳೆದು
ಜಗವ ತಣಿಸೊ ನೀ ॥೫॥

'ಜಗದ ವಾದ್ಯ ಪಿಳಿವೆ!' ಆಗಿ
ನಿನ್ನ ಗಾನ ಜನಕೆ ನೀಗಿ
'ಬಾಳ ಮುಕ್ತ' ನೀನೆ ಆಗಿ
ಜಗವ ತಣಿಸೊ ನೀ ॥೬॥

ಗಾನ ಕಲೆಗೆ ಗುರುವು ಆಗಿ
'ಶುಕ್' ಕೆ ನೀನು ಜೊತೆಯು ಆಗಿ
ಮೂನವನಿಗೆ ಪ್ರೀತಿಯಾಗಿ
ಜಗವ ತಣಿಸೊ ನೀ ॥೭॥

ಮ. ಹಿ. ಮ. ಗಾಗಿ ನಿನ್ನ ರಾಗ
ಇರಲು ನೀನು ಕೂಗಿ ಕೂಗಿ
ಅನನ ಬಾಳ ಬೆಳಗಿ ಬೆಳಗಿ
ಜಗವ ತಣಿಸೊ ನೀ ॥೮॥

Woolen Coatings, Silk Sarees, Benares and other latest designs,
Handloom and Mill made Clothes Etc.,
Colours Guaranteed, Prices very reasonable. Trial Solicited.

G. GOPAL SING & SON.,
CLOTH MERCHANT
No. 15, Old Market, BELLARY.
ಜಿ. ಗೋಪಾಲ ಸಿಂಗ್ ಅಂಡ್ ಸನ್,
ಜವಳಿ ವ್ಯಾಪಾರಿ. ನಂ. 15 ಹಳೇ ಮಾರ್ಕೆಟ್ ಬಳ್ಳಾರಿ.

ವುಲನ್ ಕೋಟ್ ಬಟ್ಟೆ, ಬನಾರಸ್ ಜರಿ, ಶಿಲ್ಕು- ಟೆಶ್ಯೂಶೀರೆ ಜಾಕೆಟ್ ಲೇಸ್ ಬಾರ್ಡರ್, ಮತ್ತು ಇತರ ಅನೇಕ ವಿವಿಧ, ಅತ್ಯಂತ ಆಧುನಿಕ ಉಡುಪಿನ ಬೇಡಿಕೆಯನ್ನು ನಾವು ಪೂರೈಸಲಿದ್ದೇವೆ. ಕೈಮಗ್ಗದ ಮಿಲ್ ಬಟ್ಟೆಗಳು ವಿಧಾಯಕ ಬೆಲೆಗೆ ದೊರೆಯುತ್ತವೆ, ಬಣ್ಣ ಗ್ಯಾರಂಟಿ, ಬೆಲೆ ಸರಿಯಾದ್ದು.—
ಪರೀಕ್ಷಿಸಿ ಮನಗಾಣಿರಿ.

ಹಿಂದೀ ಗಿರಣಿಗಳು.

ಅಹಮದಾಬಾದ ಜವಳಿ ಕೂಲಿಕಾರ ಸಂಘದ ಕಾರ್ಯದರ್ಶಿ ಶ್ರೀ ಖಂಡೂಭಾಯಿ ದೇಸಾಯರು ಹಿಂದೀ ಜವಳಿ ಗಿರಣಿಗಳ ಯುದ್ಧಕಾಲದ, ಅಂದರೆ 1946 ರವರೆಗಿನ ವ್ಯವಹಾರಗಳನ್ನು ವಿವೇಚಿಸಿದ್ದಾರೆ ಅವರು ಸಾಧಿಸುತ್ತಿರುವಂತೆ ಅವರು ಕೊಟ್ಟಅಂಕೆ ಸಂಖ್ಯೆಗಳು ನಿರ್ವಿವಾದವಿದ್ದರೆ ಅವುಗಳಿಂದ ಈ ಕೆಳಗಿನ ಸಿದ್ಧಾಂತಗಳನ್ನು ತೆಗೆಯಬಹುದು:

(1) ಇದೀ ಜವಳಿ ಉದ್ಯೋಗವೆ ಎಲ್ಲ ದೃಷ್ಟಿಗಳಿಂದಲೂ ಸುಮಾರು 150 ವ್ಯಾಪಾರಿ ಸಂಸ್ಥೆಗಳ ಒಡೆತನದಲ್ಲಿದೆ;

(2) ಆ ಉದ್ಯೋಗ ರಾಷ್ಟ್ರ ಹಿತದೃಷ್ಟಿಯಿಂದ ನಡೆಸಲ್ಪಟ್ಟಿಲ್ಲ.

(3) ಆ ಕಾಲದ ಸರಕಾರದೊಡನೆ ಸಹಕರಿಸಿ ಗಿರಣಿ ಏಜಂಟರು, ಬಟ್ಟೆಯ ಬರಗಾಲ, ಕಳ್ಳಪೇಟೆ, ಉತ್ಪಾದನ ವೆಚ್ಚದ ಪ್ರಮಾಣಕ್ಕೆ ಏನೂ ಹೊಂದಿಕೆಯಿಲ್ಲದ ಮಿತಿಮೀರಿದ ಬೆಲೆಗಳು ಇವು ಉಂಟಾಗುವಂಥ ಕೈವಾಡವನ್ನು ನಡೆಸಿದರಲ್ಲದೆ ಹತ್ತಿಯನ್ನು ಬೆಳೆಸಿದವನಿಗೂ ತಮ್ಮ ಸ್ವಂತ ಕೂಲಿಕಾರರಿಗೂ ಯೋಗ್ಯಪ್ರತಿಫಲ ಕೊಡಲಿಲ್ಲ. ಮತ್ತು ಜನತೆಯನ್ನು ಸುನೂರು ನೂರು ಕೋಟಿ ರೂಪಾಯಿಯ ಮಟ್ಟಿಗೆ ಸೂರೆ ಮಾಡಿದರು.

(4) ಅವರು ತಮ್ಮ ಕರ್ತವ್ಯದಲ್ಲಿ ಅಸಮರ್ಥರಾಗಿದ್ದರು.

(5) ಈ ಪ್ರಕಾರ ಅವರು ರಾಷ್ಟ್ರದ ವಿಶ್ವಸ್ತರೆಂದು ಈ ಉದ್ಯೋಗದ ಸಂಚಾಲನ ಮಾಡುವ ಯೋಗ್ಯತೆಗೆ ಎರವಾಗಿದ್ದಾರೆ.

(6) ವಿಶ್ವಸ್ತಿಕೆಯ ನೈತಿಕ ಕರ್ತವ್ಯದಿಂದ ಚ್ಯುತರಾದುದಲ್ಲದೆ, ಈ ಉದ್ಯೋಗದಲ್ಲಿ ಹಣವನ್ನು ತೊಡಗಿಸಿದವರಿಗೆ ಅವರು ತೊಡಗಿಸಿದ ಒಟ್ಟು ಹಣಕ್ಕಿಂತ ಎಷ್ಟೋ ಪಟ್ಟು ಹೆಚ್ಚು ಲಾಭವನ್ನು ಅವರು ಹಂಚಿರುವುದರಿಂದ ಅವಶ್ಯವೆಂದು ತೋರಿದರೆ ತೊಡಗಿಸಲ್ಪಟ್ಟ ಬಂಡವಳಕ್ಕಾಗಲಿ ನೆರವೇರಿಸಲ್ಪಟ್ಟ ಸೇವೆಗಾಗಲಿ ಏನೂ ಪರಿಹಾರ ಕೊಡದೆ ಇಡಿ ಉದ್ಯೋಗವನ್ನು ವಶಕ್ಕೆ ತೆಗೆದುಕೊಳ್ಳಲು ರಾಷ್ಟ್ರಕ್ಕೆ ಹಕ್ಕುಂಟಾಗಿದೆ.

ಇಷ್ಟೆಲ್ಲ ವಾದಿಸಿ ಶ್ರೀ ದೇಸಾಯರು ಕೊನೆಯ ಸಿದ್ಧಾಂತಕ್ಕೆ ಬಂದಿದ್ದರೂ ಈ ಉಪಾಯವನ್ನು ಕೈಕೊಳ್ಳಬೇಕೆಂದು ಒತ್ತಾಯಗೊಳಿಸುವದು ಅವರ ಹೇಳಿಕೆಯ ಉದ್ದೇಶವಲ್ಲ. ಆ ಕ್ರಮವನ್ನು ತೆಗೆದುಕೊಳ್ಳಲು ರಾಷ್ಟ್ರವಿನ್ನೂ ಸಿದ್ಧವಾಗಿಲ್ಲವೆಂದು ಅವರ ಅಭಿಪ್ರಾಯವಾಗಿರಬಹುದು. "ರಾಷ್ಟ್ರೀಕರಣ"—ಎಂದರೆ, ಹಿರಿಯ ಉದ್ಯೋಗಗಳನ್ನೂ ಸಾರಿಗೆ ಸೌಕರ್ಯಗಳನ್ನೂ ಸರಕಾರವೇ ನೇರವಾಗಿ ನಡೆಸಬೇಕೆಂಬ ಸೂಚನೆ ಅಸ್ಪುಟ ಧ್ಯೇಯ ರೂಪದಲ್ಲಿ ನುಡಿಸಲ್ಪಟ್ಟಾಗ ಎಷ್ಟೇ ಸರಳವಾಗಿ ತೋರಿದರೂ ನಿರ್ದಿಷ್ಟ ಸ್ವರೂಪದಲ್ಲಿ ಒಂದು ಪ್ರಕರಣ ಸರಕಾರದ ಮುಂದೆ ಬಂದಾಗ ಅದು ಆ ಹೊಣೆಯನ್ನು ನಿರ್ವಹಿಸಲು ಸಾಕಷ್ಟು ಸಿದ್ಧವಾಗಿರದಿರಬಹುದೆಂದನ್ನು ನಾನು ಬಲ್ಲೆ. ಈ ಅಸಿದ್ಧತೆ ಸಂಬಂಧಪಟ್ಟ ಹಿತಸಂಬಂಧಗಳಿಗೂ ಗೊತ್ತಿಲ್ಲದೆ ಇಲ್ಲ. ಅವರ ಲೋಭ, ಸ್ವಾರ್ಥ, ಧರ್ಮಬಾಹಿರತೆಗಳು ಬೆಳೆಯಲು ಈ ಅರಿವೂ ಒಂದು ಕಾರಣವೆಂಬುದನ್ನು ನಾವು ಮನಗಾಣಬೇಕು.

ಶ್ರೀ ಖಂಡೂಭಾಯಿ ದೇಸಾಯರು ಶಾಸನ ಸಭಾ ಸದಸ್ಯರು. ಅದುದರಿಂದ ಅವರು ಸ್ವಾಭಾವಿಕವಾಗಿ ಶಾಸನಾತ್ಮಕ ಉಪಾಯಗಳನ್ನಷ್ಟೇ ಸೂಚಿಸಿದ್ದಾರೆ. ಹೀಗಾಗಿ ಅವರು ಒಂದು ಶಾಸನಬದ್ಧ "ಜವಳಿ ನಿಯಂತ್ರಣ ಮತ್ತು ಪೂರ್ವೈಕೆ ಸಮಿತಿ" ಯನ್ನು ಸ್ಥಾಪಿಸಬೇಕೆಂದೂ ಅದು "ಕೇವಲ ಬಳಸುವವರ ಹಿತವನ್ನಷ್ಟೆ ಗಮನಿಸಿ, ಬಟ್ಟೆಯ ಉತ್ಪಾದನೆ ವಿವರಣೆಗಳನ್ನು ನಿಯಂತ್ರಿಸಬೇಕೆಂದೂ" "ಕಾಯದೆ ಮುರಿದವರಿಗೆ ಅತಿ ಭಾರವಾದ ಶಿಕ್ಷೆಯನ್ನು ಸೆರೆಮನೆವಾಸ ಸಹಿತ ಅತಿ ವಿಧಿಸಬೇಕೆಂ"ದೂ ಸೂಚಿಸುತ್ತಾರೆ.

ಶಾಸನ ಸಭಾಸದ ಅಡಳಿತೆಗಾರರೂ ಸಾಧ್ಯವಾದುದನ್ನೆಲ್ಲ ಮಾಡಿದರೆ ಯಾರೂ ಆಕ್ಷೇಪವೆತ್ತಬೇ

ಕಾಗಿಲ್ಲ. ಆದರೆ ಜನರು ಕಾಯದೆ ಕಾನೂನುಗಳ ಪ್ರಯೋಗದ ಮೇಲೆ ಅತಿರೇಕ ನಂಬಿಕೆಯನ್ನಿಡುವ ದಾಗಲಿ ಬಹಿರಂಗ ಪೇಟೆಯಲ್ಲಿ ಸಾಕಷ್ಟು ಒಟ್ಟಿಸಿಗುವಂತಾಗಬೇಕಾದರೆ ಓರಣವಾದ ಕಾಯದೆ ಮಾಡಿದರೆ ತೀರಿತೆಂದು ತಿಳಿಯುವದಾಗಲಿ ಶುದ್ಧ ತಪ್ಪು. ನಮ್ಮ ಈಗಿನ ಸ್ಥಿತಿಗತಿಯನ್ನು ಪರೀಕ್ಷಿಸಿದರೆ ಸರಕಾರದ ನಾಗರಿಕ ಆಡಳಿತೆಯ ಹೊಸ ಶಾಖೆಯೊಂದರಿಂದ ಗಿರಣಿಗಳು ನಡೆಸಲ್ಪಟ್ಟರೆ ಸಹಿತ, ಯಾರಿಗೆ ಅತ್ಯವಶ್ಯವಿದೆಯೋ ಆ ವರ್ಗದ ಜನರಿಗೆ ಇದರಿಂದ ಅವಶ್ಯ ಪರಿಹಾರ ಸಿಗುವಂತೆ ನನಗೆ ತೋರುವದಿಲ್ಲ. ಸರಿಯಾದ ಒಂದೇ ಉಪಾಯವೆಂದರೆ ಸ್ವಾವಲಂಬನೆ ಹೆಚ್ಚು ಬಟ್ಟೆ ಬೇಕೆಂದು ಅಥವಾ ಜವಳಿ ಉದ್ಯೋಗವನ್ನು ರಾಷ್ಟ್ರೀಕರಿಸಬೇಕೆಂದು ಜನರಿಗೆ ನಿಜವಾದ ಹಂಬಲವಿದ್ದರೆ, ಅವರು ಗಿರಣಿಬಟ್ಟೆಯನ್ನು ಬಿಟ್ಟು ಕೂಟ್ಟು ತಮ್ಮ ಮನೆಗಳಲ್ಲಿ "ಒಂದೇ ಕದರಿನ ಗಿರಣಿ" ಅಂದರೆ ರಾಟೆಯನ್ನು ಸ್ಥಾಪಿಸಬೇಕು. ಹಾಗೆಯೆ ತಂತಮ್ಮ ಸ್ಥಳಗಳಲ್ಲಿಯೆ ನೇಯ್ಗೆಯ ವ್ಯವಸ್ಥೆಮಾಡಿಕೊಳ್ಳಬೇಕು. ಕೈಮಗ್ಗದ ನೇಕಾರನೂ ಸ್ವಲ್ಪ ಆಳವಾದ ವಿಚಾರ ಮಾಡಿದರೆ ಹಿತ. ಅವನಿಗೆ ತನ್ನ ದೈನಂದಿನ ವೃತ್ತಿ ಯಥಾಸಾಂಗವಾಗಿ ಸಾಗಬೇಕೆಂದಿದ್ದರೆ ಮತ್ತು ತನ್ನ ವ್ಯಾಪಾರವನ್ನು ನಡೆಸುವಲ್ಲಿ ಲಂಚ ಮುಖಸ್ತುತಿಗಳನ್ನು ಆಶ್ರಯಿಸುವ ಇಚ್ಛೆಯಿಲ್ಲದಿದ್ದರೆ ಅವನು ಗಿರಣಿನೂಲಿನ ಮುಖ ನೋಡದಿರಲಿ, ಒಜವನೆ ಅದನ್ನು ತ್ಯಜಿಸಿಬಿಡಲಿ, ಏಕೆಂದರೆ ಗಿರಣಿಯಲ್ಲಿನೂಲುವದೊಂದೆಂದು ಸಾಧಿಸುವವರ ವಾದಗಳೆಲ್ಲವೂ ಗಿರಣಿ ನೇಯ್ಗೆಗೂ ಅನ್ವಯಿಸುತ್ತವೆ. ಮನೆಯಲ್ಲಿ ನೂಲುವದನ್ನು ಮಾಂಧಾತನ ಕಾಲದ ರೂಢಿಯೆಂದು ತೊರೆದು ಬಿಟ್ಟರೆ ಮನೆ ನೇಯ್ಗೆಗೂ ಅನತಿದೂರದಲ್ಲಿ ಅದೇ ಗತಿ ಒದಗುವದು ಖಂಡಿತ. ಖಾಸಗಿ ಬತ್ತನವಿರಲಿ, ಬಟ್ಟೆಯನ್ನು ದೊಡ್ಡ ಪ್ರಮಾಣದ ಕೇಂದ್ರೀಕೃತ ಉದ್ದಿಮೆಯನ್ನಾಗಿ ನಡೆಸಿದರೆ ನೂಲುವನದೂ ನೇಕಾರನದೂ ಸೇರಿಯೆ ಗಿರಣಿ ಕೂಲಿಕಾರರ ಸ್ಥಿತಿಗೆ ಇಳಿಯುವದು. ಅವರು ಸ್ವತಂತ್ರ ಕೈಗಾರಿಕೆಯವರಾಗಿ ಉಳಿಯುವದು ಅಸಾಧ್ಯ. ಇಂದು ಗಿರಣಿ ನೂಲನ್ನು ನೇಯುವದರಿಂದ ದೊರಕುಬಹುದಾದ ಕಳ್ಳಪೇಟೆಯ ಲಾಭವನ್ನು ತಿರಸ್ಕರಿಸಿ ಕೈನೂಲನ್ನು ನೇಯಕೊಡಗುವ ವಿವೇಕಿ ನೇಕಾರನನ್ನು ಈಗ ಅವನ ಸಂಗಡಿಗರು ಚಿನ್ಮಯಹಾಸಿಕನೆಂದು ನಗಬಹುದು. ಆದರೆ ಅವನು ಚಾಕಿದ ಲೆಕ್ಕಾಚಾರವೇ ಸರಿಯಾಗಿತ್ತೆಂದು ಅವರಿಗೆ ಬುದ್ಧಿಬರುವ ದಿನಗಳು ಬಹಳದೂರವಿಲ್ಲ.

ಸಾಬರಮತಿ, —ಕೆ. ಫೆ. ಮುನ್ಶಾವಾಲಾ
5 ಜನವರಿ 1947 [ಕರ್ಮವೀರ]

ಪಂಜಾಬಿನಲ್ಲಿ ಮುಸ್ಲಿಂ ಮುಖಂಡರ ಕೈಸೆರೆ.

ಲಾಹೋರ ತಾ. 24—ಪಂಜಾಬ ಸರಕಾರವು ಮುಸ್ಲಿಂ ಲೀಗ ನ್ಯಾಶನಲ್ ಗಾರ್ಡ್ಸ್ ಹಾಗು ರಾಷ್ಟ್ರೀಯ ಸ್ವಯಂಸೇವಕ ಸಂಘಗಳನ್ನು ಅಕ್ರಮ ಸಂಸ್ಥೆಗಳೆಂದು ಸಾರಿದೆ. ನ್ಯಾಶನಲ್ ಗಾರ್ಡ್ಸ್ ಕಚೇರಿಯನ್ನು ಪೋಲೀಸರು ಇಂದು ಝಡತಿಮಾಡಲು ಹೊರಟಾಗ ಅವರನ್ನು ತಡೆದು ಅವರ ಮುಂದೆ ಸತ್ಯಾಗ್ರಹ ಮಾಡಿದುದ್ದಕ್ಕಾಗಿ ಫಿರೋಜಖಾನ ನೂನ, ಮಮ್ದೋತ ಖಾನಸಾಹೇಬ, ಬೇಗಮ ಶಹಾನವಾಜ, ಮೊದಲಾದ ಲೀಗ ಪ್ರಮುಖರನ್ನು ಬಂಧಿಸಲಾಗಿದೆ. ನ್ಯಾಶನಲ್ ಗಾರ್ಡ್ಸ್ ಕಚೇರಿಯಲ್ಲಿ ಒಂದು ಸಾವಿರಕ್ಕೆ ನೋಟ್ಸಿಟ್ಟು ಉಕ್ಕಿನ ಶಿರಸ್ತ್ರಾಣಗಳು ಪೋಲೀಸರಿಗೆ ದೊರೆತಿವೆ.

ಪಂಡಿತ ಜವಹರಲಾಲರ ಗೊತ್ತುವಳಿ.

ಭಾರತವು ಪೂರ್ಣಸ್ವಾತಂತ್ರ್ಯವನ್ನು ಹೊಂದಬೇಕೆಂಬ ಧ್ಯೇಯದ ಬಗ್ಗೆ ಜವಹರಲಾಲರ ಗೊತ್ತುವಳಿಯು ಘಟನಾಸಮಿತಿಯಲ್ಲಿ ಮಂಡಿಸಲ್ಪಟ್ಟಿತ್ತು. ಅದು ಸರ್ವಾನುಮತದಿಂದ ಅಂಗೀಕೃತವಾಯಿತು.

ಸುಭಾಷ ರಾಷ್ಟ್ರಗೀತೆ 0—8—0
ನವಭಾರತ— ಕಾರ್ಯಾಲಯ, ಬಳ್ಳಾರಿ.

The Rayalaseema Bank Limited, Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:— ಬಳ್ಳಾರಿ ಜಿಲ್ಲಾ:- ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ ಬಳ್ಳಾರಿ, ಹಡಗಲಿ, ಕೂಡ್ಲಿಗಿ, ಆದವಾನಿ. **ಅನಂತಪುರ:-** ಅನಂತಪುರ, ಬಿಳಗುಸ್ಸ, ಧರ್ಮಾವರಂ, ಕದಿರಿ ಪಾನಿಡಿ, ತಿಮ್ಮನಚೆರ್ಲ, ಉರವಕೊಂಡ, ಹಿಂದೂಪುರ, ಗುತ್ತಿ. **ಕರ್ನೂಲು:-** ಕರ್ನೂಲು ಪತ್ತಿಕೊಂಡ. **ಕಡಪ:-** ರಾಜಂಪೇಟೆ, ಕಡಪ. **ಚಿತ್ತೂರು:-** ಚಿತ್ತೂರು, ಮದನಪಲ್ಲಿ, ತಿರುಪತಿ, ನಾಗರಿ, ವಾಯಲ್ಪಾಡು

ಫಿಕ್ಸಡ್ ಡಿಪಾಜಿಟ್‌ನ ಬಡ್ಡೀದರ:— 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2ವರ್ಷಗಳಿಗೆ 3½%
ಕರೆಂಟು ಅಕೌಂಟು: 1%, **ಸೇವಿಂಗ್ಸ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.
ಮಾಸಿಕ ಸ್ಕಾವಿಡೆಂಟ ಫಂಡ ಡಿಪಾಜಿಟ್:- 3%. **ಬಿ. ವಿ. ಶೇಷಗಿರಿರಾವ್, ಕಾರ್ಯದರ್ಶಿ.**

—ರಾಷ್ಟ್ರೀಯ ಪುಸ್ತಕಗಳು.—

—: **ಕಾಂಗ್ರೆಸ್ ಸ್ವರೂಪ ದರ್ಶನ:**—

ರಾಷ್ಟ್ರೀಯ ಶಿಕ್ಷಣ	0—8—0
ಅಸ್ಪೃಶ್ಯತಾ-ನಿವಾರಣೆ	0-12—0
ಪ್ರಾಂತಭಾಷೆ- ರಾಷ್ಟ್ರಭಾಷೆ	0—6—0
ಖಾದಿ	0—8—0
ಕಾಂಗ್ರೆಸ್ ಮತ್ತು ಸ್ವಯಂಸೇವಕದಳ	0-10-0
ಸತ್ಯಾಗ್ರಹ(ಇತಿಹಾಸ-ತಂತ್ರ)	3-8 -0

ವಿ. ಪಿ. ಖರ್ಚು ಬೇರೆ. ಇನ್ನು ಅನೇಕ ಪುಸ್ತಕಗಳು ದೊರೆಯುತ್ತವೆ.—

ನವಭಾರತ, — ಕಾರ್ಯಾಲಯ ಬಳ್ಳಾರಿ.

ಅಂದವಾದ ಮುದ್ರಣ ಸರಳ ಕನ್ನಡ ಭಾಷೆ.
ಶಾಲಿವಾಹನ ಶಕೆ ೧೮೬೯ ನೆಯ ಸರ್ವಜಿತು ಸಂ॥

ಶ್ರೀ ಕೊಟ್ಟೂರು ಗುರು
—ಬಸವೇಶ್ವರ ಪಂಚಾಂಗ—

ಶಾಸ್ತ್ರವೇತ್ತರಿಂದ ಗುಣಿಸಲ್ಪಟ್ಟು ಪರಿಶೋಧಿತವಾಗಿ ಪ್ರಕಟವಾಗಿದೆ. ಇದರ ಆದಾಯದಿಂದ ಧರ್ಮಾರ್ಥ ಜ್ಯೋತಿಷ್ಯ ಪಾಠಶಾಲೆಯ ಪೋಷಣೆಯಾಗಲಿರುವದರಿಂದ ಸರ್ವರೂ ಪ್ರೋತ್ಸಾಹಿಸಲು ಕೋರಿದೆ.

ಬೆಲೆ, ೦—೧೦—೦ ಗುರುಬಸವೇಶ್ವರ
ಧರ್ಮಾರ್ಥ ಜ್ಯೋತಿಷ್ಯ, ಪಾಠಶಾಲೆ
ಕೊಟ್ಟೂರು (ಬಳ್ಳಾರಿ ಜಿಲ್ಲಾ.)

NAVA BHARAT, BELLARY. Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು.	Subscription Rates
ವರ್ಷಕ್ಕೆ 5-0-0	One Year 5—0—0
6 ತಿಂಗಳಿಗೆ 3-0-0	Six months 3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To
SRI.....

Printed at Krishna Press Bellary QH No. B 17 FOR (Q.H. No. B-5.)
Edited & Published by T. B. KESHAVARAO

ಜೈಹಿಂದ್ Reg. No.M 4746

ಸಂಯುಕ್ತ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಸಂಪುಟ ೬ ಸಂಚಿಕೆ ೫ ಬಳ್ಳಾರಿ ಫಿಫ್ರವರಿ ೩ ಸೋಮವಾರ ೧೯೪೭ ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವ್.

ಗುಬ್ಬಿ ನಾಟಕ ಮಂಡಲಿಯ ಕನ್ನಡ

ಹೇಮರೆಡ್ಡಿ ಮಲ್ಲಮ್ಮ

ಪಂಚವರ್ಣದ ಚಲನ ಚಿತ್ರ ೩೧-೧-೪೭ನೆಯ ಶನಿವಾರದಿಂದ

ವಿಜಯಲಕ್ಷ್ಮಿ ಕಂಪನಿಯವರಾಶ್ರಯದಲ್ಲಿನ

ಮುಬಾರಕ್ ಟಾಕೀಸ್ ಭವನದಲ್ಲಿ ಪ್ರಾರಂಭವಾಗಿದೆ.

ಇದರಲ್ಲಿ ಹಾಸ್ಯರತ್ನ ಗುಬ್ಬಿ ವೀರಣ್ಣನವರು, ಹೊನ್ನಪ್ಪ ಭಾಗವತರ್ ಮತ್ತು ಬಿ. ಜಯಮ್ಮ ಪಾತ್ರವಹಿಸಿರುವರು.

ಇದರ ಜೊತೆಯಲ್ಲಿ ಬಣ್ಣದ ವಿನೋದ ಚಿತ್ರವು ಪ್ರದರ್ಶನವಾಗುತ್ತಲಿದೆ.

VIJAYA LAKSHMI COMPANY
(LESSEE MUBARK TALKIES BELLARY)

HEMAREDDY MALLAMMA
(IN KANNADA)

Starring:— GUBBI VEERANNA, JAYAMMA AND HONNAPPA BHAGAVATHAR.

ರೇಣುಕ ಫಿಲಂಸ್‌ರವರ ತೆಲುಗು ಚಿತ್ರ.

ಅತ್ಯಂತ ಜನಪ್ರಿಯ

ತ್ಯಾಗಯ್ಯ

ತೆಲಗುಭಾಷೆ. ಸುಪ್ರಸಿದ್ಧ ಕರ್ನಾಟಕ ಸಂಗೀತ, ಲೆಕ್ಕವಿಲ್ಲದಷ್ಟು ಸುಮಧುರ ಕೀರ್ತನೆಗಳು, **ನಾಗಯ್ಯನವರ** ಮನ ರಂಜಕ ಪಾತ್ರ, ಕಣ್ಣಿಗೂ, ಕಿವಿಗೂ ಹಬ್ಬ

ಪ್ರಭಾತ ಚಲಚಿತ್ರ ಮಂದಿರ, ಬಳ್ಳಾ

Prabhat Talkies, Bellary.

28-1-47 ರಿಂದ ಪ್ರಾರಂಭವಾಗಿದೆ.

ಈ ಸಂದರ್ಭವನ್ನು ಕಳೆದುಕೊಳ್ಳಬೇ

66

THE NAVA BHARAT
ನವಭಾರತ
ಸಂಪಾದಕ-ಟಿ.ಪಿ.ಕೇಶವರಾವ್
10th Year of Publication.
3RD FEBRUARY 1947

ಪಾಲಿಸ್ತಾನ, ಹಿಂದುಸ್ತಾನ.
ಆಚಿತ್ರ—ಈಚಿತ್ರ

ಈಜಿಪ್ಟ ದೇಶದವರು ಸುಡಾನನ್ನು ತಮ್ಮ ದೇಶದಲ್ಲಿ ಸಮಾವೇಶಗೊಳಿಸಬೇಕೆಂದಿದ್ದಾರೆ. ಪಾಲಿಸ್ತಾನವನ್ನು ವಿಭಜಿಸಬಾರದು. ಇದು ನಮ್ಮ ರಾಷ್ಟ್ರವೆಂದು ಅರಬರು ಘನ ಘೋರ ಹೋರಾಟ ಹೂಡಿರುವರು. ಸಣ್ಣ ಪುಟ್ಟ ಮುಸಲ್ಮಾನ ರಾಷ್ಟ್ರಗಳಾದ ಸಿರಿಯಾ, ಲೆಬನಾನ್, ಇರಾಕ್ ವಗೈರೆ ದೇಶಗಳು ಒಂದಾಗಬೇಕೆಂದು ಹಾತೊರೆಯುತ್ತಲಿವೆ. ಯೂರೋಪು ಮತ್ತು ಹಿಂದೂಸ್ತಾನ ಹೊರತಾದ ಏಷಿಯಾದಲ್ಲಿ ಮುಸಲ್ಮಾನರು ಐಕ್ಯವಾಗಿ ದೊಡ್ಡ ಭಾಗವನ್ನು ಸೇರಲು ಹವಣಿಸುತ್ತಿರುವರು.

ಇವರೆ ಹಿಂದೂಸ್ತಾನದ ಮುಸ್ಲಿಂಲೀಗ್‌ನ ಅಧ್ಯಕ್ಷರಾದ ಮಿ॥ ಜಿನ್ನಾರವರು ಹಿಂದೂಸ್ತಾನವನ್ನು ವಿಭಜಿಸಿರಿ. ಮುಸಲ್ಮಾನರಿಗಾಗಿ ಪ್ರತ್ಯೇಕ, ಸ್ವಾಯತ್ತತೆಯ ಪಾಕಿಸ್ತಾನ ಸ್ಥಾಪಿಸಿರಿ ಎಂದು ಕೇಳುತ್ತಿರುವರು. ಅದಕ್ಕಾಗಿ ಪ್ರತ್ಯಕ್ಷ ಹೋರಾಟವನ್ನು (Direct-Action) ಬ್ರಿಟಿಷರನ್ನುಲೆ ಹೂಡದೆ ಹಿಂದೂಗಳಮೇಲೆ ಹೂಡಿ, ಕಲ್ಕತ್ತ, ನವಖಾಲಿ, ಬೀಹಾರ, ಹಜಾರ ಅತ್ಯಾಚಾರಗಳಲ್ಲಿ ಪರಿಣಮಿಸಿದ್ದು ಯಾವ ದೇಶಾಭಿಮಾನಿಗೂ ವಿಷಾದವುಂಟುಮಾಡದಿರದು.

ಪ್ರಪಂಚರಚನೆಯಲ್ಲಿ ಆರ್ಥಿಕ ರೀತಿಯಿಂದ ಸ್ವಾವಲಂಬಿಯಲ್ಲದ ಸಣ್ಣಪುಟ್ಟ ದೇಶಗಳು ಲಕ್ಷಿಸಲ್ಪಡುವಂತಿಲ್ಲ. ಜಗತ್ತಿನ ಶಾಂತಿಗಾಗಿ ಹೊಣೆಯನ್ನು ಹೊತ್ತ ರಾಷ್ಟ್ರಸಂಘದಲ್ಲಾದರೂ (United Nations Organization) ರಷ್ಯಾ, ಇಂಗ್ಲೆಂಡ್, ಅಮೆರಿಕಾ ಈ 3ದೇಶಗಳ ಮಾತೇ ನಡೆಯಲಿದೆ. ಈ ಮೂವರ ಐಕ್ಯಾಭಿಪ್ರಾಯವೇ ಒಂದುನೀತಿಯಾಗಿ ಪರಿಣಮಿಸಿ, ಇತರ ಸಣ್ಣ, ಪುಟ್ಟ ದೇಶಗಳನ್ನು ತನ್ನ ಕ್ಷೇತ್ರನೃತ್ತದಲ್ಲಿ ಎಳೆವುದು. ಈ ಅಪಾಯವನ್ನರಿತೇ ಯೂರೋಪಿನಲ್ಲಿ, ಅರಾಬ್ ದೇಶಗಳು ಒಂದೇ ಗುಂಪಿನಲ್ಲಿರಬೇಕೆಂಬ ತತ್ವಕ್ಕೆ ಬೆಂಬಲ ದೊರೆಯುತ್ತಲಿದೆ.

ಪ್ರಪಂಚದಲ್ಲಿ ಸುಳಿಗಾಳಿಯು ಹೀಗೆ ಬೀಸುತ್ತಿರುವಾಗ ಮಿ॥ ಜಿನ್ನಾರು ಸ್ವಾತಂತ್ರ್ಯ ವಿಘಾತಕವಾದ ಧೋರಣೆಯನ್ನವಲಂಬಿಸುತ್ತಿರುವುದು ದೇಶದ ದುರ್ದೈವ. ಅವರು ಇನ್ನೂ ಘಟನಾಸಮಿತಿಯಲ್ಲಿ ಬಂದಿಲ್ಲ. ಬರುವೆರೋ, ಇಲ್ಲವೋ ಹೇಳಬರುವಂತಿಲ್ಲ ಅವರು ಬರದಿದ್ದರೂ ರಥವು ಸಾಗುವುದೆಂದು ಪಂ॥ ನೆಹರೂರವರು ಹೇಳುತ್ತಿರುವರು. ಬಿಟಿಷ್ ಬಾಲಬಡೆಯುವ ಸಂಸ್ಥಾನಾಧೀಶರೂ ಕೂಡ ಅನೇಕ ಅಡ್ಡಿ ಆತಂಕಗಳನ್ನೊಡ್ಡುತಿರುವರು. ಹಿಂದೂಸ್ತಾನದ ಸ್ವಾತಂತ್ರ್ಯವು ಅದ್ಯತೀಯ ತ್ಯಾಗವಿಲ್ಲದೆ ಲಭಿಸದೆಂದು ಸೂತ್ರ ಹೇಳಬಹುದು.

ಮುನಿಸಿಪಲ್ ನವಕೆರರ ಕ್ಲೆಬ್:—ಶ್ರೀ ಅನಂತರಾಮಸೆಟ್ಟರವರು ವ್ಯಾಯಾಮೋತ್ಸವವನ್ನು 27 ನೆಯ ತಾ ನೆರವೇರಿಸಿದರು. ಶ್ರೀಮತಿ ಮ್ಯಾಕ್‌ರವರು ರೇಡಿಯೋವ್ಯಾಯಾಮವನ್ನಾಡಿದರು. ಹಿಂದಿನ ಮುನಿಸಿಪಲ್ ಕಮೀಶನರ್‌ರವರಾದ ಶ್ರೀ ನರಸಾರೆಡ್ಡಿಯವರ ಭಾವಚಿತ್ರದ ಅನಾವರಣವಾಯಿತು.

ಕೊಟ್ಟೂರು:- ಕಂಪಾಯ ಮಂತ್ರಿಗಳ ಸ್ವಾಗತವಾಗಿ ಸಾರ್ವಜನಿಕ ಸಭೆಯಲ್ಲಿ ಶ್ರೀಗಳಾದ್ಯರಾದ ಟಿ. ಸುಬ್ರಮಣ್ಯಂ, ಮು. ರಾಘವೇಂದ್ರರಾವ್ ಮತ್ತು ಮಂತ್ರಿಗಳ ಭಾಷಣವಾಗಿ ಸರಕಾರೀ ನೀತಿಯು ಸ್ಪಷ್ಟೀಕರಿಸಲ್ಪಟ್ಟಿತು.

ವತ್ರ್ತವ್ಯವಹಾರ

ಆಗಿನ, ಈಗಿನ, ಮಂತ್ರಿಗಳು.

ಮಂತ್ರಿಗಳು ಸಂಚಾರಕ್ಕೆ ಹೋದ ಕಡೆಗಳಲ್ಲಿ ಆಯಾ ಪ್ರದೇಶದ ಕಲೆಕ್ಟರ್ ಮತ್ತು ಇತರ ಅಧಿಕಾರಿಗಳು ಅವರನ್ನು ಹಿಂಬಾಲಿಸಿ ಲಿದಾಸಿಧ್ಯಪ ಏರ್ಪಾಟು ಮಾಡುವವಾಡಿಕೆ ಇದ್ದಿತು. ಈಗ ಸ್ವಲ್ಪ ವ್ಯತ್ಯಾಸವೆಂದರೆ ಕಾಂಗ್ರೆಸ್ ಮುಖಂಡರು ಜೊತೆಯಲ್ಲಿದ್ದು ಸ್ಥಾನಿಕ ಕಾಂಗ್ರೆಸ್ ಸಮಿತಿಗಳು ಅವರ ಸ್ವಾಗತಕ್ಕೆ ಏರ್ಪಡಿಸುವರು. ಮಂತ್ರಿಗಳ ಜೊತೆಯಲ್ಲಿ ಬಿಳಿಯ ಟೊಪ್ಪಿಗೆ ಮಂದಿಯೂ ಕೂಡ ಊಟ ಮಾಡುವರು. ಅವರಿದ್ದಷ್ಟು ಕಾಲ ಮಂತ್ರಿಗಳು ತಮ್ಮವರೆಂಬ ಭಾವನೆಯುಂಟಾಗುವುದು. ಮಂತ್ರಿಗಳು ಮಾತಾಡಿದರೆ ಸ್ಥಾನಿಕ ಕಾಂಗ್ರೆಸ್ ಮುಖಂಡರೂ ಕೂಡ ಮಾತಾಡಿ ಕಾಂಗ್ರೆಸಿನಧ್ಯೇಯ ಕಾರ್ಯಕ್ರಮಗಳನ್ನು ತಿಳಿಸುವರು. ಭಾಷಣಗಳಲ್ಲಿ, ಪಕ್ಷದ ಧ್ಯೇಯ ಕಾರ್ಯಕ್ರಮಗಳ ಪ್ರತಿಪಾದನೆಯಲ್ಲಿ ಹಿಂದಿನವರಿಗೂ, ಈಗಿನವರಿಗೂ ಏನೂ ವ್ಯತ್ಯಾಸವಿದ್ದಂತೆ ಕಾಣುವುದಿಲ್ಲ ಜಿಲ್ಲಾ ಮತ್ತು ತಾಲೂಕು ಅಧಿಕಾರಿಗಳ ಮನೋಪ್ರವೃತ್ತಿಯಲ್ಲಿ ಏನೂ ಬದಲಾವಣೆಯಾಗಿಲ್ಲ ಜೈತರು ಕಛೇರಿಗಳಿಗೆ ಬಂದಾಗ ಸಾರ್ವಜನಿಕ ಸೇವಕರೆಂಬ (Public Servants) ಈ ಅಧಿಕಾರಿಗಳಿಂದ, ಗುಮಾಸ್ತರಿಂದ ಉಚಿತವಾಗಿ ಯಾವ ಕೆಲಸಗಳು ಆಗುವಂತಿಲ್ಲ ಲಂಚದ ಹೆಚ್ಚಳವಿದೆಯಾಗಲಿ, ಯಾವ ಶಾಲೆಯಲ್ಲೂ ಅದರ ಇಳಿತದ ಲಕ್ಷಣಗಳೇ ಇಲ್ಲ. ಸೌಜನ್ಯ ದಯೆ, ದಾಕ್ಷಿಣ್ಯ ಇವುಗಳ ಸುಳಿವಾದರೂ ಬಹುಸಂಖ್ಯಾಕ ಅಧಿಕಾರಿಗಳಲ್ಲಿಲ್ಲ. ಕೊಟ್ಟ ಅರ್ಜಿಗಳು ಮಾಯವಾಗುತ್ತವೆ. ಅವು ಸಮುದ್ರದಲ್ಲಿ ಎಳ್ಳಿನಂತೆ ಯಾವುದೋ ಒಂದು ಭಾಗದಲ್ಲಿದ್ದರೂ, ವರ್ಷಗಟ್ಟಲೆ ವಿಚಾರಣೆಯಾಗುವುದಿಲ್ಲ ಲಂಚ ಮಾಮೂಲು ಕೊಟ್ಟವರಿಗೆ ವಿಶೇಷ ಸೌಲಭ್ಯ ಶೀಘ್ರ ಕಾರ್ಯಸಾಧನೆ ವಿಚಿತ್ರ ತೊಂದರೆಗಳಾಗುತ್ತಲೇ ಇವೆ. ಮಂತ್ರಿಗಳಿಗೆ ಕೊಟ್ಟ ಅರ್ಜಿಗಳು ಆವಾದಿತ ಅಧಿಕಾರಿಗೇ ವಿಚಾರಣೆಗೆ ಬರುತ್ತಲಿವೆ.

ವಿಚಾರಣೆ, ಶಿಕ್ಷೆಯ ವಿಕ್ರಮವು ಸರಿಯಾಗಿಲ್ಲ ಬೇಕು ಬೇಡಾದವರು ಎಂಬ ತಕ್ಕಡಿ ಇನ್ನೂ ಅಸಮಸರಿಸಲ್ಪಡುತ್ತಿದೆ. ಸ್ವಾರ್ಥದ ಸುಳಿಗಾಳಿ ಬಿರುಗಾಳಿಗಳಲ್ಲಿ, ಮಂತ್ರಿಗಳೂ, ಅವರ ಕಾರ್ಯದರ್ಶಿಗಳೂ ಸಿಕ್ಕಿ ಬಿದ್ದಿರುವರು. ನಿಷ್ಪಕ್ಷವಾತ ದೃಷ್ಟಿಯವರೆಂದೆನಿಸಿಕೊಳ್ಳಲು ಸಂಬಂಧಿಸಿದ ಕೆಲ ಮಂತ್ರಿಗಳಾದರೂ ಪ್ರಯತ್ನಿಸಬಹುದಿತ್ತು. ಹೀಗಾಗದಿದ್ದುದು ನಮ್ಮ ದುರ್ದೈವ ಪ್ರಜಾಸ್ವಾಯತ್ತತೆ (Democracy) ಯತತ್ವಗಳಿಗೆ ಕುಠಾರಪ್ರಾಯ. [ಹಳ್ಳಿಯವ]

ಕೂಡ್ಲಿಗಿಯಲ್ಲಿ ಸ್ವತಂತ್ರದಿನಾಚರಣೆ

(ನಮ್ಮ ಸುದ್ದಿಗಾರರಿಂದ)

ತಾ. 26-1-47 ಬೆಳಿಗ್ಗೆ ಪ್ರಭಾತಫೇರಿ ಹಾಗೂ ಧ್ವಜಾರೋಹಣ ಕಾರ್ಯ ಸರಾಗವಾಗಿ ಜರುಗಿತು. ಸಾಯಂಕಾಲ 5 ಗಂಟೆಗೆ ಶ್ರೀ ರಾಮರಾಯರವರ ಅಧ್ಯಕ್ಷತೆಯಲ್ಲಿ, ನೆಹರು ಮೈದಾನದಲ್ಲಿ ಬಹಿರಂಗಸಭೆ ಜರುಗಿತು. ವಾಮದೇವ ಶರ್ಮ, ಡಿ. ವಾಲ್. ಮತ್ತು ಹೈಸ್ಕೂಲು ವಿದ್ಯಾರ್ಥಿಗಳು ಭಾಷಣಮಾಡಿದರು. ಜೆ. ಯಲ್ಲಪ್ಪ ಎಂಬ ವಿದ್ಯಾರ್ಥಿಯು ತನ್ನ ಸ್ವಾತಂತ್ರ ಮೂಸಪತ್ರಿಕೆ ಹೊರಡಿಸಿದ ಧ್ವಜಾರೋಹಣವು ಶ್ರೀ ಸ್ವರೂಪಸಿಂಗಾರಿಂದ ಮಾಡಲಾಯಿತು. ಮಂಗಳಗೀತೆಯೊಂದಿಗೆ ಸಭೆ ವಿಸರ್ಜಿತವಾಯಿತು.

ಕಂದಾಯ ಮಂತ್ರಿಗಳು ತಮ್ಮ ಸಂಚಾರದಲ್ಲಿ 25ನೆಯ ಸಾಯಂಕಾಲ ಇಲ್ಲಿಗೆ ಬಂದು ನೆಹರೂ ಮೈದಾನದಲ್ಲಿ ನಡೆಯೇಕಾಗಿದ್ದ ಸಭೆಯಲ್ಲಿ ಜೈತರಿಗೆ ಆವಶ್ಯಕವಾದ ಗೊಬ್ಬರ, ಕೃಷಿಗೆಯ ಕಂತಿನ ಸೌಕರ್ಯ, ಒಳ್ಳೆಯ ಬೀಜ ಉಪಕರಣಗಳಿಗಾಗಿ ಕೇಳಿಕೊಂಡಿದ್ದನ್ನು ಮನ್ನಿಸಿ ಸಹಾಯಮಾಡುವುದಾಗಿ ತಿಳಿಸುತ್ತಾ ತುಂಗಭದ್ರಾ ಯೋಜನೆಯನ್ನು ನಿಲ್ಲಿಸಲು ಬರುವುದಿಲ್ಲೆಂದು ಉತ್ತರಿಸಿದರು. ನೆಹರೂ ಸಂಘಾಧ್ಯಕ್ಷರು ವಂದನಾರ್ಪಣೆ ಮಾಡಿದರು.

ಹಿಟ್ಲರನ ಪಾರ್ಟಿ ಬಲಗೊಳ್ಳುತಿದೆ

ಯೂರೋಪಿನ ಸಮಸ್ಯೆಗಳನ್ನು ಅಭ್ಯಸಿಸಲು ಏರ್ಪಟ್ಟ ಅಂತರಾಷ್ಟ್ರೀಯ ಸಮಿತಿಯು ಹೇಳಿದಂತೆ ಪುನಃ ಅಧಿಕಾರಕ್ಕೆ ಬರಲು ಜರ್ಮನಿಯಲ್ಲಿ ನಾಜಿಪಾರ್ಟಿಯು ಸಂಘಟಿಸಲಾಗುತ್ತಿದೆ. ಜರ್ಮನಿಯ ಎಲ್ಲಾ ಭಾಗಗಳಲ್ಲಿ ನಾಜಿಸಂಘದ ಶಾಖೆಗಳು ಹಬ್ಬುತ್ತಲಿವೆ. ಈ ಸಂಘದವರು ಮಿತ್ರಮಂಡಲಿಯವರೇರ್ಪಡಿಸಿದ ಪ್ರಜಾಸಂಘಗಳಲ್ಲೆಲ್ಲಾ ಹೊಕ್ಕು ಸದಸ್ಯರಾಗುತಿರುವರು. ಎಲ್ಲೆಲ್ಲಿ ವಿರೋಧದ ಭಾಸವಾಗುತಿರುವುದೋ, ಅಲ್ಲಲ್ಲಿ ವಿರೋಧಮಾಡದೆ ತೆಪ್ಪಗಿದ್ದು ಸಾಧ್ಯವಾದಷ್ಟು ಮಟ್ಟಿಗೆ ಸದ್ಯಕ್ಕೆ ಗಲಾಟೆಯಿಲ್ಲದೆ (Friction) ಕೆಲಸಸಾಗಿಸುತ್ತಿರುವರು.

ಪಾಲಿಸ್ತಾನದಲ್ಲಿ.

ಪಾಲಿಸ್ತಾನದ ಯಹೂದಿಕ್ರಾಂತಿಕಾರೀ ಸಂಸ್ಥೆಯವರು ಇಬ್ಬರು ಬ್ರಿಟಿಷರನ್ನು ಹಾಡಹಗಲು ಬಂಧಿಸಿ ತಮ್ಮ ಕ್ರಾಂತಿಕಾರನ ಗಲ್ಲಿನಶಿಕ್ಷೆಯನ್ನು ಮುಂದೂಡಿದಕಾರಣ ಅವರನ್ನು ಬಿಡುಗಡೆ ಮಾಡಿರುವರು.

ಬೂಂಬಾಯಿಯಲ್ಲಿ ಗಲಭೆಗಳ ಪರಿಣಾಮವಾಗಿ ನಾಲ್ಕು ಭಾಗಗಳ ಮೇಲೆ ಸಾಮೂಹಿಕ ದಂಡವನ್ನು ಹೇರಲಾಗಿದೆ.

ನೀವು ಬರಬೇಡಿರಿ

ದಕ್ಷಿಣಭಾರತದಲ್ಲಿ ವರ್ಣದ್ವೇಷವಿದ್ದು ಭಾರತೇಯರನ್ನು ಅತ್ಯಂತ ಹೀನಾಯವಾಗಿ ನೋಡಿಕೊಳ್ಳುತಿರುವಕಾರಣ ನೀವು ಬರಬೇಡಿರಿ ಎಂದು ದ. ಆ. ಭಾರತೇಯರು ಬ್ರಿಟಿಷ್ ಧೊರೆಗಳಿಗೆ ಸಂದೇಶ ಕಳುಹಿಸಿರುವರು.

ಬರ್ಮಾ

ಬರ್ಮಾಕ್ಕೊಂದು ಘಟನಾಸಮಿತಿಯನ್ನು ನಿರ್ಮಿಸಿ ತನ್ಮೂಲಕ ಸ್ವತಂತ್ರ ಘಟನೆಯೊಂದನ್ನು ಏರ್ಪಡಿಸಿ ಕೊಳ್ಳಬಹುದೆಂಬುದನ್ನು ಬ್ರಿಟಿಷ್ ಪಾರ್ಲಿಮೆಂಟಿನವರು ಒಪ್ಪಿರುವರು. ಆದರೆ ಘಟನಾಸಮಿತಿಯು ಸ್ವತಂತ್ರ ಶಕ್ತಿಯನ್ನುಳ್ಳದಾಗಿಲ್ಲವೆಂದೂ ಒಂದು ವರ್ಷದೊಳಗಾಗಿ ಪೂರ್ಣಸ್ವಾತಂತ್ರ್ಯವನ್ನು ಹೊಂದುವದು ಶಕ್ಯವಿಲ್ಲೆಂದೂ ಪ್ರಕಟಿಸಿ ಬರ್ಮಾದಿಂದಹೋದ ಶಿಷ್ಟಮಂಡಳದ ಇಬ್ಬರು ಸದಸ್ಯರು ರಾಜೀನಾಮೆ ಕೊಡಲಿರುವರು.

ಪಂಜಾಬಿನಲ್ಲಿ ಲೀಗ್ ಗಲಭೆ.

ಲೀಗ್‌ನವರು ಸತ್ಯಾಗ್ರಹ ಹೂಡಿದ ಪರಿಣಾಮವಾಗಿ ಮುಸ್ಲಿಂ ಧುರೀಣರು ಬಂಧಿತರಾದುದು ಸರಿಯಷ್ಟೆ. ಆದರೆ ಪಂಜಾಬ್ ಸರಕಾರದವರು ರಾಷ್ಟ್ರೀಯಸ್ವಯಂಸೇವಕಸಂಘ ಮತ್ತು ಮುಸ್ಲಿಂನ್ಯಾಶನಲ್ ಗಾರ್ಡ್ ಮೇಲಿನ ನಿರ್ಬಂಧವನ್ನು ತೆಗೆದುಕೊಂಡು, ಮುಖಂಡರನ್ನು ಬಿಡುಗಡೆ ಮಾಡಿದರು. ಅಲ ನೆಯ ತಾ. ಮತ್ತೆ ಮುಸ್ಲಿಂರು ಸತ್ಯಾಗ್ರಹ ಹೂಡಿದರು. ಸರ್ದಾರ ಶೌಕತ ಹಯಾತಖಾನ್, ಬೇಗಂಶಹಾನವಾಜ ಲಾಹೋರ ಕಾರ್ಪೋರೇಶನ್ ಮೇಯರ್ ಮಿಯಾ ಅಮೀರುದ್ದೀನವಗೈರೆ ೬೨ ಜನರನ್ನು ಸೆರೆಹಿಡಿಯಲಾಯಿತು.

ಪಂಜಾಬಿನ ಎಲ್ಲಾ ಭಾಗಗಳಲ್ಲೂ (ಫಿರೋಜಪುರ, ಮುಲ್ತಾನ ಲ್ಯಾಲಪುರ, ಫಿರೋಜಪುರ) ಮುಸ್ಲಿಂ ಮೆರವಣಿಗೆಗಳು ಹೊರಡಿಸಲಾಗಿದ್ದು ಅನೇಕರ ಬಂಧನವಾಗಿದೆ. ಅಲ್ಲಲ್ಲಿ ಲಾಠಿ ಛಾರ್ಜು ಆಯಿತು.

ಮದ್ರಾಸ್ ಆಡಳಿತ.

ಮದ್ರಾಸ್ ಪ್ರಾಂತದಲ್ಲಿ ೭೫ ಕಮ್ಯೂನಿಷ್ಟರನ್ನು ಸಾರ್ವಜನಿಕ ಸುರಕ್ಷಿತತೆ ಅರ್ಡಿನನ್ಸು ಪ್ರಕಾರಕ್ಕೆ ಬಂಧಿಸಲಾಗಿದೆ.

ಮದ್ರಾಸ್ ಪ್ರಾಂತದಲ್ಲಿ ಜಮೀನ್ದಾರಿ ಪದ್ಧತಿಯನ್ನು ನಿಮೂಲಗೊಳಿಸಲು ಒಂದು ಶಾಸನವನ್ನು ತರಲಿದ್ದಾರೆ.

ಮದ್ರಾಸಿನ ಮತ್ತೆ ೮ ಜಿಲ್ಲೆಗಳಲ್ಲಿ ಮದ್ಯನಿಷೇಧ ಶಾಸನವು ಜಾರಿಯಲ್ಲಿ ಬರುವುದೆಂದು ಗೊತ್ತಾಗಿದೆ.

"ವಿಷಮ ವಿವಾಹಗಳು"

ಮುಂಬಯಿಯಲ್ಲಿ ಮುಸ್ಲಿಮೇತರ ಬಹುಪತ್ನೀ ವಿವಾಹಗಳನ್ನು ಅಕ್ರಮವೆಂದು ಸಾರುವಂತೆ ಮೂಡು ವದರಲ್ಲಿ ಶ್ರೀಮತಿ ಲೀಲಾವತಿ ಮುನಶಿಯವರು ಈಗಾಗಲೇ ಯಶಸ್ವಿಯಾಗಿದ್ದಾರೆ. ಈಗ ಅವರು "ವಿಷಮ ವಿವಾಹ" ಗಳನ್ನು ಅಂದರೆ ೧೪ ವರ್ಷಕ್ಕಿಂತ ಕಡಿಮೆ ವಯಸ್ಸಿನ ಹೆಂಗಸನ್ನು ೪೫ ಕಿಂತ ಹೆಚ್ಚು ವಯಸ್ಸಿನ ಪುರುಷನಿಗೆ ಕೊಟ್ಟು ಮಾಡುವ ವಿವಾಹಗಳನ್ನು ಪ್ರತಿ ಬಂಧಿಸಲು ಮಸೂದೆಯೊಂದನ್ನು ತಂದಿದ್ದಾರೆ. ಅಂಥ ಮದುವೆಯಲ್ಲಿ ಭಾಗಿಗಳಾದವರಲ್ಲಿ ಮುಖ್ಯರಾದವರನ್ನು ದಂಡಿಸಲು ಆ ಮಸೂದೆ ಇಚ್ಛಿಸುತ್ತದೆ. ಆದರೆ ಬಹು ಪತ್ನೀತ್ವ ಪ್ರತಿಬಂಧಕ ಕಾಯದೆಯಲ್ಲಿರುವಂತೆ ಅಂಥ ಮದುವೆಗಳನ್ನು ಅಕ್ರಮವೆಂದು ಸಾರಲು ಅದು ಅಪೇಕ್ಷಿಸುವದಿಲ್ಲ

ನಮ್ಮ ದೇಶದಲ್ಲಿ ಅಲ್ಪವಯಿ ಕಾಯದೆಯಲ್ಲಿ ಬಹಳ ತೊಡಕುಗಳಿವೆ. ಸಾಧಾರಣವಾಗಿ ಒಂದು ವ್ಯಕ್ತಿಗೆ ೧೪ ವರ್ಷ ವಯಸ್ಸು ಪೂರ್ತಿಯಾಗೊಡನೆ ಪ್ರೌಢತ್ವ ಪ್ರಾಪ್ತವಾಗುವದು. ಆದರೆ ಅವನು ಆ ವಯಸ್ಸಿಗೆ ಬರುವ ಮೊದಲೆ ತನ್ನ ನೈಸರ್ಗಿಕ ಪಾಲಕನನ್ನು ಕಳೆದುಕೊಂಡು ಅವನವೇಲೆ ಪಾಲಕನನ್ನು ನೇಮಿಸುವ ವಾಳಿ ನ್ಯಾಯಸ್ಥಾನಕ್ಕೆ ಬಂದರೆ, ಆಗ ಅವನು ೨೧ ನೆ ವಯಸ್ಸನ್ನು ಪೂರೈಸುವನರೆಗೆ ತನ್ನ ಸ್ವಂತ ವ್ಯವಸ್ಥೆಯನ್ನು ನೋಡಿಕೊಳ್ಳಲು ಸಮರ್ಥನೆಂದು ಅಂಗೀಕೃತವಾಗುವದಿಲ್ಲ. ಮದುವೆಯ ಮುಟ್ಟಿಗೆ ಹುಡುಗ ೧೪ ನೆ ವಯಸ್ಸಿಗೆ ಬಂದೊಡನೆಯೆ ಪ್ರೌಢನೆಂದು ಪರಿಗಣಿಸಲ್ಪಡುವನು ಆದರೂ ಯಾವನೊಬ್ಬನು ಅಥವಾ ಒಬ್ಬಳು ಇನ್ನೂ ಮೈನರಾಗಿರುವಾಗಲೇ ಆ ವ್ಯಕ್ತಿಯನ್ನು ವಿವಾಹ ಬಂಧನದಲ್ಲಿ ಪಾಲಕರು ಬಿಗಿಯಬಲ್ಲರು. ಬಾಲವಿವಾಹವನ್ನು ತಡೆಯಲುದ್ದೇಶಿಸುವ ಶಾರದಾ ಕಾಯದೆ ಕೂಡ, ಆ ಮದುವೆಯನ್ನೆ ಅಕ್ರಮವೆಂದು ಸಾರುವದಿಲ್ಲ. ಕೆಲವರಿಗೆ ದಂಡ ಇಲ್ಲವೆ ಶಿಕ್ಷೆಯ ರೂಪದಲ್ಲಿ ದಂಡನೆಯನ್ನು ಮಾತ್ರ ಅದು ವಿಧಿಸುತ್ತದೆ ಆದರೆ ಆ ದಂಡನೆ ಹೊರಸಲ್ಪಡಲಿ ಇಲ್ಲವೆ ಬಿಡಲಿ, ಆ ಮದುವೆ ವಧೂವರರಿಬ್ಬರಿಗೂ ಬಂಧಕವೇ ಆಗಿದೆ. ಅದು ಅಕ್ರಮವಾಗುವದಿಲ್ಲ ಇಲ್ಲದೆ ಅಸಿಂಧುವಾಗುವದಿಲ್ಲ

ಶ್ರೀಮತಿ ಮುನಶಿಯವರ "ವಿಷಮ ವಿವಾಹ ಮಸೂದೆ ಅದೇ ತರಹದ್ದು, ಕಾಯದೆಗೆ ಕೈಹಾಕಲು ಸಾಧ್ಯವಾಗುವ ಮೊದಲ ವಿವಾಹದ ಕರ್ಮವೆಲ್ಲ ಮುಗಿದುಹೋದರೆ ಅಲ್ಪವಯಿ ಹುಡುಗಿಯಾಗಲಿ ಆಕೆಯ ಹಿತೈಷಿಗಳಾಗಲಿ ಕೆಲವರನ್ನು ಶಿಕ್ಷೆಗೆ ಗುರಿ ಮಾಡುವದರಿಂದಷ್ಟೇ ತೃಪ್ತಿಯನ್ನು ಹೊಂದಬೇಕಾಗುವದು.

ಇದು ಸಾಲದೆಂದು ನನಗೆನಿಸುತ್ತದೆ. ಅಂಥ ಕಾಯದೆಯ ಮೇರೆಗೆ ತಪ್ಪು ಸ್ಥಾಪಿಸಲ್ಪಟ್ಟ ಮೇಲೆ ಈ ಕೆಳಗಿನ ಬೆಲೆಯ ಯಾವುದೊಂದು ಪರಿಹಾರ ದೊರಕುವಂತಿರಬೇಕು. ತಪ್ಪು ಸ್ಥಾಪಿಸಲ್ಪಟ್ಟ ಮಾತ್ರಕ್ಕೆ ಆ ಮದುವೆ ರದ್ದಾಗಬೇಕು. ಅವಳು ಪ್ರೌಢತ್ವಕ್ಕೆ ಬಂದ ಮೂರು ತಿಂಗಳೊಳಗೆ ಅವಳು ಕೊನೆಯ ಆಜ್ಞೆಯನ್ನು ಪಡೆಯಲು ಹಾಜರಾಗುವ ಗೋಸುಗ ಒಂದು ದಿನವನ್ನು ನಿಶ್ಚಿತಗೊಳಿಸಬೇಕು. ಆದಿನ ಹುಡುಗಿಯ ಇಚ್ಛೆಯನ್ನು ಕೇಳಿ ತಿಳಿದುಕೊಳ್ಳಬೇಕು. ಅವಳಿಗೆ ಆ ಮದುವೆ ರದ್ದಾಗಬೇಕೆಂದು ಇಚ್ಛೆ ಇದ್ದರೆ ಕೊನೆಯ ತೀರ್ಪು ಹಾಗೇ ಆಜ್ಞಾಪಿಸಬೇಕು. ಬದಲಿಗೆ ಆ ಮದುವೆಯನ್ನು ಅನುಸರಿಸಲು ಅವಳಿಗೆ ಮನಸಿದ್ದರೆ ಪ್ರಾರಂಭಿಕ ತೀರ್ಪನ್ನು ರದ್ದುಗೊಳಿಸಬೇಕು. ಈ ನಡುವಿನ ಅಂತರದಲ್ಲಿ ಉಭಯ ಪಕ್ಷಗಳೂ ಬೇರೆ ಮದುವೆಯಲ್ಲಿ ಬಂಧಿತರಾಗುವಂತಿಲ್ಲವೆಂದು ಹೇಳಬೇಕಾಗಿಯೆ ಇಲ್ಲ.

ಸ್ತ್ರೀಗೆ ರಕ್ಷಣೆ ಕೊಡುವ ಇಚ್ಛೆ ಕಾಯದೆಗೆ ಇದ್ದರೆ ಅದು ಪರಿಣಾಮಕಾರಿ ರಕ್ಷಣೆಯನ್ನು ಕೊಡತಕ್ಕದ್ದು. ತನ್ನ ಕಾಲದಿಂದ ದಂಡಿಸಲ್ಪಟ್ಟ ಗಂಡನೊಡನೆ ಬಾಳುವೆ ಮಾಡುವದು ಯಾವ ಹೆಂಡತಿಗೂ ಸುಖದಾಯಕವಾಗುವದು ನ್ಯಾಯಸ್ಥಾನಗಳ ಫೌಜದಾರಿ (ಕ್ರಿಮಿನಲ್) ಅಧಿಕಾರ ಪರಿಧಿಯಲ್ಲಿ ಸೇರಿದ ಕೇವಲ

ದಿವಾಣಿ (ಸಿವಿಲ್) ಪರಿಧಿಯಲ್ಲಿ ಸೇರಿದರೂ ಚಿಂತೆಯಿಲ್ಲ, ಹೆಂಗಸಿಗೆ ಕೊಡುವ ರಕ್ಷಣೆ ಪರಿಪೂರ್ಣವಾಗಿರಬೇಕು.

ಇನ್ನು, ಈ ಮಸೂದೆ ಈಗಿರುವಂತಿದ್ದರೆ, ೧೪ ವರ್ಷದ ಹುಡುಗಿಯನ್ನು ೪೪ ವಯಸ್ಸಿನ ವರನಿಗೆ ಮದುವೆ ಮಾಡಲು ಸಾಧ್ಯ ಉಂಟಾದರೂ ೧೭ ವರ್ಷದ ಹುಡುಗಿಯನ್ನು ೪೫ ವರ್ಷದವನಿಗೆ ಮದುವೆ ಮಾಡಲು ಹಾದಿಯಿಲ್ಲ. ಇದರ ಬದಲು ಅಲ್ಪವಯಸ್ಸಿನ ಹುಡುಗಿಯನ್ನು ಮದುವೆಯ ಕಾಲಕ್ಕೆ ಅವಳ ವಯಸ್ಸಿನ ಎರಡೂವರೆ ಪಾಲಿಗಿಂತ ಹೆಚ್ಚು ವಯಸ್ಸಿನ ಗಂಡನಿಗೆ ಕೊಡುವ ಎಲ್ಲ ಪ್ರಕರಣಗಳಿಗೂ ಈ ಕಾಯಿದೆಯನ್ನು ಅನ್ವಯಿಸಿದರೆ ಇದಕ್ಕಿಂತ ಸರಳವಾಗುವದೆಂದು ನನ್ನ ಎಣಿಕೆ. [ಮುಶ್ಶಾವಾಲರಲೇಖನ ಕರ್ಮವೀರ]

ಹಿಂದುಸ್ತಾನಿ ಮತ್ತು ಸರಕಾರ.

ಹಿಂದುಸ್ತಾನಿಯ ಬಗ್ಗೆ ಸರಕಾರ ತಳೆದ ಧೋರಣದಲ್ಲಿ ಮಾರ್ಪಾಡಾಗಬೇಕಾಗಿದೆ. ಇಂದು ತಾಳಿದ ಧೋರಣ ಅರಿಮನಸ್ಸಿನದಾಗಿದೆ. ಮತ್ತು ಅದರಲ್ಲೇನೂ ಜೀವವಿಲ್ಲ ಅಶಾಂತ ವರುಷಗಳಲ್ಲಿ ಎಲ್ಲವೂ ಸಂಪೂರ್ಣವಾಗಿ ಅವ್ಯವಸ್ಥಿತ ಸ್ಥಿತಿಯಲ್ಲಿದ್ದಾಗ ಕೈಕೊಂಡ ಧೋರಣದ ಪರಿಣಾಮವಿದೆಂದು ಕದಾಚಿತ ಹೇಳಬಹುದು ಇದೀಗ ಲೋಕಪ್ರತಿನಿಧಿಕ ಸರಕಾರ ಮತ್ತೆ ಅಡಳಿತ ಸೂತ್ರ ವಹಿಸಿಕೊಂಡಿದ್ದರಿಂದ ಇದೀ ಧೋರಣವನ್ನು ಮಾರ್ಪಡಿಸುವದು ಅತ್ಯವಶ್ಯವಾಗಿದೆ ಹಿಂದುಸ್ತಾನೀ ನ್ಯಾಯವಾದ ವಿಷಯವಾದ್ದರಿಂದ ನಮ್ಮ ಸರಕಾರ ದೂರದೃಷ್ಟಿ ಮತ್ತು ಜಾಣತನವನ್ನು ಪಯೋಗಿಸಿ ಕಾರ್ಯಕ್ಷಣೆಯಾಗಬೇಕಾಗಿದೆ. ಬೇಡಾದವರ ಮೇಲೆ ಪರದೇಶಿ ಭಾಷೆಯನ್ನು ಹೇರುವ ಬ್ರಿಟಿಶ ಪದ್ಧತಿಯನ್ನು ಅವರು ಸ್ವೀಕರಿಸಕೂಡದು ಈ ದೃಷ್ಟಿಯಿನ್ನಿಟ್ಟುಕೊಂಡು ಗುಜರಾಥ ಹಿಂದುಸ್ತಾನೀ ಪ್ರಚಾರ ಸಮಿತಿಯವರು ಸರಕಾರಕ್ಕೆ ಕೆಲ ಸೂಚನೆಗಳನ್ನು ಗೊತ್ತುವಳಿಯ ಮೂಲಕ ಇತ್ತೀಚೆ ನೂಡಿದ್ದಾರೆ. ಅದರ ಸಾರವನ್ನು ಕೆಳಗೆ ಕೊಟ್ಟಿದೆ.

ಹಿಂದುಸ್ತಾನಿಯು ಉರ್ದು ಮತ್ತು ಹಿಂದೀ ಭಾಷೆಯಿಂದ ಭಿನ್ನವಾದ ಭಾಷೆಯಾಗಿದೆ ಅದನ್ನು ದೇವನಾಗರಿ ಇಲ್ಲವೆ ಉರ್ದುಲಿಪಿಗಳಲ್ಲಿ ಬರೆಯಬಹುದು. ಶಾಲೆಗಳಲ್ಲಿ ಎರಡೂ ಲಿಪಿಗಳನ್ನು ಕಲಿಸುವ ವ್ಯವಸ್ಥೆಯನ್ನು ಮಾಡತಕ್ಕದ್ದು ಎಂಬುದಾಗಿ ಮುಂಬಯಿ ಸರಕಾರ ೧೯೩೯ ರಲ್ಲಿ ಸ್ಪಷ್ಟಪಡಿಸಿದ್ದು ಸಂತೋಷಪ್ರದ. ಈ ತತ್ವ ಈಗಲೂ ಜಾರಿಯಲ್ಲಿದೆಂದು ತಿಳಿದುಕೊಂಡು ಸರಕಾರಕ್ಕೆ ಸಮಿತಿ ಕೆಳಗಿನ ಸಲಹೆಯನ್ನು ಕೊಡಬಯಸುತ್ತದೆ.

೧) ಹಿಂದುಸ್ತಾನೀ ಕಲಿಸುವದನ್ನು ವ್ಯಾಪಕಗೊಳಿಸಬೇಕು.

ಅ) ಮಾಧ್ಯಮಿಕ ಶಾಲೆಗಳಲ್ಲಿ ಮ್ಯಾಟ್ರಿಕ ಪರೀಕ್ಷೆಯ ವರೆಗೆ.

ಬ) ಎಲ್ಲ ಮೆಟ್ರಿಲುಗಳಲ್ಲಿ..... .....ಮತ್ತು

ಕ) ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಕರ ತರಬೇತಿ ವರ್ಗಗಳಲ್ಲಿ ಹಿಂದುಸ್ತಾನಿಯಲ್ಲಿ ಕಲಿಸಬೇಕು.

೨) ವಿದ್ಯಾರ್ಥಿಗಳು ಬೇಕಾದ ಎರಡು ಲಿಪಿಗಳನ್ನು ಕಲಿಯಬಹುದೆಂದು ವಿಕಲ್ಪವಿಟ್ಟದ್ದು ಮತ್ತು ಹಿಂದೀ ಮತ್ತು ಉರ್ದು ಶಾಲೆಗಳಲ್ಲಿ ಹಿಂದುಸ್ತಾನಿಯನ್ನು ಕಲಿಸಬೇಕೆಂಬ ನಿರ್ಬಂಧವನ್ನು ಹಾಕದಿದ್ದುದು ಮೊದಲಿನ ಧೋರಣದ ಮೂಲಕ್ಕೆ ಕೊಡಲಿ ಪೆಟ್ಟು ಹಾಕುತ್ತದೆ. ೧೯೩೯ರಲ್ಲಿ ಸ್ವೀಕರಿಸಿದ ಮೂಲತತ್ವದ ಮಹತ್ವವನ್ನೇ ಅಲ್ಲಗಳೆಯುತ್ತದೆ.

ಈ ಕ್ಷೇತ್ರದಲ್ಲಿರುವ ಕಿಂಚಿತ್ ಮತಭೇದವನ್ನು ಈ ಧೋರಣದಿಂದ ಸರಕಾರ ಒಪ್ಪಿದಂತಾಗುವದೆಂಬುದು ನಿಜ. ಸಾರ್ವಜನಿಕ ಅಭಿಪ್ರಾಯವನ್ನು ಸರಕಾರ ಮೊದಲೆ ತಿಳಿದುಕೊಂಡು ಧೋರಣ ನಿರ್ಧರಿಸಲಾರದೆಂಬುದು ನಿಜ. ಆದುದರಿಂದ ಸಮಿತಿಯವರು ಶಾಲೆಗಳಲ್ಲಿ ಹಿಂದೂಸ್ತಾನಿಯನ್ನು ಅವಶ್ಯಕವಾಗಿ ಕಲಿಯತಕ್ಕ ವಿಷಯವೆಂದು ಶಿಫಾರಸ್ಸು ಮಾಡಲಾರರು ಆದರೂ ೧೯೩೯ರಲ್ಲಿ ಮಾಡಿದ ಘೋಷಣೆಯಲ್ಲಿ ಅಡಕವಾಗಿರುವ ನೈತಿಕ ಕರಾರನ್ನು ಸುಲಭವಾಗಿ ಅಲ್ಲಗಳೆ

ಯಲಾಗದು. ಸರಕಾರದ ಧೋರಣ ಪೂರ್ಣವಾಗಿ ಬದಲಾಗಬೇಕಾಗಿದೆ.

೩) ಹಿಂದೀ ಮತ್ತು ಉರ್ದು ಎರಡು ಶೈಲಿಯನ್ನು ಕಲಿತರೆ ತೀರಿತೆಂದು ಹೇಳಿ ಹಿಂದುಸ್ತಾನಿಯನ್ನು ಕಲಿಯದಿರಲು ಅವಕಾಶ ಕೊಡಕೂಡದು. ಸದ್ಯದಂತೆ ಲಿಪಿಯನ್ನು ಕಲಿಯುವದರಲ್ಲಿ ವಿಕಲ್ಪವಿರಬಾರದು. ಆದರೆ ಜನತೆಯ ರಾಷ್ಟ್ರೀಯ ಭಾಷೆಯೂದ ಹಿಂದುಸ್ತಾನಿಯನ್ನು ಎರಡು ಲಿಪಿಗಳಲ್ಲಿ ಕಲಿಯಬೇಕು ಇಲ್ಲವೆ ಕಲಿಯಬಾರದು ಎಂಬದಾಗಿ ಇರತಕ್ಕದ್ದು ಹಿಂದೀ ಮತ್ತು ಉರ್ದು ಎರಡೂ ಶಾಲೆಗಳಿಗೆ ಈ ನಿಯಮ ಅನ್ವಯಿಸತಕ್ಕದ್ದು.

೪) ಈ ಧೋರಣವನ್ನು ಅನುಸರಿಸಿದರೆ ಎರಡು ಲಿಪಿಗಳಲ್ಲಿ ಪಾಠಗಳನ್ನು ಹೇಳಲು ಸಮರ್ಥರಿದ್ದ ಶಿಕ್ಷಕರಿರಬೇಕಾದುದು ಅವಶ್ಯ. ಸರಕಾರದ ಇಚ್ಛೆಯೂ ಇದೆ ಎಂಬುದಾಗಿದೆಂದು ತಿಳಿಯಲು ಸಮಿತಿಗೆ ಸಂತೋಷವೆನಿಸುತ್ತದೆ

೫) ಹಿಂದಿಯನ್ನಾಗಲಿ ಕೆಲಮಟ್ಟಿಗೆ ಅರಿತಿರುವ ತಿಕ್ಷಕನು ತಾನರಿಯದ ಹಿಂದಿ ಇಲ್ಲವೆ ಉರ್ದು ಲಿಪಿಯನ್ನು ಕಲಿತು ಅದರಲ್ಲಿ ಕೆಲವು ಪಾಠಗಳನ್ನು ಕಲಿಸಬೇಕು ಎಂಬುದು ಸಾಲದು. ಹಿಂದುಸ್ತಾನಿ ಪ್ರಚಾರ ಸಭೆಯವರ ಶಿಕ್ಷಣ ಪದ್ಧತಿಯಂತೆ ತರಬೇತು ಹೊಂದಿದ ಶಿಕ್ಷಕರಿಗೆ ವಿಶೇಷ ಮಾನ್ಯತೆ ಕೊಡಬೇಕು ತಾವು ಒಪ್ಪಿರುವ ತತ್ವವನ್ನೇ ಸರಕಾರವು ಅಂಗೀಕರಿಸಿರುವದರಿಂದ ಕೇವಲ ಹಿಂದಿಯಲ್ಲಾಗಲಿ ಉರ್ದುವಿನಲ್ಲಾಗಲಿ ಪರೀಕ್ಷೆಗಳಿಗೆ ಮಾನ್ಯತೆಕೊಡುವ ತಾತ್ಪರ್ತಿಕ ವ್ಯವಸ್ಥೆಯು ಅನವಶ್ಯಕವಾಗಿದೆ.

೬) ಲಿಪಿಯ ವಿಷಯದಲ್ಲಿ ಸ್ವಾತಂತ್ರ್ಯ ಕೊಟ್ಟು ರಾಷ್ಟ್ರಭಾಷೆಯನ್ನು ಶಾಲೆಗಳಲ್ಲಿ ಕಲಿಸಲಾಗುತ್ತಿರುವ ಈಗಿನ ವ್ಯವಸ್ಥೆಯು ಒತ್ತಾಯದ್ದಾಗಿದೆ. ಇದನ್ನು ಬಿಟ್ಟು ನೈಚ್ಛಿಕ ಶಿಕ್ಷಣಕ್ಕೆ ಅವಕಾಶಕೊಟ್ಟರೆ ಈಗ ನಡೆದಿರುವ ಅಲ್ಪಸ್ವಲ್ಪ ಈ ಗಂಡಾಂತರ ಬರಬಹುದೆಂದು ತೋರಬಹುದು. ಆದರೆ ಜನಪ್ರಿಯ ಸರಕಾರವು ಈ ವಿಷಯದಲ್ಲಿ ಒಂದು ದೃಢವಾದ ನಿರ್ದುಷ್ಟ ಹೇಳಿಕೆ ಹೊರಡಿಸಿ ವ್ಯವಹಾರದಲ್ಲಿ ಅದನ್ನು ತಂದರೆ ಈ ವಿಷಯದ ಬಗ್ಗೆ ಲೋಕಾಭಿಪ್ರಾಯವನ್ನು ಅನುಕೂಲ ಮಾಡಲು ಅದೊಂದು ಪ್ರಬಲ ಸಂಗತಿಯಾಗುವದು.

ಸಮಿತಿಯು ಈ ಕೆಳಗಿನ ಉಪಾಯಗಳನ್ನು ಸೂಚಿಸುತ್ತದೆ–

ಅ) ಎರಡೂ ಲಿಪಿಗಳನ್ನು ಕಲಿಯಲು ಸರಕಾರಿ ನೌಕರರಿಗೆ ಉತ್ತೇಜನ ಕೊಡಬೇಕು. ಹಿಂದುಸ್ತಾನಿಯಲ್ಲಿ ತೇರ್ಗಡೆ ಹೊಂದಿದವರಿಗೆ ಮನ್ನಣೆ ಕೊಡಬೇಕು. ಹಿಂದುಸ್ತಾನಿಯಲ್ಲಿ ಕನಿಷ್ಠ ಪಾತ್ರತೆಯನ್ನು ಪಡೆದವನಾಗಬೇಕು ಎಂದು ಸರಕಾರದ ಪ್ರತಿಯೊಂದು ಶಾಖೆಗಳು ಆಜ್ಞೆ ಹೊರಡಿಸಬಹುದು.

ಬ) ಮ್ಯಾಟ್ರಿಕ, ವ್ಹರ್ನಾಕ್ಯುಲರ ಫಾಯನಲ್ ಮುಂತಾದ ಪರೀಕ್ಷೆಗಳಿಗೆ ಹಿಂದುಸ್ತಾನಿಯನ್ನು (ಉಭಯಲಿಪಿ ಸಹಿತ) ಐಚ್ಛಿಕ ವಿಷಯವನ್ನಾಗಿ ಇಡಬೇಕು. ಈ ವಿಷಯದಲ್ಲಿ ಉತ್ತೀರ್ಣರಾದವರಿಗೆ ನೌಕರಿಯಲ್ಲಿ ಪ್ರಾಶಸ್ತ್ಯ ಕೊಡಬೇಕು.

ಕ) ಹಿಂದುಸ್ತಾನಿಯ ಪ್ರಚಾರಕ್ಕಾಗಿ ದುಡಿಯುವ ಸಂಸ್ಥೆಗಳಿಗೆ ಉತ್ತೇಜನ ಸಹಾಯಗಳನ್ನಿತ್ತು ವಿಶಿಷ್ಟ ಮಾನ್ಯತೆ ಕೊಡಬೇಕು.

೭) ಈ ನಾಡಿನಲ್ಲಿಯ ಪ್ರಾಗತಿಕರು ಒಪ್ಪುವ ಇಂಗ್ಲಿಷಿನ ಶಿಕ್ಷಣವು ತೀರ ಬೇಗನೆ ಪ್ರಾರಂಭವಾಗುವದರಿಂದ ಈ ಧೋರಣವನ್ನು ಕೈಕೊಳ್ಳಲು ಬಹಳ ತೊಂದರೆಯಾಗಬಹುದು. ಆದರೆ ಶಿಕ್ಷಣ ಪದ್ಧತಿಯಲ್ಲಿ ಮಾತೃಭಾಷೆಯ ನಂತರ ರಾಷ್ಟ್ರಭಾಷೆಗೆ ಸ್ಥಳ ದೊರೆಯಬೇಕಾದ ಕಾರಣ ಈಗ ಆಂಗ್ಲ ಭಾಷೆಯು ಆಕ್ರಮಿಸಿರುವ ಸ್ಥಾನದಿಂದ ಅದನ್ನು ತಳ್ಳಿ ಅದಕ್ಕೆ ಯೋಗ್ಯಸ್ಥಾನ ಕೊಡಬೇಕು.

ಇದು ಕ್ರಾಂತಿಕಾರಕ ಉಪಾಯವೆಂಬುದನ್ನು ಈ ಸಮಿತಿಯು ಅರಿತಿದೆ ಆದ್ದರಿಂದಲೆ ಈ ಕಾರ್ಯದಲ್ಲಿ ಅಗತ್ಯವೂ ಇದೆ [ಕರ್ಮವೀರದಿಂದ]

72

ನಮೋ ಭಾರತಾಂಬೇ

ನಮೊ! ಭಾರತಾಂಬೇ! ಜಯ ಜಯ ನಮೋಸ್ತು ಜಗದಾಂಬೆ॥
ನಮೋಬೌದ್ಧಭಾವ್ಯಸ್ವರೂಪಿಣಿ! ಅಖಂಡವರಭರತಖಂಡ
ಮೂತೇ॥ ಪ॥
ಶ್ರೀಶೈಲಾವಳಿ ಹೆಳಲಾಲಂಕೃತೆ! ಕಮಲಾಲಂಕೃತವೇಣಿಯುತೆ
ಘನಗೋದಾವರಿ ಕಟಿಸೂತ್ರಧಾರಿ, ನಯನಮನೋಹರೆ
ಸೌಭಾಗ್ಯದಾತೇ॥ ನಮೋ।
ಗೋಲಕೊಂಡ ಕೋಶಾಧಿಕಾರಿಣಿ।
ಕೋಹಿನೂರುನವರತ್ನವಿಭೂಷಿಣಿ।
ಮಮತಾಜಮಹಲಾಲಯವಾಸಿನಿ।
ಮಹತ್ಮರಘುವದ್ಯೆನ್ಯಶರಣ್ಯೆ। ನಮೋ॥
ಪಂಚರತ್ನಮಣಿಮಕುಟಾಲಂಕೃತೇ।
ಸಂಚಿತನೀಲಾಂಬರಧರಶೋಭಿತೆ।
ಪಾವನಾಂಗಿ ಶ್ರೀ ಪಾದಪಂಕಜೇ॥
ಪಾಲಿಸುನೀ, ಸನ್ಮಂಗಳದಾತೇ। ನಮೋ॥

[ಶ್ರೀಪಾದಾಚಾರ್ಯ ವಿ. ಕ. ಸಮಿತಿ ಮಲಪನಗುಡಿ]

ಕರ್ನಾಟಕ ಪ್ರಾಂತದಲ್ಲಿ ರಾಷ್ಟ್ರಪತಿಗಳ ಸಂಚಾರ

ಫೆಬ್ರುವರಿ ೨೬ ರಿಂದ ೧೨ ದಿನ

ರಾಷ್ಟ್ರಪತಿಗಳಾದ ಆಚಾರ್ಯ ಜೆ. ಬಿ. ಕೃಪಲಾನಿಯವರು ಇದೇ ಫೆಬ್ರುವರಿ ೨೬ ರಿಂದ ಕರ್ನಾಟಕ ಪ್ರಾಂತದಲ್ಲಿ ೧೨ ದಿನಗಳ ವರೆಗೆ ಪ್ರವಾಸ ಕೈಕೊಳ್ಳಲಿರುವರು. ಆ ಕಾಲಕ್ಕೆ ಅವರು ಕಾಂಗ್ರೆಸ್ ಸಂದೇಶವನ್ನು ಬೀರುವರು. ಅವರ ಗೌರವಕ್ಕೆ ತಕ್ಕಂತೆ ಆಯಾ ಸ್ಥಳಗಳಲ್ಲಿ ಅವರಿಗೆ ತಕ್ಕ ಸ್ವಾಗತ ಮತ್ತು ನಿಧಿ ಸಮರ್ಪಣೆಮಾಡಲು ಈಗಿನಿಂದಲೆ ಸಿದ್ಧತೆ ಮಾಡಬೇಕೆಂದು ಪ್ರಾಂತಿಕ ಕಾಂಗ್ರೆಸ ಸಮಿತಿಯವರು ಪ್ರಕಟನೆ ಹೊರಡಿಸಿದ್ದಾರೆ. ಅಲ್ಲಲ್ಲಿ ಈಗಿನಿಂದಲೆ ನಿಧಿ ಸಂಗ್ರಹಿಸುವ ಕಾರ್ಯವನ್ನು ಜೋರಿನಿಂದ ಕೈಕೊಳ್ಳಬೇಕೆಂದು ಬಿನ್ನವಿಸಲಾಗಿದೆ.

ಹರಪನಹಳ್ಳಿ.

(ನಮ್ಮಸ್ಥಂತ ಸುದ್ದಿಗಾರರಿಂದ)

೧೯ ನೆಯ ದಿನಾಂಕ ಶ್ರೀಗಳಾದ ತಾಂಬ್ರಪರ್ಣಿ ಶ್ರೀನಿವಾಸಮೂರ್ತ್ಯಾಚಾರ್ಯರಧ್ಯಕ್ಷತೆಯಲ್ಲಿ ಸರ್ವಾವೇಶವಾದ ಸಭೆಯಲ್ಲಿ ಬಳ್ಳಾರಿ ಜಿಲ್ಲೆಯ ಪಶ್ಚಿಮ ತಾಲೂಕುಗಳಿಗೂ, ಕರ್ನಾಟಕ ಭಾಗಕ್ಕೂ ನಿರರ್ಥಕವಾದ ಮಾಳಾಪುರ ಆಣೆಕಟ್ಟಿನ ನಿರರ್ಥಕತೆಯನ್ನು ಸೂಚಿಸುತ್ತಾ, ಹಡಗಲೀ ತಾಲೂಕಿನ ತಿಮಲಾಪುರದ ಯೋಜನೆಯನ್ನು ಕೈಗೊಂಡೇತೀರಬೇಕೆಂದು ಆಗ್ರಹ ಪೂರ್ವಕವಾದ ತೀರ್ಮಾನಗಳಾದವು.

ಶ್ರೀ ತ್ಯಾಗರಾಜರ ಶತವಾರ್ಷಿಕೋತ್ಸವವು ಸ್ಥಳೀಯ ಸಂಗೀತ ಪಾಠಶಾಲೆಯಲ್ಲಿ ಕೀರ್ತನ; ಶ್ರೀ ಸುಬ್ಬಣ್ಣಾಚಾರ್ಯ ವೈದ್ಯರ ತ್ಯಾಗರಾಜ ಜೀವನ ಚರಿತ್ರೆಯನ್ನು ಕುರಿತ ಭಾಷಣಗಳಿಂದ ನೆರವೇರಿತು.

ಮಾನ್ಯಕಾರಂತರು:—೨೫ ನೆಯ ದಿನಾಂಕ ಆಗಮಿಸಿದಾಗ ಫ್ರೌಢಶಾಲೆಯಾವರಣದಲ್ಲಿ ಪುರಜನ-ಪಂಚಾಯ್ತಿ ಬೋರ್ಡು, ವರ್ತಕ ಸಂಘದಿಂದ ಮಾನಪತ್ರಾರ್ಪಣೆಯಾಗಿ ನಗರದ ಬೇಡಿಕೆಗಳು ಮಂಡಿಸಲ್ಪಟ್ಟವು. ಇದಕ್ಕೆಲ್ಲಾ ಉತ್ತರಕೊಡುತ್ತ ಮಾನ್ಯರೆವಿನ್ಯೂಮಂತ್ರಿಗಳು "ಆಸ್ಪತ್ರೆಯಸ್ಥಾಪನೆ, ವಿದ್ಯುತ್ಶಕ್ತಿಯ ಬಳಕೆಗಾಗಿ ಏರ್ಪಡಿಸುತ್ತೇವೆ. ಮಾರಾಟಕರವನ್ನು ತಪ್ಪಿಸಲು ಸಾಧ್ಯವಿಲ್ಲ. ಕೋಆಪರೇಟಿವ್ ಸ್ಟೋರ್ಸ್‌ತಪ್ಪಿಸಿ ವರ್ತಕರಿಗೆ ಆಹಾರಧಾನ್ಯಮಾರಲು ಸವಲತ್ತು ಕೊಡುವುದು ಖಂಡಿತವಾಗಿಯೂ ಆಗಲಾರದು. ಹೆಚ್ಚುಧಾನ್ಯ ಬೆಳೆಯುವ ಸರ್ಕಾರದ ಯೋಜನೆಯನ್ನು ರೈತರು ಯಶಸ್ವೀಗೊಳಿಸಲು ಸರ್ವರ ಸಹಕಾರ ಬೇಕಾಗಿದೆಯಲ್ಲದೆ ಸರಕಾರದ ಭಾವಿಗಳೆನ್ನು ತೆಗೆಸುವಕಾರ್ಯದಲ್ಲಿ ಶ್ರದ್ಧೆಯನ್ನುವಹಿಸಬೇಕು. ಆಣೆಕಟ್ಟನ್ನು ಹರವಿಬಸಾಪುರ ಸಮೀಪದಲ್ಲಿಕಟ್ಟಿ ನಿಮ್ಮ ತಾಲೂಕಿಗೆ ಉಪಯೋಗವಾಗುವಂಶವನ್ನು ಮುಂದೆ ವಿಚಾರಮಾಡಲಾಗುವುದು—" ವಂದನಾರ್ಪಣೆಯ ನಂತರ ಸಭೆಯು ಮುಗಿದು, ಮಾನ್ಯಮಂತ್ರಿಗಳು ಕೊಟ್ಟೂರು ಕಡೆ ಸಾಗಿದರು.

ಎಲಿಮೆಂಟರಿ ಶಾಲಾ ಉಪಾಧ್ಯಾಯ ವರ್ಗಕ್ಕೆ ಮದ್ರಾಸ್ ಸರ್ಕಾರದ ಅನ್ಯಾಯ

[ಸಂಬಂಧಿಸಿದ ಉಪಾಧ್ಯಾಯ]

ಗ್ರಾಮೋದ್ಧಾರದಲ್ಲಿ ಎಲಿಮೆಂಟರಿ ಶಾಲೆಯ ಅಧ್ಯಾಪಕನ ಹೊಣೆಯನ್ನು ಕುರಿತು ಎಲ್ಲರೂ ಉದ್ದುದ್ದ ಉಪದೇಶಯುಕ್ತ ಭಾಷಣಮಾಡುವವರೇ. ಘನ ಸರ್ಕಾರದವರೂ ಅವನ ಗುರುತರ ಜವಾಬ್ದಾರಿಯ ಬಗ್ಗೆ ಅವನನ್ನೆಚ್ಚರಿಸದ ಸಮಯವೇ ಇಲ್ಲ. ಆದರೆ ಅವನ ಯೋಗಕ್ಷೇಮದ ಬಗ್ಗೆ ಮಾತ್ರ ಅದು ಸರಿಯಾದ ವ್ಯವಸ್ಥೆ ಮಾಡಲೊಲ್ಲದು. ಇದರರ್ಥವೇನು? ಅಂಚೆ ಇಲಾಖೆಯವರು ಸಂವುಹೂಡಿದರು. ಅವರ ವೇತನಗಳು ಹೆಚ್ಚಿಸಲ್ಪಟ್ಟವು. ರೈಲ್ವೆ ಇಲಾಖೆಯವರಿಗೂ ಸರಿಯೂದ ಪ್ರೋತ್ಸಾಹ ಸಿಕ್ಕಿತು ನಾನ್ ಗೆಜೆಟೆಡ್ ಆಫೀಸರರ ಸಂಬಳಗಳೂ, ತೃಪ್ತಿಕರವಾಗಿಯೇ ಸುಧಾರಿಸಲ್ಪಟ್ಟವು. ಆದರೆ ಉಪಾಧ್ಯಾಯರ ಗತಿ?

"ಸರಕಾರೀ ಶಾಲೆಗಳಲ್ಲಿಯು ಹೈಯ್ಯರ್ ಗ್ರೇಡ್ ತರಬೇತಾದ ಉಪಾಧ್ಯಾಯನಿಗೆ 15-1-45 ರಂತೆಯೂ, ಲೋಕಲ್ ಬೋರ್ಡುಗಳಲ್ಲಿ 25-1-40 ರಂತೆಯೂ ಸಂಬಳ ನಿರ್ಧರಿಸಿದ್ದಾರೆ

ಇನ್ನು ಸೆಕಂಡರಿಗ್ರೇಡ್ ತರಬೇತಾದ ಉಪಾಧ್ಯಾಯರ ವಿಷಾದಕರ ವಿಷಯವು ಹೇಳಲಸದಳ ಸರಕಾರೀ ಶಾಲೆಯಲ್ಲಿಯೂ ಲೋಕಲ್ ಬೋರ್ಡು ಹೈಸ್ಕೂಲಿನಲ್ಲಿ ಕೆಲಸ ಮಾಡುವವನಿಗೆ 40-3—55-2 85 ಪ್ರಕಾರವೂ ಲೋಕಲ್ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿರುವವರಿಗೆ 35—1½—65 ರಂತೆಯೂ ಸಂಬಳ ನಿರ್ಧರಿಸಲಾಗಿದೆ. ಇದು ಯಾವ ನ್ಯಾಯ? ಸರಕಾರೀಶಾಲೆಯಲ್ಲಿ ದುಡಿವವರಂತೆ ಲೋಕಲ್ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ದುಡಿವವರೂ, ಸಹಾ ಪೂರಾ ಸಮಯದ ನೌಕರರು. ಹೀಗಿದ್ದು ಈ ರೀತಿ ಭೇದವೂಡಿರುವುದು ತೀರಾ ಅನ್ಯಾಯ. ಲೋಕಲ್ ಬೋರ್ಡಿನವರ ಅಧೀನದಿಂದ ಶಾಲೆಗಳೆಲ್ಲವನ್ನೂ ಸರಕಾರವೇ ವಹಿಸಿಕೊಳ್ಳಲಿ. ಇಲ್ಲವೇ ಸರಕಾರೀ ಶಾಲೆಯಲ್ಲಿಯ ಉಪಾಧ್ಯಾಯರಿಗೆ ಸಲ್ಲುವ ಸಂಬಳಗಳೇ ಲೋಕಲ್ ಬೋರ್ಡಿನ ಉಪಾಧ್ಯಾಯರಿಗೂ ಸಲ್ಲಲಿ. ಈ ಎರಡರಲ್ಲಿ ಯಾವುದಾದರೊಂದು ನಿರ್ಧರವಾಗುವ ತನಕ ಉಪಾಧ್ಯಾಯ ವರ್ಗಕ್ಕೆ ಸಮಾಧಾನವಿಲ್ಲ.— ಈ ಬಗ್ಗೆ ಸರಕಾರಕ್ಕೆ ಕೊನೆಯ ಎಚ್ಚರಿಕೆ ಏಕೆ ಕೊಡಬಾರದು?

ತುಂಗಭದ್ರಾ ಯೋಜನೆ,

ಭೂಮಿಗಳ ವಿಕ್ರಯಕ್ಕೆ ನಿರ್ಬಂಧ.

ಮದ್ರಾಸ್ ಸರ್ಕಾರದವರು ತುಂಗಭದ್ರಾ ಯೋಜನೆಯ ಪ್ರದೇಶದಲ್ಲಿ ಭೂಮಿಗಳನ್ನು ಕೊಳ್ಳುವ ಭರಾಟವನ್ನು ತಪ್ಪಿಸಲು ಒಂದು ಮಸೂದೆಯನ್ನು ತರಲಿದ್ದಾರೆ. ಈ ಪ್ರದೇಶದಲ್ಲಿ ಅನೇಕರು ನೀರಾವರಿ ಪ್ರದೇಶದ ಭೂಮಿಗಳ ಮೂಲೀಕರಾಗಬೇಕೆಂದು, ಜಮೀಂದಾರರಾಗಬೇಕೆಂದು ನೂರಾರುಎಕರೆ ಭೂಮಿಯನ್ನು ಕೊಂಡಿರುವರು.

ಮಹಾತ್ಮ ಗಾಂಧಿ.

ನೀವೇಹೋರಾಡಿ ಸ್ವಾತಂತ್ರ್ಯವನ್ನು ಸಂಪಾದಿಸುವವರೆಗೆ ಯಾವ ಸಮಿತಿಯಿಂದಲೂ ಉಪಯೋಗವಾಗದು. ಎಂದು ಪೂರ್ವಬಂಗಾಳದಲ್ಲಿ ತಮ್ಮ ಸಂಚಾರವನ್ನು ಸಾಗಿಸಿದ ಮಹಾತ್ಮರು ೨೬ ನೆಯ ತಾ. ಬಾಂಸದಲ್ಲಿ ಸ್ವಾತಂತ್ರ ಉತ್ಸವದ ದಿನ ಹೇಳಿದರು.

ಬಳ್ಳಾರಿ ವಿದ್ಯಾರ್ಥಿ ಕಾಂಗ್ರೆಸ್

ಅಧ್ಯಕ್ಷರು:- **ಶ್ರೀ ದಾಮೋದರಸಿಂಗ್,**

ಉದ್ಘಾಟಕರು:- **ಎಸ್. ಎಸ್. ವರದಾಚಾರಿ ಎಂ. ಎಲ್. ಎ.**

ಫಿಬ್ರವರಿ ೧—೨ ಶನಿವಾರ— ಭಾನುವಾರ,

ಬಳ್ಳಾರಿ ಜಿಲ್ಲಾ ಪ್ರಥಮ ವಿದ್ಯಾರ್ಥಿ ಸಮ್ಮೇಳನ.

ಸ್ವಾಗತಸಮಿತಿ ಅಧ್ಯಕ್ಷ ಬಸವಂತಾಜರ ಭಾಷಣ.

ನಿಮ್ಮೆಲ್ಲರಿಗೂ ಸುಸ್ವಾಗತವೀಯುವ ಈ ದಿನ ಒದಗಿದುದಕ್ಕೆ ಸಂತೋಷಿಸುತ್ತೇನೆ. ಇಂಥಾ ಸಮ್ಮೇಳನದ ಆವಶ್ಯಕತೆಯು ಹಿಂದೆಯೆ ಇದ್ದು, ಅನಿರೀಕ್ಷಿತ ಮತ್ತು ಅಸಮಾನ್ಯ ಸಂದರ್ಭಗಳಿಗಾಗಿ ಈ ವರೆಗೆ ಸಾಧ್ಯವಾಗಿರಲಿಲ್ಲ. ಜಿಲ್ಲೆಯ ವಿದ್ಯಾರ್ಥಿಗಳ ಪರಸ್ಪರ ಪರಿಚಯದ ಬಹು ದಿನ ಬಯಕೆಯು ಇಂದು ಕೈಗೂಡುವಂತಾದುದು ಹರ್ಷದಸಂಗತಿ, ನಮ್ಮಲ್ಲಿ ಪರಿಚಯದ ಮೂಲಕ ಮೈತ್ರಿಯು ಬೆಳೆದು ಭವಿಷ್ಯದ ಕಷ್ಟ ಪರಂಪರೆಗಳನ್ನು ಎದುರಿಸುವ ಐಕ್ಯ ಶಕ್ತಿಯು ತ್ಪನ್ನವಾಗಬೇಕಾದ ಆವಶ್ಯಕತೆಯನ್ನು ಬೇರೆ ವಿವರಿಸಿ ಹೇಳಬೇಕಾಗಿಲ್ಲ. ದೈಹಿಕ, ನೈತಿಕ, ಮತ್ತು ಮಾನಸಿಕ ಪ್ರಗತಿಯೆನ್ನು ಹೊಂದಿದ ಮತ್ತು ಹೊಂದುತ್ತಿರುವ ಯುವಕರ ಮತ್ತು ವಿದ್ಯಾರ್ಥಿಗಳನ್ನು ಸಂಪಟಿಸಿ ಒಳ್ಳೆಯ ರೀತಿಯಲ್ಲಿ ಮಾರ್ಗದರ್ಶಿಗಳನ್ನಾಗಿ ಮಾಡುವುದು ನಮ್ಮ ಪ್ರಥಮ ಕರ್ತವ್ಯ.

ಜಗತ್ತಿನ ರಾಜಕೀಯವು ಕಾರ್ಮೋಡಗಳಿಂದ ತುಂಬಿದೆ ಹಿಂದೂಸ್ತಾನದ್ದಾದರೂ, ಅಷ್ಟು ಸುಗಮ ಸುರಳಿತವಿಲ್ಲ ನಾಳಿನ ಸ್ವತಂತ್ರ ಭಾರತದ ರೂಪ ರೇಖೆಗಳ ಚಿತ್ರಿತವಾಗುತ್ತಿರುವುದಾದರೂ ಕೊನೆಯ ಸ್ವತಂತ್ರಸಂಗ್ರಾಮವೊಂದಿದೆಯೆಂಬುದನ್ನೂ, ಅದರಲ್ಲಿ ನಮ್ಮ ಭಾಗವು ಬಹಳವಿದೆಯೆಂಬುದನ್ನೂ ನಾವು ಮರೆಯುವಂತಿಲ್ಲ. ಅದರ ಪೂರ್ವಸಿದ್ಧತೆಯೆಂದರೆ ಜನಸಾಮಾನ್ಯರೊಡನೆ ನಿಕಟ ಸಂಬಂಧ (Mass contact) ವನ್ನು ಬೆಳೆಸಿಕೊಳ್ಳುವುದು ಅವರ ಹಿತಕ್ಕಾಗಿ ದುಡಿವುದು. ಈ ಉದ್ದೇಶವು ಮಹಾತ್ಮಗಾಂಧಿಯವರ ರಚನಾತ್ಮಕ ಕಾರ್ಯದಿಂದ ಸುಲಭವಾಗಿ ಸಾಧಿಸುವುದು. ಈ ಕಾರಣ ವಿದ್ಯಾರ್ಥಿ ಬಂಧುಗಳು ಹಳ್ಳಿಗಳಲ್ಲಿ ವಿಧಾಯಕ ಕಾರ್ಯಕ್ರಮಗಳಲ್ಲಿ ತೊಡಗಬೇಕು.

ಇಲ್ಲಿ ನೆರೆದಿರುವ ಎಲ್ಲಾ ಸ್ನೇಹಿತರೂ ಸಮ್ಮೇಳನದ ವಿವಿಧ ಕಾರ್ಯಗಳಲ್ಲಿ ಶ್ರದ್ಧೆ ಉತ್ಸಾಹಗಳಿಂದ ಭಾಗವಹಿಸಿ ತಮ್ಮ ಅಮೂಲ್ಯ ಸಲಹೆಗಳನ್ನು ಕೊಟ್ಟು ಯಶಶ್ವಿಯನ್ನಾಗಿ ಮಾಡಲು ನನ್ನವಿನಂತಿ. ಉಪಾಧ್ಯಾಯ ವರ್ಗದವರು ವಿದ್ಯಾರ್ಥಿಗಳ ವಿಷಯದಲ್ಲಿ ಸಂಶಯಾತ್ಮಕ ದೃಷ್ಟಿಯನ್ನು ದೂರಮಾಡಿ, ಅವರ ಚಟುವಟಿಕೆಗಳಲ್ಲಿ ಹೆಚ್ಚು ಆಸಕ್ತಿಯನ್ನು ತೋರಿ ಶಾಂತಿ, ಸ್ವಾತಂತ್ರ್ಯ ಮತ್ತು ಪ್ರಗತಿ ಮಾರ್ಗಗಳಲ್ಲಿ ಮಾರ್ಗದರ್ಶಕರಾಗಲೆಂದು ನಾನು ಆಶಿಸುವೆ ವ್ಯಕ್ತಿಯೊಬ್ಬನೂ ತನ್ನ ನಿರ್ದಿಷ್ಟಕರ್ತವ್ಯವನ್ನು ಅತ್ಮಸಂಜನೆಗೂ ಗಾಗದೆ ನ್ಯಾಯನೀತಿಯಲ್ಲಿ ನೆರವೇರಿಸಿದರೆ ಸರ್ವಗತವಾಗಿರುವ ಕಷ್ಟಗಳ ನಿವಾರಣೆಯಾಗುವುದರಲ್ಲಿ ಸಂಶಯವೇ ಇಲ್ಲ.

ಈ ಅಲ್ಪಕಾಲದಲ್ಲಿ ನಾನು ಮಾಡಿದ ಏರ್ಪಾಟುಗಳಿಂದ ನಿಮಗೆಷ್ಟೋ ತೊಂದರೆಯಾಗಿರಬಹುದು. ನಮ್ಮ ಲೋಪದೋಷಗಳನ್ನು ಮನ್ನಿಸುವಷ್ಟು ಉದಾರಿಗಳು ನೀವು ಇರುವಿರೆಂದು ನಂಬಿ ನಿಮಗೆ ಹೃತ್ಪೂರ್ವಕ ಸ್ವಾಗತ ಕೋರುವೆ

ಜಿಲ್ಲಾ ಶಾಲೆಗಳ ಆಟಗಳು.

ಬಳ್ಳಾರಿ ಜಿಲ್ಲಾ ಶಾಲೆಗಳ ಅಂದರೆ ಫುಟ್‌ಬಾಲ್, ಹಾಕಿ, ಬ್ಯಾಟ್‌ಮಿಂಟನ್ ವಾಲಿಬಾಲ್ ಮತ್ತು ಚೆಡ್ಡುಗುಮ ದೊಡ್ಡಹ ಡುಗರಿಗೂ, ಚಿಕ್ಕ ಹುಡುಗರಿಗೂ ಬಳ್ಳಾರಿ ಮುನಿಸಿಪಲ್ ಹೈಸ್ಕೂಲ ಆವರಣದಲ್ಲಿ 30-31 ನೆಯ ದಿನಾಂಕ ನಡೆದವು ಜಿಲ್ಲಾಕಲೆಕ್ಟರ್ ಶ್ರೀಮಂತರಾಮುನ್ಸರವರ ಅಧ್ಯಕ್ಷತೆಯಲ್ಲಿ ಶ್ರೀಮತಿ ಅನಂತರಾಮುನ್ಸರವರು ಟ್ರೋಫಿಗಳನ್ನೂ, ಸರ್ಟಿಫಿಕೇಟ್‌ಗಳನ್ನು ಹಂಚಿದರು

Madras Information Kannada Edition 'ಮದ್ರಾಸ್ ಸಮಾಚಾರ'ವೆಂಬ ಮದ್ರಾಸ್ ಸರ್ಕಾರದ ಮುಖಪತ್ರವು ಕನ್ನಡದಲ್ಲಿ ಮದ್ರಾಸ್ ನಗರದಿಂದ ಹೊರಡುವುದೆಂದು ತ್ರಿಕರ್ ಸಾಪಾಧಿ ಅವರಿಗೆ ತಿಳಿಸುತ್ತಾರೆ.

The Rayalaseema Bank Limited, Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:— ಬಳ್ಳಾರಿ ಜಿಲ್ಲಾ:- ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ, ಬಳ್ಳಾರಿ, ಹಡಗಲಿ, ಕೂಡ್ಲಿಗಿ, ಆದವಾನಿ. **ಅನಂತಪುರ:-** ಅನಂತಪುರ, ಬೆಳಗುಪ್ಪ, ಧರ್ಮಾವರಂ, ಕದಿರಿ, ಪಾಮಿಡಿ, ತಿಮ್ಮನಚೆರ್ಲ, ಉರವಕೊಂಡ, ಹಿಂದೂಪುರ, ಗುತ್ತಿ. **ಕರ್ನೂಲು:-** ಕರ್ನೂಲು ಪತ್ತಿಕೊಂಡ. **ಕಡಪ:-** ರಾಜಂಪೇಟಿ, ಕಡಪ. **ಚಿತ್ತೂರು:-** ಚಿತ್ತೂರು, ಮದನಪಲ್ಲಿ, ತಿರುಪತಿ, ನಾಗರಿ, ವಾಯಲ್ಪಾಡು.

ಫಿಕ್ಸೆಡ್ ಡಿಪಾಜಿಟ್‌ನ ಬಡ್ಡೀದರ:— 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2 ವರ್ಷಗಳಿಗೆ 3½%.

ಕರೆಂಟು ಅಕೌಂಟು: 1%, **ಸೇವಿಂಗ್ಸ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.

ಮಾಸಿಕ ಪ್ರಾವಿಡೆಂಟ ಫಂಡ ಡಿಪಾಜಿಟ್:- 3%. **ಬಿ. ವಿ. ಶೇಷಗಿರಿರಾವ್, ಕಾರ್ಯದರ್ಶಿ.**

Students' Congress.

ಬಳ್ಳಾರಿ ಪ್ರಥಮ ವಿದ್ಯಾರ್ಥಿ ಸಮ್ಮೇಲನದಲ್ಲಿ ಅಧ್ಯಕ್ಷರಾದ ಶ್ರೀ ದಾಮೋದರಸಿಂಗರ ಭಾಷಣದ ಮುಖ್ಯಾಂಶಗಳು.

ಮಾನವನ ಭವಿಷ್ಯ ಜೀವನದ ತಯಾರಿಯ ಕಾಲವು ವಿದ್ಯಾರ್ಥಿಜೀವನದಲ್ಲಿ ಆರಂಭವಾಗಿ ಶಾರೀರಿಕ, ಮಾನಸಿಕ ಮತ್ತು ಆತ್ಮೋನ್ನತಿ ಧ್ಯೇಯವು ಸಾಧಿಸುತ್ತದೆ ಇವುಗಳ ಸಾಫಲ್ಯವು ಉತ್ತಮಶಿಕ್ಷಣವನ್ನವಲಂಬಿಸಿದೆ. ವಿದ್ಯಾರ್ಥಿಗಳಲ್ಲಿ ಅಗಾಧ ರಾಷ್ಟ್ರಪ್ರೇಮ, ಧಾರ್ಮಿಕ ಉದಾರತೆಯಿಮ್ದು ದೇಶಸ್ವಾತಂತ್ರ್ಯಕ್ಕಾಗಿ ಬಲಿದಾನ ಮಾಡಬೇಕಾಗಿರುತ್ತದೆ. ಸಮಾಜದ ಕುರೀತಿಗಳ ವಿರುದ್ಧ ಪ್ರತಿಭಟಿಸುವ ಆತ್ಮಬಲವೂ ಬೇಕು.

ಇದುವರೆಗೆ ನಡೆದ ಸ್ವತಂತ್ರ್ಯ ಸಂಗ್ರಾಮಗಳಲ್ಲಿ ವಿದ್ಯಾರ್ಥಿಕಾಂಗ್ರೆಸ್ ಬಹಳ ಸೇವೆಗೈದಿದೆ! ನಮ್ಮ ಧ್ಯೇಯ, ಕಾರ್ಯಪ್ರಣಾಲಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ತತ್ವಗಳಿಗೆ ವಿರುದ್ಧವಿರದೆ ಅವುಗಳಿಗೆ ಸಹಾಯಕವಾಗಿದೆ.

ನಡುಗಾಲ ಸರಕಾರವಿರುವ ಈ ಸಮಯದಲ್ಲಿ ಸ್ವತಂತ್ರ ಸಂಗ್ರಾಮವು ನಿಂತಿರುವದೆಂದು ಭಾವಿಸಲ್ಪಡುವುದಾದರೂ, ನಾವು ನಮ್ಮ ವಿರಾಮ ವೇಳೆಗಳಲ್ಲಿ ದೇಶದ ವಿವಿಧ ಏಳ್ಗೆಗಾಗಿ ದುಡಿಯಬೇಕಾದ್ದು ಬಹಳವಿದೆ. ಪ್ರಜಾಸರಕಾರದ ಜನೋಪಯೋಗೀ ಕಾರ್ಯಗಳಿಗಾಗಿ ನಾವು ಸಹಾಯ ನೀಡಬಹುದು. ಭಾಷಾಭೇದಕ್ಕಾಗಿ ಅನ್ಯ ಸೋದರರನ್ನು ನಾವು ದ್ವೇಷಿಸಬಾರದು. ಬಳ್ಳಾರಿ ಕಾಂಗ್ರೆಸ್‌ನವರ ಸಂಘಸದಸ್ಯತ್ವವು ಕಡಮೆ ಇರುವುದಾದರೂ, ಬಳ್ಳಾರಿಯವಿವಿಧ ಜಾತಿಗಳು ವಿವಿಧ ಭಾಷೆಗಳವರಲ್ಲಿ ಸಂತೋಷ ಮಿಲನವುಂಟು. ಮುಸಲ್ಮಾನವಿದ್ಯಾರ್ಥಿಗಳ ಫೆಡರೇಷನ್‌ದವರು ಸಹಕರಿಸುತ್ತಿರುವರು. ಹರಿಜನರಿಗೆ ದೇವಸ್ಥಾನ ಪ್ರವೇಶವೊದಗಿಸಿಕೊಡಲು ದುಡಿಯುತ್ತಿರುವರು

ಶಾಂತಿಸ್ಥಾಪನೆ ಹಿಂದೂಮುಸಲ್ಮಾನ ಐಕ್ಯ ಕಾರ್ಯದಲ್ಲಿ ನಾವು ಹಿಡಿದು ಕೊಡಬೇಕು. ನಮ್ಮ ಮಾತೃಭೂಮಿಯಲ್ಲಿ ಭ್ರಾತೃಭಾವನನ್ನು ಸಾಧಿಸಿ ವಿಶ್ವ ಒಂಧುಗಳಾಗಿ ವಿಶ್ವಭ್ರಾತೃತ್ವವನ್ನು ಪಡೆಯಬೇಕು.

ಬಡೇಲಡುಕು:- (ಕೂಡ್ಲಿಗಿ) ಕಳೆದ ಪುಷ್ಯ ಬಹುಳ ಅಮವಾಸ್ಯೆ ಶ್ರೀಕೃಷ್ಣದಾಸರ ಮನೆಯಲ್ಲಿ ಶ್ರೀಪುರಂದರದಾಸರಾಯ ಪುಣ್ಯದಿನೊತ್ಸವವು ವಿಜೃಂಭಣೆಯಿಂದ ಜರುಗಿತೆಂದೂ ಶ್ರೀಮದ್ ಭೀಮಸೇನಾಚಾರ್ಯರು ಈ ಉತ್ಸವಕಾಗಿ ಆಗಮಿಸಿದ್ದರೆಂದೂ, ಶ್ರೀರಾಮ ಭಜನ ಮಂದಿರದ ಕಾರ್ಯದರ್ಶಿ ಶ್ರೀಹುಲಿಕುಂಟಾಚಾರ್ಯರು ತಿಳಿಸುತ್ತಾರೆ.



Guarranteed Pure Pyra Gingelly oil

Best for Cooking & Cooling.

DISTRIBUTORS:—

1. M/S. V. M. GIRI & SONS,
(Pro:- M. S Acharya) Car Street, Bellary
2. M/S. M. HUSANJEE RAO, M. VENKOJI RAO
General Merchants, Car Street Bellary.

ಶುದ್ಧ! ಗ್ಯಾರಂಟಿಯಾದ್ದು!! ಸತ್ಪಕಾರಿ!!!

—ಪೈರ ಎಳ್ಳೆಣ್ಣೆ—

ಕಣ್ಣಿಗೆ ಬಹಳ ತಂಪಾದ್ದು. ಅಡಿಗೆಯ ಎಲ್ಲಾ ಪದಾರ್ಥಗಳಿಗೆ ಬಳಸಲು ಶ್ರೇಷ್ಠವಾದ ಎಣ್ಣೆಯಿದು.

ಹಂಚಿಕೆದಾರರು ಉಳ್ಳವರು. 1) ವಿ ಎಂ. ಗಿರಿ ಆಂಡ್ ಸನ್ಸ್-ತೇರು ಬೀದಿ, ಬಳ್ಳಾರಿ. (ಎಂ. ಎಸ್. ಆಚಾರ್ಯ)
2) ಎಂ. ಹುಸೇಂಜಿರಾವ್, ಎಂ. ವೆಂಕೋಬರಾವ್. ತೇರುಬೀದಿ, ಬಳ್ಳಾರಿ.

ಸುಭಾಸ್
ರಾಷ್ಟ್ರಗೀತೆ.

ಸಿದ್ಧವಾಯಿತು— ಕ್ರಯ ೦—೮—೦

ಸುಂದರ ಮುದ್ರಣ— ಇಲ್ಲಿಯವರೆವಿಗೆ ಪ್ರಭಾತ ಫೇರಿ, ರಾಷ್ಟ್ರೀಯ ಸಮಾವೇಶಗಳಲ್ಲಿ ಹಾಡಲ್ಪಟ್ಟ ಎಲ್ಲಾ ಮುಖ್ಯ ದೇಶಭಕ್ತ ಕವಿಗಳ ಕನ್ನಡ ಮತ್ತು ಹಿಂದೀ ಭಾಷೆಯಲ್ಲಿನ ರಾಷ್ಟ್ರಗೀತೆಗಳ ಸಮಗ್ರ ಸಂಗ್ರಹ. ಕರ್ನಾಟಕದಲ್ಲಿ ರಾಷ್ಟ್ರ ಗೀತೆಗಳ ಇಷ್ಟುದೊಡ್ಡ ಸಂಗ್ರಹವು ಇದುವರೆಗೆ ಪ್ರಕಟವಾ ಗಿಲ್ಲ. ಸ್ವಲ್ಪೇ ಪ್ರತಿಗಳು ಪ್ರಕಟವಾಗಿವೆ. ಹೆಚ್ಚು ಕೊಳ್ಳುವ ವರಿಗೆ ಕಮಿಷನ್ ಕೊಡಲಾಗುತ್ತದೆ.

'ನವಭಾರತ' ಕಾರ್ಯಾಲಯ ಬಳ್ಳಾರಿ.

ಮಾರ್ಗೋಸೋಲ್ ಮುಲಾಮು

ಹುರುಕು, ಕಜ್ಜಿ, ಇಸಬು, ತಪ್ಪು' ಹುಣ್ಣು, ಘಾಯ, ತಿಂಡಿ ಕೈಕಾಲು ಒಡೆಯುವದು ಇನ್ನೆಲ್ಲ ಚರ್ಮವಿಕಾರ ದೋಷಗಳಿಗೆ ಶ್ರೇಷ್ಠಗುಣಕಾರಿಯಾದ ಔಷಧವಿದು; ಫೇರೋಝೋನ್ ಫಾರ್ಮ್ ಸುಟಿಕಲ್ ವರ್ಕ್ಸ್ ಬೊಂಬಾಯಿಯವರು ಭಾರತ ವೈದ್ಯಶಾಸ್ತ್ರ ದಲ್ಲಿ ಪ್ರಸಿದ್ಧವಾದ ಬೇವು, ಹುಲಗಿಲು, ತೀಗಂಧದತೈಲ ಗಂಧ ಕಪುಡಿ ಮತ್ತಿತರ ಚರ್ಮ ಶೋಧಕ ದ್ರವ್ಯಗಳಿಂದ ಶಾಸ್ತ್ರೀಯ ವಾಗಿ ತಯಾರಿಸಿರುವರು. ದೋಷಯುಕ್ತ ಭಾಗವನ್ನು ಬಿಸಿನೀರಿ ನಿಂದ ತೊಳೆದನಂತರ ಮುಲಾಮಿನಿಂದ ತಿಕ್ಕಬೇಕು.

ಕ್ರಯ ೧—:—೦

ಮದ್ರಾಸ್ ಪ್ರಾಂತ್ಯದಲ್ಲಿ ಮಾರಲು ಅಧಿಕಾರಹೊಂದಿದವರು

ಡಾಕ್ಟರ್ ವೆಂಕಟರಮಣ,

ಪ್ರೇಮ ಮೆಡಿಕಲ್ ಹಾಲ್, ಬಳ್ಳಾರಿ

NAVA BHARAT, BELLARY. Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು.	Subscription Rates
ವರ್ಷಕ್ಕೆ 5-0-0	One Year 5—0—0
6 ತಿಂಗಳಿಗೆ 3-0-0	Six months 3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To
SRI.....
.....
.....

Printed at Krishna Press Bellary QH No. B 17 FOR (Q.H. No. B-5)
Edited & Published by T. B. KESHAVARAO

ಜೈಹಿಂದ್ Reg. No.M 4740

ನವಚೇತನ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಸಂಪುಟ ೬ ಸಂಚಿಕೆ ೬ | ಬಳ್ಳಾರಿ ಫಿಬ್ರವರಿ ೧೦ ಸೋಮವಾರ ೧೯೪೬ | ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವ್.

3rd Week—ಮೂರನೆಯ ವಾರ

ರೇಣುಕ ಫಿಲಂಸ್‌ರವರ ತೆಲುಗು ಚಿತ್ರ.

ಅತ್ಯಂತ ಜನಪ್ರಿಯ

ತ್ಯಾಗಯ್ಯ

ಪ್ರಭಾತ ಚಲಚಿತ್ರ ಮಂದಿರ, ಬಳ್ಳಾರಿ.

Prabhat Talkies, Bellary.

ತೆಲಗುಭಾಷೆ. ಸುಪ್ರಶಿದ್ಧ ಕರ್ನಾಟಕ ಸಂಗೀತ, ಲೆಕ್ಕವಿಲ್ಲದಷ್ಟು ಸುಮಧುರ ಕೀರ್ತನೆಗಳು, **ನಾಗಯ್ಯ**ನವರ ಮನ ರಂಜಕ ಪಾತ್ರ. ಕಣ್ಣಿಗೂ, ಕಿವಿಗೂ ಹಬ್ಬ.

ಈ ಸುಸಂದರ್ಭವನ್ನು ಕಳೆದುಕೊಳ್ಳಬೇಡಿ.

ಮದ್ರಾಸಿನ ಹೊಸಮಂತ್ರಿ

ಮದ್ರಾಸ್ ಅರಣ್ಯ ಶಾಖೆಯ ಮಂತ್ರಿ ಶ್ರೀ ವೀರಾಸ್ವಾಮಿಯವರು ಅನಾರೋಗ್ಯದ ನಿಮಿತ್ತ ರಾಜೀನಾಮೆಕೊಟ್ಟಿದ್ದರಿಂದ ತೆರವಾದ ಸ್ಥಳಕ್ಕೆ ಶ್ರೀ ಬಿ. ವೆಂಕಟರತ್ನಂರನ್ನು ಮಂತ್ರಿಗಳನ್ನಾಗಿ ಆರಿಸಲಾಗಿದೆ

ಲಾಹೋರದ ಮುಸ್ಲಿಂಲೀಗ್ ಸ್ತ್ರೀಯರ ವಿರೋಧ ಪ್ರದರ್ಶನವನ್ನು ತಡೆಯಲು ಪೋಲೀಸರು ಅಶ್ರುವಾಯುವನ್ನು ಬಿಟ್ಟು ಮೂರ್ಛೆಗೊಳಿಸಿದರೆಂದೂ ಇದು ನಾಗರೀಕ ಸರ್ಕಾರಕ್ಕೆ ತಕ್ಕುದಲ್ಲವೆಂದೂ ಲೀಗ್ ಕಾರ್ಯದರ್ಶಿಗಳಾದ ಮಿ|| ಲಿಯಾಖತ್ ಅಲಿಖಾನರು ಒಂದು ಹೇಳಿಕೆ ಕೊಟ್ಟಿರುತ್ತಾರೆ.

ಕಲಕತ್ತೆಯಲ್ಲಿ ಮೂರುಲಕ್ಷ ಕೆಲಸಗಾರರು ವಿಟನಾಂದಿನಾಚರಣೆ ದಿನ ಪೋಲೀಸರು ಮಾಡಿದ ಗೋಳಾಚಾರ ನಿಷೇಧಾರ್ಥವಾಗಿ ಕೆಲಸ ಬಿಟ್ಟು ತಮ್ಮ ಸಂಪ್ರಹಾರಿ ಶಾಂತರೀತಿಯಿಂದ ಮುಗಿಸಿದರು.

ಪಾಲಿಸ್ತಾನವನ್ನು ಇಭ್ಭಾಗಿಸಲು ಬ್ರಿಟಿಷರು ಒಪ್ಪಿಗುವಂತೆ ಕಾಣುತ್ತದೆ ಅರಬರು ನಿಷೇಧಿಸಿರುವರು

54

ಪ್ರಾಥಮಿಕ ಶಾಲೋಪಾಧ್ಯಾಯರು
–ಜಿಲ್ಲಾ ಬೋರ್ಡು ಸ್ಪೆಷಲ್ ಆಫೀಸರವರಿಗೆ–

ಬಳ್ಳಾರಿ ಜಿಲ್ಲಾ ಬೋರ್ಡಿನಲ್ಲಿ ಪ್ರಾಥಮಿಕ ಶಾಲೆಗಳಲ್ಲಿರುವ ಎಲಿಮೆಂಟರಿ ಮತ್ತು ಸೆಕಂಡರೀಗ್ರೇಡ ಉಪಾಧ್ಯಾಯರ ಪರವಾಗಿ ಕೇಳಿಕೊಳ್ಳುವುದೇನಂದರೆ-

ಮೂರು ತಿಂಗಳ ಕೆಳಗೆ ಜಿಲ್ಲಾ ಬೋರ್ಡಿನವರು ತಮ್ಮ ತೀರ್ಮಾನದಲ್ಲಿ ನಿಶ್ಚಯಿಸಿದ ತಾರೀಖಿನಿಂದ ಮತ್ತು ಹಿಂದಿನ ಇಂಕ್ರಿಮೆಂಟಗಳನ್ನು ಕೊಡಬೇಕಾದ ಬಾಧ್ಯತೆಯನ್ನು ವಹಿಸದೆ 1-4-1945 ರಿಂದ ಇಂಕ್ರಿಮೆಂಟ್ ಕೊಡಬೇಕೆಂದು ನಿರ್ಣಯಿಸಿದರು 1-12-46 ರಿಂದ ತಾವು ಇಂಕ್ರಿಮೆಂಟ್ ಕೊಟ್ಟರೆ ಸಂಬಳ ಪುನರ್ವಿಮರ್ಶೆಯಾಗಬೇಕಾದರೆ ನಮ್ಮ ಹಕ್ಕುಗಳ ಸಂರಕ್ಷಣೆಯಾಗುವುದು. 1-4-45 ರ ದಿನ ಸಲ್ಲಬೇಕಾದ ಇಂಕ್ರಿಮೆಂಟ್ ಕಳೆತು ನಮ್ಮ ಸಂಬಳವು ಇರಬೇಕು. ನಾವು ಹಿಂದಿನ ಬಾಕಿಯನ್ನು ಕೊಡಲು ಈಗಲೇ ಒತ್ತಾಯ ಪಡಿಸುತ್ತಿರುವೆವೆಂದು ಭಾವಿಸಬೇಡಿರಿ. 31-1-47 ಕೆ. ರಾಮಾಚಾರ್ಯ (ಎಲ್ಲಾ ಉಪಾಧ್ಯಾಯರ ಪರವಾಗಿ)

ಎಮ್ಮಿಗನೂರು ಉಪಾಧ್ಯಾಯಸಂಘ
ತೀರ್ಮಾನಗಳು.

1. ಹೊಸದಾಗಿ ಸರ್ಕಾರದವರು ಲೋಯರ್ ಮತ್ತು ಹೈಯರ್ ಎಲಿಮೆಂಟರಿ ಗ್ರೇಡನವರಿಗೆ ನಿಶ್ಚಯಿಸಿದ ಸಂಬಳ ಬಹಣ ಅತೃಪ್ತಿಕರವಿದ್ದು ಈಗಿನ ತುಟ್ಟಿಭತ್ಯೆಯ ಜೀವನದಲ್ಲಿ ತೀರ ಕಡಮೆಯಾಗಿದೆ. ಈ ಕಾರಣ ಕೆಳಗಿನಂತೆ ಸ್ಕೇಲ್ ಕೊಡಲು ಕೇಳಿಕೊಳ್ಳಬೇಕೆಂದು ನಿರ್ಣಯವಾಗಿದೆ.

1) ಲೋಯರ್ ಎಲಿಮೆಂಟರಿ 25–2–45.

2) ಹೈಯರ್ ಎಲಿಮೆಂಟರಿ 30–2–50.

2. ಏಡೆಡ ಪ್ರಾಥಮಿಕ ಶಾಲೆಗಳಲ್ಲಿನ ಉಪಾಧ್ಯಾಯರಿಗೆ ನಿಶ್ಚಯಿಸಿರುವ ಸಂಬಳಗಳು ಬಹಳ ನಿರುತ್ಸಾಹಕರವಿದ್ದು ಸರಕಾರದವರು ಲೋಯರ್‌ನವರಿಗೆ 20–25 ರಂತೆ ಹೈಯರ್‌ನವರಿಗೆ 25–30 ರಂತೆ ಖಾಸಗಿ ಶಾಲೆಗಳವರಿಗೆ ಗ್ರಾಂಟ್ ಕೊಡಬೇಕು.

ಮದ್ರಾಸ್ ಸರ್ಕಾರದವರು ತಮ್ಮ ನವಕರರಿಗೆ ಒಂದು ತಿಂಗಳ ಸಂಬಳ ಬೋನಸ್ ಕೊಟ್ಟಿರುವರು. ಇದೇ ಸೌಲಭ್ಯವನ್ನು ಖಾಸಗಿ ಮತ್ತು ಬೋರ್ಡು ಶಾಲೆಗಳ ಉಪಾಧ್ಯಾಯರಿಗೂ ಕೊಟ್ಟು ತಮ್ಮ ಉದಾರತೆಯನ್ನು ವ್ಯಕ್ತಪಡಿಸಬೇಕು.

ಬಳ್ಳಾರಿ ಜಿಲ್ಲಾ ವಿದ್ಯಾರ್ಥಿಗಳ ಸಮ್ಮೇಳನ.

ತೀರ್ಮಾನಗಳು:–ನಡುಗಾಲ ಸರ್ಕಾರ ಸ್ಥಾಪನೆಗಾಗಿ ಸಂತೋಷ ವ್ಯಕ್ತಪಡಿಸಲಾಯಿತು. ಫಟನಾಸಮಿತಿಯ ಕಾರ್ಯದಲ್ಲಿ ಬ್ರಿಟಿಶರೂ ಲೀಗಿನವರೂ ಅಡ್ಡಗಾಲು ಹಾಕುತ್ತಿರುವರು ವಿದ್ಯಾರ್ಥಿಗಳು ಕೊನೆಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ತಯಾರಾಗಬೇಕು.

ಬೀಹಾರ ಬಂಗಾಳಗಳ ಜಾತೀಯ ದುರಂತಕ್ಕಾಗಿ ದುಃಖಪಡಬೇಕಾಗಿದೆ. ಹುತಾತ್ಮರ ಆತ್ಮಕ್ಕೆ ಶಾಂತಿಇರಲಿ ವಿದ್ಯಾರ್ಥಿಗಳು ಹಿಂದು ಮುಸಲ್ಮಾನ್ ಮೈತ್ರಿಗಾಗಿ ಯತ್ನಿಸಿ ಮುಸ್ಲಿಂ ವಿದ್ಯಾರ್ಥಿಗಳನ್ನು ಹೆಚ್ಚು ಹೆಚ್ಚಾಗಿ ಒಳಗೆ ತರಬೇಕು.

ಈ ಕೆಳಗಿನ ದಿನಗಳು ಸಾರ್ವಜನಿಕ ರಜಾದಿನಗಳು ಸ್ವತಂತ್ರ ದಿನ ಜನವರಿ ೨೬ ಗಾಂಧಿಜಯಂತಿ ಅಕ್ಟೋಬರ್ ೨ ಜಲಿಯನವಾಲಾಬಾಗ್ ಏಪ್ರಿಲ್ ೧೩ ಹುತಾತ್ಮರದಿನ ಆಗಸ್ಟ ೯,

ಮದ್ರಾಸ್ ಕಲ್ಕತ್ತಾಗಳಲ್ಲಿ ವಿದ್ಯಾರ್ಥಿಗಳ ಮೇಲಾದ ಲಾಠಿ ಛಾರ್ಜಿನ ವಿಚಾರಣೆಯಾಗಬೇಕು.

ಗಾಂಧೀಜಿಯವರ ೧೪ ಅಂಶಗಳ ವಿಧಾಯಕ ಕಾರ್ಯಕ್ರಮವನ್ನನುಸರಿಸಿ ಭಾಷವಾರ ವಿಭಜನೆಯ ಪ್ರಾಂತ ತತ್ವವನ್ನು ಮಾನ್ಯಮಾಡಬೇಕು. ಉಪಾಧ್ಯಾಯರ ಸಂಬಳ ಹೆಚ್ಚಬೇಕು.

ಜಿಲ್ಲೆಯ ಎಲ್ಲಾಭಾಗಗಳಿಂದಲೂ ಸುಮಾರು ೩೦೦ ವಿದ್ಯಾರ್ಥಿಗಳು ಜಮಾಯಿಸಿದ್ದರು ಊಟ ವಸತಿಯ ವಿಚಾರಗಳು ಬಹಳ ಸಮರ್ಪಕವಿದ್ದುವು ಶ್ರೀಗಳಾದ ವರದಾಚಾರಿ, ಸುಬ್ರಹ್ಮಣ್ಯಂ, ಚನ್ನಪ್ಪವಾಲಿ, ಬಿಯಾನಿಯವರ ಉಪದೇಶಗಳು ಕಾಲೋಚಿತವಿದ್ದವು. ಕನ್ನಡ ತೆಲುಗುವಾದವೆದ್ದರೂ ಎಲ್ಲರೂ ಸೋದರರೆಂಬಭಾವನೆ ಸಾರ್ವತ್ರಿಕವಾಗಿ ಮೂಡಿದ್ದಿತು



10th Year of Publication.

10TH FEBRUARY 1947

Better manners please !

It makes a dismal spectacle to see that some of our officers are still imbued with the hoary notions of official prestige under the veneer of which is perceptible, real bankruptcy of efficiency. It is a sad commentary on the popular Congress Government. Ideals of democracy should not be so slow to perculate from the top rank of Ministers to the lowest layer of officers in the moffusil—Civility to the common man in the street and good manners towards those who contact the officers are wanting no less to day than ever before. The hall mark of inefficiency is arrogance. Overbearing, intolerant or a jiffy attitude on the part of the officers, and the total absence of a desire to know where the shoe pinches have become the order of the day. On the other hand an impatient attitude and bamboozling tactics are unfortunately much in evidence in some officers. It is high time this category of officers mend their manners and realise betimes that they are not masters but servants of the public.

Correspondence :

Prakasam ministry should go

The other day the influential daily in England **'New Statesman and Nation'** brought out vividly two prominent triats of the British Labour Ministry—one that it is happily solicitous to the opposition to the Government notwithstanding its stream-roller majority two, that the Labour party is woefully guilty of cold shouldering its own back benchers Down here in our province, let us examine the record of the Prakasam Ministry. That Mr. Prakasam is keen on appeasing not the opposition in the assembly but the opposition within the Congress party itself, while ignoring all the

rest inclusive of the pledged supporters of the Congress Ministry is patent to a critical observer This is unfortunately the result of his weak kneed policy Alarmed at the danger of devoloping opposition to himself with in his own party and alive to the hanging of the sword of Democles over his head due to the frowns of the High Command, Mr. Prakasam has resorted to the art of appeasement as his main policy. Judged from the standard the *raison-de-tre* for his policies becomes obvious. His Textile Policy is the appeasement of the High Command. His policy of creating and filling posts is pampering to the opposition and a few of his henchmen in circars. His policy of negation and do little vis-a-vis Ceded districts and particularly Bellary is due to the fact that we have been weak without raising enough of dust. Instincts of self preservation should teach us to reorientate our attitude, to this incompetent ministry. As Mr. N. S Varadachari advised us, it is notorious that Mr. Prakasam was a blatant failure in administering the affairs of his daily "**Swarajya**' small surprise that he is a tragic failure in the administration of the whole province. Inefficiency is the bane of all progress. Let us not tolerate it in the administration of the province out of the mistaken standard that the record of sacrifices of Mr. Prakasam are the index of his ability as an administrator. Hat off to Prakasam the patriot, but down with Prakasam the Prime-minister.

[Conscientious]

ಕಳ್ಳನೂಲು:— ಕುಡಚಿ ರೈಲ್ವೆ ನಿಲ್ದಾಣದಲ್ಲಿ ಒಂದೂವರೆಲಕ್ಷ ರೂಪಾಯಿ ಬೆಲೆಬಾಳುವ ಮಿಲ್ ನೂಲಿನ ಗಂಟುಗಳು ಬಿದ್ದಿದ್ದು ಅವು ಇಂಥಹ ವೂಲೀಕರಿಗೆ ಸೇರಿದವೆಂದು ಗೊತ್ತಾಗಿಲ್ಲಿ ಸಾಗಿಸಿ ಕೊಂಡು ಬಂದು ಮೂಲು ಅಧಿಕಾರಿಗಳ ಗಮನಕ್ಕೆ ಬಂದಿದೆಯೆಂದು ಗೊತ್ತಾದ ನಂತರ ಕಳ್ಳಪೇಟೆಯಲ್ಲಿ ಮೂರಬೇಕೆಂದಿದ್ದವರು ಅದೃಶ್ಯರಾಗಿದ್ದಾರೆ ಈ ನೂಲು ಸರ್ಕಾರಕ್ಕೆ ಸೇರುವುದು.

ಗುಡ್ಡಗಾಡು ಜನರು ಹಜಾರ ಜಿಲ್ಲೆಯ ಮೇಲೆ ದಾಳಿಮೂಡಿ ಪ್ರಾಣ, ಆಸ್ತಿಗಳ ಹಾನಿಮೂಡಿದ ಕಾರಣ ಅವರಿಗೆ ೭೫ಸಹಸ್ರ ರೂಪಾಯಿಗಳ ದಂಡಹಾಕಲಾಗಿದೆಯಲ್ಲದೆ ಒಳ್ಳೆಯ ನಡತೆಗಾಗಿ ಕೆಲವರನ್ನು ಸ್ಥಾನಬದ್ಧತೆಯಲ್ಲಿರಿಸಲಾಗಿದೆ

ಹೈದರಾಬಾದಿನ ಹೊಸಘಟನೆಯು ಆಚರಣೆಯಲ್ಲಿ ಬರುವ ಫೆಬ್ರುವರಿ ೧೭ ತಾರೀಕಿನ ಸಮಯಕ್ಕೆ ರಾಜಕೀಯ ಮತ್ತು ಕೆಲ ಕ್ರಿಮಿನಲ್ ಕೈದಿಗಳನ್ನು ಬಂಧಮುಕ್ತವಾಡಲು ನಿಜಾಮರು ಆಜ್ಞೆಹೊರಡಿಸಿರುವರು.

ಗ್ರಾಮ ಪಕ್ಷಪಾತಿ ಯೋಜನೆ.

ಪ್ರಸ್ತಾವಿಕ (ಕರ್ಮವೀರದಿಂದ)

ಇತಿಹಾಸ ಪ್ರಾರಂಭ ಕಾಲದಿಂದಲೂ ಹಿಂದು ಸ್ಥಾನ ಮತ್ತು ಹಿಂದೀ ಜನತೆಯ ಮುಖ್ಯ ಉದ್ಯೋಗ ಒಕ್ಕಲತನವೆ ಆಗಿದೆ. ಹಿಂದುಸ್ಥಾನದ ಜೀವನವೆಲ್ಲ ಒಕ್ಕಲತನದ ಮೂಲಕವೆ ಅಭಿವೃದ್ಧಿ ಹೊಂದಿತು. ಹಿಂದುಸ್ಥಾನದಲ್ಲಿಯು ಜನಾಂಗ, ಇತಿಹಾಸ, ಸಂಸ್ಕೃತಿ ಮತ್ತು ಭಾಷೆಗಳಲ್ಲಾದ ವಿಕಾಸವನ್ನೂ ಒಕ್ಕಲತನದ ತಳಹದಿಯಿಂದಲೆ ಕಂಡುಕೊಳ್ಳಬಹುದಾಗಿದೆ. ಹಿಂದುಸ್ಥಾನದ ಶ್ರೇಷ್ಠ ಮುನಿಗಳು ಮತ್ತು ಅರಸರು ಭೂಮಿಗಳಲ್ಲಿಯೆ ಪರಿಶ್ರಮಪಟ್ಟರು, ಒಕ್ಕಲತನಕ್ಕಾಗಿ ಅರಣ್ಯಗಳನ್ನೆಲ್ಲ ಹಸನ ಮಾಡಿದರು. ಮತ್ತು ಒಕ್ಕಲತನದ ಸಂಗ್ರಹವನ್ನು ನಿತ್ಯದ ಕ್ರಮವನ್ನಾಗಿಟ್ಟುಕೊಂಡರು ಒಕ್ಕಲತನವೆಂದರೆ ಅತ್ಯಂತ ಶ್ರೇಷ್ಠ ಮರ್ಯಾದೆಯ ಹೋರೆಯೆಂದು ಭಾವಿಸಲಾಗುತಿತ್ತಲ್ಲದೆ ಎಲ್ಲಬಗೆಯ ಸುಖ ಸಂಪತ್ತಿನ ಸಾಧನವೆಂದು ತಿಳಿಯಲಾಗುತಿತ್ತು. ಭೂಮಿಗಳಲ್ಲಿ ಪರಿಶ್ರಮಪಡುವವನಿಗೆ ಅರಸರಿಗಿಂತ ಹೆಚ್ಚಿನ ಸ್ಥಾನವನ್ನು ಕಲ್ಪಿಸಲಾಗುತಿತ್ತು. ಏಕೆಂದರೆ ಕೋಟ್ಯವಧಿ ಜನರ ಪಾಲನ ಪೋಷಣೆಯ ಮುಖ್ಯಾಧಾರ ಅವನೆ, ಎಂದು ಅನುಭವಿಸಲಾಗುತಿತ್ತು. ರಾಜ ಸಮ್ರಾಟರ ಪಾಲಕ ಪೋಷಕರೂ ಅವರೆ ಎಂದು ತಿಳಿಯಲಾಗುತಿತ್ತು.

ಮಧ್ಯಯುಗದಲ್ಲಿ ಮುಸಲ್ಮಾನರೊಡನೆ ಸಂಬಂಧ ಬಂಧನಂತರ ಮತ್ತು ಮೊಗಲ ಸಮ್ರಾಟರ ಕಾಲದಲ್ಲಿಯೂ ಒಕ್ಕಲತನದ ಸ್ಥಾನ ಮಾನಗಳು ರಾಷ್ಟ್ರದ ಆರ್ಥಿಕ ಪರಿಸ್ಥಿತಿಗೆ ಬಾಧೆ ತಾರದಂತೆಯೆ ಉಳಿದವು ಹಿಂದೂ ಮುಸಲ್ಮಾನರಿಬ್ಬರೂ ಹಳ್ಳಿಗಳಲ್ಲಿಯೆ ಉಳಿದರು. ಮತ್ತು ಪರಸ್ಪರ ಸಹಾಯ ಸಹಕಾರಗಳಿಂದ ಹೊಲಗಳನ್ನು ಸಾಗಿಸಿಕೊಂಡು ಬಂದರು. ಒಕ್ಕಲತನದ ಈ ಹೋರೆಯಲ್ಲಿ ಅವರು ಸನ್ಮಾನ್ಯ ನೆರಿಹೊರೆಯವರಂತೆ ಸ್ಪರ್ಧೆಯಿಂದ ಕೆಲಸ ಮಾಡುತಿದ್ದರು ಇಡೀ ಹಳ್ಳಿಯು ತನ್ಮೂದೊಂದು ಕುಟುಂಬ ಘಟಕವೆಂದು ತಿಳಿದುಕೊಳ್ಳುತ್ತಿದ್ದರು. ಇಡಿ ಜನಾಂಗದ ಸಾಮಾಜಿಕ ಮತ್ತು ಆರ್ಥಿಕ ಜೀವನವೆಲ್ಲ ಒಕ್ಕಲತನ ಚಕ್ರದ ಸುತ್ತಲೂ ಹೆಣೆಯಲ್ಪಟ್ಟಿದ್ದಿತು.

ಆದರೆ ಹಿಂದೂಸ್ಥಾನವನ್ನು ಗೆದ್ದು ಆಳಲು ಕಳೆದ ಎರಡುನೂರು ವರ್ಷಗಳ ಹಿಂದೆ ಹಿಂದುಸ್ಥಾನಕ್ಕೆ ಬಂದ ಪರಕೀಯರು ಮಾತ್ರ ತೀರ ಬೇರೆ ಉದ್ದೇಶವನಿಟ್ಟುಕೊಂಡು ಕಾರ್ಯಸಾಗಿಸಹತ್ತಿದರು. ಹಿಂದುಸ್ಥಾನದ ಮೇಲೆ ಈ ಮೊದಲು ದಾಳಿ ಮಾಡಿದವರಂತೆ ಇವರು ಇಲ್ಲಿಯೆ ಉಳಿದು ಇಲ್ಲಿನ ಕೋಟ್ಯವಧಿ ಜನರಲ್ಲಿ ಸಮರಸವಾಗಿ ಹೋಗುವ ಧೋರಣವನ್ನಿಟ್ಟುಕೊಳ್ಳಲಿಲ್ಲ. ಆಬಗೆಯಾಗಿ ಯೋಜಿಸಲಿಲ್ಲ. ಅವರು ಇಲ್ಲಿಗೆ ಬಂದರು, ಪರಿಸ್ಥಿತಿಯನ್ನು ತಿಳಿದುಕೊಂಡರು, ದೇಶವನ್ನು ಗೆದ್ದರು. ಆದರೆ ಹಿಂದಿನವರಂತೆ ಕೇವಲ ಕೀರ್ತಿಸಂಪಾದನೆಗಾಗಿ ಅಲ್ಲ; ಹಿಂದುಸ್ಥಾನದಲ್ಲಿದ ಸಂಪತ್ಸಾಧನೆಗಳನ್ನೆ ಸುಲಿದುಕೊಂಡು ಹೋಗಿ ಶೀತ ಇಂಗ್ಲಂಡಿನಲ್ಲಿದ್ದ ತಮ್ಮ ಸಂಬಂಧಿಕರ ಬೊಜ್ಜು ಬೆಳಿಸುವುದಕ್ಕಾಗಿ ಇದನ್ನು ಗೆದ್ದರು. ಈ ಉದ್ದೇಶವು ತೀರ ನಿಶುದ್ಧ ಮತ್ತು ಸಾದಾ ಎಂದು ತೋರುತಿತ್ತು. ಹಿಂದುಸ್ಥಾನದಲ್ಲಿ ಬೆಳೆದ ಕಚ್ಚಾ ಸಾಮಗ್ರಿಗಳ ಹೊರತು ಉಳಿದ ಒಕ್ಕಲತನದಲ್ಲಿ ಅವರಿಗೆ ಸ್ವಲ್ಪವೂ ಆಸೆಯಿರಲಿಲ್ಲ ಅವರ ದೇಶದಲ್ಲಿಯ ಬಂಧುಗಳು ಕೇವಲ ಉದ್ದಿಮೆದಾರರಾಗಿದ್ದು ಪರದೇಶಗಳಲ್ಲಿಯ ಪೇಟೆಗಳನ್ನು ವಶಪಡಿಸಿಕೊಳ್ಳುವ ಧೋರಣವನ್ನು ತಾಳಿದ್ದರು ಅದರಲ್ಲಿಯೆ ಅವರಿಗೆ ಆಸ್ಥೆ ಬಹಳಿದ್ದಿತು. ತಮ್ಮಲ್ಲಿ ತಯಾರಾದ ಸರಕುಗಳನ್ನೆಲ್ಲ ಪರದೇಶಿ ಪೇಟೆಗಳಲ್ಲಿ ಹೇಗೆ ಪ್ರಸಾರ ಮಾಡಬೇಕೆಂಬುದರಲ್ಲಿಯೆ ಅವರಿಗೆ ವಿವಂಚನೆ ಬಹಳೆ. ಆದುದರಿಂದ ನಮ್ಮಲ್ಲಿಯ ಮನೆ ಮಾರಿಗೆಯ ಕೈಗಾರಿಕೆಗಳತ್ತ ಅವರಕಾಕದೃಷ್ಟಿ ಬಿದ್ದಿತು ಬ್ರಿಟಿಶ ವ್ಯಾಪಾರವನ್ನುಳಿಸಿಕೊಳ್ಳುವದಕ್ಕಾಗಿ ಅವರು ಕ್ರಮಶಃ ಈ ಉದ್ಯೋಗಗಳನ್ನೆಲ್ಲ ತಿಳಿದುಬಿಟ್ಟರು. ಯಾವ ನೀಚ ಮತ್ತು ಮೋಸದ ಮಾರ್ಗಗಳನ್ನವಲಂಬಿಸಿ ಅವರು ಇಲ್ಲಿನ ಉದ್ಯೋಗಗಳನ್ನೆಲ್ಲ ಮುರಿದು ಬಿಟ್ಟರೆಂಬುದು ಇದೀಗ ಜನಜನಿತವಾದ ಮಾತಾಗಿದೆ.

ಈ ರೀತಿಯಾಗಿ ಬ್ರಿಟಿಶರಾಳಿಕೆಯಲ್ಲಿ ಒಕ್ಕಲತನ ಮತ್ತು ಗ್ರಾಮೋದ್ಯೋಗಗಳಿಗೆ ಮೊದಲನೆಸಲ ಹೊಡೆತ ಬಡೆಯಿತು. ಅವರ ವರ್ಚಸ್ಸು ಹೆಚ್ಚಿಚ್ಚು ಬೀಳುತ್ತ ನಡೆದಂತೆ ಒಕ್ಕಲತನ ಹಿಂದೆ ಬಿದ್ದಿತು. ಗ್ರಾಮೋದ್ಯೋಗಗಳೆಲ್ಲ ಮುರುಕಳಿ ಸ್ಥಿತಿಯನ್ನು ಮುಟ್ಟಿ ಮಾಯವಾದುವು. ಹಿಂದಿನ ಕಲಾಗಾರರು ಕೆಲಸವಿಲ್ಲದಂತಾದ್ದರಿಂದ ನಗರಗಳಲ್ಲಿಯ ಗಿರಣಿಗಳಲ್ಲಿ ನೋಕರಿ ಮಾಡಹತ್ತಿದರು. ತಮ್ಮ ಶಾರೀರಿಕ ಮತ್ತು ನೈತಿಕ ಬಲವನ್ನು ನಾಶಮಾಡಿಕೊಂಡರು. ಆದರೆ ಬಹುಸಂಖ್ಯಾಕ ಕಲಾಗಾರರು ಅವರ ಕುಂಟುಂಬದವರು ಮತ್ತು ಅವರನ್ನವಲಂಬಿಸಿ ಜೀವನ ಸಾಗಿಸುವವರೆಲ್ಲ ಸಾಮಾನ್ಯ ಕೂಲಿಯವರಂತೆ ಒಕ್ಕಲತನಕ್ಕೆ ಮುತ್ತೆ ಬಂದರು. ಈ ಕಾಲದಲ್ಲಿ ಜನಸಂಖ್ಯೆಯೂ ಇಮ್ಮಡಿಗಿಂತ ಹೆಚ್ಚಾಯಿತು. ತತ್ಪರಿಣಾಮವಾಗಿ ಒಕ್ಕಲತನದ ಮೇಲೆ ಬಹಳ ಭಾರಬಿದ್ದಂತಾಯಿತು. ಅದರಿಂದ ಒಕ್ಕಲತನ ಕ್ರಮಶಃ ಅನರ್ಥಕಾರಕ ಪರಿಸ್ಥಿತಿಗಿಳಿಯಿತು. ಆರ್ಥಿಕ ಹಂತದ ಕೊನೆಯ ಮೆಟ್ಟಲಾಗಿ ಅದೀಗ ಪರಿಣಮಿಸಿಬಿಟ್ಟಿದೆ. ದರಿದ್ರಸ್ಥಿತಿಯನ್ನು ಮುಟ್ಟಿದ ಒಕ್ಕಲಿಗ ಊಹಿಸಲಾರದಷ್ಟು ಶಾಲಗುಳಿಯಾದನು. ಸಾಲದ ಹೊರೆಯಿಂದ ಬಳಲುವ ಅವನು ಒಂದು ಬಗೆಯಿಂದ ನಿರಾಶೆಯಲ್ಲಿ ಮುಳುಗಿಹೋದ್ದರಿಂದ ಆಲಸ್ಯ ಅವನಲ್ಲಿ ಬೇರೂರಿ ಬಿಟ್ಟಿತು. ಹೇಗಿದ್ದರೂ ಅವನು ಭೂವಿಗಳಲ್ಲಿ ಪರಿಶ್ರಮ ಮಾಡಲೇಬೇಕಾಯಿತು. ಅದರಿಂದಲೆ ಉಸಜೀವನ ಸಾಗಿಸಬೇಕಾಗುತಿದ್ದಿತು. ಏಕೆಂದರೆ ಈ ದೇಶದಲ್ಲಿ ಇವನಿಗೆ ಉಪಜೀವನದ ಬೇರೆ ಯಾವ ವರ್ಗವೂ ಉಳಿದಿರಲಿಲ್ಲ.

ಇತ್ತೀಚಿನ ಪರಿಸ್ಥಿತಿ, ಯುದ್ಧ ಕಾಲದಲ್ಲಿಯ ಪರಿಸ್ಥಿತಿಯನ್ನು ಅವಲೋಕಿಸಿದರೂ ಒಕ್ಕಲತನ ಮಾಡುವವನ ಗಳಿಕೆ ಮತ್ತು ಉದ್ದಿಮೆದಾರನ ಗಳಿಕೆಯಲ್ಲಿ ಮಹದಂತರವಿದ್ದುದು ಕಂಡುಬರದಿರಲಾರದು. ಯುದ್ಧ ಕಾಲದಲ್ಲಿ ಹಿಂದೀ ಒಕ್ಕಲಿಗ ಇಂಥ ಪದಾರ್ಥಗಳನ್ನೆ ಬೆಳೆಯಬೇಕು. ಮತ್ತು ಇಂತಿಷ್ಟು ಧಾರಣೆಗೇ ಮಾರಬೇಕೆಂದು ನಿರ್ಬಂಧಿಸಿಲ್ಪಟ್ಟದ್ದರಿಂದ ಅವನ ಸ್ಥಿತಿ ಕಂಗಾಲಾಗಿತ್ತು. ಉತ್ಪಾದನೆಯ ವೆಚ್ಚ ಮಿತಿಮೀರಿ ಏರಿದ್ದರಿಂದ ಅವನು ಬೆಳೆದ ಬೆಳೆಗಳಿಗೆ ಆ ಪ್ರಮಾಣಕ್ಕನುಸರಿಸಿ ಧಾರಣೆಯಿರಲಿಲ್ಲ ಯೋಗ್ಯವಾದ ಬೆಲೆಗೆ ತನ್ನ ಸರಕುಗಳನ್ನು ಮಾರಿ ಸಾಲದ ಹೊರೆಯಿಂದ ಮುಕ್ತನಾಗಲು ಅವನಿಗೆ ಅವಕಾಶ ಒದಗಿಸಲಾಗಲಿಲ್ಲ. ಆದರೆ ನಗರಗಳಲ್ಲಿಯ ಕಾರಖಾನೆದಾರರು ಸರಕಾರದ ಪೋಷಣೆ ಮತ್ತು ಎಲ್ಲ ಬಗೆಯ ಅನುಕೂಲಗಳಿಂದ ಅಲ್ಲದೆ ಕಳ್ಳಪೇಟೆ ವ್ಯವಹಾರ ಸಾಗಿಸಿಯೂ ಊಹಿಸಲಾರದಷ್ಟು ಲಾಭ ಪಡ್ಡೆದರು. ಈರೀತಿ ಬಡ ಒಕ್ಕಲಿಗ ಮೊದಲಿದ್ದ ಸ್ಥಿತಿಯಲ್ಲಿಯೆ ಅತ್ಯಂತ ಬಡವನಾಗಿಯೆ ಉಳಿದ! ಅವನ ಕುಟುಂಬ ತೀರ ಅಶಕ್ತವಾಗಿಯೆ ಉಳಿಯಿತು. ಅವನ ದನಕರುಗಳೆಲ್ಲ ಉಪವಾಸ ಬಳಲಹತ್ತಿದವು. ಇಂಥ ಅತ್ಯಂತ ದರಿದ್ರ ಜೀವನವನ್ನೆ ಅವನು ಸಾಗಿಸಬೇಕಾಗಿ ಬಂತು.

ಈ ವಿಪನ್ನ ಸ್ಥಿತಿಯನ್ನು ಹೋಗಲಾಡಿಸಲು ಉಪಾಯವಾವುದು? ನಗರಗಳಲ್ಲಿ ಹಿಂದೀ ಒಕ್ಕಲಿಗನಿಗೆ ಬೇರೆ ಉದ್ಯೋಗಗಳನ್ನು ಹುಡುಕುವದರಿಂದ ಪರಿಸ್ಥಿತಿ ಸುಧಾರಿಸದು. ಏಕೆಂದರೆ ನಮ್ಮ ಐಂಕೋಟಿ ಒಕ್ಕಲಿಗರಿಗೆ ಬೇರೆಯಾವ ಉದ್ಯೋಗ ಅಥವಾ ಉದ್ಯೋಗಗಳೂ ಅವಕಾಶ ಕಲ್ಪಿಸಿ ಕೊಡಲಾರವು. ರಾಷ್ಟ್ರದ ಮುಖ್ಯ ಉದ್ಯೋಗವೆಂದು ಒಕ್ಕಲತನವನ್ನು ಪುನರುಜ್ಜೀವಿಸಿ ಅದಕ್ಕೆ ಹಿಂದಿನ ಸ್ಥಾನಮಾನಗಳನ್ನು ಕಲ್ಪಿಸಿ ಕೊಡುವುದೆ ಈ ದುಸ್ಥಿತಿಯನ್ನು ಹೋಗಲಾಡಿಸಲು ಮುಖ್ಯೋಪಾಯವಾಗಿದೆ. ನೂರಾರು ವರ್ಷಗಳಿಂದ ನಡೆದು ಬಂದ ಅನ್ಯಾಯವನ್ನೆಲ್ಲ ಹೊಡೆದು ಹಾಕಿ ಸದ್ಯದ ಲೋಪದೋಷಗಳನ್ನೆಲ್ಲ ಸರಿಪಡಿಸುವುದೆ ಸದ್ಯದ ಆಡಳಿತಗಾರರ ಹೊಣೆಯಾಗಿದೆ. ಕೋಟ್ಯಾವಧಿ ಜನತೆಯ ಉದ್ಧಾರವನ್ನು ಮುಖ್ಯ ಲಕ್ಷ್ಯವಾಗಿಟ್ಟುಕೊಂಡು ಅವರು ರಾಷ್ಟ್ರದ ಆರ್ಥಿಕ ಯೋಜನೆಗಳನ್ನೆಲ್ಲ ಹೊಸ ಹೊಸದಾಗಿಯೆ ಯೋಜಿಸಬೇಕು.

ರಾಷ್ಟ್ರದ ಆರ್ಥಿಕ ಪುನರ್ರಚನೆಯ ಯೋಜನೆಗಳನ್ನು ಕೈಕೊಳ್ಳುವಾಗ ಬಹುಸಂಖ್ಯಾಕ ಜನರ ಮುಖ್ಯ

ಉದ್ಯೋಗವನ್ನೆ ತಳಹದಿಯನ್ನಾಗಿಟ್ಟುಕೊಳ್ಳುವುದೆ ವಶ್ಯ. ಉದಾಹರಣೆಯಾಗಿ ಡೆನ್ಮಾರ್ಕ್‌ದ ಆರ್ಥಿಕ ಪುನರ್ರಚನೆಯ ಯೋಜನೆ ಕೈಕೊಳ್ಳುವಾಗ ಅಲ್ಲಿನ ಮುಖ್ಯ ಹೋರೆಯಾದ 'ಡೇರಿ' ಉದ್ಯೋಗವನ್ನಾಗಿಟ್ಟುಕೊಳ್ಳದಿದ್ದರೆ ಯೋಜನೆಗಳೆಲ್ಲ ನಿರರ್ಥಕವೆ ಆಗುವವು. ಅದರಿಂದ ಒಕ್ಕಲತನವನ್ನು ಅಗ್ರ ಭಾಗದಲ್ಲಿಟ್ಟುಕೊಳ್ಳದೆ ಯಾವ ರಾಷ್ಟ್ರೀಯ ಯೋಜನೆಗಳೂ ನಿಜವಾಗಿ ರಾಷ್ಟ್ರೀಯವಾಗಲಾರವು. ಹಿಂದುಸ್ತಾನದಲ್ಲಿಯ ಏಳು ಲಕ್ಷ ಹಳ್ಳಿಗಳ ಪರಿಸ್ಥಿತಿಯನ್ನು ಸುಧಾರಿಸುವುದಕ್ಕಾಗಿ ಕೈಕೊಳ್ಳಲ್ಪಡುವ ಯಾವದೆ ರಾಷ್ಟ್ರೀಯ ಯೋಜನೆಯಲ್ಲಿ ಒಕ್ಕಲತನ ಮತ್ತು ದನಗಳ ಸುಧಾರಣೆಗೆ ಮುಖ್ಯಸ್ಥಾನವನ್ನು ಪಡೆಯಬೇಕಲ್ಲದೆ ಬೇರೆ ಯಾವುದಕ್ಕೂ ಮುಖ್ಯಸ್ಥಾನ ದೊರೆಯಲಾರದು. ಹಿಂದುಸ್ತಾನಕ್ಕೆ ಒಕ್ಕಲತನ ಮತ್ತು ದನಗಳು ಅತ್ಯವಶ್ಯವಾಗಿರುವವರೆಗೆ ಅವನ್ನೆ ಮುಖ್ಯ ತಳಹದಿಯನ್ನಾಗಿಟ್ಟುಕೊಂಡು ಯಾವದೆ ರಾಷ್ಟ್ರೀಯ ಯೋಜನೆಯನ್ನು ಮಾಡಬೇಕಾದುದು ಅನಿವಾರ್ಯವಾಗಿದೆ. ಈ ರೀತಿಯಾಗಿ ಹಳ್ಳಿಯನ್ನೆ ಮುಖ್ಯವಾಗಿಟ್ಟುಕೊಂಡು ಇಂಥ ಯೋಜನೆಯ ಕೆಲ ವಿಷಯಗಳನ್ನು ವಿಮರ್ಶಿಸುವದೆ ಸದ್ಯದ ಟಿಪ್ಪಣಿಯ ಉದ್ದೇಶವಾಗಿದೆ. ಇದರಲ್ಲಿ ಮುಂಬಾಯಿ ಪ್ರಾಂತವನ್ನೆ ಮುಖ್ಯ ಲಕ್ಷ್ಯವಾಗಿಟ್ಟುಕೊಂಡಿದೆ.

ಆಹಾರ, ಮೇವು ಮತ್ತು ಒಕ್ಕಲತನ

ಒಕ್ಕಲತನದ ಸುಧಾರಣೆ

ಹಿಂದುಸ್ತಾನದ ಒಕ್ಕಲತನ ಸುಧಾರಣೆಯ ಮುಖ್ಯ ಉಪಾಯಗಳು ಕೆಳಗಿನಂತಿವೆ. ೧) ಭೂಮಿ ತುಂಡಾಗುವುದನ್ನು ತಪ್ಪಿಸಿ ಲಾಭಕರ ಹಿಡುವಳಿಗಳನ್ನು ಗೊತ್ತುಪಡಿಸುವದು. ೨) ದೇಶದಲ್ಲೆಲ್ಲ ದೊರೆಯುವ ಜಲ ಸಂಪತ್ತನ್ನೆಲ್ಲ ಗೊತ್ತುಪಡಿಸಿ ಅದರ ಪ್ರಯೋಜನ ಪಡೆವುದು. ೩) ನೈಸರ್ಗಿಕ ಮತ್ತು ಶಾಸ್ತ್ರೀಯ ಗೊಬ್ಬರ, ಬೀಜ, ಒಳರೋಗಗಳ ನಿವಾರಣೆ ಮತ್ತು ಭೂಮಿ ಸವಳಾಗದಂತೆ ನೋಡಿಕೊಳ್ಳುವುದು ಮೊದಲಾದ ಮಾರ್ಗಗಳಿಂದ ಮಣ್ಣಿನ ಉತ್ಪಾದನಶಕ್ತಿಯನ್ನು ಹೆಚ್ಚಿಸುವದು. ೪) ಸಹಕಾರ ಪದ್ಧತಿಯಿಂದ ಪ್ರಯತ್ನಿಸುವದು ೫) ಒಳಗಿನ ಮತ್ತು ಸಮುದ್ರ ದಂಡೆಗುಂಟ ಹಾಗು ಗುಡ್ಡದ ಓರೆಗುಂಟ ಇರುವ ಪಡಭೂಮಿಗಳನ್ನು ಸಾಗುಮಾಡುವದು. ತಮ್ಮ ಜೀವನವನ್ನೆ ಇದರ ಅಭ್ಯಾಸಕ್ಕಾಗಿ ಮುಡುಪಾಗಿರಿಸಿದ ಅನುಭವಿಕರು ಅನೇಕ ಸಲ ಇವೆಲ್ಲ ವಿಷಯಗಳನ್ನು ಕೂಲಂಕಷವಾಗಿ ಚರ್ಚಿಸಿರುವರು. ಆದರೆ ಈ ವರೆಗೆ ಅವರ ಸೂಚನೆಗಳನ್ನೆಲ್ಲ ಕಾರ್ಯರೂಪದಲ್ಲಿಳಿಸುವ ಸಂಧಿ ಮಾತ್ರ ಅವರಿಗೆ ದೊರೆತಿರಲಿಲ್ಲ. ಆದುದರಿಂದ ಅವು ಮಹತ್ವದವಾಗಿದ್ದರೂ ಇಲ್ಲಿ ಕೇವಲ ನಾಮನಿರ್ದೇಶ ಮಾತ್ರ ಮಾಡಿಬಿಡುವೆ. ಹೆಚ್ಚಿನ ಚರ್ಚೆ ಮಾಡಬಯಸುವದಿಲ್ಲ.

ಮೂಗಳ.

ಇಲ್ಲಿ ಸ್ವತಂತ್ರ ವಿಚಾರಣೆಯ ಸಮಿತ್ತ ಖಾಸಗೀರೀತಿಯಿಂದ ಹೆಬ್ಬಾಳ ಚಂದ್ರಗೌಡರ ಅಧ್ಯಕ್ಷತೆಯಲ್ಲಿ ಸಭೆಸೇರಿ 'ಸ್ವಾತಂತ್ರ್ಯದಿನದ' ಮಹತ್ವವನ್ನು ಬಿ. ರಾಮಪ್ಪ ಇವರು ತಿಳಿಸಿದನಂತರ ಸಭೆಯ ಜನರೆಲ್ಲರೂ ಪ್ರತಿಜ್ಞೆಯನ್ನು ತೆಗೆದುಕೊಂಡರು.

ಶಿಕ್ಷಣದ ವಿಚಾರ ಕ್ರಾಂತಿವೀರ ನಾನಾ ಪಟೇಲರು ಬಾರದ ಕಾರಣ ಮುಂದಿಗೆ ಅನ್ನದಾನ ಸ್ವಾಮಿಯವರಧ್ಯಕ್ಷತೆಯಲ್ಲಿ ಸಭೆಸೇರಿ ಹುದಲಿ ಆಶ್ರಮದ ಸಂಚಾಲಕರಾದ ಶ್ರೀ ಪುಂಡಲೀಕಜಿಯವರು ವಿಧಾಯಕ ಕಾರ್ಯಗಳ ಮಹತ್ವದಮೇಲೆಯೂ, ಕರ್ನಾಟಕ ಚರಖಾ ಸಂಘದ ಮಂತ್ರಿ ಶ್ರೀನಡವಿಯವರು ಸದ್ಯದ ರಾಜಕೀಯ ಪರಿಸ್ಥಿತಿಯ ಮೇಲೂ ಭಾಷಣ ಮಾಡಿದರು.

60

ಪೂರ್ವಕೆನ್ನಡಿಗರ ಪ್ರಥಮ ಪರಿಷತ್ತು.

ಅತಿಪೂರ್ವ ಕನ್ನಡಪ್ರಾಂತದ ಕನ್ನಡಿಗರು ತಮ್ಮ ಭಾಷೆ ಸಂಸ್ಕೃತಿಗಳ ಬಗ್ಗೆ ಜಾಗ್ರತರಾಗಿ ತಮ್ಮ ಶೋಚನೀಯ ಪರಿಸ್ಥಿತಿಯ ನಿವಾರಣೆಗಾಗಿ ಪ್ರತಿನಿಧಿಕವಾದ ಪರಿಷತ್ತೊಂದನ್ನು ಮೂಡ್ಕಿ ತಿಂಗಳಲ್ಲಿ ಸಮಾವೇಶಗೊಳಿಸಲು ಶಂಕರ ಬಂಡೆಯಲ್ಲಿ ೩ನೆಯ ದಿನಾಂಕ ನಿರ್ಧರಿಸಿದರು. ಅ.ಕ.ವಿ. ಸಂಘದ ಕಾರ್ಯಕಾರೀ ಸದಸ್ಯರಾದ ಶ್ರೀರಂಗನಗೌಡರು ಅಧ್ಯಕ್ಷರಾಗಿದ್ದರು.

ಆಲೋಚನಾ ಸಭೆಯು ಗೋಡೆಹಾಳಿನಲ್ಲಿ ೯ನೆಯ ದಿನಾಂಕ ಶ್ರೀ ಚಂದ್ರಶೇಖರಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ ಕೂಡಿದ್ದಿತು. ಬಳ್ಳಾರಿಯಿಂದ ಅನೇಕ ಮಹನೀಯರು ಹೋಗಿದ್ದರು.

ಹೆಬ್ಬಾಳ (ಗುಡಗೇರಿ)

ಸ್ವತಂತ್ರದಿನಾಚರಣೆಯು ೨೬ನೆಯ ದಿನಾಂಕ ಪ್ರಾತಃಕಾಲ ಗಾಂಧಿ ಚೌಕದಲ್ಲಿ ಪ್ರಭಾತಫೇರಿ ಧ್ವಜ ವಂದನೆಯಿಂದಾರಂಭವಾಗಿ ಸಾಯಂಕಾಲ ಪ್ರತಿಜ್ಞಾ ವಿಧಿಯು ನಡೆಯಿತು. ಧ್ವಜದ ಅವರೋಹಣ ವಂದೇ ಮಾತರಂದಿಂದ ಸಭೆಯು ಅಂತವಾಯಿತು.

ಶ್ರೀಚನ್ನಪ್ಪ ತಂಬ್ರಳ್ಳಿ ಇವರು ಪೋಷ್ಟ ಆಫೀಸ್ ಪ್ರಾರಂಭೋತ್ಸವವನ್ನು 1-2-47 ರದಿನ ಮಾಡಿದರು.

ಕೋಗನೂರು.

ಸ್ವಾತಂತ್ರ್ಯದಿನೋತ್ಸವವು ಪ್ರಭಾತ ಫೇರಿಯ ನಂತರ ಶ್ರೀ ಪುಂಡಲೀಕಜಿಯವರ ಧ್ವಜವಂದನದಿಂದ ಆರಂಭವಾಯಿತು. ಮಧ್ಯಾನ್ಹಾತ್ಪರ ಸಾಮೂಹಿಕ ಸೂತ್ರಯಜ್ಞ ಧ್ವಜಾವರೋಹಣನಡೆದವು ಪ್ರತಿಜ್ಞಾವಿಧಿಯಾಯಿತು. ಮರುದಿನ ಸಾತಾರಾಜಿಲ್ಲೆಯ ಸುಪ್ರಶಿದ್ಧ ಕ್ರಾಂತಿಕಾರರಾದ ಶ್ರೀ ನಾನಾ ಪಟೇಲರು, ಅವರ ಮತ್ತು ಶ್ರೀ ತಟ್ಟಿಯವರ ಭಾಷಣವಾಯಿತು. ಶ್ರೀಅನ್ನದಾನ ಸ್ವಾಮಿಗಳು ಧ್ವಜವಂದನೆಯ ಮಹತ್ವವನ್ನು ತಿಳಿಯಹೇಳಿದರು.

ನಾನಾಪಟೇಲರ ಕ್ರಾಂತಿಯ ಭಾಷಣ.

ನಂತರ ನಾನಾ ಪಟೇಲರು ತಮ್ಮ ಭಾಷಣ ಸುರವು ಮಾಡಿ, ಹುತಾತ್ಮ ಮೈಲಾರಮಹದೇವ, ತಿರುಕಪ್ಪಾ ಮಡಿವಾಳರ, ವೀರಯ್ಯಾ ಹಿರೇಮಠದವರಿಗೆ ತಮ್ಮ ದುಃಖ ಪ್ರದರ್ಶಿಸಿದರು. ಇಂಥ ಅಖಂಡ ಕರ್ನಾಟಕದ ಹಮ್ಮೆಯ ಹಳ್ಳಿಗೆ ತಾವು ಬಂದಿದ್ದು ಒಂದು ದೊಡ್ಡ ಪವಿತ್ರಸ್ಥಾನಕ್ಕೆ ಬಂದಂತಾಯಿತೆಂದರು ನಂತರ ತಮ್ಮ ಗುಂಪಿನ ವಿಷಯ ಹೇಳುತ್ತಾ, ತಮ್ಮ ಗುಂಪಿನಲ್ಲಿ ೩೨೦೦ ಜನರಿದ್ದರೆಂದು ೪೫೦ ಹಳ್ಳಿಗಳಲ್ಲಿ ಗ್ರಾಮ ಸ್ವರಾಜ್ಯವನ್ನು ಸ್ಥಾಪಿಸಿದ್ದರೆಂದು ಹೇಳಿದರು. ಅವರೂ ಮತ್ತೇನಂದರೆಂದರೆ ೫೦೦೦ ನ್ಯಾಯಗಳನ್ನು ನಿರ್ಣಯ ಮಾಡಿದರೆಂದು, ಬ್ರಿಟಿಷ್ ಸರ್ಕಾರವೇ ನಿರ್ಮೂಲವಾಗಿತ್ತೆಂದರು. ಯಾರಾದರೂ ಸ್ತ್ರೀಯರ ಮೇಲೆ ಅತ್ಯಾಚಾರ, ಅನಾಚಾರಗಳನ್ನು ಮಾಡಿದರೆ ಅವರಿಗೆ 'ಪತ್ರಿ' ಮರಾಠಿಯಲ್ಲಿ ಕನ್ನಡದಲ್ಲಿ ನಾಲುಗಳನ್ನು ಕಟ್ಟುತ್ತಿದ್ದುದರಿಂದ ಇವರ ಸರಕಾರಕ್ಕೆ 'ಪತ್ರಿ ಸರಕಾರ' ವೆಂದು ಹೆಸರು ಬಂತೆಂದು ಹೇಳಿದರು. ನಾವು ನಡುಗಾಲ ಸರಕಾರದಿಂದ ತೃಪ್ತಿಯಾಗದೆ ಸಂಪೂರ್ಣ ಸ್ವರಾಜ್ಯಗಳಿಸಲು ಇನ್ನೂ ಮುಂದಿನ ಕ್ರಾಂತಿಗೆ ಸಿದ್ಧರಾಗಬೇಕೆಂದು ಹೇಳಿ ತಮ್ಮ ಭಾಷಣವನ್ನು ಮುಗಿಸಿದರು. ಇವರು ಮರಾಠಿಯಲ್ಲಿ ಮಾತನಾಡಿದ್ದನ್ನು ಶಾಂತಿನಾಥ ಇಂಗಳೆಯವರು ಕನ್ನಡಕ್ಕೆ ತರ್ಜುಮೆ ಮಾಡಿಹೇಳಿದರು. ನಂತರ ರಮೂನಂದರಿತ್ತಿಯವರು 'ಒಕ್ಕೂಟ' ವಿಷಯ ಜನರಿಗೆ ಹೇಳಿದರು. ನಂತರ ಗೋಣೆಪ್ಪನವರು ಕೋಗನೂರು ನಿವಾಸಿಗಳ ಪರವಾಗಿ ಮಾನಪತ್ರ ಅರ್ಪಿಸಿದನಂತರ ಸಭೆಯು ಮುಕ್ತಾಯವಾಗಿ ಪಾಟೀಲರು ಲಕ್ಷ್ಮೇಶ್ವರಕ್ಕೆ ಪ್ರಯಾಣ ಬೆಳೆಸಿದರು. ಈ ಸಭೆಗೆ ೨-೩ ಸಾವಿರ ಜನರು ನೆರೆದಿದ್ದರು.

ನವಭಾರತಕ್ಕೆ ಚಂದಾದಾರರಾಗಿರಿ

ಪ್ರಾಥಮಿಕ ಶಾಲೋಪಾಧ್ಯಾಯರ ಬೇಡಿಕೆ.

(ಕಂಪ್ಲಿ ಫಿರ್ಕಾ ಪ್ರಾಥಮಿಕೋಪಾಧ್ಯಾಯರು ರವಿನ್ಯೂ ಮಂತ್ರಿಗಳಾದ ಮಾನ್ಯಕಾರಂತರು ಬಂದಾಗ ಅರ್ಪಿಸಿದ ವಿನ್ನವತ್ತಳೆಯಿಂದ ತೆಗೆದುದು)

1. ಗಅ-ಗ-'೪೭ರಲ್ಲಿ ಪ್ರಕಟಿಸಲ್ಪಟ್ಟ 'ಮೊರ್ಪಾಟಾದ ಸಂಬಳದಪಟ್ಟಿ' ಯು ವಿದ್ಯಾಪಾತೆಯ ಜನಗಳಿಗೆಲ್ಲಾ ಅತೃಪ್ತಿಕರವಾಗಿಯೂ, ಅಸಮೂಧಾನಕರವಾಗಿಯೂ ಇವೆ. ಅದರಲ್ಲಿಯೂ, ಸರಕಾರಿ ನೌಕರರಿಗೆ ತೋರಿಸಿರುವ ಭೇದ ಭಾವವು ಅತಿವ್ಯಸನಕರವಾಗಿದೆ. ಪ್ರತಿಯೊಂದು ಶಾಖೆಯ ಅಡಿಗಲ್ಲಾಗಿರುವ ಈ ನಮ್ಮ ವಿದ್ಯಾಪಾತೆಯನ್ನೇ ಕಡೆಗಣ್ಣಿನಿಂದ ನೋಡಿರುವುದು ನಮ್ಮ ದುರ್ದೈವವೆಂದು ತಿಳಿಯುತ್ತೇವೆ. ಇಂತಹ ಹಿಂದುಳಿದ ಜನಗಳನ್ನು ಮುಂದಕ್ಕೆ ತರಲು ಸರಕಾರವು ಯತ್ನಿಸಬೇಕು.

2. ಅನುಭವಶಾಲಿಗಳಾದ ಅಧ್ಯಾಪಕರನ್ನೂ' ಮುಖ್ಯೋಧ್ಯಾಪಕರನ್ನೂ, ಶಾಲಾಧಿಕಾರಿಗಳನ್ನಾಗಿ ನೇಮಿಸಬೇಕು.

3. ಸರಕಾರಿ ನೌಕರರಿಗೆ ತೋರಿಸಿರುವ 'ಬೋನಸ್', ಮೊದಲಾದ ಸವಲತ್ತುಗಳನ್ನು ಜಿಲ್ಲಾ ಬೋರ್ಡಿನವರಿಗೂ ತೋರಿಸಬೇಕು.

4. ಉಪಾಧ್ಯಾಯರ ಮಕ್ಕಳಿಗೆ ಉಚಿತ' ವಿದ್ಯಾಭ್ಯಾಸಕ್ಕೆ ಅನುಕೂಲತೆಯನ್ನು ಮಾಡಿಕೊಡಬೆಕು.

5. ಉಪಾಧ್ಯಾಯರಿಗೆ ವಸತಿಗೃಹದ ಅನುಕೂಲತೆ ಮತ್ತು ಇತರ ಮೊದೇರಿಯೂ ಪ್ರದೇಶಗಳಿಗೆ ತೋರಿಸುವ 'ಭತ್ತೆ' ಇಲ್ಲಿಗೆ ಸಹ ಕೊಡಬೇಕು.

6. ಪಂಡಿತರಿಗೂ, ವ್ಯಾಯಾಮೋಧ್ಯಾಪಕರಿಗೂ, ಸಂಬಳವನ್ನು 'L.T.' ಅಧ್ಯಾಪಕರಿಗೆ ಕೊಡುವಂತೆ ಕೊಡಬೇಕು.

7. ಪ್ರಾರಂಭಿಕ ಶಾಲೆಗಳಲ್ಲಿಯೂ, ಮೂಧ್ಯಮಿಕ ಶಾಲೆಗಳಲ್ಲಿಯೂ ಕೆಲಸಮಾಡುತ್ತಿರುವ 'ಸೆಕೆಂಡರೀ ಗ್ರೇಡ್' ಅಧ್ಯಾಪಕರಿಗೆ ಸಂಬಳದಲ್ಲಿ ಯಾವರೀತಿಯ ಭೇದವನ್ನೂ ತೋರಿಸಕೂಡದು.

ಕಂಪ್ಲಿ.

ಕಳೆದ 1946 ನವಂಬರ್‌ನಲ್ಲಿ ನಡೆದ ಹಿಂದೀ ಪರೀಕ್ಷೆಯಲ್ಲಿ ಇಲ್ಲಿಯ ಬೋರ್ಡು ಹೈಸ್ಕೂಲಿನ ಏಳು ವಿದ್ಯಾರ್ಥಿಗಳಲ್ಲಿ ಆರುಜನ ಉತ್ತೀರ್ಣರಾಗಿರುತ್ತಾರೆ. ಹಿಂದೀ ಬೋಧಕರಾದ ವಿದ್ವಾನ್ ಆನಂದರಾಯರಿಂದ ಈ ಫಲಿತಾಂಶವು ದೊರೆಯಿತೆಂದು ಮುಖ್ಯೋಪಾಧ್ಯಾಯರಾದ ಶ್ರೀ ನೀರನಗೌಡರು ತಿಳಿಸುತ್ತಾರೆ.

ಅಮೆರಿಕಾದ ರಾಯಭಾರಿಗಳಾಗಿ ಶ್ರೀ ಅಸಫ್ ಅಲ್ಲಿಯವರು ೭ನೆಯ ದಿನಾಂಕ ವಿಮಾನ ಮಾರ್ಗವಾಗಿ ತೆರಳಿದರು.

Woolen Coatings, Silk Sarees, Benares and other latest designs Handloom and Mill made Clothes Et .
Colours Guaranteed, Prices very reasonable Trial Solicited

G. GOPAL SING & SON.,
CLOTH MERCHANT
No. 15 Old Market BELLARY.
ಜಿ. ಗೋಪಾಲ ಸಿಂಗ್ ಅಂಡ್ ಸನ್,
ಜವಳಿ ವ್ಯಾಪಾರಿ, ನಂ. 15
ಹಳೇ ಮಾರ್ಕೆಟ್, ಬಳ್ಳಾರಿ.

ಉಲನ್ ಕೋಟಿಂಗ್ ಬಟ್ಟೆ, ಬನಾರಸ್ ಜರಿ, ಶಿಲ್ಕ್-ಟಿಶ್ಯೂ ಸೀರೆ ಜಾಕೆಟ್ ಪೀಸ್ ಬಾರ್ಡರ್ ಮತ್ತು ಇತರ ಅನೇಕ ವಿವಿಧ ; ಅತ್ಯಂತ ಆಧುನಿಕ ಉಡುಪಿನ ಬೇಡಿಕೆಯನ್ನು ನಾವು ಪೂರೈಸಲಿದ್ದೇವೆ. ಕೈ ನುಗ್ಗದ ಮಿಲ್ ಬಟ್ಟೆಗಳು ವಿಧಾಯಕ ಬೆಲೆಗೆ ದೊರೆಯುತ್ತವೆ. ಬಣ್ಣ ಗ್ಯಾರಂಟಿ, ಬೆಲೆ ಸರಿಯೂನ್ದು. ಪರೀಕ್ಷಿಸಿ ಮನಗಾಣಿರಿ.

60

ಪೂರ್ವಕೆನ್ನಡಿಗರ ಪ್ರಥಮ ಪರಿಷತ್ತು.

ಅತಿಪೂರ್ವ ಕನ್ನಡಪ್ರಾಂತದ ಕನ್ನಡಿಗರು ತಮ್ಮ ಭಾಷೆ ಸಂಸ್ಕೃತಿಗಳ ಬಗ್ಗೆ ಜಾಗ್ರತರಾಗಿ ತಮ್ಮ ಶೋಚನೀಯ ಪರಿಸ್ಥಿತಿಯ ನಿವಾರಣೆಗಾಗಿ ಪ್ರಾತಿನಿಧಿಕವಾದ ಪರಿಷತ್ತೊಂದನ್ನು ಮೂಡೀ ತಿಂಗಳಲ್ಲಿ ಸಮಾವೇಶಗೊಳಿಸಲು ಶಂಕರ ಬಂಡೆಯಲ್ಲಿ ೩ನೆಯ ದಿನಾಂಕ ನಿರ್ಧರಿಸಿದರು. ಅ.ಕ.ಏ. ಸಂಘದ ಕಾರ್ಯಕಾರೀ ಸದಸ್ಯರಾದ ಶ್ರೀರಂಗನಗೌಡರು ಅಧ್ಯಕ್ಷರಾಗಿದ್ದರು.

ಆಲೋಚನಾ ಸಭೆಯು ಗೋಡೆಹಾಳಿನಲ್ಲಿ ೯ನೆಯ ದಿನಾಂಕ ಶ್ರೀ ಚಂದ್ರಶೇಖರಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ ಕೂಡಿದ್ದಿತು. ಬಳ್ಳಾರಿಯಿಂದ ಅನೇಕ ಮಹನೀಯರು ಹೋಗಿದ್ದರು.

ಹೆಬ್ಬಾಳ (ಗುಡಗೇರಿ)

ಸ್ವತಂತ್ರದಿನಾಚರಣೆಯು ೨೬ನೆಯ ದಿನಾಂಕ ಪ್ರಾತಃಕಾಲ ಗಾಂಧಿ ಚೌಕದಲ್ಲಿ ಪ್ರಭಾತಫೇರಿ ಧ್ವಜವಂದನೆಯಿಂದಾರಂಭವಾಗಿ ಸಾಯಂಕಾಲ ಪ್ರತಿಜ್ಞಾವಿಧಿಯು ನಡೆಯಿತು. ಧ್ವಜದ ಅವರೋಹಣ ವಂದೇಮಾತರಂದಿಂದ ಸಭೆಯು ಅಂತವಾಯಿತು.

ಶ್ರೀಚನ್ನಪ್ಪ ತಂಬ್ರಳ್ಳಿ ಇವರು ಪೋಷ್ಟ ಆಫೀಸ್ ಪ್ರಾರಂಭೋತ್ಸವವನ್ನು 1-2-47 ರದಿನ ಮಾಡಿದರು.

ಕೋಗನೂರು.

ಸ್ವಾತಂತ್ರ್ಯದಿನೋತ್ಸವವು ಪ್ರಭಾತ ಫೇರಿಯ ನಂತರ ಶ್ರೀ ಪುಂಡಲೀಕಜಿಯವರ ಧ್ವಜವಂದನದಿಂದ ಆರಂಭವಾಯಿತು. ಮಧ್ಯಾನ್ಹಾತ್ಪರ ಸಾಮೂಹಿಕ ಸೂತ್ರಯಜ್ಞ ಧ್ವಜಾವರೋಹಣನಡೆದವು ಪ್ರತಿಜ್ಞಾವಿಧಿಯಾಯಿತು. ಮರುದಿನ ಸಾತಾರಾಜಿಲ್ಲೆಯ ಸುಪ್ರಸಿದ್ಧ ಕ್ರಾಂತಿಕಾರರಾದ ಶ್ರೀ ನಾನಾ ಪಟೇಲರು, ಅವರ ಮತ್ತು ಶ್ರೀ ತಟ್ಟಿಯವರ ಭಾಷಣವಾಯಿತು. ಶ್ರೀಅನ್ನದಾನ ಸ್ವಾಮಿಗಳು ಧ್ವಜವಂದನೆಯ ಮಹತ್ವವನ್ನು ತಿಳಿಯಹೇಳಿದರು.

ನಾನಾಪಟೇಲರ ಕ್ರಾಂತಿಯ ಭಾಷಣ.

ನಂತರ ನಾನಾ ಪಟೇಲರು ತಮ್ಮ ಭಾಷಣ ಸುರವು ಮಾಡಿ, ಹುತಾತ್ಮ ಮೈಲಾರಮಹದೇವ, ತಿರುಕಪ್ಪಾ ಮಡಿವಾಳರ. ವೀರಯ್ಯಾ ಹಿರೇಮಠದವರಿಗೆ ತಮ್ಮ ದುಃಖ ಪ್ರದರ್ಶಿಸಿದರು. ಇಂಥ ಅಖಂಡ ಕರ್ನಾಟಕದ ಹಮ್ಮೆಯ ಹಳ್ಳಿಗೆ ತಾವು ಬಂದಿದ್ದು ಒಂದು ದೊಡ್ಡ ಪವಿತ್ರಸ್ಥಾನಕ್ಕೆ ಬಂದಂತಾಯಿತೆಂದರು ನಂತರ ತಮ್ಮ ಗುಂಪಿನ ವಿಷಯ ಹೇಳುತ್ತಾ, ತಮ್ಮ ಗುಂಪಿನಲ್ಲಿ ೩೨೦೦ ಜನರಿದ್ದರೆಂದು ೪೫೦ ಹಳ್ಳಿಗಳಲ್ಲಿ ಗ್ರಾಮ ಸ್ವರಾಜ್ಯವನ್ನು ಸ್ಥಾಪಿಸಿದ್ದರೆಂದು ಹೇಳಿದರು. ಅವರೂ ಮತ್ತೇನಂದರೆಂದರೆ ೫೦೦೦ ನ್ಯಾಯಗಳನ್ನು ನಿರ್ಣಯ ಮಾಡಿದರೆಂದು, ಬ್ರಿಟಿಷ್ ಸರ್ಕಾರವೇ ನಿರ್ಮೂಲವಾಗಿತ್ತೆಂದರು. ಯಾರಾದರೂ ಸ್ತ್ರೀಯರ ಮೇಲೆ ಅತ್ಯಾಚಾರ, ಅನಾಚಾರಗಳನ್ನು ಮಾಡಿದರೆ ಅವರಿಗೆ 'ಪತ್ರಿ' ಮರಾಠಿಯಲ್ಲಿ ಕನ್ನಡದಲ್ಲಿ ನಾಲುಗಳನ್ನು ಕಟ್ಟುತ್ತಿದ್ದುದರಿಂದ ಇವರ ಸರಕಾರಕ್ಕೆ 'ಪತ್ರಿ ಸರಕಾರ' ವೆಂದು ಹೆಸರು ಬಂತೆಂದು ಹೇಳಿದರು. ನಾವು ನಡುಗಾಲ ಸರಕಾರದಿಂದ ತೃಪ್ತಿಯಾಗದೆ ಸಂಪೂರ್ಣ ಸ್ವರಾಜ್ಯಗಳಿಸಲು ಇನ್ನೂ ಮುಂದಿನ ಕ್ರಾಂತಿಗೆ ಸಿದ್ಧರಾಗಬೇಕೆಂದು ಹೇಳಿ ತಮ್ಮ ಭಾಷಣವನ್ನು ಮುಗಿಸಿದರು. ಇವರು ಮರಾಠಿಯಲ್ಲಿ ಮೂತನಾಡಿದ್ದನ್ನು ಶಾಂತಿನಾಥ ಇಂಗಳೆಯವರು ಕನ್ನಡಕ್ಕೆ ತರ್ಜುಮೆ ಮಾಡಿಹೇಳಿದರು. ನಂತರ ರಮಾನಂದರಿತ್ತಿಯವರು 'ಒಕ್ಕೂಟ' ವಿಷಯ ಜನರಿಗೆ ಹೇಳಿದರು. ನಂತರ ಗೋಣೆಪ್ಪನವರು ಕೋಗನೂರು ನಿವಾಸಿಗಳ ಪರವಾಗಿ ಮಾನಪತ್ರ ಅರ್ಪಿಸಿದನಂತರ ಸಭೆಯು ಮುಕ್ತಾಯವಾಗಿ ನಾಟೀಲರು ಲಕ್ಷ್ಮೇಶ್ವರಕ್ಕೆ ಪ್ರಯಾಣ ಬೆಳೆಸಿದರು. ಈಸಭೆಗೆ ೨-೩ ಸಾವಿರ ಜನರು ನೆರೆದಿದ್ದರು.

ನವಭಾರತಕ್ಕೆ ಚಂದಾದಾರರಾಗಿರಿ

ಪ್ರಾಥಮಿಕ ಶಾಲೋಪಾಧ್ಯಾಯರ ಬೇಡಿಕೆ.

(ಕಂಪ್ಲಿ ಫಿರ್ಕಾ ಪ್ರಾಥಮಿಕೋಪಾಧ್ಯಾಯರು ರವಿನ್ಯೂ ಮಂತ್ರಿಗಳಾದ ಮಾನ್ಯಕಾರಂತರು ಬಂದಾಗ ಅರ್ಪಿಸಿದ ವಿನ್ನವತ್ತಳೆಯಿಂದ ತೆಗೆದುದು)

1. ಗಿಲ-ಗಿ-'ಳಲ್ಲಿ ಪ್ರಕಟಿಸಲ್ಪಟ್ಟ 'ಮಿಶ್ರಾಟಾದ ಸಂಬಳದಪಟ್ಟಿ' ಯು ವಿದ್ಯಾಖಾತೆಯ ಜನಗಳಿಗೆಲ್ಲಾ ಅತೃಪ್ತಿಕರವಾಗಿಯೂ, ಅಸಮಾಧಾನಕರವಾಗಿಯೂ ಇವೆ. ಅದರಲ್ಲಿಯೂ, ಸರಕಾರಿ ನೌಕರರಿಗೆ ತೋರಿಸಿರುವ ಭೇದ ಭಾವವು ಅತಿವ್ಯಸನಕರವಾಗಿದೆ. ಪ್ರತಿಯೊಂದು ಶಾಖೆಯ ಅಡಿಗಲ್ಲಾಗಿರುವ ಈ ನಮ್ಮ ವಿದ್ಯಾಖಾತೆಯನ್ನೇ ಕಡೆಗಣ್ಣಿನಿಂದ ನೋಡಿರುವುದು ನಮ್ಮ ದುರ್ದೈವವೆಂದು ತಿಳಿಯುತ್ತೇವೆ ಇಂತಹ ಹಿಂದುಳಿದ ಜನಗಳನ್ನು ಮುಂದಕ್ಕೆ ತರಲು ಸರಕಾರವು ಯತ್ನಿಸಬೇಕು.

2. ಅನುಭವಶಾಲಿಗಳಾದ ಅಧ್ಯಾಪಕರನ್ನೂ' ಮುಖ್ಯೋಧ್ಯಾಪಕರನ್ನೂ, ಶಾಲಾಧಿಕಾರಿಗಳನ್ನಾಗಿ ನೇಮಿಸಬೇಕು.

3. ಸರಕಾರಿ ನೌಕರರಿಗೆ ತೋರಿಸಿರುವ 'ಬೋನಸ್', ಮೊದಲಾದ ಸವಲತ್ತುಗಳನ್ನು ಜಿಲ್ಲಾ ಬೋರ್ಡಿನವರಿಗೂ ತೋರಿಸಬೇಕು.

4. ಉಪಾಧ್ಯಾಯರ ಮಕ್ಕಳಿಗೆ ಉಚಿತ' ವಿದ್ಯಾಭ್ಯಾಸಕ್ಕೆ ಅನುಕೂಲತೆಯನ್ನು ಮಾಡಿಕೊಡಬೇಕು.

5. ಉಪಾಧ್ಯಾಯರಿಗೆ ವಸತಿಗೃಹದ ಅನುಕೂಲತೆ ಮತ್ತು ಇತರ ಮಜೇರಿಯೂ ಪ್ರದೇಶಗಳಿಗೆ ತೋರಿಸುವ 'ಭತ್ತೆ' ಇವ್ಲಿಗೆ ಸಹ ಕೊಡಬೇಕು.

6. ಪಂಡಿತರಿಗೂ, ವ್ಯಾಯಾಮೋಧ್ಯಾಪಕರಿಗೂ, ಸಂಬಳವನ್ನು 'L.T.' ಅಧ್ಯಾಪಕರಿಗೆ ಕೊಡುವಂತೆ ಕೊಡಬೇಕು.

7. ಪ್ರಾರಂಭಿಕ ಶಾಲೆಗಳಲ್ಲಿಯೂ, ಮಾಧ್ಯಮಿಕ ಶಾಲೆಗಳಲ್ಲಿಯೂ ಕೆಲಸಮಾಡುತ್ತಿರುವ 'ಸೆಕಂಡರೀ ಗ್ರೇಡ್' ಅಧ್ಯಾಪಕರಿಗೆ ಸಂಬಳದಲ್ಲಿ ಯಾವರೀತಿಯ ಭೇದವನ್ನೂ ತೋರಿಸಕೂಡದು.

ಕಂಪ್ಲಿ.

ಕಳೆದ 1946 ನವಂಬರ್‌ನಲ್ಲಿ ನಡೆದ ಹಿಂದೀ ಪರೀಕ್ಷೆಯಲ್ಲಿ ಇಲ್ಲಿಯ ಬೋರ್ಡು ಹೈಸ್ಕೂಲಿನ ಏಳು ವಿದ್ಯಾರ್ಥಿಗಳಲ್ಲಿ ಆರುಜನ ಉತ್ತೀರ್ಣರಾಗಿರುತ್ತಾರೆ ಹಿಂದೀ ಬೋಧಕರಾದ ವಿದ್ವಾನ್ ಆನಂದರಾಯರಿಂದ ಈ ಫಲಿತಾಂಶವು ದೊರೆಯಿತೆಂದು ಮುಖ್ಯೋಪಾಧ್ಯಾಯರಾದ ಶ್ರೀ ನೀರನಗೌಡರು ತಿಳಿಸುತ್ತಾರೆ.

ಅಮೆರಿಕಾದ ರಾಯಭಾರಿಗಳಾಗಿ ಶ್ರೀ ಅಸಫ್ ಅಲ್ಲಿಯವರು ೭ನೆಯ ದಿನಾಂಕ ವಿಮಾನ ಮಾರ್ಗವಾಗಿ ತೆರಳಿದರು.

Woolen Coatings. Silk Sarees, Benares and other latest designs Handloom and Mill made Clothes Et .
Colours Guaranteed, Prices very reasonable Trial Solicited

G. GOPAL SING & SON.,
CLOTH MERCHANT
No. 15 Old Market BELLARY.
ಜಿ. ಗೋಪಾಲ ಸಿಂಗ್ ಅಂಡ್ ಸನ್,
ಜವಳಿ ವ್ಯಾಪಾರಿ, ನಂ. 15
ಹಳೇ ಮಾರ್ಕೆಟ್, ಬಳ್ಳಾರಿ.

ಉಲನ್ ಕೋಟ್ ಬಟ್ಟೆ, ಬನಾರಸ್ ಜರಿ, ಶಿಲ್ಕ್-ಟಿಕ್ಕು ಸೀರೆ ಜಾಕೆಟ್ ಲೇಸ್ ಬಾರ್ಡರ್ ಮತ್ತು ಇತರ ಅನೇಕ ವಿವಿಧ ! ಅತ್ಯಂತ ಅಧುನಿಕ ಉಡುಪಿನ ಬೇಡಿಕೆಯನ್ನು ನಾವು ಪೂರೈಸಲಿದ್ದೇವೆ. ಕೈ ಮಗ್ಗದ ಮಿಲ್ ಬಟ್ಟೆಗಳು ವಿಧಾಯಕ ಬೆಲೆಗೆ ದೊರೆಯುತ್ತವೆ. ಬಣ್ಣ ಗ್ಯಾರಂಟಿ, ಬೆಲೆ ಸರಿಯೂದ್ದು. ಪರೀಕ್ಷಿಸಿ ಮನಗಾಣರಿ.

ಕರಕರೆ ದೇವರಿಗೆ ಮರದ ಜಾಗಟೆ.

ಹಸಿದ ಮಗುವಿಗೆ ಮೈಗಳ್ಳ ತಾಯಿ ರಬ್ಬರಿನ ಕೃತಕ ಮೊಲೆಯನ್ನು ಚೀಪಲು ಕೊಡುವಳು. ಅದು ಮಗುವಿಗೆ ಯಾವ ಪುಷ್ಟಿಯನ್ನೂ ಕೊಡದಿದ್ದರೂ ಅದರ ಹಸಿವೆಯನ್ನು ತೃಪ್ತಿಗೊಳಿಸುವದು. ಅದೇ ಪ್ರಕಾರ, ನಮ್ಮ ವನಸ್ಪತಿ ತುಪ್ಪವನ್ನು ಉಪಯೋಗಿಸುವವರಿಗೂ ತುಪ್ಪದಂತೆ ತೋರುವದೇನನ್ನಾದರೂ ಉಣ್ಣುವ ಅತುರವಿರುತ್ತದೆ. ನಮ್ಮ ವನಸ್ಪತಿ "ತುಪ್ಪ" ವನ್ನು ತಯಾರಿಸುವವರು ಕೂಡ ಅಂಥವರ ಚಪಲವನ್ನು ಪೂರೈಸುವಗೋಸ್ಕರ, ತುಪ್ಪದ ಪೌಷ್ಟಿಕತೆಯಿಲ್ಲದ ವಸ್ತುವನ್ನು ಒದಗಿಸುತ್ತಾರೆ. ಆದರೆ ತಾಯಿ ತನ್ನಮಗುವಿಗೆ ರಬ್ಬರಿನ ಮೊಲೆ ಕೊಟ್ಟರೆ ಅದಕ್ಕೇನೂ ಬೆಲೆ ಕೇಳುವದಿಲ್ಲ. ವನಸ್ಪತಿ ತುಪ್ಪ ಮಾಡುವವರು ಮಾತ್ರ ತಮ್ಮ ಗಿರಾಕಿಗಳಿಂದ ದೊರೆತ ಲಾಭದಿಂದ ಕೊಬ್ಬುತ್ತಾರೆ. ನಿಜವಾದ ತುಪ್ಪದಲ್ಲಿರುವ "ಅ" ಜೀವಸತ್ವಕ್ಕೆ ಸಮಾನವಾದುದೇನಾದರೂ ಇಲ್ಲದಿದ್ದಮೇಲೆ ವನಸ್ಪತಿ ತುಪ್ಪವೊಂದು ತುಪ್ಪವೇ ಅಲ್ಲ. ಬಹಳವಾದರೆ ಅದನ್ನು ತುಪ್ಪದಂತೆ ಗಟ್ಟಿಯಾಗಿ ಮಾಡಲು ಅವಶ್ಯವಿದ್ದಷ್ಟು ಜಲಜನಕ ವಾಯುಪ್ರಯೋಗ (Hydrogenate) ಮಾಡಿದ ಜೀರ್ಣಬಾರದಂಥ ವನಸ್ಪತಿ ಎಣ್ಣೆಯೆಂದು ಕರೆಯಬಹುದು ಶುದ್ಧವನಸ್ಪತಿ ಎಣ್ಣೆಯನ್ನು ತುಪ್ಪದಲ್ಲಿ ಮಿಶ್ರಮಾಡಲು ಅದನು ಕೂಲ ಮಾಡುವ ಹೊರತು ಜಲಜನಕ ಪ್ರಯೋಗದಿಂದ ಅದರ ಗುಣವೇನೂ ಸುಧಾರಿಸುವದಿಲ್ಲ. ವನಸ್ಪತಿ ತೈಲಕ್ಕೆ ತುಪ್ಪಕ್ಕೆ ಇರುವ ಭೇದವೆಂದರೆ ಎರಡನೆಯದು ಪ್ರಾಣಿಜನ್ಯವೆಂಬುದು. "ಅ" ಜೀವಸತ್ವವೆಂಬುದು ಹೆಚ್ಚುಕಡಿಮೆ ಪ್ರಾಣಿಜನ್ಯವೇ ಆಗಿರುವದು. ಅದರಿಂದ "ಜೀವಸತ್ವ ಪೂರ್ಣ" ವಾಗಿದೆಯೆಂದು ಹೇಳಲ್ಪಡುವ ವನಸ್ಪತಿ ತುಪ್ಪದಲ್ಲಿ ಜೀವಸತ್ವವಿರಬೇಕಾದರೆ ಅದನ್ನು ಪ್ರಾಣಿಜನ್ಯ ಪದಾರ್ಥಗಳಿಂದಲೆ—ಅಂದರೆ ಶಾರ್ಕಲಿವರ ಆಯಿಲ ಅಥವಾ ಕಾಡಲಿವರ ಆಯಿಲ ದಂಥ ಮೀನೆಣ್ಣೆಗಳಿಂದಲೆ— ಒದಗಿಸಬೇಕಾಗುತ್ತದೆ. ನಮ್ಮಂಥ ಸಸ್ಯಾಹಾರಿ ದೇಶದಲ್ಲಿ ಗಿರಾಕಿಗಳು ಹಾಲಿನಿಂದ ಹುಟ್ಟಿದ್ದಲ್ಲದೆ ಬೇರಾವದೇ ಪ್ರಾಣಿಜನ್ಯ ಪದಾರ್ಥಗಳನ್ನು ತಿನ್ನಲು ಹೇಸುತ್ತಿರುವಾಗ, ವನಸ್ಪತಿ ತುಪ್ಪವನ್ನು ಅದರಲ್ಲಿರುವ ಪ್ರಾಣಿಜನ್ಯ ಮಿಶ್ರಣವನ್ನು ಗುಟ್ಟುಮಾಡಿ ಮಾರುತ್ತ ಹೋಗುವದೆಂದರೆ ಜನತೆಯನ್ನು ಮೋಸಗೊಳಿಸಿದಂತೆಯೇ ಸೈ.

ಇದಲ್ಲದೆ, ಹಾಟಸ್ಪ್ರಿಂಗ್ಸದಲ್ಲಿಸೇರಿದ ಕಾಷ್ಮಿಕತ ಪರಿಷತ್ತಿನಲ್ಲಿ ಕೃತಕ ಜೀವಸತ್ವಗಳನ್ನು ನಿರಂತರವಾಗಿ ಉಪಯೋಗಿಸುವದು ಹಾನಿಕರವೆಂದು ತೋರಿಸಲ್ಪಟ್ಟಿದೆ. ಆದ್ದರಿಂದ ವನಸ್ಪತಿಯಲ್ಲಿ ಕಾಡ್ ಅಥವಾ ಶಾರ್ಕ ಲಿವರ ಎಣ್ಣೆಯಿಂದ ತೆಗೆದ ಕೃತಕ ಜೀವಸತ್ವವನ್ನು ಸೇರಿಸಿದ್ದರೆ ಅದೂ ಹಾನಿಕರವೇ ಸೈ ಇದಲ್ಲದೆ ಜಲಜನಕ ಪ್ರಯೋಗಕ್ಕೊಂದು ವಾಹನ ಬೇಕಾಗುತ್ತದೆ. ಇದಕ್ಕಾಗಿ ಸಾಮಾನ್ಯವಾಗಿ ಉಪಯೋಗಿಸುವ ವಾಹನ ನಿಕ್ಕೆಲ ಲೋಹ. ಜಲಜನಕಯುಕ್ತ ವನಸ್ಪತಿ ತೈಲಗಳಲ್ಲಿ ನಿಕ್ಕಲಿನ ಅಂಶಗಳು ಕಾಣಿಸಿಕ್ಕಿವೆ. ಈಗ ನಿಕ್ಕೆಲ್ ಲೋಹ ಮನುಷ್ಯ ದೇಹಕ್ಕೆ ಅವಶ್ಯವಾದ ಧಾತುವಲ್ಲ. ಅದರಿಂದ ಅತಿ ಸೂಕ್ಷ್ಮ ಪ್ರಮಾಣದಲ್ಲಾದರೂ ಅದನ್ನು ಬಳಸುತ್ತ ಹೋಗುವದರಿಂದ ಮೊನೆಗೆ ಅದು ವಿಷವಾಗಿ ಪರಿಣಮಿಸಬಹುದು. ಕೂನೂರಿನಲ್ಲಿರುವ ಪೌಷ್ಮಿಕತಾ ಸಂಶೋಧನ ಸಂಸ್ಥೆಯ ನಿರ್ದೇಶಕರಾದ ಡಾ.ವಿ.ಎನ್. ಪಟವರ್ಧನರು ಕಳೆದ ತಿಂಗಳು ಹಿಂದೀ ವಿಜ್ಞಾನ ಕಾಂಗ್ರೆಸ್ ಸಭೆಯಲ್ಲಿ, ವನಸ್ಪತಿಯ ಉಪಯೋಗದಿಂದ ಪ್ರಾಣಿಗಳ ಪ್ರಜೋತ್ಪಾದನ ಶಕ್ತಿಯ ಮೇಲೆ ದುಷ್ಪರಿಣಾಮವಾಗುವದೆಂದು ತಮ್ಮ ಸಂಶೋಧನಗಳಿಂದ ಕಂಡುಬಂದಿರುವದಾಗಿ ತಿಳಿಸಿದ್ದಾರೆ.

ದೇಶದ ಬೇರೆ ಬೇರೆ ಭಾಗಗಳಲ್ಲಿ ಜನರಿಗೆ ಬೇರೆ ಬೇರೆ ಎಣ್ಣೆಗಳು ರೂಢಿಬಿದ್ದಿವೆ—ಸಾಸಿವೆ ಎಣ್ಣೆ, ಎಳ್ಳೆಣ್ಣೆ, ಕೊಬ್ಬರಿ ಎಣ್ಣೆ ಇತ್ಯಾದಿ ಆಯುರ್ವೇದ ಸಂಪ್ರದಾಯಕ್ಕನುಸಾರವಾಗಿ ಎಲ್ಲ ಎಣ್ಣೆಗಳೂ ಮಾನವ ಶರೀರಕ್ಕೆ ಸಮಾನ ಹಿತವನ್ನು ಮಾಡುವದಿಲ್ಲ ಒಂ

ದೊಂದು ಎಣ್ಣೆಯ ಗುಣ ಒಂದೊಂದು ತೆರ. ಉದಾಹರಣೆಗಾಗಿ ಬದಾಮಿ ಎಣ್ಣೆ ಬುದ್ಧಿಗೂ ದೇಹಕ್ಕೂ ಪುಷ್ಟಿಕರವೆಂದು ಹೇಳಲಾಗಿದೆ. ಆದರೆ ಸೇಂಗಾ ಎಣ್ಣೆಯಲ್ಲಿ ಕೊಬ್ಬಿನ ಅಂಶವಿದ್ದರೂ ಅದು ಬುದ್ಧಿಗೆ ಹಾನಿಕರವೆಂದು ಭಾವಿಸಲ್ಪಟ್ಟಿದೆ. ಈ ದೃಷ್ಟಿಯಲ್ಲಿ ಸೇಂಗಾ ಎಣ್ಣೆಗಿಂತ ಬಿಳಿ ಸಾಸಿವೆ ಎಣ್ಣೆ, ಎಳ್ಳೆಣ್ಣೆ, ಕೊಬ್ಬರಿ ಎಣ್ಣೆಗಳು ಎಷ್ಟೋ ಬೇಕು. ವನಸ್ಪತಿ ತುಪ್ಪದ ಕಾರಖಾನೆಗಳು ಹೆಚ್ಚಾಗಿ ಉಪಯೋಗಿಸುವದು. ಸೇಂಗಾ ಮತ್ತು ಹತ್ತಿಕಾಳಿನ ಎಣ್ಣೆಗಳನ್ನು ಇವೆರಡೂ ನಿಕೃಷ್ಟ ಎಣ್ಣೆಗಳು ಅದುದರಿಂದ ವನಸ್ಪತಿ ತುಪ್ಪವನ್ನು ಕೊಬ್ಬರಿಗಾಗಿ ಸಾದಾ ಎಣ್ಣೆಯ ಸ್ಥಾನದಲ್ಲಿ ಉಪಯೋಗ ಮಾಡುವೆವೆಂದರೆ ಕೂಡ ಉತ್ತಮ ಎಣ್ಣೆಗಳಲ್ಲಿರುವ ಗುಣವೂ ಇದರಲ್ಲಿಲ್ಲ. ಗಿರಾಕಿಗಳಿಗೆ ಶುದ್ಧ ಆಹಾರ ವಸ್ತುಗಳನ್ನೇ ಒದಗಿಸುವಗೋಸುಗ ಒಂದು ಕಾಯದೆ ಮಾಡಿ, ಅದರಲ್ಲಿ ವನಸ್ಪತಿ ತುಪ್ಪ ಮಾಡುವವರು ತಮ್ಮ ಡಬ್ಬಿಗಳ ಮೇಲಿನ ಪಟ್ಟಿಯಲ್ಲಿ ಅದರೊಳಗಿರುವ ವಸ್ತುವಿನಲ್ಲಿರುವ ವಿವಿಧ ಪದಾರ್ಥಾಂಶಗಳನ್ನು-ಜೀವಸತ್ವದ ಮೂಲಸಹಿತ-ಸ್ಪಷ್ಟವಾಗಿ ಉಲ್ಲೇಖಿಸಬೇಕೆಂದು ವಿಧಿಸುವದು ಅವಶ್ಯ.

ಸ್ಥಿತಿಗತಿ ಹೀಗಿರುವಾಗ ಸಾಬೂನು ಮಾಡುವದಕ್ಕೂ ಇತರ ಔದ್ಯೋಗಿಕ ಕಾರ್ಯಗಳಿಗೂ ಅನುಕೂಲ ಸ್ವರೂಪದಲ್ಲಿ ಎಣ್ಣೆಗಳನ್ನು ಒದಗಿಸುವದಕ್ಕಲ್ಲದೆ ಬೇರಾವದೇ ಕಾರಣಕ್ಕಾಗಿ ವನಸ್ಪತಿ ತುಪ್ಪವನ್ನು ಮಾಡಬೇಕಾದ ಅನಿವಾರ್ಯತೆ ಯೇನಿದೆಯೋ ತಿಳಿಯುವದಿಲ್ಲ. ಸದ್ಯಕ್ಕಂತೂ ಗಾಣದಿಂದ ತೆಗೆದ ವನಸ್ಪತಿ ಎಣ್ಣೆಗಳು ವನಸ್ಪತಿ ತುಪ್ಪಕ್ಕಿಂತ ಹೆಚ್ಚು ಜೀರ್ಣಕರವೂ ಶುದ್ಧವೂ ಇರುತ್ತವೆ. ನಿಜವಾದ ತುಪ್ಪಕ್ಕಂತೂ ಇದನ್ನು ಯಾವ ರೀತಿಯೂ ಹೋಲಿಸಲಾಗಲ್ಲ. ಆದರೂನಮ್ಮ ಜನತೆಯ ಒಂದು ಅಲ್ಪಾಂಶದ, ಮುಖ್ಯವಾಗಿ ನಗರವಾಸಿಗಳ ಚಪಲದಿಂದ ಲಾಭ ಪಡೆಯಲು ಬಂಡವಾಳಗಾರರು ವಿದೇಶಗಳಿಂದ ತರಿಸಿದ ಯಂತ್ರ ಸಾಮಗ್ರಿಗಳ ಮೇಲೆ ನಾಲ್ಕೈದುಲಕ್ಷ ರೂಪಾಯಿಗಳನ್ನು ತೊಡಗಿಸಲು ಸಿದ್ಧರಾಗಿದ್ದಾರೆ.

ಕೇಂದ್ರಸರಕಾರದವರು ಸುಮಾರು ೨೬ ಹೊಸ ಕಾರಖಾನೆಗಳನ್ನು ಮುಖ್ಯವಾಗಿ ಮದ್ರಾಸ ಮತ್ತು ಮುಂಬಯಿ ಪ್ರಾಂತಗಳಲ್ಲಿ ಸ್ಥಾಪಿಸಲು ಅನುಮತಿ ಕೊಟ್ಟಿದ್ದಾರೆಂದು ತಿಳಿಯಬಂದಿದೆ. ಇದು ಜನತೆಯ ಹಿತವನ್ನು ದುರ್ಲಕ್ಷಿಸಿ ಶೋಷಕರಿಗೆ ಕೇಂದ್ರ ಸರಕಾರದವರು ತೋರಿಸುತ್ತಿರುವ ಸೌಹಾರ್ದವೋ ಅಥವಾ ಔದ್ಯೋಗೀಕರಣದ ಹುಚ್ಚು ಹುಮ್ಮಸದಲ್ಲಿ ಅವರು ಹಾರುತ್ತಿರುವರೋ ಇಲ್ಲವೆ, ಇದು ಬ್ರಿಟಿಶರ "ಹಿಂದೂ ಸ್ಥಾನವನ್ನು ಸೂರೆಮಾಡಿರಿ" ಧೋರಣೆಯ ಮುನ್ನಡೆಯೊ? ಏಕೆಂದರೆ ೨೬ ಕಾರಖಾನೆಗಳ ಸ್ಥಾಪನೆಯೆಂದರೆ ಗ್ರೇಟ್ ಬ್ರಿಟನ್ನಿಗೆ ಒಂದು ಕೋಟಿ ಮಿಕ್ಕಿದಷ್ಟು ವ್ಯಾಪಾರ ಸಿಕ್ಕಂತಾಗುತ್ತದೆ.

ಜನಹಿತವನ್ನು ಇಚ್ಛಿಸುವ ಸರಕಾರ ಜನತೆಯ ಆರೋಗ್ಯಕ್ಕೂ ಭಾವನೆಗಳಿಗೂ ವ್ಯತಿರಿಕ್ತವಾದ ಈ ಬಗೆಯ ಶೋಷಣೆಯನ್ನು ಪ್ರತಿಬಂಧಿಸಲು ಹಿಂದೆ ಮುಂದೆ ನೋಡಬಾರದೆಂದು ನಾವು ಸೂಚಿಸಬಯಸುತ್ತೇವೆ. ಔದ್ಯೋಗೀಕರಣದ ಹೆಸರಲ್ಲಿ ದೇಶವನ್ನು ಹಾಳುಗೆಡುಹಬಾರದು. ಅದರಲ್ಲಿಯೂ ಈಗಾಗಲೆ ಪುಷ್ಟಿರಾಹಿತ್ಯದಿಂದ ಹಾಳಾದ ಜನರ ಸ್ವಾಸ್ಥ್ಯವನ್ನು ಇನ್ನೆಷ್ಟು ಕೆಡಿಸಬಾರದು. ವನಸ್ಪತಿ ತುಪ್ಪದ ಉತ್ಪಾದಕರು ದೇಶದ್ರೋಹಿಗಳೆಂದು ಜನಮತವನ್ನು ರೂಪಿಸತಕ್ಕದ್ದು. ಜನಮತದ ಪ್ರತಿನಿಧಿಯಾಗಿ ಸರಕಾರ ಇರುವದಾದರೆ ಜನತೆಯನ್ನು ಈ ಬಗೆಯಾಗಿ ವಂಚಿಸುವದನ್ನು ಅದು ತಡೆಯಬೇಕು. (ಕರ್ಮವೀರ)

ಆದವಾನಿ ಬೋರ್ಡು ಶಾಲೋಪಾಧ್ಯಾಯರ ಸಂಘವು ಸಂಘ ಬಲದ ಶಕ್ತಿಯನ್ನರಿಯದೆ ದುರ್ಬಲ ಮೂಕನಂತಿದೆ. ಉಪಾಧ್ಯಾಯರು ಎಚ್ಚರಗೊಳ್ಳದಿದ್ದಲ್ಲಿ ಕಾರ್ಯಸಾಧನೆ ಹೇಗಾಗಬೇಕು. ಕಾರ್ಯದರ್ಶಿಗಳೂ, ಅಧ್ಯಕ್ಷರೂ ಜಾಗೃತರಾಗಿ ಆಯಾ ಕೇಂದ್ರಗಳಲ್ಲಿ ಸಭೆಗಳನ್ನೇರ್ಪಡಿಸಿಕೊಂಡು ಕಾರ್ಯಮಗ್ನರಾಗಬೇಕು. (ಕೆ. ರಾಮಾಚಾರ್ಯ)

Guarranteed Pure Pyra Gingelly oil

Best for Pickles, Cooking & Cooling

DISTRIBUTORS:—

1 M/S V. M. GIRI & SONS.

(Pro:- M, S Acharya Car Street, Bellary

2 M/S. M. HUSANJEE RAO. M VENKOJI RAO

General Merchants, Car Street Bellary.

ಶುದ್ಧ! ಗ್ಯಾರಂಟಿಯಾದ್ದು !! ಸತ್ಪಕಾರ!!!

—ಪೈರ ಎಳ್ಳೆಣ್ಣೆ—

ಕಣ್ಣಿಗೆ ಬಹಳ ತಂಪಾದ್ದು. ಅಡಿಗೆಯ ಎಲ್ಲಾ ಪದಾರ್ಥಗಳಿಗೆ ಒಳಿಸಲು ರೈಷ್ಮವಾದ ಎಣ್ಣೆಯಿದು. ಉಪ್ಪಿನಕಾಯಿಗೆ ಈ ಎಣ್ಣೆಯನ್ನು ಪಯೋಗಿಸುವದರಿಂದ ಬಹಳಕಾಲ ಕೆಡದಂತಿರುವುದು

ಹಂಚಲಧಿಕಾರ ಉಳ್ಳವರು. 1) ವಿ ಎಂ. ಗಿರಿ ಆಂಡ್ ಸನ್ಸ್-ತೇರು ಬೀದಿ, ಬಳ್ಳಾರಿ. (ಎಂ. ಎಸ್. ಆಚಾರ್ಯ)
2) ಎಂ. ಹುಸೇಂಜಿರಾವ್, ಎಂ. ವೆಂಕೋಬರಾವ್. ತೇರುಬೀದಿ, ಬಳ್ಳಾರಿ.

ಸು ಭಾ ಸ್
ರಾ ಷ್ಟ್ರ ಗೀ ತೆ.

ಸಿದ್ಧವಾಯಿತು— ಕ್ರಯ ೦—೮—೦

ಸುಂದರ ಮುದ್ರಣ— ಇಲ್ಲಿಯವರೆವಿಗೆ ಪ್ರಭಾತ ಫೇರಿ, ರಾಷ್ಟ್ರೀಯ ಸಮಾವೇಶಗಳಲ್ಲಿ ಹಾಡಲ್ಪಟ್ಟ ಎಲ್ಲಾ ಮುಖ್ಯ ದೇಶಭಕ್ತ ಕವಿಗಳ ಕನ್ನಡ ಮತ್ತು ಹಿಂದೀ ಭಾಷೆಯಲ್ಲಿನ ರಾಷ್ಟ್ರಗೀತೆಗಳ ಸಮಗ್ರ ಸಂಗ್ರಹ. ಕರ್ನಾಟಕದಲ್ಲಿ ರಾಷ್ಟ್ರ ಗೀತೆಗಳ ಇಷ್ಟು ದೊಡ್ಡ ಸಂಗ್ರಹವು ಇದುವರೆಗೆ ಪ್ರಕಟವಾಗಿಲ್ಲ. ಸ್ವಲ್ಪೇ ಪ್ರತಿಗಳು ಪ್ರಕಟವಾಗಿವೆ. ಹೆಚ್ಚು ಕೊಳ್ಳುವವರಿಗೆ ಕಮಿಷನ್ ಕೊಡಲಾಗುತ್ತದೆ.

'ನವಭಾರತ' ಕಾರ್ಯಾಲಯ ಬಳ್ಳಾರಿ.

ಮಾರ್ಗೋಸೋಲ್ ಮಲಾಮು

ಹುರುಳು, ಕಜ್ಜಿ, ಇಸಬು, ತಪ್ಪಡ' ಹುಣ್ಣು, ಘಾಯ, ತಿಂಡಿ ಕೈಕಾಲು ಒಡೆಯುವದು ಇವೆಲ್ಲ ಚರ್ಮವಿಕಾರ ದೋಷಗಳಿಗೆ ಶ್ರೇಷ್ಠಗುಣಕಾರಿಯಾದ ಔಷಧವಿದು. ಫೇರೋಝೊನ್ ಫಾರ್ಮಾ ಸುಟಿಕಲ್‌ವರ್ಕ್ಸ್ ಬೊಂಬಾಯಿಯವರು ಭಾರತ ವೈದ್ಯಶಾಸ್ತ್ರದಲ್ಲಿ ಪ್ರಸಿದ್ಧವಾದ ಬೇವು, ಹುಲಗಿಲು, ಶ್ರೀಗಂಧದಕೈಲ ಗಂಧಕವುಡಿ ಮತ್ತಿತರ ಚರ್ಮ ಶೋಧಕ ದ್ರವ್ಯಗಳಿಂದ ಶಾಸ್ತ್ರೀಯವಾಗಿ ತಯಾರಿಸಿರುವರು. ದೋಷಯುಕ್ತ ಭಾಗವನ್ನು ಬಿಸಿನೀರಿನಿಂದ ತೊಳೆದನಂತರ ಮಲಾಮಿನಿಂದ ತಿಕ್ಕಬೇಕು.

ಕ್ರಯ 1—4—0

ಮದ್ರಾಸ್ ಪ್ರಾಂತ್ಯದಲ್ಲಿ ಮಾರಲು ಅಧಿಕಾರವನ್ನೊಂದಿದವರು

ಡಾಕ್ಟರ್ ವೆಂಕಟರಮಣ,

ಪ್ರೇಮ ಮೆಡಿಕಲ್ ಹಾಲ್, ಬಳ್ಳಾರಿ

NAVA BHARAT, BELLARY. Reg. No. M. 4746

ನವಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು.	**Subscription Rates**
ವರ್ಷಕ್ಕೆ 5-0-0	One Year 5—0—0
6 ತಿಂಗಳಿಗೆ 3-0-0	Six months 3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

SRI.....

.....

.....

Printed at Krishna Press Bellary QH No. B 17 FOR (Q H. No. B-5)

Edited & Published by T B KESHAVARAO

ಜೈಹಿಂದ್ Reg. No. M. 4746

ನವಚೇತನ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಸಂಚಿಕೆ ೭ ಬಳ್ಳಾರಿ ಫಿಬ್ರವರಿ ೧೭ ಸೋಮವಾರ ೧೯೪೭ ಸಂಪಾದಕ ಮತ್ತು ಪ್ರಕಾಶಕ ಟಿ. ಬಿ ಕೇಶವರಾವ್.

4thWeek—ನಾಲ್ಕನೆಯ ವಾರ

ರೇಣುಕ ಫಿಲಂಸ್‌ರವರ ತೆಲುಗು ಚಿತ್ರ.

ಅತ್ಯಂತ ಜನಪ್ರಿಯ

ತ್ಯಾಗಯ್ಯ

ಪ್ರಭಾತ ಚಲಚಿತ್ರ ಮಂದಿರ, ಬಳ್ಳಾರಿ.

Prabhat Talkies, Bellary.

ತೆಲಗುಭಾಷೆ, ಸುಪ್ರಸಿದ್ಧ ಕರ್ನಾಟಕ ಸಂಗೀತ, ಲೆಕ್ಕವಿಲ್ಲದಷ್ಟು ಸುಮಧುರ ಕೀರ್ತನೆಗಳು, **ನಾಗಯ್ಯನವರ** ಮನ ರಂಜಕ ಪಾತ್ರ, ಕಣ್ಣಿಗೂ, ಕಿವಿಗೂ ಹಬ್ಬ.

ಈ ಸುಸಂದರ್ಭವನ್ನು ಕಳೆದುಕೊಳ್ಳಬೇಡಿ.

ಮಾರ್ಗೋಸೋಲ್ ಮುಲಾಮು

ಹುರುಕು, ಕಜ್ಜಿ, ಇಸಬು, ತದ್ದು' ಹುಣ್ಣು, ಘಾಯ, ತಿಂಡಿ ಕೈಕಾಲು ಒಡೆಯುವದು ಇನ್ನೆಲ್ಲ ಚರ್ಮವಿಕಾರ ದೋಷಗಳಿಗೆ ಶ್ರೇಷ್ಠಗುಣಕಾರಿಯಾದ ಔಷಧವಿದು. ಫೇರೋಝೋನ್ ಫಾರ್ಮಾಸುಟಿಕಲ್‌ವರ್ಕಸ್ ಬೊಂಬಾಯಿಯವರು ಭಾರತ ವೈದ್ಯಶಾಸ್ತ್ರದಲ್ಲಿ ಪ್ರಸಿದ್ಧವಾದ ಜೀವು, ಹುಲಗಿಲು, ಶೀಗಂಧದತೈಲ ಗಂಧಕಪುಡಿ ಮತ್ತಿತರ ಚರ್ಮ ದೋಷಕ ದ್ರವ್ಯಗಳಿಂದ ಶಾಸ್ತ್ರೀಯವಾಗಿ ತಯಾರಿಸಿರುವರು. ದೋಷಯುಕ್ತಭಾಗವನ್ನು ಬಿಸಿನೀರಿನಿಂದ ತೊಳೆದನಂತರ ಮುಲಾಮಿನಿಂದ ತಿಕ್ಕಬೇಕು.

ಕ್ರಯ 1—4—0

ಮದ್ರಾಸ್ ಪ್ರಾಂತ್ಯದಲ್ಲಿ ಸೂರಲು ಅಧಿಕಾರವಹೊಂದಿದವರು

ಡಾಕ್ಟರ್ ವೆಂಕಟರಮಣ,

ಪ್ರೇಮ ಮೆಡಿಕಲ್ ಹಾಲ್, **ಬಳ್ಳಾರಿ**

ಪ್ರಕಾಶಂ ಮಂತ್ರಿವರ್ಗ

ವಿಶ್ವಾಸರಾಹಿತ್ಯ ನಿರ್ಣಯ

ಕಾಂಗ್ರೆಸ್ ಪಕ್ಷದ ೧೫೬ ಸದಸ್ಯರಲ್ಲಿ ೧೧೦ ಸದಸ್ಯರು ಮದ್ರಾಸಿನ ಪ್ರಕಾಶಂ ಮಂತ್ರಿವರ್ಗದ ಮೇಲೆ ವಿಶ್ವಾಸರಾಹಿತ್ಯ ನಿರ್ಮಾನವನ್ನು ಸೂಚಿಸಿ ಅದರ ಚರ್ಚೆಗಾಗಿ ದಿನವನ್ನು ನಿರ್ಣಯಿಸಲು ಕೋರಿರುತ್ತಾರೆ ಶ್ರೀ ಪ್ರಕಾಶರವರು ಡೆಲ್ಲಿಗೆ ಹೋಗಲಿರುವ ಕಾರಣ ಬಂದ ಮೇಲೆ ದಿನವನ್ನು ನಿಶ್ಚಯಿಸಲಿರು

ವರು. ಈ ೀರ್ಮಾನದ ಪ್ರಮುಖರಾದ ಶ್ರೀ ರಾಜನ್ ಕಾಮರಾಜನಾಡರ್, ಗೋಪಾಲರೆಡ್ಡಿಯವರು ಕಾಂಗ್ರೆಸ್ ಅಧ್ಯಕ್ಷರಿಗೂ, ಪಾರ್ಲಿಮೆಂಟರಿಸಮಿತಿ ಅಧ್ಯಕ್ಷರಾದ ಸರ್ದಾರವಲ್ಲಭಭಾಯಿಯವರಿಗೂ ಈವಿಷಯದ ತಂತಿ ಕೊಟ್ಟಿರುತ್ತಾರೆ.

ಬಳ್ಳಾರಿ

ವೀರಶೈವ ಕಾಲೇಜಿನ ದ್ವಿತೀಯ ವಾರ್ಷಿಕೋತ್ಸವವು–ಆ ನೆಯ ದಿನಾಂಕ ಬಿಜಾಪುರ ಕಾಲೇಜಿನ ಶ್ರೀ ರೂಬಿನರ ಅಧ್ಯಕ್ಷತೆಯಲ್ಲಿ ನೆರವೇರಿತು. ಪ್ರಿನ್ಸಿಪಾಲ ಭಾಯಪ್ಪನವರು ತಮ್ಮ ವರದಿಯಲ್ಲಿ ಕಳಾಶಾಲೆಯ ಪ್ರಗತಿಯನ್ನು ವಿವರಿಸಿ ವಿಶ್ವವಿದ್ಯಾಲಯದ ಶಿಷ್ಟಮಂಡಲದ ಭೇಟಿಯನ್ನು ಸೂಚಿಸಿ ಅವರು ಶಾಲೆಯ ಎಲ್ಲಾ ಶಿಕ್ಷಣಭಾಗದ ಪ್ರಗತಿಯಬಗ್ಗೆ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರೆಂದು ಹೇಳಿದರು. ಶ್ರೀಗಳಾದ ಪಂಪನಗೌಡ, ಬಾಪಿತ್ ಸಾಹೇಬರು ಕಾಲೇಜಿಗೆ ಯಶವನ್ನು ಕೋರಿದರು. ವಿಶ್ವವಿದ್ಯಾಲಯಗಳ ಇತಿಹಾಸವನ್ನು ವಿವರಿಸಿ ಶಿಕ್ಷಣಕ್ರಮವು ದೋಷಪೂರ್ಣವಾಗಿದೆಯೆಂದರು. ಶಿಕ್ಷಣವು ಮಾತೃಭಾಷೆಯಲ್ಲಿದ್ದು ಇಂಗ್ಲಿಷ್ ದ್ವಿತೀಯ ಭಾಷೆಯಾಗಬೇಕೆಂದಭಿಪ್ರಾಯಪಟ್ಟರು ಕೊನೆಯಲ್ಲಿ ಅವರು ಉಪದೇಶ ಕೊಟ್ಟದ್ದೆಂದರೆ If wealth is lost nothing is lost, if health is lost something is lost, and if character is lost everything is lost ಅರ್ಥಾತ್ ಧನಹೋದರೂ, ಏನೂಕಳೆದುಕೊಂಡಂತಲ್ಲ; ಆರೋಗ್ಯದ ನಾಶವಾದರೆ, ಸ್ವಲ್ಪನಾಶವಾದಂತೆ ನಡತೆಯು ಹೋದರೆ ಸರ್ವಸ್ವವೂ ಹೋದಂತೆಎಂದು ಉಪದೇಶಿಸಿದರು. ಎಲ್ಲರಿಗೂ ವಂದನಾರ್ಪಣೆ ಪಂದ್ಯದಾಟಗಳಲ್ಲಿ ಗೆದ್ದವರಿಗೆ ಬಹುಮಾನ ವಿತರಣವಾದ ನಂತರ ಕನ್ನಡದಲ್ಲಿ ಗಗ್ಗಯ್ಯನ ಗಡಿಬಿಡಿ ಮತ್ತು ತೆಲುಗಿನಲ್ಲಿ ಹರಿಜನಸೇವೆ ಎಂಬ ನಾಟಕಗಳು ವಿದ್ಯಾರ್ಥಿಗಳಿಂದ ಪ್ರದರ್ಶಿತವಾದವು.

ಮಹಾಶಿವರಾತ್ರಿ.

ಕೆಲಿಕ್ಟರ್ ಶ್ರೀ ಅನಂತರಾಮನ್‌ರವರು ಹೀಗೆ ತಿಳಿಸುತ್ತಾರೆ:— 19ನೆಯ ತಾ. ಮಹಾಶಿವರಾತ್ರಿಗಾಗಿ ಕೋಟಪ್ಪಕೊಂಡ ಎಂಬ ಸ್ಥಳಕ್ಕೆ ಹೋಗಲಿರುವ ಯಾತ್ರಾರ್ಥಿಗಳು ತಮ್ಮ ಜೊತೆಯಲ್ಲಿ ಆಹಾರ ಪದಾರ್ಥಗಳಾದ ಅಕ್ಕಿ, ಜೋಳ, ಗೋಧಿ ತೆಗೆದು ಕೊಂಡು ಹೋಗಬಹುದು. ತಾವು ವಾಸಿಸುವ ಗ್ರಾಮೋದ್ಯೋಗಿಗಳ ಚೀಟಿ ಅವರೊಡನಿದ್ದರೆಸಾಕು.

ಕಂಪ್ಲಿ:—ಶ್ರೀ ಆರ್. ವೀರನಗೌಡರಧ್ಯಕ್ಷತೆಯಲ್ಲಿ ಶ್ರೀ ವಿಜಯೇಂದ್ರರು ಭಾಷಾಸಾಹಿತ್ಯದ ವಿಷಯದಲ್ಲಿ ಉಪನ್ಯಶಿಸಿದರು ಜಯತೀರ್ಥರು ಕರುಳ ಕೊರಗಿನ ಕೆಲಭಾಗಗಳನ್ನು ಅಂದು ತೋರಿಸಿದರು.

Woolen Coatings, Silk Sarees, Benares and other latest designs Handloom and Mill made Clothes Etc., Colours Guaranteed, Prices very reasonable Trial Solicited.

G. GOPAL SING & SON.,
CLOTH MERCHANT
No. 15 Old Market BELLARY.
ಜಿ. ಗೋಪಾಲ ಸಿಂಗ್ ಅಂಡ್ ಸನ್,
ಜವಳಿ ವ್ಯಾಪಾರಿ, ನಂ. 15
ಹಳೇ ಮಾರ್ಕೆಟ್, ಬಳ್ಳಾರಿ.

ಉಲನ್ ಕೋಟ್ ಬಟ್ಟೆ, ಬನಾರಸ್ ಜರಿ, ಶಿಲ್ಕ್-ಟಿಶ್ಯೂ ಸೀರೆ ಜಾಕೆಟ್ ಲೇಸ್ ಬಾರ್ಡರ್ ಮತ್ತು ಇತರ ಅನೇಕ ವಿವಿಧ ಅತ್ಯಂತ ಆಧುನಿಕ ಉಡುಪಿನ ಬೇಡಿಕೆಯನ್ನು ನಾವು ಪೂರೈಸಲಿದ್ದೇವೆ. ಕೈ ಮಗ್ಗದ ಖಾಲ್ ಬಟ್ಟೆಗಳು ವಿಧಾಯಕ ಬೆಲೆಗೆ ದೊರೆಯುತ್ತವೆ. ಬಣ್ಣ ಗ್ಯಾರಂಟಿ, ಬೆಲೆ ಸರಿಯಾದ್ದು. ಪರೀಕ್ಷಿಸಿ ಮನಗಾಣಿರಿ.

South Indian Federation of Agricultural Workers' Unions,

The cultivator should be released from all forms of feudal service and servitude, and protected against the sharp practices of the moneylender, trader, and the renter. He should get security, fair wage, and decent living conditions. While he should hope for the best from his employer and the state, he should equally be prepared for the worst depending solely on the strength of his organisation to protect his elementary right for a fair wage, for honest labour. The village workers should be the live wire galvanising the cultivators' unions by his close intimacy, and forging irresistible sanctions by instilling in them undivided allegiance to their unions. Our plans and programmes should be guided by the single objective of achieving union solidarity.

ತುಂಗಭದ್ರಾ ಯೋಜನೆ

ಮದ್ರಾಸಿನಲ್ಲಿ ಸಭೆ.

5-2-47 ನೆಯ ತಾ. ದಕ್ಷಿಣ ಹಿಂದೂಸ್ತಾನದ ವ್ಯವಸಾಯ ಕೆಲಸಗಾರರ ಸಾಮೂಹಿಕ ಸಂಘದ ಅಧಿಪತ್ಯದಲ್ಲಿ ಒಂದು ಸಭೆಯು ಏರ್ಪಟ್ಟಿದ್ದಿತು. ಹೊಸಪೇಟೆಯ ಶ್ರೀ ಅನಂತಾಚಾರ್ಯರು ಅಧ್ಯಕ್ಷತೆ ವಹಿಸಿದರು.

ಅಲ್ಲಿ ಚರ್ಚೆಗೆ ಬಂದ ಅಂಶಗಳು ತುಂಗಭದ್ರಾ ಕೆರೆಯ ನೀರಿನಿಂದ ಮುಳುಗಿಹೋಗುವ ಭೂಮಿಗಳವರಿಗೆ ಎಂಥಾ ಮತ್ತು ಎಷ್ಟುಪರಿಹಾರ ಕೊಡಬೇಕು. ಭೂಮಿಗಳನ್ನು ಕೊಳ್ಳದಂತೆ ಹೇಗೆ ನಿರ್ಬಂಧಿಸಬೇಕು. ಶಾಸನಸಭೆಯಲ್ಲಿ ಈ ಸಂಬಂಧವಾಗಿ ಬರುವ ಮಸೂದೆಯಲ್ಲಿ ಯಾವ ಸೂಚನೆಗಳನ್ನು ಕಳುಹಿಸಬಹುದು. 1941 ರಲ್ಲಿ 1316, 1943 ರಲ್ಲಿ 1262, 1945 ರಲ್ಲಿ 2750 ಭೂಮಿಗಳು ತುಂಗಭದ್ರಾ ಕಾಲುವೆ ಹರಿಯುವ ಕ್ಷೇತ್ರದಲ್ಲಿ ಮಾರಲಾದವು. 1942-43 ರ ಮಧ್ಯದಲ್ಲಿ ಭೂಮಿಗಳ ಬೆಲೆಯಲ್ಲಿ 10 ಲಕ್ಷ ರೂ. ಹೆಚ್ಚಿನ ವ್ಯವಹಾರವಾಯಿತು. 1944 ರಲ್ಲಿ 86 ಲಕ್ಷ 77 ಸಹಸ್ರ ರೂ. ಗಳಿಗೆ ಭೂಮಿಯು ಮಾರಲ್ಪಟ್ಟು 1945 ರಲ್ಲಿ 103 ಲಕ್ಷ 26 ಸಹಸ್ರಕ್ಕೆ ಮಾರಲಾಯಿತು. ಭೂಮಿಯ ಬೆಲೆಯಲ್ಲಿನ ಏರಿಕೆಯನ್ನು ಕೊಳ್ಳುವವನ ಹಿತದ ದೃಷ್ಟಿಯಿಂದಲೇ ತಡೆಯಬೇಕು. ಇಳಿದಾಗ, ಸಾಲಮಾಡಿಕೊಂಡಾತನು ದುಃಖಕ್ಕೀಡಾಗುವನು ಇದಲ್ಲದೆ ಭೂಮಿಯು ಸ್ವೈರ ಹಾಜರಮಾಲಿಕನದಾಗುವದು. ಈಕಾರಣ ಕ್ಷೇತ್ರಗಳನ್ನಾಗಿ ಮಾಡಿ ವಿವಿಧ ಸೈರುಗಳೆಂದು ವಿಂಗಡವಾಗಬೇಕು. ಕಂಟ್ರೋಲು ಮಾಡಿರುವದು 50 ಎಕ್ರೆ ಒಳಗಿನ ಭೂಮಿಗಳಿಗನ್ವಯಿಸುವದಿಲ್ಲ ವಾದ್ದರಿಂದ ಬಿಲ್ಲಿನಲ್ಲಿ ಸವಂಡೆಮಾಡಿ ಈ ವ್ಯವಹಾರಗಳಮೇಲೆ 1941 ರಿಂದಲೂ ಸರ್ಕಾರದ ನಿಯಂತ್ರಣವಾಗಿ ವಿವರಣೆಯಾಗಬೇಕು. 10 ವರ್ಷಗಳನಂತರ ಭೂಮಿಯನ್ನು ಕೊಡಬಹುದೆಂಬ ಪದ್ಧತಿಯಿಂದ ನೀರಾವರಿ ಅನುಕೂಲಗಳು ದೊರೆತೊಡನೆಯೇ ಹೆಚ್ಚಿನ ಖರೀದಿಗೆ ಮಾರಲು ಭೂಮಾಲೀಕನಿಗೆ ಆಶೆಹುಟ್ಟುವುದು ಭೂತೆರಿಗೆಯನ್ನು ವಿಧಿಸಿ-ಎಲ್ಲಾ ವ್ಯವಹಾರಗಳಿಗೂ ಸರ್ಕಾರದ ಪರ್ಮಿಟ್ ದೊರಕಿಸುವಂತಾಗಬೇಕು. ಹೆಚ್ಚಿನ ಬೆಲೆಗೆ ಮಾರಲಾಗುವ ಭೂಮಿಗಳ ಮೇಲೆ ಕೊಳ್ಳುವವರು ಸರ್ಕಾರಕ್ಕೆ ಟಾಕ್ಸ ಕೊಡಬೇಕು ಹೀಗಾದಲ್ಲಿ ಭೂಮಿಗಳನ್ನು ಪಾರುವ ಮತ್ತು ಕೊಳ್ಳುವವರ ಮೇಲೆ ನಿರ್ಬಂಧ ಹೇರಿದಂತಾಗುತ್ತದೆ

ವಿದ್ಯಾರ್ಥಿ ಕಾಂಗ್ರೆಸ್‌ನ ಕಾಲಕ್ಕೆ ಓದಿದ

ಸ್ವಾಗತ ಗೀತೆ

ಸ್ವಾಗತವು ನಿಮಗಿಂದು
ಭಾರತದ ಮಕ್ಕಳಿರ
ಭಾರತದಿ ಬೆಳಗುತಿಹ
ಬಳ್ಳಾರಿಗೆ—

ಮೂರು ಬಣ್ಣದ ಪಟವ
ಧೂಳಿಯಲ್ಲಿ ಭಟ ಭಟನೆ
ಮೇಲು ಮೇಲಕೆ ಎತ್ತಿ
ಗಾಳಿಯಲಿ ಭಟ ಭಟನೆ
ಹಾರಿಸುತ, ಹಾರಿಸುತ
ಹಾರುತ್ತ ಬನ್ನಿ—

ಹೆಜ್ಜೆ ಹೆಜ್ಜೆಗು ಜಯವು
ಮಾತು ಮಾತಿಗು ಜಯವು
ಭಾರತಾಂಬೆಯ ಉದರ ಧೀರರಾತ್ಮಕೆ ಜಯವು
ಜಯಕರವು ಜಯಕರವು ಎಂಬನುಡಿ
ಬಾಂದಳದಿ ಬಿತ್ತಿ ಬನ್ನಿ
ಅಮ್ಮನಿಗೆ ಸಿರಿ ಗಿರಿಯ ಹೊತ್ತು ತನ್ನಿ—

ಸ್ವಾಗತವು ನಿಮಗಿಂದು
ಭಾರತದ ಮಕ್ಕಳಿರ
ಭಾರತದಿ ಬೆಳಗುತಿಹ ಬಳ್ಳಾರಿಗೆ—

"ಭರತಖಂಡದ ಹಿತವೆ
ನನ್ನ ಹಿತವೆಂದು
ಭಾರತಮಾತೆಯ ಸುತವೆ
ನನ್ನ ಮತವೆಂದು—

ಭಾರತಾಂಬೆಯ ಸುತರೆ
ಸೋದರರು ಎಂದು
ಭಾರತಾಂಬೆಯ ಮುಕ್ತಿ
ಮುಕ್ತಿ ನನಗೆಂದು"—

ಪಣತೊಟ್ಟು ಭಯಬಿಟ್ಟು
ಎದೆತಟ್ಟಿ ಬನ್ನಿ
ಭುಜಗಳನು ಭುಜಕಟ್ಟಿ
ವಿಜಯವನು ತನ್ನಿ—

ಸ್ವಾಗತವು
ಭಾರತದ ಮಕ್ಕಳಿರ
ಭಾರತದಿ ಬೆಳಗುತಿಹ
ಬಳ್ಳಾರಿಗೆ—

ನಗುನಗುತ ಪ್ರಾಣವನು ನೂರೆಗೈದರಿಗೆ,
ರಕ್ತವನು ನೀರ್‌ಮಾಡಿ ಚಲ್ಲಿದವರಿಗೆ,
ಭಾರತಾಂಬೆಯ ಮುಕ್ತಿಗಳಿಸ ಹೊರಟವರಿಗೆ
ಶಾಂತಿಯನು ಭರಿಸೋಣ ತ್ವರೆಯಾಗಿ ಬನ್ನಿ—

ಸ್ವಾಗತವು ನಿಮಗಿಂದು
ಭಾರತದ ಮಕ್ಕಳಿರ
ಬೆಳಗುತಿಹ
ಬಳ್ಳಾರಿಗೆ—

(ಹಿ. ಮ. ನಾಗಯ್ಯ, ನೀರಕ್ಕಿಪ ಕಲಾಶಾಲೆ.

ಮದ್ರಾಸ್ ಕೆದರುಗಳ ಸಮಸ್ಯೆ

ಮದ್ರಾಸ್ ಪ್ರಾಂತದಲ್ಲಿ ಈಗಿರುವ ಮಿಲ್‌ಗಳಿಗಾಗಿ, ಹೊಸದಾಗಿ ಸ್ಥಾಪಿಸಲ್ಪಡುವ ಬಟ್ಟೆಗಿರಣಿಗಳಿಗಾಗಿ ಭಾರತಸರ್ಕಾರವು ಇಂತಿಷ್ಟು ಕದರುಗಳನ್ನು ಕೊಡಬೇಕೆಂದು ನಿರ್ಣಯಿಸಿತು. ಆದರೆ ಮದ್ರಾಸ್ ಸರ್ಕಾರದವರು ತಮ್ಮ ಖಾದಿಧೋರಣೆಯಿಂದ ಅವುಗಳನ್ನು ನಿರಾಕರಿಸಿದ್ದರು. ಮದ್ರಾಸ್ ಸರ್ಕಾರದ ನೀತಿಯು ದೋಷಪೂರ್ಣವಿದೆಯೆಂದು ಕೇಂದ್ರ ಸರ್ಕಾರದ ವ್ಯೂಹಕೆ ಮಂತ್ರಿಗಳಾದ ಶ್ರೀ ರಾಜಗೋಪಾಲಾಚಾರ್ಯರು ಕೇಂದ್ರ ಅಸೆಂಬ್ಲಿಯಲ್ಲಿ ಒಂದು ಪ್ರಶ್ನೆಗೆ ಉತ್ತರವೀಯುತ್ತಾ ಹೇಳಿದರು. ಮದ್ರಾಸ್ ಪ್ರಧಾನರು ತಮ್ಮ ಧೋರಣಕ್ಕನುಕೂಲವಾದ ಅಡ್ವೊಕೇಟ ಜನರಲ್‌ರವರಿಗೆ ಈ ಸಮಸ್ಯೆಯನ್ನೊಪ್ಪಿಸಿ ಕೇಂದ್ರಸರಕಾರಕ್ಕೆ ದೀರ್ಘಪತ್ರ ಬರೆಯಲಿರುವರು. ಮತ್ತೆ ಕೇಂದ್ರದಿಂದ ಉತ್ತರ ಬಂದನಂತರ ಈ ಸಮಸ್ಯೆಯನ್ನು ಕೊನೆಯದಾಗಿ ನಿರ್ಣಯಿಸಲಿದ್ದಾರೆ. ಶ್ರೀ ಪ್ರಕಾಶರವರ ಖಾದಿಧೋರಣೆಗೆ ಮಹಾತ್ಮ ಗಾಂಧಿ ಮತ್ತು ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೃಪಾಲಿನಿಯವರ ಸಂಪೂರ್ಣ ಬೆಂಬಲವಿದೆಯೆಂದು ವ್ಯಕ್ತಪಟ್ಟಿದೆ.

ಗ್ರಾಮ ಪಕ್ಷಪಾತಿ ಯೋಜನೆ

[ಕಳೆದ ವಾರದಿಂದ ಮುಂದುವರಿದುದು]

(೨) ದನ, ಮೇವು, ಹಾಲು

ಹಿಂದೀ ಒಕ್ಕಲತನದ ಮೂಲಾಧಾರವಾದ ಬೀಜದ ದನಗಳ ಜೋಪಾಸನೆಯನ್ನು ದೊಡ್ಡ ಪ್ರಮಾಣದಲ್ಲಿ ಮತ್ತು ಶಾಸ್ತ್ರೀಯ ಪದ್ಧತಿಯಿಂದ ನಡೆಸಲು ಎಲ್ಲ ಬಗೆಯ ಪ್ರೋತ್ಸಾಹನೆ ಕೊಡಬೇಕು. ಸರಕಾರೀ ಫಾರಂಗಳಲ್ಲಿ ಇಲ್ಲಿ ಸೈನಿಕ ಶಾಖೆಗಳಲ್ಲಿ ಕೇವಲ ಪ್ರಯೋಗ ಮಾಡಿದರೆ ತೀರದು. ಅದರಿಂದ ಅವಶ್ಯಕತೆ ಹಿಂಗದು. ಸದ್ಯದಲ್ಲಿ ಹಿಂದೀ ಒಕ್ಕಲಿಗನ ಹತ್ತಿರ ಇರುವ ಬೀಜದ ದನಗಳು ಆರ್ಥಿಕ ದೃಷ್ಟಿಯಿಂದ ತೀರ ಹಾನಿಕರವಾಗಿದ್ದು ಅವನಿಗೆ ಭಾರವಾಗಿವೆ. ಸಿಕ್ಕಾಪಟ್ಟೆಯಾಗಿ ಬೀಜದ ಹೋರಿಗಳನ್ನು ಬಿಡುವದನ್ನು ಪ್ರತಿಬಂಧಿಸಬೇಕು. ಮಶ್ತು ಪಶುವೈದ್ಯ ಶಾಖೆಯವರಿಂದ ಮನ್ನಣೆ ಪಡೆದ ಹೋರಿಗಳನ್ನು ಬಿಟ್ಟು ಉಳಿದೆಲ್ಲ ಹೋರಿಗಳ ಬೀಜ ಒತ್ತಾಯದಿಂದ ತೆಗೆವಂತೆ ಕಾಯ್ದೆಯಾಗಬೇಕು. ಮಕ್ಕಳಿಗೆ ಮೈಲಿ ಹಾಕಿಸುವದು ಒತ್ತಾಯದನ್ವಾಗಿ ಮಾಡಿದಂತೆ ಇದನ್ನು ಮಾಡಬೇಕು

ಮುಂಬಯಿಯಂಥ ಒಕ್ಕಲತನದಲ್ಲಿ ಪ್ರಗತಿಪಡೆದ ಸ್ಥಾನದಲ್ಲಿಯೂ ನಂಬಲಾಗದಷ್ಟು ಖಾಸಗಿ ಒಡೆತನದ ಭೂಮಿಗಳು ಪಡಬಿದ್ದಿವೆಂದು ಹೇಳಿದರೆ ಅನೇಕರಿಗೆ ಅದೊಂದು ಕಾಲ್ಪನಿಕ ಸುದ್ದಿಯೆಂದೆನಿಸಬಹುದು ಸೂರತ ಜಿಲ್ಲೆ ಹಣ್ಣು ಹಂಪಲ ಬೆಳೆವ ತೋಟಗಳಿಗೆ ಪ್ರಸಿದ್ಧವಾಗಿದೆ. ಅಂಥ ಜಿಲ್ಲೆಯ ೧೦ ತಾಲೂಕುಗಳಲ್ಲಿ ಕೇವಲ ಎರಡು ತಾಲೂಕುಗಳ (ಪಂಡಿ ಮತ್ತು ಬುಲ್ಸಾರ) ೬೦೦೦೦ ಮತ್ತು ೧೪೦೦೦ ಎಕರೆ ಖಾಸಗಿ ಒಡೆತನದ ಭೂಮಿಗಳಲ್ಲಿ ಹುಲ್ಲಿನ ಹೊರತು ಬೇರೆ ಏನೂ ಬೆಳೆಯುವದಿಲ್ಲ. ಬಾಬೂಲ ಅಥವಾ ಬ್ಯಾಂಬಲ್ಸ ಮಾತ್ರ ಬೆಳೆವುವು. ಈ ತಾಲೂಕುಗಳಲ್ಲಿ ವರ್ಷದ ಮಳೆಯು ಸರಾಸರಿ ೭೫ ಇಂಚಿದೆ. ೫ ಇಲ್ಲವೆ ೬ ಮೈಲುಗಳ ಅಂತರದಲ್ಲಿ ಅತ್ಯುತ್ತಮ ನದಿಗಳು ಹರಿಯುತ್ತವೆ ಮತ್ತು ಪ್ರತಿವರ್ಷ ಅರಬೀ ಸಮುದ್ರದಲ್ಲಿ ಕೋಟ್ಯಾವಧಿ ಗ್ಯಾಲನ ನೀರು ಒಯ್ದು ಸುರುವುತ್ತವೆ. ಇವೆಲ್ಲ ಸಂಗತಿಗಳು ಲಕ್ಷ್ಯದಲ್ಲಿಡುವಂತಹವಾಗಿವೆ

ನೆರೆಯ ಹಳ್ಳಿಯೊಂದರಲ್ಲಿ ಒಟ್ಟಾರೆ ಇರುವ ೧೨೦೦ ಎಕರೆ ಕ್ಷೇತ್ರದಲ್ಲಿ ೩೫೦ ಎಕರೆಗಿಂತ ಹೆಚ್ಚಲ್ಲದ ಭೂಮಿ ಮಾತ್ರ ಸಾಗಾಗಿದ್ದು ೮೫೦ ಎಕರೆ ಭೂಮಿ ಕೇವಲ ಹುಲ್ಲು ಭೂಮಿಯಾಗಿದ್ದುದನ್ನು ಮೊನ್ನೆಯ ದಿನವೆ ಸರಕಾರಿ ಅಧಿಕಾರಿಯೊಬ್ಬರು ತಮ್ಮ ಸಂಚಾರದಲ್ಲಿ ಕಂಡುಕೊಂಡರು. ಹಳ್ಳಿಯ ದನಗಳಿಗಾಗಿ ಮೀಸಲಾಗಿರಿಸಿದ್ದ ಹುಲ್ಲುಗಾವಲುಗಳು ಇನಾಮಾಗಲಿಲ್ಲ. ಆದರೆ ಎಲ್ಲಿಯೋ ದೂರ ಇದ್ದ ಜಮೀನದಾರರ ಭೂಮಿಗಳಿವು. ಆ ಸಾವಕಾರರು ಈ ಭೂಮಿಯಲ್ಲಿಯ ಪ್ರತಿಯೊಂದು ಕಡ್ಡಿ ಹುಲ್ಲನ್ನು ಕೂಡ ಕೊಯಿಸಿಕೊಂಡು ಮುಂಬಯಿಗೆ ಸಾಗಿಸುತಿರುವರು. ಸರಕಾರದವರು, ಸಾರ್ವಜನಿಕ ಸಂಸ್ಥೆಗಳು ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯಿರೆಂದು ಎಷ್ಟೆ ಪ್ರಚಾರ ನಡೆಸಿದ್ದಾಗ್ಯೂ ಈ ಜಮೀನ್ದಾರರು ತಮ್ಮ ಬೊಜ್ಜನ್ನೇ ಬೆಳೆಸಿಕೊಳ್ಳುತಿರುವರು. ಹಳ್ಳಿಗರು ಅಮೇರಿಕ ಮತ್ತು ಉಳಿದ ದೇಶಗಳಿಂದ ತರಿಸಿದ ಆಹಾರ ಧಾನ್ಯಗಳು ಅರೆಹೊಟ್ಟೆ ಸೀದಾ ಉಂಡು ಜೀವಿಸುತಿರುವಾಗ ಈ ಜಮೀನದಾರರ ಬೊಜ್ಜು ಬೆಳೆಸುವ ಮಾದರಿಯಿದು. ಈ ಭೂಮಿಗಳಲ್ಲಿ ಜಮೀನದಾರರ ರೈತರಿಗೆ ಆಹಾರಧಾನ್ಯ ಬೆಳೆಯಗೊಡುವದಿಲ್ಲ ಈ ಭೂಮಿಗಳಲ್ಲಿ ಒಳ್ಳೆ ಬೆಳೆ ಬರುವದಲ್ಲದೆ ಈಗಿನಕಿಂತ ಕಡಮೆ

ಅಲ್ಲದಿದ್ದಷ್ಟು ಹುಲ್ಲೂ ಬೆಳೆಯುತ್ತದೆ. ಆದರೆ ಸುಗ್ಗಿಯಲ್ಲಿ ಮಾತ್ರ ವಿಶೇಷ ಕಾವಲು ಇಡಬೇಕಾಗುವದು. ಈ ಬೆಳೆಯಲ್ಲಿ ಅರ್ಧಪಾಲು ರೈತರಿಗೆ ಹೋಗುವದು. ಎಂಬ ಹೊಟ್ಟೆಕಿಚ್ಚಿನ ಧೋರಣ ವಹಿಸಿದ ಇಂಥ ಒಡೆಯರ ಒಡೆತನದಲ್ಲಿ ಲಕ್ಷಾವಧಿ ಎಕರ ಭೂಮಿ ಪಡಬಿದ್ದಿದೆ. ಈ ಎಲ್ಲ ಪಡಭೂಮಿಗಳಲ್ಲಿ ಭೂಮಿ ಇಲ್ಲದ ರೈತರು ಆಹಾರಧಾನ್ಯ ಮತ್ತು ಪಲ್ಲೆ ಕಾಯಿ ಬೆಳೆಯಬೇಕು. ಮತ್ತು ಸರಕಾರದವರು ಇವರಿಗೆ ನೀರಾವರಿ ಸೌಕರ್ಯಗಳನ್ನೊದಗಿಸಬೇಕು. ಹುಲ್ಲು ಮತ್ತು ತಂಬಾಕಿಗೆ ವಿಶೇಷ ಧಾರಣೆ ಬರುವದರಿಂದ ಗುಜರಾಥದಲ್ಲಿಯ ಅನೇಕ ಜಮೀನದಾರರು ಸರಕಾರದ ಆಜ್ಞೆಯನ್ನು ಧಿಕ್ಕರಿಸಿ ಅವರ ಸಮಕ್ಷದಲ್ಲಿಯೇ ತಮ್ಮ ಭೂಮಿಗಳನ್ನೆಲ್ಲ ಹುಲುಗಾವಲು ಮತ್ತು ತಂಬಾಕು ಭೂಮಿಗಳನ್ನಾಗಿ ಪರಿವರ್ತಿಸುತಿರುವರು. ಸರಕಾರದ ಆಹಾರಧಾನ್ಯ ಬೆಳೆಯಿರಿಂಬ ಪ್ರಚಾರವೂ ಲೆಯಲ್ಲಿಯೇ ಬೀಳುತಿದೆ. ಸ್ವಲ್ಪವೂ ವಿಲಂಬ ಮಾಡದೆ ಇದನ್ನೆಲ್ಲ ಪರಿಣಾಮಕಾರಕವಾಗಿ ನಿಲ್ಲಿಸಲಿಕ್ಕೆ ಬೇಕು. ಪ್ರಾಂತದಲ್ಲಿ ಇಷ್ಟೊಂದು ವಿಪುಲ ಹುಲ್ಲುಗಾವಲು ಇರುತಿದ್ದರೆ ಮುಂಬಯಿಯಂಥ ನಗರದಲ್ಲಿಯೇ ಹಾಲು ಉತ್ಪಾದಿಸಲಾಗುತ್ತದೆ. ಮತ್ತು ರೂಪಾಯಿಗೆ ಒಂದು ಸೇರಿನಂತೆ ಇಲ್ಲವೆ ಅದಕ್ಕೂ ಹೆಚ್ಚಿಗೆ ಮಾರಲ್ಪಡುತ್ತದೆ. ಮುಂಬಯಿ, ಅಹಮದಾಬಾದ, ಪುಣೆ, ಸೊಲ್ಲಾಪೂರ, ಹುಬ್ಬಳ್ಳಿ ಮೊದಲಾದ ನಗರ ಮತ್ತು ಉಪನಗರಗಳಲ್ಲಿ ದನಗಳ ಹಟ್ಟಿಗಳನ್ನೆಲ್ಲ ಕಾಯಿದೆಯಿಂದ ನಿರ್ಬಂಧ ಪಡಿಸತಕ್ಕದ್ದು. ನೈಸರ್ಗಿಕ ಅನುಕೂಲತೆಗಳಿಂದ ಯುಕ್ತವಾದ ಹಳ್ಳಿಗಳಲ್ಲಿಯೇ ದನಗಳನ್ನು ಸಂರಕ್ಷಿಸಲು ಅಪ್ಪಣೆ ಕೊಡಬೇಕು. ಇಂಥ ಹಳ್ಳಿಗಳಲ್ಲಿ ದನಗಳ ಹುಲ್ಲುಗಾವಲಿನ ಹಟ್ಟಿಗಳು, ಹಣದ ಮತ್ತ ವಾಹನ ಸೌಕರ್ಯಗಳನ್ನು ಸರಕಾರ ಒದಗಿಸಿ ಕೊಡಬೇಕು. ಪಾಂಜರಪೋಳ, ಗೋಶಾಲಾ ಮೊದಲಾದ ಧರ್ಮಾರ್ಥ ಸಂಸ್ಥೆ ಮುಂತಾದ ಲೋಕಪ್ರಿಯ ಯೋಜನೆಗಳನ್ನೂ ಸಂಘಟಿಸಬೇಕು.

(೩)ಕರಾವಳಿ ಪ್ರದೇಶಗಳ ಸಾಗುವಳಿ

ಸುರತ, ಥಾಣಾ ಮತ್ತು ಕೊಂಕಣದ ಕರಾವಳಿ ಜಿಲ್ಲೆಗಳಲ್ಲಿ ಸಾವಿರಾರು ಎಕರೆ ಕೊಳ್ಳಿ ಪ್ರದೇಶ ಹಾಗೆಯೆ ಬಿದ್ದಿದೆ. ಇವೆಲ್ಲ ಬಳಿದುಹೋಗಿ ಪಡ ಭೂಮಿಗಳಾಗಿವೆ. ಸರಕಾರದ ಪ್ರೋತ್ಸಾಹನೆ ಮತ್ತು ಸಹಾಯದಿಂದ ಒಡ್ಡು ಮೊದಲಾದವುಗಳನ್ನು ಹಾಕಿಸಿ ಮತ್ತೆ ಇವನ್ನು ಸಾಗುಮಾಡಬಹುದು. ಇದರಿಂದ ಸಾವಿರಾರು ಟನ್‌ದಷ್ಟು 'ಉಪ್ಪಕ್ಕಿ'(Salt-Paddy) ಬೆಳೆಯಬಹುದು. ಕೆಲವರುಷಗಳ ಹಿಂದೆ ಥಾಣಾ ಜಿಲ್ಲೆಯಲ್ಲಿ ಈ ಬಗೆಯ ಪರಿಶೀಲನೆಯೊಂದು ಸರಕಾರಿ ಅಧಿಕಾರಿಯಿಂದ ನಡೆಯಿತೆಂದು ತಿಳಿಯುತ್ತದೆ.

ಕೆಲವರುಷಗಳ ಹಿಂದೆ ಥಾಣಾ ಜಿಲ್ಲೆಯ ಉಪ್ಪು ತಯಾರಮಾಡುವ ಹಳ್ಳಿಯೊಂದರಲ್ಲಿಯ ವಯಸ್ಸರೆಲ್ಲ ಒಡೆಯನಗೂಡ ಕೂಲಿ ಸಂಬಂಧದ ವ್ಯಾಜ್ಯದಲ್ಲಿ ತಮ್ಮನ್ನು ಒತ್ತಾಯದಿಂದ ಕೆಲಸಕ್ಕೆ ಹಚ್ಚಿದುದಕ್ಕೆ ಪ್ರತಿಯಾಗಿ ಹಳೆಯ ಒಂದು ಒಡ್ಡನ್ನು ಕಟ್ಟಲು ಹವಣಿಸಿ ಒಂದು ತಲೆಮಾರಿನಿಂದ ಬಳಿದು ಹೋಗುತಿದ್ದು ಹಳ್ಳಿಗರಿಗೆಲ್ಲ ಸಿಕ್ಕದಿದ್ದ ವಿಶಾಲ ಭೂಮಿಯನ್ನು ಸಾಗುಮಾಡಲ್ಲಿ ಯಶಸ್ವಿಯಾದರು. ಕೆಲ ನಿರುದ್ಯೋಗಿ ಸಂಪುಗಾರರು ಹಿಂಸಾಕೃತ್ಯಕ್ಕೆಳಸಬಹುದೆಂದು ಅಂಜಿದ್ದ ಸಂಘಟಕರಿಗೆ ಈ ಅತ್ಯುಚ್ಚ ವಿಧಾಯಕ ಕಾರ್ಯ ಒಂದು ಬಗೆಯ ಸಂರಕ್ಷಣೆಯಂತೆ ಪರಿಣಮಿಸಿ ತಲ್ಲದೆ ನೂರಾರು ಖಂಡಿ 'ಸಾಲ್ಟ ಪ್ಯಾಡಿ'ಯನ್ನು ಒದಗಿಸಿ ಇಡೀ ಹಳ್ಳಿಯ ಪ್ರತಿಯೊಂದು ಕುಟುಂಬಕ್ಕೆ ಶಾಶ್ವತ ಪರಿಹಾರವನ್ನೊದಗಿಸಿಕೊಟ್ಟಿತು. ಆದರೆ ಇಂಥ ಪ್ರದೇಶಗಳನ್ನು ಸಾಗು ಮಾಡುವದೇನು ಖಾಸಗಿ ಸಂಸ್ಥೆಗಳ ಕೈಯಿಂದ ಅಗದು ಸರಕಾರ ಇದ್ದರಲ್ಲಿ ಸ್ವಯತ್ತವಾದರೆ ಬೇಕಾದಷ್ಟು ಕಾರ್ಯವನ್ನು ಈ ದಿಸೆಯಲ್ಲಿ ಮಾಡಬಹುದು.

(೪) ಪಲ್ಲೆಕಾಯಿ ಬೆಳೆವುದು

ನಮ್ಮ ಜನರಿಗೆ ಪೋಷಕ ಪದಾರ್ಥಗಳು ಅತ್ಯಲ್ಪ ಪ್ರಮಾಣದಲ್ಲಿ ಸಿಕ್ಕುವುದರಿಂದ ಅವರ ಆಹಾರ

ಬಹಳ ಕೆಳಮಟ್ಟಿನದಾಗಿದೆ. ಮೇಲೆ ವಿವರಿಸಿದ ಹುಲ್ಲುಗಾವಲುಗಳಲ್ಲಿ ಅತ್ಯುತ್ತಮ ಪಲ್ಲೆಕಾಯಿಗಳು ವಿಪುಲವಾಗಿ ಬೆಳೆಯಬಲ್ಲುವು; ಪಂಮಹಾಲದಲ್ಲಿ ಮೌರಾ ಹೂವಿನಿಂದ ಮತ್ತು ಕೊಂಕಣದ ಕೆಲಭಾಗಗಳಲ್ಲಿ ಹಲಸಿನಹಣ್ಣಿನ ಮೇಲೆ ಕೆಲ ಕಾಲ ಕಳೆಯುವಂತೆ ಇಲ್ಲಿನ ಬಡಜನರು ಈ ಪಲ್ಲೆಕಾಯಿಗಳಿಂದ ಜೀವನ ಸಾಗಿಸಬಲ್ಲರು. ಇಂದು ಶ್ರೀಮಂತರ ನಿತ್ಯದ ಊಟದಲ್ಲಿ ಮಾತ್ರ ತಾಜಾ ಪಲ್ಲೆ ಒಂದು ಬಗೆಯ "ಜೈಸಿ" ಪದಾರ್ಥವೆಂದು ಉಪಯೋಗಿಸಲಾಗುತ್ತದೆ. ಪಲ್ಲೆಕಾಯಿ ಬೆಳೆಗಾರರೆಲ್ಲ ಪ್ರತಿ ಔಂಸನ್ನು ಕೂಡ ಪೇಟೆಗೆ ಸಾಗಿಸುತಿದ್ದು ಅಲ್ಲಿಳ ಆಣೆಯಿಂದ ೧೫ ಆಣೆಗೆ ಪೌಂಡಿನಂತೆ ಅಡ್ಡು ವಾರಲ್ಪಡುತ್ತದೆ. ಇಷ್ಟೊಂದು ಧಾರಣೆ ಬಂದರೂ ಬೆಳೆವನಿಗೆ ಕೇವಲ ೧೫ ಆಣೆ ಮಾತ್ರ ಸಿಕ್ಕುತ್ತವೆ. ಬಹ್ವಂಶವು ರೇಲ್ವೆಗಳಿಗೆ ಮತ್ತು ನಗರ ದಲ್ಲಾಳಿಗೆ ಇಲ್ಲವೆ ಮಧ್ಯಸ್ಥನಿಗೆ ಮುಟ್ಟುವದು. ಪ್ರಸಿದ್ಧ ತೋಟಿಗನೊಬ್ಬನು ತನ್ನ ಉತ್ಪನ್ನದಲ್ಲಿಯ ೧೦೦ ಕ್ಕೆ ೮೭॥ ಯಷ್ಟನ್ನೂ ರೇಲ್ವೆ ಮತ್ತು ದಲ್ಲಾಳರಿಗೆ ಹಂಚಿ ಹಾನಿಗೊಳಗಾದ ಸಂಗತಿಯನ್ನು ಲೆಕ್ಕಪತ್ರ ಸಹಿತವಾಗಿ ಕೆಲ ವರುಷಗಳಹಿಂದೆ ಇದೇ ಲೇಖಕನು ಈ ಪತ್ರಿಕೆಯಲ್ಲಿಯೆ ಪ್ರಸಿದ್ಧಿಸಿದ್ದನು. ವರ್ಧಾದ ಹತ್ತರದಲ್ಲಿದ್ದ ಸೈನಿಕ ಶಿಬಿರದವರು ತಮ್ಮ ಸಲುವಾಗಿ ಸ್ವಚಂತ ಪ್ರಮಾಣದಲ್ಲಿ ತಾಜಾ ಕಾಯಿಸಲ್ಲೆ ಬೆಳೆಯಬೇಕೆಂದು ಒಂದೆರಡು ವರುಷಗಳ ಹಿಂದೆಯೇ ಸುಮಾರು ಪದ ಹಳ್ಳಿಗರನ್ನು ಒತ್ತಾಯ ಪಡಿಸಿದರು. ಆದರೆ ಮುಂದೆ ಒಮ್ಮೆಲೆ ಅವರು ಅಲ್ಲಿಂದ ಶಿಬಿರವನ್ನು ಕಿತ್ತಿ ಇಡೀ ಹಳ್ಳಿಯನ್ನು ಆರ್ಥಿಕ ದುಃಸ್ಥಿತಿಗೀಡುಮಾಡಿದರು. ಇಡೀ ಸುಗ್ಗಿಯಲ್ಲೆಲ್ಲ ಬಂಡಿಗಟ್ಟಲೆ ಕಾಲೀಫ್ಲಾವರ ಬಿಲ್ಲಿಗೊಂದು ಪೌಂಡಿನಂತೆ ಮಾರಿದ್ದನ್ನು ನಾನು ನನ್ನ ಕಣ್ಣಿಂದ ನೋಡಿದ್ದೇನೆ. ಅಮೇರಿಕೆಯ ಪತ್ರಿಕೆಗಳಲ್ಲಿ ಬಣ್ಣದ ಜಾಹೀರಾತುಗಳಿಗೆ ತುಲನೆ ಮಾಡಬಹುದಾಗಿನ್ನ ಅತ್ಯುತ್ತಮ. ಮಣಗಟ್ಟಲೆ ಟೊಮೆಟೊಗಳನ್ನು ಎತ್ತುಗಳಿಗೆ ಹಾಕಿದ್ದುಂಟು. ನನ್ನ ನೆರೆಯಲ್ಲಿ ಮೊನ್ನೆ ಮೊನ್ನೆಯೆ ಸ್ವಚಂತ ಪ್ರಮಾಣದಲ್ಲಿ ಪಲ್ಲೆಕಾಯಿಗಳನ್ನು ಬೆಳೆವವನನ್ನೂ ನಾನು ಭೆಟ್ಟಿಯಾದೆ ಅವನು ಪ್ರತಿದಿನ ಕೆಲಸಾವಿರ ಪೌಂಡು ತಾಜಾ ಪಲ್ಲೆಕಾಯಿಗಳನ್ನು ಸೈನಿಕರಿಗೆ ಒದಗಿಸುತಿದ್ದನು. ಮುಂದೆ ಮುಂಬಯಿಯಲ್ಲಿ ಸರಕಾರಿ ಸೀದಾ ಅಂಗಡಿಗಳಿಗೆ ಅವನ್ನು ಪೊರಯಿಸುತಿದ್ದನು. ಆದರೆ ಸರಕಾರದವರು ಒಮ್ಮೆಲೆ ತಮ್ಮ ಧೋರಣವನ್ನು ಬದಲಿಸಿದ್ದರಿಂದ ಅವನು ಮತ್ತು ಅವನ ಪ್ರೋತ್ಸಾಹನೆಯಿಂದ ಪಲ್ಲೆಕಾಯಿ ಬೆಳೆಯಹತ್ತಿದ್ದ ೧೧ ಜನ ಹಳ್ಳಿಗರು ಅತ್ಯಂತ ಹಾಸಿಗೊಳಗಾದರು.

ಇದೆಲ್ಲ ಅವ್ಯವಸ್ಥೆ ನಿಲ್ಲಲಿಕ್ಕೆ ಬೇಕು. ಮತ್ತು ಯೋಗ್ಯ ಯೋಜನೆ ಯೋಜಿಸಲ್ಪಡಬೇಕು. ಬೆಳೆವವು ಇಂಥ ನಷ್ಟದಿಂದ ರಕ್ಷಿಸಲ್ಪಡಬೇಕು. ದೊಡ್ಡ ಮತ್ತು ದೂರಿನ ನಗರಗಳಿಗಾಗಿ ಹಳ್ಳಿಗರನ್ನು ಪಲ್ಲೆಕಾಯಿಗಳನ್ನು ಬೆಳೆಯುವದರಿಂದ ಪರಾವೃತ್ತಗೊಳಿಸಬೇಕು. ಸ್ಥಳಿಕರ ಅವಶ್ಯಕತೆಗಳನ್ನು ಪೂರೈಸುವ ಮಟ್ಟಿಗೆ ಮಾತ್ರ ಅವನ್ನು ಬೆಳೆಯುವಂತೆ ಪ್ರೋತ್ಸಾಹಿಸಬೇಕು ಹಾಲಿನಂತೆ ಅವುಗಳ ಕನಿಷ್ಠ ಧಾರಣೆಯನ್ನು ಗೊತ್ತುಪಡಿಸಿ ಇಂತಿಷ್ಟಾದರೂ ಹಣ ಸಿಕ್ಕುವದೆಂದು ವಿಶ್ವಾಸನ ಅವರಿಗೆ ದೊರೆಯಬೇಕು. ಇಂತಿಷ್ಟು ಭೂಮಿಯಲ್ಲಿಯೆ ಅವನ್ನು ಬೆಳೆಯಬೇಕೆಂಬ ನಿರ್ಬಂಧವನ್ನೂ ಅವರ ಮೇಲೆ ಹಾಕಬೇಕು.

(೫) ಬಚ್ಚಲ ನೀರು

ಮುಂಬಯಿ ಅಹಮದಾಬಾದಗಳಂಥ ದೊಡ್ಡನಗರಗಳಿಗಾಗಿ ಪಲ್ಲೆಕಾಯಿಗಳನ್ನು ಬೆಳೆಯುವದಕ್ಕೆ ಮತ್ತು ನಗರಗಳಲ್ಲಿಯ ದನಗಳಿಗಾಗಿ ಹಸಿ ಹುಲ್ಲು ಬೆಳೆವುದಕ್ಕಾಗಿ ಶೌಚ ಮತ್ತು ಬಚ್ಚಲನೀರಿನ ಉಪಯೋಗ ಮಾಡಿಕೊಂಡಿದ್ದಾದರೆ ಬಹಳ ಲಾಭವಾಗಬಲ್ಲದು. ನಗರಗಳು ಕುಡಿಯುವ ನೀರನ್ನು ದೂರ ನೀರಿನ ಝರಿಗಳಲ್ಲಿಂದ ತರುವ ಯೋಜನೆ ಮಾಡಿದ್ದಾದರೆ ನಗರದ ಗಟಾರ ನೀರನ್ನೆಲ್ಲ ಉಪನಗರಗಳಲ್ಲಿ ವಿಶಾಲ ಕ್ಷೇತ್ರದಲ್ಲಿ ಗೊಬ್ಬರ ಮತ್ತು ನೀರಾವರಿಗಾಗಿ ಉಪಯೋಗಿಸಬಹುದು. ಅಹಮದಾಬಾದ ನಗರ

84

ಸಭೆಯವರು ಇಂಥ ಬಚ್ಚಲ ನೀರನ್ನು ಈ ರೀತಿಯಾಗಿ ಹಲವಾರು ವರುಷಗಳಿಂದ ಉಪಯೋಗಿಸಿದ್ದು ಅದರಿಂದ ಒಳ್ಳೆ ಆದಾಯನ್ನೂ ಮಾಡಿಕೊಳ್ಳುತಿರುವರೆಂದು ಹೇಳುವದು ಇಲ್ಲಿ ಅಪ್ರಾಸಂಗಿಕವಾಗಲಾರದು. ದಿಲ್ಲಿ ಅಲಹಾಬಾದ ಕರಾಚಿ ಮತ್ತು ಉಳಿದ ಕಡೆಗಳಲ್ಲಿಯೂ ಈ ರೀತಿ ಹೆಚ್ಚು ಕಡಮೆ ಮಾಡಲಾಗುತಿದೆಂದು ನನಗನಿಸುತ್ತಿದೆ.

(೬) ಒಕ್ಕಲತನದಲ್ಲಿ ಶಿಕ್ಷಣ

ಒಕ್ಕಲತನ ಶಾಲೆ ಕಾಲೇಜುಗಳಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳಿಗೆ ಅನುಭವಿಕ ಮತ್ತು ಉತ್ಸಾಹಿ ಪ್ರಮುಖ ಒಕ್ಕಲಿಗರ ತೋಟ ಹೊಲಗಳಲ್ಲಿ ಶಿಷ್ಯ ವೇತನ ಕೊಟ್ಟು ಕೆಲಸದ ಅನುಭವವನ್ನು ಮಾಡಿಕೊಡುವದತ್ಯವಶ್ಯವಾಗಿದೆ. ಪ್ರಥಮ ಶ್ರೇಣಿಯಲ್ಲಿರುವ ಹಣ್ಣು ಹಂಪಲ ಬೆಳೆಸುವರು ಮತ್ತು ತೋಟಿಗರಲ್ಲಿ ಪ್ರತಿವರ್ಷ ಇಂತಿಷ್ಟು ಉಮೇದ್ವಾರರನ್ನಿಟ್ಟುಕೊಂಡು ಅವರಿಗೆ ಶಿಕ್ಷಣ ಕೊಡುವ ಏರ್ಪಾಡನ್ನು ಸರಕಾರದವರು ಮಾಡಬೇಕು. ಈ ಉಮೇದ್ವಾರರು ಕೆಲಮಟ್ಟಿಗೆ ಗ್ರಾಂಥಿಕ ಶಿಕ್ಷಣ ಪಡೆದವರಾಗಿರಬೇಕು ಅಲ್ಲದೆ ಸರಕಾರಿ ಒಕ್ಕಲತನ ಸಾಲೆಗಳಲ್ಲಿ ಮತ್ತು ಫಾರ್ಮುಗಳಲ್ಲಿ ಒಂದು ವರುಷದ ಪ್ರಾರಂಭಿಕ ಶಿಕ್ಷಣವನ್ನು ಪಡೆದವರಾಗಿರಬೇಕು; ಹೆಚ್ಚಿನ ಶಿಕ್ಷಣಕ್ಕಾಗಿ ಇವರಿಗೆ ಇಂಥ ವಿಶಿಷ್ಟ ಖಾಸಗಿ ಫಾರ್ಮುಗಳಲ್ಲಿ ಒಂದೆರಡು ವರ್ಷ ಪ್ರಾತ್ಯಕ್ಷಿಕ ಶಿಕ್ಷಣವನ್ನು ಕೂಡ ಬೇಕು. ಮೊದಲನೆ ವರ್ಷ ಸ್ಥಳಿಕ ಹವಾಮಾನ ಭೂಮಿ, ಮಳೆ, ಬೆಳೆ, ಗೊಬ್ಬರ ಯೋಜನೆ ಕೆಲಸಗಾರರ ಸಮಸ್ಯೆ ಮೊದಲಾದ ವಿಷಯಗಳ ಶಿಕ್ಷಣ ಕೊಡಬೇಕು. ಎರಡನೆ ವರ್ಷ ವೆಚ್ಚಾದ ಲೆಕ್ಕಪತ್ರ, ಫಾರ್ಮಿನ ವ್ಯವಸ್ಥೆ, ಪೇಟೆ ಸಹಕಾರ ಪದ್ಧತಿಯಿಂದ ಕೆಲಸ ಮಾಡುವದು ಮತ್ತು ತೋಟಪಟ್ಟಿಯ ಯಾವದೊಂದು ವಿಶಿಷ್ಟ ಶಾಖೆಯಲ್ಲಿ ಹೆಚ್ಚಿನಶಿಕ್ಷಣ ಮೊದಲಾದದ್ದನ್ನು ಕೊಡುವ ಏರ್ಪಾಡು ಆಗಬೇಕು.

ಇಂಥ ತರಬೇತಿ ಫಾರ್ಮುಗಳಿಗೆ ಸರಕಾರದ ಮನ್ನಣೆ ಇರತಕ್ಕದ್ದು. ಮತ್ತು ಆಯಾ ವಿದ್ಯಾರ್ಥಿಗಳು ತಮ್ಮ ಫಾರ್ಮುಗಳಲ್ಲಿ ನಿರ್ದಿಷ್ಟ ಅವಧಿಯವರೆಗೆ ಶಿಕ್ಷಣ ಪಡೆದ ಬಳಿಕ ಅವರಿಗೆ ಪ್ರಶಸ್ತಿ ಪತ್ರಿಕೆಗಳನ್ನು ಕೊಡುವ ಅಧಿಕಾರವನ್ನು ಕೊಡಬೇಕು. ಈ ಪ್ರಶಸ್ತಿ ಪತ್ರಿಕೆಯಲ್ಲಿ ವಿದ್ಯಾರ್ಥಿಯ ಸಾಮಾನ್ಯ ಜ್ಞಾನ ಮತ್ತು ಒಕ್ಕಲತನದ ಇಥಂದೊಂದು ವಿಶಿಷ್ಟ ಶಾಖೆಯಲ್ಲಿ ತರಬೇತಿಹೊಂದಿದ ಬಗ್ಗೆ ಬರೆಯಬೇಕು ಸರಕಾರಿ ಸಂಸ್ಥೆಗಳಲ್ಲಿ ಇಲ್ಲವೆ ತರಬೇತಿ ಶಾಖೆಗಳಲ್ಲಿನ ಶಿಕ್ಷಣ ಪ್ರಶಸ್ತಿ ಪತ್ರಗಳಿಗೆ ಇವು ಸಮಾನವಾದ ದರ್ಜೆಯವಿರಬೇಕು. ಒಕ್ಕಲತನ ರಸಾಯನ ಶಾಖೆಯಲ್ಲಿ ಮತ್ತು ಸಂಶೋಧನೆಯ ಉಳಿದ ಶಾಖೆಗಳಲ್ಲಿ ಪೋಷ್ಟ ಗ್ರ್ಯಾಜ್ಯುಏಟ ಶಿಕ್ಷಣ ಬಗ್ಗೆಯೂ ಈ ತಳಹದಿಯನ್ನಿಟ್ಟುಕೊಂಡೇ ನಿಶ್ಚಿತಪಡಿಸಬೇಕು.

ಈ ಬಗೆಯ ಯೋಜನೆಯಿಂದ ಪ್ರತಿವರ್ಷ ಸಾವಿರಾರು ವಿದ್ಯಾರ್ಥಿಗಳಿಗೆ ಅತ್ಯುತ್ತಮ ವ್ಯಾವಹಾರಿಕ ಶಿಕ್ಷಣ ಸಿಕ್ಕುವದು. ಸರಕಾರದವರು ಕೊಡುವ ಈ ಬಗೆಯ ಯಾವದೇ ಶಿಕ್ಷಣಕ್ಕಿಂತ ಇದು ಕಡಿಮೆಯಾಗಲಾರದು. ಆದರೆ ಅದೇ ಕಾಲಕ್ಕೆ ಬಹಳ ಅಗ್ಗದ್ದಾಗದು.

ಸರಕಾರದವರು ಭೂಮಿಗಳಿಗಾಗಿ, ಕಟ್ಟಡಗಳಿಗಾಗಿ ಪ್ರಧ್ಯಪಕರಿಗಾಗಿ ಮತ್ತು ಸಿಬ್ಬಂದಿಗಾಗಿ ಮಾಡುವ ವೆಚ್ಚದ ಉಳಿತಾಯವಾಗುವದು. ಆಯಾ ಫಾರ್ಮ ಒಡೆಯರಿಗೂ ಇದರಿಂದ ಲಾಭವಾಗುವುದು. ಏಕೆಂದರೆ ಬಹಳಕಡಿಮೆ ವೆಚ್ಚದಲ್ಲಿ ಅವರಿಗೆ ತಮ್ಮ ಫಾರ್ಮಗಳಲ್ಲಿ ದುಡಿಯುವ ಬುದ್ಧಿವಂತ ಜನರು ಸಿಕ್ಕುವರು. ಅಲ್ಲದೆ ತಮ್ಮ ಜಿಲ್ಲೆಗಳಲ್ಲಿ ಮತ್ತು ಪ್ರಾಂತದಲ್ಲಿ ಇವರಿಗೆ ಸ್ಥಾನಮಾನ ಗೌರವವು ಲಭಿಸುವದು.

[ಮುಂದುವರಿಯುವದು]

ನವಭಾರತಕ್ಕೆ ಚಂದಾದಾರರಾಗಿರಿ

Land Speculations in Tungabhadra Project Area.

K. G SIVASWAMY, M. A.
Servants of India Society, Madras.

Mr. B. Anantachar M. L. A (Hospet-Bellary) opines that the primary problem to be solved is that of making provision for the pepole who would be dispossessed from their lands in consequence of the submersion of a large number of villages under the Tungabhadra irrigation project. The new bill for the control of speculation in the Tungabhadra project areas mainly refers to the amendments that would be required in the bill The number of sales of land in Bellary district increased over the previous years by 1316 1262 and 2700 in the years 1941, 1943 and 1945 respectively. The increase in the aggregate value of transactions rose in Bellary district by about 13 lakhs between 1942 and 1943. Again the aggregate value of transactions rose from Rs. 86. 77 lakhs in 1944 to Rs. 103. 26 lakhs in 1945. A land boom should always be prevented firstly to save the purchaser himself so that he might not get ent- periods of depression and secondly to prevent the growth of absentee landlordism on the land. I recommend that the permit system is necessary in order to ensure proper zoning of lands for different purposes and to prevent unwise settlements The bill requires certain modifications. The real object of controlling speculation would be defeated unless the permit is enforced for all sale transactions commencing from 1941 and not oct 1944. Secondly freedom of transactions without permit below 50 acres should be removed. Thirdly the right to alienate the land after a period of 10 years only suites the speculators who would there by be enabled to sell the land at a higher price when irrigation facilities would be fully available What is really necessary is that the permit system should be combined along with certain methods of land taxation. There should be a capital gains tax on the surplus value of the land between the preceeding transfer and the present sale. Secondly there should be provision for a resale tax so that speculators would be sufficiently warned of the excess tax they would have to pay on

86

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್.

ಕಾರ್ಯಕಾರೀ ಸಮಿತಿಯ ತೀರ್ಮಾನಗಳು.

ಈ ಸಭೆಯು ಹೊಸಪೇಟೆಯ ಜಿಲ್ಲಾಕಾಂಗ್ರೆಸ್ ಕಚೇರಿಯಲ್ಲಿ ೭ನೆಯ ದಿನಾಂಕ ಶ್ರೀ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಕೂಡಿ ಈ ಕೆಳ ತೀರ್ಮಾನಗಳನ್ನು ಅಂಗೀಕರಿಸಿತು. (1) ಹೊಸರಾಜ್ಯ ಘಟನೆಯೊಡನೆ ಕರ್ನಾಟಕ ಪ್ರಾಂತನಿರ್ಮಾಣವಾಗುವುದಕ್ಕಾಗಿ ಕ. ಪ್ರಾ. ಕಾಂಗ್ರೆಸ್ ಸಮಿತಿಯು ಸಮಯೋಚಿತವಾಗಿ ಎಲ್ಲ ಬಗೆಯ ತ್ಯಾಗ ಮತ್ತು ಧೈರ್ಯಯುತವಾದ ಕಾರ್ಯವನ್ನು ಕೈಗೊಳ್ಳಲು ಹಿಂದೆ ಮುಂದೆ ನೋಡಲಿಕ್ಕಿಲ್ಲೆಂದು ಕನ್ನಡ ಜನತೆಗೆ ಆಶ್ವಾಸನ ಕೊಡುತ್ತದೆ. ಈ ವಿಷಯಕ್ಕೆ ಪ್ರಚಾರಕೊಳ್ಳಲು ಅಖಿಲ ಭಾರತಾಧ್ಯಕ್ಷರಿಗೆ ಕನ್ನಡ ಜನತೆಯ ಆಶಾಕಾಂಕ್ಷೆಗಳನ್ನು ತಿಳಿಸಲು ಅಧ್ಯಕ್ಷರಿಗೆ ಅಧಿಕಾರ ಕೊಡಲಾಯಿತು. (2) ತುಂಗಭದ್ರಾ ಆಣೆಕಟ್ಟು ಸಂಬಂಧದಲ್ಲಿ ಮಾಳಾಪುರ ಯೋಜನೆಗಳ ಸಂಬಂಧದಲ್ಲಿ ವರದಿಯನ್ನೊಪ್ಪಿಸಲು ಐವರ ಉಪಸಮಿತಿಯನ್ನು ನಿರ್ಮಿಸಿತು. (3) ಬೆಳಗಾವಿ ಜಿಲ್ಲೆಯಲ್ಲಿ ಕಾಂಗ್ರೆಸ್‌ನಿಂದ ಹೊರತಾದ ರೈತಸಂಘವನ್ನು ಮಾನ್ಯಮಾಡಲಾಗುವುದಿಲ್ಲ. (4) ಕರ್ನಾಟಕ ಹಕ್ಕುಗಳನ್ನು ಸಾಕಷ್ಟು ಸಹಾನುಭೂತಿ, ತತ್ಪರತೆ ಹಾಗೂ ಲಕ್ಷ್ಯಪೂರ್ವಕವಾಗಿ ವಿಚಾರಿಸದಿರುವ ಮದ್ರಾಸ್ ಸರ್ಕಾರದ ಧೋರಣಕ್ಕೆ ಈ ಸಭೆಯು ಬಲವಾದ ಆಕ್ಷೇಪ ತೆಗೆದುಕೊಳ್ಳುತ್ತದೆ. ಸರ್ಕಾರಕ್ಕೆ ಬರೆದ ಪತ್ರಗಳಿಗೂ ಸರಕಾರದಿಂದ ಉತ್ತರದ ಅವಶ್ಯಕ ಸೌಜನ್ಯ ಸಹ ತೋರಿಸಲ್ಪಡುತ್ತಿಲ್ಲ. ಸ್ಥಾನಿಕ ಸಂಸ್ಥೆಗಳ ಚುನಾವಣೆ ಸಂಬಂಧದಲ್ಲಿ ಆಂಧ್ರಪ್ರಾಂತಕ್ಕೆ ಬಳ್ಳಾರಿ ಜಿಲ್ಲೆಯವರು ಪ್ರಶಸ್ತಿ ಪತ್ರಗಳಿಗಾಗಿ ಕೇಳಿಕೊಳ್ಳಬೇಕೆಂದು ಮದ್ರಾಸ್ ಮಂತ್ರಿವರ್ಗದವರು ವಿಧಿಸಿರುವುದನ್ನು ಈ ಸಭೆಯು ಖಂಡಿಸುತ್ತದೆ. ಇವರು ಹೀಗೆಯೇ ತಪ್ಪುಮಾಡಿದಲ್ಲಿ ಪಾರ್ಲಿಮೆಂಟರಿ ಸಮಿತಿಗೆ ವರದಿ ಮಾಡಬೇಕಾಗುತ್ತದೆ. (5) ಕೆ. ಪಿ. ಸಿ. ಸಿ. ಕಟ್ಟಡದ ನಿಧಿ ಸಂಗ್ರಹಕ್ಕೆ ಒಂದು ಉಪಸಮಿತಿಯಾಯಿತು. (6) ಸೊಂಡೂರು ಸರ್ಕಾರದವರು ಮದ್ಯನಿಷೇಧ ಕಾಯ್ದೆಯನ್ನು ಜಾರಿಗೆ ತಂದು ಮದ್ರಾಸ್ ಸರ್ಕಾರದೊಡನೆ ಸಹಕರಿಸಲು ಕೋರಲಾಗಿದೆ. (7) ಸೇವಾದಲದ ಸಂಘಟಕರನ್ನಾಗಿ ಶ್ರೀ ನರಹರಿ ಪರೇಖರನ್ನಾರಿಸಲಾಯಿತು. (8) ಕರ್ನಾಟಕ ಬಂದರುಗಳ ಅಭಿವೃದ್ಧಿವೃಷ್ಟಿಯಿಂದ ಕೈಗೊಂಡ ಬೊಂಬಾಯಿ ಸರಕಾರದ ಕಾರ್ಯವನ್ನು ಈ ಸಭೆಯು ಅಭಿನಂದಿಸುತ್ತದೆ.

ತುಂಗಭದ್ರಾ ಯೋಜನೆ.

1941 ಭೂಮಿಯ ಬೆಲೆಗಳಿಗೆ ಬದಲಾಗಿ ಈಗಿನ ಬೆಲೆಯನ್ನು ಕೊಡಬೇಕೆಂಬ ಬೇಡಿಕೆಗಳು ರೈತರಿಂದ ಬಂದಿವೆ. ಸರ್ಕಾರದವರು ಅವುಗಳನ್ನು ವಿಚಾರಿಸುತ್ತಿರುವರು. ಮುಳುಗಿ ಹೋಗುವ ಭಾಗಗಳ ಜನರಿಗೆ ನಿವೇಶನ ಭೂಮಿಗಳನ್ನು ಒದಗಿಸಲು ಸರ್ಕಾರದವರು ಯೋಜನೆಗಳನ್ನು ತಯಾರಿಸುವರು. ಅವು ಸದ್ಯಕ್ಕೆ ರಹಸ್ಯವಾಗಿವೆ. ಎಲ್ಲವೂ ನಿಶ್ಚಯವಾಗಿ ಸರ್ಕಾರದವರು ಆರ್ಡರ್ ಹೊರಡಿಸಿದನಂತರ ನಿಮಗೆಲ್ಲಾ ತಿಳಿಸಲಾಗುವುದು ಎಂದು ಶಾಸನ ಸಭೆಯ ಮೇಲ್ಮನೆಯಲ್ಲಿ ಶ್ರೀ ಆರ್. ಸೂರ್ಯನಾರಾಯಣರಾಯರಿಗೆ ಉತ್ತರಿಸುತ್ತಾ ಅಭಿವೃದ್ಧಿಖಾತೆಯ ಮಂತ್ರಿಗಳಾದ ಶ್ರೀ ಭಕ್ತವತ್ಸಲಂರವರು ಹೇಳಿದರು.

ಕಾಂಗ್ರೆಸ್ ಕಾರ್ಯಕಾರೀ ಸಮಿತಿ

ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಇದೇ ಮಾರ್ಚ ೫ ನೆಯ ತಾ. ದಿಂದ ಹೊಸದಿಲ್ಲಿಯಲ್ಲಿ ಸೇರುವದು ಎಂದು ಪ್ರಧಾನಕಾರ್ಯದರ್ಶಿಗಳು ಒಂದು ಪ್ರಕಟನೆ ಹೊರಡಿಸಿರುವರು

ಒರಿಸ್ಸಾ ರಾಜಧಾನಿ.

ಒರಿಸ್ಸಾ ರಾಜಧಾನಿಯನ್ನು ಭುವನೇಶ್ವರದಲ್ಲಿ ಕಟ್ಟಲು ಮೂರುಕೋಟಿ ರೂಪಾಯಿಗಳ ವೆಚ್ಚವು ತಗಲುತ್ತದೆ. ಇದರಲ್ಲಿ ಎರಡು ಕೋಟಿ ರೂಗಳನ್ನಾದರೂ ಕೊಡಬೇಕೆಂದು ಕೇಂದ್ರ ಸರ್ಕಾರಕ್ಕೆ ಬೇಡಿಕೆ ಹೋಗಿದೆ.

ಮಹಾತ್ಮರ ಯಾತ್ರೆ.

ಈ ವಾರ ಮಹಾತ್ಮಗಾಂಧಿಯವರು ತಮ್ಮ ಪಾದಚಾರೀ ಯಾತ್ರೆಯಲ್ಲಿ ಪ್ರಸಾದಪುರ ನಂದೀಗ್ರಾಮಗಳನ್ನು ಸಂದರ್ಶಿಸಿದರು. ಮೇಜರ ಶಹಾನವಾಜರು ನೌಖಾಲಿಯಲ್ಲಿ ಉಳಿದು ಹಿಂದೂ ಮುಸ್ಲಿಂ ಸೌಹಾರ್ದಕ್ಕಾಗಿ ಯತ್ನಿಸಲು ಗಾಂಧೀಜಿಯವರು ಅಪ್ಪಣೆ ಕೊಟ್ಟಿರುತ್ತಾರೆ. ನಂದೀಗ್ರಾಮದಲ್ಲಿ ಜೋಗೇಶಚಂದ್ರನಾಗರ ಮನೆಯಲ್ಲಿ ಉಳಿದಿದ್ದರು. ಗಾಂಧೀಜೀ ರಕ್ಷಣೆಗಾಗಿ ಬಂಗಾಲ ಸರಕಾರವು ಪೋಲೀಸರನ್ನು ಕಳುಹಿಸಿದೆ. ಅವರು ಹೊರಬಿದ್ದರೆ.ಅವರ ಬೆನ್ನುಬಿಡುವದಿಲ್ಲ. ಆರೀತಿ ಅವರಿಗೆ ಆಜ್ಞೆ ಇದೆಯಂತೆ. ನನ್ನನ್ನು ಬಿಟ್ಟುಬಿಡಿರಿ ನನಗೆ ಏಕಾಂತವಾಸದ ಅಪೇಕ್ಷೆ ಇದೆಯೆಂದು ಅವರು ಪದೇ ಪದೇ ಹೇಳುತ್ತಿದ್ದರೂ ಅವರನ್ನು ಜನಗಳು ಹಿಂಬಾಲಿಸುತ್ತಲಿರುವರು ಕಾಯಕಷ್ಟವೇ ಮಾನವಧರ್ಮ ಎಂಬ ವಿಷಯವನ್ನು ಕುರಿತು ಅವರು ಈ ವಾರ ಪ್ರಾರ್ಥನೋತ್ತರ ಭಾಷಣದಲ್ಲಿ ವಿವರಿಸಿದರು.

ಮುಸ್ಲಿಂಲೀಗ್‌ನವರನ್ನು ಹೊರತಳ್ಳಿರಿ.

ಘಟನಾಸಮಿತಿಯಲ್ಲಿ ಸಹಕರಿಸದೆ, ನಡುಗಾಲ ಸರ್ಕಾರದಲ್ಲಿ ಲೀಗ್ ಮಂತ್ರಿಗಳು ಇರಲಾಗುವುದಿಲ್ಲೆಂದು ಪಂಡಿತ ನೆಹರೂರವರು ವೈಸ್ರಾಯರಿಗೆ ತಿಳಿಸಿರುತ್ತಾರೆಂದು ವ್ಯಕ್ತವಾಗಿದೆ. ನಡುಗಾಲ ಸರ್ಕಾರದಲ್ಲಿ ಲೀಗಿನವರನ್ನು ತೆಗೆದುಕೊಳ್ಳುವಾಗ ಸಹಕಾರದ ವಾಗ್ದಾನವನ್ನು ಪಡೆದು ಅವರಿಗೆ ಸ್ಥಳಕೊಡಲಾಗಿತ್ತು ಈಗ ಅವರು ಅಸಹಕಾರ ಹೂಡಿರುತ್ತಾರೆ.

ಲೀಗಿನ ಉತ್ತರ

ನಡುಗಾಲ ಮಂತ್ರಿಗಳಾಗಿ ಉಳಿಯಲು ಕಾಂಗ್ರೆಸ್‌ನವರಿಗೆ ಎಷ್ಟು ಹಕ್ಕಿದೆಯೋ ತಮಗೂಕೂಡ ಅಷ್ಟೇ ಹಕ್ಕುಂಟೆಂದು ಲೀಗ್‌ಮಂತ್ರಿಗಳು ವೈಸ್ರಾಯರಿಗೆ ಬರೆದಿರುವಂತೆ ಪ್ರಕಟನಾಗಿದೆ. ವೈಸ್ರಾಯರು ಅವರ ಪತ್ರವನ್ನು ಲಂಡನ್ನಿಗೆ ಕಳುಹಿಸಿರುವರಂತೆ.

ಸರಕಾರದ ಮಂತ್ರಿಗಳಿಗೆ ಅಪ್ಪಣೆ ಇಲ್ಲ

ಪಂಜಾಬಿನ ಜೈಲುಗಳಲ್ಲಿ ಸೆರೆಹಿಡಿಯಲ್ಪಟ್ಟ–ಮುಸ್ಲಿಂಲೀಗ್ ಧುರೀಣರನ್ನು ಭೇಟಿಯಾಗಲು ನಡುಗಾಲ ಸರ್ಕಾರದ ಆರೋಗ್ಯಮಂತ್ರಿ ಗಜ್ನಫರ ಅಲಿಖಾನರಿಗೆ ಪಂಜಾಬ ಸರಕಾರವು ಅಪ್ಪಣೆ ಕೊಡಲಿಲ್ಲ.

ಇಂಗ್ಲೆಂಡಿನಲ್ಲಿ ಸಂಕಟ

ಕಲ್ಲಿದ್ದಲಿನ ಅಭಾವದಿಂದ ಇಂಗ್ಲೆಂಡಿನ ಸಾವಿರಾರು ಕಾರ್ಖಾನೆಗಳಿಗೆ ವಿದ್ಯುತ್ತಿನ ಪೂರೈಕೆಯಾಗದೆ ಇದೆ. ೭೦ ಲಕ್ಷ ಕೆಲಸಗಾರರಲ್ಲಿ ೩೦ ಲಕ್ಷ ಕೂಲಿಗಾರರಿಗೆ ಕೆಲಸವಿಲ್ಲದಂತಾಗಿದೆ. ಇಂಗ್ಲೆಂಡಿನಿಂದ ಪರದೇಶಗಳಿಗೆ ನಿರ್ಯಾತವಾಗುವ ಮಾಲುಗಳ ಉತ್ಪಾದನೆಗೆ ಧಕ್ಕೆ ಬಡಿದು ಬಂಡವಳಗಾರರಿಗೆ ಕೋಟಿಗಟ್ಟಲೆ ಪೌಂಡು ಲುಕ್ಸಾನು ಸಂಭವಿಸಬಹುದು.

ಪಂಜಾಬಿನಲ್ಲಿ ಮುಸ್ಲಿಂಲೀಗಿನವರ ಚಳವಳಿಸಾಗಿದೆ ಇದುವರಿವಿಗೆ ೧೦ ಸಾವಿರಕ್ಕಿಂತಲೂ ಹೆಚ್ಚಿಗೆ ಕೈಸೆರೆಯಾಗಿರುವರು ೭೭ ಜನಶಾಸನ ಸದಸ್ಯರಲ್ಲಿ ೭೪ ಜನರು ಕಾಯ್ದೆಭಂಗಮಾಡಿ ಜೇಲು ಸೇರಿರುವರು

ಕೊಡ್ಲಿಗೆ.

ಹೈಸ್ಕೂಲಿನಲ್ಲಿ ಕಹಶೀಲ್ದಾರ್ ಶ್ರೀ ಭೀಮಸೇನರಾಯರಧ್ಯಕ್ಷತೆಯಲ್ಲಿ 'ಇಚ್ಚಗೆಯ ಸಾಹಿತ್ಯ' ದ ವಿಷಯವಾಗಿಯೂ, ಮಧ್ವನವಮಿಯ ಸಂದರ್ಭದಲ್ಲಿ ಶ್ರೀ ಭೀಮಸೇನಾಚಾರ್ಯರಧ್ಯಕ್ಷತೆಯಲ್ಲಿ 'ಸರ್ವಜ್ಞಾಚಾರ್ಯರಹಸ್ಯ' ದ ಮೇಲೂ, ಉಪಾಧ್ಯಾಯ ಸಂಘದಲ್ಲಿ 'ಕಾವ್ಯ ಮತ್ತು ಸಾಹಿತ್ಯದ ವೈಶಿಷ್ಟ್ಯದ ಮೇಲೂ ಶ್ರೀ ವಿಜಯೇಂದ್ರರು ಭಾಷಣ ಕೊಟ್ಟರು.

ಶ್ರೀ ವಿತಲ ಶೇಷಪ್ಪನವರ ದಾನ

ರಾವು ಸಾಹೇಬ ವಿತಲ ಶೇಷಪ್ಪನವರು ತಮ್ಮ ಮರಿಮಗಳಾದ ಸೌ। ಲಕ್ಷ್ಮಿಕಾಂತಮ್ಮನ ವಿವಾಹ ಮಹೋತ್ಸವದ ಜ್ಞಾಪಕಾರ್ಥವಾಗಿ ಕ್ರಾಫರ್ಡ್ ಲೇಡೀಸ್ ಕ್ಲಬ್‌ನ ಕಟ್ಟಡದ ವಿಸ್ತಾರಕ್ಕಾಗಿ ರೂ. ೧೦೦೦ ಸಾವಿರ ರೂಪಾಯಿ ದಾನಕೊಟ್ಟರು ಗವರ್ನರ ಪತ್ನೀಮಣಿ ಲೇಡಿನೈರವರು ಶ್ರೀಮತಿ ಲಕ್ಷ್ಮಿಕಾಂತಮ್ಮನ ಭಾವಚಿತ್ರದ ಅನಾವರಣೆಯನ್ನು ಕ್ಲಬ್‌ನಲ್ಲಿ ನಿರವೇರಿಸಿದರು.



Guarranteed Pure Pyra Gingelly oil

Best for Pickles, Cooking & Cooling

DISTRIBUTORS:—

1. M/S. V. M. GIRI & SONS,
(Pro:- M, S Acharya Car Street, Bellary
2 M/S. . HUSANJEE RAO. M VENKOJI RAO
General Merchants, Car Street Bellary.

ಶುದ್ಧ ! ಗ್ಯಾರಂಟಿಯಾದ್ದು !! ಸತ್ಕಾರಿ !!!

—ಪೈರ ಎಳ್ಳೆಣ್ಣೆ—

ಕಣ್ಣಿಗೆ ಬಹಳ ತಂಪಾದ್ದು. ಅಡಿಗೆಯ ಎಲ್ಲಾ ಪದಾರ್ಥಗಳಿಗೆ ಬಳಸಲು ಶ್ರೇಷ್ಠವಾದ ಎಣ್ಣೆಯಿದು. ಉಪ್ಪಿನಕಾಯಿಗೆ ಈ ಎಣ್ಣೆಯನ್ನುಪಯೋಗಿಸುವದರಿಂದ ಬಹಳಕಾಲ ಕೆಡದಂತಿಡಬಹುದು.

ಪಂಜೆಲಧಿಕಾರ ಉಳ್ಳವರು. 1) ವಿ ಎಂ. ಗಿರಿ ಅಂಡ್ ಸನ್ಸ್-ತೇರು ಬೀದಿ, ಬಳ್ಳಾರಿ. (ಎಂ. ಎಸ್. ಆಚಾರ್ಯ)
2) ಎಂ. ಹುಸೇಂಜಿರಾವ್, ಎಂ. ವೆಂಕೋಬರಾವ್. ತೇರುಬೀದಿ, ಬಳ್ಳಾರಿ.

ಸು ಭಾ ಸ್

ರಾ ಷ್ಟ್ರ ಗೀ ತೆ.

ಸಿದ್ಧವಾಯಿತು— ಕ್ರಯ ೦—೮—೦

ಸುಂದರ ಮುದ್ರಣ— ಇಲ್ಲಿಯವರಿವಿಗೆ ಪ್ರಭಾತ ಫೇರಿ, ರಾಷ್ಟ್ರೀಯ ಸಮಾವೇಶಗಳಲ್ಲಿ ಹಾಡಲ್ಪಟ್ಟ ಎಲ್ಲಾ ಮುಖ್ಯ ದೇಶಭಕ್ತ ಕವಿಗಳ ಕನ್ನಡ ಮತ್ತು ಹಿಂದೀ ಭಾಷೆಯಲ್ಲಿನ ರಾಷ್ಟ್ರಗೀತೆಗಳ ಸಮಗ್ರ ಸಂಗ್ರಹ. ಕರ್ನಾಟಕದಲ್ಲಿ ರಾಷ್ಟ್ರ ಗೀತೆಗಳ ಇಷ್ಟು ದೊಡ್ಡ ಸಂಗ್ರಹವು ಇದುವರೆಗೆ ಪ್ರಕಟವಾ ಗಿಲ್ಲ. ಸ್ವಲ್ಪೇ ಪ್ರತಿಗಳು ಪ್ರಕಟವಾಗಿವೆ. ಹೆಚ್ಚು ಕೊಳ್ಳುವ ವರಿಗೆ ಕಮಿಷನ್ ಕೊಡಲಾಗುತ್ತದೆ.

'ನವಭಾರತ' ಕಾರ್ಯಾಲಯ ಬಳ್ಳಾರಿ.

—ರಾಷ್ಟ್ರೀಯ ಪುಸ್ತಕಗಳು.—

— ಕಾಂಗ್ರೆಸ್ ಸ್ವರೂಪ ದರ್ಶನ —

ರಾಷ್ಟ್ರೀಯ ಶಿಕ್ಷಣ	0—8—0
ಅಸ್ಪೃಶ್ಯತಾ-ನಿವಾರಣೆ	0—12—0
ಪ್ರಾಂತಭಾಷೆ-ರಾಷ್ಟ್ರಭಾಷೆ	0—6—0
ಖಾದಿ	0—8—0
ಕಾಂಗ್ರೆಸ್ ಮತ್ತು ಸ್ವಯಂಸೇವಕದಳ	0-10-0
ಸತ್ಯಾಗ್ರಹ (ಇತಿಹಾಸ-ತಂತ್ರ)	0—8—0

ವಿ. ಪಿ ಖರ್ಚುಬೇರೆ. ಇನ್ನು ಅನೇಕ ಪುಸ್ತಕಗಳು ದೊರೆಯುತ್ತವೆ —

ನವಭಾರತ ಕಾರ್ಯಾಲಯ, ಬಳ್ಳಾರಿ.

NAVA BHARAT, BELLARY. Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು.	Subscription Rates
ವರ್ಷಕ್ಕೆ 5-0-0	One Year 5—0—0
6 ತಿಂಗಳಿಗೆ 3-0-0	Six months 3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

SRI..... .. ..

....

....

Printed at Krishna Press Bellary QH No. B 17 FOR (Q.H. No. B-5)
Edited & Published by T. B. KESHAVARAO

ಕೈಹಿಂದ್ Reg. No. M. 4746

ನವಚೇತನ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಕಟ್ಟು ೬ ಸಂಚಿಕೆ ೮ ಬಳ್ಳಾರಿ ಫಿಬ್ರವರಿ ೨೪ ಸೋಮವಾರ ೧೯೪೬ ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವ್.

ಪೂರ್ವ ಕರ್ನಾಟಕದ ಮಹಾ ಪರಿಷತ್ತು

ಆಮಂತ್ರಣ

ಸ್ಥಳ:— ಉರವಕೊಂಡ (ಜಿಲ್ಲಾ ಅನಂತಪುರ)

ದಿನಗಳು:—೧೯೪೬ ನೆಯ ಮಾರ್ಚಿ ೨—೩ ತಾ॥ ಆದಿತ್ಯವಾರ ಮತ್ತು ಸೋಮವಾರ

ವಿಷಯಗಳು:— ಕರ್ನಾಟಕ ಪ್ರಾಂತದ ಚರಿತ್ರೆ, ಭಾಷೆ, ಸಾಹಿತ್ಯ, ಸಂಸ್ಕೃತಿ, ಮತ್ತು ಅವರ ನ್ಯಾಯವಾದ ಹಕ್ಕುಗಳ ಸಂರಕ್ಷಣೆಯನ್ನು ಕುರಿತ ತೀರ್ಮಾನಗಳಾಗಲಿವೆ.

ಪ್ರತಿನಿಧಿಗಳಿಗೂ, ಆಹ್ವಾನಿತರಿಗೂ, ನೋಡ ಬರುವ ಎಲ್ಲಾ ಪ್ರೇಕ್ಷಕರಿಗೂ ಉಚಿತವಾಗಿ ಊಟ ವಸತಿಗಳ ಏರ್ಪಾಟನ್ನು ಉರವಕೊಂಡ ಗವಿಸಂಪ್ರಾನ ಮಠದ ಜಗದ್ಗುರುಗಳು ವಹಿಸಿರುವರು. ಬಳ್ಳಾರಿ, ಕರ್ನೂಲು ಕಡಪಾ, ಚಿತ್ತೂರು, ಅನಂತಪುರ ಜಿಲ್ಲೆಗಳ, ಮತ್ತು ಕರ್ನಾಟಕದ ಎಲ್ಲಾ ಮೂಲೆಗಳ ಕನ್ನಡಿಗರು ದಯಮಾಡಿಸಿ ಪರಿಷತ್ತನ್ನು ಯಶಸ್ವಿಗೊಳಿಸಲು ಆಗ್ರಹದ ವಿನಂತಿ. **ಸ್ವಾಗತ ಸಮಿತಿ॥ ಅಧ್ಯಕ್ಷ, ಜೋಳದರಾಶಿ ದೊಡ್ಡನಗೌಡ**

ಕಾರ್ಯದರ್ಶಿ. ಬದನೇಹಾಳು ರಂಗನಗೌಡ.

—: ಬ್ರಿಟಿಷ ಪ್ರಧಾನಿ ಪ್ರಕಟನೆ :—

೧೯೪೮ ಕ್ಕೆ ಜೂ೯ಕ್ಕೆ ಹಿಂದುಸ್ತಾನ್ತ ಬಿಟ್ಟುಹೋಗುವೆವು.

ಹಿಂದುಸ್ತಾನದ ವಿವಿಧ ರಾಜಕೀಯ ಬಣಗಳಲ್ಲಿ ಐಕ್ಯವಾಗಬಹುದೆಂದು ಆಶಿಸಿದ್ದೆವು. ಅದರೆ ಹೀಗಾಗಲಿಲ್ಲ. ನಾವು ಸುಮ್ಮನೇ ಕೂತಬರುವಂತಿಲ್ಲ. 1948 ನೆಯ ಜೂ೯ ತಿಂಗಳ ಒಳ್ಗೆರಿನೊಳಗಾಗಿ ನಾವು ಅಧಿಕಾರವನ್ನು ಒಪ್ಪಿಸಿ ಹಿಂದುಸ್ತಾನವನ್ನು ಬಿಟ್ಟು ಹೊರಟು ಹೋಗುವೆವು. ಅಷ್ಟರೊಳಗಾಗಿ ಅಧಿಕಾರಯುತವಾದ ರಾಜ್ಯ ಘಟನೆಯು ಜಾರಿಯಲ್ಲಿ ಬರದಿದ್ದರೆ ಈಗಿರುವ ನಡುಗಾಲ ಸರಕಾರಕ್ಕೇ ರಾಜ್ಯವನ್ನೊಪ್ಪಿಸುವೆವು. ಸಂಸ್ಥಾನಿಕರ ಸ್ವಾತಂತ್ರ್ಯವು ನಾವು ಹೊರಟು ಹೋಗುವದರಿಂದ ಅಂತವಾಗುವದಿಲ್ಲ ಹೀಗೆಂದು ಗುರುವಾರ ಪಾರ್ಲಿಮೆಂಟಿನಲ್ಲಿ ಹೇಳಿಕೆ ಕೊಟ್ಟರು.



ಪ್ರಕಟನೆಯ ೧೦ ನೆಯ ವರ್ಷ
೨೪ ಫೆಬ್ರವರಿ ೧೯೪೭

ಬ್ರಿಟಿಷ್ ಪ್ರಧಾನಿಗಳ ಪ್ರಕಟನೆ.

ಬ್ರಿಟಿಷ್ ಪ್ರಧಾನಿಗಳಾದ ಮೇಜರ್ ಆಟ್ಲಿಯವರು ಕಳೆದ ಗುರುವಾರ ಪಾರ್ಲಿಮೆಂಟರಿ ಸಭೆಯಲ್ಲಿ ಹಿಂದುಸ್ತಾನದ ವಿಷಯವಾಗಿ ಒಂದು ಪ್ರಾಮುಖ್ಯವಾದ ಹೇಳಿಕೆಯನ್ನು ಕೊಟ್ಟಿರುವರು. 1948 ನೆಯ ಜೂನ್ ಆಖೈರದೊಳಗಾಗಿ ತಾವು ಹಿಂದೂಸ್ತಾನವನ್ನು ಬಿಟ್ಟು ಹೋಗಲಿರುವೆವೆಂದು ಹೇಳಿದ್ದಾರೆ ಅಷ್ಟರೊಳಗಾಗಿ ಹಿಂದೂಸ್ತಾನದ ವಿವಿಧ ಬಣಗಳಲ್ಲಿ ವಿಕಾಭಿಪ್ರಾಯವಾಗಿ ಸರ್ವರಿಂದ ಅಂಗೀಕೃತವಾದ ರಾಜ್ಯ ಘಟನೆಯು ಜಾರಿಗೆ ಬರದಿದ್ದಲ್ಲಿ. ಈಗಿರುವ ನಡುಗಾಲ ಸರ್ಕಾರಕ್ಕೇ ಅಧಿಕಾರವು ಒಪ್ಪಿಸಲ್ಪಡಬಹುದೆಂಬ ಸೂಚನೆಯೂ ಇದೆ. ಬಹಳ ಸಂತೋಷ-

ಪೂರ್ಣಾಧಿಕಾರನನ್ನು ಒಪ್ಪಿಸುವ ವಿವರಗಳು ಪ್ರಕಟವಾಗಿಲ್ಲ. ಅಲ್ಲದೆ ಸಂಸ್ಥಾನಾಧೀಶರ ನಿರಂಕುಶಾಧಿಕಾರವು ಅಂತವಾಗುವ ಲಕ್ಷಣಗಳಿಲ್ಲ ಬ್ರಿಟಿಷ್ ಪ್ರಕಟನೆಯ ಪ್ರಕಾರಕ್ಕೆ, ಬ್ರಿಟಿಷ್ ಅಧಿಕಾರವು ತೊಲಗುವುದರಿಂದ ಸಂಸ್ಥಾನಾಧೀಶರ ಸ್ವಾತಂತ್ರ್ಯಕ್ಕೆ ಈಗಿರುವ ಅಧಿಕಾರ ಕ್ರಮಕ್ಕೆ ಭಂಗವಿರುವಂತಿಲ್ಲವೆಂದು ಗೊತ್ತಾಗಿದೆ.

ಬ್ರಿಟಿಷ್ ಪ್ರಕಟನೆಯಲ್ಲಿ ಪ್ರಾಮಾಣಿಕತೆಯಿದ್ದರೆ ಭಾರತೀಯರಲ್ಲಿ ಐಕ್ಯವಾಗಲೇ ಬೇಕು. ಹಿಂದೂ, ಮುಸ್ಲಿಂ ಐಕ್ಯಕ್ಕೆ ಇಷ್ಟಿಲ್ಲವೆಂಬಿನೆ ಬ್ರಿಟಿಷ್ ಅಧಿಕಾರಿಗಳೂ, ಅವರ ಭೇದ ನೀತಿಯೂ ಕಾರಣವಾಗಿತ್ತು. ಹಿಂದೆ ಆದ ದಂಗೆಗಳ ಚರಿತ್ರೆಯನ್ನು ಪರಿಶೀಲಿಸಿದರೆ ಬ್ರಿಟಿಷ ಅಧಿಕಾರಿಗಳ ಕೂಟನೀತಿ ಚನ್ನಾಗಿ ವ್ಯಕ್ತಪಡುತ್ತೆ ವೈಸ್ರಾಯಿ ಲಾರ್ಡ ವೇವೆಲ್ಲರು ನಡುಗಾಲ ಸರ್ಕಾರದಲ್ಲಿ ಮುಸ್ಲಿಂ ಲೀಗಿನವರನ್ನು ತಂದು ಅಲ್ಲಿ ಭಿನ್ನಭೇದಗಳಿಗೆ ಕಾರಣರಾಗಿದ್ದಾರೆ.

ಈಗಿನ ಪರಿಸ್ಥಿತಿಯಲ್ಲಿ ಮುಸಲ್ಮಾನರು ಬ್ರಿಟಿಷ್ತ್ವ ಪ್ರಕಟನೆಯಿಂದ ಪಾಠ ಕಲಿಯಬೇಕಾಗಿದೆ ಪಾಕಿಸ್ತಾನವು ಬ್ರಿಟೀಷರಿಂದ ಲಭ್ಯವಾಗುವದಿಲ್ಲ ಅವರು ಎಂದಿಗಾದರೂ ಹಿಂದುಸ್ತಾನದಲ್ಲಿ ನೆಲೆಸಿರುವ ಹಿಂದೂ, ಸಿಕ್ ಕ್ರಿಶ್ಚಿಯನ ಪಾರ್ಶಿಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲೇ ಬೇಕು ಎಲ್ಲರ ಹಿತದ ದೃಷ್ಟಿಯಿಂದ ರಚಿಸಲ್ಪಡುವ ರಾಜ್ಯಘಟನೆಯ ವಿಷಯವು ಘಟನಾ ಸಮಿತಿಯಲ್ಲಿ ಚರ್ಚಿಸಲ್ಪಡುತ್ತಲಿದೆ ಇದರಲ್ಲಿ ಈವರೆವಿಗೆ ಲೀಗಿನವರು ಸಹಕರಿಸಿರುವುದಿಲ್ಲ. ಲೀಗ್ ಧುರೀಣ ಜಿನ್ನಾರವರು ಹಿಂದೂಸ್ತಾನದ ಶತ್ರುವಾದ ಚರ್ಚಿಲರ ಬೆಂಬಲವನ್ನು ಕೋರಿದ್ದರು. ಈಗ ಯಾರೂ ಅವರ ಬೆಂಬಲಕ್ಕೆ ಬರುವುದಿಲ್ಲ. ತಮ್ಮ ಆಶಾಕಾಂಕ್ಷೆಗಳು ಭಾರತೀಯರಿಂದಲೇ ಪೂರ್ಣವಾಗಬೇಕಾಗಿವೆ. ಲೀಗಿನವರು ಸಹಕರಿಸುವರೆಂದು ಆಶಿಸೋಣ

ಪೂರ್ವ ಕರ್ನಾಟಕಸ್ಥರ ಮಹಾಪರಿಷತ್ತು

ಅನಂತಪುರದ ಜಿಲ್ಲಾ ಉರವಕೊಂಡದಲ್ಲಿ ಮಾರ್ಚಿ 2-3 ನೆಯ ದಿನಾಂಕ ಕೂಡುವ ಈ ಪರಿಷತ್ತು ಅನೇಕ ವಿಧಗಳಿಂದ ಮುಖ್ಯವಾದುದಾಗಿದೆ. ಪೂರ್ವ ಜಿಲ್ಲೆಗಳಲ್ಲಿ ನೆಲೆಸಿರುವ ಕನ್ನಡಿಗರ ಭಾಷೆ ಸಾಹಿತ್ಯ ಸಂಸ್ಕೃತಿಗಳು ಅನ್ಯಾಯವಾದ ಜಮಾಬಂದಿ ಒಲುಮೆಯಿಂದ ಅನೈಕ್ಯವಾಗುತ್ತಲಿವೆ. ಪಶ್ಚಿಮದಲ್ಲಿರುವ ಜಿಲ್ಲೆಗಳ ಕನ್ನಡಿಗರಿಗೆ ಜನ್ಮಸಿದ್ಧ ಹಕ್ಕುಗಳೂ ಕೂಡ ಅನ್ಯಾಯವಾಗುತ್ತಲಿವೆ. ಅಲ್ಲಿಯ ಕನ್ನಡಿಗರು ತಮ್ಮ ಗೌರವವನ್ನು ಮರೆತು ಅಂಡೋಳಿಸಿ ನಡೆಸಲಾರದೆ. ನಿರ್ವೀರ್ಯರಾಗಿ ಪರನಾಡಿನ ಪರಭಾಷಾ ಸಂಸ್ಕೃತಿಗಳ ಗುಲಾಮರಾಗಿ ಕೊಳಲಿ ಬಳಲುತ್ತಿರುವರು

(11 ನೆಯ ಪುಟದಲ್ಲಿ ಮುಂದುವರಿದಿದೆ)



10th Year of Publication.
27TH, FEBRUARY 1947

The Editor does not hold himself responsible for the opinions of various correspondents expressed in these columns,

Correspondence:—

Constructive Criticism Please!

Mr. K. Venkoba Rao of Hospet writes:—

The 'Conscientious' in criticising the Prakasam ministry is destructive in his criticism. He cannot mislead all people. He should have given facts and figures to substantiate the inferences he has drawn. Mr Prakasam is not sticking to his job like a leech, His textile policy is not the appeasement of the high command but it is intrinsically sound and is calculated to help the masses in the long run. He is not an enemy of the ceded districts and his uplift schemes equally apply to these districts as much as to Circars. The present need of the hour is the unity in congress ranks. Criticise one must, but, it should be cons--tructive please.

ದಿವಂಗತ ವೀರಣ್ಣನವರು

ವೆಂಕಟಾಪುರದ ವೀರಣ್ಣನವರು ೧೩ ನೆಯ ದಿನಾಂಕ ಗಂಗಾವತಿಯಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವ್ಯಸನವಾಗುತ್ತದೆ. ಇವರು ದೇಶಭಕ್ತರಿದ್ದು ೧೯೪೨ ರ ಚಳವಳಿಯಲ್ಲಿ ಸ್ಥಾನ ಬದ್ಧರಾಗಿರಿಸಲ್ಪಟ್ಟಿದ್ದರು. ೨೫-೩೬ ವಯಸ್ಸಿನ ಈ ತರುಣ ಹಾಸ್ಯರಸ ಪ್ರೇಮಿಯಿಂದ ವೆಲ್ಲೂರು ಕಂಜಾವೂರ ಕನ್ನಡ ಕೈದಿಗಳಿಗೆ ಮನರಂಜನೆಯಿತ್ತು. ಇವರು ತಮ್ಮ ತಂದೆಗಳಿಗೆ ಏಕಮಾತ್ರ ಪುತ್ರರಿದ್ದು ಕುಟುಂಬಕ್ಕೆ ಅತೀವ ಹಾನಿಯಾಗಿದೆ. ದೇವರು ಕುಟುಂಬೀಕರಿಗೆ ಸಾಕಷ್ಟು ಧೈರ್ಯವನ್ನು, ಮೃತರಿಗೆ ಅತ್ಯ ಶಾಂತಿಯನ್ನು ಕೊಡಲಿ.

ಬಳ್ಳಾರಿ.

ಹಿಂದೂಸ್ತಾನ ಸ್ವಾಮ್ಯದ ಚಟುವಟಿಕೆಗಳಲ್ಲಿ ಮಾರ್ಚ ೧ ರಿಂದ ೬ ರವರೆಗ ರಾಯದುರ್ಗತಾಲೂಕು ಹಿರಿಯಾಳು ತೋಟದಲ್ಲಿ ಸ್ತ್ರೀಯರಿಗಾಗಿ ಶಿಕ್ಷಣವು (The flock leaders Training' Camp for ladies) ಕೊಡಲಾಗುತ್ತ. ಜಿಲ್ಲಾ ಮಹಾಸಭೆಯ ಮಾರ್ಚ ಬಳ್ಳಾರಿಯಲ್ಲಿ ನಡೆಯುತ್ತದೆ. ಪ್ರತಿನಿಧಿ ರೂ. ಶುಲ್ಕದೊಂದಿಗೆ ಬರುವವರು ಶ್ರೀ ರಾಚಯ್ಯ ಹೀರದ ಸೂಗೆಮ್ಮನಶಾಲೆ ಬಳ್ಳಾರಿ ಇವರಿಗೆ ತಿಳಿಸಬೇಕು ಊಟವಸತಿ ಸಾಕಷ್ಟು ಸೂಚನೆ ಕೊಟ್ಟರೆ ಏರ್ಪಾಡಾಗಲಾಗುತ್ತ ಆವಿನರ್ಯಾಲಿಯೂ ಉಂಟು

ಮಹಾತ್ಮ ಗಾಂಧಿಯವರನ್ನು ನೌಖಾಲಿಯಿಂದ ಹೊರಡಿಸಲು ಬಂಗಾಳದ ಹಿಂದಿನ ಮುಖ್ಯ ಮಂತ್ರಿಯ ಹಕ್ಕರು ನಿಶ್ಚಯಿಸಿ, ಈಗ ಅಲ್ಲಿಗೆ ಹೋಗಿರುವರು

92

ಹುಣ್ಣಿನ ಮೇಲೆ ಬರೆ

ನಮ್ಮ ಎಲೆಯಲ್ಲಿ ಕತ್ತೆ ಸತ್ತುಬಿದ್ದಿರುವಾಗ ಎರಡನೆಯವನ ಎಲೆಯಲ್ಲಿ ನೊಣ ಜಾಡಿಸಲಿಕ್ಕೆ ಹೋಗುವದು ಸುಲಭ. ಸಾಮ್ರಾಜ್ಯ ಪ್ರಥಮ ಹಕ್ಕನ್ನು, ಬಿಟ್ಟುಗೊಡಬೇಕೆಂದು ಅಮೇರಿಕನ್‌ರು ಬ್ರಿಟನ್ನಿಗೆ ತಿಳಿಸಿರುವರೆಂದು ಸುದ್ದಿ. ಅಮೆರಿಯವರು ವ್ಯಾಪಾರ ಸಂಘದ ಅಧ್ಯಕ್ಷ ಸ್ಥಾನದಿಂದ ಮಾತಾಡುತ್ತ ಇಂಥ ಸಂಗತಿಯ ಸಂಭಾವ್ಯತೆಯನ್ನು ನಿಷೇಧಿಸಿದ್ದಾರೆ. ಪೇಟೆಯಲ್ಲಿ ನೇರವಾದ ಸ್ಪರ್ಧೆನಡಿಸುವದು ಬ್ರಿಟಿಶ ಉತ್ಪಾದಕರಿಗೆ ಅಶಕ್ಯವಾಗಿದೆಂದು ನಾಚಿಕೆಯಿಲ್ಲದೆ ಹೇಳಿದರು. ಅಯೋಗ್ಯತೆಗೆ ಪ್ರತ್ಯಕ್ಷ ಒಪ್ಪಿಗೆಯಲ್ಲವೆ ಇದು? ಸಾಮ್ರಾಜ್ಯ 'ಪ್ರಥಮ ಹಕ್ಕಿನ' ಸಂಬಂಧದಲ್ಲಿ ನಿಯಂತ್ರಣಾಧಿಕಾರ ಬ್ರಿಟನ್‌ಕ್ಕೆದೆಂದು ತಿಳಿದು ಇದನ್ನು ತರ್ಕಬದ್ಧವಾಗಿ ನೆರೆಗೆ ಹಚ್ಚಿದರೆ ತನಗೆ ಅನುಕೂಲವಾಗುವಂತೆಯೆ ಬ್ರಿಟನ್ ಸಾಮ್ರಾಜ್ಯ ರಾಷ್ಟ್ರಗಳಲ್ಲಿಯ ವ್ಯಾಪಾರವನ್ನಳಿಯಲು ಪ್ರಯತ್ನಿಸುವದೆಂದು ಇದರ ಅರ್ಥವಾಗುವದಿಲ್ಲವೆ? ಹಿಂದುಸ್ತಾನಕ್ಕೆ ಇದರಿಂದ ನ್ಯಾಯ ಸಿಕ್ಕುವದೆ?

ಯುಕ್ತ ರಾಷ್ಟ್ರಸಂಘದ ಆರ್ಥಿಕ ಮತ್ತು ಸಾಮಾಜಿಕ ಸಮಿತಿಯು ರಚಿಸಿದ ಯುಕ್ತರಾಷ್ಟ್ರ ಪರಿಷತ್ತಿನ ವ್ಯಾಪಾರ ಮತ್ತು ಉದ್ಯೋಗ ಸಮಿತಿಯವು ಲಂಡನ್ನಿನಲ್ಲಿಯ ತಮ್ಮ ಮೊದಲನೆ ಸಭೆಯಲ್ಲಿ ನಿಯಂತ್ರಿತ ವ್ಯಾಪಾರ ರೂಢಿಯನ್ನು ಚರ್ಚಿಸುತ್ತ ಇಂಥ ರೂಢಿ ನಡಾವಳಿಗಳು ಉತ್ಪಾದ ವ್ಯಾವಾರ ಮತ್ತು ಎಲ್ಲ ರಾಷ್ಟ್ರಗಳ ಉತ್ಪನ್ನದ ಅತ್ಯುಚ್ಚ ಮಟ್ಟಕ್ಕೆ ವಿಘಾತಕವಾಗಿವೆಂದು ಒಪ್ಪಿದರು. ಹಿಂದುಸ್ತಾನದ ಉತ್ಪನ್ನ ಪರಿಸ್ಥಿತಿ ಕೆಳಗಿನ ಮಟ್ಟದಲ್ಲಿರುವದರಿಂದ ನಾವು ಬಾಲ್ಯಾವಸ್ಥೆಯಲ್ಲಿದ್ದ ನಮ್ಮ ಉದ್ಯೋಗಗಳಿಗೆ ಸಂರಕ್ಷಣೆಯನ್ನು ಕೊಡುತ್ತ ಹೋಗುವದು ನನಗೆ ಕಠಿಣಕರವಾದ ಸಂಗತಿಯೆಂದು ಮೇಲಿನ ವಿವೇಚನೆಯಿಂದ ಸ್ಪಷ್ಟವಾಗುವದು. ಮೇಲೆ ಉಲ್ಲೇಖಿಸಿದ ಅಂತರರಾಷ್ಟ್ರೀಯ ಸಂಸ್ಥೆ ತನ್ನ ಸ್ವಾರ್ಥಕ್ಕಾಗಿಯಾದರೂ ಎಲ್ಲ ಬಗೆಯ ನಿಯಂತ್ರಣ, ರೂಢಿ ನಡಾವಳಿಯನ್ನು ಪ್ರತಿಬಂಧಿಸಲು ಶಕ್ಯವಿದ್ದ ಉಪಾಯಗಳನ್ನೆಲ್ಲ ಯೋಜಿಸಬೇಕೆಂದು ಸಲಹೆಯಿತ್ತಿದೆ.

ಯುಕ್ತ ರಾಷ್ಟ್ರ ಸಮಿತಿಗಳಲ್ಲಿ ಪಕ್ಷಪಾತ ಭಾವನೆ ತುಂಬಿದೆಂದು ಇದರಿಂದ ಗೊತ್ತಾಗುವದು. ಹತ್ತಿಕ್ಕಲ್ಪಟ್ಟ ರಾಷ್ಟ್ರಗಳು ಇದರಿಂದ ನ್ಯಾಯವನ್ನು ಹೇಗೆ ಆಶಿಸಬಲ್ಲವು.

ಅಂಬುಲನ್ಸ ಮೋಟಾರ.

ಮದ್ರಾಸ್ ಸರ್ಕಾರದವರು ಬಳ್ಳಾರಿಯಲ್ಲಿ ಈ ಮೋಟಾರನ್ನು ಇಟ್ಟು ಅದಕ್ಕೆ ಶಿಬ್ಬಂದಿಯನ್ನಿಟ್ಟಿರುವರು ಅಪಾಯಗಳಿಗೊಳಗಾದವರು, ರೋಗಿಗಳು ಘಾಸಿ ಹೊಂದಿದವರನ್ನು ಎಲ್ಲಾ ಸಮಯಗಳಲ್ಲಿ ಆಸ್ಪತ್ರೆಗೆ ಒಯ್ಯಲು ಸಿದ್ದರಿರುತ್ತಾರೆ. ಮೃತಶರೀರಗಳನ್ನು ಅಂಟುರೋಗಗಳಿಂದ ನರಳುತ್ತಿರುವವರನ್ನು ಇದರ ಮೂಲಕ ಸಾಗಿಸುವುದಿಲ್ಲ. ಬಹಿರಂಗ ಪ್ರದೇಶಗಳಲ್ಲಿ ಪ್ರಮೋದಗಳಿಗೆ ಗುರಿಯಾದವರು ದುಸುಂಕೂಡ ಬೇಕಾಗಿಲ್ಲ. ಡಾಕ್ಟರ್ ಸರ್ಟಿಫಿಕೇಟ್ ಹೊಂದಿದ ಬಡವರಿಗೆ ಫೀ ತಗ್ಗಿಸಲ್ಪಡುವುದು. ಮುನಿಸಿಪಾಲಿಟಿ ಗಡಿಯಲ್ಲಿ ಎಷ್ಟುದೂರವಾದರು 2ರೂ. ಕೊಡಬೇಕು. ಪಟ್ಟಣದ ಹೊರಗೆ ೩೦ ಮೈಲಿಗಳಿಗೆ ದೂರವಿಲ್ಲದಂತೆ ಮೈಲಿಗೆ ೦-೮-೦ ಪ್ರಕಾರಕೊಟ್ಟು ಒಯ್ಯಬಹುದು. ಈ ಮೋಟಾರ್‌ಗಳು ಬಳ್ಳಾರಿ ಮುನಿಸಿಪಾಲಿಟಿ ಆಫೀಸ್ ಕಾಂಪೌಂಡದಲ್ಲಿವೆ.

ಸ್ವತಂತ್ರ ಹಿಂದುಸ್ತಾನ ಹೇಗಿರಬೇಕು?

ಮಹಾತ್ಮರು ಕಪಿಲಾತಲಿಯಲ್ಲಿ ಪ್ರಾರ್ಥನೋತ್ತರ ಭಾಷಣಮಾಡುತ್ತ, ಜಾತಿರಹಿತ ಮತ್ತು ವರ್ಗರಹಿತ ಸ್ವತಂತ್ರ ಹಿಂದುಸ್ತಾನದ ಸ್ಥಾಪನೆಯಾಗಬೇಕು. ಆಗ ಲಕ್ಷಾಧೀಶರೂ ಇರತಕ್ಕದ್ದಲ್ಲ; ಭಿಕ್ಷಾಧೀಶರೂ ಇರತಕ್ಕದ್ದಲ್ಲ. ಎಲ್ಲವೂ ರಾಷ್ಟ್ರಕ್ಕೆ ಸೇರಿದುದು. ಯಾಕೆಂದರೆ ರಾಷ್ಟ್ರವು ಅವರದು ಇಂಥ ಧ್ಯೇಯ ಸಾಧನೆಗೆ ನನ್ನ ಪ್ರಾಣವನ್ನರ್ಪಿಸುವೆನೆಂದು ಹೇಳಿದರು.

ಆಹಾರದ ಬಿಕ್ಕಟ್ಟು

ಬಂಗಾಲಿಗಳಿಗೆ ಗಾಂಧೀಜಿ ಉಪದೇಶ

ಆಹಾರ ಬಿಕ್ಕಟ್ಟನ್ನು ಕುರಿತು ನಾನೇನೂ ಹೇಳುತಿರದಿದ್ದರೂ ಪರಿಸ್ಥಿತಿಯ ಅರಿವು ನನಗಿದೆ. ಅದನ್ನು ನನ್ನದೇ ಬಗೆಯಿಂದ ಬಿಡಿಸಲು ನಾನು ಹೆಣಗುತಿದ್ದೇನೆ. ಜನರು ಸರಕಾರವನ್ನಾಗಲಿ ಬೇರಾವದೇ ಸಂಸ್ಥೆಯನ್ನಾಗಲಿ ಸಹಾಯಕ್ಕಾಗಿ ಏಕೆ ಅವಲಂಬಿಸಬೇಕೋ ನನಗೆ ತಿಳಿಯದಾಗಿದೆ ಪರದೇಶಗಳಿಂದ ಆಹಾರ ವಸ್ತುಗಳನ್ನು ಸಂಪಾದಿಸಲು ಕೆಲವರು ಪ್ರಯತ್ನಿಸುವದನ್ನು ನಾವು ಈ ಚೆಗೆ ಕೇಳುತಿದ್ದೇವೆ. ನಿಜವಾಗಿ, ಜನರು ಸ್ವಯಂಸಹಾಯವನ್ನು ಅಥವಾ ಸ್ವಾವಲಂಬನೆಯನ್ನು ಕಲಿತರೆ ಸರಕಾರವು ಚಲಿಸಲೇ ಬೇಕಾಗುವದು. ಇದೇ ನಿಜವಾದ ಪ್ರಜಾತಂತ್ರವೆಂದು ನನ್ನ ಅಂಬೋಣ. ಏಕೆಂದರೆ ಅದು ಕೆಳಗಿನಿಂದ ಕಟ್ಟಿದ ಸಾಧನವಾಗುವದು ಬಂಗಾಲದಲ್ಲಿ ಫಲವತ್ತಾದ ಭೂಮಿಗಳಿವೆ. ಅವುಗಳಲ್ಲಿ ಖಾದ್ಯಕಂದ ಮೂಲಗಳನ್ನು ಬೆಳೆಸಬಹುದು. ಅದರೆ ತಮ್ಮ ರುಚಿಗಳನ್ನೂ ಹಳೆಯ ಅಭ್ಯಾಸಗಳನ್ನೂ ಬಿಟ್ಟುಕೊಡುವಂತೆ ಜನರನ್ನು ಮನವೊಲಿಸುವದು ದುಸ್ತರ. ಈ ತೆಂಗಿನ ಮರಗಳನ್ನು ನೋಡಿರಿ. ತೆಂಗು ಅತ್ಯುತ್ತಮ ಪುಷ್ಟಿಕಾರಿ ಪದಾರ್ಥ. ಅದನ್ನು ಒಗ್ಗಿಸಿಕೊಳ್ಳಲು ನಾನು ಪ್ರಯತ್ನಿಸುತಿದ್ದೇನೆ. ಅದರಲ್ಲಿರುವ ಎಣ್ಣೆಯನ್ನು ತೆಗೆದು ಬಿಡುತ್ತೇನೆ ಉಳಿದುದರಲ್ಲಿ ಒಳ್ಳೆಯ ಪ್ರೋಟೀನ್ ಪದಾರ್ಥವಿದೆ. ಇನ್ನು ಬಂಗಾಲದ ಭೂಮಿಯಲ್ಲಿ ಬೆಳೆಯುವ ಅನೇಕ ಬಟಾಟೆ ಜಾತಿಯ ಗೆಡ್ಡೆ ಗೆಣಸುಗಳನ್ನು ನೋಡಿರಿ ಇವನ್ನೂ ಉತ್ತಮ ಆಹಾರವಾಗಿ ಉಪಯೋಗಿಸಬಹುದು. ಮತ್ತೆ ನಿಮ್ಮಲ್ಲಿ ಧಾರಾಳವಾಗಿ ಮೀನು ದೊರೆಯುತ್ತದೆ ಮೀನು, ತೆಂಗು ಮತ್ತು ಈ ಗಡ್ಡೆ ಗೆಣಸುಗಳನ್ನು ಅಕ್ಕಿಯ ಸ್ಥಾನದಲ್ಲಿ ಸುಲಭವಾಗಿ ಉಪಯೋಗಿಸಿಕೊಳ್ಳಬಹುದು. ಸಂದರ್ಭವಶಾತ್ ಗಾಂಧೀಜಿ ಜನರ ಸಾಮಾನ್ಯ ಆಲಸ್ಯವೃತ್ತಿಯನ್ನು ಉಲ್ಲೇಖಿಸಿದರು ಜನರು ಒಟ್ಟಾಗಿ ಒಂದು ವಾರದವರೆಗೆ ಸ್ವಯಂಸೇವಕರಂತೆ ದುಡಿದರೆ ಸರಕಾರದಿಂದ ಯಾವ ಸಹಾಯವೂ ಇಲ್ಲದೆ ಇವುಗಳನ್ನು ಸ್ವಚ್ಛವಾಡಿ ಬಿಡಬಹುದು. ಮತ್ತು ಸಾವಿರಾರು ರೂಪಾಯಿಗಳನ್ನು ಉಳಿಸಿಕೊಳ್ಳಬಹುದು.

ಹರಿಜನರ ಸಂಕಷ್ಟಗಳು

ಹರಿಜನರಿಗಿರುವ ಸಂಕಷ್ಟಗಳ ನಿವಾರಣೆಗಾಗಿ ಶ್ರೀ ಕೂರ್ಮಯ್ಯನವರು ಮದ್ರಾಸ್ ಕೌನ್ಸಿಲದಲ್ಲಿ 'ಬಿಲ್' ಮಂಡಿಸಿದರು. ಭಾವಿ-ಕೆರೆ-ಸಲೂನ್ ಹೋಟಲಗಳ ಪ್ರವೇಶಕ್ಕೆ ಅನುಕೂಲ ಕಲ್ಪಿಸಲು ಈ ಕಾಯ್ದೆಯು ಸೂಚಿತವಾಗಿದೆ ಇದನ್ನು ಒಂದು ಉಪಸಮಿತಿಗೊಪ್ಪಿಸಿ ಮುಂಗಳವಾರದೊಳಗಾಗಿ ಅವರು ವರದಿಯನ್ನೊಪ್ಪಿಸತಕ್ಕದ್ದೆಂದು ನಿಶ್ಚಿತವಾಯಿತು.

—ಪಾಲೆಸ್ತಾಯಿನ್ ವಿಭಜನೆ—

ಪಾಲೆಸ್ತಾಯಿನ್ ದೇಶವನ್ನು **ವಿಭಜಿಸುವ** ಸೂಚನೆಯೊಂದನ್ನು ಬ್ರಿಟಿಷರು ತಯಾರಿಸಿ ಯಹೂದಿಗಳ ಭಾಗ ಅರಬ್ಬೀಗಳ ಭಾಗವೆಂದು ವಿಂಗಡಿಸಿದ್ದರು. ಈ ಸೂಚನೆಯನ್ನು ಇಬ್ಬಣಗಳೂ ತಿರಸ್ಕರಿಸಿವೆ. ಇನ್ನು ಹತ್ಯಾಕಾಂಡವು ನಡೆದೀತೆಂದು ಬ್ರಿಟಿಷ ಸೈನೀಕರು ಎಲ್ಲಾ ಎಚ್ಚರಿಕೆಗಳನ್ನು ತೆಗೆದುಕೊಂಡು ಜರುಸಲಂ ಹೈಫಾಗಳಲ್ಲಿ ಮುಖ್ಯ ಮುಖ್ಯ ಕಟ್ಟಡಗಳಿಂದ ಜನರನ್ನು ಬಿಡಿಸಿ, ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳುತ್ತಿರುವರು.

ಈ ಸುದ್ದಿ ನಂಬಬೇಡಿರಿ

ನಮ್ಮ ಶಾಲೆಯ ಕಟ್ಟಡವನ್ನು ಮಾರಿ ಮ್ಯಾನೇಜ್‌ಮೆಂಟನ್ನು ಬೇರೆಯವರಿಗೆ ಒಪ್ಪಿಸುತ್ತಾರೆಂಬ ನಗರದಲ್ಲಿ ಹಬ್ಬಿದ ಸುದ್ದಿಗೆ ಏನೂ ಆಧಾರವಿಲ್ಲ. ಇದು ಶುದ್ಧ ಸುಳ್ಳು. ನಮ್ಮ ಕಟ್ಟಡವನ್ನು ಮಾರುವುದೂ ಇಲ್ಲ. ವ್ಯವಸ್ಥಾಪಕತ್ವವನ್ನು ಬೇರೆಯವರಿಗೆ ಒಪ್ಪಿಸುವುದೂ ಇಲ್ಲ.

ನಿ. ಆನಂದತೀರ್ಥಾಚಾರು
ವ್ಯವಸ್ಥಾಪಕ ಗಾಂಧೀನಗರ ಹೈಯ್ಯರ್
ಎಲಿಮೆಂಟರಿ ಶಾಲೆ. ಬಳ್ಳಾರಿ.

ಧಾನ್ಯಬೇಕು, ನಾಣ್ಯಸಾಕು.

(ಕರ್ಮವೀರದಿಂದ)

ಹಿಂದುಸ್ತಾನ ಕೃಷಿಪ್ರಧಾನ ದೇಶವೆಂದು ಹೇಳುವದು ವಾಡಿಕೆಯಾಗಿದೆ. ಇದರಿಂದ ಹಿಂದುಸ್ತಾನದಲ್ಲಿ ಧಾರಾಳ ಕೃಷಿಭೂಮಿಯುಂಟೆಂದು ಯಾರಾದರೂ ಎಣಿಸಿಕೊಂಡರೆ ಅದು ತಪ್ಪು. ಏಕೆಂದರೆ ಅಲ್ಲಿರುವದು ತಲಾ ಮುಕ್ಕಾಲು ಎಕರೆ ಭೂಮಿ ಮಾತ್ರ. ಅದುದರಿಂದ ಹಿಂದೀ ಹಳ್ಳಿಗಳ ಜೀವನ, ಅಭ್ಯಾಸ, ವಿಚಾರಧಾರೆಗಳು ಒಕ್ಕಲತನದ ವೃತ್ತಿಗಳಿಗೆ ಇತರ ವೃತ್ತಿಗಳಿಂದ ಹೆಚ್ಚು ಹೊಂದಿಕೆಯಾಗುವವೆಂದಿಷ್ಟೇ ಈ ಪ್ರಮೇಯದ ಅರ್ಥವೆಂದು ತಿಳಿಯುವದುಚಿತ. ಹಿಂದುಸ್ತಾನದಲ್ಲಿ ಇಂದು ಒಕ್ಕಲತನವಲ್ಲದೆ ಬೇರೆ ವೃತ್ತಿಗಳು ಬಹಳ ಉಳಿದಿಲ್ಲವೆಂದೂ ಇದರಿಂದ ತಿಳಿದುಕೊಳ್ಳಬಹುದು ಇನ್ನೊಂದು ದೃಷ್ಟಿಯಿಂದಲೂ ಹಿಂದುಸ್ತಾನವನ್ನು ಕೃಷಿಪ್ರಧಾನ ದೇಶವೆಂದು ಗ್ರಹಿಸಬಹುದು— ಹಿಂದುಸ್ತಾನದಲ್ಲಿ ಅವಶ್ಯಕತೆಗಿಂತ ಬಹಳ ಕಡಿಮೆ ಕೃಷಿಭೂಮಿಯಿರುವದರಿಂದ ಒಕ್ಕಲತನದ ಸುಧಾರಣೆಯಲ್ಲಿಯೇ ಅದು ತನ್ನ ಸತ್ವದ ಬಹ್ವಂಶವನ್ನು ವಿನಿಯೋಗಿಸಬೇಕು. ಇಲ್ಲವಿದ್ದರೆ ಸಮೃದ್ಧಿಯನ್ನು ಆಶಿಸುವದು ವ್ಯರ್ಥವಾದೀತು.

ವಸ್ತುತಃ, ಈ ಮೂರು ಉಪನಿಷತ್ತುಗಳ ಕಾಲದಲ್ಲಿಯೆ ಮನಗಾಣಲ್ಪಟ್ಟಿತ್ತು. ಅವುಗಳಲ್ಲೊಂದು ಹೇಳುತ್ತದೆ: "ಅನ್ನವನ್ನು ಹೆಚ್ಚಿಸಿರಿ ಇದೊಂದು ಪ್ರತಿಜ್ಞೆಯೆಂದು ಪರಿಗಣಿಸಿರಿ." ಯುದ್ಧಕಾಲದಲ್ಲಿ ಸರಕಾರವೂ ಇದೇ ವಾಕ್ಯವನ್ನು ಪುನಶ್ಚರಿಸಿತು. ಆದರೆ ಅನ್ನವನ್ನು ಹೆಚ್ಚಿಸುವದು ಅದರಿಂದಾಗಲಿಲ್ಲ. ಬದಲಿಗೆ ಅದು ಹೆಚ್ಚು ನೋಟುಗಳನ್ನು ಉಂಟುಮಾಡಿತು. ಪರಿಣಾಮವಾಗಿ ಅನ್ನವಿಲ್ಲದೆ ಮೂವತ್ತು ಲಕ್ಷ ಜನರು ಪ್ರಾಣಬಿಟ್ಟರು.

ಕಟ್ಟಕಡೆಗೆ, ದಿವಾಳಿಯೇಳಲಾದ ಈ ವ್ಯವಹಾರವನ್ನು ಬ್ರಿಟಿಶ ಸರಕಾರ ಹಿಂದೀ ಮುಂದಾಳುಗಳ ಕೈಗೊಪ್ಪಿಸಿತು. ದಿವಾಳಿಯ ಬಾಗಿಲಲ್ಲಿರುವ ವ್ಯವಹಾರವನ್ನು ತೆಗೆದುಕೊಳ್ಳುವದರಲ್ಲಿರುವ ಗಂಡಾಂತರವನ್ನೆಲ್ಲ ಅರಿತರೂ ಮುಂದಾಳುಗಳು ಹೊಣೆಯನ್ನು ಕೈಕೊಂಡಿದ್ದಾರೆ. ಅದು ಕಾರಣ, ಜನರನ್ನು ಸಜೀವರನ್ನಾಗಿಡುವದೇ ಇಂದು ದೇಶವನ್ನೆದುರಿಸಿರುವ ಎಲ್ಲಕ್ಕಿಂತ ದೊಡ್ಡ ಸಮಸ್ಯೆಯಾಗಿ ಕುಳಿತಿದೆ.

ವ್ಯಾಪಾರಿಗಳು ಹೇಳುತ್ತಾರೆ—ಹಿಂದುಸ್ತಾನದಲ್ಲಿ ಒಕ್ಕಲತನವೊಂದು ಲಾಭದಾಯಕ ವೃತ್ತಿಯಾಗಿಲ್ಲ. ಎಂದು. ಆದರೆ ಜೀವನವೇ ಒಕ್ಕಲತನವನ್ನು ಅವಲಂಬಿಸಿರುವದರಿಂದ, ಒಕ್ಕಲತನ ಲಾಭದಾಯಕವಾಗಿಲ್ಲದಿದ್ದಲ್ಲಿ ಜೀವನವೂ ಲಾಭದಾಯಕವಾಗಿರಲಾರದು. ಈ ಪರಿಣಾಮ ನೈಸರ್ಗಿಕವಲ್ಲ, ನೈಸರ್ಗಿಕವಾಗಲಾರದು. ಅದು ಕೃತಕ ನಾಗರಿಕತೆಯ ಫಲ. ಚಲನ ಅಥವಾ ನೋಟುಗಳು ಕೃತಕತೆಯ ಸಂಕೇತ. ಚಲನದ ಸ್ವಾಮಿತ್ವಕ್ಕೆ ಕೊಟ್ಟ ಸುಳ್ಳು ಹಿರಿಮೆಯ ದೆಸೆಯಿಂದ ಇಷ್ಟ ಪ್ರಾಣಹಾನಿ ಒದಗಿತು

ಹಿಂದೀ ಜನತೆ "ಖೇಡಾ" ಗಳಲ್ಲಿ— ಹೊಲಗಳಲ್ಲಿ ಬಾಳುತಿದೆ. (ಅನೇಕ ಹಿಂದೀ ಭಾಷೆಗಳಲ್ಲಿ ಹಳ್ಳಿಗೆ "ಖೇಡಾ" ಎಂಬ ಪರ್ಯಾಯವಾಚಿಯಿದೆಯೆಂಬುದನ್ನು, "ಖೇಡಾ" ಎಂದರೆ ಹೊಲ ಎಂದೂ ಅರ್ಥವಾಗುವದೆಂಬುದನ್ನು ಮರೆಯಬಾರದು.) ಚಲನಕ್ಕಿತ್ತ ಸುಳ್ಳು ಹಿರಿಮೆಯನ್ನು "ಖೇಡಾ" ಗಳಲ್ಲಿ ಬೀಳುಗಳೆಯುವದು ನಮಗೆ ಸಾಧ್ಯವಾದರೆ ಒಕ್ಕಲತನ ಸುಧಾರಿಸದೆ ಇರಲಾರದು. ಚಲನದ ಸ್ವಾಮಿತ್ವಕ್ಕೆ ಕೊಟ್ಟ ಮಹತ್ವವೇ "ಹಣದ ಸ್ಯೆರು" (ಸಣಬು, ತಂಬಾಕು, ಹತ್ತಿ ಇತ್ಯಾದಿ) ಬೆಳೆಯುವ ವ್ಯೋಹದ ಮೂಲ ಇಷ್ಟೆಲ್ಲ ತಂಬಾಕನ್ನೂ ಕೆಲಮಟ್ಟಿಗೆ ಹತ್ತಿಯನ್ನೂ ಇತರ ಅಂಥ ಬೆಳೆಗಳನ್ನೂ ಏಕೆ ತೆಗೆಯುತ್ತಾರೆ? ಇಷ್ಟು ಚಲನದ ಅವಶ್ಯಕತೆಯಾದರೂ ಏಕಿರಬೇಕು? ಏಕೆಂದರೆ, ಹಳ್ಳಿಗನು ತನಗೆ ಬೇಕಾದುದನ್ನೆಲ್ಲ "ಖರೀದಿ" ಮಾಡಬೇಕಾಗುತ್ತದೆ. ತನ್ನ ಬಟ್ಟೆಗಳನ್ನೂ ಹಿಂದಿನೊದಲಾದ ಬೇರೆ ಎಷ್ಟೋ ಬೇಕುಗಳನ್ನೂ ಅವನು ಪೇಟೆಯಿಂದ ತರಬೇಕಾಗುವದು; ಆದುದರಿಂದಲೇ ಅವನಿಗೆ ಹಣದ ಅವಶ್ಯಕತೆ. ಆದುದರಿಂದಲೇ ಅವನು

ಬಳ್ಳಾರಿ ಜಿಲ್ಲಾ ಲೇಬರ್ ಶಾಲೋ ಪಾಧ್ಯಾಯರ ಸಭೆ

16-2-47 ನೆಯ ಭಾನುವಾರ ಸಾಯಂಕಾಲ ಬಳ್ಳಾರಿ ನಗರದಲ್ಲಿ ಜಿಲ್ಲಾ ಲೇಬರ್ ಶಾಲೋಪಾಧ್ಯಾಯರ ಸಭೆಯು ಶ್ರೀ ಟಿ. ಬಿ. ಕೇಶವರಾಯರ ಅಧ್ಯಕ್ಷತೆಯಲ್ಲಿ ಸಮಾವೇಶವಾಗಿದ್ದಿತು. ಅಧ್ಯಕ್ಷರು ವೆಲ್ಲೂರಲ್ಲಿ ನಡೆದ ಪ್ರಾಂತೀಯ ಸಭೆಯು ಕಾರ್ಯಕಲಾಪಗಳು ಇದುವರೆವಿಗೆ ನಡೆದ ಕಾರ್ಯಭಾಗ ಖರ್ಚುಗಳ ವಿವರವನ್ನು ಸಂಕ್ಷಿಪ್ತವಾಗಿ ವಿವರಿಸಿದರು. ಉಪಾಧ್ಯಾಯರು ತಮ್ಮ ಕುಂದುಕೊರತೆಗಳನ್ನು ಬರಬೇಕಾದ ಇಕ್ರಿಮೆಂಟಗಳನ್ನು ಬರಹ ಮೂಲಕವಾಗಿ ನಿವೇದಿಸಿದರು. ಚರ್ಚೆಯ ನಂತರ ಈ ಕೆಳಗೆ ಕಾಣಿಸಿದ ತೀರ್ಮಾನಗಳಾದವು.

(1) ಕಲೆಕ್ಟರವರ ಮೂಲಕ ಲೇಬರ್ ಕಮಿಷನರ್‌ರವರಿಗೆ ಅವರು ಕೇಳಿದ ಅಂಶಗಳನ್ನು ಕೊಟ್ಟು ಸಂಘಕ್ಕೆ ಸರ್ಕಾರದ ಮಾನ್ಯತೆಯನ್ನು ಪಡೆಯಬೇಕು.

(2) ಪ್ರಾಂತೀಯ ಸಭೆಯಲ್ಲಿ ತೀರ್ಮಾನವಾದ ಪ್ರಕಾರಕ್ಕೆ ಬಳ್ಳಾರಿ ಜಿಲ್ಲೆಯ ಪರವಾಗಿ ಸಂಘದ ಅಧ್ಯಕ್ಷರೇ ಮದ್ರಾಸಿಗೆ ಹೋಗಿ ಅಧಿಕಾರಿಗಳನ್ನೂ ಮಂತ್ರಿಗಳನ್ನೂ ಕಂಡು ಲೇಬರ್ ಉಪಾಧ್ಯಾಯರ ಕುಂದುಕೊರತೆಗಳನ್ನು ಸೂಚಿಸಿ ಪರಿಹಾರ ಬೇಡತಕ್ಕದ್ದು.

(3) ಈ ಕೆಳಗೆ ಕಾಣಿಸಿದ ಉಪಾಧ್ಯಾಯ ಸದಸ್ಯರು ಸಂಘದ ಅಧ್ಯಕ್ಷರೊಂದಿಗೆ ಕಲೆಕ್ಟರವರ ಹತ್ತರ ಹೋಗಿ ಸ್ಕೇಲ್ ಆಫ ಪೇ, ಇಕ್ರಿಮೆಂಟ ಮತ್ತು ಇತರ ಲೋಪ ದೋಷಗಳನ್ನು ಸೂಚಿಸಿ ತಿಪ್ಪೈಪರಿಹಾರ ಕೋರತಕ್ಕದ್ದು

(1) ಅಧ್ಯಕ್ಷರು 2) ಜೋನಾಥನ್ ಕಾರ್ಯದರ್ಶಿ 3) ಎಂ. ಹುಸೇನಸಾಹೇಬ್ 4) ದೇವದಾನಂ 5) ಸಿದ್ದರಾಮಯ್ಯ 6) ಗುರುಶಾಂತಯ್ಯ

(4) ಬಳ್ಳಾರಿಗೆ ಲೇಬರ್ ಕಮೀಶನರವರು ಬಂದಾಗ ಇದೇ ಶಿಷ್ಟ ಮಂಡಳಿದವರು ಅವರನ್ನ ಕಾಣತಕ್ಕದ್ದು.

(5) ಕುಷ್ಟಗಲ್ಲು ಲೇಬರ ಶಾಲೆಯ ಮುಖ್ಯೋಪಾಧ್ಯಾಯರಾಗಿ ಈಗ T. ವೀರಾಪುರದಲ್ಲಿರುವ ಶ್ರೀ ಸುಬ್ಬರಾಯುಡು ಇವರು ರಜಾ ತೆಗೆದುಕೊಂಡ ಕಾರಣದಿಂದ ಮೂರುತಿಂಗಳ ಸಸ್ಪೆಂಡ್ ಮಾಡಲ್ಪಟ್ಟಿದ್ದನ್ನು ಅವರ ಹೇಳಿಕೆಯಿಂದ ಕೇಳಿಕೊಂಡು D. L. O. ರ ಆರ್ಡರನ್ನು ಪರಿಶೀಲಿಸಿ ಈ ಶಿಕ್ಷೆಯು ಬಹಳ ಕಠಿಣವಾದ್ದೆಂದು ಈ ಸಭೆಯು ಅಭಿಪ್ರಾಯಪಡುತ್ತದೆ. ಕಲೆಕ್ಟರ್‌ರವರು ಈ ಕೇಸನ್ನು ಕೂಲಂಕಷವಾಗಿ ವಿಚಾರಿಸಿ ಅವರಿಗೆ ನ್ಯಾಯವನ್ನು ತೋರಿಸಿ ಅವರನ್ನು ಶಿಕ್ಷೆಯನ್ನು ರದ್ದುಮಾಡಿ ಸಸ್ಪೆಂಡಾದ ಕಾಲದ ಸಂಬಳ ಅಲೋಯನ್ಸ್ ಅವರಿಗೆ ಕೊಡಿಸ ಬೇಕೆಂದು ದೈನ್ಯವಾಗಿ ಬೇಡುತ್ತದೆ.

ಲೇಬರ್ ಶಾಲೋಪಾಧ್ಯಾಯರಿಗೆ ಸೂಚನೆ

ಈ ಕೆಳಗೆ ಕಾಣಿಸಿರುವ ಶಾಲೆಗಳ ಉಪಾಧ್ಯಾಯರು ಸಂಘದ ಸದಸ್ಯತ್ವ ಮತ್ತು ಇತರ ಖರ್ಚುಗಳಿಗಾಗಿ ಸೂಚಿಸಿದ 3/-ಮೂರು ರೂ. ಮೊತ್ತವನ್ನು ಕೂಟ್ಟಿಲ್ಲ ಈನೋಟೀಸು ತಲಪಿದೊಡನೆಯೇ ಅಧ್ಯಕ್ಷರ ಹೆಸರೀಲಿ ತಕ್ಷಣವೇ M. O. ಮಾಡಿ; ರಸೀತಿ ಪಡೆಯಬೇಕೆಂದು ಕೋರುತ್ತೇನೆ.

1)	ಆದವಾನಿ	ತಾ||	ಮದರಿ	2	ಉವಾ||	6-0-0
	”		ಕಾಮವರಂ	2	”		6-0-0
	”		ಇಸ್ವಿ	2	”		6-0-0
2)	ಆಲೂರು	ಇಂಗಳದಹಾಳು		1	”		3-0-0
	”		ಚಿನ್ನಹರಿವಾಣಂ	2	”		6-0-0
3)	ಬಳ್ಳಾರಿ		ಕುರುಗೋಡು	2	”		6-0 0
4)	ರಾಯದುರ್ಗ		ಮಾಲ್ಯ	1	”		3-0-0
	”		ಟಿ ವೀರಾಪುರ	1	”		3-0-0
5)	ಕೂಡ್ಲಿಗೆ		ಬಂಡ್ರಿ	2	”		6-0.0
6)	ಹರಪನಹಳ್ಳಿ		ಕೊಮಾರ್ನಹಳ್ಳಿ	2	”		6-0-0
			ಕಟ್ಟಿ	2	”		6-0-0

" ಚಿಕ್ಕಲಕ್ಷ್ಮೀಪುರ 1 " 3-0-0
7) ಹೊಸಪೇಟೆ ಬಸಾಪುರ 1 " 2-0-0
21 ಉಪಾಧ್ಯಾಯರು 63-0-0

ಎಂ. ಇ. **ಜೋನಾಥನ್ ಕಾರ್ಯದರ್ಶಿ**
ಜಿಲ್ಲಾ ಲೇಬರ್ ಶಾಲೋಪಾಧ್ಯಾಯರ ಸಂಘ
ಬಳ್ಳಾರಿ.

ಸುಲಿಗೆಯಲ್ಲಿ ಪಾಲು

ನಾದಿರಶಹಾ ಸುಲಿಗೆಗಾಗಿ ಹಿಂದುಸ್ತಾನದ ಮೇಲೆ ದಾಳಿ ಮಾಡಿದನು. ಅಮೂಲ್ಯ ರತ್ನ ವಜ್ರ ವೈಢೂರ್ಯಾದಿಗಳ ಸಂಗ್ರಹದ ರೂಪದಲ್ಲಿ ಈ ಸುಲಿಗೆ ನಡೆಯಿತು. ಆದರೆ ಆಧುನಿಕರು ಅಪೇಕ್ಷಿಸುವ ಸುಲಿಗೆ ಈ ಸ್ವರೂಪದ್ದಿರುವದಿಲ್ಲ. ಅವರಿಗೆ ಉತ್ಪಾದನೆಯ ಸಾಧನಗಳು ಕಚ್ಚಾಮಾಲು, ಮತ್ತು ಪೇಟೆಗಳು, ಬೇಕಾಗಿವೆ. ಈ ಬಗೆಯ ಸುಲಿಗೆಯನ್ನು ನಡೆಸುವದ ಕ್ಕಾಗಿಯೆ ಜಾಗತಿಕ ಯುದ್ಧಗಳು ನಡೆದವು.

ಮೊದಲನೆಯ ಯುದ್ಧದ ನಂತರ ವಿಜಯಿ ರಾಷ್ಟ್ರಗಳು ಜರ್ಮನಿಯ ವಸಾಹತುಗಳ ಭಾರವನ್ನಿಳಿಸಿದವು. ಯುದ್ಧಗಳಿಂದಾದ ಹಾನಿಯನ್ನು ತುಂಬಿ ಕೊಡುವುದಕ್ಕಾಗಿ ಪರಿಹಾರವನ್ನು ಬೇಡಿದವು.

ಈಗ ಮತ್ತೆ ಜರ್ಮನಿ ಪರಾಜಯ ಹೊಂದಿದೆ ಈ ಹಣದ ಸುತ್ತಲೂ ಅಂತರ್‌ರಾಷ್ಟ್ರೀಯ ರಣಹದ್ದುಗಳ ಮೊದಲೆ ಕೂಡಿವೆ. ಮಿತ್ರರಾಷ್ಟ್ರಗಳಲ್ಲಿದ್ದ ಜರ್ಮನ್ ವಿಶೇಷಾಧಿಕಾರ ಪತ್ರಗಳನ್ನೆಲ್ಲ ಹಾರಿಸಿ ಬಿಡಲು ಮುಖ್ಯ ಮಿತ್ರರಾಷ್ಟ್ರ ಪ್ರತಿನಿಧಿ ಮಂಡಲವು ಕೊನೆಯ ಕಾಯಿದೆಯ ಮತ್ತು ವಿಧಿಯ ಕರಡನ್ನು ಸಿದ್ಧಪಡಿಸಿರುವದು. ಈ ವ್ಯವಸ್ಥೆಯಲ್ಲಿ ಹಿಂದುಸ್ತಾನವನ್ನೂ ಎಳೆದುಕೊಳ್ಳಬಾಗಿನೆ. ಅದರೆ ಯಾರಿಂದ ಎಂಬುದನ್ನು ಮಾತ್ರ ನಾವರಿಯೆವು.

ಕಳವಿನ ಮಾಲೆಂದು ಗೊತ್ತಿದ್ದೂ ನಾವು ಅದನ್ನು ಕೊಂಡೆನೆಂದರೆ ಆ ಕಳವಿನ ವ್ಯವಹಾರಕ್ಕೆ ನಾವೂ ನೈತಿಕ ದೃಷ್ಟಿಯಿಂದ ಹೊಣೆಗಾರರಾಗುವೆವು. ಹಿಂದುಸ್ತಾನ ಈ ಯುದ್ಧದಲ್ಲಿ ಭಾಗ ವಹಿಸಲಿಲ್ಲ. ಅಷ್ಟರ ಮಟ್ಟಿಗೆ ಹಿಂದುಸ್ತಾನ ಈ ರಕ್ತಪಾತದ ಅಪರಾಧದಿಂದ ಅಲಿಪ್ತವಾಗಿದೆ. ಈ ಹತ್ಯಾಕಾಂಡದ ನೈತಿಕ ಹೊಣೆಯನ್ನು ಹೊರದೆ ಯುದ್ಧದ ಪರಿಣಾಮದಿಂದ ಬಂದ ಸುಲಿಗೆಯಲ್ಲಿ ನಾವೀಗ ಪಾಲು ಬೇಡಬಲ್ಲೆವೊ?

"ಪರಿಹಾರ"ವೆಂದು ಮಿತ್ರ ರಾಷ್ಟ್ರಗಳು ವಶಪಡಿಸಿಕೊಂಡು ಜರ್ಮನ್ ಯಂತ್ರಗಳನ್ನು ನಾವು ಕೊಂಡು ನಮ್ಮ ದೇಶದಲ್ಲಿ ತರಬಲ್ಲೆವೊ? ಮಾರಾಟಕ್ಕಾಗಿ ಯೆಂದು ಇರುವ ಜರ್ಮನ್ ಶಿಗಿ ಯುದ್ಧ ಯಂತ್ರಗಳ ಯಾದಿಯುದಿ. ಹಿಂದೀ ಗಣಿಕ್ ಸಂಘಗಳಿಗೆಲ್ಲ ಈ ಯಂತ್ರಗಳ ಯಾದಿಯನ್ನು ಕಳಿಸಲಾಗಿದೆ

ಅನ್ಯಾಯ, ಕ್ರೌರ್ಯ, ಲೋಭ ಮತ್ತು ಮಾನವೀ ರಕ್ತದಿಂದ ಈ ಯಂತ್ರಗಳು ಕಲಂಕಿತವಾಗಿವೆ. ನಮ್ಮ ಕೈಯಲ್ಲಿ ಇವನ್ನು ತೆಗೆದುಕೊಳ್ಳಲು ನಾವು ಸಿದ್ಧರಿರುವೆವೊ? ನಾವು ಇವನ್ನು ತೆಗೆದುಕೊಂಡರೆ ಬ್ರಿಟಿಶ್ ಇಲ್ಲವೆ ಅಮೇರಿಕನ್‌ರಿಗಿಂತ ಕಡಮೆ ಸಾಮ್ರಾಜ್ಯವಾದಿಗಳೇನು ಆಗಲಾರೆವು. ಹತ್ತಿಕ್ಕಲ್ಪಟ್ಟ ಎಲ್ಲ ರಾಷ್ಟ್ರಗಳಿಗಾಗಿ ಹಿಂದುಸ್ತಾನ ಹೊಡೆದಾಡುತಿದ್ದರೆ ಇಂದು ಜರ್ಮನಿ ಅಂಥ ಹತ್ತಿಕ್ಕಲ್ಪಟ್ಟರಾಷ್ಟ್ರಗಳಲ್ಲೊಂದಾಗಿರುವದರಿಂದ ನಮ್ಮ ರಾಷ್ಟ್ರೀಯ ಸರಕಾರ ಇಂಥ ಸುಲಿಗೆಯನ್ನು ನಿಷೇಧಿಸಬೇಕಲ್ಲದೆ ಕಲಂಕಿತ ವಸ್ತುಗಳು ನಮ್ಮ ದೇಶದಲ್ಲಿ ಬರದಂತೆ ಪ್ರತಿಬಂಧವನ್ನು ಹಾಕತಕ್ಕದ್ದು. (ಕರ್ನಾಟಕದ ಹರಿಜನ ಲೇಖ)

ಹಿಂದೂಸ್ಥಾನದ ರಾಜಕಾರಣ

ಲೀಗ್‌ನವರು ಘಟನಾಸಮಿತಿಯನ್ನು ಬಹಿಷ್ಕರಿಸಿ ನಮಗಾಲ ಸರ್ಕಾರದಲ್ಲಿರಲು ಬರುವಂತಿಲ್ಲವೆಂದು ಬ್ರಿಟಿಷ ಸರ್ಕಾರದವರಿಗೆ ಬರೆದ ಪಂಡಿತನೆಹರೂರವರ ಪತ್ರಕ್ಕೆ ಭಾರತ ಮಂತ್ರಿಗಳು ದುಡುಕಬಾರದೆಂದೂ ಒಂದು ವಾರದೊಳಗಾಗಿ ತಮ್ಮ ಧೋರಣೆಯನ್ನು ತಿಳಿಸುವುದಾಗಿಯೂ ಬರೆದಿರುವರೆಂದು ಪ್ರಕಟವಾಗಿದೆ.—

ಉರವಕೊಂಡ ಸಂಸ್ಥಾನ ಮತ್ತದ
ಅನಾಥಾಲಯ
ಮಾನ್ಯ ಶ್ರೀ ಕೋಟಿರೆಡ್ಡಿಯವರಿಂದ
ಕೋನಶಿಲಾಸ್ಥಾಪನೆ

2-3-47 ನೆಯ ಭಾನುವಾರ ಪ್ರಾತಃಕಾಲ 10 ಘಂಟೆಗೆ ಉರವಕೊಂಡೆಯ ಗವಿಮಠ ಸಂಸ್ಥಾನದಲ್ಲಿ ಮದ್ರಾಸ್ ಸರ್ಕಾರದ ಧಾರ್ಮಿಕ ಸಂಸ್ಥೆಶಾಖೆಯ ಮಂತ್ರಿಗಳಾದ **ಶ್ರೀ ಕೋಟಿರೆಡ್ಡಿಯವರು** ಅನಾಥಾಲಯದ ಅಡಿಗಲ್ಲನ್ನಿಡುವ ಸಮಾರಂಭವನ್ನು **ಶ್ರೀ ಎ ರಾಯಪ್ಪ ಎಂ. ಎಲ್. ಎ. (ಗುಂತಕಲ್ಲು)** ಇವರ ಅಧ್ಯಕ್ಷತೆಯಲ್ಲಿ ನೆರವೇರಿಸಲಿರುವರು ಜನವರಿ 16 ನೆಯ ಗುರುವಾರ ಲಿಂಗೈಕ್ಯರಾದ ಹಿರಿಯ ಸಂಸ್ಥಾನಾಧಿಪತಿಗಳ ಪುಣ್ಯಸ್ಮಾರಕವಾಗಿ ಈಗಿನ ಶ್ರೀಜಗದ್ಗುರುಗಳವರು ಈ ಮಹತ್ಕಾರ್ಯವನ್ನು ಕೈಗೊಂಡಿರುವರು. ಈ ಸಮಾರಂಭಕ್ಕೆ ಎಲ್ಲರೂ ಆಗಮಿಸಲು ವ್ಯವಸ್ಥಾಪಕರು ಕೋರುತ್ತಾರೆ.

ಪಂಜಾಬಿನ ಕೆಲ ಮುಖ್ಯ ಪಟ್ಟಣಗಳಲ್ಲಿ ಸರ್ಕಾರದ ವಿರುದ್ಧವಾಗಿ ಹೂಡಿದ ಲೀಗ್ ಚಳುವಳಿಯು ಸಾಗಿದೆ ಈಗ ಅವರು ರೈಲ್ವೆ ಟ್ರೇಸುಗಳನ್ನು ನಿಲ್ಲಿಸುತ್ತಲಿರುವರು.

ಆದವಾನಿ ತಾಲೂಕು ಉಪಾಧ್ಯಾಯರಸಭೆ

ಆದವಾನಿ ಬೋರ್ಡು ಶಾಲೋಪಾಧ್ಯಾಯರ ಸಂಘದ ಅಧ್ಯಕ್ಷರ ಅಪ್ಪಣೆಯಿಂದ 16-3-47 ಬೋರ್ಡು ಹಿಂದೂ ಬಾಲಕರಶಾಲೆ ಎಮ್ಮಿಗನೂರಲ್ಲಿ ಅಧಿಕಾರವರ್ಗದವರ ಚುನಾವಣೆಗಾಗಿ ಇತರ ಮುಖ್ಯ ವಿಷಯಗಳ ಪರಿಶೀಲನೆಗಾಗಿ ತಾಲೂಕು ಉಪಾಧ್ಯಾಯರಸಭೆ ಕೂಡಲಿದೆ ಆದವಾನಿ ಕೋಸಿಗಿ ಹರಿವಾಣ ನಂದಫರ ಕೌತಾಳಗಳ ಕೇಂದ್ರದವರು ತಮ್ಮ ಕ್ಷೇತ್ರದಲ್ಲಿನ ಉಪಾಧ್ಯಾಯರುಗಳಿಗೆ ಈ ಸಮಾಚಾರ ತಿಳಿಸಿ ಬರುವಂತೆ ಮಾಡಬೇಕು. ಬರುವವರಿಗೆ ಊಟ ಉಪಚಾರದ ವ್ಯವಸ್ಥೆ ಮಾಡಲಾಗಿದೆ (ಕೆ. ರಾಮಾಚಾರ್ಯ)

ಹಿಂದುಸ್ತಾನ— ಫ್ರಾನ್ಸಸನಡುವೆ ರಾಯಭಾರಿಗಳ ಸಂಬಂಧಕ್ಕೆ ಫ್ರಾನ್ಸ್ ಒಪ್ಪಿದೆ. ಏಷಿಯಾ ರಾಷ್ಟ್ರಗಳ ಸಮ್ಮೇಳನಕ್ಕೆ ರಷ್ಯಾಕ್ಕೆ ಸೇರಿದ ಅಜರ ಬೈಜಾನ ರಾಷ್ಟ್ರವು ಪ್ರತಿನಿಧಿಗಳನ್ನು ಕಳುಹಿಸಲಿರುವುದೆಂದು ಸೂಚಿಸಿದೆ.—

ಹಿಂದೂಸ್ತಾನದ ಹೊಸ ವೈಸ್ರಾಯರು

ಈಗಿನ ವೈಸ್ರಾಯರಾದ ಲಾರ್ಡ್ ವೇವಲರನ್ನು ಹಿಂದಕ್ಕೆ ಕರೆಸಿ ಅವರ ಸ್ಥಳದಲ್ಲಿ ಆಗ್ನೇಯ ಏಶಿಯಾ ಕಮ್ಯಾಂಡರಾಗಿದ್ದ ಲಾರ್ಡ್ ಮೌಂಟ್ ಬಾಟನರನ್ನು ನಿಯಮಿಸಿರುತ್ತಾರೆ

The Rayalaseema Bank Limited, Bellary.
ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:— ಬಳ್ಳಾರಿ ಜಿಲ್ಲಾ:- ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ, ಬಳ್ಳಾರಿ, ಹಡಗಲಿ, ಕೂಡ್ಲಿಗಿ, ಆದವಾನಿ. **ಅನಂತಪುರ:-** ಅನಂತಪುರ, ಬೆಳಗುಪ್ಪ, ಧರ್ಮಾವರಂ, ಕದಿರಿ, ಪಾವಿಡಿ, ತಿಮ್ಮನಚೆರ್ಲ, ಉರವಕೊಂಡ, ಹಿಂದೂಪುರ, ಗುತ್ತಿ. **ಕರ್ನೂಲು:-** ಕರ್ನೂಲು ಪತ್ತಿಕೊಂಡ.

ಕಡಪ:- ರಾಜಂಪೇಟೆ, ಕಡಪ. **ಚಿತ್ತೂರು:-** ಚಿತ್ತೂರು, ಮದನಪಲ್ಲಿ, ತಿರುಪತಿ, ನಾಗರಿ, ವಾಯಲ್ಪಾಡು.

ಫಿಕ್ಸೆಡ್ ಡಿಪಾಜಿಟ್‌ನ ಬಡ್ಡಿದರ:- ೬ ತಿಂಗಳಿಗೆ ಶೇಕಡ ೨½% ವರ್ಷಕ್ಕೆ 3% 2ವರ್ಷಗಳಿಗೆ 3½%.

ಕರೆಂಟು ಅಕೌಂಟು: 1%, **ಸೇವಿಂಗ್ಸ್ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.

ಮಾಸಿಕ ಪ್ರಾವಿಡೆಂಟ್ ಫಂಡ ಡಿಪಾಜಿಟ್:- 3%. **ಬಿ ವಿ. ಶೇಷಗಿರಿರಾವ್, ಕಾರ್ಯದರ್ಶಿ.**

—ಹೊಸಪೇಟೆ—

ಮುನಿಸಿಪಲ್ ಹೈಸ್ಕೂಲದ ರಜತಜಯಂತ್ಯುತ್ಸವಗಳು ತಾ|| ೨೪ ರಿಂದ ಪ್ರಾರಂಭವಾಗಲಿವೆ. ತಾ|| ೨೭ ರಲ್ಲಿ ಶ್ರೀ ಶಿವರಾಮಕಾರಂತರು ಉದ್ಘಾಟನೆಯನ್ನು ನಡೆಸುವರು. ತಾ|| ೨೮ ರ ಶ್ರೀ ಮಾಸ್ತಿಯವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳುಂಟು.

ಹಿಂದಿನ ವಿದ್ಯಾರ್ಥಿಗಳು ಈ ಸಮಾರಂಭದಲ್ಲಿ ಭಾಗವಹಿಸಲು ಕಾರ್ಯದರ್ಶಿಗಳು ಕೋರುತ್ತಾರೆ.

ಮಲಪನಗುಡಿ.

೧೫ ನೆಯ ದಿನಾಂಕ ವಿದ್ಯಾರಣ್ಯ ಕರ್ನಾಟಕ ವಾಚನಾಲಯ ಅಧ್ಯಕ್ಷರಿಂದ ಕೂಡಿದ ಸಮಾವೇಶದಲ್ಲಿ ಮಾಸಿಕಕ್ಕೆ ಬದಲಾಗಿ ವಾರ್ಷಿಕ ಚಂದಾಕೊಡಬೇಕು. ೧೦/- ಕೊಟ್ಟವರು ಪ್ರಧಾನ ಪೋಷಕರು, ೫ ಸಲಹೆಗಾರರು ೨ ಸಹಾಯಕರು ೧ ಚಂದಾದಾರರೆಂದು ಪರಿಗಣಿಸತಕ್ಕದ್ದು ಕಾರ್ಯಕಾರೀ ಸಮಿತಿಯಲ್ಲಿ ಶ್ರೀಗಳಾದ ಶ್ರೀನಿವಾಸರಾವು, ಶ್ರೀಪಾದಾಚಾರ್, ಶ್ರೀನಿವಾಸರಾವು (vm) ಜಡಿಯಪ್ಪ, ಮುದುಕಪ್ಪ, ಇವರು ಇರಬೇಕೆಂಬ ತೀರ್ಮಾನಗಳಾದವು.

ನಾರಾಯಣದೇವರಕೆರೆ.

೧೦ ನೆಯ ದಿನಾಂಕ ಕೂಡಿದ ಸಾರ್ವಜನಿಕ ಸಭೆಯಲ್ಲಿ ಶ್ರೀ ಮರಿಸ್ವಾಮಪ್ಪ ಪಾಟೀಲ, ಯಲ್ಲಪ್ಪ, ಬಾರಿಕರು ರೈತರ ಕುಂದು ಕೊರತೆಗಳನ್ನು ನಿವೇದಿಸಿ ಸಂಘದ ಆವಶ್ಯಕತೆಯನ್ನು ಸೂಚಿಸಿದನಂತರ ಎಲ್ಲಾ ಕೋಮುಗಳನ್ನು ಹಿಂದು, ಮುಸ್ಲಿಂ, ಮತ್ತು ಹರಿಜನ ಸದಸ್ಯರನ್ನೊಳಗೊಂಡ ಒಂದು ಸಂಘವು ಸ್ಥಾಪಿಸಲ್ಪಟ್ಟಿತು.

ಅಧ್ಯಕ್ಷರು:- ಜನಾಬ ಹೊಸೂರ ಸಣ್ಣಬಾಬಾ ಸಾಹೇಬರು. **ಕಾರ್ಯದರ್ಶಿ**:- ಶ್ರೀ ಮತದ ಪಾಟೀಲ ಕೊಟ್ರಗೌಡರು ಕಾರ್ಯಕಾರೀ ಸಮಿತಿಯಲ್ಲಿ ೧೧ ಸದಸ್ಯರಿದ್ದಾರೆ.

ಗ್ರಾಮಸಮಿತಿಯೊಡನೆ ಸೇರಿ ವ್ಯವಸಾಯೋಪಕರಣಗಳನ್ನೊದಗಿಸಲು ಸೊಟ್ಯೆಟಿ ಅಂಗಡಿ ಸ್ಥಾಪಿಸುವುದು ಕೆರೆರಿಪೇರಿ ಮಾಡಿಸಿ ಮಾಗಾಣಿಗೆ ನೆಲ್ಲು ಬೀಜವದಗಿಸುವುದು ಸರ್ಕಾರದವರು ರೈತರಿಗೆ ಅನನುಕೂಲವಾದ ಕಂಟ್ರೋಲು ತೆಗೆದು ಹಾಕಬೇಕೆಂಬರ್ಥದ ನಿರ್ಣಯಗಳು ರೈತಸಂಘದ ಸಭೆಯಲ್ಲಾದವು.

ಬಾಚಿಗೊಂಡನಹಳ್ಳಿ

ಮಾಘ ಬ|| ೧೪ ರಿಂದ ಫಾಲ್ಗುಣ ಶು|| ೫ ರವರಿಗೆ ಹಡಗಲಿ ತಾಲೂಕು ತಂಬ್ರಹಳ್ಳಿಯಲ್ಲಿ ಕೌದಿ ಮಹಾಂತೇಶಸ್ವಾಮಿಯ ರಥೋತ್ಸವದ ಕಾರ್ಯಕ್ರಮಗಳು ನಡೆದವು. ಇದೇ ಸಮಯಕ್ಕೆ ಹಡಗಲಿ ತಾಲೂಕು ರೈತ ಪರಿಷತ್ತನ್ನು ಕರೆಯಲಾಗಿತ್ತು. ಈ ಸಮಾರಂಭಕ್ಕೆ ಕರ್ನಾಟಕ ಮುಖಂಡರಾದ ವಾಲಿ ಚನ್ನಪ್ಪ- ಚಿನ್ನಯ್ಯಸ್ವಾಮಿ, ಮಾಚಾನಿ ಸೋಮಪ್ಪ, ಜೋಳದರಾಶಿ ದೊಡ್ಡನಗೌಡರು, ಆಹ್ವಾನಿಸಲ್ಪಟ್ಟಿದ್ದರು. 24—2—47 ಇದು ಜರುಗಿತು.—

ಇಟ್ಟಿಗಿ

ಸೌತ್ ಇಂಡಿಯನ್ ಟೀಚರ್ಸ್ ಯೂನಿಯನ್ ಆದೇಶದಂತೆ ಶ್ರೀ ಎಂ. ಅನ್ನದಾನಯ್ಯನವರ ಅಧ್ಯಕ್ಷತೆಯಲ್ಲಿ ಉಪಾಧ್ಯಾಯರ ದಿನಾಚರಣೆಯು ಆಯಿತು. ಸರ್ಕಾರದವರು ಪ್ರಾಥಮಿಕ ಶಾಲೋಪಾಧ್ಯಾಯರನ್ನು ನಿರ್ಲಕ್ಷಿಸಿ ಯೋಗ್ಯ ಸಂಬಳ ನಿಶ್ಚಯಿಸದೆ ಸೆಕಂಡರೀಗ್ರೇಡಿನವರನ್ನು ಲೋರ್ ಡಿವಿಜನ್ ಗುಮಾಸ್ತನಿಗಿಂತ ಕಡೆಮಾಡಿರುವುದು, ಮುಖ್ಯೋಪಾಧ್ಯಾಯರ ನಿಯಾಮಕ ಸಂಬಳದ ಅನಿಶ್ಚಯ, ಏಡೆಡಾನವರನ್ನು ಕಡೆಗಣಿಸಿರುವುದು, ಸರಕಾರಿ ಬೋರ್ಡ ಖಾಸಗಿಶಾಲೆಗಳಲ್ಲಿನ ಪಕ್ಷಪಾತ, ಈ ನಿಷಯಗಳಲ್ಲಿ ತೀರ್ಮಾನಗಳಾಗಿ ಪುನರೀಕ್ಷಿಸಿರ್ಮಾಡಿ ಪ್ರಾಂತೀಯ ವಿದ್ಯಾ ಸಲಹೆಸಮಿತಿಯಿಂದ ಸಲಹೆ ಪಡೆಯಲು ಕೋರಲಾಯಿತು.

ಮೈಸೂರು ಕಾಂಗ್ರೆಸ್‌ನವರು ಮೈಸೂರುದೇಶದಲ್ಲಿ ಸತ್ಯಾಗ್ರಹವನ್ನು ಹೂಡಬೇಕೆಂದು ತೀರ್ಮಾನಿಸಿರುವರು.

ತನಗಾಗಲಿ ತನ್ನ ಹಳ್ಳಿಯ ನೆರೆಹೊರೆಯವರಿಗಾಗಲಿ ಬೇಕಾಗದೆ ದೂರದೂರದ ನಿರ್ಯಾತಕನಿಗೋ ಉದ್ದಿಮೆ ಗಾರನಿಗೋ ಬೇಕಾಗುವ ಬೆಳೆಗಳನ್ನು ಎತ್ತುತ್ತಾನೆ. ಅದರಿಂದ ಆಹಾರ ಕೊರತೆಯಾಗುತ್ತದೆ. ಸ್ವತಃ ಹಳ್ಳಿಯಲ್ಲಿ ತನ್ನದಿನ್ನವ ಉದ್ಯೋಗಗಳಿಲ್ಲ. ಹಳ್ಳಿಗನಿಗೆ ಸ್ವಸ್ಥಾನದಲ್ಲಿ ಹುಟ್ಟಿಸಲ್ಪಟ್ಟ ವಸ್ತುಗಳಿಂದ ತನ್ನ ಅವಶ್ಯಕತೆಗಳನ್ನು ನೀಗಿಸಿಕೊಳ್ಳಲವಕಾಶವಿಲ್ಲ. ಇದರಿಂದ ಹೊರಡುವ ನಿಷ್ಪನ್ನ ನಿಶ್ಚಳವಾಗಿಯೆ ಇದೆ. ಹೊಲಗಳಲ್ಲಿ ಸಾಕಷ್ಟು ಆಹಾರ ಹುಟ್ಟುವದಿಲ್ಲವೇಕೆಂದರೆ ಹಳ್ಳಿಗಳಲ್ಲಿ ಸಾಕಷ್ಟು ಉದ್ಯೋಗಗಳು ನಡೆಯುವದಿಲ್ಲ.

ನಿಜವಾಗಿ, ಒಕ್ಕಲತನದಲ್ಲಿ ಬಹಳ ಸುಧಾರಣೆಯಾಗಬೇಕಾಗಿದೆ; ಸುಧಾರಿಸಿದ ಒಕ್ಕಲತನ ಹೆಚ್ಚು ಲಾಭಕರವಾಗುವದೆಂಬಲ್ಲಿಯೂ ಎರಡು ಮಾತಿಲ್ಲ ಇದನ್ನು ಸಾಧಿಸಬೇಕಾದರೆ ನಮ್ಮ ಸಮಸ್ತ ಕೌಶಲ್ಯವನ್ನೂ ಸತ್ವವನ್ನೂ ವರ್ಷವರ್ಷಗಳ ಸಹನಶೀಲ ಪ್ರಯತ್ನವನ್ನೂ ತೊಡಗಿಸಬೇಕಾಗುವದು. ಇಷ್ಟೆಲ್ಲ ಮಾಡುತಿರುವಾಗ, ಪ್ರಯತ್ನದ ವರ್ಷಗಳಲ್ಲಿಯೂ ಪ್ರಜಾವೃದ್ಧಿ ನಡೆಯುತಲೇ ಇರುವದೆಂಬುದನ್ನು ಮನಗಾಣಬೇಕು ಒಕ್ಕಲತನದ ಸುಧಾರಣೆಯು ಪರಿಣಾಮವೊಂದೇ ಬೆಳೆದ ಜನಸಂಖ್ಯೆಯ ಅವಶ್ಯಕತೆಗಳಿಗೆ ಸಾಲಲಿಕ್ಕಿಲ್ಲ. ಆದುದರಿಂದ ಒಕ್ಕಲಿಗನೆಂದರೆ ಕೇವಲ ನೆಲವನ್ನು ಉಳುವುವರಿಂದ ಬಾಳುವೆ ಮಾಡುವವನೆಂದು ಹಿಡಿಯದೆ ನೆಲವನ್ನೂ ಎತ್ತು ಭೂಮಿಯಿಂದ ಹುಟ್ಟಿದ ಕಚ್ಚಾ ಸಾಮಗ್ರಿಗಳಿಂದ ಸ್ವಂತ ಉಪಯೋಗಕ್ಕೆ ಬೇರೆ ವಸ್ತುಗಳನ್ನೂ ಹುಟ್ಟಿಸಿಕೊಳ್ಳುವನೆಂದು ಹಿಡಿಯಬೇಕು. ಖಾದಿ ಮತ್ತು ಗ್ರಾಮೋದ್ಯೋಗ ಚಳವಳಿಯ ಬೆನ್ನಲ್ಲಿರುವ ವಿಚಾರಧಾರೆಯಿದೇ. ಸದ್ಯ ಭವಿತವ್ಯದಲ್ಲಿ ಏಕಕಾಲಕ್ಕೆ ಖಾದಿಗೂ ಪ್ರಾಮುಖ್ಯ ಕೊಟ್ಟು ಹೊರತು ಬಡವರ ಗ್ಲಾನಿ ಕಡಿಮೆಯಾಗುವಂತಿಲ್ಲ.

ದೇಶಕ್ಕೆ ಬೇಕಾದ ಆಹಾರ ಪರಿಮಾಣ ಬೀಳುವ ಕೊರತೆಯ ಲೆಕ್ಕಾಚಾರ ಮಾಡುವದರಲ್ಲಿಯೂ ಅದನ್ನು ನೀಗಿಸುವ ಹಾದಿ ಹುಡುಕುವದರಲ್ಲಿಯೂ ಸರಕಾರ ಮಗ್ನವಾಗಿದೆ. ಆದರೆ ನಾವು ಅಳವಾಗಿ ಆಲೋಚಿಸಿದರೆ, "ಹೆಚ್ಚು ಆಹಾರ ಬೆಳೆಯಿರಿ" ಚಳವಳಿ ಆಹಾರ ಕೊರತೆಯ ಲೆಕ್ಕಕ್ಕಷ್ಟೇ ಸೀಮಿತವಾಗಿರಬಾರದೆಂಬ ಅರಿವು ಬಾರದಿರದು. ನಿಜವಾಗಿ ಆಹಾರೋತ್ಪಾದನೆಯ ಪ್ರಮಾಣಕ್ಕೊಂದು ಮಿತಿಯೇ ಇರಕೂಡದು ಅದು ಆಯಾ ವರ್ಷದ ಬೇಕನ್ನಷ್ಟೇ ನೀಗಿಸಿದರೆ ಸಾಲದು. ಮುಂದಿನ ವರ್ಷಕ್ಕೂ ಧಾರಾಳ ಮಿಗಿತಾಯವಿರಬೇಕು. ಆಹಾರವೆಂದರೆ ಬರಿ ಧಾನ್ಯಗಳಷ್ಟೇ ಅಲ್ಲ, ಅದರಲ್ಲಿ ಕಾಯಿಪಲ್ಲೆಗಳೂ ಹಣ್ಣು ಹಂಪಲು ಗಡ್ಡೆ ಗೆಣಸುಗಳೂ ಸೇರಿರಬೇಕು. ಹಣರೂಪದಲ್ಲಿ ದೊರೆಯಬಹುದಾದ, ಪ್ರತಿಫಲದ ಮೇಲೆ ಕಣ್ಣಿಟ್ಟು ಅವುಗಳನ್ನು ಹುಟ್ಟಿಸದೆ ಉತ್ಪಾದಿಸಿದನೇ ಅವಗಳನ್ನು ಉಪಯೋಗಿಸಿಕೊಳ್ಳಬೇಕು. ಅವನೇ ಅವನ ಹುಟ್ಟುವಳಿಯ ಮುಖ್ಯ ಗಿರಾಕಿಯಾಗಿರಬೇಕು ಬೇಡವಾದ ಮಿಗಿತಾಯವಷ್ಟೇ ಮಾರಾಟಕ್ಕೆ ಹೋಗತಕ್ಕದ್ದು. ಸ್ವರಾಜ್ಯವೆಂದರೆ ಇದು. "ತನ್ನ ಹುಟ್ಟುವಳಿಯನ್ನು ತಾನೆ ತಿಂಬವಗೆ ನಾನು ನಮೋನಮೋ ಎಂಬೆ" ಎಂದು ತುಕಾರಾಮ ಹೇಳಿದ್ದಾನೆ. ಹುಟ್ಟಿದ ಮಗನನ್ನು ಪೇಟೆಯಲ್ಲಿ ಮಾರಾಟಕ್ಕೆ ತರಲು ಯಾವ ತಂದೆ ಬಯಸಿಯಾನು? ಅವನಿಗೆ ಎಷ್ಟು ಬೆಲೆ ಬಂದರೂ ಅದು ಕಡಿಮೆಯೇ ಆಯಿತೆಂದು ತಂದೆಗೆನಿಸದೆ? ಅದಂತೆ ಮಾಡಿದರೆ ನಡೆಯಲಿಕ್ಕಿಲ್ಲ ಎನ್ನುವ ಆದರೆ ಅವನು ಹಾಲು ಬೆಣ್ಣೆಗಳನ್ನೂ ಹಣ್ಣು ಹಂಪಲು ಕಾಯಿಪಲ್ಲೆಗಳನ್ನೂ ಹುಟ್ಟಿಸಿ ಅವುಗಳನ್ನು ಮಾರಾಟಕ್ಕೆ ತರುತ್ತಾನೆ. ಅವುಗಳನ್ನು ತಾನೇ ಬಳಸಿದರೆ ನಡೆಯಲಿಕ್ಕಿಲ್ಲವೆನ್ನತ್ತಾನೆ. ಹೀಗೇಕೆ? ನನ್ನ ಉತ್ತರವಿದೆ. ಗ್ರಾಮೋದ್ಯೋಗಿಗಳ ಅಭಾವದಿಂದ ಇದೊಂದು ನನ್ನನ್ನು ಮುತ್ತಿದ ಭ್ರಾಂತಿಯೆಂದು ಯಾರಾದರೂ ಹೇಳಬಹುದು. ಆದರೆ ಅದಕ್ಕೆ ಬೇರಾವದೊಂದು ಕಾರಣವನ್ನು ಒಳಗಿಸದಿದ್ದಷ್ಟು ಕಾಲ ನಾನು ನನ್ನ ನಂಬಿಕೆಯನ್ನೆ ಗಟ್ಟಿಯಾಗಿ ಹಿಡಿದುಕೊಳ್ಳಬೇಕು.

ಗ್ರಾಮ ಪಕ್ಷಪಾತಿ ಯೋಜನೆ

(ಕಳೆದ ಸಂಚಿಕೆಯಿಂದ ಮುಂದುವರಿದಿದೆ.)

೭ ಕೋಳಿ ಸಾಕುವದು

ಕೋಳಿಸಾಕುವದು ಅತ್ಯುತ್ತಮ ಹಳ್ಳಿಯ ಯಾವತ್ತು ಹೊಲ ತೋಟ ಪಟ್ಟಿಗಳಲ್ಲಿಯ ಕೈಗಾರಿಕೆ ಆದರೆ ಈ ಉದ್ಯೋಗದಲ್ಲಿರುವ ಒಂದು ಮಹತ್ವದ ಹಾವಳಿ ಎಂದರೆ ಕಾಲಕಾಲಕ್ಕೆ ಬರುವ ಪಿಡುಗಗಳು ಮತ್ತು ಕೋಳಿಗಳಿಗೆ ಬರುವ ಬೇನೆಗಳು. ಈ ಪಿಡುಗುಗಳನ್ನು ಬೇಗ ನಿವಾರಿಸಿಕೊಳ್ಳಬೇಕೆಂಬುದು ಹಳ್ಳಿಗರಿಗೆ ಹೊಳೆಯದು ಮತ್ತು ಅನೇಕ ಸಲ ಈ ಹಾನಿಯಿಂದ ಅವರ ಸರ್ವಸ್ವ ನಾಶವಾಗುವದುಂಟು ಅವನು ಸ್ವತಃ ಅಷ್ಟೊಂದು ಆರೋಗ್ಯಕರ ರೀತಿಯಲ್ಲಿ ಜೀವನ ನಡೆಸದೆ ಇರುವದರಿಂದ ಮತ್ತು ಅವನಿಗಿರುವ ವಿವಿಧ ಚಟಗಳಿಂದ ಅವನ ದುರ್ದೈವ ಮತ್ತಷ್ಟು ಹೆಚ್ಚಿನದು. ಆದುದರಿಂದ ಕೋಳಿಗಳ ಯೋಗ್ಯ ಸಂರಕ್ಷಣೆ ಮಾಡುವ ಬಗ್ಗೆ ಮತ್ತು ಬೇನೆಗಳು ಬಾರದಂತೆ ನೋಡಿಕೊಳ್ಳುವದಕ್ಕೆ ಒಕ್ಕಲಿಗರಿಗೆ ಅವಶ್ಯವಾದ ಶಿಕ್ಷಣ ಕೊಡಬೇಕು ಸರಕಾರದವರ ಈ ಸಂಬಂಧದಲ್ಲಿನ ಪ್ರಚಾರ ಕಾರ್ಯದಲ್ಲಿ ಸಾಮಾಜಿಕ ಕಾರ್ಯಕರ್ತರು ಬಹುಮಟ್ಟಿಗೆ ಸಹಾಯ ಮಾಡಬಲ್ಲರು.

೮ ಮೀನುಗಾರಿಕೆ

ಹಿಂದುಸ್ತಾನದ ಕರಾವಳಿ ಪ್ರದೇಶ ೫೦೦೦ ಮೈಲು ಇದೆ. ಇಲ್ಲಿನ ದೇಶಬಾಂಧವರ ಆಹಾರ ಬಹಳ ನಿಃಸತ್ವ ಮತ್ತು ಮೈಹವಣಿಕೆಯಿಲ್ಲದ್ದು ಇದೆ ಅಲ್ಲದೆ ಸದ್ಯದಲ್ಲಿ ಇಲ್ಲಿ ಆಹಾರ ಪದಾರ್ಥಗಳ ಕೊರತೆಯೂ ವಿಶೇಷವಾಗಿದೆ. ಇಂಥ ಸಮಯದಲ್ಲಿಯಂತೂ ಈ ಉದ್ಯೋಗದ ಅವಶ್ಯಕತೆ ಬಹಳ ಇದೆ. ಆದರೆ ಇದೀಗ ಈ ಉದ್ಯೋಗದತ್ತ ಯೋಗ್ಯ ಅಧಿಕಾರಿಗಳು ಮತ್ತು ಅಧಿಕಾರೇತರರು ಗಮನಕೊಡುತ್ತಿರುವದರಿಂದ ನಾನು ಹೆಚ್ಚಿಗೆ ವಿವರಿಸಬಯಸುವದಿಲ್ಲ.

೯ ಸಿಂದೀರಸ

ಮುಂಬಯಿ ಪ್ರಾಂತದಲ್ಲಿ ಕೋಟ್ಯವಧಿ ಸಿಂದೀ ಟಂಗಿನಕಾಯಿ ಮತ್ತು ಖರ್ಜೂರ ಗಿಡಗಳಿವೆ. ಇವುಗಳ ರಸದಲ್ಲಿ ಆಹಾರಸತ್ವವಿದೆಂಬುದು ನಿರ್ವಿವಾದ. ಈ ರಸದಿಂದ ಇತರ ಅನೇಕ ಪದಾರ್ಥಗಳು ತಯಾರಾಗುತ್ತಿದ್ದು ಅವುಗಳ ಉಪಯೋಗವೂ ವಿಶೇಷವುಂಟು. ಸಿಂದೀರಸ ಮತ್ತು ಸೆರೆ ಇವುಗಳ ಸಂಬಂಧದಲ್ಲಿ ಜನರು ಗೊಂದಲದಲ್ಲಿ ಬೀಳಬಾರದು ಸೆರೆ ಕೇವಲ ಮಾದಕ ಪದಾರ್ಥವಾಗಿದೆ, ಸಿಂದೀರಸ ಸತ್ವಯುಕ್ತ ಅಮೂಲ್ಯಪದಾರ್ಥ. ಲಕ್ಷಾವಧಿ ಬಡ ಹಳ್ಳಿಗರಿಗೆ ಅಗ್ಗದರದಲ್ಲಿ ಸಿಕ್ಕುವ ಆಹಾರ ಪದಾರ್ಥವೂ ಆಗಿದೆ. ಆದರೆ ಅದು ಹುಳಿಯಾಗದಂತೆ ಪ್ರತಿಬಂಧಿಸಬೇಕು. ಖೇಡಾ ಜಿಲ್ಲೆಯಲ್ಲಿಯಂತೆ ಹಾಲಿನಂತೆ ಅದನ್ನು ನಗರಗಳಿಗೆ ಒಯ್ಯುದಂತೆಯೂ ದಕ್ಷತೆ ವಹಿಸತಕ್ಕದ್ದು. ವ್ಯಾಪಾರಸ್ಥರು ಮತ್ತು ದಲ್ಲಾಳರ ಕೈವಾಡವಿಲ್ಲದೆ ಸ್ಥಳಿಕರಿಗೆ ನೇರವಾಗಿ ಇದು ಸಿಕ್ಕುವಂತೆ ಸರಕಾರದವರು ಸಾಕಷ್ಟು ಸಂರಕ್ಷಣೆ ಮತ್ತು ಪ್ರೋತ್ಸಾಹವನ್ನು ಕೊಡತಕ್ಕದ್ದು. (ವನಸ್ಪತಿ ತುಪ್ಪವನ್ನು ತಿಳಿದುಕೊಳ್ಳುವದಕ್ಕಾಗಿ ಮಾನವನ ಆರೋಗ್ಯಕ್ಕೆ ಅಪಾಯಕರವಲ್ಲದಂಥ ಹಣ್ಣುಗಳನ್ನು ಸೂಚಿಸಿದಂತೆ) ಇದ ಮಾದಕ ಪದಾರ್ಥವಾಗದಂತೆ ನೋಡಿ ಕೊಳ್ಳುವುದಕ್ಕಾಗಿ ಮುಂಬಯಿ ಹಾಫಕ್ರಿಕೆನ್ ಸಂಸ್ಥೆ ಇಲ್ಲವೆ ಕೂನೂರುನಲ್ಲಿಯ ಸಂಸ್ಥೆಯಂಥ ಸಂಸ್ಥೆಗಳ ಮುಖಾಂತರ ಯಾವುದೊಂದು ಔಷಧವನ್ನು ಸಿದ್ಧಪಡಿಸಲಿಕ್ಕೆ ಸರಕಾರಕ್ಕೇನು ಕಠಿನವಾಗದು. ಅದರಿಂದ ಸಿಂದೀರಸ ೨೪-೩೬ ಗಂಟೆಗಳವರೆಗೆ ಹುಳಿಯಾಗದಂತೆ ಇಡಲು ಬರಬಹುದು ಸಿಂದೀಗಿಡಕ್ಕೆ ಕಚ್ಚು ಹಾಕುವವರೆಲ್ಲ ಈ ಔಷಧವನ್ನು ಉಪಯೋಗಿಸಲಿಕ್ಕೇ ಬೇಕೆಂದು ಒತ್ತಾಯಪಡಿಸಬಹುದು

೧೦ ಜೇನು ಸಾಕುವದು

ಈ ಉದ್ಯೋಗವು ತೋಟಿಗರಿಗೆ ಮತ್ತು ಗುಡ್ಡಗಾಡು ಪ್ರದೇಶದ ಸಮೀಪದಲ್ಲಿರುವ ಒಕ್ಕಲಿಗರಿಗೆ ಅತಿ ಉಪಯುಕ್ತ ಆಹಾರ ಪದಾರ್ಥ ಕೊಡುವ ಮತ್ತು ಲಾಭಕರವಾದ ಒಂದು ಉದ್ಯೋಗವಾಗಿದೆ. ನಮ್ಮ ದೇಶದ ಅನೇಕ ಭಾಗಗಳಲ್ಲಿ ಇಂಥ ಗುಡ್ಡಗಾಡು ಪ್ರದೇಶದ ಸಮೀಪಕ್ಕಿರುವ ಅನೇಕ ಜನರು ನಗರಗಳಲ್ಲಿ ವಾರಾಟ ಮಾಡಲಿಕ್ಕೆಂದು ಜೇನುತುಪ್ಪವನ್ನು ಸಂಗ್ರಹಿಸುವದುಂಟು. ಆದರೆ ಇದರಲ್ಲಿ ಬಹಳ ಮಟ್ಟಿಗೆ ಮಿಶ್ರ ಮತ್ತು ವೇಸವುಂಟು ಅಲ್ಲದೆ ಜೇನು ತುಪ್ಪವನ್ನು ಸಂಗ್ರಹಿಸುವ ಅದರ ಪದ್ಧತಿ ಬಹಳ ಅನಾಗರಿಕತೆಯದು ಮತ್ತು ಅಸಹ್ಯವೂ ಆಗಿದೆ. ಈ ಪದ್ಧತಿಯಿಂದ ಜೇನುಗಳೆಲ್ಲ ಸತ್ತು ಹೋಗುತ್ತವೆ. ಆದರೆ ಜೇನು ಸಾಕುವ ಅಧುನಿಕ ಪದ್ಧತಿಗೆ ಎಲ್ಲ ಬಗೆಯಿಂದ ಪ್ರೋತ್ಸಾಹ ಕೊಡುವದವಶ್ಯವಾಗಿದೆ. ಇದು ಹಳ್ಳಿಗರಿಗೆ ಹೆಚ್ಚು ಲಾಭಕರವಾಗಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಇತ್ತೀಚೆ ಜೇನು ಸಾಕುವ ಅತ್ಯುತ್ತಮ ಸಹಕಾರ ಸಂಘಗಳು ಸ್ಥಾಪಿತವಾಗಿದ್ದು ಅವು ಬಹಳ ಊರ್ಜಿತ ಸ್ಥಿತಿಯಲ್ಲಿರುವವು. ಈ ಉದ್ಯೋಗಕ್ಕೆ ಎಲ್ಲ ಬಗೆಯ ಸಂರಕ್ಷಣೆ ಕೊಡುವದು ಖಾನದೇಶ, ನಾಶಿಕ ಪುಣೆ ಜಿಲ್ಲೆ ಮತ್ತು ಗುಜರಿಾಥದಂಥ ಪ್ರಾಂತದ ಬೇರೆ ಬೇರೆ ಭಾಗಗಳಲ್ಲಿ ಈ ಉದ್ಯೋಗವನ್ನು ಕೈ ಕೊಳ್ಳುವಂತೆ ಎಲ್ಲ ಬಗೆಯ ಏರ್ಪಾಡನ್ನು ಮಾಡುವದವಶ್ಯವಾಗಿದೆ.

೧೧ ಉಪ್ಪು, ಹುಲ್ಲು ಮತ್ತು ಉರುವಲು

ಹವೆ ಮತ್ತು ನೀರು ಪ್ರತಿಯೊಬ್ಬ ಹಳ್ಳಿಗರಿಗೆ ಪುಕ್ಕಟೆಯಾಗಿ ಸಿಕ್ಕುತಿರುವಂತೆ ಉಪ್ಪು ಹುಲ್ಲು ಮತ್ತು ಉರುವಲು ಸೃಷ್ಟಿಯ ಕಾಣಿಕೆಯೊಂದು ಪುಕ್ಕಟೆ ದೊರೆಯಲಿಕ್ಕೆ ಬೇಕು. ಎಲ್ಲ ಬಗೆಯ ಗುತ್ತಿಗೆಗಳು ಮತ್ತು ಖಾಸಗಿ ರೀತಿಯಿಂದ ವ್ಯಾಪಾರಕ್ಕೆಂದು ದೊಡ್ಡ ಪ್ರಮಾಣದಲ್ಲಿ ಇವನ್ನೆಲ್ಲ ಉತ್ಪಾದಿಸುವದು ನಿಲ್ಲಲಿಕ್ಕೆ ಬೇಕು. ಹಳ್ಳಿಗರು ಇವನ್ನು ತಲೆಯಮೇಲೆ ಹೊತ್ತು ಕೊಂಡು ಸಡೆಯುತ್ತ ಹೋಗಿ ವ್ಯಾಪಾರಮಾಡಿಕೊಂಡು ಸಾಯಂಕಾಲ ತಿರುಗಿ ಮನೆಗೆ ಬರುವಂತೆ ಅವಕಾಶ ಕಲ್ಪಿಸಿ ಕೊಡಬೇಕು. ಇದರಿಂದ ಅವನ ಉತ್ಪನ್ನ ಹೆಚ್ಚಿಸಿಕೊಳ್ಳಲು ಸಹಾಯವಾಗುವದು.

೧೨ ಹಳ್ಳಿಯ ಕೈಗಾರಿಕೆ ಮತ್ತು ಉದ್ಯೋಗ

ಹಿಂದುಸ್ತಾನದ ಹಳ್ಳಿಯ ಆರ್ಥಿಕ ರಚನೆಯಲ್ಲಿ ಹಳ್ಳಿಯ ಅನೇಕ ಕಲಾಕುಶಲಗಾರರಿಗೆ ಅವಶ್ಯವಾಗಿ ಸ್ಥಾನವಿದ್ದಿತು. ಮುಖ್ಯವಾಗಿ ಅವರು ಕವ್ಯಾರರು, ಬಡಿಗರು, ಪಿಂಜಾರರು, ನೇಕಾರರು, ಕುಂಬಾರರು, ಕೆಲಸಿಗರು, ಗಾಣಿಗರು, ಗೌಳಿಗರು, ಸಮಗಾರರು, ಚರ್ಮ ಹದಮಾಡುವವರು, ಮೊಚ್ಚಿಗಾರರು, ಇವರೆಲ್ಲರು ಅದರಲ್ಲಿ ಒಳಗೊಳ್ಳುತಿದ್ದರಷ್ಟೇ ಅಲ್ಲದೆ ಚಾಪಿ ಮತ್ತು ಬುಟ್ಟಿ ಹೆಣೆಯುವದು ಹಗ್ಗ ಹೊಸೆಯುವದು, ಶಿಂದೀ ಗಿಡಗಳಿಗೆ ಕಚ್ಚುಹಾಕುವದು ಮೊದಲಾದ ಸ್ಥಳೀಕ ಉದ್ಯೋಗ ಧಂದೆಗಳನ್ನು ಮಾಡುವವರಿಗೂ ಅವಕಾಶವಿದ್ದಿತು. ಬಳಿಕೆಗಾರರಿಗೆ ಅವಶ್ಯವಾದ ದೇಶಿ ಇಲ್ಲವೆ ಪರದೇಶಿ ವಸ್ತುಗಳನ್ನು ದೇಶದಲ್ಲಿಲ್ಲ ಹರಡಿ ನಿರುದ್ಯೋಗತೆ, ಆಲಸ್ಯ ಮತ್ತು ದಾರಿದ್ರ್ಯ ಬಹುಸಂಖ್ಯಾಕ ಜನರನ್ನು ಮುತ್ತುವಂತೆ ಮಾಡುವ ಬಂಡವಲುಗಾರ ಉದ್ಯೋಗಸ್ಥರು ಅವರ ಸಮವಾಯಿ ಏಜಂಟರು ಇಲ್ಲವೆ ದಲಾಳರ ಸುಳಿವು ಇದ್ದಿರಲಿಲ್ಲ.

(ಮುಂದುವರಿಯುವದು.)

ಹೆಬ್ಬಾಳ

ಮುಂಡಗಿ ಪೇಠಾದ ಗುಮ್ಮನೋಳದ ಗೋಣಿ ಬಸಪ್ಪನ ದೇವಾಲಯದ ಬನವನ್ನಿನನ್ನು ಯಾರೋ ದುಷ್ಟರು ದ್ರವ್ಯದಾಸೆಗಾಗಿ ಒಡೆದಿದ್ದರು. ಅದು ಪುನಃ ಶ್ರೀ ಟಾಕಪ್ಪ ಜೆಬ್ಬಾಳ ಇವರ ಕಡೆಯಿಂದ ಜೀರ್ಣೋದ್ಧಾರ ಮಾಡಿಸಲು ಗ್ರಾಮಸ್ಥರು ಏರ್ಪಡಿಸಿರುವರು. ಚೈತ್ರ ಶುಕ್ಲ ನವಮಿಯಿಂದ ಸುಪ್ರಸಿದ್ಧ ದನಗಳ ಜಾತ್ರೆಯು ಯಥಾ ಪ್ರಕಾರ ಕೂಡಲಿದೆ.

ಪ್ರಾಥಮಿಕೋಪಾಧ್ಯಾಯರ ಸಂಬಳ

—ಸರ್ಕಾರದ ವಿವರಣೆ—

ಶಾಲೋಪಾಧ್ಯಾಯರ ಸಂಘಗಳಿಂದ ಅನೇಕ ಬೇಡಿಕೆಗಳು ಬಂದಿದ್ದು ಟೀಕಾತ್ಮಕವಾಗಿವೆ. ಅವು ತಪ್ಪು ತಿಳುವಳಿಕೆಯಿಂದಾಗಿರಬೇಕು.

ಹೈಯರ ಗ್ರೇಡ್:— ಲೋಕಲ್ ಬೋರ್ಡು ಸಂಸ್ಥೆಗಳಲ್ಲಿ ಹೆಚ್ಚಾಗಿ ಕೆಲಸದಲ್ಲಿರುವ ಈ ಉಪಾಧ್ಯಾಯರಿಗೆ ಮೊದಲು 20–14–30 ಸಂಬಳವಿದ್ದು ಈಗ 25–40 ಕ್ಕೆ ಏರಿಸಲಾಗಿದೆ. ಯಾವುದಾದರೊಂದು ಉದ್ಯೋಗ ಕಲಿತವರಿಗೆ 5/ ಹೆಚ್ಚಾಗಿ ಕೊಡಲಾಗುವುದು. (30—45) ಇದಲ್ಲದೆ 16/— ತುಟ್ಟೀ ಭತ್ಯವು ಸಿಗುತ್ತದೆ. ಸರಕಾರದಿಂದ ನಿಶ್ಚಿತ ಕಲೆಗಳನ್ನು (Craft) ಕಲಿತು ಇನ್ನೂ 5/– ಹೆಚ್ಚಿಗೆ ಪಡೆಯುವುದೇ ಸರ್ಕಾರದ ಇಚ್ಛೆ– ಪ್ರಾಥಮಿಕ ಶಾಲೆಗಳ ಉಪಾಧ್ಯಾಯರು– ಹೈಯರ್‌ನಿಂದ ಸೆಕಂಡರೀ ಯೋಗ್ಯತೆ ಪಡೆದು ಆಸ್ಕೇಲ್ ಪಡೆಯಬೇಕೆಂದು ಸರ್ಕಾರದವರು ಸೌಕರ್ಯಗಳನ್ನು ಕಲ್ಪಿಸಿರುವರು.

ಸೆಕಂಡರಿ ಗ್ರೇಡ್:— ಹಳೆಯ ಸ್ಕೇಲ್ ಪ್ರಕಾರಕ್ಕೆ ಎಲಿಮೆಂಟರಿ ಶಾಲೆಗಳಲ್ಲಿದ್ದವರಿಗೆ 25—45 ಸೆಕಂಡರೀ ಶಾಲೆಗಳಲ್ಲಿ 30—50 ಇದ್ದಿತು. ಈಗ ಅವನ್ನು 40—70 ಮತ್ತು 45–75 ಕ್ಕೆ ಹೆಚ್ಚಿಸಿ ಇವರ ಜೊತೆಗೆ ತುಟ್ಟೀ ಭತ್ಯವನ್ನು ಕೊಡಲಾಗುತ್ತಿದೆ. ಗವರ್ನಮೆಂಟ್, ಲೋಕಲ್ ಬೋರ್ಡು ಮತ್ತು ಏಡೆಡ ಶಾಲೆಗಳಲ್ಲಿರುವ ಇವರನ್ನು ಮೇಲಿನ ಪದವಿಗೇರಿಸಬೇಕೆಂಬ ಉದ್ದೇಶದಿಂದ ಜೂನಿಯರ್ ಡೆಪ್ಯುಟೀ ಇನ್‌ಸ್ಪೆಕ್ಟರ್ ಖಾಲೀ ಸ್ಥಳಗಳಲ್ಲಿ ಬಹ್ಮಂತನನ್ನು ಕಾದಿರಿಸಿ ಯೋಗ್ಯನನ್ನು ಈ ಪದವಿಗಳಿಗಾರಿಸಲಿರುವರು. ಜೂನಿಯರ್ ಡೆಪ್ಯುಟಿಯವರ ಸಂಬಳವನ್ನು 50—70 ರಿಂದ 60–120 ಕ್ಕೆ ಏರಿಸಲಾಗಿದೆ.

ಏಡೆಡ್ ಶಾಲೆಗಳು:– ಸರ್ಕಾರದವರು ಕೊಡುವುದು ಸಹಾಯಧನ, ಮ್ಯಾನೇಜ್‌ಮೆಂಟಿನವರು ಉಳಿದ ಹಣವನ್ನು ಸಂಗ್ರಹಿಸಬೇಕು ಇವುಗಳನ್ನು ಸರ್ಕಾರ ಅಥವಾ ಬೋರ್ಡ ಶಾಲೆಗಳ ಸಮಾನತೆಗೆ ತರುವುದು ಸಾಧ್ಯವಿಲ್ಲ ಹೈಯರ್‌ನವರಿಗೆ ಮೊದಲು 14 ಬರುತ್ತಿದ್ದು ಈಗ 20–25 ಕ್ಕೆ ಏರಿಸಲಾಗಿ ಜೊತೆಗೆ 16 ರೂಗೆ ಅರ್ಹರಿರುವರು. ಸೆಕಂಡರಿಯವರಿಗೆ ಈಗ 25 + 16 ಕೊಡಲಾಗುತ್ತೆ. ಟೈಂಸ್ಕೇಲ್ ಪ್ರಕಾರಕ್ಕೆ 25–30 ಕ್ಕೆ ಹೆಚ್ಚಲಿದೆ.

ಮ್ಯಾನೇಜ್‌ಮೆಂಟಿನವರು ಸರ್ಕಾರದ –ಯಾ– ಲೋಕಲ್ ಬೋರ್ಡ ದರದ ಪ್ರಕಾರ ಸಂಬಳ ಕೊಡಬೇಕೆಂದು ಅನೇಕ ಬೇಕೆಡಿಗಳು ಬಂದಿವೆ. ಸರ್ಕಾರದವರು ಆ ಪ್ರಕಾರ ಕೊಡಬೇಕೆಂದು ವ್ಯವಸ್ಥಾಪಕರಿಗೆ ಸಿಪಾರ್ಸ್ ಮಾಡುತ್ತಾರೆ.

ಆ ಪ್ರಕಾರ ಕೊಟ್ಟರೆ ಹೆಚ್ಚು ಕೊಟ್ಟು ಸಂಬಳದ ಧರ್ಖಾಗಕ್ಕೆ ಗ್ರಾಂಟು ಕೇಳಬಹುದು.

1–1–47 ರಿಂದ ಬೋರ್ಡ ಮತ್ತು ಏಡೆಡ್ ಶಾಲೆಗಳವರು, ಈ ಸ್ಕೇಲುಗಳನ್ನು ಜಾರಿಯಲ್ಲಿ ತರಲು ಸರ್ಕಾರದವರು ಅಪ್ಪಣೆ ಮಾಡಲಿದ್ದಾರೆ. ಸರ್ಕಾರದವರಿಗೆ ಇದರಿಂದ 91 ಲಕ್ಷ ಹೆಚ್ಚು ಖರ್ಚು ಬರಲಿದೆ. ಆದರು ಉಪಾಧ್ಯಾಯರ ಹಿತದ ದೃಷ್ಟಿಯಿಂದ ಇಷ್ಟೆಲ್ಲ ಮಾಡಿರುವರು. ಮನ್ವಂತರೋಧದಿಂದ 16 ಕೋಟಿ 80 ಲಕ್ಷ ನಷ್ಟವಾಗಿ ಸರ್ಕಾರದ ಧನಸಂಪತ್ತಿಗೆ ಕಪ್ಪು ಬಡಿದಿದ್ದರೂ ಇದನ್ನು ಮಾಡಲಾಗಿದೆ. ಒಳ್ಳೆಯ ಕಾಲಬಂದಾಗ ಮತ್ತಷ್ಟು ಸುಧಾರಿಸಬಹುದು. ಸರ್ಕಾರದವರು ತಮ್ಮ ಕರ್ತವ್ಯವನ್ನು ನೆರವೇರಿಸಿರುವರು. ಉಪಾಧ್ಯಾಯರು ತಮ್ಮ ಕರ್ತವ್ಯವನ್ನು ನೆರವೇರಿಸಿ ಛಲೋ ಕೆಲಸಮಾಡಿ ತೋರಿಸಬೇಕು. ಶಾಲೆಗಳು ಬಹು ಅಭಿವೃದ್ಧಿಯಾಗಬೇಕಾಗಿವೆ. ತಮ್ಮ ಒಳ್ಳೆಯ ಕಾರ್ಯವನ್ನು ಪ್ರದರ್ಶಿಸಿ ಬೇಡಿಕೆಯನ್ನಿಟ್ಟರೆ ಮಾತ್ರ ಭವಿಷ್ಯದಲ್ಲಿ ಅದಕ್ಕೆ ಮುಸ್ಸೆ ದೊರೆತೀತು.

ಉರವಲು ಮತ್ತು ವಿದ್ಯುತ್ತಿನ ಕೊರತೆಗಾಗಿ ೩೦ ಲಕ್ಷ ಜನರು ಇಂಗ್ಲೆಂಡಿನಲ್ಲಿ ನಿರುದ್ಯೋಗಿಗಳಾಗಿರುವರೆಂದು ಗೊತ್ತಾಗಿದೆ.

ಪೂರ್ವ ಕರ್ನಾಟಕಸ್ಥರ ಮಹಾಪರಿಷತ್ತು.

(2 ನೆಯ ಪುಟದಿಂದ ಮುಂದುವರಿದಿದೆ)

ಯಾವ ಪ್ರಾಂತದಲ್ಲಾಗಲಿ ಒಂದು ಜನಾಂಗಕ್ಕೆ ಸ್ಥಾನ ಮಾನಗಳು ಬೇಕು. ಅದರ ಎಚ್ಚರಿಕೆಯನ್ನು ಅಲ್ಲಿಯ ಕನ್ನಡಿಗರಿಗೆ ಕೊಡುವ ಉದ್ದೇಶದಿಂದಲೇ ಈ ಸಭೆಯು ಏರ್ಪಾಟಾಗಿದೆ. ಈ ಸಭೆಯು ಸಮಾವೇಶವಾಗುವ ಸಂದರ್ಭದ ಸಂಪೂರ್ಣ ಕೀರ್ತಿ ಉರವಕೊಂಡ ಜಗದ್ಗುರುಗಳಿಗೇ ಸಲ್ಲಬೇಕಾಗಿದೆ

ಉರವಕೊಂಡ ಗವಿಸಂಸ್ಥಾನ ಮಠದ ಜಗದ್ಗುರುಗಳು ಕಳೆದ ವರ್ಷದಿಂದ ಧರ್ಮಾಧಿಕಾರ ಸೂತ್ರಗಳನ್ನು ವಹಿಸಿದಾಗಿನಿಂದ ಪೂರ್ವಭಾಗದ ಕನ್ನಡಿಗರಲ್ಲಿ ಕ್ರಾಂತಿಯಾಗಿದೆ. ನಿದ್ರಾವಶರಾದವರು ಜಾಗೃತರಾಗುತ್ತಲಿರುವರು. ಕರ್ತವ್ಯ ಶೂನ್ಯತೆ ನಿರಾದರ ನಿರಭಿಮಾನಗಳು ನಾಶವಾಗುತ್ತಲಿನೆ ಸಂಸ್ಥಾನಾಧೀಶರು ಧಾರ್ಮಿಕ ಕಾರ್ಯಗಳೊಂದಿಗೆ ಸಮಾಜಸುಧಾರಣೆ ಮತ್ತು ನಾಡರಚನೆಯ ಕಾರ್ಯದಲ್ಲಾದರೂ ಶ್ರದ್ಧಾಭಕ್ತಿಗಳನ್ನು ವಹಿಸಿದರೆ ಎಂಥಾ ಕಾರ್ಯವಾಗುವದೆಂಬುದಕ್ಕೆ ಸ್ವಾಮಿಗಳು ಶ್ರೇಷ್ಠ ಮಾರ್ಗದರ್ಶಿಗಳಾಗಿರುವರು ಕನ್ನಡಿಗರು ಅತ್ಯಾಧಿಕ ಸಂಖ್ಯಾಕರಾಗಿ ಬಂದು ಸಭೆಯು ಕಾರ್ಯಕಲಾಪಗಳಲ್ಲಿ ನಿಜವಾದ ಆಸ್ಥೆಯನ್ನು (Living Interest) ವ್ಯಕ್ತಪಡಿಸಿ ಭವಿಷ್ಯ ಭಾರತದಲ್ಲಿ ಸ್ವಾಸ್ಥ್ಯ ಸ್ಥಾನವನ್ನು ಸಂಪಾದಿಸಲು ಸಹಾಯವಾಗುವರೆಂದು ಆಶಿಸುತ್ತೇವೆ.

ಮದ್ರಾಸ್ ಮಂತ್ರಿವರ್ಗ

ಪ್ರಕಾಶಂ ಮಂತ್ರಿವರ್ಗದ ಮೇಲೆ ತಂದ ಅವಿಶ್ವಾಸದ ತೀರ್ಮಾನವನ್ನು ಚರ್ಚಿಸಲು ಶ್ರೀ ಪ್ರಕಾಶಂರವರು ಈ ತಿಂಗಳ ೨೮ ನೆಯ ತಾ ಪಾರ್ಟಿಸಭೆಯನ್ನು ಕರೆದಿರುವರು ಆಂಧ್ರ ಪ್ರಾಂತೀಯ ಕಾಂಗ್ರೆಸ್‌ನವರು ಪ್ರಕಾಶಂರ ಮೇಲೆ ಅವಿಶ್ವಾಸ ತೀರ್ಮಾನಕೊಟ್ಟ ೨೭ ಜನವಮೇಲೆ ಶಿಸ್ತುಭಂಗ ಕ್ರಮವನ್ನು ತೆಗೆದು ಕೊಳ್ಳಲಿರುವರು.

Woolen Coatings, Silk Sarees, Benares and other latest designs Handloom and Mill made Clothes Et , Colours Guaranteed, Prices very reasonable Trial Solicited.

G. GOPAL SING & SON ,,
CLOTH MERCHANT
No. 15 Old Market BELLARY.
ಜಿ. ಗೋಪಾಲ ಸಿಂಗ್ ಅಂಡ್ ಸನ್,
ಜವಳಿ ವ್ಯಾಪಾರಿ, ನಂ. 15
ಹಳೇ ಮಾರ್ಕೆಟ್, ಬಳ್ಳಾರಿ.

ಉಲನ್ ಕೋಟಿಂಗ್ ಬಟ್ಟೆ, ಬನಾರಸ್ ಜರಿ, ಶಿಲ್ಕ್-ಟಿಸ್ಯೂ ಸೀರೆ ಜಾಕೆಟ್ ಲೇಸ್ ಬಾರ್ಡರ್ ಮತ್ತು ಇತರ ಅನೇಕ ವಿವಿಧ ಅತ್ಯಂತ ಆಧುನಿಕ ಉಡುಪಿನ ಬೇಡಿಕೆಯನ್ನು ನಾವು ಪೂರೈಸಲಿದ್ದೇವೆ. ಬೈ ಮಗ್ಗದ ಮಿಲ್ ಬಟ್ಟೆಗಳು ವಿಧಾಯಕ ಬೆಲೆಗೆ ದೊರೆಯುತ್ತವೆ. ಬಣ್ಣ ಗ್ಯಾರಂಟಿ, ಬೆಲೆ ಸರಿಯೊದ್ದು. ಪರೀಕ್ಷಿಸಿ ಮನಗಾಣಿರಿ.

ಮಾಗ್ನೋಸೋಲ್ ಮಲಾಮು

ಹುಳುಕು, ಕಜ್ಜಿ, ಇಸಬು, ತದ್ದು, ಮಣ್ಣು, ಘಾಯ, ತಿಂಡಿ ಕೈಕಾಲು ಒಡೆಯುವಿಕೆ ಇನ್ನೆಲ್ಲ ಚರ್ಮವಿಕಾರ ದೋಷಗಳಿಗೆ ಶ್ರೇಷ್ಠಗುಣಕಾರಿಯಾದ ಔಷಧವಿದು. ಫೇರೋಝೋನ್ ಫಾರ್ಮಾಸುಟಿಕಲ್ ವರ್ಕಸ್ ಬೊಂಬಾಯಿಯವರು ಭಾರತ ವೈದ್ಯಶಾಸ್ತ್ರದಲ್ಲಿ ಪ್ರತಿಷ್ಠವಾದ ಬೇವು, ಪುಲಗಿಲು, ಶ್ರೀಗಂಧತೈಲ ಗಂಧಕಪ್ರಮುಖ ಮತ್ತಿತರ ಚರ್ಮ ದೋಷಹರ ದ್ರವ್ಯಗಳಿಂದ ಶಾಸ್ತ್ರೀಯವಾಗಿ ತಯಾರಿಸಿರುವರು. ದೋಷಯುಕ್ತಭಾಗವನ್ನು ಬಿಸಿನೀರಿನಿಂದ ತೊಳೆದನಂತರ ಮಲಾಮಿನಿಂದ ತಿಕ್ಕಬೇಕು.

ಕ್ರಯ 1—4—0

ಮದ್ರಾಸ ಪ್ರಾಂತ್ಯದಲ್ಲಿ ಮಾರಲು ಅಧಿಕಾರಕೊಂಡಿದವರು

ಡಾಕ್ಟರ್ ವೆಂಕಟರಮಣ,
ಪ್ರೇಮ ಮೆಡಿಕಲ್ ಹಾಲ್, ಬಳಾರಿ



Guarranteed Pure Pyra Gingelly oil

Best for Pickles, Cooking & Cooling.

DISTRIBUTORS:—

1 M/S V. M. GIRI & SONS,

(Pro:- M/S Acharya) Car Street, Bellary

2 M/S. HUSANJEE RAO. M VENKOJI RAO

General Merchants, Car Street Bellary.

ಸುದ್ಧ! ಗ್ಯಾರಂಟಿಯಾದ್ದು!! ಸತ್ವಕಾರಿ!!!

—ಪೈರ ಎಳ್ಳೆಣ್ಣೆ—

ಕಣ್ಣಿಗೆ ಬಹಳ ತಂಪಾದ್ದು, ಅಡಿಗೆಯ ಎಲ್ಲಾ ಪದಾರ್ಥಗಳಿಗೆ ಬಳಸಲು ಶ್ರೇಷ್ಠವಾದ ಎಣ್ಣೆಯಿದು.
ಉಪ್ಪಿನಕಾಯಿಗೆ ಈ ಎಣ್ಣೆಯ ನ್ನು ಪರೀಕ್ಷಿಸುವದರಿಂದ ಬಹಳಕಾಲ ಕೆಡದಂತಿಡಬಹುದು.

ಹಂಚಲಧಿಕಾರ ಉಳ್ಳವರು. 1) ವಿ ಎಂ. ಗಿರಿ ಅಂಡ್ ಸನ್ಸ್-ತೇರು ಬೀದಿ, ಬಳ್ಳಾರಿ. (ಎಂ. ಎಸ್. ಆಚಾರ್ಯ)
2) ಎಂ. ಹುಸೇಂಜಿರಾವ್, ಎಂ. ವೆಂಕೋಬರಾವ್. ತೇರುಬೀದಿ, ಬಳ್ಳಾರಿ.

ಸು ಭಾ ಸ್

ರಾ ಷ್ಟ್ರ ಗೀ ತೆ.

ಸಿದ್ಧವಾಯಿತು— ಕ್ರಯ ೦—೮—೦

ಸುಂದರ ಮುದ್ರಣ— ಇಲ್ಲಿಯವರೆಗಿನ ಸ್ವಭಾತ ಫೇರಿ, ರಾಷ್ಟ್ರೀಯ ಸಮಾವೇಶಗಳಲ್ಲಿ ಹಾಡಲ್ಪಟ್ಟ ಎಲ್ಲಾ ಮುಖ್ಯ ದೇಶಭಕ್ತ ಕವಿಗಳ ಕನ್ನಡ ಮತ್ತು ಹಿಂದೀ ಭಾಷೆಯಲ್ಲಿನ ರಾಷ್ಟ್ರಗೀತೆಗಳ ಸಮಗ್ರ ಸಂಗ್ರಹ. ಕರ್ನಾಟಕದಲ್ಲಿ ರಾಷ್ಟ್ರ ಗೀತೆಗಳ ಇಷ್ಟು ದೊಡ್ಡ ಸಂಗ್ರಹವು ಇದುವರೆಗೆ ಪ್ರಕಟವಾಗಿಲ್ಲ. ಸ್ವಲ್ಪೇ ಪ್ರತಿಗಳು ಪ್ರಕಟವಾಗಿವೆ. ಹೆಚ್ಚು ಕೊಳ್ಳುವವರಿಗೆ ಕಮಿಷನ್ ಕೊಡಲಾಗುತ್ತದೆ.

'ನವಭಾರತ' ಕಾರ್ಯಾಲಯ ಬಳ್ಳಾರಿ.

—ರಾಷ್ಟ್ರೀಯ ಪುಸ್ತಕಗಳು.—

— ಕಾಂಗ್ರೆಸ್ ಸ್ವರೂಪ ದರ್ಶನ —

ರಾಷ್ಟ್ರೀಯ ಶಿಕ್ಷಣ	0—8—0
ಅಸ್ಪೃಶ್ಯತಾ ನಿವಾರಣೆ	0—12—0
ಪ್ರಾಂತಭಾಷೆ-ರಾಷ್ಟ್ರಭಾಷೆ	0—6—0
ಖಾದಿ	0—8—0
ಕಾಂಗ್ರೆಸ್ ಮತ್ತು ಸ್ವಯಂಸೇವಕದಳ	0-10-0
ಸತ್ಯಾಗ್ರಹ (ಇತಿಹಾಸ-ತತ್ವ)	0—8—0

ವಿ. ಪಿ. ಖರ್ಚುಬೇನೆ. ಇನ್ನು ಅನೇಕ ಪುಸ್ತಕಗಳು ದೊರೆಯುತ್ತವೆ.—

ನವಭಾರತ ಕಾರ್ಯಾಲಯ, ಬಳ್ಳಾರಿ.

NAVA BHARAT, BELLARY. Reg. No. M. 4746

ನವಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು.	Subscription Rates
ವರ್ಷಕ್ಕೆ 5-0-0	One Year 5—0—0
6 ತಿಂಗಳಿಗೆ 3-0-0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

SRI.....

.....

.....

Printed at Krishna Press Bellary QH No. B 17 FOR (Q.H. NO. B-5)

Edited & Published by T. B. KESHAVARAO

ಜೈಹಿಂದ್ Reg. No. M. 4746

ವಿಜಯ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಪುಟ್ಟ ೬ ಸಂಚಿಕೆ ೯ ಬಳ್ಳಾರಿ ಮಾರ್ಚ್ ೩ ಸೋಮವಾರ ೧೯೪೭ ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವ್.

ರಾಷ್ಟ್ರಾಧ್ಯಕ್ಷೆಯರು ಬಳ್ಳಾರಿಗೆ ಬರುವರು.

ರಾಷ್ಟ್ರಾಧ್ಯಕ್ಷರಾದ ಆಚಾರ್ಯ ಕೃಪಾಲಿನಿಯವರು ತಮ್ಮ ಕರ್ನಾಟಕ ಸಂಚಾರದಲ್ಲಿ ಬಳ್ಳಾರಿಗೆ ಬರಲಿಯವರೆಂದು ಗೊತ್ತಾಗಿದೆ. ಅವರಿಗೆ ಆರೋಗ್ಯವು ಸರಿಯಿಲ್ಲದ ಕಾರಣ ಹೆಚ್ಚು ಕಾರ್ಯಕ್ರಮಗಳನ್ನಿಟ್ಟು ಕೊಳ್ಳಬಾರದೆಂದು ಕೆ. ಪಿ. ಸಿ. ಸಿ. ಅಧ್ಯಕ್ಷರು ಬಿನ್ನವಿಸಿದ್ದಾರೆ.

ರೈಲ್ವೆ ದರ ಏರಲಿದೆ

ರೂಪಾಯಿಗೆ ಒಂದಾಣೆಯಂತೆ ರೈಲ್ವೆದರಗಳು ಏರಲಿವೆ. ಆದರೆ ಕಡಮೆ ಪ್ರಯಾಣದ ಅಂದರೆ ಎಂಟಾಣೆ ಮತ್ತು ಅದಕ್ಕಿಂತ ಕಡಮೆ ದರದ ಟಿಕೆಟ್‌ಗಳಮೇಲೆ ದರ ಏರಿಸುವುದಿಲ್ಲ.

ಪ್ರಕಾಶಂ ಮಂತ್ರಿಮಂಡಳ ಅವಿಶ್ವಾಸ ಸೂಚನೆ.

೨೮ ನೆಯ ದಿನಾಂಕ ಇದು ಚರ್ಚೆಗೆ ಬಂದಿತ್ತು. ಶ್ರೀ ಪಟೇಲ ಮತ್ತು ನೆಹರೂರವರು ಶ್ರೀ ಪ್ರಕಾಶಂರವರಿಗೆ ಪತ್ರಬರೆದಿರುವುದನ್ನು ಶ್ರೀ ಪ್ರಕಾಶಂರು ಒಪ್ಪಿಕೊಂಡಿರುವರು.

ಶ್ರೀ ಜಯಪ್ರಕಾಶರು ಧುರೀಣರಾದ ಕಾಂಗ್ರೆಸ್ ಸೋಶಿಯಲಿಸ್ಟರು ಇನ್ನುಮೇಲೆ ಕಾಂಗ್ರೆಸ್ ಶಬ್ದ ಬಿಟ್ಟುಬಿಡುವರು. ಆದರೆ ಕಾಂಗ್ರೆಸ್‌ನಿಂದ ಹೊರ ಬೀಳುವುದಿಲ್ಲ.

ಉಡೇಗೊಳ (ರಾಯದುರ್ಗ)

ಇಲ್ಲಿ ದನಗಳ ಜಾತ್ರೆಯು ೨೦ ನೆಯ ದಿನಾಂಕದಿಂದ ಒಂದುವಾರದ ವರೆಗೆ ನಡೆಯಿತು. ೨೦ ನೆಯ ತಾ. ಜಿಲ್ಲಾ ಕಲೆಕ್ಟರ್ ಶ್ರೀ ಅನಂತರಾಮನ್‌ರವರು ಪ್ರಾರಂಭೋತ್ಸವವನ್ನು ನೆರವೇರಿಸಿದರು. ವ್ಯವಸಾಯಶಾಖೆ ಪಶುವೈದ್ಯ ಶಾಖೆ ಮತ್ತು ಆರೋಗ್ಯ ಶಾಖೆಯವರು ಪ್ರದರ್ಶನಗಳನ್ನೇರ್ಪಡಿಸಿದ್ದರು- ಈವರ್ಷ ನೂತನವಾಗಿ ರಥವನ್ನು ತಯಾರಿಸಿ ಜಾತ್ರೆಯ ಏರ್ಪಾಟು ಮಾಡಿದವರು ಶ್ರೀತಿಪ್ಪೇ ಸ್ವಾಮಪ್ಪ ಮತ್ತು ಇತರ ಭಕ್ತರು.

ಚಿತ್ರದುರ್ಗದ ಶ್ರೀಮುರಘೆ ರಾಜೇಂದ್ರಸ್ವಾಮಿಗಳು ಆನೆಯನ್ನು ಹಿರಾಳ ಶೆಟ್ಟರ ನಾಗಪ್ಪನವರ ಬಿಳ್ಳಿಯು ನಂದಿಧ್ವಜ ವನ್ನೈರೆ ಕಳುಹಿಸಿದ್ದರು. ೨೩ ನೆಯ ತಾ|| ಜಿಲ್ಲಾ ವೆಟರ್ನರಿ ಸರ್ಜನರಧ್ಯಕ್ಷತೆಯಲ್ಲಿ ಶ್ರೀ ವಿಜ್ಜಿರೆಡ್ಡಿ R. D. O. ರವರು ಸುಮಾರು 500/ ಬೆಲೆ ಬಾಳುವ ವಸ್ತುಗಳನ್ನು ಬಹುಮಾನ ರೂಪವಾಗಿ ಕೊಟ್ಟರು. ಶ್ರೀ ಶೆಟ್ಟರ ದೊಡ್ಡಪ್ಪನವರ ವಂದನಾರ್ಪಣದಿಂದ ಸಭೆ ಮುಗಿಯಿತು.

BANK WITH THE

Rayalaseema Bank, Bellary.

ನೋಟೀಸು.

ಈ ಮೂಲಕ ಸರ್ವರಿಗೂ ತಿಳಿಯಪಡಿಸುವುದೇನಂದರೆ:- ರಾಯಚೂರು ಜಿಲ್ಲಾ ಲಿಂಗಸೂಗೂರು ತಾಲೂಕು ಪೈಕಿ ಮುದಗಲ್ಲು ಗ್ರಾಮದಲ್ಲು ಪೂರ್ವಕ್ಕೆ ಅಕ್ಕಸಾಲಿಗರ ಗೂಳಪ್ಪನ ಮಳಿಗಿ ಪಶ್ಚಿಮಕ್ಕು ದಕ್ಷಿಣಕ್ಕು ಸರಕಾರಿ ರಸ್ತೆ, ಉತ್ತರಕ್ಕೆ ಮಳಿಗೆಯಹಿಂದೆ ಕಬರಸ್ತಾನ ಈ ಚಿಕ್ಕಬಂದಿಯಲ್ಲಿರುವ ನಮ್ಮ ಮಳಿಗಿ ಅಂದರೆ 1 ನೆಯ ಶರಣ ಬಸವಯ್ಯ, 2 ನೇ ಕಲಗಣ ನಾಥಶರ್ಮ 3 ನೆಯ ಮಹಾಂತೇಶ ಶರ್ಮ, ಈ ಮೂವರದು ಕೂಡಿ ಅರ್ಧ ಭಾಗ, ನಮ್ಮಕಕ್ಕನಂದಿರದ್ದು ಅರ್ಧಭಾಗ ಇರುತ್ತದೆ. ಇದರ ಅರ್ಧಭಾಗದಲ್ಲಿ ನನ್ನದೂ, ಮಹಾಂತೇಶ ಶರ್ಮನದೂ ಭಾಗ ಇದ್ದರೂ ನಮಗೆ ಗೊತ್ತಿಲ್ಲದಂತೆ ನಮ್ಮ ಹಿಸ್ಸೆನುಳುಗಿಸುವದು ದುದ್ದೇಶದಿಂದ, ನಮ್ಮಸಮ್ಮತಿ, ಸಹಿ ಇಲ್ಲದೆ ನಮ್ಮ ಅರ್ಧಭಾಗದ ಮಳಿಗೆಯನ್ನು ಶರಣ ಬಸವಯ್ಯನೊಬ್ಬಾತನಿಂದಲೇ ಏನೋ ಕಾಗದ ಪತ್ರನಾಡಿಸಿಕೊಂಡಿರುವುದಾಗಿ ಸುದ್ದಿ ಕೇಳಿರುತ್ತೇನೆ. ಇದೇರೀತಿ ಮೊದಲೊಮ್ಮೆ ಬನ್ನಿಗೋಳಿದಲ್ಲಿ, ನಮ್ಮ ತಂದೆಯವರ ಭಾಗಕ್ಕೆ ಬಂದ ನಾವಿರುವ ಮನೆಯನ್ನು ನಮ್ಮಗ್ರಾಮದ ಮರಳಿ ಹೀರೇ ಪರಮಪ್ಪ, ತಂದಿ ಬಸಪ್ಪ ಈತನಿಗೆ ನಮ್ಮಿಬ್ಬರ ಹಿಸ್ಸಾನುಳಿಗಿಸುವ ದುರುದ್ದೇಶದಿಂದ ನಮ್ಮಿಬ್ಬರಿಗೆ ಗೊತ್ತಿಲ್ಲದಂತೆ ನಮ್ಮ ಸದ್ರಿ ಅಣ್ಣ ಶರಣಬಸವಯ್ಯನೊಬ್ಬಾತನಿಂದಲೇ ಖರೀದಿ ರಿಜಿಸ್ಟರು ಮಾಡಿಸಿಕೊಂಡು ಸದ್ರಿಮನೆಯನ್ನು ಅಕ್ರಮಿಸುವುದಕ್ಕಾಗಿ ಅಕ್ರಮವಾದ ಕಛ್ಲೆ ಹೂಡಿದ್ದನು. ಘನವಣೆ ಮುನ್ಸೀಫ್ ಕೋರ್ಟನಲ್ಲಿ ಕಛ್ಲೆಯು ಸುಳ್ಳಾಗಿ, ನನ್ನ ಮತ್ತು ಮಹಾಂತೇಶನ ಸಹಿಯಿಲ್ಲದೆ, ನಮ್ಮ ಅಣ್ಣ ಶರಣಬಸವಯ್ಯನೊಬ್ಬಾತನಿಂದ ಮಾಡಿಸಿಕೊಂಡದ್ದು ನಾಮಕಾರ್ಥವಾದ ಮೋಸದ ರಿಜಿಸ್ಟರಿಯು ಅಕ್ರಮವಿರುವದೆಂದು ತೀರ್ಮಾನವಾಗಿದೆ. ಹೀಗಿದ್ದರೂ ಮತ್ತೆ ಈ ಸಲವೂ ಅದೇರೀತಿ ನನ್ನ ಅರ್ಧ ಭಾಗದ ಮಳಿಗೆಯನ್ನು ನಮ್ಮ ಅಣ್ಣನಿಂದ ಮಾಡಿಸಿಕೊಂಡಿದ್ದ ಕಕ್ಷದಲ್ಲಿ ಇದೂ ಕೂಡಾ ನಾಮಕಾರ್ಥವಾದ ಖೊಟ್ಟಿರಿಜಿಸ್ಟರಿಯೆಂದೇ ತಿಳಿಯತಕ್ಕದ್ದು.

ಇನ್ನೂ ಉಳಿದ ಮಳಿಗೆಯ ಅರ್ಧ ಭಾಗವನ್ನು ನಮ್ಮಕಕ್ಕ ತೋಟಯ್ಯನವರ ಕಡೆಯಿಂದ ಬರೆಸಿಕೊಂಡಿರುವುದಾಗಿಯೂ ಸುದ್ದಿಯಿದೆ. ಸದ್ರಿ ಕಕ್ಷದಂದಿಗೆ ಈ ಮಳಿಗೆ ಸ್ವಾರ್ಜಿತವಲ್ಲ ಪಿತ್ರಾರ್ಜಿತವಾದ ಸ್ಥಿರಾಸ್ತಿಯಾಗಿದ್ದು, ಅವರ ಮಗನಾದ ಬೋಳಾಡಿವಿರೇಶನ ಮತ್ತು ಹಿರಿಯರಾದ ಅನುರನಾಥ ಶಾಸ್ತ್ರಿಗಳ್ಳು ಇವರ ಹಿರಿಯನುಗ ಗುರುಶಾಂತ ಶಾಸ್ತ್ರಿಯು ಸಮ್ಮತಿ ಸಹಿ ಇಲ್ಲದೆ ತಾವೊಬ್ಬರೇ ಯಾವ ರೀತಿಯೂ ಬರೆದು ಕೊಡಲು ಸದ್ರಿ ತೋಟಯ್ಯನೊಬ್ಬಾತನಿಗೆ ಅಧಿಕಾರವಿಲ್ಲ. ಈ ಬಗ್ಗೆ ಹಿರಿಯ ಕಕ್ಷದಂದಿರಾದ ಅನುರನಾಥ ಶಾಸ್ತ್ರಿಗಳು ಸದ್ರಿ ತೋಟಯ್ಯನ ಕಡೆಯಿಂದ ಹಿಂದಿನ ಮತಿಯಿಂದಾಗಲೀ ನುಂದೆ ಯಾವ ಕಾಲದಲ್ಲಾಗಲೀ ಯಾವುದೇ ರೀತಿ ಕಾಗದ ಪತ್ರ, ಬರೆಯಿಸಿಕೊಂಡಲ್ಲಿ ತಮ್ಮನ್ನು ಮೋಸಗೊಳಿಸುವುದಕ್ಕಾಗಿ ಬರೆಯಿಸಿಕೊಂಡ ಖೊಟ್ಟಿ ಬರವಣಿಗೆಯೇ ಆಗಿರುತ್ತದೆಂದು ತಿಳಿದುಕೊಳ್ಳಬೇಕಾಗಿ ಬಳ್ಳಾರಿ ಸಮಾಚಾರ ವಾರಪತ್ರಿಕೆಯ ಸೆಪ್ಟೆಂಬರ್ 6-1937 ರ ಸಂಚಿಕೆಯಲ್ಲಿ ನೋಟೀಸು ಕೊಟ್ಟಿರುವರು. ಕಕ್ಷ ತೋಟಯ್ಯನು ಮೊದಲಿನಿಂದ ನಾಟಕ ವಗೈರೆ ಚೈನೀ ಬಾಜಿಯದುಂದುಗಾರಿಕೆಯವರಿದ್ದು, ಇತ್ತೀಚೆಗೆ ನಾಲ್ಕಾರು ವರ್ಷಗಳಿಂದ ಕೆಲವು ದುರಭ್ಯಾಸಗಳ ಮೂಲಕ ಅವರ ಬುದ್ಧಿಯೇ ಸ್ವಾಧೀನವಿಲ್ಲ. ಅವರ ಈ ದುರಭ್ಯಾಸ ನಿಮಿತ್ತವಾಗಿಯೇ ಜಗಳ ಹುಟ್ಟಿ ಅನುರನಾಥ ಶಾಸ್ತ್ರಿಗಳು, ತೋಟಯ್ಯ ಇವರಿರುವ ಮನೆಗೇ ಬರುವುದಿಲ್ಲ ವಷ್ಟೇ ಅಲ್ಲದೆ ಬನ್ನಿಗೋಳಿಕ್ಕೆ ಸಹ ಬರುವದೇ ಅಪರೂಪವಾಗಿದೆ. ಈ ಕಾರಣದಿಂದ ಅನುರನಾಥ ಶಾಸ್ತ್ರಿಗಳು ಸದ್ರಿ ನಮ್ಮ ಮಳಿಗೆಯಲ್ಲಿ ಬಾಡಿಗೆಯಿರುವ ಬಳಿಗಾರ ವೀರಪ್ಪನಕಡೆಯಿಂದ ಮಳಿಗೆಯ ಬಾಡಿಗೆಯನ್ನು ಬಾಡಿಗೆಯಿಸಗೊಂಡು ಬಾಡಿಗೆ ಪತ್ರಬರೆಸಿ ಕೊಡಬೇಕಾಗಿ ನನಗೆ ಹೇಳಿದ್ದರು. ಸದ್ರಿ ವೀರಪ್ಪನು ಇಂದು ನಾಳೆ

ಯೆಂದು ದಿನಗಳೆಯುತ್ತಾನೆ ಮೊದಲು ಬರೆದು ಕೊಟ್ಟ ಬಾಡಿಗಿ ಪತ್ರವು ಎರಡುವರ್ಷ ಮೇಲ್ಪಟ್ಟಾದರೂ ಮತ್ತೆ ಬಾಡಿಗಿ ಪತ್ರಬರೆದು ಕೊಡಲು ವಿಲಂಬ ಮಾಡುತ್ತಿರುವನು. ಇದರಿಂದ ಈತನೇನಾದರೂ ಬರೆಸಿಕೊಂಡಿರುವನೋ ಯಾವುದೂ ತಿಳಿಯದು. ಯಾರಿಗೇ ಆಗಲೀ ಸದ್ರಿಮಳಿಗೆಯನ್ನು ಒತ್ತಿ. ಯೂ. ಖರೀದಿ ಬರೆದುಕೊಡುವಂಥ ಮನೆತನ ನಿಮಿತ್ತವಾದ ಯಾವ ಅವಶ್ಯ ಕಾರ್ಯ ಸಂದರ್ಭವು ನಮ್ಮ ಅಣ್ಣನಿಗಾಗಲೀ ನಮ್ಮ ಕಕ್ಕನಿಗಾಗಲೀ ಈ ವರೆಗೂ ಇಲ್ಲ. ಈ ಮಳಿಗೆಯ ಹಕ್ಕುದಾರರಾದ ನನ್ನ ಮತ್ತು ಮಹಾಂತೇಶನ, ಮತ್ತು ತೋಟಯ್ಯನಮಗ ಬೋಳಾಡಯ್ಯ ಹಿರಿಯ ಕಕ್ಕಂದಿರು ಅವರ ಮಗ ಗುರುಶಾಂತ ಶಾಸ್ತ್ರಿಯ, ಹೀಗೆ ನಮ್ಮೆಲ್ಲರಿಗೆ ಗೊತ್ತಿಲ್ಲದಂತೆ ಸಮ್ಮತಿ ಸಹಿಯಿಲ್ಲದೆ ಯಾರೇ ಆಗಲೀ ಸದ್ರಿ ಮಳಿಗೆಯನ್ನು ನಮ್ಮ ಅಣ್ಣ 'ಶರಣಬಸವಯ್ಯ ಕಕ್ಕ ತೋಟಯ್ಯ ಇವರಿಬ್ಬರಿಂದಲೇ ವಿಕ್ರಯವನ್ಮೈರಿ, ಬರಿಸಿಕೊಂಡಿದ್ದಲ್ಲಿಯೂ ಮತ್ತು ಇದರಂತೆ ಮುಂದೆಯೂ ಆಗಲೀ ನಮ್ಮಮನೆತನದ ಯಾವತ್ತು ಸ್ಥಿರಾಸ್ತಿಗು ಪಟ್ಟಾದಾರರೂ ಮನೆತನಕ್ಕೆ ಹಿರಿಯರೂ ಆದ ಅಮರನಾಥ ಶಾಸ್ತ್ರಿಗಳ ಒಪ್ಪಿಗೆ ಸಹಿ ಇಲ್ಲದೆ ನಮ್ಮ ಮನೆತನದ ಪೈಕಿ ಯಾರಿಂದಲೇ ಆಗಲಿ ಯಾರಾದರೂ ಒರೆದಿಸಿಕೊಂಡಲ್ಲಿ ಅಂಥಾ ಕಾಗದ ಪತ್ರಗಳೆಲ್ಲಾ ನಾಮಕಾರ್ಥವಾದ ಖೊಟ್ಟತನದವಿರುತ್ತವೆಂದು ತಿಳಿಸುವುದಲ್ಲದೆ, ಈ ಮೂಲಕ ಮುದಗಲ್ಲು ಬಳಿಗಾರ ವೀರಪ್ಪಾ ಸೂಗಪ್ಪಾ ಈತನು ಬಾಡಿಗೆಯನ್ನು ಕೊಟ್ಟು ನಮ್ಮ ಮಳಿಗೆ ನಮ್ಮ ಕಬ್ಜೆಗೆ ಒಪ್ಪಿಸಬೇಕಾಗಿಯೂ, ಇಲ್ಲವಾದರೆ ಮುಂದಿನ ಯಾವತ್ತೂ ಕೋರ್ಟಿನ ಖರ್ಚಿಗೆ ಜವಾಬ್ದಾರನಿರುವುದಾಗಿ ತಿಳಿಸುವ.

ಕಲಗಣನಾಥ ಶರ್ಮಾ, ತಂದಿ, ಬಸವಲಿಂಗಯ್ಯ
ಲಕ್ಷ್ಮೀಶ್ವ ಯಳವತಿ, ಗುಂಜಳಿ, ಬನ್ನಿಗೋಳ, ಹಿರೇಮಠ; ಸಾಕೀನ ಬನ್ನಿಗೋಳ,

ತಾ|| ೨೬-೧೧-೧೯೪೭,

ಬಳ್ಳಾರಿ ಜಿಲ್ಲೆಯ ಸ್ಥಳೀಕ ಸಂಸ್ಥೆಗಳಿಗೆ ಚುನಾವಣೆ

ಬಳ್ಳಾರಿ ಜಿಲ್ಲೆಯಲ್ಲಿ ಮುನಿಸಿಪಲ್ ಕೌನ್ಸಿಲ್ ಹಾಗೂ ಬೋರ್ಡು ಚುನಾವಣೆಗಳಿಗೆ ಕಾಂಗ್ರೆಸ್ ಉಮೇದುವಾರರಾಗಿ ನಿಲ್ಲಬಕ್ಕವರು ಬಳ್ಳಾರಿ, ಸಿರಗುಪ್ಪ, ಹೊಸಪೇಟೆ, ಹಡಗಲಿ, ಹರಪನಹಳ್ಳಿ, ಕುಡ್ಲಿಗಿ—ಈ ತಾಲೂಕುಗಳ ಮಟ್ಟಿಗೆ ಬಳ್ಳಾರಿ ಕರ್ನಾಟಕ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಿಂದಲೂ, ಆಲೂರು, ಆದೋನಿ, ರಾಯದುರ್ಗ, ಈ ತಾಲುಕುಗಳ ಮಟ್ಟಿಗೆ ಆಂಧ್ರ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಿಂದಲೂ ಯೋಗ್ಯತಾ ಪತ್ರಗಳನ್ನು ತರಬೇಕು.

ಪೂರ್ವ ಕರ್ನಾಟಕಸ್ಥರ ಮಹಾಪರಿಷತ್ತು ಉರವಕೊಂಡ.

ಈ ಪರಿಷತ್ತು ೨ ನೆಯ ದಿನಾಂಕ ಬಳ್ಳಾರಿಯ ಶ್ರೀ ಟಿ. ಯಜ್ಞ. ಎಂ. ಚಂದ್ರಶೇಖರ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಶ್ರೀ ಜೋಳದರಾಶಿ ದೊಡ್ಡನಗೌಡರು ತಮ್ಮ ಸ್ವಾಗತಾಧ್ಯಕ್ಷಭಾಷಣದಲ್ಲಿ ಕರ್ನಾಟಕದ ವಿವಿಧ ಪ್ರಾಂತಗಳಿಂದ ಬಂದು ಪ್ರೋಕ್ಷಕರಿಗೂ ಪ್ರತಿನಿಧಿಗಳಿಗೂ ಸ್ವಾಗತ ಕೋರಿ ಭವಿಷ್ಯದ ಪ್ರಗತಿಗಾಗಿ ಉಪಯುಕ್ತ ಸೂಚನೆಗಳನ್ನು ಕೊಟ್ಟರು, ಶ್ರೀ ಸಿದ್ದರಾಮಪ್ಪಣ್ಣ ಮಾನ್ವಿ ಗದಗ ಇವರು ಪರಿಷತ್ತಿನ ಉದ್ಘಾಟನೆಯನ್ನು ಮಾಡಿದರು.

ಪರಿಷತ್ತಿನ ಮಳಿಗೆ ಜೈಹಿಂದ್ ನಾಟಕ ಮಂಡಳಿಯವರು 'ಕರ್ನಾಟಕ ವೀರಸಾವಿತ್ರಿ ಕಿತ್ತೂರ ಚನ್ನಮ್ಮ' ಈ ನಾಟಕವನ್ನು ಪ್ರದರ್ಶಿಸಿದರು.

ಜಿನ್ನಾ ಸಾಹೇಬರು ಅಲ್ಪಸಂಖ್ಯಾಕರನ್ನು ನ್ಯಾಯವಾದ ರೀತಿಯಲ್ಲಿ ನೋಡಿಕೊಳ್ಳುವೆವೆಂದು ಪ್ರಕಟಿಸಿ ಕರಾಚಿಯಿಂದ ಬೊಂಬಾಯಿಗೆ ಹೊರಟರು.

ಯಾರು ಮೋಸಹೋಗಬೇಡಿರಿ.

ಸಂಪಾದಕ ನವಧಾರೆ ಇವರಿಗೆ. ನಮ್ಮೂರಿನ ಹರಿಜನರ ರಾಮದಾಸ ಎಂಬ 35 ವರ್ಷದವಯಸ್ಸಿನಾತನೊಬ್ಬನು ಬಳ್ಳಾರಿ ಜಿಲ್ಲೆಯಲ್ಲು ಹಾಗು ಇತರ ಕರ್ನಾಟಕದ ಪ್ರದೇಶದಲ್ಲು ನಮ್ಮೂರಿನ ಹಾಸ್ಟಲ್‌ಗಾಗಿ ಹಣವಸೂಲಿಮಾಡುತ್ತಿರುವದು ತಿಳಿದುಬಂದಿದೆ. ನಮ್ಮೂರಿನಲ್ಲಿ ಹರಿಜನ ಹಾಸ್ಟಲ ಇಲ್ಲಾ. ನಾನಾಗಲಿ ಶ್ರೀಯುತ. ಮುರಿಬಸವನಗೌಡ್ರು ಆಗಲಿ ಅಥವಾ ಊರಿನ ಯಿತರರು ಯಾರೇ ಆಗಲಿ ಈತನಿಗೆ ಹಣವಸೂಲೀ ಮಾಡಲು ಅಧಿಕಾರ ಕೊಟ್ಟಿರುವದಿಲ್ಲಾ ದೇಶಸೇವೆ ಮತ್ತು ಸಮಾಜಸೇವೆ ಮಾಡುವೆನೆಂಬ ಸೋಗಿನಿಂದ ಜಾದಿಬಟ್ಟೆ ದರಿಸಿ ತನ್ನ ಸ್ವಾರ್ಥಕ್ಕಾಗಿ ಈತನು ಹೊಟ್ಟೆಪಾಡಿಗೆ ಟೊಪಗಣ್ಣ ಕ್ಯಾಪುತಲೆ ಅಡ್ಡಪಂಚೆ ಕೆಂಪುವರ್ಣ ಸುಮಾರು 5½ ಅಡಿ ಉದ್ದಯಿರುತ್ತಾನೆ.

ಯಾರು ಮೋಸಹೋಗಬಾರದು.

ಕೆ. ರಾಮಚಂದ್ರಗುಪ್ತ

21-2-47

ಗ್ರಾಮಾಭಿವೃದ್ಧಿ ಉದ್ಯೋಗಗಳು

ಸಂಘಟನಾಧಿಕಾರಿಗಳಾದ ಶ್ರೀ ಬಿ. ಭೀಮಸೇನಾಚಾರ್ಯರು ಹೀಗೆ ತಿಳಿಸುತ್ತಾರೆ ಆಲೂರು ತಾಲೂಕಿನ ಆಲೂರು, ಹಾಲಹರ್ವಿ, ಗಾಳಿ, ನಿಟ್ರುವಟ್ಟ ಮೊಲಗವೇಲಿಗಳಲ್ಲಿ ಬಡಿಗ ಕಮ್ಮಾರ ಕುಂಬಾರ ಕಂಬಳಿನೆಯ್ಯುವ ಉದ್ಯೋಗ ಉತ್ತೇಜನಕ್ಕಾಗಿ ತರಿಸಲು ಸುಮಾರು 10 ತಿಂಗಳಕಾಲ ಶಿಕ್ಷಣಕಲಿಸಲು 7-8-0 ಯಿಂದ 10 ರೂ. ವರಿಗೆ ಶಿಷ್ಯವೃತ್ತಿ ಕೊಡುವರು. ಅಲ್ಲದೆ ಮಧ್ಯಾನ ಒಂದೂಟ ಕೊಡುತ್ತಾರೆ. (16 ರಿಂದ 25 ವಯಸ್ಸಿನವರಿಗೆ) ಈ ಕಾರ್ಯಕ್ಕೆ ಎಲ್ಲರೂ ಪ್ರೋತ್ಸಾಹ ಕೊಡಬೇಕು.

ಕೊಡ್ಲಿಗೆ

ನೆಹರೂ ತರುಣಸಂಘದ ಅಧ್ಯಕ್ಷರಾದ ಶ್ರೀ ನಾಮದೇವಶರ್ಮರು ಬಳ್ಳಾರಿ ಜಿಲ್ಲಾ ಕಲೆಕ್ಟರ ಆಫೀಸಿಗೆ ವರ್ಗಾಯಿಸಲ್ಪಟ್ಟ ಕಾರಣ ಅವರನ್ನು ಬೀಳ್ಕೊಡುವ ಸಮಾರಂಭವು ಬೋರ್ಡ ಪ್ರಾ. ಶಾಲೆಯಲ್ಲಿ ಶ್ರೀ ಬಿಂದೂರ ಅಧ್ಯಕ್ಷತೆಯಲ್ಲಾ ಹೈಸ್ಕೂಲಿನಲ್ಲಿ ಶ್ರೀ ಶಿವಲಿಂಗನಗೌಡರ ಅಧ್ಯಕ್ಷತೆಯಲ್ಲೂ ನಡೆಯಿತು. ವಿದ್ಯಾರ್ಥಿಗಳೂ ಮತ್ತು ಭಾಷಣಕಾರರೂ ಶರ್ಮರ ಗುಣಗಾನ ಮಾಡಿದರು.

ಬದನೆಹಾಳು

ಇಲ್ಲಿಯ ಕರ್ನಾಟಕ ಏಕೀಕರಣಸಂಘದಲ್ಲಿ ಈ ಕೆಳ ತೀರ್ಮಾನಗಳಾಗಿವೆ.

ಅತ್ಯಧಿಕ ಕನ್ನಡಿಗರ ಜನಸಂಖ್ಯೆಯನ್ನೊಳಗೊಂಡ ಅದವಾನಿ ಆಲೂರು ರಾಯದುರ್ಗ ತಾಲೂಕುಗಳನ್ನು ಆಂಧ್ರಪ್ರಾಂತಕ್ಕೆ ಸೇರಿಸಿರುವುದನ್ಯಾಯವಾಗಿದೆ. ಈ ಕಾರಣ ಅಖಿಲ ಭಾರತ ಕಾಂಗ್ರೆಸ್ ನವರು ಈ ಮೂರು ತಾಲೂಕುಗಳನ್ನು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್‌ನ ಅಧಿಸತ್ಯದಲ್ಲಿ ಬರುವಂತೆ ಮಾಡಬೇಕೆಂದು ಪ್ರಾರ್ಥಿಸುತ್ತದೆ.

ಆಂಧ್ರಪತ್ರಿಕೆ ಮತ್ತು ಅವರ ಇತರ ಸಾಹಿತ್ಯಗಳಲ್ಲಿ ಬಳ್ಳಾರಿ ಜಿಲ್ಲೆಯನ್ನು ಆಂಧ್ರ ದೇಶದಲ್ಲಿ ಸವಾವೇಶಗೊಳಿಸಿರುವ ಕೃತ್ಯವನ್ನು ಖಂಡಿಸುತ್ತದೆ.

ಮದ್ರಾಸ್ ಸರ್ಕಾರದವರು ಅಲಕ್ಷ್ಯದಿಂದ ತಮ್ಮ ಪ್ರಕಟನೆಗಳನ್ನು ಕನ್ನಡದಲ್ಲಿ ಪ್ರಕಟಿಸುತ್ತಿರುವುದಿಲ್ಲ ಇನ್ನುಮೇಲೆ ಹೀಗೆ ಮಾಡಬಾರದೆಂದು ಆಗ್ರಹದ ಸೂಚನೆ

ಜಿಲ್ಲಾ ಕಲೆಕ್ಟರವರು ನಮ್ಮ ಹಿಂದಿನ ಬೇಡಿಕೆಗನುಸಾರವಾಗಿ ಅದವಾನಿ ಆಲೂರು ರಾಯದುರ್ಗ ತಾಲೂಕುಗಳೆಲ್ಲಿ ಎಲ್ಲಾ ಕನ್ನಡ ವ್ಯವಹಾರವನ್ನು ಜಾರಿಯಲ್ಲಿ ತರಬೇಕು

ಪಂಜಾಬಿನಲ್ಲಿ ಲೀಗ್ ಮತ್ತು ಸರಕಾರಗಳೊಳಗೆ ಒಪ್ಪಂದವಾದ ಕಾರಣ ಅಲ್ಲಿನ ಲೀಗ್ ಚಳವಳಿ ನಿಂತಿತು ಸರಕಾರದವರು ಬಂಧಿತರನ್ನೆಲ್ಲಾ ಬಿಡುಗಡೆ ಮಾಡಿದರು

ಬಳ್ಳಾರಿ ಜಿಲ್ಲಾ ಗ್ರಾಮಸೇವಾ ಸಮಿತಿ

ಖಾದಿ ಹುಟ್ಟುವಳಿ ಕೇಂದ್ರ

ಕುರುಗೋಡು.

[ವರದಿ ೧-೧೦-೧೯೪೫ ರಿಂದ ೩೧-೧೦-೧೯೪೬ ರ ವರೆಗೆ]





ಖಾದಿಯೇ ಸುಖಜೀವನದ ಸಂಜೀವನ ಖಾದಿ ದರಿದ್ರ ನಾರಾಯಣನ ವೋಕ್ಷವು

ಖಾದಿಯಿಂದಾಗ್ತದ.

ಮಹಾತ್ಮಗಾಂಧಿ

ಬಳ್ಳಾರಿ ಜಿಲ್ಲಾ ಗ್ರಾಮ ಸೇವಾಸಮಿತಿ—ಖಾದಿ ಹುಟ್ಟುವಳಿ ಕೇಂದ್ರ

ಕು ರು ಗೋ ಡು

(ವರದಿ ೧—೧೦—೧೯೪೫ ರಿಂದ ೩೧—೧೨—೧೯೪೬ ರ ವರೆಗೆ)

ಸ್ಥಾಪನೆ.– ಖಾದಿ ಉತ್ಪತ್ತಿ ಕೇಂದ್ರವು 1942 ನೆಯ ಜೂನ್‌ದಲ್ಲಿ ಅಖಿಲ ಭಾರತ ಚರಕಾಸಂಘ (A. I. S. A.) ದ ಕರ್ನಾಟಕ ಶಾಖೆಯವರು ಕುರು ಗೋಡಿನಲ್ಲಿ ತಮ್ಮದೇ ಆದ ಕೇಂದ್ರವನ್ನು ಸ್ಥಾಪಿಸಿ– ಅದೇ ವರ್ಷದ ಆಗಸ್ಟು ಆಂದೋಳನದ ಕಾರಣದಿಂದ ಕೆಲಸವನ್ನು ನಿಲ್ಲಿಸಿದರು. 1945 ನೆಯ ಜೂನಿನಲ್ಲಿ ಪುನಃ ಕಾರ್ಯಾರಂಭವಾಯಿತು. ಖಾದಿಯ ರಚನಾತ್ಮಕ ಕಾರ್ಯಕ್ರಮದ ನವೀನ ಯೋಜನೆಯ ಪ್ರಕಾರಕ್ಕೆ ಕರ್ನಾಟಕ ಚರಖಾ ಸಂಘದಿಂದ 2 ನೆಯ ಅಕ್ಟೋಬರ್ 1945 ರ ದಿನ (ಗಾಂಧೀ ಜಯಂತಿ) ಬಳ್ಳಾರಿಜಿಲ್ಲಾ ಗ್ರಾಮ ಸೇವಾ ಸಮಿತಿಯು ಕಾರ್ಯ ಭಾಗದ ಸಂಪೂರ್ಣ ಹೊಣೆಯನ್ನು ವಹಿಸಿತು. ಸಮಿತಿಯ ವಿನಂತಿಯನ್ನು ಮನ್ನಿಸಿ ಚರಖಾ ಸಂಘದ ಮಂತ್ರಿಗಳಾದ ಶ್ರೀ ಕೆ. ವೆಂಕಟರಾಮಯ್ಯನವರು ಈ ಕಾರ್ಯದಲ್ಲಿ ಶಿಕ್ಷಣ ಹೊಂದಿ, ಚೆನ್ನಾಗಿ ನುರಿತ ಶ್ರೀ ವಾಂಡುರಂಗ ಭೀಮಾಜಿ ಪಾಟೀಲ ಎಂಬ ಕಾರ್ಯಕರ್ತರನ್ನು ಕಳುಹಿಸಿದರು. ಸಮಿತಿಯು ಅಖಿಲ ಭಾರತ ಚರಖಾ ಸಂಘದಿಂದ ಪ್ರಮಾಣ ಪತ್ರ ಪಡೆಯಿತು.

— ಸಮಿತಿಯ ಅಧಿಕಾರಿವರ್ಗ —

ಅಧ್ಯಕ್ಷರು:—ಶ್ರೀ ಟಿ. ಸುಬ್ರಹ್ಮಣ್ಯಂ

ಕಾರ್ಯದರ್ಶಿಗಳು:— ಬಿ. ಯಂ ದೇವಣಸಿದ್ದಯ್ಯ
ಕೆ. ರಾಮಚಂದ್ರಗುಪ್ತ

ಕಾರ್ಯಕಾರೀ ಸಮಿತಿ ಸದಸ್ಯರು.

ಡಿ. ವೇಣುಗೋಪಾಲಾಚಾರಿ
ಕಲ್ಲಣಿ ಶಿವರುದ್ರಪ್ಪ,
ಪೋಲಾ ವೆಂಕಯ್ಯ
ಬೂದಿಹಾಳು ಅನಂತಾಚಾರ್ಯ
ತೆಗ್ಗಿನಮಠದ ಪಂಚಾಕ್ಷರಯ್ಯ
ಗೊರ್ತಿ ಶರಣಪ್ಪ
ಶ್ರೀಮತಿ ಗೊರ್ತಿ ರುದ್ರಮ್ಮ
ಹಾಲ್ತಿ ಸತ್ಯನಾರಾಯಣ
ನಾಡಗೌಡ್ರ ಮಂಚಿಸವನಗೌಡ

ನಡೆದ ಕಾರ್ಯವಿವರಣೆ.:— ಕುರುಗೋಡಿನ ಸುತ್ತುಮುತ್ತಲ ಗ್ರಾಮಗಳಲ್ಲಿ ಅಂದರೆ ಯಲ್ಲಾಪುರ ಬಾದನಹಟ್ಟಿ, ಗೆಣಿಕೆಹಾಳು ಕುರುಗೋಡು, ಪಟ್ಟಣ ಶೆರಗು ಈ ಊರುಗಳಲ್ಲಿ 130 ಚರಖಾಗಳನ್ನು ಹಂಚಲಾಯಿತು. ಈ 15 ತಿಂಗಳ ಅವಧಿಯಲ್ಲಿ ರೊಕ್ಕದ ಅಡಚಣೆಯಿಂದ 1946 ನೆಯ ಆಗಸ್ಟು ಪ್ರಥಮದಿಂದ ಕೆಲಸವನ್ನು ನಿಲ್ಲಿಸಲಾಯಿತು.

ಕಾರ್ಯಭಾಗವು ನಡೆದ 10 ತಿಂಗಳಲ್ಲಿ 130 ಕುಟುಂಬಗಳ ಬಡಸ್ತ್ರೀಯರಿಗೆ ಜೀವನೋಪಾಯ ಕಲ್ಪಿಸಲಾಯಿತು. ಕೂಲಿಯ ರೂಪದಿಂದ ರೂ. 1905—8—0 ಅವರಿಗೆ ಕೊಡಲಾಯಿತು. ಅವರು ಈ 10 ತಿಂಗಳವಧಿಯಲ್ಲಿ ರೂ. 3050–1—6 ಬೆಲೆ ಬಾಳುವ ಸುಮಾರು 2000 ಸೇರು ನೂಲನ್ನು ಕೊಟ್ಟರು. ರೂ. 452–13–3 ಬೆಲೆಯ ನೂಲು ನೆಯ್ಯಲ್ಪಟ್ಟು 2597–4–3 ಬೆಲೆಯ ನೂಲು ಹಾಗೆಯೇ ಉಳಿದಿದೆ. ನೇಯ್ಯಾರರಿಗೆ ಕೂಲಿಯ ರೂಪದಿಂದ ರೂ. 199—14—9 ಕೊಡಲಾಯಿತು. ನೆಯ್ಯಾರರು ನೆಯ್ದುಕೊಟ್ಟ 760 ರೂ. ಬೆಲೆಯ ಖಾದಿಯನ್ನು (50 ಥಾನು ಶರ್ಟುಪೀಸ್ 9 ಜೊತೆ ಧೋತ್ರ) ಜಿಲ್ಲೆಯ ಎಲ್ಲಾ ಭಾಗಗಳಲ್ಲೂ ಮಾರಾಟ ಮಾಡಲಾಯಿತು.

ಹಣಕಾಸು:— ಶ್ರೀ ಡಿ. ವೇಣುಗೋಪಾಲಾಚಾರ್ಯರ

ರ ಮನೆಯಲ್ಲಿ 19—8—45 ರ ದಿನ ನಡೆದ ಸಭೆಯಲ್ಲಿ ಖಾದಿ ಕೇಂದ್ರದ ಕಾರ್ಯಕ್ಕಾಗಿ ರೂ, 10,000 ಸಂಗ್ರಹಿಸಲು ನಿಶ್ಚಯವಾಯಿತು. ಆದರೆ ರೂ, 3000-0-0 ಮಾತ್ರ ಸಂಗ್ರಹವಾಯಿತು. ಇಷ್ಟೇ ಹಣದಲ್ಲಿ ಕೆಲಸವನ್ನು ಸಾಗಿಸಲಾಯಿತು. ಪರಿಶೀಲಿಸಲಾದ ಲೆಕ್ಕ ಪತ್ರಗಳನ್ನೂ, ಹಣವನ್ನು ಕೊಟ್ಟ ದಾತೃಗಳ ಹೆಸರನ್ನೂ ಬೇರೊಂದೆಡೆಯಲ್ಲಿ ಕೊಡಲಾಗಿದೆ.

ವಿನಂತಿ

ಜಿಲ್ಲಾ ಗ್ರಾಮ ಸೇವಾ ಸಮಿತಿಯ ಧ್ಯೇಯವು ಜಿಲ್ಲೆಯ ಖಾದೀ ಧಾರೀಗಳಿಗೆ ಖಾದಿಯನ್ನೊದಗಿಸಿ ವಸ್ತ್ರವಿಷಯಕ್ಕೆ ಸ್ವಾವಲಂಬಿಗಳನ್ನು ಮಾಡುವದಾಗಿದೆ. ಈ ಕಾರಣ ಇಂಥಾ ಮಹೋದ್ದೇಶಕ್ಕೆ ಸರ್ವರೂ ಸಹಾಯ ಮಾಡಲು ವಿನಂತಿ.

ದಾತೃಗಳ ಹೆಸರು.

104-0-0 ಕೊಟ್ಟವರು

1 ಪೋಲಾ ವೆಂಕಯ್ಯಶೆಟ್ಟಿ ಬಳ್ಳಾರಿ

2 ಹೆಚ್. ಬಿ. ಗುಪ್ತ ,,

102-0-0 ಕೊಟ್ಟವರು.

1 ಪಿ. ವೆಂಕಟರಾಮಯ್ಯ ಬಳ್ಳಾರಿ

2 ಹೆಚ್. ರಾಮಲಿಂಗಾರೆಡ್ಡಿ ,,

ರೂ, 51—0—0 ಕೊಟ್ಟವರು.

೧ ಎನ್. ಮರಿಬಸವನಗೌಡರು	ಕುರುಗೋಡು
೨ ಕೆ. ಶೇಷಗಿರಿಪ್ಪ—	,,
೩ ಇ ಚಂದ್ರಶೇಖರಪ್ಪ	,,
೪ ಕೃಷ್ಣಗೋಪಾಲಶೆಂಗಿ	ಬಳ್ಳಾರಿ
೫ ಉಂಕಿ ಸಣ್ಣರುದ್ರಪ್ಪ	,,
೬ ಹೆಚ್. ಎ ಶಿದ್ದಪ್ಪ	,,
೭ ಟಿ. ಮರೆಪ್ಪ	,,
೮ ಮೂಲಂಗಿ ದೊಡ್ಡಬಸಪ್ಪ	,,
೯ ಕೆ. ವಿರುಪಾಕ್ಷಪ್ಪ	,,
೧೦ ಯಸ್. ಸಿದ್ದಲಿಂಗಪ್ಪ	,,
೧೧ ಶ್ರೀಮತಿ ಸುಮಂಗಲಮ್ಮ	,,
೧೨ ಜಿ. ಯಚ್. ಕೃಷ್ಣಶೆಂಗ್	,,
೧೩ ಚಿಲ್ಕೋಣ ಭೀಮರಾವ್	,,
೧೪ ಸಿಂಗಂಶೆಟ್ಟಿ ಸುಬ್ಬರಾಯುಡು	ಬಳ್ಳಾರಿ
೧೫ ಹೆಚ್. ಲಿಂಗಾರೆಡ್ಡಿ	,,
೧೬ ಡಿ. ವೇಣುಗೋಪಾಲಾಚಾರಿ	,,
೧೭ ಬಿ ಯಂ. ರೇವಣಸಿದ್ದಯ್ಯ	,,
೧೮ ಪಟ್ಟಂ ನಾರಾಯಣಪ್ಪ	,,
೧೯ ಎಚ್. ಸಿ. ಪಾರೇಖು	,,
೨೦ ಟಿ. ಜಿ. ಸತ್ಯನಾರಾಯಣ	,,
೨೧ ಡಿ. ಯಚ್. ರಾಘವೇಂದ್ರರಾವ್	,,
೨೨ ಗಡ್ಡಂ ರಾಮಯ್ಯ	,,
೨೩ ಆರ್. ವೆಂಕಟಸುಬ್ಬಯ್ಯ	,,
೨೪ ಬಿ. ವೀರಭದ್ರಪ್ಪ	ಕಂಪ್ಲಿ
೨೫ ವಿಶ್ವನಾಥಸಿಂಗ್	,,
೨೬ ಜವಳಿ ಮಹಂತಪ್ಪ	ಹೊಸಪೇಟೆ
೨೭ ದಳವಾಯಿ ಅಂಬಣ್ಣ	,,
೨೮ ಕರೂರು ವೆಂಕೋಬರಾವ್	,,
೨೯ ಪತ್ತಿಕೊಂಡ ಗುರುನಾಥಶೆಟ್ಟಿ	,,
೩೦ ನಾಗಪ್ಪಶೆಟ್ಟಿ	,,
೩೧ ವಿರುಪಾಕ್ಷಶೆಟ್ಟಿ	,,
೩೨ ಬಿ. ಪಂಪಾಪತಿಪ್ಪ	,,
೩೩ ಕೊತ್ತುಂಬರಿ ಚನ್ನಬಸಪ್ಪ	,,
೩೪ ವಸ್ತ್ರದ ಸಾಂಬಯ್ಯ	,,
೩೫ ಮುನಗಲ್ಲು ವೆಂಕೋಬಶೆಟ್ಟಿ	,,
೩೬ ಜಿ. ಡಿ ಶೀಲವಂತ	ಕೊಟ್ಟೂರು
೩೭ ಪಾಟೀಲ ನುಲ್ಲನಗೌಡ್ರು	,,
೩೮ ಬಿ. ರಾಮನಗೌಡ್ರು	,,
೩೯ ನಾರಾಯಣಪ್ಪ ರಾಚಮಡುಗು	,,
೪೦ ಶಿಂಗೆರೆ ಸತ್ಯನಾರಾಯಣಶೆಟ್ಟಿ	,,
೪೧ ಜಾಗಟಗೇರಿ ಸದ್ಯೋಜಾತ	,,
೪೨ ಟಿ. ಯಚ್. ಎಂ. ಪಂಚಾಕ್ಷರಯ್ಯ	ಹರಪನಹಳ್ಳಿ
೪೩ ಚಕ್ಕಿ ಚನ್ನಪ್ಪ	,,
೪೪ ಇಜಾರಿ ಶಿವಪ್ಪ	,,
೪೫ ಮುಮ್ಮಿಗಲ ನಾಗಪ್ಪಶೆಟ್ಟಿ	,,
೪೬ ಯಾದಗಿರಿ ಶಿದ್ದಲಿಂಗಪ್ಪ	,,
೪೭ ಗುತ್ತಿ ತೋಟಪ್ಪ	,,

ಕುರುಗೋಡಿನ ಶ್ರೀ ಮರಿಬಸವನಗೌಡರು ಮತ್ತು ಶ್ರೀ ಶೇಷಗಿರಿಪ್ಪನವರು ಆರಾರು ಮಣ ಅರಳಿ ಸಹ ಕೊಟ್ಟಿರುವರು.

ಉತ್ಪನ್ನ —ಕೊಂಡಮೂಲು —ವಿಕ್ರಯದ ಲೆಕ್ಕ

(೧—೧೦—೪೫ ರಿಂದ ೩೦—೬—೪೬ ರ ವರೆಗೆ)

ಜಮಾ		ಖರ್ಚು	
ಹತ್ತಿ–ಅರಳೆ–ಹಂಜಿ ನೂಲು ಖಾದಿ ವಸ್ತ್ರ }	1642—3—6	ಶಿಲ್ಕುಮೂಲಿನ ಬೆಲೆ	198 13-0
		ಕೊಂತ-ಮೂಲು	3683-8—9
ವ್ಯಾಪಾರಕ್ಕಾಗಿ ಉಳಿದಚ್ಚುಮೂಲು	2499—1—0	ಉತ್ಪನ್ನ ಮಾಡಿದ ಖರ್ಚು	210-10-3
ರಾಟಿ ಕದರು ಮುಂತಾದ್ದು	152—1—6	ರಾಟಿ ಕದುರು ಮುಂತಾದ್ದು	929-4—0
ಉಳಿದ ಮೂಲು	1347—7—0	ಕೊಂಡದ್ದು	579-7—6
ಚಿಲ್ಲರೆ ಆದಾಯ	0—3—3	ಕೂಲಿ ಸಾರಿಗೆ ಖರ್ಚು	22-5—0
		ಮೂಲಿನ ಮೇಲಿನ ಸವಕಳಿ	58-11-0
	5641—0—3	ಬಾಡಿಗೆ ಸಂಬಳ ಟಪಾಲು ವಗೈರೆ	475-9—6
ಒಟ್ಟು ಲುಕ್ಸಾನಾದದ್ದು	534-14—9	ಶಿಕ್ಷಣದ ವೆಚ್ಚ	13-8—0
		ಕಾಯಂಮೂಲಿನ ಮೇಲಿನ ಸವಕಳಿ	4-4—0
	6175-15—0		6175-15-0

Balance Sheet on 30—6—46. ಅಧಾವೆ ಪತ್ರ

ಆಸ್ತಿಯ ವಿವರ (ಜಮಾ)		ಆಸ್ತಿ ಮತ್ತು ಮೂಲು (ಖರ್ಚು)	
ಬಳ್ಳಾರಿ ಗ್ರಾಮ ಸೇವಾಸಮಿತಿ	1902-2-6	ರೋಖಶಿಲ್ಕು	110-14-9
ಠೇವಣಿ (Deposits)	236-10-0	ಶಿಲ್ಕು ಮೂಲು	3846-8—0
ಚರಖಾ ಸಂಘ. ಕರ್ನಾಟಕ ಶಾಖೆ	1156-11-3	ಕಾಯಂ ಮೂಲು	33-4—0
ಇತರರು	500-0-0	ಚಿಲ್ಲರ ಸಾಲಗಾರರು	0-2—0
ಸಂಬಳ ವಗೈರೆ ಕೊಡತಕ್ಕದ್ದು	45-5-0		3990-12 9
ಕಾರ್ಯಕರ್ತರ ಶಿಕ್ಷಣನಿಧಿ	150-6-0		
	3990-12-9		

ಲೆಕ್ಕ ಪರಿಶೀಲಕರ ವರದಿ: —

1—10—45 ರಿಂದ 30-6-46 ರ ವರಿಗೆ ಲೆಕ್ಕ ತಪಾಸು ಮಾಡಲಾಯಿತು. ಅವರಲ್ಲಿ ಕೆಂಡು ಬಂದ ತಪ್ಪು ಗಳನ್ನು ತಿದ್ದಿಸಲಾಗಿದೆ. ಕೇಂದ್ರದ ಕೆಲಸವು ಕೆಲವಾಲ ಪ್ರಗತಿಪರವಾಗಿ ನಡೆದಿದೆ. ಭಂಡವಾಳದ ಕೊರತೆ ಯಿಂದ ಅಡಚಣೆಯೊದಗಿದೆ. ಭಂಡವಳದ ಹೆಚ್ಚಳದಿಂದ ಸಾಕಷ್ಟು ಖಾದಿ ಉತ್ಪನ್ನವಾಡಿ ಮಾರಿದರೆ ಇಷ್ಟು ನಷ್ಟವಾಗುತ್ತಿರಲಿಲ್ಲ.

ಎನ್. ಆರ್. ವೈದ್ಯ ಲೆಕ್ಕ ತಪಾಸಿನವರು ಕರ್ನಾಟಕ ಚರಖಾ ಸಂಘ ದಿನಾಂಕ 7 11 – 46

ಗ್ರಾಮ ಪಕ್ಷಪಾತಿ ಯೋಜನೆ

(ಕಳೆದ ಸಂಚಿಕೆಯಿಂದ ಮುಂದುವರಿದಿದೆ.)

೧೩) ಒಕ್ಕಲತನದ ಉಪಕರಣಗಳು, ಸಾಧನಗಳು

ಹಿಂದುಸ್ತಾನದಲ್ಲಿ ಇಂದು ಔದ್ಯೋಗೀಕರಣಕ್ಕೆ ಅತ್ಯವಶ್ಯವಾಗಿ ಬೇಕಾಗುವ ಜನ ಸಂಪತ್ತಿಯನ್ನು ಸುಧಾರಿಸುವದಲ್ಲದೆ ಹಳ್ಳಿಯ ಕಮ್ಮಾರನ ಉದ್ಯೋಗಕ್ಕೆ ಸಂರಕ್ಷಣೆಯನ್ನು ಕೊಟ್ಟು ಅದಕ್ಕೆ ಸಹಾಯ ಮಾಡುವದು ಮುಖ್ಯ ಮುದ್ದೆಯಾಗಿದೆ ಒಕ್ಕಲತನದ ಉಪಕರಣಗಳು ಮತ್ತು ಸಾಮಗ್ರಿಗಳೇ ಹೊಲಗಳಿಲ್ಲದ ಲಕ್ಷಾನುಧಿ ಒಕ್ಕಲತನ ಕೂಲಿಕಾರರ ಜೀವನದ ಮುಖ್ಯ ಸಾಧನಗಳಾಗಿವೆ ಇವುಗಳನ್ನು ಪಿದ್ದಪಡಿಸುವ ಉದ್ಯೋಗವು ಹಳ್ಳಿಯ ಕಮ್ಮಾರನ ಕೈಬಿಟ್ಟು ಹಿಂದೀ ನಗರದ ಇಲ್ಲವೆ ಇಂಗ್ಲಂಡ ಅಮೇರಿಕೆಯಂಥ ಪರರಾಷ್ಟ್ರ ಕಾರಖಾನೆಗಳಿಗೆ ಹೋದರೆ ಕೆಲ ದಿನಗಳ ಹಿಂದೆ ಜವಳಿ ಮೂಲಕ ಹರಿದುಹೋಗುತ್ತಿದ್ದ ಹೊನ್ನಿನ ಹೊಳೆಗಿಂತ ಹೆಚ್ಚು ಪ್ರಮಾಣದಲ್ಲಿ ಹಿಂದುಸ್ತಾನದ ಹಣ ಹಾಳಾಗಿ ಹೋದಂತೆಯೆ ಸೈ.

ಅದುದರಿಂದ ಗುದ್ದಲಿ ಕಲಿಕೆ ಗೆಳಿ ಕುಂಟಿ, ಹಳಿಯ ಬಂಡಿಗಳ ಗಾಲಿಗಳ ಕಬ್ಬಿಣ ಚೂರಿ ಮೊದಲಾದ ಹಳ್ಳಿಯ ಕಮ್ಮಾರನಲ್ಲಿಯೇ ತಯಾರಾಗವಂತೆ ನೋಡಿಕೊಳ್ಳುವದು ಅತ್ಯವಶ್ಯವಾಗಿದೆ. ಇದಕ್ಕಾಗಿ ಹಳ್ಳಿಯ ಕಮ್ಮಾರರಿಗೆ ಇಂತಿಷ್ಟು ಉತ್ಪಾದನೆಯನ್ನು ಮಾಡಲೇಬೇಕೆಂದು ವಿಧಿಸಬೇಕು ಕಾರಖಾನೆಗಳು ಇಂಥ ಉಪಕರಣಗಳನ್ನೆಲ್ಲ ಮಾಡಲು ಹೊಂತು ಹಾಕಿದ್ದುಂಟು. ಆದುದರಿಂದ ಇದು ಅತ್ಯವಸರದಿಂದ ಮಾಡಬೇಕಾದ ಕಾರ್ಯವಾಗಿದೆ.

೧೪) ಕೈಮಗ್ಗ ಮತ್ತು ಕೈಮಗ್ಗ

ಕೈಕಾಗದ, ಶಿರಿದೀ ಬೆಲ್ಲ, ಎಣ್ಣೆಯ ಗಾಣ ಮೊದಲಾದವುಗಳ ದೇಶದ ಮತ್ತು ಸರಕಾರ ಮುಂದೆ ಪ್ರಮುಖವಾಗಿ ನಿಂತ ಉದ್ಯೋಗಗಳಾಗಿವೆ ಇದಕ್ಕಾಗಿ ಗಾಂಧೀಜಿಯು ಮತ್ತು ಅವರು ಸಂಸ್ಥಾಪಿಸಿದ ಸಂಸ್ಥೆಗಳ ಪ್ರಯತ್ನ ಕಾರಣಗಳಾಗಿರುವವು. ಅದುದರಿಂದ ಅವುಗಳ ಬಗ್ಗೆ ನಾನಿಲ್ಲಿ ವಿಸ್ತರಿಸುವದಿಲ್ಲ.

೧೫) ಭತ್ತದ ಹೊಟ್ಟು, ಇಟ್ಟಂಗಿ ಮತ್ತು ಹಾಸಿಗೆಗಲ್ಲು

ನಮ್ಮ ಪ್ರಾಂತದಲ್ಲಿ ಭತ್ತದ ಹೊಟ್ಟು ದೊಡ್ಡ ಪ್ರಮಾಣದಲ್ಲಿ ಹಾಳಾಗಿ ಹೋಗುತಿದೆ. ಅದು ಕೇವಲ ಗೊಬ್ಬರವೆಂದು ಇಲ್ಲವೆ ಕೆಲ ಕಡೆಯಲ್ಲಿ ಕುಂಬಾರನ ಆವಿಗೆ ಉರುವಲಿಗಾಗಿ ಮಾತ್ರ ಕೆಲಸಲ ಉಪಯೋಗಿಸಲಾಗುತ್ತದೆ. ಇತ್ತೀಚೆ ಭತ್ತದ ಹೊಟ್ಟು ಮತ್ತು ಸಿಮೆಂಟ ಮಿಶ್ರಣದಿಂದ ಇಟ್ಟಂಗಿ ಮತ್ತು ಹಾಸಿಗೆ ಕಲ್ಲು ಮಾಡುವದನ್ನು ಶೋಧಿಸಲಾಗಿದೆ ಮನೆಗಳನ್ನು ಕಟ್ಟುವದಕ್ಕೆ ವಿಶೇಷತಃ ಒಳಗೋಡೆಗಳನ್ನು ಇಲ್ಲವೆ ಅಡ್ಡ ಗೋಡೆಗಳನ್ನು ಕಟ್ಟುವದಕ್ಕೆ ಇವು ಉಪಯುಕ್ತವಾಗಿದ್ದು ವಿಶೇಷ ತಾಳುವವು. ಇದ್ದಲಿಯನ್ನು ಶುದ್ಧಗೊಳಿಸುವದನ್ನೂ ಶೋಧಿಸಲಾಗಿದೆ. ಇವುಗಳಿಗೆಲ್ಲ ಪ್ರೋತ್ಸಾಹನೆ ಕೊಡತಕ್ಕದ್ದು. ಅವುಗಳ ತಯಾರಿಕೆಗೆ ಉತ್ತೇಜನ ಕೊಟ್ಟು ವಿಧಾನಗಳನ್ನು ಹಾಕಿಕೊಡಬೇಕು. ಸರಕಾರದ ಎಂಜನಿಯರಿಂಗ ಶಾಖೆಯ ಮೂಲಕ ಅವುಗಳಿಗೆ ಮನ್ನಣೆ ದೊರೆತು ಪ್ರಸಾರವಾಗಿ ಲೋಕಪ್ರಿಯವಾಗಬೇಕು.

೧೬) ಭತ್ತ ಕುಟ್ಟುವದು, ಜೋಳ ಬೀಸುವದು, ಎಣ್ಣೆ ತೆಗೆಯುವುದು

ಇವುಗಳಿಗಾಗಿ ಗಿರಣಿಗಳನ್ನು ಮತ್ತು ಕಾರಖಾನೆಗಳನ್ನು ಪ್ರಾಯಿಕೆಯಿಂದ ನಿರ್ಬಂಧಿಸಬೇಕು.

ಬಕ್ಕರಿ ಬೇಯಿಸುವಂತೆ ಮನೆಯಲ್ಲಿ ಇವುಗಳನ್ನು ಮಾಡುವಂತೆ ಹಳ್ಳಿಗರಿಗೆ ಅವಶ್ಯವಾದ ಯಂತ್ರೋಪಕರಣಗಳನ್ನು ಒದಗಿಸಬೇಕು. ಇಲ್ಲವೆ ಇವುಗಳಿಗಾಗಿ ಸಹಕಾರ ಪದ್ಧತಿಯನ್ನೂ ಪ್ರೋತ್ಸಾಹಿಸಬೇಕು. ಕೈಯಿಂದ ನಡೆಯುವ ಇಲ್ಲವೆ ಪ್ರಾಣಿ ಅಥವಾ ವಿದ್ಯುಚ್ಛಕ್ತಿಯಿಂದ ನಡೆಯುವ ಸಣ್ಣ ಸಣ್ಣ ಯಂತ್ರಗಳನ್ನು ಹುಡಿಕಿ ತೆಗೆದು ಮನೆಯಲ್ಲಿಯೆ ಇವೆಲ್ಲ ಉದ್ಯೋಗ ಧಂದೆಗಳನ್ನು ನಡೆಸುವಂತೆ ಎಲ್ಲ ಬಗೆಯ ಅನುಕೂಲತೆಗಳನ್ನೊದಗಿಸಿಕೊಡಬೇಕು. ಇವೆಲ್ಲ ಮನೆಯ ಬಳಕೆಗಾಗಿಯೆಂದು ಮತ್ತು ಮನೆ ಕೈಗಾರಿಕೆಗಳೆಂದು ಪ್ರಸಾರ ಹೊಂದಬೇಕು.

೧೭) ಗಡಿಗೆ ಮಡಿಕೆ, ಮತ್ತು ಮಣ್ಣಿನ ಬಣ್ಣಗಳು

ಮಣ್ಣಿನ ಶಾಸ್ತ್ರೀಯ ಉಪಯೋಗದ ಬಗ್ಗೆಕೆಲ ಜ್ಞಾನವನ್ನು ನಮ್ಮ ಕುಂಬಾರರಿಗೆ ಮಾಡಿ ಕೊಟ್ಟಿದ್ದಾದರೆ ಮಣ್ಣಿನಿಂದ ಬಗೆಬಗೆಯ ಬಣ್ಣಗಳನ್ನು ಮತ್ತು ಮಿಶ್ರಣಗಳನ್ನು ಮಾಡಬಹುದಾಗಿದೆ. ಈವರೆಗೆ ಈ ಬಗ್ಗೆ ಯಾವ ಪ್ರಯತ್ನಗಳೂ ನಡೆದಿಲ್ಲ. ನಮ್ಮ ಶಾಸ್ತ್ರೀಯ ಸಂಶೋಧಕರು ಮತ್ತು ರಸಾಯನ ಶಾಸ್ತ್ರಜ್ಞರು ಕೆಲ ಸೂತ್ರಗಳನ್ನು ಕಂಡು ಹಿಡಿದಿದ್ದಾದರೆ ಈ ಉದ್ಯೋಗವು ಒಳ್ಳೆ ಊರ್ಜಿತ ಸ್ಥಿತಿಯನ್ನು ಮುಟ್ಟಬಹುದು ಮತ್ತು ನಮ್ಮ ಹಳ್ಳಿ ಕುಂಬಾರರ ಕಲ್ಯಾಣವಾಗಬಹುದು. ಸರಕಾರದವರು ಪರದೇಶಗಳಿಂದ ಬರುವ ಆಯಾತವನ್ನು ನಿಲ್ಲಿಸಬೇಕಲ್ಲದೆ ಇಲ್ಲಿನ ಕಾರಖಾನೆಗಳಲ್ಲಿಯೂ ಇವು ತಯಾರಾಗದಂತೆ ನೋಡಿಕೊಳ್ಳಬೇಕು. ಕೊಡ, ಹೂಜಿ, ಅಡಿಗೆ ಪಾತ್ರೆ, ತಾಟು ಮೊದಲಾದ ಮಣ್ಣಿನ ಪಾತ್ರೆಗಳಿಗೆ ಒಪ್ಪುಕೊಡುವ ಸೂತ್ರವನ್ನು ಹುಡಿಕಿ ಅದರ ಪ್ರಸಾರ ಮಾಡಬೇಕು. ಇವೆಲ್ಲ ಪಾತ್ರೆಗಳು ಈಗಲೂ ಹಳ್ಳಿಗಳಲ್ಲಿ ತಯಾರಾಗಿ ಬಳಸಲ್ಪಡುತಿವೆ. ಈಗ ಹೆಚ್ಚು ಪ್ರಚಾರದಲ್ಲಿರುವ ಕಪ್ಪು, ಬಶಿ, ಟ್ರೇ ಮೊದಲಾದವುಗಳನ್ನು ಮಾಡಬಹುದು. ಹಳ್ಳಿಗಳಲ್ಲಿ ತಯಾರಾಗುತಿರುವ ಮಣ್ಣಿನ ಪಾತ್ರೆಗಳು ಈಗಲೂ ಕೌಶಲ್ಯ ಪೂರ್ಣವಾಗಿದ್ದುಬಹಳ ಆಗ್ಗದ್ದಾಗಿರುವವು. ಆದರೆ ಅವುಗಳಿಗೆ ಒಪ್ಪು ಇಲ್ಲದ್ದರಿಂದ ಒಮ್ಮೆ ಉಪಯೋಗಿಸಿದ ಕೂಡಲೆ ಅವು ಅಸ್ವಚ್ಛವಾಗುವವು ಅವು ಛಿದ್ರಾನುಯಾವಾದ್ದರಿಂದ ಬಹಳ ಪ್ರಯತ್ನವಿಲ್ಲದೆ ಅವನ್ನು ಸಮಾಧಾನಕರವಾಗುವ ರೀತಿಯಲ್ಲಿ ಸ್ವಚ್ಛ ಮಾಡಲಿಕ್ಕಾಗದು. ಈ ದೋಷವನ್ನು ಸುಲಭವಾಗಿ ಹೋಗಲಾಡಿಸಬಹುದು, ಹೋಗಲಾಡಿಸತಕ್ಕದ್ದು.

ದೊಡ್ಡ ಪ್ರಮಾಣದಲ್ಲಿ ಹಂಚು ಇಟ್ಟಂಗಿ ಮೊದಲಾದವುಗಳನ್ನು ಕೇಂದ್ರೀಕೃತ ಪ್ರದೇಶಗಳಲ್ಲಿನ ಕಾರಖಾನೆಗಳಲ್ಲಿ ಸಿದ್ಧಪಡಿಸುವದನ್ನು ನಿರ್ಬಂಧಿಸಿ ಹಳ್ಳಿಗಳಲ್ಲಿಯ ಕುಂಬಾರರು ಮತ್ತು ಇಟ್ಟಂಗಿ ಮಾಡುವವರು ಸ್ಥಳಿಕ ಬೇಡಿಕೆಗಳನ್ನು ಪೂರೈಸುವಂತೆ ಎಲ್ಲ ಬಗೆಯ ಪ್ರೋತ್ಸಾಹನೆಯನ್ನು ಕೊಡತಕ್ಕದ್ದು.

೧೮ ಇದ್ದಲಿ ಭಟ್ಟಿ

ಈ ಉದ್ಯೋಗವು ನಮ್ಮ ವ್ಯಾಂತದಲ್ಲಿ ಕೇವಲ ಹಳ್ಳಿಯ ಇಲ್ಲವೆ ಅರಣ್ಯದ ಉದ್ಯೋಗವಾಗಿದ್ದು ಮೂಲನಿವಾಸಿಗಳ ಕೈಯಲ್ಲಿದೆ ಗುತ್ತಿಗೆದಾರರು ಮತ್ತು ಈ ಉದ್ಯೋಗದ ಗುತ್ತಿಗೆದಾರರು ಈ ಜನರನ್ನು ಭೀಕರ ರೀತಿಯಿಂದ ಸುಲಿದು ಗುಲಾಮರಂತೆಯೆ ಇವರನ್ನು ನಡೆಸಿಕೊಳ್ಳುತಿರುವರು ಇತ್ತೀಚೆ ಸಾಮಾಜಿಕ ಕಾರ್ಯಕರ್ತರ ಪ್ರಯತ್ನದಿಂದ ಮತ್ತು ಯುದ್ಧ ಜನ್ಯ ಪರಿಸ್ಥಿತಿಯ ಮೂಲಕ ಪರಿಸ್ಥಿತಿ ಸ್ವಲ್ಪ ಮಟ್ಟಿಗೆ ಸುಧಾರಿಸಿದೆ. ಈ ಉದ್ಯೋಗಕ್ಕೆ ಕೂಡಲೆ ಪರಿಣಾಮಕರವಾದ ಸಂರಕ್ಷಣೆ ಅತ್ಯವಶ್ಯವಾಗಿದೆ ಸರಕಾರದ ನೇತೃತ್ವದಲ್ಲಿ ಇರುವಲ್ಲೆಲ್ಲ ಸಾಮಾಜಿಕ ಕಾರ್ಯಕರ್ತರ ಸಹಾಯದಿಂದ ಇಲ್ಲವೆ ಹಾಗೆಯೆ ಸಹಕಾರ ಪದ್ಧತಿಯಿಂದ ಈ ಮೂಲನಿವಾಸಿಗಳ ಹಿತದೃಷ್ಟಿಯಿಂದಲೆ ಈ ಉದ್ಯೋಗಕ್ಕೆ ಪ್ರೋತ್ಸಾಹನೆಯನ್ನು ಕೊಡಬೇಕು.

(ಮುಂದುವರಿಯುವುದು)

ಮದ್ರಾಸ್ ಸರ್ಕಾರದ ಆಜ್ಞೆಗಳು

ಬೆಳಕೆ ಮಾಡಿ ಆಹಾರ ಪದಾರ್ಥಗಳನ್ನು ಕೆಡಿಸದಂತೆ ಸಡೆಯುವ ಮದ್ರಾಸ್ ಸರಕಾರದ ನಿಯಮದಂತೆ ಹಾಲಿಗೆ ನೀರು ಮೊದಲಾದವುಗಳನ್ನು ಬೆರಸುವುದು ಒಂದು ಅಪರಾಧವಾಗಿದೆ. ಈ ನಿಬಂಧನೆಯು ಕಾಸಿದ ಹಾಲಿಗೂ ಅನ್ವಯಿಸುತ್ತದೆ. ಹಾಲಿನಲ್ಲಿರುವ ಕೊಬ್ಬು ಮತ್ತು ಇತರ ಘನಪದಾರ್ಥಗಳ ಪ್ರಮಾಣಗಳನ್ನು ಕಡಿಮೆ ಮಾಡುವುದೂ ಹೆಚ್ಚಿಸುವುದೂ ಅಪರಾಧವಾಗಿದೆ.

ಭಾವಿ ತೋಡಲು ಧನ ಸಹಾಯ ಕೊಡುವ ಯೋಜನೆ

ಶೀಘ್ರವಾಗಿ ಭಾವಿ ತೋಡಲು ಧನ ಸಹಾಯ ಕೊಡುವ ಯೋಜನೆ ಪ್ರಕಾರ ಭಾವಿ ತೋಡಿ ಮುಗಿಸುವ ಸಮಯವನ್ನು ೩೧-೩-೪೭ ರಿಂದ ೩೦-೬-೪೭ ಕ್ಕೆ ಮುಂದುವರಿಸಲಾಗಿದೆ.

ಧಾನ್ಯ ಸಂಗ್ರಹ

ಹೆಚ್ಚಳವಾಗುವ ಅಕ್ಕಿ ಭತ್ತ ಇತರ ಆಹಾರ ಧಾನ್ಯಗಳನ್ನು ಸರಕಾರಕ್ಕೆ ಈಗಲೇ ಮಾರದೆ ಮುಂದಕ್ಕೆ ಹೆಚ್ಚಿಗೆ ಬೆಲೆಯ ಬೋನಸ್ಸನ್ನು ದೊರೆಯುತ್ತದೆಂಬ ಆಶೆಯಲ್ಲಿ ಉತ್ಪತ್ತಿದಾರರು ಇದ್ದರೆ, ಅವರು ನಿರಾಶರಾಗುವರು. ಸರಕಾರವು ಈ ಸರ್ಷ ಬೋನಸ್ಸನ್ನು ಕೊಡುವುದಿಲ್ಲ ಈಗ ಇರುವ ಬೆಲೆ ಹೆಚ್ಚಿಸುವ ವಿಷಯಕ್ಕೆ ಕೇಂದ್ರ ಸರಕಾರವು ನಿರುದ್ಧವಿದೆ. ಕೊರತೆ ಬೀಳುವ ಜಿಲ್ಲೆಗಳಲ್ಲಿ ಆಹಾರ ಪರಿಸ್ಥಿತಿ ಇನ್ನೂ ಭದ್ರವಾಗಿರುವುದರಿಂದ ಸಂಗ್ರಹ ನಿಯಮಗಳನ್ನು ಸರಕಾರವು ಕಠಿಣವಾಗಿ ಚಲಾಯಿಸಬೇಕಾಗುತ್ತದೆಂದು ಸರಕಾರವು ಎಲ್ಲಾ ಉತ್ಪತ್ತಿದಾರರಿಗೆ ಮುಂದಟ್ಟು ಮಾಡಲಿಚ್ಛಿಸುತ್ತದೆ.

ಬೆಲ್ಲ ನಿಯಂತ್ರಣ

ಬೆಲ್ಲ ತಯಾರು ಮಾಡುವವರೂ ದಾಸ್ತಾನು ಇಡುವವರೂ ಇನ್ನುಮುಂದೆ ಮಾರ್ಕೆಟುಗಳಲ್ಲಿ ಮಾರಲು ಅಥವಾ ಕೊಂಡುಕೊಳ್ಳಲು ಯಾವ ನಿರ್ಬಂಧವೂ ಇಲ್ಲ, ಆದರೆ ಗ್ರಾಹಕರಿಗೆ ಈ ಗಾಗಲೇ ಪ್ರಕಟಿಸಲ್ಪಟ್ಟ ನಿಶ್ಚಿತ ದರಗಳಲ್ಲೇ ಮಾರಬೇಕಾಗಿದೆ. ಪ್ರಾಂತದಲ್ಲಿ ಜಿಲ್ಲೆಯಿಂದ ಜಿಲ್ಲೆಗೆ ಬೆಲ್ಲವನ್ನು ಒಯ್ಯಲು ಯಾವ ಅಡ್ಡಿಯೂ ಇಲ್ಲ.

ಉಪ್ಪಿನ ಕರ ರದ್ದಾಗುವದೇ ?

ಕೇಂದ್ರ ಶಾಸನಸಭೆಯಲ್ಲಿ ಅರ್ಥಸಚಿವರಾದ ಲಿಯಾಕತ ಅಲಿಖಾನರು ಮುಂಗಡ ಪತ್ರಿಕೆಯನ್ನು ಮಂಡಿಸುತ್ತಾ ೭೦ ಕೋಟಿ ರೂಪಾಯಿಗಳ ಕಡಮೆ ಬೀಳುವದೆಂದೂ ಅವರು ಉಪ್ಪಿನ ಕರ ರದ್ದು ಮಾಡಿದ್ದನ್ನು ಜಾಹೀರಪಡಿಸುವರೆಂದೂ ನಂಬಲಾಗಿದೆ.

Woolen Coatings, Silk Sarees, Benares and other latest designs Handloom and Mill made Clothes Etc., Colours Guaranteed, Prices very reasonable Trial Solicited.

G. GOPAL SING & SON
CLOTH MERCHANT
No. 15 Old Market BELLARY.
ಜಿ. ಗೋಪಾಲ ಸಿಂಗ್ ಅಂಡ್ ಸನ್,
ಜವಳಿ ವ್ಯಾಪಾರಿ, ನಂ. 15
ಹಳೇ ಮಾರ್ಕೆಟ್, ಬಳ್ಳಾರಿ.

ಉಲನ್ ಕೋಟ್ ಬಟ್ಟೆ, ಬನಾರಸ್ ಜರಿ, ಶೆಲ್ಕು-ಟಿಕ್ಕು ಸೀರೆ ಜಾಕೆಟ್ ಲೇಸ್ ಬಾರ್ಡರ್ ಮತ್ತು ಇತರ ಅನೇಕ ವಿವಿಧ ಅತ್ಯಂತ ಆಧುನಿಕ ಉಡುಪಿನ ಚೀಡಿಕೆಯನ್ನು ನಾವು ಪೂರೈಸಲಿದ್ದೇವೆ. ಕೈ ಮಗ್ಗದ ಮಿಲ್ ಬಟ್ಟೆಗಳು ವಿಧಾಯಕ ಬೆಲೆಗೆ ದೊರೆಯುತ್ತವೆ. ಬಣ್ಣ ಗ್ಯಾರಂಟಿ, ಬೆಲೆ ಸರಿಯಾದ್ದು. ಪರೀಕ್ಷಿಸಿ ಮನಗಾಣಿರಿ.

Guarranteed Pure Pyra Gingelly oil

Best for Pickles, Cooking & Cooling.

DISTRIBUTORS:—

1. M/S. V. M. GIRI & SONS,
(Pro:- M. S Acharya) Car Street, Bellary
2. M/S. . HUSANJEE RAO. M VENKOJI RAO
General Merchants, Car Street Bellary.

ಶುದ್ಧ ! ಗ್ಯಾರಂಟಿಯಾದ್ದು !! ಸತ್ವಕಾರಿ !!!

—ಪೈರ ಎಳ್ಳೆಣ್ಣೆ—

ಕಣ್ಣಿಗೆ ಬಹಳ ತಂಪಾದ್ದು. ಅಡಿಗೆಯ ಎಲ್ಲಾ ಪದಾರ್ಥಗಳಿಗೆ ಬಳಸಲು ಶ್ರೇಷ್ಠವಾದ ಎಣ್ಣೆಯಿದು. ಉಪ್ಪಿನಕಾಯಿಗೆ ಈ ಎಣ್ಣೆಯನ್ನು ಪಯೋಗಿಸುವದರಿಂದ ಬಹಳಕಾಲ ಕೆಡದಂತಿಡಬಹುದು.

ಹಂಚಲಧಿಕಾರ ಉಳ್ಳವರು. 1) ವಿ ಎಂ ಗಿರಿ ಅಂಡ್ ಸನ್ಸ್-ತೇರು ಬೀದಿ, ಬಳ್ಳಾರಿ. (ಎಂ. ಎಸ್. ಆಚಾರ್ಯ)
2) ಎಂ. ಹುಸೇಂಜಿರಾವ್, ಎಂ. ವೆಂಕೋಬರಾವ್. ತೇರುಬೀದಿ, ಬಳ್ಳಾರಿ.

ಸುಭಾಸ್
ರಾಷ್ಟ್ರಗೀತೆ.

ಸಿದ್ಧವಾಯಿತು— ಕ್ರಯ ೦—೮—೦

ಸುಂದರ ಮುದ್ರಣ— ಇಲ್ಲಿಯವರೆವಿಗೆ ಪ್ರಭಾತ ಫೇರಿ, ರಾಷ್ಟ್ರೀಯ ಸಮಾವೇಶಗಳಲ್ಲಿ ಹಾಡಲ್ಪಟ್ಟ ಎಲ್ಲಾ ಮುಖ್ಯ ದೇಶಭಕ್ತ ಕವಿಗಳ ಕನ್ನಡ ಮತ್ತು ಹಿಂದೀ ಭಾಷೆಯಲ್ಲಿನ ರಾಷ್ಟ್ರಗೀತೆಗಳ ಸಮಗ್ರ ಸಂಗ್ರಹ. ಕರ್ನಾಟಕದಲ್ಲಿ ರಾಷ್ಟ್ರ ಗೀತೆಗಳ ಇಷ್ಟುದೊಡ್ಡ ಸಂಗ್ರಹವು ಇದುವರೆಗೆ ಪ್ರಕಟವಾಗಿಲ್ಲ. ಸ್ವಲ್ಪೇ ಪ್ರತಿಗಳು ಪ್ರಕಟವಾಗಿವೆ. ಹೆಚ್ಚು ಕೊಳ್ಳುವವರಿಗೆ ಕಮಿಷನ್ ಕೊಡಲಾಗುತ್ತದೆ.

'ನವಭಾರತ' ಕಾರ್ಯಾಲಯ ಬಳ್ಳಾರಿ.

—ರಾಷ್ಟ್ರೀಯ ಪುಸ್ತಕಗಳು.—
— ಕಾಂಗ್ರೆಸ್ ಸ್ವರೂಪ ದರ್ಶನ —

ರಾಷ್ಟ್ರೀಯ ಶಿಕ್ಷಣ	0—8—0
ಅಸ್ಪೃಶ್ಯತಾ-ನಿವಾರಣೆ	0—12—0
ಪ್ರಾಂತಭಾಷೆ-ರಾಷ್ಟ್ರಭಾಷೆ	0—6—0
ಖಾದಿ	0—8—0
ಕಾಂಗ್ರೆಸ್ ಮತ್ತು ಸ್ವಯಂಸೇವಕದಳ	0-10-0
ಸತ್ಯಾಗ್ರಹ (ಇತಿಹಾಸ-ತಂತ್ರ)	0—8—0

ವಿ. ಪಿ ಖರ್ಚುಬೇರೆ. ಇನ್ನು ಅನೇಕ ಪುಸ್ತಕಗಳು ದೊರೆಯುತ್ತವೆ.—

ನವಭಾರತ ಕಾರ್ಯಾಲಯ, ಬಳ್ಳಾರಿ.

NAVA BHARAT, BELLARY. Reg. No. M. 474

ನವಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು. **Subscription Rates**

ವರ್ಷಕ್ಕೆ	5-0-0	One Year	5—0—0
6 ತಿಂಗಳಿಗೆ	3-0-0	Six months	3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ		Subscription will not be accepted for less than 6 months.	

To

SRI.....

.....

.....

Printed at Krishna Press Bellary QH No. B 17 FOR (Q.H. NO. B-5)
Edited & Published by T. B. KESHAVARAO

ಜೈಹಿಂದ್ Reg. No. M 4746

ನವಚೇತನ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯ ವರಾನ್ನಿಬೋಧತ. 0—2—0

ಕಛೇರಿ ೬ ಚಿಕ್ಕಗಂ | ಬಳ್ಳಾರಿ ಮಾರ್ಚ್ ೧೦ ಸೋಮವಾರ ೧೯೪೬ | ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವ್.

ಬಟ್ಟೆಯ ಕೊರತೆ
ಲೈಸೆನ್ಸ್ ಎಂದು ಕೊಡುವರು?

ಬಳ್ಳಾರಿ ಆಹಾರ ಸಮಿತಿಯಲ್ಲಿ ಇನ್‌ಸ್ಪೆಕ್ಟಿಂಗ್ ಟೆಕ್ಸ್‌ಟೈಲ್ ಅಸಿಸ್ಟೆಂಟ್ ಕಮೀಶನರ್ ಶ್ರೀ ಕೆ. ಸುಬ್ಬರಾಯರ ಭಾಷಣ.

ಬಳ್ಳಾರಿ ಜಿಲ್ಲೆಯಲ್ಲಿ ಈಗ ೧೧ ಲಕ್ಷ ೩೫ ಸಾವಿರ ಜನರಿದ್ದಾರೆ. ಬಟ್ಟೆಗಳ ಚಿಲ್ಲರೆ ಲೈಸೆನ್ಸ್‌ದಾರರು ಸುಮಾರು ೭೪೫ ಜನರಿದ್ದಾರೆ. ಇವರಲ್ಲಿ ೧೦೦ಕ್ಕೆ ೯೦ ಮಂದಿ ಬಳ್ಳಾರಿ, ಆದವಾನಿ ಹೊಸಪೇಟೆಯಂಥ ಪಟ್ಟಣಗಳಲ್ಲೇ ಇದ್ದಾರೆ. ತಿಂಗಳಿಗೆ ಅಲ್ಪಸ್ವಲ್ಪ ಬಟ್ಟೆಯನ್ನು ಪಡೆದು, ಅಲ್ಪಸ್ವಲ್ಪ ಲಾಭವನ್ನು ಪಡೆಯುವ ಜನರಿರುವದಕ್ಕಿಂತಲೂ ಸಾಕಷ್ಟು ವ್ಯಾಪಾರ ಮಾಡಿ ಹೊಟ್ಟೆತುಂಬುವಷ್ಟು ಲಾಭ ಪಡೆಯುವ ಸ್ವಲ್ಪ ವ್ಯಾಪಾರಿಗಳು ಸಾಕು, ಪಟ್ಟಣಗಳಲ್ಲಿ ಬಟ್ಟೆಯ ಚಿಲ್ಲರೇ ಲೈಸೆನ್ಸ್‌ದಾರರು ತಪ್ಪೆಯಮೇಲಿನ ಕೊಡೆಗಿಡಗಳಂತೆ ಬೆಳೆದಿರುವರು. ಇದರಿಂದ ಬ್ಲಾಕ್‌ಮಾರ್ಕೆಟ್ ಹಾವಳಿಯಾಗಿ ಹಳ್ಳಿಗರಿಗೆ ಬಟ್ಟೆಯಿಲ್ಲದಂತಾಗಿದೆ.

೪ ಸಾವಿರ ಜನಸಂಖ್ಯೆಗೆ ಒಂದು ಬಟ್ಟೆ ಅಂಗಡಿ ಇರಬೇಕೆಂದು ನಾನು ಸೂಚಿಸುತ್ತೇನೆ. ಜಿಲ್ಲೆಯಲ್ಲಿ ಸುಮಾರು ೪೪ ಫಿಕ್ಸೆಡ್ ಫಿಕ್ಸೆಡ್‌ದಲ್ಲಿ ೨೦ ಸಾವಿರ ಜನರಿರಬಹುದೆಂದು ಭಾವಿಸುವುದಾದರೆ ಫಿಕ್ಸೆಡ್‌ದಲ್ಲಿ ೫೦೦ ಅಂಗಡಿಗಳಿಗೆ ಲೈಸೆನ್ಸ್ ಕೊಡಲು ಅಡ್ಡಿಯಿಲ್ಲ. ಯುದ್ಧ ಪೂರ್ವದಲ್ಲಿ ಕಾಯಂ ಆದ ವ್ಯಾಪಾರಸ್ಥರ ಲೈಸೆನ್ಸ್‌ಗೆ ಕೆಡಿಸು ಹಾಕಲು ಬರುವುದಿಲ್ಲ. ಆದರೆ ೧೯೪೪ರಿಂದ ಈಚೆಗೆ ತೆಗೆದುಕೊಂಡ ಸಣ್ಣ ಪುಟ್ಟ ಲೈಸೆನ್ಸ್ ರದ್ದುಮಾಡಲೇ ಬೇಕು. ನಾನು ಹೇಳಿದ ಲೆಕ್ಕದ ಪ್ರಕಾರಕ್ಕೆ ಜಿಲ್ಲೆಯಲ್ಲೆಲ್ಲಾ ೨೯೮ ಲೈಸೆನ್ಸ್‌ದಾರರಿದ್ದರೆ ಸಾಕು.

ಈ ಜಿಲ್ಲೆಯಲ್ಲಿ ಹರಿಜನರಕಡೆಯಿಂದ ೩೧ ಲಂಬಾಣಿ ಜನರಿಂದ ೩ ಲೈಸೆನ್ಸ್‌ಗಾಗಿ ಅರ್ಜಿಗಳು ಬಂದಿವೆ ಇವರಲ್ಲದೆ ಹೆಂಡವಿಳಿಸುವ ಜನರೂ, ಆ ಉದ್ಯೋಗದಲ್ಲಿ ತೊಡಗಿದ ಇತರರೂ ಈಗ ನಿರುದ್ಯೋಗಿಗಳಾಗಿದ್ದಾರೆ. ಅವರನ್ನೂ ನಾವು ಪ್ರೋತ್ಸಾಹಿಸಬೇಕು ಇವರಲ್ಲದೆ ಮುಸಲ್ಮಾನ್ ಮತ್ತು ಇತರರ ಅರ್ಜಿಗಳು ನೂರಾರು ಬಂದಿವೆ. ಯೋಗ್ಯರಾದವರಿಗೆ ಲೈಸೆನ್ಸ್ ಕೊಡುವ ಏರ್ಪಾಟು ಆಗಲಿ ಇನ್ನು ಒಂದು ತಿಂಗಳಾದರೂ ಬೇಕು ಕಲೆಕ್ಟರರು ಸೂಚಿಸುವಂತೆ ಪ್ರತಿಯೊಬ್ಬ ದೊಡ್ಡವರಿಗೆ ೨ ಗಜ, ಚಿಕ್ಕವರಿಗೆ ೧ ಗಜ ಬಟ್ಟೆ ಹಬ್ಬಕ್ಕಾಗಿ ಕೊಡುವ ಏರ್ಪಾಟನ್ನು ಶೀಘ್ರವಾಗಿ ಮಾಡುತ್ತೇವೆಂದರು.

ಶ್ರೀ ಟಿ. ಬಿ. ಕೇಶವರಾಯರು ಮಾತಾಡುತ್ತಾ ಕಳೆದ ಅನೇಕ ತಿಂಗಳಿಂದ ಹರಿಜನರಿಗೆ ಬಟ್ಟೆಯೇ ದೊರೆತಿಲ್ಲವೆಂದೂ, ಅವರು ಸರ್ಕಾರದ

ಸೂಚನೆ ಪ್ರಕಾರ ಲೈಸೆನ್ಸ್ ಫೀಸುಕಟ್ಟಿ ಅರ್ಜಿಇಟ್ಟು ಕೆಲತಿಂಗಳಾದರೂ ಲೈಸೆನ್ಸ್ ಬರದಿರುವುದು ವಿಷಾದಕರವಾಗಿರುವುದೆಂದೂ, ಇನ್ನುತಡಮಾಡದೆ ಲೈಸೆನ್ಸ್ ಕೊಡಬೇಕೆಂತಲೂ ಹೇಳಿದರು. ಅಲ್ಲದೆ 1948 ನೆಯ ಏಪ್ರಿಲ್‌ದಿಂದ ಹೊಸವರ್ಷವು ಪ್ರಾರಂಭವಾಗುವಕಾರಣ ಮತ್ತೆ ಲೈಸೆನ್ಸ್ ಕಟ್ಟಬೇಕಾದ ಅನಶ್ಯಕತೆಯನ್ನು ಹೇರಬಾರದೆಂದು ಸೂಚಿಸಿದರು ಕಲೆಕ್ಟರವರೂ ಟೆಕ್ಸ್‌ಟೈಲ್ ಆಫೀಸರ್ ಸುಬ್ಬರಾಯರೂ, ಇದಕ್ಕೆ ತಕ್ಕ ಏರ್ಪಾಟು ಮಾಡುವೆವೆಂದು ವಾಗ್ದಾನವಿತ್ತರು.

ಬಳ್ಳಾರಿ ಜಿಲ್ಲಾ ಕಲೆಕ್ಟರವರ ಪ್ರಕಟನೆ.

ಮೂರು ವರ್ಷಕ್ಕೆ ಕಡಮೆ ವಯಸ್ಸಿಲ್ಲದ 400 ಜೊತೆ ಹೋರಿಗಳನ್ನು ಮೈಸೂರು ದೇಶದ ಬೆಂಗಳೂರು, ಮೈಸೂರು, ಹಾಸನ, ಮಂಡ್ಯ, ತುಮಕೂರು ಜಿಲ್ಲೆಗಳಿಂದ ನಮ್ಮ ಜಿಲ್ಲೆಯ ರೈತರು ಕೊಳ್ಳಲಿಹುದಾಗಿದೆ ಈ ಕೆಳಗೆ ಕಾಣಿಸಿದ ಅರ್ಜಿಯನ್ನು ಕಲೆಕ್ಟರವರಿಗೆ ರೈತರು ಇಟ್ಟುಕೊಳ್ಳತಕ್ಕದ್ದು. ಕಲೆಕ್ಟರವರು ಬೆಂಗಳೂರಿನ ಪಶುಸಂಗ್ರಹಾಧಿಕಾರಿಗಳಿಗೆ ಬರೆದು (Cattle Procurement Officer) ರೈತರಿಗೆ ಪಶುಗಳು ದೊರೆಯುವ ಪ್ರದೇಶ ಮತ್ತು ಇತರ ವಿವರಗಳನ್ನು ತಿಳಿಸಲೇರ್ಪಡಿಸುವರು. ಅರ್ಜಿದಾರರು ತಾವೇ ಹೋಗಿ ತಮಗೆ ಬೇಕಾದ ಹಸ್ತಿಯನ್ನು— ದೂರದ ಜಿಲ್ಲೆಗಳಲ್ಲಿ ಪಶುಗಳನ್ನು ಕೊಂಡು ತಮ್ಮಲ್ಲಿಗೆ ತೀರಾ ಬರದಂತೆ ಕಾಪಾಡಿಕೊಂಡು ತರಬೇಕು. ಹಾಗೆ ಕೊಂಡು ತಂದ ಪಶುಗಳನ್ನು ಒಂದು ವರ್ಷದವರೆಗೆ ಮಾರಿಗೂ ಮಾಡಬಾರದು. ಹಾಗೆ ಮಾಡಿದಲ್ಲಿ ಶಿಕ್ಷೆಗೆ ಗುರಿಯಾಗುವರು. ಜಿಲ್ಲೆಯ ರೈತರು ಈ ಸಂಸಂಧಿಯನ್ನು ಕಳೆದುಕೊಳ್ಳಬಾರದೆಂದು ಆಶಿಸಲಾಗಿದೆ.

ಅರ್ಜಿಯ ನಮೂನೆ:— (೧) ಜಾಲ್ತಿಸಂಖೆ (೨) ಅರ್ಜಿದಾರನ ಹೆಸರು, ವಿಳಾಸ (೩)ಬೇಕಾದ ಪಶುಗಳ ಸಂಖೆ (೪)ಮೈಸೂರಿನ ಯಾವ ಜಿಲ್ಲೆಯಿಂದ ಕೊಳ್ಳಲಿಚ್ಛಿಸುವಿರಿ?— ಅರ್ಜಿದಾರನ ಸಹಿ

ಕೆ. ಎನ್. ಅನಂತರಾಮನ್, ಕಲೆಕ್ಟರ್.

In the Court of the District Judge of Bellary

O. P. No. 17 of 1947

Between :—

K. Gavisiddappa ... Petitioner

In the **the matter of the Succession** Certificate.

The petitioner K Gavisiddappa has filed the above petition for the grant of Succession Certificate to realise the Policy amount of Rs.5000 with bonus under Policy No. 56153 (Ajmeer Life Assurance Ltd) due to late K. Ramaswamy and same is posted to 21-3-1947 for objections if any from any person interested, The matter will be disposed of exparte if no objections are filed before that date. G. SRIDHARMURTHY

Advocate for Petitioner.

ಬಳ್ಳಾರಿಜಿಲ್ಲಾ ಜಡ್ಜರವರ ಕೋರ್ಟಿನಲ್ಲಿ

ಒ. ಪಿ. ನಂ. 17-1947

ವಾರಸು ಅಧಿಕಾರ ಪತ್ರದ ವಿಷಯ-ಅರ್ಜಿದಾರ- ಕೆ. ಗವಿಸಿದ್ದಪ್ಪ ಗತಿಸಿದ ಕೆ. ರಾಮಸ್ವಾಮಿಯವರಿಗೆ ಅಜ್ಮೀರ್ ಲೈಫ್ ಅಶೂರೆನ್ಸ್ ಕಂಪನಿಯಿಂದ ಪಾಲಿಸಿ ನಂ: 56153 ರ ಪ್ರಕಾರಕ್ಕೆ ಬರಬೇಕಾದ ರೂ. 5000/- ಮತ್ತು ಬೋನಸ್ ಹಣಕ್ಕಾಗಿ ವಾರಸು ಅಧಿಕಾರಪತ್ರವನ್ನು ಪಡೆಯಲು ಕೆ. ಗವಿಸಿದ್ದಪ್ಪನವರು ಮೇಲ್ಕಾಣಿಸಿದ ಅರ್ಜಿಯಿಟ್ಟಿದ್ದಾರೆ. ಇದರಲ್ಲಿ ಸಂಬಧಿಸಿದವರ್ಯಾದಾದರೂ ಇದ್ದರೆ. ಅವರ ಆಕ್ಷೇಪಣೆಗಳನ್ನು ಕೇಳಲು 21-3-1947 ನೆಯ ತಾರೀಖಿಗೆ ವಾಯ್ದೆ ಹಾಕಿರುವರು. ಆತಾರೀಖಿನ ಮುಂಚೆ ಆಕ್ಷೇಪಣೆಗಳು ದಾಖಲಾಗದಿದ್ದಲ್ಲಿ ಈ ವಿಷಯವನ್ನು ವಿಚಾರಣೆಯಿಲ್ಲದೆ ಇತ್ಯರ್ಥವಾಗುವುದು (Exparte)

ಜಿ. ಶ್ರೀಧರಮೂರ್ತಿ ಅರ್ಜಿದಾರ ಅಡ್ವೊಕೇಟ

ಬಳ್ಳಾರಿ ಜಿಲ್ಲೆಯಲ್ಲಿ ಆಹಾರ, ಬಟ್ಟೆಯ ಕೊರತೆ

ಬಳ್ಳಾರಿ ಕಲೆಕ್ಟರರ ಕಛೇರಿಯಲ್ಲಿ ಕಲೆಕ್ಟರವರಾದ ಶ್ರೀ ಅನಂತರಾಮನ್‌ರವರ ಅಧ್ಯಕ್ಷತೆಯಲ್ಲಿ ಮಾಸಿಕ ಆಹಾರ ಸಮಿತಿಯ ಸಭೆಯು ಸಮಾವೇಶವಾಗಿ—ಜಿಲ್ಲೆಯ ಆಹಾರ, ಬಟ್ಟೆಗಳ ಕೊರತೆಯು ವಿಮರ್ಶಿತವಾಯಿತು.

ಆಹಾರ:— ಜಿಲ್ಲೆಯ ಎಲ್ಲಾ ತಾಲೂಕುಗಳಿಗಿಂತ ಬಳ್ಳಾರಿ ತಾಲೂಕಿನಲ್ಲಿ ಸುಮಾರು ೧೮ ಸಾವಿರ ಚೀಲ ಕಾಳಿನ ಸಂಗ್ರಹವಾಗಿದೆ. ಇದು ಬಹಳ ತೃಪ್ತಿಕರವಾದ ಅಂಶವೆಂದರು. ಹಡಗಲಿ ತಾ|| ಚನ್ನಬಸವನಗೌಡರೂ, ಹರಪನಹಳ್ಳಿ ಪ್ರತಿನಿಧಿ ಕೊಟ್ರಗೌಡರೂ, ತಮ್ಮ ತಾಲೂಕುಗಳ ಬೆಳೆಯು ತೃಪ್ತಿಕರವಿಲ್ಲವಾದ ಕಾರಣ ಸಂಗ್ರಹದ ನಿಶ್ಚಿತ ಭಾಗದಲ್ಲಿ ಅರ್ಧದಷ್ಟು ತಗ್ಗಿಸಬೇಕೆಂದರು. ಹೀಗಾದರೆ ಜಿಲ್ಲೆಯ ಆಹಾರಕ್ಕೆ ಕೊರತೆಯೂಗಬಹುದೆಂದು ಸೂಚಿಸಿ ಸ್ವಲ್ಪಮಟ್ಟಿಗೆ ಕಡಮೆ ಮಾಡಬಹುದೆಂದರು. ಬಳ್ಳಾರಿ ಜಿಲ್ಲೆಗೆ ತಿಂಗಳ್ಕೆ ತಿಂಗಳಿಗೆ ಬೇಕಾಗುವ ೨೫೦೦ ಟನ್ ಅಕ್ಕಿ ಬರದೆ ಕಡಮೆ ಬರುತ್ತಿರುವ ಕಾರಣ ಕಳೆದ 2. ತಿಂಗಳಿಂದ ಹಳ್ಳಿಗಳಿಗೆ ಅಕ್ಕಿಯ ಪೂರೈಕೆ ಮಾಡಲಿಕ್ಕಾಗಿಲ್ಲವೆಂದು ಸೆಂಟ್ರಲ್ ಕೋಪರೇಟಿವ್ ಸ್ಟೋರ್ಸ್ ಅಧ್ಯಕ್ಷರಾದ ಶ್ರೀ ಲಿಂಗಾರೆಡ್ಡಿಯವರು ಹೇಳಿದರು. ಸರ್ಕಾರಕ್ಕೆ ಈ ವಿಷಯವಾಗಿ ಬರೆಯಲು ನಿಶ್ಚಿತವಾಯಿತು.

ರೈತನಿಗೆ ಬೇಕಾದ ದನಗಳು:—ಮೈಸೂರು ಸೀಮೆಯಲ್ಲಿ 400 ಜೊತೆ ಹೋರಿಗಳನ್ನು ಕೊಳ್ಳಲು ಕಲೆಕ್ಟರವರಿಗೆ ಸೂಚಿತವಾಗಿದ್ದು ಬಳ್ಳಾರಿ ಭಾಗದ ರೈತರು ಅವುಗಳಿಂದ ಲಾಭ ಹೊಂದಿಲ್ಲವೆಂದು ವ್ಯಕ್ತವಾಯಿತು. ಕಲೆಕ್ಟರ್ ಕಛೇರಿಯಿಂದ ಪರ್ಮಿಟ್ ಪಡೆದು ರೈತರು ಮೈಸೂರು ಸೀಮೆಯಿಂದ ದನಗಳನ್ನು ಕೊಳ್ಳಬೇಕೆಂದೂ, ನವಭಾರತದಲ್ಲಿ ಇದನ್ನು ಪ್ರಕಟಿಸಬೇಕೆಂದೂ ಕೇಳಲಾಯಿತು. ರೈತರು ಇದರ ಉಪಯೋಗವನ್ನು ಹೊಂದಬೇಕು.

೨೦ ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಹರಪನಹಳ್ಳಿ

(ನಮ್ಮ ಸುದ್ದಿಗಾರರಿಂದ)

ಏಪ್ರಿಲ ೨೮-೨೯-೩೦ ನೆಯ ದಿನಾಂಕಗಳಲ್ಲಿ ಸಮ್ಮೇಳನವನ್ನು ಯಶಶ್ವಿಯಾಗಿ ನಡೆಸಲು ಸ್ವಾಗತ ಸಮಿತಿಯವರು ಕಳಕಳಿಯಿಂದ ಪ್ರಯತ್ನಗಳನ್ನು ನಡೆಸಿದ್ದಾರೆ. ನವಂಬರ್ ೧೯೪೬ ರ ಮೊದಲನೆಯ ವಾರದಿಂದ ಪ್ಲೇಗ್ ಜಾಡ್ಯದ ಕಾರಣ ನೋವ್ ಸಾವುಗಳಿಲ್ಲ ನಗರವು ಪೂರ್ಣವಾಗಿ ಮುಕ್ತವಾಗಿದೆ. ಏಪ್ರಿಲ್ ಆಖೈರಕ್ಕೆ ಬಿಸಿಲಿನ ಬೇಗೆಯು ಹೆಚ್ಚಿದ್ದು ಆರೋಗ್ಯಕರವಾದ, ಹಿತಕರವಾದ ವಾತಾವರಣವಿರುತ್ತದೆ. ಗ್ರಾಮೋದ್ಯೋಗಗಳ ಪ್ರದರ್ಶನಕ್ಕೆ ಏರ್ಪಾಟಾಗಿದ್ದು ಇದರಲ್ಲಿ ಭಾಗವಹಿಸುವವರು, ವಸ್ತುಗಳನ್ನು ಕಳುಹಿಸಲಿರುವವರು ಬಣಗಾರ ಪೇಟೆಯಲ್ಲಿನ ಸಮ್ಮೇಳನದ ಕಾರ್ಯಾಲಯಕ್ಕೆ ಬರೆದುಕೊಳ್ಳಬೇಕು.

ಪಂಜಾಬಿನಲ್ಲಿ ಲೀಗ್ ಮಂತ್ರಿಮಂಡಳ, ಗಲಭೆ

ಪಂಜಾಬದ ಯೂನಿಯನಿಸ್ಟ ಮಂತ್ರಿಮಂಡಳದ ಪ್ರಧಾನರಾದ ಖಿಜರ ಹಯಾತ ಖಾನರು ಎಲ್ಲರಿಗೂ ಆಶ್ಚರ್ಯಕರವಾಗುವಂತೆ ಒಂದೇಸಲ ರಾಜೀನಾಮೆ ಕೊಟ್ಟಕಾರಣ ಗವರ್ನರರು ಲೀಗ್ ಮುಖಂಡರಾದ ಮುನುಮೋಕ ನವಾಬರನ್ನು ಕರೆಸಿ ಮಂತ್ರಿಮಂಡಳ ರಚಿಸಲು ಕೇಳಿಯವರು. ಇದಕ್ಕೆ ನವಾಬ ಟೊಸ್ಸಿರುವರು ಸೀಖರಿಗೂ, ಹಿಂದೂಗಳಿಗೂ ಮೋಸ ಮಾಡುವ ಕೃತ್ಯವಿದೆಂದು ಘೋಷಣೆ ಅಭಿಪ್ರಾಯ ಪಟ್ಟಿರುವರು. ಈಗ ಜಾತೀಯಗಲಭೆಗಳ ಕಾರಣದಿಂದ 4 ನೆಯ ತಾ. ಒಂದೆದಿನವೇ 13 ಜನರುಸತ್ತು 98 ಜನರಿಗೆ ಗಾಯಗಳಾಗಿವೆ. ಮಂತ್ರಿವರ್ಗದವರಿಲ್ಲಾ ರಾಜೀನಾಮೆ ಕೊಟ್ಟಕಾರಣ ಗವರ್ನರರು ಆಡಳಿತವನ್ನು ಇಂಡಿಯಾ ಆಕ್ಟ್ 93 ನೆಯ ಕಲಂಪ್ರಕಾರಕ್ಕೆ ವಹಿಸಿರುವರು ಹಿಂದೂ ಸಿಕ್ ಮತ್ತು ವಿದ್ಯಾರ್ಥಿಗಳು ಸರ್ಕಾರದ ಸ್ಥಿಬಂಧಕಾಜ್ಞೆಗಳನ್ನು ಮೀರಿದು ಮೆರವಣಿಗೆಗಳನ್ನು ಹೊರಡಿಸುತ್ತಿರುವರು.

120

ಗೋಮಾತೆ.

೧

ಗೋ ಹಿಂಸೆ ಮಾಡುವಿರ ?
ಗೋ ಕ್ಷೀರ ಕುಡಿಯುವಿರ ?
ಗೋ ಮಾತೆ ಭೂಮಾತೆ ಎಂಬುದನು ಮರೆಯುವಿರ ?
ನಮ್ಮ ಮುದ್ದು ಕಂದಗಳಿಗೆ
ಹಾಲು ಕೊಡುವ ತಾಯಿಗಳ !
ರೋಗಿಶಯ್ಯೆಯಲ್ಲಿ ಮಲಗೆ
ಅಮೃತ ಸುರಿವ ಪ್ರಾಣಿಗಳ !
ತಾಗಿ ಬಾಗಿ ನೊಂದು ಮರುಗೆ
ಕ್ಷೀರ ಕೊಡುವ ಗೋವುಗಳ !!
ಕಡಿವಿರಾ ! ಬಡಿವಿಗಾ !
ಬಡಕಲಾಗೆ ಬಿಡುವಿರಾ ?

೨

ರೈತನ ಹೊಲ ತೋಟಗಳಿಗೆ
ನೀರನೆಳೆವ ಎತ್ತುಗಳ !
ಗದ್ದೆ ಉತ್ತು ಬಿಳೆಯ ಬಿಳಿವ
ಮುದ್ದು ಮುದ್ದು ಹೋರಿಗಳಾ !
ಗುಡಿಯ ಸೂಬಗ ಹೆಚ್ಚಿಸುವ
ಕಡು ಬಿಡಿಗಿನ ಬಸವಗಳಾ !
ಕಡಿವಿರಾ ! ಬಡಿವಿರಾ
ಬಡಕಲಾಗೆ ಬಿಡುವಿರಾ ?

೩

ವಿಶ್ವದಲ್ಲಿ ಭಾರತವ ಗೋವಮಾತೆ ಎನುವುದು,
ವಿಶ್ವದಲ್ಲಿ ಭಾರತದ ಗೋವನಾಶೆಯಾಗಿಹುದು,
ತಿನಲು ಪುಲ್ಲು-ಧಾನ್ಯವಿಲ್ಲಿ ?
ಇರಲು ತಕ್ಕ ತಾಣವಿಲ್ಲಿ ?
ಆ ಕೆಸರ ಹೊಂಡದಲ್ಲಿ,
ಆ ಕೊಳಕು ಹಟ್ಟಿಯಲ್ಲಿ,
ಕಟ್ಟಿ ನರಕ ಯಾತನೆಯೋ !
ಕುಟ್ಟಿ ಬಡಿವ ಪೀಡೆಯೋ ?
ಸಹಿಸವೋ ಸಹಿಸವೋ !
ಗೋಮಾತೆ ಸಹಿಸವೋ !

ಅಶೋಕ ಚಕ್ರವರ್ತಿ ಕಾಲದ ಗುರ್ತಿನ ಶೋಧನೆ

ಇಲ್ಲಿಗೆ ೯ ಮೈಲು ದೂರದಲ್ಲಿರುವ ಸಿದ್ದಾಪುರದ ಸಮೀಪ ಬ್ರಹ್ಮಗಿರಿ ಪರ್ವತ ಶ್ರೇಣಿಯ ಸಮೀಪದಲ್ಲಿ ಹಿಂದೂಸ್ತಾನದ ಭೂಗರ್ಭಶಾಖೆಯ ಮುಖ್ಯರಾದ ವೀರಲ್ಲರವರು ಶೋಧನೆ ನಡೆಸಿ ಪ್ರಾಚೀನ ಗುರ್ತುಗಳ ಶೋಧನೆ ನಡೆಸಲಿರುವರು. 1-3-47 ಹಿಂದೂಸ್ತಾನದ ಎಲ್ಲಾಭಾಗಗಳಿಂದಲೂ ಬರುವ ಸುಮಾರು 30 ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡಲಾಗುವುದು. ಈ ಕಾರ್ಯದಲ್ಲಿ ಪ್ರವೀಣರಾದ ಮೈಸೂರಿನ ಡಾ. ಎಂ. ಹೆಚ್. ಕೃಷ್ಣ ಮತ್ತು ಡಾ. ಎಸ್. ಕೃಷ್ಣಸ್ವಾಮಿ ಅಯ್ಯಂಗಾರು ಭಾಗವಹಿಸಲಿರುವರು.

ಕೊಡ್ಲಿಗೆ:- ೧೦-೩-೪೭ ನೆಯ ದಿನಾಂಕ ಕೂಡಿದ ನೆಹರೂ ತರುಣಸಂಘದ ಸಮಾವೇಶದಲ್ಲಿ ಶ್ರೀ ವಾಮದೇವ ಶರ್ಮರು ಬಳ್ಳಾರಿಗೆ ಹೋದ ಕಾರಣ ಖಾಲಿ ಬಿದ್ದ ಸ್ಥಳದಲ್ಲಿ ಶ್ರೀ ಎಸ್. ಸುಬ್ರಮಣ್ಯರವರು ಸರ್ವಾನುಮತದಿಂದ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಸಂಘದ ಉದ್ದೇಶ ಸಾಧನೆ ಸೂತ್ರಗಳನ್ನು ಕುರಿತ ಭಾಷಣಗಳಾದವು.

Woolen Coatings, Silk Sarees, Benares and other latest designs Handloom and Mill made Clothes Etc.,
Colours Guaranteed, Prices very reasonable. Trial Solicited.

G. GOPAL SING & SON.,
CLOTH MERCHANT
No. 15 Old Market BELLARY.
ಜಿ. ಗೋಪಾಲ ಸಿಂಗ್ ಅಂಡ್ ಸನ್,
ಜವಳಿ ವ್ಯಾಪಾರಿ, ನಂ. 15
ಹಳೇ ಮಾರ್ಕೆಟ್, ಬಳ್ಳಾರಿ.

ಉಲನ್ ಕೋಟ್ ಬಟ್ಟೆ, ಬನಾರಸ್ ಜರಿ, ಸಿಲ್ಕ್-ಟಿಶ್ಯೂ ಸೀರೆ ಜಾಕೆಟ್ ಲೇಸ್ ಬಾರ್ಡರ್ ಮತ್ತು ಇತರ ಅನೇಕ ವಿವಿಧ ಅತ್ಯಂತ ಆಧುನಿಕ ಉಡುಪಿನ ಬೇಡಿಕೆಯನ್ನು ನಾವು ಪೂರೈಸಲಿದ್ದೇವೆ. ಕೈ ಮಗ್ಗದ ಖಾದಿ ಬಟ್ಟೆಗಳು ವಿಧಾಯಕ ಬೆಲೆಗೆ ದೊರೆಯುತ್ತವೆ. ಬಣ್ಣ ಗ್ಯಾರಂಟಿ, ಬೆಲೆ ಕರಿಯಾದ್ದು. ಪರೀಕ್ಷಿಸಿ ಮನಗಾಣಿರಿ.

ಭಾರತದ ಗೋಸಂಪತ್ತು.



ಕೇಂದ್ರ ಆಹಾರ ಶಾಖೆಯ ಮಂತ್ರಿ ಡಾಕ್ಟರ್ ರಾಜೇಂದ್ರ ಪ್ರಸಾದರ ಭಾಷಣ

ಹಾಲಿಗಾಗಿ ಇಲ್ಲವೇ ಇತರ ಕೆಲಸಗಳಿಗಾಗಿ ಬೇಕಾದಷ್ಟು ಉತ್ತಮವಾದ ಜಾನುವಾರುಗಳನ್ನು ಒದಗಿಸಿಕೊಳ್ಳುವ ಸಮಸ್ಥೆಯು ಗಮನಾರ್ಹವಾಗಿದೆ. ಭಾರತವು ಗೋಸಂಪತ್ತಿನಲ್ಲಿ ಇಡೀ ಜಗತ್ತಿನಲ್ಲೇ ಮೊದಲನೆಯ ಸ್ಥಾನ ಪಡೆದಿದೆ. ಜಗತ್ತಿನ ಇತರ ಭಾಗದ ಜನರಿಗಿಂತ ಭಾರತೀಯರಿಗೆ ಹಾಲಿನ ಅವಶ್ಯಕತೆಯು ಹೆಚ್ಚಾಗಿದೆ ಏಕೆಂದರೆ ಭಾರತೀಯರಲ್ಲಿ ಮಾಂಸ ತಿನ್ನದವರೇ ಹೆಚ್ಚಾಗಿದ್ದಾರೆ. ಹಾಲು-ಬೆಣ್ಣೆ-ತುಪ್ಪ-ಇವುಗಳೇ ಇವರಿಗೆ ಪೌಷ್ಟಿಕ ಆಹಾರವಾಗಿದೆ ನಮ್ಮ ದೇಶದಲ್ಲಿ ಈಗ ಹಾಲಿನ ವಾರ್ಷಿಕ ಉತ್ಪನ್ನವು ಆರು ಕೋಟಿ ಮಣಗಳಷ್ಟಿದೆ. ಪ್ರತಿಯೊಬ್ಬನಿಗೆ ದಿನಕ್ಕೆ ಒಂದು ರತ್ತಲ್ ನಷ್ಟು ದೊರೆಯುವಂತೆ ಭಾರತದ ಜನರಿಗೆಲ್ಲಾ ಹಾಲು ದೊರೆಯಬೇಕಾದರೆ ಈಗಿರುವ ಹಾಲಿನ ಪರಿಣಾಮವು ಕಡಮೆಯೆಂದರೆ ಮೂರು ಪಾಲು ಹೆಚ್ಚಾಗಬೇಕು. ಕರುಗಳಿಗೆ ಬಿಡುವ ಹಾಲನ್ನು ಲೆಕ್ಕಕ್ಕೆ ತೆಕ್ಕೊಂಡರೆ ಒಟ್ಟು ಏಳು ಕೋಟಿ ಮಣಗಳಷ್ಟಾದರೂ ಹಾಲು ದೊರೆಯಬೇಕು.

ಬೇಸಾಯಕ್ಕೆ ದಷ್ಟಪುಷ್ಟವಾದ ಎತ್ತುಗಳು ಬೇಕು. ಸರಕಾರದ ಇಂದಿನ ಧೋರಣೆಯಂತೆ ಉತ್ತಮವಾದ ಗೋಶಾಲೆಗಳನ್ನು ನಿರ್ಮಿಸಿ, ದನಗಳನ್ನು ಅಭಿವೃದ್ಧಿಗೊಳಿಸುವುದಕ್ಕೂ, ಕೆಲಸಕ್ಕೆ ಉಪಯೋಗವಾಗುವ ಉತ್ತಮ ಎತ್ತುಗಳನ್ನು ಒದಗಿಸುವುದಕ್ಕೂ ಯತ್ನಿಸಲಾಗುವುದು.

ಹಿಂದುಗಳು ಗೋವುಗಳನ್ನು ಆರಾಧಿಸಿದರೂ, ಅವರ ದನಕರುಗಳು ಬಡಕಲಾಗಿಯೇ ಇರುವುವು. ದನಕರುಗಳನ್ನು ಕಟ್ಟುವ ಸ್ಥಳ, ಅವುಗಳನ್ನು ಸಾಕುವ ಪದ್ಧತಿ ಇತ್ಯಾದಿಗಳು ಶೋಚನೀಯವಾಗಿವೆ. ಬೇರೆ ದೇಶಗಳಲ್ಲಿ ದನಗಳನ್ನು ಪೂಜಿಸದೆ, ಆಹಾರಕ್ಕಾಗಿ ಕೊಲ್ಲುತ್ತಿದ್ದರೂ ಅವುಗಳ ಪೋಷಣೆ ರಕ್ಷಣೆಗಳು ಎಷ್ಟೋ ಚೆನ್ನಾಗಿವೆ.

ಜಾನುವಾರುಗಳಿಗೆ ಬೇಕಾಗುವ ಆಹಾರವನ್ನು ನಾವು ನಮ್ಮ ದೇಶದಲ್ಲಿ ಸಾಕಷ್ಟು ಒದಗಿಸಿಕೊಳ್ಳುವ ತನಕ ಯಾವ ಯೋಜನೆಯೂ ಅವುಗಳ ಅಭಿವೃದ್ಧಿಗೆ ಸಹಾಯಕವಾಗದು. ಇಂದಿನ ಪರಿಸ್ಥಿತಿಯಂತೆ ಜಾನುವಾರಗಳಿಗೆ ಬೇಕಾಗುವ ಆಹಾರದಲ್ಲಿ ಶೇಕಡಾ ೬೦ ರಷ್ಟು ಮಾತ್ರ ದೊರೆಯುತ್ತಿದೆ

ನಮ್ಮ ದೇಶದ ವ್ಯವಸಾಯ ಕ್ಷೇತ್ರವನ್ನು ವಿಸ್ತರಿಸುವುದರ ಮೂಲಕ ಜಾನುವಾರುಗಳಿಗೆ ಆಹಾರ ದೊರಕುವಂತೆ ಆಗುವುದಲ್ಲದೆ, ಸಾಕಷ್ಟು ಧಾನ್ಯವನ್ನು ಹೆಚ್ಚಿಸಿಕೊಳ್ಳಲೂ ಸಾಧ್ಯವಿದೆ.

ಜಾನುವಾರುಗಳಿಗೆ ಆಗಾಗ ಬರುತ್ತಿರುವ ಅಂಟುರೋಗಗಳನ್ನು ಪರಿಶೀಲಿಸಿದರೆ ತೀರಾ ವಿಷಾದಕರವಾಗಿದೆ. ಪ್ರತಿವರ್ಷವೂ ಸುಮಾರು ೩-೩ ಮಿಲಿಯ ಮಣಗಳಷ್ಟು ಹಾಲು ಹಾಳಾಗುತ್ತಿದೆ. ಸುಮಾರು ಮೂರುವರೆ ಲಕ್ಷ ಎತ್ತುಗಳು "ರಿಂಡರ್ ಪೆಸ್ಟ್" ಎಂಬ ರೋಗದಿಂದ ಸಾಯುತ್ತಿವೆ. ಈ ರೋಗಕ್ಕೆ ತಕ್ಕ ಔಷಧಿಯನ್ನು ಈಗಾಗಲೆ ಕಂಡುಹಿಡಿಯಲಾಗಿದೆ. ಒಮ್ಮೆ ಈ ಔಷಧ ದಾಕು ಹಾಕುವುದಕ್ಕೆ ಎರಡಾಣೆಗಿಂತಲೂ ಕಮ್ಮಿ ಖರ್ಚಾಗುವುದು

ಹೀಗೆ ನಮ್ಮ ದೇಶದ ಗೋಸಂಪತ್ತಿನಲ್ಲಿರುವ ಕುಂದುಕೊರತೆಗಳನ್ನು ಹೋಗಲಾಡಿಸಿ ಗೋವುಗಳ ಅಭಿವೃದ್ಧಿಮೂಲಕ ದೇಶದ ಕಲ್ಯಾಣವನ್ನು ಹಾರೈಸಿ.

ಮಹಾತ್ಮಗಾಂಧಿಯವರು ಕೆಲದಿನಗಳ ಮಟ್ಟಿಗೆ ಬೀಹಾರ ಸಂತ್ರಸ್ತರ ಪರಿಹಾರದ ಕಾರ್ಯಮಾಡಿ ಮತ್ತೆ ಬಂಗಾಳಕ್ಕೆ ಬರಲಿರುವರು.

122

ಗ್ರಾಮ ಪಕ್ಷಪಾತಿ ಯೋಜನೆ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

೧೯ ಬಾಳೇದಿಂಡುಗಳು

ವಸಯಿ ಮತ್ತು ಖಾನ್‌ದೇಶ ಜಿಲ್ಲಾ ಪ್ರದೇಶಗಳಲ್ಲಿ ಬಾಳೇ ಗಿಡಗಳನ್ನು ಹಚ್ಚುವ ಉದ್ಯೋಗ ನಮ್ಮ ಪ್ರಾಂತದಲ್ಲಿಯೆ ದೊಡ್ಡದು. ಲಕ್ಷಾವಧಿ ಬಾಳೆದಿಂಡುಗಳನ್ನು ಕಾಯಿಯಾದ ಬಳಿಕ ಕಡಿದು ಪ್ರತಿವರ್ಷ ಹಾಗೆಯೇ ಒಗೆಯುವುದುಂಟು ಸ್ವಲ್ಪ. ಪ್ರಮಾಣದಲ್ಲಿ ಗೊಬ್ಬರ ಅಲ್ಲದೆ ಬೇರೆ ಯಾವ ರೀತಿಯಿಂದ ಒಡೆಯರಿಗೆ ಅವುಗಳಿಂದ ಪ್ರಯೋಜನವಿಲ್ಲ. ಅದರೂ ಈ ದಿಂಡುಗಳಿಂದ ಅತ್ಯುತ್ತಮ ರೇಶಿಮೆ ಎಳೆಯನ್ನು ತೆಗೆಯಬಹುದು. ಮತ್ತು ಅದರಿಂದ ಕೃತ್ರಿಮ ರೇಶಿಮೆ ಬಟ್ಟೆ; 'ತಟ್ಟು' ಹಗ್ಗ ಮೊದಲಾದವುಗಳನ್ನು ಮಾಡಬಹುದು. ಶಾಸ್ತ್ರೀಯ ತಜ್ಞರು ಇದರ ಉಪಯುಕ್ತತೆಯ ಇನ್ನೂ ಅನೇಕ ಮಾರ್ಗಗಳನ್ನು ಹುಡುಕಬಹುದು.

೨೦ ಕಲ್ಲಾರಿನ ಚೀಲಗಳು

ಇದೊಂದು ಅತ್ಯವಶ್ಯವಾದ ದೊಡ್ಡ ಉದ್ಯೋಗ ಬಂಗಾಲದಲ್ಲಿ ಕಲ್ಕಾರಿನ ಗಿರಣಿಗಳ ಕೈಮಲ್ಲಿಯೆ ಈ ಉದ್ಯೋಗವಿದ್ದು ಹಳ್ಳಿಯಲ್ಲಿ ಕಲ್ಲಾರು ಬೆಳೆಸುವನಿಗೆ ಇದರಿಂದ ಸಾಕಷ್ಟು ಹಣ ಸಿಕ್ಕುವದಿಲ್ಲ-ಅದಕೆ ಜವಳಿಯಂತೆ ಇದರ ವಿಕೇಂದ್ರೀಕರಣವನ್ನು ಮಾಡಿ ಅದರ ಪ್ರಸಾರ ಮಾಡುವ ಉಪಕ್ರಮ ಕೈಕೊಳ್ಳಬೇಕು. ಹಿಂದಿನ ಕಾಲದಲ್ಲಿ ಕಾಳು ತುಂಬಲು ಮತ್ತು ಹೊರಗೆ ಕಳಿಸಲು ಬೇಕಾಗುವ ಈ ಚೀಲಗಳನ್ನು ಕಲ್ಲಾರು ನೂತು ನೇಯುವ ಕಲಸವನ್ನೆಲ್ಲ ಅಂತಃಪ್ರಾಂತೀಯ ಮತ್ತು ಅಂತರ್‌ರಾಷ್ಟ್ರೀಯ ವ್ಯಾಪಾರ ವಹಿವಾಟುಗಳಲ್ಲಿ ಒಂದೇಸವನೆ ಸಂಚರಿಸುತ್ತಿದ್ದ ವ್ಯಾಪಾರಸ್ಥರ ಗುಂಪು ನಡೆಸುತ್ತಿದ್ದಿತೆಂಬುದನ್ನು ಗಮನಿಸಬೇಕಾಗಿದೆ. ನಡೆಯುವಾಗ ಕೂಡ ಪ್ರತಿಯೊಬ್ಬ ತಕಲೆಯಿಂದ ನೂಲುತ್ತಿದ್ದ ತಮ್ಮ ದೀರ್ಘ ಪ್ರವಾಸದಲ್ಲಿನ ಶಿಬಿರಗಳಲ್ಲಿ ಚೀಲಗಳನ್ನು ಹೆಣೆಯುತ್ತಿದ್ದ ಇಲ್ಲವೆ ನೇಯುತ್ತಿದ್ದ.

೨೧ ಚಾಪಿ, ಬುಟ್ಟಿ, ಹಗ್ಗ, ಕಸಬರಿಗೆ, ಬ್ರಶ್ಶುಗಳು

ಇವುಗಳನ್ನು ಮುಖ್ಯವಾಗಿ ಹಳ್ಳಿಯ ಉದ್ಯೋಗಗಳನ್ನಾಗಿಯೇ ಇಡತಕ್ಕದ್ದು. ಸ್ವಾಭಾವಿಕವಾಗಿ ಯಾವ ಪ್ರದೇಶದಲ್ಲಿ ಖರ್ಜೂರ, ಟೆಂಗು, ತಿಂದಿ, ಬಿದಿರು, ನಾರು ಮೊದಲಾದ್ದು ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿದೆಯೊ ಅಲ್ಲಿ ಗುಡಿಸಲುಗಳಲ್ಲಿ ವಾಸಿಸುವ ಹಳ್ಳಿಗರು ಈ ಸಾಮಾನುಗಳನ್ನು ಮಾಡುತ್ತಿರುವರು. ಅಲ್ಲದೆ ಈ ಬಗೆಯ ಇನ್ನೂ ಅನೇಕ ಸಾಮಾನುಗಳನ್ನೂ ತಯಾರಿಸುತ್ತಿರುವರು. ದೇಶದ ಅನೇಕ ಭಾಗಗಳಲ್ಲಿ ಈಗಲೂ ಈ ಉದ್ಯೋಗಗಳು ಮನೆ ಕೈಗಾರಿಕೆಗಳಾಗಿಯೇ ಉಳಿದಿವೆ. ಇವೀಗ ಕಾರಖಾನೆಗಳಿಂದ ಅವುಗಳಿಗೆ ಸಂರಕ್ಷಣೆ ದೊರೆಯತಕ್ಕದ್ದು. ಕಾರಖಾನೆಗಳು ಇವುಗಳ ಮೇಲೆ ಅಕ್ರಮಣ ಮಾಡದಂತೆ ನೋಡಿಕೊಳ್ಳತಕ್ಕದ್ದು. ಟೆಂಗಲ್ಲಿನ ಕೇತಕಿ, ಫಾಯಪತ್ರ, ಬೆಂಡಿ. ಅಂಬಾಡಿ ಮತ್ತು ಉಳಿದವುಗಳೂ ನಮ್ಮ ಪ್ರಾಂತದ ಅನೇಕ ಭಾಗಗಳಲ್ಲಿ ಪ್ರಚಂಡ ಪ್ರಮಾಣದಲ್ಲಿ ಬೆಳೆಯುತ್ತವೆ. ಬಳ್ಳಿಗಳಲ್ಲಿ ಹಗ್ಗ ಮಾಡುವದಕ್ಕೆ ಇವು ಅತ್ಯುತ್ತಮ ಕಚ್ಚಾ ಮಾಲುಗಳಾಗಬಲ್ಲವು. ಮಾನವಶಕ್ತಿಗೆ ಮತ್ತು ಅದನ್ನು ಸುಲಭವಾಗಿಸುವಂತೆ ಸಣ್ಣ ಕೈಯಂತ್ರವನ್ನೊದಗಿಸಿ ಕೊಟ್ಟು ನಿರ್ದಿಷ್ಟ ಯೋಗ್ಯ ವಸ್ತುತಯಾರಿಸಿಕೊಳ್ಳಬಹುದಾಗಿದೆ.

೨೨ ಬಳಕೆಗಾರರ ವಸ್ತುಗಳು

ಇದೀಗ ದೇಶದ ಮೂಲೆಮೂಲೆಗಳಲ್ಲೆಲ್ಲ ವಿದ್ಯುಚ್ಛಕ್ತಿಯ ಪ್ರಸಾರವಾಗಲಿರುವದರಿಂದ ಅದಕ್ಕಾಗಿ ಬೇಕಾಗುವ ಹಿಡಿಕೆಗಳು ಪ್ಲಗ್ಗು ಮೊದಲಾದ ಸಾಮಾನುಗಳು ದೊಡ್ಡ ಪ್ರಮಾಣದಲ್ಲಿ ಬೇಕಾಗುವವು ಜಪಾನ ಮತ್ತು ಸ್ವಿಜರ್ಲಂಡಗಳಲ್ಲಿಯಂತೆ ಒಗೆಯು

ಲ್ಪಟ್ಟ ಸಾಮಗ್ರಿಗಳಿಂದ ಇವನ್ನೆಲ್ಲ ಮಾಡಿಕೊಳ್ಳಬಹುದಾಗಿದೆ. ಮನೆಕಟ್ಟಿಕೊಳ್ಳಲು ಮತ್ತು ದಿನದ ಉಪಯೋಗಕ್ಕಾಗಿ ಬೇಕಾಗುವ ಮಳೆ, ಬೋಲ್ಟು, ಸ್ಕ್ರೂ ಮೊದಲಾದವು ಬೇರೆ ಬೇರೆ ಆಹಾರದವು ಬೇಕಾಗುವುದುಂಟು. ಕಡ್ಡಿಪೆಟ್ಟಿಗೆಗಳು ಮತ್ತು ಒಗೆಯುವ ಸಾಬೂನು ನಿತ್ಯೋಪಯೋಗಿ ಮೂರನೇ ಪದಾರ್ಥಗಳಾಗಿವೆ. ಇವಲ್ಲದೆ ಗುಂಡಿಗಳು ಹಣಿಗೆಗಳು, ಬತ್ತಿಗಳು, ಟೇಪುಗಳು, ಟಾಯಿನ ಆಟಗಳ ಸಾಮಾನುಗಳು, ಫಾಂಟಿನ್‌ಪೆನ್. ಸೀಸು ಕಡ್ಡಿಗಳು, ಟಾಕುಗಳು ಗಾಣಿಗಳು ಅಂಟು, ಪಾಕೀಟುಗಳು, ಕೈ ಗಡಿಯಾರಗಳು ಮತ್ತು ಗಡಿಯಾರಗಳು ಅವುಗಳ ಉಪಕರಣಗಳು, ಕಲಸಿಗರ ಸಾಮಾನು ಮತ್ತು ಮೈರಿ ಅಲಂಕಾರದ ಸಾಮಾನುಗಳು, ಸಿಲೊಲಾಯಿಡ ಮತ್ತು ಇತರ ಸಾಮಾನುಗಳು, ಕೊಡಗಳು ಮತ್ತು ಇನ್ನು ಅನೇಕ ಬಳಕೆಗಾರರ ಸಾಮಾನುಗಳೆಂದು ಕರೆಸಿಕೊಳ್ಳುವ ಸಾಮಾನುಗಳು ಪರದೇಶಗಳಿಗೆ ಆಯಾತಾಗದಂತೆ ಮತ್ತು ಇಲ್ಲಿನ ಕಾರಖಾನೆಗಳಲ್ಲಿ ತಯಾರಾಗದಂತೆ ಸರಕಾರದವರು ನಿರ್ಬಂಧಿಸಬೇಕು. ಹಳ್ಳಿ ಕೈಗಾರಿಕೆಗಳೆಂದು ಹಳ್ಳಿಗಳಲ್ಲಿಯೆ ಇವೆಲ್ಲ ತಯಾರಾಗುವಂತೆ ನೋಡಿಕೊಳ್ಳಬೇಕು. ಹಳ್ಳಿಗರಿಗೆ ಸಹಾಯಕವಾಗುವಂತೆ ಕಾರಖಾನೆದಾರರು ಸಣ್ಣ ಸಣ್ಣ ಯಂತ್ರಗಳನ್ನು ಸಿದ್ಧಮಾಡಿಕೊಡಬೇಕು. ಅಲ್ಪಾವಧಿಯ ಮತ್ತು ತಾಂತ್ರಿಕ ಶಿಕ್ಷಣಕ್ರಮ, ರಾಸಾಯನಿಕ ವಿಧಾನಗಳು ಮೊದಲಾದ ಸಹಾಯವನ್ನೂ ಗೊತ್ತುಪಡಿಸಿ ಹಳ್ಳಿಗರಿಗೆ ಅವು ಸಿಕ್ಕುವಂತೆ ಸರಕಾರದವರು ಸಹಾಯ ಮಾಡಬೇಕು. ಇದರಿಂದ ಪ್ರಮಾಣಿತ ಉತ್ಪಾದನೆಯನ್ನು ಮಾಡಲು ಅವರಿಗೆ ಅವಕಾಶ ಸಿಕ್ಕುವದು ಅತ್ಯಗ್ರ ಉಪಾಯಗಳನ್ನು ಕೈಕೊಂಡು ಆಯಾತಗಳನ್ನು ನಿಲ್ಲಿಸದಿದ್ದರೆ ಒಂದು ಕೋಟಿ ರೂಪಾಯಿಗಿಂತ ಹೆಚ್ಚು ಬೆಲೆಯ ಬಳಕೆಗಾರರ ಸಾಮಾನುಗಳನ್ನು ಪ್ರತಿವರ್ಷ ಪರದೇಶಗಳಿಂದ ಇಲ್ಲಿ ಪ್ರವಾಹ ಮಾಡಲಾಗುತ್ತಿದೆಯೆಂದೂ ಇದರಿಂದ ನಮ್ಮ ಸ್ಟರ್ಲಿಂಗ್ ಸಾಲವನ್ನೆಲ್ಲ ಹಾರಿಸಿಬಿಡಲಾಗುವುದೆಂದೂ ನನಗೆ ತಿಳಿಯುತ್ತದೆ.

೨೩ ಎಣ್ಣೆ ಕಂದೀಲಗಳು

ಅಖಿಲ ಭಾರತ ಗ್ರಾಮೋದ್ಯೋಗ ಸಂಘದ ಪ್ರಯತ್ನದಿಂದ ಈಗಾಗಲೆ ಎಲ್ಲ ಎಣ್ಣೆಗಳಿಂದ ಉರಿಯುವ ಕಂದೀಲಗಳನ್ನು ಸಂಶೋಧಿಸಲಾಗಿದೆ. ಇವುಗಳಲ್ಲಿ ಹೆಚ್ಚಿನ ಸುಧಾರಣೆ ಮಾಡಿ ಲೋಕಪ್ರಿಯ ಮಾಡಬೇಕು. ಅಂದರೆ ಹಳ್ಳಿಗರಿಗೆ ತಮ್ಮ ಹೊಲದಲ್ಲಿಯೆ ಬೆಳೆದ ಉತ್ಪಾದನೆಯ ಉಪಯೋಗ ಮಾಡಿಕೊಳ್ಳಲು ಬರುವದು, ಅರಣ್ಯಗಳಲ್ಲಿಂದ ತಂದ ಎಣ್ಣೆ ಬೀಜಗಳನ್ನು ಕೂಡ ಉಪಯೋಗ ಮಾಡಿಕೊಳ್ಳಬಹುದು.

೨೪ ಬೀಡಿ (ದೇಶಿ ಸಿಗರೇಟುಗಳು)

ಗುಡ್ಡಗಳಲ್ಲಿ ಬೆಳೆಯುವ ತುಮರಿ ಎಲೆಗಳನ್ನು ಬೀಡಿ ಕಟ್ಟುವುದಕ್ಕಾಗಿ ಉಪಯೋಗಿಸಲಾಗುತ್ತದೆ. ಈ ಎಲೆಗಳನ್ನು ಕಲೆ ಹಾಕುವ ಹಳ್ಳಿಗರಿಗೆ ತಂಬಾಕು ಬೆಳೆವವರ ಇಲ್ಲವೆ ಆ ಉದ್ಯೋಗದಲ್ಲಿ ಕೊಡಗಿದ ಜನರಿಗೆ ಸಿಗುವ ಹಣದ ಮಾನದಿಂದ ಬಹಳ ಕಡಮೆ ಹಣ ಸಿಕ್ಕುತ್ತದೆ. ದೇಶದಲ್ಲಿ ತಂಬಾಕಿನ ಹಾವಳಿ ಉಳಿವವರೆಗೆ ಹಳ್ಳಿಗಳಲ್ಲಿಯು ಈ ತುಮರಿ ಎಲೆಗಳನ್ನು ಕಲೆ ಹಾಕುವವರಿಗೆ ಯೋಗ್ಯ ಸಂರಕ್ಷಣೆ ಕೊಡಬೇಕು.

೨೫ ಚರ್ಮ, ಎಲುಬುಗಳು

ಹಳ್ಳಿಯ ಹರಿಜನರು ಚರ್ಮ ಹದ ಮಾಡುವ ಮೊದಲಿನ ವಿಧಾನಗಳನ್ನು ಈಗಲೂ ಮಾಡುತ್ತಿದ್ದರೂ ಈ ಉದ್ಯೋಗ ಹಳ್ಳಿಗರ ಕೈ ಬಿಟ್ಟು ಕಾರಖಾನೆಗಳ ಕೈಸೇರಹತ್ತಿದೆ. ಕಾರಖಾನೆಗಳಲ್ಲಿ ತಯಾರಾಗುವ ವಸ್ತುಗಳಿಗೆ ಹೊರೆಯುವ ಹಣದಲ್ಲಿ ಯೋಗ್ಯ ಪಾಲು ಅವನಿಗೆ ದೊರೆಯುವದು ಅಪರೂಪ. ಈ ಬಗ್ಗೆ ಯೋಗ್ಯ ವಿಚಾರಣೆ ನಡೆಸಬೇಕು ಇವರ ಆರ್ಥಿಕ ಹಿತಸಂಬಂಧಗಳನ್ನು ಪಾಲುಗಾರರು ಕಾರಖಾನೆದಾರರು ಎಜಂಟರು ಮತ್ತು ದಲ್ಲಾಳಿಗಳಿಂದ ಸಂರಕ್ಷಿಸಬೇಕು.

ಬಾಟಾ ಮತ್ತು ಉಳಿದವರು ದೊಡ್ಡ ಪ್ರಮಾಣದಲ್ಲಿ ತಯಾರಿಸುವ ಬೂಟು ಮೊದಲಾದ ವಸ್ತುಗಳಿಗೆ ನಿರ್ಬಂಧ ಹಾಕಬೇಕು. ಜನತೆಗೆ ಬೇಕಾಗುವಂಥ ಮೊಚ್ಚೆ ಬೂಟು ಮೊದಲಾದವುಗಳನ್ನು ಮಾಡಲಿಕ್ಕೆ ಹಳ್ಳಿ ಸಮುಗಾರರಿಗೆ ಯೋಗ್ಯ ಶಿಕ್ಷಣ ಕೊಡಬೇಕು

ಎಲುಬುಗಳನ್ನು ಹೆಚ್ಚಾಗಿ ಸತ್ತ ದನಗಳ ಎಲುಬುಗಳನ್ನು ಕೇವಲ ಒಡಕುಕಾಜಿನ ಬೆಲೆಗೆ ಹಳ್ಳಿ ಹರಿಜನರ ಮೂಲಕ ಸಂಗ್ರಹಿಸಿ ಕಾರಖಾನೆಗಳಿಗೆ ಕಳಿಸಲಾಗುವದು. ಆದರೆ ಅವುಗಳಿಂದ ಕಾರಖಾನೆಗಳಲ್ಲಿ ಮಾಡಿವ ವಸ್ತುಗಳಿಗೆ ಮತ್ತು ಕೋಟಕ್ಕಾಗಿ ತಯಾರಿಸಿದ ಗೊಬ್ಬರಕ್ಕೆ ವಿಪರೀತ ಬೆಲೆ ಬರುವದು. ಈ ಸುಲಿಗೆ ನಿಲ್ಲಲಿಕ್ಕೆ ಬೇಕು. ಮತ್ತು ಹಳ್ಳಿಯ ಹರಿಜನರಿಗೆ ಈ ಎಲುಬುಗಳಿಂದ ಬಳಕೆಗಾರರಿಗೆ ಬೇಕಾಗುವ ವಸ್ತುಗಳನ್ನು ಹಳ್ಳಿ ಕೈಗಾರಿಕೆಗಳೆಂದು ಮಾಡುವಂತೆ ಅನುಕೂಲತೆಗಳನ್ನು ಕಲ್ಪಿಸಿಕೊಡಬೇಕು.

ಹೊಲವ ಕೆಲಸವಿಲ್ಲದ ಸಮಯದಲ್ಲಿ ಎತ್ತು ಮತ್ತು ಕೋಣಗಳಿಂದ ಎಳೆಯಲ್ಪಡುವ ಬೀಸು ಕಲ್ಲುಗಳ ಸಹಾಯದಿಂದ ಎಲುಬಿನ ಗೊಬ್ಬರವನ್ನು ಸುಣ್ಣದಂತೆ ತಯಾರ ಮಾಡಬಹುದಾಗಿದೆ. ಸರಕಾರದವರು ಹಳ್ಳಿ ಹರಿಜನರಿಗೆ ಪ್ರೋತ್ಸಾಹನವೆಂದು ಒಂದು ಸ್ಥಳವನ್ನೂ ಬೀಸುವ ಕಲ್ಲನ್ನೂ ಉಚಿತವಾಗಿ ಕೊಟ್ಟು ಕಾರಖಾನೆಗಳನ್ನು ನಿರ್ಬಂಧಿಸಿ ಇಲ್ಲವೆ ಭಾರವಾದ ಕರ ಹೇರಿ ಸಹಾಯ ಮಾಡಬಹುದು.

೨೬ ಕಚ್ಚಾ ಸಾಮಗ್ರಿಗಳು

ಅಪರಿಮಿತ ಕಚ್ಚಾ ಸಾಮಗ್ರಿಗಳು ನಮ್ಮ ದೇಶದಲ್ಲಿ ದೊರೆಯುತಿದ್ದು ಪರದೇಶಿ ಕಾರಖಾನೆದಾರರೂ ಅವರ ಏಜಂಟರು ಅಥವಾ ಅವರ ದೇಶೀ ಸಮವಾಯಿಗಳು ಅವುಗಳನ್ನೆಲ್ಲ ಬಳಿದುಕೊಂಡು ಹೋಗುತಿರುವರು. ಇವುಗಳಿಗೆ ಪ್ರತಿಯಾಗಿ ಹಳ್ಳಿಗರಿಗೆ ದೊರೆಯುತಿರುವದು ಬಹಳ ಸ್ವಲ್ಪ, ತೀರ ಸಾಲದಷ್ಟು. ಅನೇಕ ಔಷಧಿಯ ವನಸ್ಪತಿಗಳು ಅಂಟು ಅರಗು ಖನಿಜಗಳು ಕರಳು ಸ್ನಾಯು ಮೊದಲಾದ ಪದಾರ್ಥಗಳು ಮತ್ತು ಗಂಜಿ ಸಾಮಾನುಗಳು ಅವುಗಳಲ್ಲಿ ಕೆಲವು ಕಾರಖಾನೆದಾರರು ಇವುಗಳನ್ನು ಉಪಯೋಗಿಸಿ ವಸ್ತುಗಳನ್ನು ಮಾಡಿ ಹಳ್ಳಿಗರನ್ನು ಸುಲಿಯದಂತೆ ನೋಡಿಕೊಂಡು ಎಲ್ಲ ಬಗೆಯ ಸಂಶೋಧನೆ ಮಾಡಿ ಅವರ ಹಿತವನ್ನು ನೋಡಿಕೊಳ್ಳಬೇಕು.

ದೇಶದ ೭ ಲಕ್ಷ ಹಳ್ಳಿಗಳಲ್ಲಿ (ನಮ್ಮ ಪ್ರಾಂತದಲ್ಲಿ ೨೩ ಸಾವಿರ ಹಳ್ಳಿಗಳು) ಬಹುಸಂಖ್ಯಾಕ ಜನರ ಕೇವಲ ಹಿತವನ್ನನುಲಕ್ಷಿಸಿ ಮಾಡದಿದ್ದ ಮತ್ತು ಅವರನ್ನು ಹೆಚ್ಚು ಉದ್ಯೋಗಶೀಲ ಸ್ವಾವಲಂಬಿ ಮತ್ತು ಸುಖಿಗಳನ್ನಾಗಿ ಮಾಡದಿದ್ದ ಯಾವ ರಾಷ್ಟ್ರೀಯ ಯೋಜನೆಯೂ ನಿಶ್ಚಿತವಾಗಿ ಕೇವಲ ಒಂದು ಫಾರ್ಸ ಆಗಿ ಪರಿಣಮಿಸುವದಲ್ಲದೆ ಅದರ ಉದ್ದೇಶವೇ ನಿಷ್ಫಲವಾಗುವುದೆಂಬುದು ಸ್ಪಷ್ಟವಾಗಿದೆ.

ಯಾರು ಮೋಸ ಹೋಗಬೇಡಿರಿ.

ಸಂಪಾದಕ **ನವ ಭಾರತ** ಇವರಿಗೆ. ನಮ್ಮೂರಿನ ಹರಿಜನರ ರಾಮದಾಸ ಎಂಬ 35 ವರ್ಷದವಯಸ್ಸಿನಾತನೊಬ್ಬನು ಬಳ್ಳಾರಿ ಜಿಲ್ಲೆಯಲ್ಲು ಹಾಗು ಇತರ ಕರ್ನಾಟಕದ ಪ್ರದೇಶದಲ್ಲು ನಮ್ಮೂರಿನ ಹರಿಜನರ ಹತ್ತಿರ ಹಣ ವಸೂಲಿ ಮಾಡುತ್ತಿರುವದು ತಿಳಿದುಬಂದಿದೆ. ನಮ್ಮೂರಿನಲ್ಲಿ ಹರಿಜನ ಹಾಸ್ಟಲ ಇಲ್ಲಾ. ನಾನಾಗಲಿ ಶ್ರೀಯುತ. ಮರಿಬಸವನಗೌಡ್ರು ಆಗಲಿ ಅಥವಾ ಊರಿನ ಯಿತರರು ಯಾರೇ ಆಗಲಿ ಈತನಿಗೆ ಹಣವಸೂಲೀ ಮಾಡಲು ಅಧಿಕಾರ ಕೊಟ್ಟಿರುವದಿಲ್ಲಾ. ದೇಶಸೇವೆ ಮತ್ತು ಸಮಾಜಸೇವೆ ಮಾಡುವೆನೆಂಬ ಸೋಗಿನಿಂದ ಖಾದಿಬಟ್ಟೆ ಧರಿಸಿ ತನ್ನ ಸ್ವಾರ್ಥಕ್ಕಾಗಿ ಈತನು ಹೊರಟಿರಬೇಕು. ಓದಿಗಣ್ಣು ಕ್ರಾಪುತಲೆ ಅಡ್ಡಪಂಚೆ ಕೆಂಪುವರ್ಣ ಸುಮಾರು 5½ ಅಡಿ ಉದ್ದವಿರುತ್ತಾನೆ.

ಯಾರು ಮೋಸ ಹೋಗಬಾರದು.

ಕೆ. ರಾಮಚಂದ್ರಗುಪ್ತ

21-2-47

ಪೂರ್ವ ಕರ್ನಾಟಕಸ್ಥರ ಮಹಾಪರಿಷತ್ತು
ಉರವಕೊಂಡ

೨-೩-೪೭ ನೆಯ ದಿನಾಂಕ ಶ್ರೀ ಕರಿಬಸವ ಸ್ವಾಮಿ ಹೈಸ್ಕೂಲಿನಲ್ಲಿ ಪರಿಷತ್ತು ಉತ್ಸಾಹದಿಂದ ನೆರವೇರಿತು. ಸಭೆಯು ಪ್ರಾರಂಭವಾಗುವ ಮುಂಚೆ ಸಂಸ್ಥಾನದ ಮಠದಲ್ಲಿ ಶ್ರೀ ಪಂಪನಗೌಡರಧ್ಯಕ್ಷತೆಯಲ್ಲಿ ಕೂಡಿದ ವಿಷಯನಿಯಾಮಕ ಸಮಿತಿಯು ನಿರ್ಣಯಗಳ ಕರಡನ್ನು ತಯಾರಿಸಿತು. ಪರಿಷತ್ತು ಯಶಸ್ವಿಯಾಗಲೆಂದು ಕೋರಿ ಚಿತ್ರದುರ್ಗದ ಶ್ರೀ ಮುನ್ನಿರಂಜನ ಜಯದೇವ ಜಗದ್ಗುರುಗಳು ಬೊಂಬಾಯಿ ವ್ಯವಸಾಯ ಖಾತೆಯ ಮಂತ್ರಿವರ್ಯ ಎಂ ಪಿ. ಪಾಟೀಲರು ದೊಡ್ಡಮೇಟಿ ಹಿರೇಗುತ್ತ, ಜಂಗಿನ ಮುರಿಗಯ್ಯ ಎಂ. ಜಿ. ವೆಂಕಟೇಶಯ್ಯ ಬಸವನಾಳ ಶಂ-ಬಾ-ಜೋಶಿ, ಮಾಸ್ತಿ ಮುಂತಾದ ಮಹನೀಯರು ಶುಭಸಂದೇಶಗಳನ್ನು ಕಳುಹಿಸಿದ್ದರು ಪ್ರಾರ್ಥನಾನಂತರ ಸ್ವಾಗತಗೀತೆಯಾಗಿ ಅಧ್ಯಕ್ಷರಾಯ್ಕೆಯಾಯಿತು. ಶ್ರೀ. ಟಿ. ಎಚ್. ಎಂ. ಚಂದ್ರಶೇಖರ ಶಾಸ್ತ್ರಿಗಳು ಅಗ್ರಾಸನಾಧಿನತಿಗಳಾದರು. **ಸ್ವಾಗತಾಧ್ಯಕ್ಷರಾದ ಶ್ರೀ ಜೋಳದರಾಸಿ ದೊಡ್ಡನಗೌಡರು** ತಮ್ಮ ಸ್ವಾಗತ ಭಾಷಣದಲ್ಲಿ ಪರಿಷತ್ತಿನ ಪ್ರಥಮ ಹೆಜ್ಜೆಯ ಉದ್ದೇಶಗಳು ಉರವಕೊಂಡೆಯ ಚಾರಿತ್ರ್ಯ ಮಹಾತ್ಮೆ, ಕನ್ನಡತನದ ಕುರುಹುಗಳು, ಪೂರ್ವಕರ್ನಾಟಕದ ರೂಪರೇಷೆಗಳು, ಅವರಿಗಾಗುತ್ತಿರುವ ಅನ್ಯಾಯ ನಮ್ಮಿಗುರಿ ಸಾಧನೆಯಕ್ರಮ ಮತ್ತು ಕರ್ತವ್ಯಗಳನ್ನು ರುಹಿ ಕೊನೆಯಲ್ಲಿ ಹೀಗೆ ಹೇಳಿದರು ಈ ಮಹಾಪರಿಷತ್ತಿನ ಚಟುವಟಿಕೆಗಳನ್ನು ಕಂಡು ಆಂಧ್ರರು ಅನುಮಾನಗೊಂಡಿರಬಹುದು. ಆದರೆ ಈ ಪರಿಷತ್ತು ಆಂಧ್ರರ ಯಾವ ಹಕ್ಕು ಬಾಧ್ಯತೆಗಳಿಗು ಕೈನೀಡಲಾರದು ತನಗೆ ಬರಬೇಕಾದುದನ್ನು ಎಂದಿಗೂ ಬಿಡಲಾರದು.

ಉದ್ಘಾಟಕರಾದ ಶ್ರೀ ಸಿದ್ದರಾಮಪ್ಪಣ್ಣ ಮಾನ್ವಿಯವರು-ಹಿಂದೂಸ್ತಾನವು ೫೦ ವರ್ಷಗಳ ಅಪಾರತ್ಯಾಗದಿಂದ ಸ್ವಾತಂತ್ರ್ಯದ ಹೊಸಲಿಗೆ ಬಂದಿದೆ. ಈ ನವಚೈತನ್ಯದ ನವಯುಗದಲ್ಲಿ ಕನ್ನಡಿಗರು ಜಾಗೃತಿಗೊಳ್ಳಬೇಕು. ಕರ್ನಾಟಕವು ಸಣ್ಣ ಪುಟ್ಟ ೨೬ ಭಾಗಗಳಲ್ಲಿ ಹರಿದು ಹಂಚಿಹೋಗಿದೆ. ಬಂಗಾಲವು ಅದ್ಭುತ ತ್ಯಾಗದಿಂದ ತನ್ನ ಏಕ್ಯತೆಯನ್ನು ಕಾಯ್ದುಕೊಂಡಂತೆ ಕರ್ನಾಟಕ ಪ್ರಾಂತದ ಭವಿಷ್ಯ ಉಜ್ವಲವಿದೆ. ಅದು ಸುಸಂಪನ್ನ ರಾಷ್ಟ್ರವಾಗಲಿದೆ. ಅದರ ಭಾಷೆಯಾದರೂ ಪ್ರಾಚೀನವಿದ್ದು ಉಜ್ವಲ ಪರಂಪರೆಯಿದೆ. ನಮಗೆ ವಿಶ್ವವಿದ್ಯಾಲಯ, ಚಲನಚಿತ್ರ ಆಕಾಶವಾಣಿ ಕೇಂದ್ರ, ಲಘುಲೇಖನ ಯಂತ್ರ ಬೇಕು ಭಾರತಕ್ಕೆ ಸ್ವಾತಂತ್ರ್ಯವು ಎಷ್ಟು ಅಗತ್ಯವೋ ಕರ್ನಾಟಕಕ್ಕೆ ಪ್ರತ್ಯೇಕ ಪ್ರಾಂತವಾದರೂ ಅಷ್ಟೇ ಅಗತ್ಯ ಎಂದು ಹೇಳಿದರು.

ಪರಿಷತ್ತಿನ ಅಧ್ಯಕ್ಷರಾದ ಶ್ರೀ ಚಂದ್ರಶೇಖರಶಾಸ್ತ್ರಿಗಳು ವಿಸ್ತೃತ ಭಾಷಣವನ್ನೋದಿದರು ಅದರ ಸಾರಾಂಶವು ಹೀಗಿದೆ " ಈಗ ಬಾಳಿನ ಹೋರಾಟದ ಕಾಲಬಂದಿದೆ ಬ್ರಿಟಿಷರು ೧೯೪೭ ನೆಯ ಜೂನಕ್ಕೆ ಹೋಗಲಿರುವರು. ಕನ್ನಡಿಗರೂ ಕೂಡ ಕರ್ತವ್ಯ ಶೂನ್ಯರಾಗದೆ ಅಧಿಕಾರ ಸ್ವೀಕಾರಕ್ಕೆ ತಯಾರಾಗಬೇಕು. ಇದು ವಾತಿನಕಾಲವಲ್ಲ, ಕೃತಿಯಕಾಲ ಸಾಮ್ರಾಜ್ಯವನ್ನು ಕಟ್ಟಿ ಬಾಳಿದ ಕನ್ನಡಿಗರು ಈಗ ನೈಜವಾದಿಗಳಾಗಬೇಕಾಗಿದೆ. ಕರ್ನಾಟಕವು ಹರಿದು ಹಂಚಿ ಶೋಚನೀಯಾವಸ್ಥೆಯಲ್ಲಿದ್ದರೂ ಪ್ರಾಂತ ನಿರ್ಮಾಣ್ಮ ಮಾಡಿಕೊಂಡ ಇತರರಿಂದ ಪಾಠ ಕಲಿಯಬೇಕು. ನಮ್ಮ ಸಂಸ್ಕೃತಿಯನ್ನು ಜ್ಞಾಪಿಸಿಕೊಳ್ಳಬೇಕು ಈ ಪರಿಷತ್ತು ದ್ವೇಷಪೂರಿತವಾದುದಲ್ಲ. ಆಂಧ್ರರ ಮೇಲೆ ದಾಳಿಯಲ್ಲ ನಮಗೆ ಅವರ ಒಂದು ಅಂಗುಲ ಭೂಮಿಯು ಬೇಡ ನಮ್ಮ ಒಂದಂಗುಲ ಭೂಮಿಯನ್ನೂ ಅವರು ಆಶಿಸದಿರಲಿ. ಕಾಂಗ್ರೆಸ್ ಘೋಷಣೆಗನ್ವಯ ಆಡುವ ಭಾಷೆಯನ್ನೇ ಮುಖ್ಯವಾಗಿಟ್ಟುಕೊಳ್ಳಬಾರದು. ಸಂಸ್ಕೃತಿ ಇತಿಹಾಸವೂ ಮುಖ್ಯ. ಪೂರ್ವಭಾಗದಲ್ಲಿ ಕನ್ನಡ ಪ್ರದೇಶವು ಬಹಳಿವಿದೆ. ಗಡಿನಿರ್ಣಯ ಸಮಿತಿಯ ಮುಂದೆ ಸಾಕ್ಷ್ಯಕೊಡಲಿದ್ದೇವೆ. ನಮ್ಮಲ್ಲಿ ಐಕ್ಯ

ಕ್ಯತೆ ಇರಬಾರದು. ಒಕ್ಕೊರಲಿನ ಉದ್ಗಾರವು ಬೇಕು ನಾವು ಚಳುವಳಿ ಮಾಡುವುದನ್ನು ಕಲಿತು ಎಲ್ಲಾಕಡೆಗಳಲ್ಲೂ ಕರ್ನಾಟಕಸಭೆ ಸಂಘಗಳನ್ನು ಸ್ಥಾಪಿಸಬೇಕು.

ತೀರ್ಮಾನಗಳು ೧) ಹಿಂದಿನ ಸ್ವಾಮಿಗಳಾದ ಶ್ರೀ ಚನ್ನಬಸವ ಸ್ವಾಮಿಗಳ ಲಿಂಗೈಕ್ಯ, ಮುಂಜಪ್ಪ ಹಾರ್ದಿಕರ ಬಿ. ಯಂ. ಶ್ರೀಕಂಠಯ್ಯ, ಕೈಲಾಸಂ ವಗೈರೇಯವರ ನಿಧನಕ್ಕಾಗಿ ಈ ಸಭೆಯು ತನ್ನ ದುಃಖವನ್ನು ಸೂಚಿಸುತ್ತದೆ.

೨) ಪೂರ್ವಕರ್ನಾಟಕ್ಕ ಸೇಲಂ, ಕೊಯಂಬತೂರು ಜಿಲ್ಲೆಗಳಿಗಾಗಿ ಒಂದು ಪ್ರಾತಿನಿಧಿಕ ಸಭೆಯಿದ್ದು ಅದಕ್ಕೆ ಒಂದು ಘಟನೆಯಿರಬೇಕೆಂದು ಈಸಭೆಯು ನಿಶ್ಚಯಿಸಿ ಗಡಿನಿರ್ಣಾಯಕ ಸಮಿತಿಯ ಮುಂದೆ ಸಾಕ್ಷ್ಯವನ್ನು ಕೊಡಲು ಒಂದು ಉಪಸಮಿತಿಯನ್ನು ನಿಯಮಿಸಲು ಅದಕ್ಕೆ ಅಧಿಕಾರ ಕೊಡುತ್ತದೆ.

೩) ದತ್ತಮಂಡಲದ ಜಿಲ್ಲೆಗಳನ್ನು ಆಂಧ್ರವಿಶ್ವವಿದ್ಯಾಲಯದ ಕ್ಷೇತ್ರಕ್ಕೆ ಸೇರಿಸಬಾರದು.

೪) ಮದ್ರಾಸ್ ಮಂತ್ರಿಮಂತಲದಲ್ಲಿ ಕರ್ನಾಟಕಕ್ಕೆ ಕನಿಷ್ಟಕ್ಕೆ ಎರಡು ಸ್ಥಾನಗಳಿನ್ನಾದರೂ ಕೊಡಬೇಕು.

೫) ಮದ್ರಾಸ್ ಪ್ರಾಂತದ ಕನ್ನಡ ಪ್ರದೇಶಗಳಲ್ಲಿ ಕನ್ನಡಶಾಲೆಗಳನ್ನು ತೆಗೆದು ಕೋರ್ಟಕಛೇರಿಗಳಿಗೆ ಬರುವ ಕನ್ನಡಿಗರ ಅನುಕೂಲಕ್ಕಾಗಿ ಕನ್ನಡತಿಳಿದ ಅಧಿಕಾರಿ ನ್ಯಾಯಾಧೀಶರನ್ನು ನಿಯಮಿಸಬೇಕು.

೬) ಕನ್ನಡ ನಾಡಿನ ಹರಿದು ಹಂಚಿಹೋದ ಭಾಗಗಳನ್ನು ಒಟ್ಟುಗೂಡಿಸಲು ಲೇಟರ್ ಗೇಜ್ ರೈಲ್ವೆ ಕಿತ್ತುಹಾಕಿ ಬ್ರಾಡ್‌ಗೇಜ್ ಮಾಡಿ ಕಲಿಸಬೇಕು.

೭) ಪೂರ್ವಕರ್ನಾಟಕದಲ್ಲಿನ ಕನ್ನಡ ಹೆಸರುಗಳ ಹಳ್ಳಿಗಳನ್ನು ಬದಲಾಯಿಸಿ ತೆಲುಗು ಮಾಡುತ್ತಿರುವ ಧೋರಣೆಯನ್ನು ನಿಂದಿಸಿ ಈ ದುಷ್ಟ ಪದ್ಧತಿಯನ್ನು ನಿಲ್ಲಿಸಬೇಕು.

೮) ತುಂಗಭದ್ರಾ ಯೋಜನೆಯು ದತ್ತಮಂಡಲದ ಕ್ಷಾಮಪೀಡಿತರಿಗೆಂದು ಹೇಳಲ್ಪಟ್ಟು ದತ್ತಮಂಡಲಕ್ಕೆ ಅಷ್ಟು ಉಪಯುಕ್ತವಲ್ಲದ ಯೋಜನೆಯನ್ನು ಪ್ರಜೆಗಳು ವಿರೋಧಮಾಡಿದರೂ ಜಾರಿಯಲ್ಲಿ ತರುತ್ತಿರುವರು. ಈ ಯೋಜನೆಯನ್ನು ಪುನರ್ವಿಮರ್ಶಿಸಿ ಉಪಯುಕ್ತವಾದ ಯೋಜನೆಯನ್ನು ಜಾರಿಯಲ್ಲಿ ತರಲು ಈ ಸಭೆಯು ಸರ್ಕಾರಕ್ಕೆ ಸೂಚಿಸುತ್ತದೆ.

ಉರವಕೊಂಡದ ಅನಾಥಾಲಯ

ಮಾನ್ಯಕೋಟೆ ರೆಡ್ಡಿಯವರಿಂದ ಶಂಕುಸ್ಥಾಪನೆ

೨-೩-೪೭ ನೆಯ ದಿನಾಂಕ ಪ್ರಾತಃಕಾಲ ೧೧ ಘಂಟೆಗೆ ಮದ್ರಾಸ್ ಸರ್ಕಾರದ ಧರ್ಮಸಂಸ್ಥೆಗಳ ಮಂತ್ರಿ ಮಾನ್ಯ ಕೋಟೆರೆಡ್ಡಿಯವರು ಶ್ರೀ ಕಂಬಸನ ರಾಜೇಂದ್ರ ಸ್ವಾಮಿಗಳ ಸ್ಮಾರಕಾರ್ಥವಾಗಿ ಸಂಸ್ಥಾನಮಠದ ಆವರಣದಲ್ಲಿ ಅನಾಥಾಲಯದ ಶಂಕುಸ್ಥಾಪನೆ ಮಾಡಿದರು. ಶ್ರೀ ಎ. ರಾಯಪ್ಪ (ಎಂ. ಎಲ್. ಎ.) ಇವರ ಅಧ್ಯಕ್ಷತೆಯಲ್ಲಿ ಶ್ರೀ ಕೋಟಿ ರೆಡ್ಡಿಯವರು ಇಂಥಾ ಅಮೋಘ ಕಾರ್ಯಕ್ಕಾಗಿ ಜಗದ್ಗುರುಗಳನ್ನು ವಂದಿಸಿದರು ಶ್ರೀ ರಾಯಪ್ಪನವರು ಅನಾಥಾಲಯದ ಉದ್ದೇಶಗಳನ್ನು ಹೇಳಿ ಸ್ವಾಮೀಜಿಯವರ ಔದಾರ್ಯವನ್ನು ಕೊಂಡಾಡಿದರು. ಸ್ವಾಮೀಜಿಯವರು ಆರ್ಯ-ದ್ರಾವಿಡ ಸಂಸ್ಕೃತಿಗಳ ಮಧುರ ಸಮ್ಮೇಳನವನ್ನು ವಿವರಿಸಿ ಮಾನುಷ ವರ್ಗದಯಾ ವಜಾತಿಯ ಅನಾಥರಾಗಲಿ ಸಹಾಯಕ್ಕರ್ಹರೆಂದೂ ತಮ್ಮ ಶಕ್ಯವಿದ್ದ ಸಹಾಯವನ್ನು ಮಾಡುವೆನೆಂದೂ ವಿವರಿಸಿ ಮಂತ್ರಿಗಳು ಬಂದಿದ್ದಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸಿದರು.

ಮಹಾತ್ಮಗಾಂಧಿಯವರನ್ನು ಒಂಗಾಳದಿಂದ ಹೊರಡಿಸುವೆನೆಂದು ಪಣತೊಟ್ಟು ಹೊರಟ ಫಜಲುಲ ಹಕ್ಕರು ಒಂದು ಹೇಳಿಕೆಯನ್ನು ಕೊಟ್ಟು ಮಹಾತ್ಮರು ಹಿಂದೂ ಮುಸಲ್ಮಾನ್ ಐಕ್ಯತೆಗಾಗಿ ಅತ್ಯಂತ ಪ್ರಶಂಸನೀಯವಾದ ಕಾರ್ಯವನ್ನು ಮಾಡುತ್ತಲಿರುವರೆಂದು ತಮ್ಮ ಉಳಿದ (ಹತ್ತಾರು) ಜೀವನವನ್ನು ಈ ಕಾರ್ಯಕ್ಕಾಗಿ ವಿನಿಯೋಗಿಸುವೆವೆಂದೂ ಹೇಳಿದರು.

127

The Rayalaseema Bank Limited, Bellary.
ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.
ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.
ಇತರ ಶಾಖೆಗಳು:— ಬಳ್ಳಾರಿ ಜಿಲ್ಲಾ:- ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ, ಬಳ್ಳಾರಿ, ಹಡಗಲಿ, ಕೂಡ್ಲಿಗಿ, ಆದವಾನಿ. **ಅನಂತಪುರ:-** ಅನಂತಪುರ, ಬೆಳಗುಪ್ಪ, ಧರ್ಮಾವರಂ, ಕದಿರಿ, ಪಾವಿಡಿ, ತಿಮ್ಮನಚೆರ್ಲ, ಉರವಕೊಂಡ, ಹಿಂದೂಪುರ, ಗುತ್ತಿ. **ಕರ್ನೂಲು:-** ಕರ್ನೂಲು ಪತ್ತಿಕೊಂಡ.
ಕಡಪ:- ರಾಜಂಪೇಟೆ, ಕಡಪ. **ಚಿತ್ತೂರು:-** ಚಿತ್ತೂರು, ಮದನಪಲ್ಲಿ, ತಿರುಪತಿ, ನಾಗರಿ, ವಾಯಲ್ಪಾಡು
ಫಿಕ್ಸೆಡ್ ಡಿಪಾಜಿಟ್‌ನ ಬಡ್ಡೀದರ:— 6 ತಿಂಗಳಿಗೆ ಕೇಕಡ 2½% ವರ್ಷಕ್ಕೆ 3% 2ವರ್ಷಗಳಿಗೆ 3½%.
ಕರೆಂಟು ಅಕೌಂಟು: 1%, **ಸೇವಿಂಗ್ಸ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.
ಮಾಸಿಕ ಪ್ರಾವಿಡೆಂಟ ಫಂಡ ಡಿಪಾಜಿಟ್:- 3%. **ಬಿ ವಿ. ಶೇಷಗಿರಿರಾವ್, ಕಾರ್ಯದರ್ಶಿ.**

ಬ ಳ್ಳಾ ರಿ

ಜಿಲ್ಲಾ ಸ್ವಾವುಟರ್ಸರ ಮೂರನೆಯ ಮಹಾ ಸಭೆಯು ಬಳ್ಳಾರಿಯಲ್ಲಿ ಶ್ರೀ ಶೇತಾರಾಮರೆಡ್ಡಿಯವರಧ್ಯಕ್ಷತೆಯಲ್ಲಿ 9 ನೆಯ ತಾ॥ ನೆರವೇರಿತು. ಜಿಲ್ಲಾ ಜಡ್ಜ್ಯೂ ಕ್ಕರವರು ಸ್ವಾರಂಭೋತ್ಸವ ನಡೆಸಿದರು. ಸ್ವಾವುಟರ ಹಿತಕ್ಕೆ ಸಂಬಂಧಿಸಿದ ತೀರ್ಮಾನಗಳಾದವು ಪ್ರಾಂತೀಯ ಕಮಿಷನರ್‌ರವರಾದ ಶ್ರೀ ರಾಜಗೋಪಾಲನ್ ರವರು ವಂದನೆಯನ್ನು ಸ್ವೀಕರಿಸಿದರು.

ರಾಯದುರ್ಗ.

5 ನೆಯ ತಾ ಶಾರದಾ ಟೂರಿಂಗ್ ಟಾಕೀಸ್‌ಗೆ ಸೇರಿದ ಬುಕ್ಕಿಂಗ್ ವಿಹಾರದಿಂದ ನಗದು 800 ರೂ ಮತ್ತು 200 ರೂ ಬೆಲೆಯ ಬೆಳ್ಳಿ ಇದ್ದ ಪೆಟ್ಟಿಗೆಯೊಂದು ಕಣ್ಮರೆಯಾಗಿರುವುದು. ಪೋಲೀಸರು ವಿಚಾರಣೆನಡೆಸಿರುವರು.

ಹಿ ರೆ ಹಾ ಳು

ಜಿಲ್ಲೆಯ ಎಲ್ಲಾ ಭಾಗಗಳಿಂದಲು ಉಪಾಧ್ಯಾಯನಿಯರು ಫ್ಲಾಶ್ ಲೀವರ್ಸ್ ಟ್ರೇನಿಂಗ್ ಹೊಂದಲು ಬಂದಿರುವರು ಶಿಕ್ಷಣವು 7 ನೆಯ ತಾ॥ ವರೆಗೆ ಆಯಿತು 1. ನೆಯ ತಾ॥ ಶ್ರೀಮತಿ ಅನಂತರಾವುಸ್‌ರ ಅಧ್ಯಕ್ಷತೆಯಲ್ಲಿ ಸಭೆಸೇರಿ ಶ್ರೀ ವಿ. ಕೃಷ್ಣಮೂರ್ತಿಯವರೂ ಇತರರೂ ಮಾತಾಡಿದರು.

ಹರಪನಹಳ್ಳಿ

ಸಂಗೀತ ಶಾಲೆಯಿಂದ ಮದ್ರಾಸ್ ಸರ್ಕಾರದ ಸಂಗೀತ ಪರೀಕ್ಷೆಯಲ್ಲಿ ಹತ್ತು ವಿದ್ಯಾರ್ಥಿಗಳು ಉತ್ತೀರ್ಣರಾಗಿರುವುದು, ಈ ಭಾಗದವುಗೆಲ್ಲಾ ಎಷ್ಟೋ ಉತ್ಸಾಹ ಪ್ರದವಾಗಿದೆ.

ಕೂಡ್ಲಿಗಿ ಪಿರ್ಕಾ ಗ್ರಾಮ ಸಮಿತಿ

ಕಳೆದ ರವಿವಾರ ಶ್ರೀಕರೇಗೌಡ್ರ ಅಧ್ಯಕ್ಷತೆಯಲ್ಲಿ ಹೊಸಕೇರಿಯಲ್ಲಿ ಸಭೆಯು ಸಮಾವೇಶವಾಗಿ ತೀರ್ಮಾನಗಳಾದವು ಜನವರಿಯಲ್ಲಿ ಅನೇಕ ಗ್ರಾಮಗಳಿಗೆ ಸೂಕ್ತ ಚಿಕಿತ್ಸೆಯೆನ್ನೆಬಂದಿಲ್ಲ ಕೊಡಬೇಕು ಸ್ಟೋಕ್ಸ್ ನವರು ಕೊಟ್ಟಿರುವ ತೊಂದರೆ ಈ ವಳಿಗೆ ನಿವೇದಿಸಲಾಗಿದ್ದರೂ ಸುಧಾರಣೆಯಾಗಿಲ್ಲ ಸರಕಾರವು ಗಮನಿಸಬೇಕು. ಗ್ರಾಮಗಳಿಗೆ ಬೇಕಾದ ಶಾಲಿನಕಂಗ್ರಹ ಗ್ರಾಮಗಳಲ್ಲುಳಿಸಿ ಹೆಚ್ಚಿನದನ್ನು ಹೊರಗೆ ಕಳುಹಿಸಬೇಕು ಉಗಾದಿ ಹಬ್ಬದೊಳಗಾಗಿ ಬಟ್ಟೆ ಗೋದಿ ಅಕ್ಕಿ ಸಕ್ಕರೆ ಹಂಚುವಂತಾಗಬೇಕು. ಗ್ರಾಮ ಸಮಿತಿ ನಿಯಮಗಳ ಕನ್ನಡ ಪ್ರತಿಗಳು ಎಲ್ಲರಿಗೂ ಪೂರೈಸಲ್ಪಡಬೇಕು. ನಿಯಮಗಳ ಪ್ರಕಾರ ಸಮಿತಿ ಸಭೆಗಳಾಗುವುದರಿಂದ ತೀರ್ಮಾನಗಳ ಮೇಲೆ ತಕ್ಕ ಚರ್ಯೆ ತೆಗೆದುಕೊಳ್ಳಬೇಕು. ಅಕ್ಟೋಬರ್‌ನಿಂದ ಈ ವರೆಗೆ ಆದ ಸಭೆಗಳ ತೀರ್ಮಾನಗಳಮೇಲೆ ಸರ್ಕಾರದವರು ಚರ್ಯೆ ತೆಗೆದುಕೊಂಡಿಲ್ಲವೆಂದು ಮನವರಿಕೆಯಾಗಿದೆ.



Guarranteed Pure Pyra Gingelly oil

Best for Pickles, Cooking & Cooling

DISTRIBUTORS:—

1. M/S. V. M. GIRI & SONS,

(Pro:- M, S Acharya) Car Street, Bellary

2. M/S. . HUSANJEE RAO. M VENKOJI RAO

General Merchants, Car Street Bellary.

ಶುದ್ಧ! ಗ್ಯಾರಂಟಿಯಾದ್ದು !! ಸತ್ಪಕಾರಿ !!!

—ಪೈರ ಎಳ್ಳೆಣ್ಣೆ—

ಕಣ್ಣಿಗೆ ಬಹಳ ತಂಪಾದ್ದು. ಅಡಿಗೆಯ ಎಲ್ಲಾ ಪದಾರ್ಥಗಳಿಗೆ ಬಳಸಲು ಶ್ರೇಷ್ಠವಾದ ಎಣ್ಣೆಯಿದು.
ಉಪ್ಪಿನಕಾಯಿಗೆ ಈ ಎಣ್ಣೆಯನ್ನುಪಯೋಗಿಸುವದರಿಂದ ಬಹಳಕಾಲ ಕೆಡದಂತಿಡಬಹುದು.

ಹಂಚಲಧಿಕಾರ. 1) ವಿ ಎಂ ಗಿರಿ ಆಂಡ್ ಸನ್ಸ್-ತೇರು ಬೀದಿ, ಬಳ್ಳಾರಿ. (ಎಂ. ಎಸ್. ಆಚಾರ್ಯ)
ಉಳ್ಳವರು. 2) ಎಂ. ಹುಸೇಂಜರಾವ್, ಎಂ. ವೆಂಕೋಬರಾವ್. ತೇರುಬೀದಿ, ಬಳ್ಳಾರಿ.

ಸು ಭಾ ಸ್

ರಾ ಷ್ಟ್ರ ಗೀ ತೆ.

ಸಿದ್ಧವಾಯಿತು— ಕ್ರಯ ೦—೮—೦

ಸುಂದರ ಮುದ್ರಣ — ಇಲ್ಲಿಯವರೆಗೆ ಪ್ರಭಾತ ಫೇರಿ, ರಾಷ್ಟ್ರೀಯ ಸಮಾವೇಶಗಳಲ್ಲಿ ಹಾಡಲ್ಪಟ್ಟ ಎಲ್ಲಾ ಮುಖ್ಯ ದೇಶಭಕ್ತ ಕವಿಗಳ ಕನ್ನಡ ಮತ್ತು ಹಿಂದೀ ಭಾಷೆಯಲ್ಲಿನ ರಾಷ್ಟ್ರಗೀತೆಗಳ ಸಮಗ್ರ ಸಂಗ್ರಹ. ಕರ್ನಾಟಕದಲ್ಲಿ ರಾಷ್ಟ್ರ ಗೀತೆಗಳ ಇಷ್ಟುದೊಡ್ಡ ಸಂಗ್ರಹವು ಇದುವರೆಗೆ ಪ್ರಕಟವಾಗಿಲ್ಲ. ಸ್ವಲ್ಪೇ ಪ್ರತಿಗಳು ಪ್ರಕಟವಾಗಿವೆ. ಹೆಚ್ಚು ಕೊಳ್ಳುವವರಿಗೆ ಕಮಿಷನ್ ಕೊಡಲಾಗುತ್ತದೆ.

'ನವಭಾರತ' ಕಾರ್ಯಾಲಯ ಬಳ್ಳಾರಿ.

—ರಾಷ್ಟ್ರೀಯ ಪುಸ್ತಕಗಳು.—

—ಕಾಂಗ್ರೆಸ್ ಸ್ವರೂಪ ದರ್ಶನ—

ರಾಷ್ಟ್ರೀಯ ಶಿಕ್ಷಣ	0—8—0
ಅಸ್ಪೃಶ್ಯತಾ-ನಿವಾರಣೆ	0—12—0
ಪ್ರಾಂತಭಾಷೆ-ರಾಷ್ಟ್ರಭಾಷೆ	0—6—0
ಖಾದಿ	0—8—0
ಕಾಂಗ್ರೆಸ್ ಮತ್ತು ಸ್ವಯಂಸೇವಕದಳ	0-10-0
ಸತ್ಯಾಗ್ರಹ (ಇತಿಹಾಸ-ತಂತ್ರ)	0—8—0

ವಿ. ಪಿ. ಖರ್ಚುಬೇರೆ. ಇನ್ನು ಅನೇಕ ಪುಸ್ತಕಗಳು ದೊರೆಯುತ್ತವೆ —

ನವಭಾರತ ಕಾರ್ಯಾಲಯ, ಬಳ್ಳಾರಿ.

NAVA BHARAT. BELLARY. Reg. No. M. 4746

ನವಭಾರತ ಬಳ್ಳಾರಿ.

(Nationalist Weekly)

ಚಂದಾದರರಗಳು. **Subscription Rates**

ವರ್ಷಕ್ಕೆ 5-0-0	One Year 5—0—0
6 ತಿಂಗಳಿಗೆ 3-0-0	Six months 3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

SRI.....

.....

.....

Printed at Krishna Press Bellary QH No. B 17 FOR (Q.H. NO. B-5.)

Edited & Published by T. R. KESHAVA RAO

ಜೈಹಿಂದ್ Reg. No. M 47

ಸಮಾಚಾರ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಪ್ರಕಟಣೆ ೬ ಸಂಚಿಕೆ ೧೧ | ಬಳ್ಳಾರಿ ಮಾರ್ಚ್ ೧೮ ಸೋಮವಾರ ೧೯೪೬ | ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವ್.

ಪ್ರಕಾಶಂ ಮಂತ್ರಿವರ್ಗದ ರಾಜೀನಾಮೆ

ಮದ್ರಾಸಿಗೆ ಮಂತ್ರಿವರ್ಗವ ಗೊಂದಲವನ್ನು ಬಗೆಹರಿಸಲು ಬಂದ ಕಾಂಗ್ರೆಸ್ ಅಧ್ಯಕ್ಷ ಆಚಾರ್ಯ ಕೃಪಾಲಿನಿಯವರಿಗೆ ಪ್ರಧಾನ ಮಂತ್ರಿಗಳಾದ ಶ್ರೀ ಪ್ರಕಾಶಂರು ತಮ್ಮ ಮತ್ತು ಇತರ ಏಳು ಮಂತ್ರಿಗಳ ರಾಜೀನಾಮೆಯನ್ನು ಅರ್ಪಿಸಿ ಅವರು ಹೇಳುವಂತೆ ಕೇಳುವೆವೆಂದು ಸೂಚಿಸಿದ್ದರು.

ಆದರೆ ಈಗ ಗವರ್ನರರವರಿಗೇ ರಾಜೀನಾಮೆ ಅರ್ಪಿಸಲು ಶ್ರೀ ಪ್ರಕಾಶಂರು ನಿಶ್ಚಯಿಸಿದ್ದಾರೆ. ವಿವಿಧ ಪಕ್ಷಗಳಲ್ಲಿ ರಾಜಿಯಾಗದ ಕಾರಣ ಕಾಂಗ್ರೆಸ್ ಅಧ್ಯಕ್ಷರು ತಮ್ಮ ದಕ್ಷಿಣ ಹಿಂದೂಸ್ತಾನದ ಸಂಚಾರ ಮುಗಿಸಿ ಈ ತಿಂಗಳ ೨೧ ಕ್ಕೆ ಮದ್ರಾಸಿಗೆ ಬಂದಾಗ ಕಾಂಗ್ರೆಸ್ ಪಾರ್ಟಿಸಭೆಯಲ್ಲಿ ಮುಖಂಡರ ಆಯ್ಕೆಯು ನಿಶ್ಚಯವಾಗುವುದು. ಅಯುಷ್ಯಪಟ್ಟಿಯ ಈ ಕಾಲದಲ್ಲಿ ಬಹಳ ಕ್ಲಿಷ್ಟ ಪರಿಸ್ಥಿತಿಯೊದಗಿದೆ

ಪಂಜಾಬಿನಲ್ಲಿ ಜಾತೀಯ ಗಲಭೆ

ಈ ವಾರ ಪಂಜಾಬಿನಲ್ಲಿ ಭಯಂಕರ ಜಾತೀಯ ಗಲಭೆಯಾಗಿ ಆಸ್ತಿ ಪ್ರಾಣಗಳ ಹಾನಿಯಾಯಿತು. ಅಮೃತಸರದ ಮುಖ್ಯವಾದ 4 ಬಾಜಾರುಗಳು ಭಸ್ಮವಾಡಲ್ಪಟ್ಟವು. ಸುಮಾರು ಎರಡು ಕೋಟಿ ರೂಪಾಯಿಗಳ ನಷ್ಟವಾಗಿರಬೇಕೆಂದು ಊಹಿಸಲಾಗಿದೆ. ಮುಲ್ತಾನ ನಗರದಲ್ಲಿ 100 ಜನರು ಸತ್ತು ಸುಮಾರು 200 ಜನರ ಮೇಲೆ ಗಾಯಗಳಾಗಿವೆ. ಲಾಹೋರಿನಲ್ಲಿ ಅಲ್ಲಲ್ಲಿ ಇರಿತ ಪುಂಡಾಟಿಕೆ ನಡದೇ ಇದೆ. ಹಿಂದೂ ಸಿಕ್ ಮುಖಂಡರು ಸೇರಿ ತಾವು ಪಕ್ಕಾ ಜಾತೀಯ ಆಧಿಕ್ಯತೆಯನ್ನು ಸಹಿಸುವದಿಲ್ಲವೆಂದು ಹೇಳಿ ಕೆಕೊಟ್ಟು ಪಾಕಿಸ್ತಾನ ವಿರೋಧ ದಿನಾಚರಣೆಯನ್ನು 11 ನೆಯ ದಿನಾಂಕ ಮಾಡಿದರು.

ಸಮ್ಮಿಶ್ರ ಮುಂತ್ರಿಮಂಡಲಗಳು

ಹಿಂದೂಸ್ತಾನದಲ್ಲಿ ಜಾತೀಯ ವೈಷಮ್ಯದಿಂದುಂಟಾದ ಪರಿಸ್ಥಿತಿಯನ್ನು ಹೋಗಲಾಡಿಸಿ ಶಾಂತಿಯು ಏರ್ಪಡಬೇಕೆಂದರೆ ಎಲ್ಲಾ ಪ್ರಾಂತಗಳಲ್ಲೂ ಹಿಂದೂ ಮುಸಲ್ಮಾನರಿಂದ ಕೂಡಿದ ಮಂತ್ರಿಮಂಡಲಗಳೇರ್ಪಡಬೇಕೆಂಬ ಸೂಚನೆಯು ಬಂಗಾಳದ ಮುಖ್ಯ ಪ್ರಧಾದರಿಂದ ಹೊರಟಿದೆ. ಪಂಜಾಬ ಮತ್ತು ಬಂಗಾಳಗಳನ್ನು ಹಿಂದೂ ಮುಸಲ್ಮಾನ ಭಾಗಗಳೆಂದು ಇಬ್ಭಾಗಿಸುವ ತತ್ವವನ್ನು ಶೀಗ್‌ದವರು ಮಾನ್ಯ ಮಾಡಿಲ್ಲ.

THE NAVA BHARAT

ನವಭಾರತ

ಸಂಪಾದಕ-ಟಿ.ಆರ್.ಕೇಶವರಾವ್

ಪ್ರಕಟನೆಯ ೧೦ ನೆಯ ವರ್ಷ
೧೭ ಮೂರ್ತಿ ೧೯೪೭

ಹಳ್ಳಿಗಳಲ್ಲಿ ಬಟ್ಟೆ ಹಂಚುವಿಕೆ

ಉಗಾದಿ ಹಬ್ಬದೊಳಗಾಗಿ ಏರ್ಪಾಟು

ಇನ್ಸಪೆಕ್ಟಿಂಗ್ ಅಸಿಸ್ಟೆಂಟ್ ಟೆಕ್ಸ್‌ಟೈಲ್ ಕಮಿಷನರವರಾದ ಶ್ರೀ ಕೆ. ಸುಬ್ಬರಾಯರು ಕಲೆಕ್ಟರವರ ಒಪ್ಪಿಗೆಯೊಂದಿಗೆ ಹಳ್ಳಿಯ ಭಾಗದಲ್ಲಿ ಬಟ್ಟೆ ಹಂಚಲು ಏರ್ಪಡಿಸಿರುವರು. ಈಗಿರುವ ಬಟ್ಟೆಯ ಲೈಸನ್ಸ್ ದಾರರೇ ಒಬ್ಬೊಬ್ಬರು ಮೂರುನಾಲ್ಕು ಹಳ್ಳಿಗಳಂತೆ ಹಂಚಿಕೊಂಡು ಅಲ್ಲಿಯ ಜನರಿಗೆ ದೊಡ್ಡವರಿಗೆ 2ಗಜ, ಚಿಕ್ಕವರಿಗೆ 1 ಗಜ ಪ್ರಕಾರ ಈ ತಿಂಗಳು 20 ನೇತಾರೀಕಿನೊಳಗಾಗಿ ಬಟ್ಟೆ ಹಂಚಬೇಕೆಂದು ನಿಶ್ಚಯಿಸಿರುವರು. ಜಿಲ್ಲೆಯ ಜನಸಂಖ್ಯೆಯಲ್ಲಿ ಪಟ್ಟಣಗಳಲ್ಲಿರುವವರಿಗೆ ಈ ವಿಧಾನದ ಪ್ರಕಾರ ಬಟ್ಟೆಯ ಹಂಚುವಿಕೆಯಾಗಿದೆ. ಇನ್ನುಳಿದ ಜಿಲ್ಲೆಯ 9 ಲಕ್ಷ ಜನರಿಗೆ ಬಟ್ಟೆಯನ್ನು ಹಂಚಬೇಕಾಗಿದೆ. ಈಗ ಸಂಗ್ರಹದಲ್ಲಿರುವ ಬಟ್ಟೆಯು 5 ಲಕ್ಷ ಗಜಮಾತ್ರ ಅಂದರೆ ಎಲ್ಲರಿಗೂ ಇದನ್ನು ಹಂಚಲು ಸಾಧ್ಯವಿಲ್ಲ. ಮೂರಲು ಹೋಗುವ ಅಧಿಕೃತ ವ್ಯಾಪಾರಿಗಳಿಗೆ ಅಲ್ಪಸಂಗ್ರಹ, ಅಧಿಕ ಬೇಡಿಕೆಗಳಿಂದ ಬಹಳ ಕಷ್ಟವಾಗುತ್ತದೆ. ಆದರೂ ಬಟ್ಟೆಯೇ ಇಲ್ಲದಿರುವಾಗ ಇಷ್ಟನ್ನಾದರೂ ಕೊಡುತ್ತಾರೆಂಬುದು ತೃಪ್ತಿಕರವಾದ ಅಂಶವಾಗಿದೆ.

ನಿಯುಕ್ತರಾದ ವ್ಯಾಪಾರಿಗಳೆಲ್ಲಾ ತಮ್ಮ ತಮ್ಮ ಸಂಗ್ರಹದೊಂದಿಗೆ ಹಳ್ಳಿಗಳಿಗೆ ಹೋಗಿ ನಿಷ್ಪಕ್ಷಪಾತವಾಗಿ ಗ್ರಾಮಸಮಿತಿಯವರೊಡನೆ ಸಹಕರಿಸಿ ಹಂಚಿರುವ ನಿಜಾಂಶವನ್ನು ಮುಂದಟ್ಟು ಮಾಡಿಕೊಳ್ಳಲು ಸರಿಯಾದ ವ್ಯವಸ್ಥೆಯಾಗಬೇಕು. ಗ್ರಾಮಸ್ಥರ ಸಹಾಯ ಸಹಕಾರ ದೊರೆಯಬೇಕಾದುದೊಂದೇ ಮಾತ್ರವಲ್ಲದೆ ವಿಧಾನದಲ್ಲಿನ ಲೋಪ ದೋಷಗಳನ್ನು ನಿರ್ಭಿಡೆಯಿಂದ ಅಧಿಕಾರಿಗಳಿಗೆ ತಿಳಿಸಬೇಕು.

ಈಗಿನ ಆಡಳಿತದಲ್ಲಿ ಆಲೋಚಿಸಿದ ಯೋಜನೆಗಳು ಕಾರ್ಯರೂಪಕ್ಕಿಳಿಯುವುದು ದುಸ್ಸಾಧ್ಯ. ಎಲ್ಲಾ ವಸ್ತುಗಳ ಪೂರೈಕೆಯು ಕಡಮೆ ಇದ್ದು, ಬೇಡಿಕೆಯು ಹೆಚ್ಚಿಗಿರಬೇಕಾದರೆ ಅವ್ಯವಸ್ಥೆಯೂಗುವುದು ಸ್ವಾಭಾವಿಕವಾಗಿದೆ. ಇದ್ದ ಸಂಗ್ರಹದಲ್ಲಿಯೇ ಸರ್ವರಬೇಡಿಕೆಗಳನ್ನು ಸ್ವಲ್ಪವಾಗಿಯಾದರೂ ಪೂರೈಸುವ ದೃಷ್ಟಿಯಿಂದ ಅಧಿಕಾರಿಗಳ ಈ ಯೋಜನೆಗೆ ಮನ್ನಣೆ ಕೊಡಬೇಕೆಂದು ನಾವು ಕೋರುತ್ತೇವೆ.

ಮದ್ರಾಸ್ ಮಂತ್ರಿವರ್ಗದ ಗೊಂದಲ

ಹಿಂದೂಸ್ತಾನದಲ್ಲಿ ಪ್ರಾಂತಗಳಲ್ಲಿ ಮದ್ರಾಸ್ ಪ್ರಾಂತವು ಕಾಂಗ್ರೆಸ್ ನಿಷ್ಠ ಪ್ರಾಂತವೆಂದು ಹೆಸರಾಗಿ ಬಹುಸಂಖ್ಯಾಕ ಕಾಂಗ್ರೆಸ್ ಪ್ರತಿನಿಧಿಗಳನ್ನಾರಿಸುವದರಲ್ಲಿ ಹೆಸರುಗೊಂಡಿದೆ. ಕಾಂಗ್ರೆಸ್‌ಗೆ ವಿರೋಧವಾಗಿ ನಿಂತ ಹುರಿಯಾಳುಗಳು ತಮ್ಮ ತೇವಣಿಯನ್ನುಕೂಡ ಕಳೆದುಕೊಂಡಿರುವ ಉದಾಹರಣೆಗಳು ಇಲ್ಲಿ ದೊರೆತಷ್ಟು ಎಲ್ಲಿಯೂ ಇಲ್ಲ. ೧೯೩೭ ರ ಚುನಾವಣೆಗಳಲ್ಲಿ ಗೆದ್ದನಂತರ ಕಾಂಗ್ರೆಸ್ ಸರ್ಕಾರವು ಶ್ರೀ ಶಿ. ರಾಜಗೋಪಾಲಾಚಾರ್ಯರ ನೇತೃತ್ವದಲ್ಲಿ ಸ್ಥಾಪನೆಯಾಗಿ ಬೇರೆ ಪ್ರಾಂತಗಳಿಗೆ ಮಾದರಿಯಾಯಿತು. ರಾಜಾಜಿಯವರು ಭಿನ್ನಾಭಿಪ್ರಾಯದವರನ್ನು ಏಕಸೂತ್ರದಲ್ಲಿಟ್ಟು ತಮ್ಮ ಸದಸದ್ವಿವೇಕ ಜ್ಞಾನದಿಂದಲೂ, ಅದ್ಭುತ ಚಾತುರ್ಯದಿಂದಲೂ ಆಡಳಿತವನ್ನು ನಡೆಸಿದರು. ಇತರ ಪ್ರಾಂತಗಳ ಮಂತ್ರಿವರ್ಗದವರು ಅನೇಕ ಯೋಜನೆಗಳಲ್ಲಿ ಮದ್ರಾಸನ್ನೇ ಅನುಕರಣ ಮಾಡಿದರು.

೧೯೪೬ ರ ಚುನಾವಣೆಗಳಲ್ಲಿ ದೇಶಭಕ್ತರ ವರ್ಣವೇ ಬದಲಿಯಾಯಿತು. ಚುನಾವಣೆಯ ಪೂರ್ವದಲ್ಲಿಯೇ ಅಧಿಕಾರಕ್ಕೆ ಬರುವ ದುರುದ್ದೇಶದಿಂದ ಪಂಗಡಗಳೇರ್ಪಟ್ಟವು. ತಮಿಳ ದೇಶದಲ್ಲಿ ಬ್ರಾಹ್ಮಣರು ಮುಖ್ಯಪ್ರಧಾನರಾಗಬಾರದೆಂದು ದೇಶಭಕ್ತರಾದ ಕಾಮರಾಜ ನಾಡಾರ (ಈಗಿನ ತಮಿಳನಾಡ ಕಾಂಗ್ರೆಸ್ ಅಧ್ಯಕ್ಷರು) ರು ತಮ್ಮ ಪಾರ್ಟಿಯವರನ್ನೇ ಬಹುಮತದಿಂದ ಆರಿಸಿ ಬರುವಂತೆ ಮಾಡಿದರು. ಆಂಧ್ರ ಪ್ರಾಂತಕ್ಕೆ ವಿರುದ್ಧವಿದ್ದಾರೆಂಬ ಸಲ್ಲದ ಸೊಲ್ಲನ್ನು ಹಬ್ಬಿ ಆಂಧ್ರದೇಶದಲ್ಲಿ ರಾಜಾಜಿಯವರ ವಿರೋಧ ಪ್ರಚಾರವಾಯಿತು. ಶ್ರೀ ಪ್ರಕಾಶರು ಅಧ್ಯಕ್ಷರಿದ್ದ ಆಂಧ್ರ ಪ್ರಾಂತೀಯ ಕಾಂಗ್ರೆಸ್ ಸಭೆಯಲ್ಲಿ ತಮ್ಮ ಕ್ಷೇತ್ರಕ್ಕೇ ಸಂಬಧವಿಲ್ಲದ ರಾಜಾಜಿಯವರ ಕೃತ್ಯವನ್ನು ಖಂಡಿಸಲಾಯಿತು. ಶ್ರೀ ಪ್ರಕಾಶರವರು ತಮಿಳದೇಶದ ಸಂಚಾರವನ್ನು ಕೈಕೊಂಡು ತಮ್ಮ ಹಿರಿಮೆ ರಾಜಾಜಿಯವರ "ಸ್ವಾರ್ಥ"ವನ್ನು ಪ್ರಚಾರಮಾಡಿದರು. ಮಹಾತ್ಮ ಗಾಂಧಿಯವರು ಮದ್ರಾಸಿಗೆ ಬಂದಾಗ ಈ ಒಳಸಂಚನ್ನು ನೋಡಿ ಇದನ್ನು ಕಾರಸ್ತಾನ (clique) ವೆಂದು ಸಂಭೋಧಿಸಿದಾಗ ನಾಡಾರ ಪಂಗಡದವರು ಸಿಟ್ಟಿಗೆದ್ದರೂ, ಈಗ ಎಲ್ಲವೂ ಬಯಲಿಗೆ ಬಿದ್ದಿದೆ. ರಾಜಾಜಿಯವರನ್ನು ಹೊರಡಿಸಲು ತಮಿಳರೂ, ಆಂಧ್ರರೂ, ಕೂಡಿದರಾಗಲಿ ಪಾರ್ಟಿ ಮುಖಂಡರನ್ನಾರಿಸಬೇಕಾದರೆ, ಪ್ರಕಾಶಂರಿಗೆ ಬಲವಾದ ವಿರೋಧವು ನಾಡಾರ ಪಾರ್ಟಿಯವರಿಂದ ಪ್ರದರ್ಶಿತವಾಯಿತು. ಮೇಲ್ಮನೆಯ ಅಧ್ಯಕ್ಷನನ್ನಾರಿಸಬೇಕಾದರೆ ತಮಿಳ ಹುರಿಯಾಳು ಕೇವಲ ಒಂದೆರಡು ಮತಗಳಿಂದ ಸೋಲಬೇಕಾಯಿತು. ಅಂದರೆ ಪ್ರಾರಂಭದಿಂದಲೂ ಕಾಂಗ್ರೆಸ್ ಸದಸ್ಯರಲ್ಲೇ ಮೂರು, ನಾಲ್ಕು ಭಾಗಗಳು ಏರ್ಪಟ್ಟವು. ಶ್ರೀ ಪ್ರಕಾಶಂರಷ್ಟೇ ಪ್ರತಿಭಾಶಾಲಿಯಾದ ವ್ಯಕ್ತಿಯು ವಿರೋಧ ಪಕ್ಷದ ಸದಸ್ಯರಲ್ಲಿಲ್ಲದ ಕಾರಣ ಪ್ರಕಾಶಂ ಮಂತ್ರಿವರ್ಗವು ಇಲ್ಲಿಯವರೆವಿಗೂ ನಡೆದುಬಂದಿತು.

ಇನ್ನು ಈ ಒಂದು ವರ್ಷದ ರಾಜ್ಯಭಾರದಲ್ಲಿ ಹೇಳುವುದೊಂದು ಮಾಡುವುದೊಂದಾಯಿತು. ಸಾಮಾನ್ಯ ಪ್ರಜೆಗಳ ಹಿತವು ಲಕ್ಷಿಸಲ್ಪಡಲಿಲ್ಲ. ಬೇಡಿಕೆಗಳಿಗೆ ಉತ್ತರವೇ ಇಲ್ಲ. ಕಾಗವದ ಮೇಲೆ ದೊಡ್ಡ ದೊಡ್ಡ ಯೋಜನೆ ಹಣದ ಪೂರೈಕೆ ಆಯಿತಾಗಲಿ ಯಾವುದೂ ಕಾರ್ಯರೂಪಕ್ಕೆ ಬರಲಿಲ್ಲ. ಯೋಜನೆಗಳ ರೂಪುರೇಷೆಗಳಾಗುವ ಮೊದಲೇ ಶಾಖೆಗಳನ್ನೇರ್ಪಡಿಸಿ ಅಧಿಕಾರಿಗಳು ನಿಯುಕ್ತರಾದರು. ಈ ಕೆಲಸ ಕೊಡುವುದಾದರೂ ವಿತರಣೆಇಲ್ಲದಾಯಿತು. ಆಹಾರ ಬಟ್ಟೆಯ ಪೂರೈಕೆ ಮತ್ತು ಹಂಚುವಿಕೆಯಲ್ಲಿ ಅವ್ಯವಸ್ಥೆಯಾಯಿತು ಕಂಟ್ರೋಲ ಮಾಡುವ ಆರ್ಡರ್ ಮಾಡುವುದು. ಕೆಲವು ದಿನಗಳಲ್ಲಿ ಅದನ್ನು ಕೂಡಲೇ ರದ್ದು ಪಡಿಸುವುದು. ಸಂಬಂಧಿಸಿದವರ ಅಭಿಪ್ರಾಯಗಳನ್ನು ತೆಗೆದುಕೊಳ್ಳದಿರುವುದೂ ನಡೆಯಿತು. ಲಂಚವು ಕಡವೆಯಾಗುವುದಕ್ಕೆ ಬದಲಾಗಿ ಅತಿಶಯ ಹೆಚ್ಚಾಯಿತು ಕೆಲಮಂತ್ರಿಗಳೂ ಕೂಡ ಈ ಆಪಾದನೆಯಿಂದ ಮುಕ್ತರಾಗಲಿಲ್ಲ. ಮಂತ್ರಿಗಳೋ ಅವರ ಸಲಹೆಗಾರರೋ ಸ್ವಾರ್ಥದ ಸುಳಿಯಲ್ಲಿ ಸಿಲುಕಿ ಮಂತ್ರಿವರ್ಗದ ಮತ್ತು ಕಾಂಗ್ರೆಸಿನ ಹೆಸರನ್ನು ಕೆಡಿಸಿದರು.

ಈ ಕಾರಣದಿಂದ ಪ್ರಕಾಶಂ ಮಂತ್ರಿವರ್ಗವು ಹೋಗಬೇಕೆಂದು ಗಿಗಳ ಕಾಂಗ್ರೆಸ್ ಸದಸ್ಯರು ದಸ್ಕತ್ತು ಹಾಕಿ, ಸಭೆಯಲ್ಲಿ ಪ್ರಕಾಶಂರ ವಿರೋಧವಾಗಿ ಗಿಳಿ ಜನರು ಮತಕೊಟ್ಟದ್ದು ಆಶ್ಚರ್ಯವಲ್ಲ ಆದರೆ ಪ್ರಕಾಶಂ ಮಂತ್ರಿಮಂಡಳವನ್ನುರುಳಿಸಿ ಅಡಳಿತಕ್ಕೆ ಬರಬೇಕೆಂದಿರುವ ವರ್ಗದಲ್ಲಿ ಸಾರ್ವಜನಿಕರ ವಿಶ್ವಾಸಕ್ಕೆ ಪಾತ್ರರಾದವರು ಇಲ್ಲವೆಂದು ದುಃಖದಿಂದ ಹೇಳಬೇಕಾಗಿದೆ ಈ ಕಾರಣ ಸ್ಥಿರವಾದ ಮಂತ್ರಿವರ್ಗವು ರಚಿತವಾಗುವ ಲಕ್ಷಣಗಳೇ ತೋರಿಬರುವುದಿಲ್ಲ.

ಶ್ರೀ ಶಂಕರರಾವ್ ದೇವ (ಕಾಂಗ್ರೆಸ್ ಕಾರ್ಯದರ್ಶಿ) ರು ಬಂದಾಗ ಶ್ರೀ ಪ್ರಕಾಶರು ಅವಿಶ್ವಾಸತೀರ್ಮಾನವನ್ನು ನಿಯಮ ಬಾಹ್ಯಮಾಡಿ ಸಭೆಯನ್ನು ರದ್ದುಗೊಳಿಸಿದರು. ಕಾಂಗ್ರೆಸ್ ಕಾರ್ಯ ಕಾರೀ

132

ಸಮಿತಿಯು ಅಧ್ಯಕ್ಷರಿಗೆ ಪೂರ್ಣವಾಗಿ ಅಧಿಕಾರಕೊಟ್ಟು ಕಳುಹಿಸಿತು. ವಿವಿಧ ಪಂಗಡಗಳಲ್ಲಿ ಐಕಮತ್ಯವನ್ನುಂಟುಮಾಡಲು ಆಚಾರ್ಯ ಕೃಪಾಲಿನಿಯವರು ಪ್ರಯತ್ನಿಸಿದರು. ಅದು ಸಾರ್ಥಕವಾಗಲಿಲ್ಲ ಪ್ರಕಾಶಂ ರವರು ಪ್ರಧಾನರಾಗಿ ಮಂತ್ರಿಗಳ ಆಯ್ಕೆಯಾಗಬೇಕೆಂದು ಅವರ ಮತವಿದ್ದಂತೆ ಕಾಣುತ್ತದೆ.

"ನಿಮ್ಮ ತ್ಯಾಗಕ್ಕಾಗಿ ಪ್ರತಿಫಲವನ್ನು ಅಪೇಕ್ಷಿಸುತ್ತಿರುವಿರಿ (You want to cash your sacrifices) ಇದರಿಂದ ಕಾಂಗ್ರೆಸ್ ಸಂಸ್ಥೆಗೇ ವಿಶೇಷ ಕಳಂಕವು ತಗಲುತ್ತದೆ. ಇರುವ ಸ್ಥಾನಗಳು ಸ್ವಲ್ಪ ಅರ್ಜಿಗಳು ಬಹಳ ಹೀಗೆ ಇತ್ಯರ್ಥವಾಗಬೇಕು?....." ಎಂದು ಕಾಂಗ್ರೆಸ್ ಅಧ್ಯಕ್ಷರು ಅಪ್ಪಣೆ ಕೊಡಿಸಿದರೆಂದು ತಿಳಿದುಬಂದಿದೆ.

ಕಾಂಗ್ರೆಸ್ ಶಾಸನ ಸಭ್ಯರು ಅಧಿಕಾರದಾಶೆ ಬಿಟ್ಟರೆ ದೇಶಕ್ಕೆ ಮೋಕ್ಷವಾಗುತ್ತದೆ ಇಲ್ಲವಾದರೆ ಇನ್ನುಮೇಲೆ ಕಾಂಗ್ರೆಸ್ ಸದಸ್ಯರು "ಅರಿಸಿ ಬರುವುದೇ ಕಠಿಣವಾಗುತ್ತದೆ. ಪ್ರಜೆಗಳ ತಾಳ್ಮೆಗೂ ಒಂದು ಹದ್ದಿದೆ. ಮಹಾತ್ಮಗಾಂಧಿ ನೆಹರೂ ಮುಂತಾದ ಶ್ರೇಷ್ಠರ ಹೆಸರು ಹೇಳಿ ಕಾಂಗ್ರೆಸ್ ಧ್ಯೇಯಸಾಧಿಸಲು ಹೋಗುವೆವೆಂದು ಸಾರಿದ ಶಾಸನ ಸಭ್ಯರು ಹೀಗೆ ವರ್ತಿಸಿದರೆ ಕಷ್ಟದಲ್ಲಿ ಸಿಲುಕಿದ ದೇಶಕ್ಕೆ ಪರಿಹಾರವು ಹೇಗೆ ದೊರೆಯಬೇಕು? ಸ್ವಾತಂತ್ರ್ಯದ ಹೆಬ್ಬಾಗಿಲಲ್ಲಿ ಬಂದ ಭಾರತದ ಸ್ಥಾನ ಮಾನಗಳಿಗೆ ಇದರಿಂದ ಕುಂದುಂಟಾಗುವುದು. ಈ ಕಾರಣ ಶಾಸನ ಸಭ್ಯರು ದೇಶಹಿತದ ದೃಷ್ಟಿಯಿಂದ ಐಕ್ಯರಾಗಿ ಕಾಂಗ್ರೆಸ್ ವರಿಷ್ಠರ ಸಲಹೆಯ ಪ್ರಕಾರಕ್ಕೆ ನಡೆಯಲೊಪ್ಪುವರೆಂದು ಆಶಿಸುತ್ತೇವೆ.

ಬಳ್ಳಾರಿ

ಮೂರನೆಯ ಜಿಲ್ಲಾ ಸ್ಕೌಟ್ ಸಭೆಯು ಶ್ರೀ ಸೀತಾರಾಮರೆಡ್ಡಿಯವರ ಅಧ್ಯಕ್ಷತೆಯಲ್ಲಿ 9 ನೇ ದಿನಾಂಕ ನೆರವೇರಿತು. ಜಿಲ್ಲಾ ಜಡ್ಜರಾದ ಮ್ಯಾಕ್‌ಸಾಹೇಬರು. ಸಭೆಯ ಪ್ರಾರಂಭೋತ್ಸವವನ್ನು ನೆರವೇರಿಸುತ್ತಾ ಅದಕ್ಕೆ ಯಶಕೋರಿದರು. ಶ್ರೀ ಲಿಂಗಾರೆಡ್ಡಿಯವರು ಎಲ್ಲರನ್ನೂ ಸ್ವಾಗತಿಸಿದರು. ಗಾಂಧಿಜೀಯವರ ವಿಧಾಯಕ ಕಾರ್ಯಕ್ರಮವನ್ನು ಮುಂದುವರಿಸಬೇಕು. ಎಲ್ಲಾ ಕಡೆಯಲ್ಲಿಯೂ ದಸರಗಳ ಶಿಕ್ಷಣಕ್ಕಾಗಿ ಕೇಂದ್ರಗಳನ್ನು ತೆರೆದು ಶಿಕ್ಷಣಕೊಡಬೇಕು. ಸ್ಥಾನಿಕ ಸಂಸ್ಥೆಗಳವರು ಈ ಚಟುವಟಿಕೆಗಳಿಗೆ ಸಹಾಯ ಸಹಕಾರವನ್ನು ನೀಡಬೇಕು. ಗ್ರಾಮೋದ್ಧಾರಕ್ಕೆ ಸಂಭಂದಿಸಿದ ಎಲ್ಲಾ ಸಮಿತಿಗಳಲ್ಲೂ ಸ್ಕೌಟು ಅಧಿಕಾರಿಗಳಿಗೆ ಸ್ಥಾನದೊರೆಯಬೇಕು ತೀರ್ಮಾನಗಳಾದವು.

Woolen Coatings, Silk Sarees, Benares and other latest designs Handloom and Mill made Clothes Etc.,
Colours Guaranteed, Prices very reasonable. Trial Solicited.

G. GOPAL SING & SON
CLOTH MERCHANT
No. 15 Old Market BELLARY.
ಜಿ. ಗೋಪಾಲ ಸಿಂಗ್ ಅಂಡ್ ಸನ್,
ಜವಳಿ ವ್ಯಾಪಾರಿ. ನಂ. 15
ಹಳೇ ಮಾರ್ಕೆಟ್, ಬಳ್ಳಾರಿ.

ಉಲನ್ ಕೋಟ್ ಬಟ್ಟೆ, ಬನಾರಸ್ ಜರಿ, ಶಿಲ್ಕ್-ಟೆಶ್ಶು ಸೀರೆ ಜಾಕೆಟ್ ಲೇಸ್ ಬಾರ್ಡರ್ ಮತ್ತು ಇತರ ಅನೇಕ ವಿವಿಧ ಅತ್ಯಂತ ಆಧುನಿಕ ಉಡುಪಿನ ಬೇಡಿಕೆಯನ್ನು ನಾವು ಪೂರೈಸಲಿದ್ದೇವೆ ಕೈ ಮಗ್ಗದ ಮಿಲ್ ಬಟ್ಟೆಗಳು ವಿಧಾಯಕ ಬೆಲೆಗೆ ದೊರೆಯುತ್ತವೆ. ಬಣ್ಣ ಗ್ಯಾರಂಟಿ, ಬೆಲೆ ಸರಿಯಾದ್ದು. ಪರೀಕ್ಷಿಸಿ ಮನಗಾಣಿರಿ.

ಪಂಜಾಬಿನ ಪಾಲಾಮೀನ ನಗರವನ್ನು ಮುತ್ತಲು ೧೦ ಸಾವಿರ ಪಠಾಣರ ತಂಡವೊಂದು ಆಯುಧ ಪಾಣಿಗಳಾಗಿ ಬಂದುದನ್ನು ಜಿಲ್ಲಾ ಮ್ಯಾಜಿಸ್ಟ್ರೇಟರು ಉಪಾಯವಾಗಿ ತಪ್ಪಿಸಿದರು.

ಸರಹದ್ದಿನ ಪ್ರಾಂತ್ಯದ ಮಂತ್ರಿಗಳಾದ ಮೆಹರಚಂದ ಖನ್ನಾರು ತಮ್ಮ ಬಂಗಲೆ ಮುಂದೆ ಕೂತಿರಬೇಕಾದರೆ ಗುಂಡುಹಾರಿಸಲಾಯಿತು. ಆದರೆ ಅವರು ಅಪಾಯದಿಂದ ಪಾರಾದರು.

ಇಂಡಿಯಾರಕ್ಷಣಾ ಮಂತ್ರಿಗಳಾದ ಸರ್ದಾರ ಬಲದೇವ ಸಿಂಗರು ಪಂಡಿತ ಜವಹರಲಾಲನೆಹರೂರವರೂ, ಪಂಜಾಬಿನ ಗಲಭೆ ಪ್ರದೇಶಗಳನ್ನು ಸಂದರ್ಶಿಸಲು ವಿಮಾನದಲ್ಲಿ ಹೊರಟಿರು

ಗಾಂಧೀ ಯಾತ್ರೆ

ಜಾತಿಭೇದ ಅಳಿಯಬೇಕು.

"ಹಿಂದೂ ಧರ್ಮ ಉಳಿಯಬೇಕಾದರೆ ಜಾತಿ ಭೇದ ಅಳಿಯಬೇಕು" ಎಂದು ಗಾಂಧಿಜಿ ತಾ. ೧೫ ಕ್ಕೆ ಕಾಫಿಲತಾಲಿಯಲ್ಲಿ ಸಾಯಂಪ್ರಾರ್ಥನಾನಂತರ ಭಾಷಣ ಮಾಡುತ್ತ ಹೇಳಿದರು. ಅಸಾಮದ ಕಾಸಾರ ಜಿಲ್ಲೆಯಿಂದ ಒಂದ ಮಣಿಪುರಿ ಅಲ್ಪಸಂಖ್ಯಾಕರ ಶಿಷ್ಟಮಂಡಲ ತಮ್ಮ ಮುಂದಿಟ್ಟ ದೂರುಗಳನ್ನು ಉದ್ದೇಶಿಸಿ ಅವರು ಮಾತಾಡುತಿದ್ದರು. ಆ ಜಿಲ್ಲೆಯ ಎರಡು ಲಕ್ಷ ಮಣಿಪುರಿಗಳಿಗೆ ಶಾಸನ ಸಭೆಯಲ್ಲಿ ಪ್ರಾತಿನಿಧ್ಯಬೇಕೆಂದು ಶಿಷ್ಟಮಂಡಲದ ಅಭಿವ್ರಾಯವಾಗಿತ್ತು ಮಣಿಪುರಿಗಳನ್ನು ಅಸಾಮದ ಸವರ್ಣ ಹಿಂದುಗಳು ಸವರ್ಣರೆಂದೇ ಹೇಳುತಿದ್ದರೂ ಚುನಾವಣೆ ಕಾಲದಲ್ಲಿ ಮತಗಳನ್ನು ಗಳಿಸಲು ಮಾತ್ರ ಅವರ ಬಳಿಬರುತಿದ್ದರೇ ಹೊರತು ಅವರ ಹಿತ ಸಾಧನೆಗೆ ಮನಸು ಕೊಡುತಿದ್ದಿಲ್ಲವೆಂದು ಅವರು ದೂರಿಕೊಂಡರು ಅದಕುತ್ತರವಾಗಿಯೆ ಗಾಂಧೀಜಿ ಮೇಲಿನಂತೆ ಹೇಳಿದ್ದು "ನಾನು ಇಂಥ ಜಾತಿಯವನೆಂಬುದನ್ನು ಮರೆತುಬಿಟ್ಟು ಎಷ್ಟೋ ದಿನಗಳಾದವು. ಅದರಿಂದಲೇ ನಾನು ಭಂಗಿಯೆಂದು ಹೇಳಿಕೊಳ್ಳುತ್ತೇನೆ ಮತ್ತು ಹಾಗೆಯೆ ಆಚರಿಸುತ್ತೇನೆ ಸವರ್ಣ ಹಿಂದುಗಳಿಂದರೆ ಬ್ರಾಹ್ಮಕ್ಷತ್ರಿಯ ವೈಶ್ಯರೆಂದರ್ಥವಾದರೆ ಬ್ರಿಟಿಶರು ಇಲ್ಲಿಂದ ಹೊರಟು ಹೋಗಿ ನಿಜವಾದ ಸ್ವಾತಂತ್ರ್ಯ ಸ್ಥಾಪನೆಯಾದಾಗ ಈ ಉಚ್ಚ ವರ್ಣದವರು ಅಲ್ಪಸಂಖ್ಯಾಕರಾಗಿ ಸರ್ವಥಾ ನಷ್ಟವಾಗಿ ಹೋಗುವರು. ಈ ಭೇದ ಭಾವಗಳು ಇನ್ನುಳಿಯಬಾರದು. ಆಗಲೇ ದಲಿತರೆನಿಸಿಕೊಳ್ಳುವವರಿಗೆ ನ್ಯಾಯ ದೊರಕುವದು. ಪ್ರಾರ್ಥನಾಸಭೆ ಮುಸ್ಲಿಂ ಗೃಹಸ್ಥರೊಬ್ಬರ ಆಮಂತ್ರಣದ ಮೇರೆಗೆ ಮಸೀದಿಯ ಮುಂದೆ ನಡೆಯಿತು.

ಕಾಫಿಲ್ ತಾಲಿಗೆ ಬರುವಾಗ ದಾರಿಯಲ್ಲಿ ಹಿಂದೀ ರೆಡ್‌ಕ್ರಾಸ ಸಂಘ, ಇಂಗ್ಲಂಡಿನ ಮಿತ್ರ ಸೇವಾ ಸಂಘ, ಅಮೇರಿಕೆಯ ಮೊನೊನಾಯ್ಟ್ ಕೇಂದ್ರ ಸಮಿತಿಗಳು ಜತೆಯಾಗಿ ನಡೆಸುತಿರುವ ಪರಿಹಾರ ಶಿಬಿರಕ್ಕೆ ಗಾಂಧಿಜಿ ಬೆಟ್ಟಿಕೊಟ್ಟು ಅಲ್ಲಿಯ್ತ ಕಾರ್ಯವನ್ನು ಪರಿಶೀಲಿಸಿದರು.

ವರ್ಗರಹಿತ ಭಾರತ.

ಅದೇ ಭಾಷಣದಲ್ಲಿ ಅವರು ತಮ್ಮ ಕನಸಿನ ಭಾರತದಲ್ಲಿ ಜಾತಿರಹಿತ ವರ್ಗರಹಿತ ಜನರು ಪೂರ್ಣ ಧಾರ್ಮಿಕ ಮತ್ತು ಸಾಂಸ್ಕೃತಿಕ ಸ್ವಾತಂತ್ರ್ಯದಲ್ಲಿ ಬಾಳುವರೆಂದು ಸಾರಿದರು. ಎಲ್ಲರೂ ಪೂರ್ಣ ಸೌಹಾರ್ದದಿಂದ ಬಾಳುವರು. ಅಲ್ಲಿ ಲಕ್ಷಾಧೀಶರೂ ಇರಲಾರರು. ಭಿಕ್ಷಾಧೀಶರೂ ಇರಲಾರರು ಈ ಕನಸಿನ ಸಿದ್ಧಿಗಾಗಿ ಪ್ರಾಣಗಳನ್ನಾದರೂ ಅರ್ಪಿಸಲು ಸಿದ್ಧನಿದ್ದೇನೆಂದು ಅವರು ಸಾರಿಸಾರಿ ಹೇಳಿದರು. ಯಾದವೀಯುದ್ಧದಿಂದ ಛಿನ್ನ ವಿಚ್ಛಿನ್ನವಾದ ಹಿಂದುಸ್ತಾನವನ್ನು ಕಾಣುವ ಮೊದಲೇ ಕಣ್ಮುಚ್ಚುವೆನೆಂದು ಅವರು ಭಯಸಿದರು.

ಅಸ್ಪೃಶ್ಯತೆ ಪೂರ್ಣ ನಷ್ಟವಾದ ಮೇಲೆ ಜಾತಿಭೇದ ಉಳಿಯಲಾರದು. ಜಾತಿಭೇದವಿದ್ದಷ್ಟುದಿನ ಅಸ್ಪೃಶ್ಯರು ಮೇಲ್ಜಾತಿಗೆ ಸೇರಬಯಸುವರು. ಅದು ಸಾಧ್ಯವಿಲ್ಲ ಅಂಥ ಪ್ರಯತ್ನವಾದರೆ ಮೇಲ್ಜಾತಿಯವರಿಗೂ ಅಸ್ಪೃಶ್ಯರಿಗೂ ಯುದ್ಧವಾದೀತು ಜಾತಿಭೇದವಳಿದರೆ ಎಲ್ಲರೂ ಕೇವಲ ಶುದ್ಧ ಹಿಂದುಗಳಾಗುವರು ಅಸ್ಪೃಶ್ಯರೂ ತಮ್ಮೊಳಗಿನ ಭೇದಗಳನ್ನು ಕಿತ್ತು ಹಾಕಿ ವಿಶಾಲ ಹಿಂದೂ ಜನಸಾಗರದಲ್ಲಿ ಲೀನರಾಗಲು ಪ್ರಯತ್ನಿಸಬೇಕಲ್ಲದೆ ವಿಶೇಷ ಹಕ್ಕು ಬಾಧ್ಯತೆಗಳಿಗಲ್ಲ, ಎಂದು ಅವರು ಉಪದೇಶಿಸಿದರು.

ನೌಖಾಲಿಯ ಹಿಂಸೆಗಳು ಒಂದೇ ಕಡೆ ಪ್ರತ್ಯೇಕವಾಗುವಂತಾಗಿ ವಾಸಿಸಿ ಪ್ರತ್ಯೇಕ ಕಾರಬಾನೆಗಳನ್ನು ಸ್ಥಾಪಿಸಬೇಕೆಂಬ ವಿಚಾರಕ್ಕೆ ಗಾಂಧಿಜಿ ಸಿಟ್ಟುರ ವಿರೋಧ ಪ್ರದರ್ಶಿಸಿದರು. ಅದು ವಿಷಾಕ್ತ ವಾತಾವರಣದಲ್ಲಿಲ್ಲ ಉಂಟುಮಾಡುವದೆಂದು ಅವರ ಅಭಿಪ್ರಾಯವಾಗಿತ್ತು.

ಜಾತೀಯ ದೃಷ್ಟಿಕೋನ ಹೋಗಲಿ

ಪಶ್ಚಿಮ ಕರೋನಾದಿಂದ ರಾಯಪುರಕ್ಕೆ ತಾ. ೧೫ ಕ್ಕೆ ಬಂದು ಮುಟ್ಟಿದರು. ಗಾಂಧೀಜಿ ಇಲ್ಲಿ ಎರಡು ದಿನ ವಸತಿ ಮಾಡಿದರು. "ಜಾತೀಯ ಪ್ರಶ್ನೆಯಲ್ಲಿಯೇ ಜನರು ಯಾವಾಗಲೂ ಮುಗ್ಧರಾಗಿರುವಂತೆ ತೋರುತ್ತದೆ, ಜಾತೀಯ ದೃಷ್ಟಿ ಕೋನ ಬಿಟ್ಟು ಅವರು ಮೇಲಕ್ಕೇರಿದರೆಂದರೆ ಪ್ರತಿಯೊಂದು ಪ್ರಶ್ನೆಯನ್ನು ವಿವೇಕದ ಒರೆಗೆ ಹಚ್ಚಿದಾಗ ಅವರು ತಪ್ಪುದಾರಿ ಹಿಡಿಯಲಾರರು" ಎಂದು ಪಶ್ಚಿಮ ಕೆರೋನಾದ ಭಾಷಣದಲ್ಲಿ ಅವರು ತಾ. ೧೪ ಕ್ಕೆ ಹೇಳಿದರು. ಹೊಲದ ಉತ್ಪನ್ನದಲ್ಲಿ ನೂರರಲ್ಲೊಂದಂಶ ಮಾತ್ರ ಒಡೆಯನಿಗೆ ಸಲ್ಲಬೇಕೆಂಬ ಚಳವಳಿಗೆ ಗಾಂಧೀಜಿ ನೈತಿಕ ಬೆಂಬಲವಿತ್ತದ್ದರಿಂದ ಮಧ್ಯಮವರ್ಗದ ಕುಟುಂಬಗಳು ಹಾಳಾಗಿ ಹೋಗಬಹುದೆಂದು ದೂರಲಾಗಿತ್ತು. ಅದಕ್ಕೆ ಗಾಂಧೀಜಿಯು ಉತ್ತರ ಮೇಲಿನಂತಿತ್ತು.

ಬಹಿಷ್ಕಾರ ಪ್ರಶ್ನೆ

ರಾಯಪುರದಲ್ಲಿ ಅವರು ಸಾಯಂ ಪ್ರಾರ್ಥನೆಯ ಸಭೆಯಲ್ಲಿ ಜಾತೀಯ ಬಹಿಷ್ಕಾರದ ಪ್ರಶ್ನೆಯ ಸ್ಪೆತ್ತಿ ಮಾತಾಡಿದರು ನೌಖಾಲಿಯಲ್ಲಿ ಹಿಂದುಗಳನ್ನು ಮುಸ್ಲಿಮರು ಪೂರ್ಣವಾಗಿ ಬಹಿಷ್ಕರಿಸಿ ಬಿಡಬೇಕೆಂಬ ಮಾತು ನಡೆದಿತ್ತೆಂದು ಅವರಿಗೆ ದೂರಲಾಗಿತ್ತು. ಹೊದಲು ಮುಗೆಯು ಕಾಲದಲ್ಲಿ ಕೂಡ ಹಿಂದುಗಳೊಡನೆ ಸಹಕರಿಸುತ್ತ ಬಂದಿದ್ದ ಮುಸ್ಲಿಮರನ್ನು ಕೂಡ ಸಾಮಾಜಿಕ ಬಹಿಷ್ಕಾರದ ಭೂತಕ್ಕೋರಿಸಿ ಸರಾವೃತ್ತ ಗೊಳಿಸುವ ಪ್ರಯತ್ನ ನಡೆಸಲಾಗಿದೆಯೆಂತೆ. ಈ ಬಗೆಯ ಸುದ್ದಿ ತಮಗೆ ಗೊತ್ತಿಲ್ಲವೆಂದೂ ಅದರೆ ಅವು ವ್ಯಾಪಕವಾಗಿರದೆ ಅಲ್ಲೊಂದು ಇಲ್ಲೊಂದು ಇರಬಹುದೆಂದು ಭಾವಿಸಿರುವದಾಗಿಯೂ ಗಾಂಧೀಜಿ ಹೇಳಿದರು

ಅದರೆ ಗುಜರಾಥ ಮತ್ತು ಪಂಜಾಬಿನಿಂದ ತಮ್ಮನ್ನು ಕಾಣಲು ಬಂದ ಇಬ್ಬರು ಮುಸ್ಲಿಂ ಗೆಳೆಯರಿಗೆ ನೌಖಾಲಿಯ ಮುಸ್ಲಿಮರು ಚೀಮಾರಿ ಹಾಕಿದರೆಂದು ಕೇಳುತ್ತೇನೆಂದು ಗಾಂಧೀಜಿ ಹೇಳಿದರು

ಕೇವಲ ಅಲ್ಪಸಂಖ್ಯಾಕರೆಂಬ ಕಾರಣಕ್ಕಾಗಿ ಸಾವಿರಾರು ವರ್ಷಗಳಿಂದ ಬಾಳಿಕೊಂಡ ಬಂದವರನ್ನು ಹೊರಗಟ್ಟುವದು ಹಿಂದೂ, ಮುಸ್ಲಿಂ ಕ್ರಿಶ್ಚನ್ ಅಥವಾ ಇನ್ನಾವ ಧರ್ಮಕ್ಕನುಸಾರವಾಗಿ ನ್ಯಾಯವಾಗದು ಎಂದು ಅವರು ತಿಳಿಸಿದರು. "ಈ ಭಯ ಪ್ರದರ್ಶನ ವಿರಳವಾಗಿದ್ದರೆ ಅದನ್ನು ಗಮನಿಸದಿರುವದೇ ಲೇಸು ಅದು ಬಹಳ ವ್ಯಾಪಕವಾಗಿದ್ದರೆ ಸರಕಾರ ಅದನ್ನು ವಿಚಾರಿಸಬೇಕು. ಸರಕಾರವೂ ಬಹಿಷ್ಕಾರ ಧೋರಣೆಯನ್ನನುಸರಿಸಿದರೆ ಅಲ್ಪಸಂಖ್ಯಾಕರು, ಯೋಗ್ಯ ಪರಿಹಾರ ದೊರೆತರೆ, ಹೊರಟು ಹೋಗಬಹುದು"

ತಾ. ೧೬ ಕ್ಕೆ ಗಾಂಧೀಜಿ ವ್ಯಾರ್ಥನಾ ಸಭೆಯಲ್ಲಿ ಫಜಲುಲ್ ಹಕ್ಕರು ತಮ್ಮನ್ನು (ಗಾಂಧೀಜಿಯನ್ನು) ನೌಖಾಲಿಯಿಂದ ಹೊರಗೆ ಹಾಕಬೇಕೆಂದು ಭಾಷಣ ಮಾಡಿದುದು ದುರ್ದೈವದ ಸಂಗತಿಯೆಂದು ಹೇಳಿದರು. ನೌಖಾಲಿಯಲ್ಲಿ ತಾವು ಜಾತೀಯ ಸೌಹಾರ್ದತೆಯ ಬೆಳೆಸುವಂತೆ ತಮಗೆ ಸಹಾಯ ಬೇಕಿಲ್ಲೆಂದು ಅವರು ಹೇಳಿದರು.

ರಾಮ—ರಹೀಂ—ಕೃಷ್ಣ—ಕರೀಮ

ರಾಯಪುರದಲ್ಲಿ ತಾ॥ ೧೬ ಕ್ಕೆ ಗಾಂಧೀಜಿ ೨೦೦ ಜನರು ಭಾಗವಹಿಸಿದ್ದ ಅಂತರ ಜಾತೀಯ ಭೋಜನ ಸಮಾರಂಭಕ್ಕೆ ದರ್ಶನವಿತ್ತರು ಮುಸ್ಲಿಮರನ್ನೂ, ಈ ಸಮಾರಂಭಕ್ಕೆ ನೀವು ಬರಗೊಡಿಸಿರೋ ಎಂದು ಗಾಂಧೀಜಿ ಕೇಳಿದಾಗ ಸಂಘಟಕರು ಚಟ್ಟನೆ ಉತ್ತರವಿತ್ತರು "ನಾವು ಎಲ್ಲರಿಗೂ, ಸವರ್ಣೀಯರಿಗಲ್ಲ, ನಾವುಕೂದ್ರರಿಗಲ್ಲ ನಮ್ಮ ಹೃದಯ ತೆರೆದಿದ್ದೇವೆ. ಮುಸ್ಲಿಮರೂ ತಮ್ಮ ಹೃದಯವನ್ನು ತೆರೆದು ನಮ್ಮೊಡನೆ ಸೇರಬಹುದು. ನೀವು ಈಗಾಗಲೆ ರಾಮ-ರಹೀಮ ಕೃಷ್ಣ ಕರೀಮ, ಅಲ್ಲಾ ಈಶ್ವರರನ್ನು ಒಂದು ಗೂಡಿಸಿದ್ದೀರಿ. ನಿಮ್ಮ ದಾರಿಯನ್ನೆ ನಾವೂ ಅನುಸರಿಸುವೆವು" ರಘುಪತಿ ರಾಘವ ಭಜನೆಗೆ ಈಚೆಗೆ ಗಾಂಧೀಜಿಯ ಅನುಮತಿಯಿಂದ "ಭಜ ಮನಸ್ಯೇ ರಾಮ ರಹೀಮ

ಭಜಮನ ಪ್ಯಾರೇ ಕೃಷ್ಣ ಕರೀಮು" ಎಂಬ ಪಂಕ್ತಿಯನ್ನು ಸೇರಿಸಲಾಗಿದ್ದನ್ನು ಲಕ್ಷಿಸಿ ಅವರು ಇದನ್ನು ನುಡಿದರು.

ಮೌಲನಾ ಬದ್ರುದ್ದೀನ್ ಸಾಹೇಬರು ಜುಮ್ಮಾ ಮಸೀದಿಗೆ ಗಾಂಧೀಜಿಯನ್ನು ಹಾರ್ದಿಕವಾಗಿ ಸ್ವಾಗತಿಸಿದರು. ಇನ್ನೊಂದು ಮಸೀದಿಯ ಮೌಲವಿಯವರು ವಿಶ್ರಾಂತಿಯ ಅಪ್ಪಣೆ ಪಡೆಯಲು ಸಮಯವಿಲ್ಲೆಂದು ಅವರನ್ನು ಕರೆಯಲಿಲ್ಲ.

ತಾ. ೧೭ ಕ್ಕೆ ಗಾಂಧೀಜಿ ದೇವಪುರದಲ್ಲಿದ್ದರು.

ತಿಪ್ಪೇರಾಕ್ಕೆ

ತಾ. ೧೫ ಕ್ಕೆ ಅಲುಸ್ಯ ಹಳ್ಳಿಗೆ ಗಾಂಧೀಜಿ ಬಂದಾಗ ನೌಖಾಲಿಯನ್ನು ಬಿಟ್ಟು ತಿಪ್ಪೇರಾ ಪ್ರವಾಸದ ಭಾಗದಲ್ಲಿ ಕಾಲಿಟ್ಟಂತಾಯಿತು.

ಅಲುಸ್ಯಾದ ಪ್ರಾರ್ಥನಾ ಸಭೆಯಲ್ಲಿ ಗಾಂಧೀಜಿಗೆ ಮುಸ್ಲಿಂ ಅಲ್ಪಸಂಖ್ಯಾಕರ ಸ್ಥಾನಾಂತರದ ಪ್ರಶ್ನೆಯನ್ನು ಕೇಳಲಾಯಿತು. ಯೋಗ್ಯ ಪರಿಹಾರವನ್ನು ಸರಕಾರವೂ ಸ್ಥಾನಿಕ ಬಹುಸಂಖ್ಯಾಕರೂ ಕೊಟ್ಟರೆ ಅಲ್ಪಸಂಖ್ಯಾಕರು ಹೊರಡಬಹುದೆಂದು ಗಾಂಧೀಜಿ ಉತ್ತರವಿತ್ತರು. ಅಲ್ಪಸಂಖ್ಯಾಕರ ವಾಸ್ತವ್ಯವನ್ನು ಸಹಿಸಲಾರದಷ್ಟು ಮಟ್ಟಿಗೆ ಬಹುಸಂಖ್ಯಾಕರ ಮನಸ್ಸು ದ್ವೇಷಪೂರ್ಣವಾಗಿದ್ದರೆ ಸರಕಾರವೇನು ಮಾಡಬೇಕು? ಆಯುಧ ಬಲದಿಂದ ಅಲ್ಪ ಸಂಖ್ಯಾಕರನ್ನು ಅದು ರಕ್ಷಿಸುವದು ಸರಿಯಲ್ಲ ರಾಮರಾಜ್ಯ ಭಜನೆಯನ್ನಾಗಲಿ ಕೈಚಪ್ಪಾಳೆಯಿಂದ ತಾಳ ಹಾಕುವದನ್ನಾಗಲಿ ಮುಸ್ಲಿಮರು ಸೈರಿಸದಿದ್ದರೆ ಹಿಂದುಗಳು ಹೊರಟು ಹೋಗಬಹುದೆಂದು ಹೇಳಲು ತಾವು ಹಿಂದೆ ಮುಂದೆ ನೋಡುವದಿಲ್ಲೆಂದು ಗಾಂಧೀಜಿ ಹೇಳಿದರು. ಇದು ಹಿಂದೂ ಬಹುಸಂಖ್ಯಾಕ ಪ್ರಾಂತಗಳಿಗೂ ಅಪ್ಪೇ ಅನ್ವಯಿಸುವದು.

ಬೌದ್ಧಿಕ ಮತ್ತು ಶಾರೀರಿಕ ಕೆಲಸ

ಪ್ರಶ್ನೆ— ರವೀಂದ್ರನಾಥ ಇಲ್ಲವೆ ರಮಣರಂಥವರು ತಮ್ಮ ಉಪಜೀವನವನ್ನು ಶಾರೀರಿಕ ಶ್ರಮದಿಂದ ಸಾಗಿಸಬೇಕೆಂದು ಏಕೆ ಒತ್ತಾಯ ಪಡಿಸಬೇಕು? ಅದು ಕೇವಲ ಹಾಳು ಅಲ್ಲವೆ? ಬುದ್ಧಿ ಜೀವಿಗಳು ಶಾರೀರಿಕಶ್ರಮಮಾಡುವವರ ಸರಿಸಮಾನರೆಂದೇ ಏಕೆ ಭಾವಿಸಬಾರದು? ಅವರಿಬ್ಬರೂ ಉಪಯುಕ್ತ ಸಾಮಾಜಿಕ ಕಾರ್ಯವನ್ನೆ ಮಾಡುತಿರುವರು.

ಉತ್ತರ—ಬೌದ್ಧಿಕ ಕಾರ್ಯ ಮಹತ್ವದ್ದಿದ್ದು ಜೀವನದ ಯೋಜನೆಯಲ್ಲಿ ನಿಃಸಂಶಯವಾಗಿ ಅದಕ್ಕೊಂದು ಸ್ಥಾನವಿದೆ. ಆದರೆ ನಾನು ಒತ್ತಿ ಹೇಳುವದೆಂದರೆ ಶಾರೀರಿಕ ಶ್ರಮದ ಅವಶ್ಯಕತೆಯನ್ನು ಯಾವ ಮನುಷ್ಯನೂ ಆ ಕಾರ್ಯದಿಂದ ಮುಕ್ತನಾಗಲಾರನೆಂದು ನಾನು ಹೇಳಬಯಸುತ್ತೇನೆ ಬಹಳ ಶ್ರಮದಿಂದ ಬೌದ್ಧಿಕ ಉತ್ಪಾದನೆಯಲ್ಲಿ ಸುಧಾರಣೆಯಾಗುವದು. ಪ್ರಾಚೀನ ಕಾಲದಲ್ಲಿ ಬ್ರಾಹ್ಮಣರು ಬುದ್ಧಿಯ ಕಾರ್ಯ ಮಾಡುತಿರುವಾಗಲೆ ಶಾರೀರಿಕ ಶ್ರಮವನ್ನು ಮಾಡುತಿದ್ದರೆಂದು ಹೇಳುವ ಸಾಹಸ ಮಾಡುತ್ತೇನೆ; ಅವರು ಹಾಗೆ ಮಾಡುತಿದ್ದಿಲ್ಲವಾದರೂ ಸದ್ಯದಲ್ಲಿ ಹಾಗೆ ಮಾಡುವದು ಅವಶ್ಯವೆಂದು ನಿಶ್ಚಯವಾಗಿದೆ ಈ ಸಂಬಂಧದಲ್ಲಿ ಟಾಲಸ್ಟಾಯರ ಜೀವನದತ್ತ ನೋಡಲು ಹೇಳಬಯಸುವ ರಶಿಯದ ಒಕ್ಕಲಿಗ ಬಾಂತೆಪೆನ್‌ನು ನೊದಲು ತನ್ನ ದೇಶದಲ್ಲಿ ಪ್ರತಿಪಾದಿಸಿದ ದುಡಿಮೆಗೆ ತಕ್ಕ ಕೊಟ್ಟಿಯ ತತ್ವವನ್ನು ಕಾರ್ಲಾಯಿಲ್ ಹೇಗೆ ವ್ಯವಸ್ಥಪಡಿಸಿದರೆಂಬುದನ್ನೂ ನಾನು ಉಲ್ಲೇಖಿಸ ಬಯಸುವೆ.

ರಾಯದುರ್ಗ

ಗುವಿವಾಡದ ಸ್ವಾಮಿ ಪ್ರಣವಾನಂದರು ಅದ್ವೈತ ಸಿದ್ಧಾಂತಗಳ ಮೇಲೆ ನಾಗೇಶ್ವರ ದೇವಸ್ಥಾನದಲ್ಲಿ ಭಾಷಣಗಳನ್ನಿತ್ತರು ಸ್ವಾಮೀಜಿಯವರಿಗೆ ಶಾಲನ್ನು ಬಹುಮಾನವಿತ್ತರು. ಶ್ರೀ ಗುರುಸಿದ್ಧ ಮೂರ್ತಿ ಮತ್ತು ಕೂನಸಿದ್ದಪ್ಪನವರು ನಂದನಿಗಳನ್ನರ್ಪಿಸಿದರು.

136

೫೦ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಹರಪನಹಳ್ಳಿ.

ಸ್ವಾಗತ ಸಮಿತಿಯವರ ವಿಜ್ಞಾಪನೆ.

ಇದೇ ಎಪ್ರಿಲ್ ತಿಂಗಳ ೨೮ ೨೯ ೩೦ನೇ ದಿನಾಂಕಗಳಲ್ಲಿ ಹರಪನಹಳ್ಳಿಯಲಿ ಮೇಲ್ಕಂಡ ಸಮ್ಮೇಳನವನ್ನು ಜರುಗಿಸಬೇಕೆಂದು ನಿರ್ಧರಿಸಲಾಗಿದೆ.

ಈ ಸಮ್ಮೇಳನವು ಹೋದ ವರ್ಷ ಡಿಸೆಂಬರ್ ತಿಂಗಳಲ್ಲಿಯೇ ಜರುಗಿಸಲ್ಪಡಬೇಕಾಗಿದ್ದು ಕೆಲವು ಅನಿವಾರ್ಯ ಅನಾನುಕೂಲತೆಗಳಿಂದ ಮುಂದೂಡಲ್ಪಟ್ಟು ಈಗ ಕಾರ್ಯ ರೂಪಕ್ಕೆ ಬಂದಿದೆ.

ಈ ಕೈಕೊಂಡ ಕೆಲಸವು, ದೊಡ್ಡದು. ಎಲ್ಲಾರೀತಿಗಳಿಂದ ಯಶಶ್ವಿಯಾಗಬೇಕೆಂದರೆ, ಸನ್ನರ ಹೃತ್ಪೂರ್ವಕ ಸಹಾಯ ಸಹಕಾರಗಳು, ಅತ್ಯವಶ್ಯಕವೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಅನಾಯಾಸವಾಗಿ ಒದಗಿಬಂದ ಅಪೂರ್ವ ಸಂದರ್ಭವನ್ನು ಸದುಪಯೋಗ ಮಾಡಿಕೊಂಡು ಮಹತ್ಕಾರ್ಯವನ್ನು ಎಲ್ಲಾ ರೀತಿಯಲ್ಲಿ ಯಶಶ್ವಿಯಾಗುವಂತೆ ತನು, ಮನ, ಧನಗಳಿಂದ ಸಹಾಯ ಸಹಕಾರಗಳನ್ನು ನೀಡಿ, ನಾಡಿನ **ಕಲಾ, ಸಾಹಿತ್ಯ, ಸಂಸ್ಕೃತಿಗಳ** ಉದ್ಧಾರದ ಸತ್ಕಾರ್ಯಕ್ಕೆ ಸಹಾಯಮಾಡಿದ ಪುಣ್ಯ ಕೀರ್ತಿಗಳಿಗೆ ಭಾಗಿಗಳಾಗಬೇಕೆಂದು ಪ್ರಾರ್ಥಿಸುವ.

ಹರಪನಹಳ್ಳಿ. **ಸ್ವಾಗತ ಸಮಿತಿ**

ಹಡಗಲಿ ತಾಲೂಕಿನಲ್ಲಿ ಹರಿಜನ ಪ್ರಚಾರ

ಶ್ರೀ ಕೊಟ್ರಪ್ಪನವರು ಈ ತಾಲೂಕಿನ ಹಳ್ಳಿಗಳಲ್ಲಿ ಸಂಚರಿಸಿ ವಶುವಳಿ, ದುರ್ಗಾಂಸ ಭಕ್ಷಣೆ ವಗೈರೆ ಕೆಟ್ಟ ಚಾಳಿಗಳನ್ನು ಹರಿಜನರಿಂದ ಬಿಡಿಸಿ, ಮಿತವ್ಯಯ ವಿದ್ಯಾಭ್ಯಾಸದ ಬೆಲೆಯನ್ನು ಬೋಧಿಸಿ ಹರಿಜನರಲ್ಲಿ ಸುಧಾರಣೆ ನಡೆಸಿರುವರು.

ಒಳಭೇದ ಮರೆಯಿರಿ.

ಭಾರತದ ೧೧ ಪ್ರಾಂತಗಳಲ್ಲಿ ಮದ್ರಾಸ್‌ನಲ್ಲೇ ಹೆಚ್ಚಿಗೆ ಕಾಂಗ್ರೆಸ್ ಸದಸ್ಯರು ಆರಿಸಿ ಬಂದಿರುವರು. ಈ ಪ್ರಾಂತದಲ್ಲಿ ಅಧಿಕಾರದಾಶೆಯು ಕಾರಣದಿಂದ ಒಳಭೇದಗಳು ಹುಟ್ಟಿರುವುದು, ಶೋಚನೀಯವಾಗಿದೆ ಪ್ರಾಂತದ ಪ್ರಜೆಗಳ ಹಿತಾಹಿತಗಳನ್ನನುಲಕ್ಷಿಸಬೇಕಾದುದು ಸದಸ್ಯರ ಕರ್ತವ್ಯ. ಸ್ವಾರ್ಥದಿಂದ ಎಲ್ಲವೂ ನಾಶವಾಗುತ್ತದೆ.

ಭಾರತದ ಸ್ವಾತಂತ್ರ್ಯಕಾಲವು ಸಮೀಪಿಸುತ್ತಿದೆ. ವೈಷಮ್ಯಗಳನ್ನು ಮರೆತು ಆತ್ಮಬಲದಿಂದ ಐಕ್ಯರಾಗಿ ರಾಜ್ಯಭಾರ ನಡೆಸಬೇಕು. ಇಲ್ಲವಾದರೆ ಹೊರಗುಳಿದು ವಿಧಾಯಕ ಕಾರ್ಯಕ್ರಮದಲ್ಲಿ ಮಗ್ನರಾಗಬೇಕು. ಕಪಟನಾಟಕದಲ್ಲಿ ಮತ್ತೆ ಪಾತ್ರವಹಿಸಿದರೆ ಪ್ರಜೆಗಳು ಇಂಥಾ ಸದಸ್ಯರನ್ನು ಎಂದಿಗೂ ಕ್ಷಮಿಸುವುದಿಲ್ಲ.

ಶಾಮಸುಂದರ ಚೇಳ್ಕಗುರ್ಕಿ,
ಅಂಬರನಾಥ (ಥಾಣಾಜಿಲ್ಲ)

ಉಜ್ಜಿನಿ

ಈ ತಿಂಗಳು 6 ನೇ ದಿನಾಂಕ ಶ್ರೀ ಜಗದ್ಗುರು ಸಿದ್ಧೇಶ್ವರ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಗ್ರಾಮಸ್ಥರ ಸಭೆಯು ಸೇರಿ ವಿದ್ಯಾಭ್ಯಾಸದ ಹಿತದ ದೃಷ್ಟಿಯಿಂದ ಶಾಲೆಯನ್ನು ಅಭಿವೃದ್ಧಿಗೆ ತರಲು ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಬೇಕೆಂದು ನಿರ್ಣಯವಾಯಿತು. ಈ ಕಾರ್ಯಕ್ಕೆ ಜಗದ್ಗುರುಗಳವರು 200 ರೂಪಾಯಿ ವಾಗ್ದಾನಮಾಡಿ ಮುಂದೆ ಹೆಚ್ಚಿಗೆ ಸಹಾಯಮಾಡಲು ತಿಳಿಸಿದರು. ಇದಕ್ಕಾಗಿ ಒಂದು ಸಮಿತಿಯು ನಿರ್ಮಿತವಾಯಿತ್ತು.

ಅಧ್ಯಕ್ಷ:—ಶ್ರೀನರಸಪ್ಪನವರ.

ಕಾರ್ಯದರ್ಶಿ:—ಐರಣಿ ಬಸಪ್ಪಯ್ಯನವರು ಹಣವಸೂಲಿಗಾಗಿ ಶ್ರೀ ವೆ. ಕಾ. ಚನ್ನವೀರ ಸ್ವಾಮಿಗಳವರು ಚುನಾಯಿಸಲ್ಪಟ್ಟರು.

Distribution of cloth
Interim-arrangement
Bellary collector's order

In towns of population of 10,000 and more with regard to the distribution of cloth, an interim arrangement has been made and almost all the people have been supplied with cloth at the rate of 2 yards per adult and one yard per child. By this arrangement 2½ lakhs of people who are residing in towns have been served with cloth

There are nearly 9 lakhs of people in rural parts who have not been supplied cloth from Dasara onwards. Hence there is incessant clamour for cloth fron the rural population. Therefore it has been decided to preserve equity that the people in the rural areas should also be supplied with cloth for Ugadi festival at the rate of two yards per adult and one yard per child, as has been done in towns, as an interim relief. For this purpose some merchants in towns, who are cloth licence-holders are being deputed to villages to sell cloth.

Such of those merchants who are willing to do this work are given permits specifying the villages where they have to sell. If no merchant comes forward to such of those villages cloth will be delivered to the grain depot keeper, who has to distribute the cloth to the people served by his depot.

The quantity of cloth supplied and the names of dealers, the names of villages which are to be served by the dealers will be communicated to the concerned Tahsildars. The sale of cloth should be commenced from 15-3-47 positively. They are directed to communicate the introduction of interim relief to village officers, Presidents of village Committees, Taluk supply Officers, Revenue Inspectors and Firka Supply Officers. The village officers and the Presidents of village Food Comittees should be directed to sit by the side of the shop-keeper or grain depot keeper, by turns, with a watchful eye to see that the cloth is supplied to one and all, and no malpractices prevail. The Taluk Supply Officers, Firka Supply Officers, aud Revenue Inspectors, may be directed to be vigilent and see that no maldistribution takes place. Strict instructions to be

given to Village Munsiffs to adhere to the Block Lists maintained in connection with food rationing

Harijans should not be prevented from taking their quota; if possible a separate day may be allotted for distribution of cloth to Harijans.

12-3-47 K. SUBBA RAO,
Bellary. I.A.T.C. For Collector.

ಬಟ್ಟೆಗಳ ಹಂಚುವಿಕೆ ಬಳ್ಳಾರಿ ಕಲೆಕ್ಟರವರ ಆಜ್ಞೆ

ಕಲೆಕ್ಟರವರ ಪರವಾಗಿ ಜಿಲ್ಲೆಯ ಟೆಕ್ಸ್‌ಟೈಲ ಅಧಿಕಾರಿಗಳಾದ ಶ್ರೀ ಕೆ. ಸುಬ್ಬರಾಯರು ಹೀಗೆ ತಿಳಿಸುತ್ತಾರೆ-" ಪಟ್ಟಣಗಳಲ್ಲಿರುವ 2½ ಲಕ್ಷ ಜನರಿಗೆ ದೊಡ್ಡವರಿಗೆ ಎರಡುಗಜ, ಚಿಕ್ಕವರಿಗೆ ಒಂದು ಗಜದಂತೆ ಹಂಚುವ ತಾತ್ಕಾಲಿಕ ಸಹಾಯ ಕಾರ್ಯವಾಗಿದೆ. ದಸರಾ ಹಬ್ಬದಿಂದ ಹಳ್ಳಿಗಳಲ್ಲಿರುವ 9 ಲಕ್ಷ ಜನರಿಗೆ ಬಟ್ಟೆಯೇ ಒದಗಿಲ್ಲವಾದ ಕಾರಣ ಅವರಿಗೂ ಈ ಪ್ರಕಾರದ ತಾತ್ಕಾಲಿಕ ಸಹಾಯವನ್ನೊದಗಿಸಬೇಕೆಂದೂ, ಉಗಾದಿಹಬ್ಬದ ಹೊತ್ತಿಗೆ ಅವರಿಗೆ ಬಟ್ಟೆಯು ಮುಟ್ಟಬೇಕೆಂದೂ ನಿಶ್ಚಯಿಸಲಾಗಿದೆ. ಈ ಕಾರಣ ಪಟ್ಟಣಗಳಲ್ಲಿರುವ ಕೆಲ ಲೈಸೆನ್ಸದಾರ ವರ್ತಕರಿಗೆ ಪರ್ಮಿಟ್ ಕೊಟ್ಟು ಇಂಥಾ ಹಳ್ಳಿಗಳಿಗೆ ಹೋಗಿ ದೊಡ್ಡವರಿಗೆ ಎರಡುಗಜ ಚಿಕ್ಕವರಿಗೆ ಒಂದು ಗಜದಂತೆ ಮಾರಲು ಕೇಳಲಾಗಿದೆ. ವರ್ತಕರು ಬರದಿರುವ ಊರಿಗೆ ಧಾನ್ಯದಡಿಪೋ ಮೂಲಕ ಬಟ್ಟೆಹಂಚುವ ವ್ಯವಸ್ಥೆ ಮಾಡಲಾಗಿದೆ. "

ಕಳುಹಿಸಲ್ಪಡುವ ಬಟ್ಟೆಯ ಪರಿಮಾಣ ವ್ಯಾಪಾರಿಹೆಸರು, ಕೊಡಬೇಕಾದ ಹಳ್ಳಿಗಳ ಹೆಸರು, ವಗೈರೆ ವಿವರ, ಸಂಬಂಧಿಸಿದ ತಾಲೂಕು ತಹಶೀಲ್ದಾರರಿಗೆ ತಿಳಿಸಲಾಗುತ್ತದೆ. 15-3-47 ರಿಂದ ಬಟ್ಟೆಮಾರುವುದು ಪ್ರಾರಂಭವಾಗಬೇಕು. ಗ್ರಾಮೋದ್ಯೋಗಿಗಳೂ, ಗ್ರಾಮಸಮಿತಿಯವರೂ ಈ ಕಾರ್ಯದಲ್ಲಿ ಸಹಕರಿಸಿ ವ್ಯಾಪಾರಿಯಿಂದ ಸರಿಯಾದ ಹಂಚುವಿಕೆಯಾಗುತ್ತದೆಯೇ ಇಲ್ಲವೆಂಬುದನ್ನು ನೋಡಿ, ನಿಯಮ ವಿರೋಧವಾಗದಂತೆ ನೋಡಿಕೊಳ್ಳಬೇಕು. ಆಹಾರ ಧಾನ್ಯಗಳಸಂಬಂಧ ಬ್ಲಾಕ್ ಲೀಸ್ಟ ಪ್ರಕಾರ ಹಂಚಿಕೆಯಾಗಬೇಕು.

ಹರಿಜನರು ಬಂದು ತಮ್ಮಭಾಗದ ಬಟ್ಟೆಕೊಳ್ಳಲು ಪ್ರತಿಬಂಧವಿರಬಾರದು. ಸಾಧ್ಯವಾದಲ್ಲಿ ಅವರಿಗೆ ಬೇರೊಂದು ದಿನವನ್ನೆ ನಿಶ್ಚಯಿಸಿ ಬಟ್ಟೆಹಂಚಬೇಕು.

ಮಿಲ್ ಬಟ್ಟೆಗಳನ್ನು ಮಾರಲು ಲೈಸನ್ಸ್.

ಉಗಾದಿ ಹಬ್ಬಕ್ಕಾಗಿ ದೊಡ್ಡವರಿಗೆ ೨ ಗಜ ಚಿಕ್ಕವರಿಗೆ ೧ ಗಜ ಮಿಲ್ ಬಟ್ಟೆಯ ಹಂಚುವಿಕೆಯಾದನಂತರ, ಹೊಸದಾಗಿ ಲೈಸನ್ಸ್ ಕೊಡುವ ಕಾರ್ಯವಾಗುವುದು. ಈ ಹಿಂದೆ ಲೈಸೆನ್ಸ್‌ಗಾಗಿ ಫೀ ಕಟ್ಟಿದವರಿಗೆ 1947-48 ಕ್ಕಾಗಿ ಲೈಸನ್ಸು ದೊರೆಯುವುದು. ಪಟ್ಟಣಗಳಲ್ಲಿರುವ ಹೆಚ್ಚು ಸಂಖ್ಯೆಯ ಮತ್ತು ಕಡಮೆ ವರಮಾನದವರ ಲೈಸನ್ಸು ರದ್ದು ಮಾಡಿ ಹಳ್ಳಿಯ ಭಾಗದಲ್ಲಿ ಹೆಚ್ಚು ಅಂಗಡಿಗಳನ್ನಿಡುವ ಕ್ರಮ ವೇರ್ಪಡುವುದು.

ಏಪ್ರಿಲ್ ತಿಂಗಳಲ್ಲಿ ಇದೆಲ್ಲ ಇತ್ಯರ್ಥವಾಗುವುದು. ಹರಿಜನ ಲಂಬಾಣಿ ಮುಂತಾದ ಹಿಂದುಳಿದವರಿಗೆ ನೊದಲು ರಿಯಾಯ್ತಿ ತೋರಿಸುವರು ಕಲೆಕ್ಟರವರ ಅಧ್ಯಕ್ಷತೆಯಲ್ಲಿ 14-3-47 ರ ದಿನ ಕೂಡಿದ ಟೆಕ್ಸ್‌ಟೈಲ್ ಸಭೆಯಲ್ಲಿ ಈ ಯೋಜನೆ ಮಾನ್ಯವಾಯಿತ್ತು.

The Rayalaseema Bank Limited, Bellary.
ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.
ನಮ್ಮ ಮದ್ರಾಸ್ ಶಾಖೆ:— ೩೧೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.
ಇತರ ಶಾಖೆಗಳು:— ಬಳ್ಳಾರಿ ಜಿಲ್ಲಾ:- ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ, ಬಳ್ಳಾರಿ, ಹಡಗಲಿ, ಕೂಡ್ಲಿಗಿ, ಆದವಾನಿ. **ಅನಂತಪುರ:-** ಅನಂತಪುರ, ಬೆಳಗುಪ್ಪ, ಧರ್ಮಾವರಂ, ಕದಿರಿ, ಪಾಮಿಡಿ, ತಿಮ್ಮನಚೆರ್ಲ, ಉರವಕೊಂಡ, ಹಿಂದೂಪುರ, ಗುತ್ತಿ. **ಕರ್ನೂಲು:-** ಕರ್ನೂಲು ಪತ್ತಿಕೊಂಡ.
ಕಡಪ:- ರಾಜಂಪೇಟೆ, ಕಡಪ. **ಚಿತ್ತೂರು:-** ಚಿತ್ತೂರು, ಮದನಪಲ್ಲಿ, ತಿರುಪತಿ, ನಾಗರಿ, ವಾಯಲ್ಪಾಡು
ಫಿಕ್ಸೆಡ್ ಡಿಪಾಜಿಟ್‌ನ ಬಡ್ಡೀದರ:- — 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2 ವರ್ಷಗಳಿಗೆ 3½%.
ಕರೆಂಟು ಆಕೌಂಟು: 1%, **ಸೇವಿಂಗ್ಸ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.
ಮಾಸಿಕ ಸ್ಪ್ರಾವಿಡೆಂಟ ಫಂಡ ಡಿಪಾಜಿಟ್:- 3%. **ಬಿ. ವಿ. ಶೇಷಗಿರಿರಾವ್, ಕಾರ್ಯದರ್ಶಿ.**

ಭಾರತದಲ್ಲಿ ವಿಮಾನ ಉತ್ಪತ್ತಿ ಕಾರ್ಖಾನೆ

ಬೆಂಗಳೂರಿನಲ್ಲಿರುವ ಹಿಂದೂಸ್ಥಾನಿ ಏರ್ ಕ್ರಾಫ್ಟ್ ಫ್ಯಾಕ್ಟರಿಯಲ್ಲಿ ವಿಮಾನಗಳನ್ನು ಉತ್ಪತ್ತಿ ಮಾಡಲು ಭರದಿಂದ ಸಿದ್ಧತೆಗಳು ನಡೆದಿವೆ ಇಂಗ್ಲೆಂಡಿನಿಂದ ಜಾನ್‌ಲಿ ಕ್ಲೇರ್ ಎಂಬುವವರು ಈ ವಿಷಯದಲ್ಲಿತಕ್ಕ ಶಿಕ್ಷಣವನ್ನು ಕೊಡಲು ಬೆಂಗಳೂರಿಗೆ ಬಂದಿರುವರು ಆಗಷ್ಟು ತಿಂಗಳೊಳಗಾಗಿ ಹೊಸವಿಮಾನಗಳು ಉತ್ಪತ್ತಿಯಾಗಬಹುದೆಂದು ಉಹಿಸಲಾಗಿದೆ. ಇಲ್ಲಿಯವರಿವಿಗೆ ಪರದೇಶಗಳಿಂದ ಬಂದ ಬಿಡಿ ಭಾಗಗಳನ್ನು ಜೋಡಿಸುತ್ತಿದ್ದರು.

ಮೌಲಾನಾ ಆಜಾದ್

ಕೇಂದ್ರದ ವಿದ್ಯಾಶಾಖೆಯ ಮಂತ್ರಿಗಳಾದ ಮೌಲಾನ ಅಬುಲ್‌ಕಲಾಮ್ ಆಜಾದರವರು ಮದ್ರಾಸಿನ ದಕ್ಷಿಣಭಾರತ ಹಿಂದೀಪ್ರಚಾರ ಸಭೆಯು ಪ್ರಮಾಣಪತ್ರ ವಿತರಣೋತ್ಸವನವನ್ನು ನೆರವೇರಿಸಿ ಈ ತಿಂಗಳ ಅಂತ್ಯದಲ್ಲಿ ದಕ್ಷಿಣ ಹಿಂದೂಸ್ಥಾನದಲ್ಲಿ ಸಂಚರಿಸಲಿರುವರು.

ಜಗತ್ತಿನ ನಾಲ್ಕು ಮುಖ್ಯರಾಷ್ಟ್ರಗಳಲ್ಲಿ ಸರಿಯಾದ ಒಪ್ಪಂದವಾಗದಿದ್ದರೆ ಶಾಂತಿಯಿಲ್ಲವೆಂದು ಮಾಸ್ಕೋದಲ್ಲಿನ ಪರಿಸ್ಥಿತಿಗೆ ಅಮೇರಿಕಾ ಮತ್ತು ಬ್ರಿಟನಿನ ಪರರಾಷ್ಟ್ರಮಂತ್ರಿಗಳು ಸ್ಟಾಲಿನರೊಡನೆ ವಿಚಾರ ವಿನಿಮಯಮಾಡಲು ಹೋಗಿರುವರು.

ಕಾಂಗ್ರೆಸ್ ಕಾರ್ಯಕಾರಿ ಸಮಿತಿ

ಕಾಂಗ್ರೆಸ್ ಕಾರ್ಯಕಾರೀಸಮಿತಿಯು ಪಂಜಾಬಿನಲ್ಲಿ ಜಾತೀಯ ಜಗಳವು ಅಂತ್ಯವಾಗಬೇಕಾದರೆ ಅದನ್ನು ಇಬ್ಭಾಗಿಸಬೇಕೆಂದು, **ಬ್ರಿಟಿಷ್ ಯೋಜನೆಯು ಸ್ವಾಗತಾರ್ಹವಾಗಿದೆಯೆಂದು** ತೀರ್ಮಾನಿಸಿತು. ಪಂಜಾಬಿನಲ್ಲಿ ಹಿಂದೂ ಮುಸಲ್ಮಾನ್ ದಂಗೆಯು ಭೀಕರ ಪರಿಸ್ಥಿತಿಗೆ ಬರುತ್ತಲಿದೆ. ಹಜಾರಾ ಮತ್ತು ರಾವಲ್‌ಪಿಂಡೀ ಜಿಲ್ಲೆಗಳ ಹಳ್ಳಿಗಳ ಭಾಗದಿಂದ ಸುಂಡರು ಬಂದು ಹಳ್ಳಿಗಳನ್ನು ಮುತ್ತಿ ಜನರನ್ನು ಕೊಲೆಮಾಡುತ್ತಲಿರುವರು ಸರ್ಕಾರದವರು ಎಲ್ಲಾ ರಕ್ಷಣೋಪಾಯಗಳನ್ನು ತೆಗೆದುಕೊಳ್ಳುತ್ತಲಿರುವರು.

ಮಹಾತ್ಮ ಗಾಂಧಿ

ಬೀಹಾರಿನ ಹಿಂದೂಗಳು ಮನುಷ್ಯರಂತೆ ವರ್ತಿಸಿ ತಾವು ವಶಪಡಿಸಿಕೊಂಡಿರುವ ಮುಸ್ಲಿಂಮಹಿಳೆ ಮತ್ತು ಹುಡಿಗಿಯರನ್ನು ಬಿಟ್ಟು ಕೊಡಬೇಕೆಂದೂ ನಷ್ಟವಾಗಿರುವ ಮುಸಲ್ಮಾನರಿಗೆ ಪರಿಹಾರವನ್ನು ಕೊಡಬೇಕೆಂದೂ ಗಾಂಧೀಜಿಯವರು ಪಾಟ್ನಾದಲ್ಲಿ ಹೇಳಿದರು. ಬಾಬೂರಾಜೇಂದ್ರರು ಗಾಂಧೀಜಿಯೊಡನೆ ರಾಜಕೀಯ ಪರಿಸ್ಥಿತಿಯ ಬಗ್ಗೆ ಚರ್ಚಿಸಿ ದೆಹಲಿಗೆ ತೆರಳಿದರು.

140



Guarranteed Pure Pyra Gingelly oil

Best for Pickles, Cooking & Cooling.

DISTRIBUTORS:—

1. M/S. V. M. GIRI & SONS,
(Pro:- M, S Acharya) Car Street, Bellary
2 M/S. HUSANJEE RAO, M VENKOJI RAO
General Merchants, Car Street Bellary.

ಶುದ್ಧ ! ಗ್ಯಾರಂಟಿಯಾದ್ದು !! ಸತ್ವಕಾರಿ !!!

—ಪೈರ ಎಳ್ಳೆಣ್ಣೆ—

ಕಣ್ಣಿಗೆ ಬಹಳ ತಂಪಾದ್ದು. ಅಡಿಗೆಯ ಎಲ್ಲಾ ಪದಾರ್ಥಗಳಿಗೆ ಬಳಸಲು ಶ್ರೇಷ್ಠವಾದ ಎಣ್ಣೆಯಿದು. ಉಪ್ಪಿನಕಾಯಿಗೆ ಈ ಎಣ್ಣೆಯನ್ನುಪಯೋಗಿಸುವದರಿಂದ ಬಹಳಕಾಲ ಕೆಡದಂತಿಡಬಹುದು.

ಪಂಚಲಧಿಕಾರ ಉಳ್ಳವರು. 1) ವಿ ಎಂ ಗಿರಿ ಅಂಡ್ ಸನ್ಸ್-ತೇರು ಬೀದಿ, ಬಳ್ಳಾರಿ. (ಎಂ. ಎಸ್. ಆಚಾರ್ಯ)
2) ಎಂ. ಹುಸೇಂಜಿರಾವ್, ಎಂ. ವೆಂಕೋಬರಾವ್. ತೇರುಬೀದಿ, ಬಳ್ಳಾರಿ.

ಸು ಭಾ ಸ್
ರಾ ಷ್ಟ್ರ ಗೀ ತೆ.

ಸಿದ್ಧವಾಯಿತು— ಕ್ರಯ ೦—೮—೦

ಸುಂದರ ಮುದ್ರಣ— ಇಲ್ಲಿಯವರೆಗಿನ ಪ್ರಭಾತ್‌ಫೇರಿ, ರಾಷ್ಟ್ರೀಯ ಸಮಾವೇಶಗಳಲ್ಲಿ ಹಾಡಲ್ಪಟ್ಟ ಎಲ್ಲಾ ಮುಖ್ಯ ದೇಶಭಕ್ತ ಕವಿಗಳ ಕನ್ನಡ ಮತ್ತು ಹಿಂದೀ ಭಾಷೆಯಲ್ಲಿನ ರಾಷ್ಟ್ರಗೀತೆಗಳ ಸಮಗ್ರ ಸಂಗ್ರಹ. ಕರ್ನಾಟಕದಲ್ಲಿ ರಾಷ್ಟ್ರ ಗೀತೆಗಳ ಇಷ್ಟುದೊಡ್ಡ ಸಂಗ್ರಹವು ಇದುವರೆಗೆ ಪ್ರಕಟವಾಗಿಲ್ಲ. ಸ್ವಲ್ಪೇ ಪ್ರತಿಗಳು ಪ್ರಕಟವಾಗಿವೆ. ಹೆಚ್ಚು ಕೊಳ್ಳುವವರಿಗೆ ಕಮಿಷನ್ ಕೊಡಲಾಗುತ್ತದೆ.

'ನವಭಾರತ' ಕಾರ್ಯಾಲಯ ಬಳ್ಳಾರಿ.

—ರಾಷ್ಟ್ರೀಯ ಪುಸ್ತಕಗಳು.—
— ಕಾಂಗ್ರೆಸ್ ಸ್ವರೂಪ ದರ್ಶನ —

ರಾಷ್ಟ್ರೀಯ ಶಿಕ್ಷಣ	0—8—0
ಅಸ್ಪೃಶ್ಯತಾ-ನಿವಾರಣೆ	0—12—0
ಪ್ರಾಂತಭಾಷೆ-ರಾಷ್ಟ್ರಭಾಷೆ	0—6—0
ಖಾದಿ	0—8—0
ಕಾಂಗ್ರೆಸ್ ಮತ್ತು ಸ್ವಯಂಸೇವಕದಳ	0-10-0
ಸತ್ಯಾಗ್ರಹ (ಇತಿಹಾಸ-ತಂತ್ರ)	0—8—0

ವಿ. ಪಿ. ಖರ್ಚುಬೇರೆ. ಇನ್ನು ಅನೇಕ ಪುಸ್ತಕಗಳು ದೊರೆಯುತ್ತವೆ —

ನವಭಾರತ ಕಾರ್ಯಾಲಯ, ಬಳ್ಳಾರಿ.

NAVA BHARAT. BELLARY. Reg. No. M. 4746

ನವಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು.	**Subscription Rates**
ವರ್ಷಕ್ಕೆ 5-0-0	One Year 5—0—0
6 ತಿಂಗಳಿಗೆ 3-0-0	Six months 3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

SRI..... .. ..

....

....

Printed at Krishna Press Bellary QH No. B 17 FOR (Q.H. NO. B-5.)
Edited & Published by T. B. KESHAVARAO

ಜೈಹಿಂದ್ Reg. No. M. 4746

ಸಮಾಚಾರ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಸಂಜೆಕೆಗಿ ಬಳ್ಳಾರಿ ಮಾರ್ಚ್ ೨೪ ಸೋಮವಾರ ೧೯೪೭ ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವ್.

ಉ ಪ ವಾ ಸ

ಆತ್ಮಶುದ್ಧಿ-ಅಧಿಕಾರಿಗಳ ಮನೋಪರಿವರ್ತನೆ

ರಾಯದುರ್ಗ ತಾಲೂಕು ಶ್ರೀ ಧರಘಟ್ಟೆ ತಮ್ಮ ದತ್ತಾಶ್ರಮದಲ್ಲಿ ೨೫-೩-೪೭ ನೆಯ ಮಂಗಳವಾರ ದಿಂದ ಸ್ವಾಮಿ ವೈರಾಗ್ಯಾನಂದಜಿಯವರು ತಮ್ಮ ಆತ್ಮಶುದ್ಧಿಗಾಗಿಯೂ, ಅಧಿಕಾರಿಗಳ ಮನೋಪರಿ ವರ್ತನೆಗಾಗಿಯೂ ೨೧ ದಿನಗಳ ಉಪವಾಸ ಮಾಡಲಿ ರುವರೆಂದು ಗೊತ್ತಾಗಿದೆ ಪ್ರಜಾಸರ್ಕಾರದ ಕಾಲ ದಲ್ಲೂ ಕೂಡ ಬಡವನಿಗೂ, ಪರಿಜನರಿಗೂ, ಪರಿಹಾರ ದೊರೆತಿಲ್ಲವೆಂದರೆ ಅಲ್ಲ. ಅದರ ಮೇಲೆ ಹಿಂಸಾಕೃತ್ಯ ಗಳು ನಿಂತಿಲ್ಲವೆಂದು ಅವರು ಹೇಳುತ್ತಾರೆ.

ಕಣೇಕೆಲ್ಲು ದನಗಳ ಜಾತ್ರೆ.

ಸಿರಗುಪ್ಪ ಏಪ್ರೇಲ್ 5 ನೇ ತಾರೀಕು ರಥೋತ್ಸವ ನಡೆದು ತದನಂತರ 6,7,8 ನೇ ತಾರೀಕು ದನಗಳ ಜಾತ್ರೆಯು ನಡೆಯುತ್ತದೆ. ಈಸಲ ಸುಮಾರು 5000 ದನಗಳು ಕಲೆಯಬಹುದೆಂದು ಅಂದಾಜು ಮಾಡಲಾಗಿದೆ ಶ್ರೇಷ್ಠ ರಾಸುಗಳಿಗೆ ಬಹುಮಾನ ಹಂಚಲಾಗುತ್ತದೆ. ಬಳ್ಳಾರಿ ಜಿಲ್ಲಾ ಜನರು ಬೇಕಾದ ದನಗಳನ್ನು ಕೊಂ ಡು ಬೇಡವಾದವುಗಳನ್ನು ಮಾರಿ ಈ ಉತ್ಸವದ ಲಾಭ ವನ್ನು ಪಡೆಯಬೇಕೆಂದು ಶ್ರೀ ಯಲ್. ಕೊಂಡಾರೆಡ್ಡಿ ಯವರು ಬೇಡುತ್ತಾರೆ.

ಎಸ್. ಎಸ್. ಯಲ್. ಸಿ. ಪರೀಕ್ಷೆಯು

— ಮುಂದೆ ಬಿತ್ತು. —

ಮದ್ರಾಸ್ ಎಸ್. ಎಸ್. ಯಲ್‌ಸಿ. ಪರೀಕ್ಷೆ ಯ ಪ್ರಶ್ನೆ ಪತ್ರಗಳು ಪರೀಕ್ಷೆ ನಡೆಯಬೇಕಾದ ಅನೇ ಕ ದಿನಗಳ ಮುಂಚೆಯೇ ಹೊರಬಿದ್ದುದು ಗೊತ್ತಾದ ಕಾರಣ ಪರೀಕ್ಷೆಗಳನ್ನು ಮುಂದಕ್ಕೆ ಹಾಕಬೇಕೆಂದು ಮದ್ರಾಸ್ ಸರ್ಕಾರದವರು ನಿಶ್ಚಯಿಸಿದರು.

ಜಿಲ್ಲಾ ಏಕೀಕರಣ ಪರಿಷತ್ತು.

ಅದವಾನಿ ತಾಲೂಕು ಬದನೆಹಾಳ್ಲಿ ನಡೆಯುವ ಬಳ್ಳಾರಿಜಿಲ್ಲಾ ಕನ್ನಡ ಏಕೀಕರಣ ಪರಿಷತ್ತಿಗೆ ಶ್ರೀ ಬಿ. ಹರಿಕೃಷ್ಣೆಂದ್ರಾರೆಡ್ಡಿಯವರು ಸ್ವಾಗತಾಧ್ಯಕ್ಷರಾಗಿ ಆರಿಸ ಲ್ಪಟ್ಟಿದ್ದಾರೆ. ಏಪ್ರಿಲ್ ೧೯೪೭ ರ ಮೊದಲನೆಯ ವಾರದಲ್ಲಿ ಪರಿಷತ್ತು ಸಮಾವೇಶವಾಗಲಿದೆ.

ಶ್ರೀ ರಾಮಚಂದ್ರವಡವಿ.

ಅ. ಭಾ. ಚರಖಾಸಂಘ ಕರ್ನಾಟಕ ಶಾಖೆಯ ಶ್ರೀ ವಡವಿಯವರು ಬಳ್ಳಾರಿ ಕುರುಗೋಡುಗಳನ್ನು ಸಂ ದರ್ಶಿಸಿ ಕಾರ್ಯಕರ್ತರೊಡನೆ ವಿಚಾರ ವಿನಿಮಯ ಮಾಡಿ ಖಾದಿಯೋಜನೆ ಬಗ್ಗೆ ಭಾಷಣ ಕೊಟ್ಟರು.

142



10th Year of Publication
24th March 1947

Madras Assembly By-election.

The result in the By-election to the Madras Legislative Assembly from the Bellary Rural Muhammadan Constituency reveals to the critical mind the vagaries of the verdict of the so called democracy. The position is, out of the 9 Taluks in the District only two Taluks were in favour of the winner, Mr Haz; Muhammed Ismail; they are Adoni and Hospet which accounted for nearly 6000 votes out of 6941 his total. That the other 7 Taluks solidly plumped for Mr. S. Abdul Razak Saheb is evident from the fact that he got as many as 6562 Votes. Mr. S. A. Razak had all the disadvantages of a non-party man. For instance he had not the benefit of propaganda through big provincial leaders belonging to an All India Organisation. Nevertheless, public opinion in Bellary is inclined not to see a defeat for Mr. S. A. Razak in the deceptive result. For from it. He has the distinction of establishing an All India Record, we believe, against the mighty phalanx of The All India Muslim League by securing as many votes as he did in a Muslim constituency. The hold of the Muslim League on the masses of 7 taluks is exposed as hallow. Better organisation in the other two taluks by Mr. S. A. Razak would have a different story to tell.

Correspondence.

Cloth Muddle:—

The lot of the villagers is from the frying fan to the fire in the matter of the latest cloth distribution scheme. The stock on hand 5 lakhs of yards set apart for 9 lakhs of rural population requires the juggler's trick for an equitable distribution, at 2 yds per adult and 1 yard per child And some of the villagers were not touched by the cloth distribution scheme since Dasara. There seems to be a serious bungle regarding the allocation of cloth to the villagers as against the urbar population. Why this invidious discrimination notwithstanding the sky-high professions by the present Government of their solicitude to the rural brethren? The shortage had its unhappy sequel in only the influential section grabbing what little cloth was available, at times making the lot of the retailers deputed to sell cloth in villages recently, unenviable.

A Villager.

ವಿದ್ಯಾರಣ್ಯ ವಿಜ್ಞಾನ ಸಮಿತಿ ಹಂಪಿ

—: ಘಟನೆ—ನಿಯಮ —ಉದ್ದೇಶಗಳು :—

ಹೆಸರು:— **ವಿದ್ಯಾರಣ್ಯ ಸಮಿತಿ ಹಂಪಿ**

ಉದ್ದೇಶಗಳು:— ೧. ವಿಜಯನಗರ ಸಾಮ್ರಾಜ್ಯದ ಚರಿತ್ರೆ ಪ್ರಧಾನವಾಗಿರುವ ಕಾಲದ ಭಾರತದ ಇತಿಹಾಸ, ಸಾಹಿತ್ಯ, ಧರ್ಮ, ಸಂಸ್ಕೃತಿ. ವಿವಿಧ ಕಲೆಗಳು, ಶಿಲ್ಪಕಲೆ- ಇವುಗಳನ್ನು ಶ್ರೀ ವಿದ್ಯಾರಣ್ಯರ ಗ್ರಂಥಗಳಿಂದಲೂ ಇತರ ಗ್ರಂಥಗಳ ಮೂಲಕವಾಗಿಯೂ ಸಂಗ್ರಹಿಸಿ ಪ್ರಕಟಿಸುವುದು

೨ ಸಮಿತಿಗೆ ಹಂಪಿ ಮತ್ತು ಹೊಸಪೇಟೆಗಳಲ್ಲಿ ಪುಸ್ತಕ ಭಂಡಾರ ವಿವಿಧ ವಸ್ತುಗಳ ಪ್ರದರ್ಶನಾಲಯಗಳನ್ನು ವಿವರಿಸಿ, ತಕ್ಕ ಸೌಕರ್ಯಗಳು ದೊರೆತ ನಂತರ ಇತರ ಭಾಗಗಳಲ್ಲಿಯೂ ಸ್ಥಾಪಿಸುವುದು.

೩. ಹಂಪಿ ಮತ್ತು ಹೊಸಪೇಟೆಗಳಲ್ಲಿ ಆಶ್ರಮಗಳನ್ನು ಸ್ಥಾಪಿಸಿ ಹಂಪಿಯನ್ನು ಸಂದರ್ಶಿಸುವ ಯಾತ್ರಿಕರಿಗೆ ತಕ್ಕ ಸೂಚನೆ, ಸಲಹೆಗಳನ್ನು ಕೊಟ್ಟು ಸೌಕರ್ಯಗಳನ್ನೇರ್ಪಡಿಸುವುದು. ಈ ಆಶ್ರಮಗಳಲ್ಲಿ ಅನುಕೂಲವಾದಾಗಲೆಲ್ಲಾ ಭಾಷಣ, ಸಾಹಿತ್ಯಸ್ಪರ್ಧೆ, ಭಜನೆ, ಹರಿಕಥಾಕಾಲಕ್ಷೇಪ, ವಸ್ತುಪ್ರದರ್ಶನ, ವರ್ಧಂತ್ಯುತ್ಸವಗಳನ್ನು ನಡೆಸುವುದು

೪. "ಹೇಮಕೂಟ" ವೆಂಬ ಪತ್ರಿಕೆಯನ್ನು ಸೌಕರ್ಯಗಳೊದಗಿದಾಗ ಪ್ರಕಟಿಸುವುದು.

ಅಧಿಕಾರೀನರ್ಗ:— ಈ ಸಮಿತಿಯ ಕಾರ್ಯಭಾಗದ ಬಾಧ್ಯತೆಯು ಈಕೆಳಗೆ ಕಾಣಿಸಿದ ಮಹನೀಯರ ಅಧಿಕಾರಕ್ಕೆ ತಾತ್ಕಾಲಿಕವಾಗಿ ವಹಿಸಲ್ಪಟ್ಟಿದೆ.

ಅಧ್ಯಕ್ಷರು:— ಬಹ್ಮ ಶ್ರೀ ಶಂಕರಾನಂದಸ್ವಾಮಿ ಹೇಮಕೂಟಾಶ್ರಮ ಹಂಪಿ

ಉಪಾಧ್ಯಕ್ಷರು:— ೧. ಶ್ರೀ ಬೂದಿಹಾಳು ಆನಂತಾಚಾರ್ ಬಿ. ಎ. ಬಿ. ಎಲ್. (ಎಂ. ಎಲ್. ಎ.) ಹೊಸಪೇಟೆ.

೨. ಮುರಾರಿ ವೆಂಕಟಸ್ವಾಮಿ ಜಮೀಂದಾರ ಮತ್ತು ಪುರಸಭಾಧ್ಯಕ್ಷ ಹೊಸಪೇಟೆ

ಕಾರ್ಯದರ್ಶಿಗಳು:— ೧. ಎಂ. ತಿರುಮಲಾಚಾರು ಬಿ ಎ. ವಕೀಲ ಹೊಸಪೇಟೆ

೨. ಎಂ. ಯಜ್ಞ. ಎಂ. ಗುರುಶಂಕರಯ್ಯ ಬಿ. ಎ. ಎಲ್. ಯಲ್. ಬಿ. ವಕೀಲ ಹೊಸಪೇಟೆ.

ಕೋಶಾಧಿಕಾರಿ:— ಹರ್ದಿಗೆರೆ ಲಿಂಗಾರೆಡ್ಡಿ ಬಿ. ಎ. ಬಿ. ಎಲ್. ವಕೀಲ ಬಳ್ಳಾರಿ

ಲೆಕ್ಕ ಪರಿಶೋಧಕರು ಸ್ಥಾನಿಕ ಕೋಶಾಧಿಕಾರಿ | ಕರೂರು ವೆಂಕೋಬರಾಯರು ಹೊಸಪೇಟೆ

(10 ನೆಯ ಪುಟಕ್ಕೆ ಮುಂದುವರಿದಿದೆ).

ಭೀಕರ ನೋಟ

ಏನಿದು ನೋಟ!
ಹೆಣಗಳ ತೋಟ:
ಹೊಡೆದರು ಹಲರು!
ಮಡಿದರು ಕೆಲವರು!

ಅಯ್ಯೋ! ಅ ಕಡೆ ನೋಡಲ್ಲಿ!
ಮಿಡ್ಡಗಳಿಲ್ಲವು ಜನರಲ್ಲಿ!

ಅವರನು ಕಡಿದರು,
ಇವರನು ಕಡಿದರು,
ಎಲ್ಲರು ಮಡಿದರು!

ನಾರಿಯು ಓಡುತ ನೋಡಲ್ಲಿ!
ಬಿದ್ದಿಹಳಲ್ಲಿಯೆ ಬಯಲಲ್ಲಿ!

ಬಂದರು ಕೆಲರು
ಹಿಡಿದರು ಅವರು

ನಾರಿಯ ಕಂಭಕೆ ಇರಿಸಿದರಲ್ಲಾ!
ಮುಳಿಗಳ ದೇಹಕೆ ನಾಟಿದರಲ್ಲಾ!
"ಅಯ್ಯೋ! ನೀಚರೆ ಹೇಡಿಗಳೆ!
ನಾರಿಯ ಮೇಲೆಯೆ ಶೌರ್ಯಗಳೆ!"

ಅಲ್ಲಿಯು ರೋಧನ!
ಇಲ್ಲಿಯು ರೋದನ!
ಮಕ್ಕಳು ಮಡಿದರು!
ಯುವಕರು ಮಡಿದರು!
ಮುದುಕರು ಮಡಿದರು!

ರಕುತದ ಕಾಲುವೆ ಹರಿಯುತಿವೆ!
ರುಂಡವನೆಳಿದು
ಕೈಗಳ ಮುರಿದು

ಬಿದ್ದಿಹ ಹೆಣಗಳ ಬಣಬೆಯಿದೆ!
ಬೆಂಕಿಯು! ಬೆಂಕಿಯು! ನೋಡಲ್ಲಿ!
ಮನೆಗಳ ಮಠಗಳ ಸುಡುತಿವೆಯಲ್ಲಿ!
ಅರದು ಬೆಂಕಿಯ ನಿಟ್ಟಿಸಿರು!
ಅಯ್ಯೋ ನೀವಾ ಮಾನವರೆ!

ಏತಕೆ ಬಂದಿರಿ!
ಏತಕೆ ನಿಂದಿರಿ!

ಕುಲವನು ಕೆಡಿಸುತ!
ಜನಗಳ ಕೊಲ್ಲುತ!

ನಿಂದಿರಿ ಏಕೆ!
ಮಾರಿಯೆ ಮಕ್ಕಳೆ!
ಅಯ್ಯೋ ಭಾರತ!
ಎನಿದು ಕೊರತೆ!

ನಿನ್ನೆಯ ಮಕ್ಕಳ ನೀಗಿದೆಯಾ!
ಬೇರೆಯ ನೀಚರ ಸೇರಿದೆಯಾ!
ಹಿಂದಿನ ಶೌರ್ಯಗಳೆಲ್ಲಿವೆ ಈಗ!
ಬಿದ್ದಿಹೆ ಏನು ಮೂಲೆಗೆ ಈಗ!
ಬಂದೆಯ ಬಂದೆಯ ಗಾಂಧಿಮಹಾತ್ಮ!
ಬಂಧನ ಬಿಡಿಸೈ ಏನೆಮಗಾತ್ಮ!
ಏನ್ನುತಲಾನು ಕನವರಿಸೆ!
ಪಂಜರು ಹೆಚ್ಚಿನ ಭೀತಿಯಲಿ!
ಮಹಿಮ ಎಂದನು ಕೂಗುತಲಿ!

(ಮರುಳು ಸಿದ್ದಯ್ಯಾ ಹಿರೇಮಠ ಕೊಟ್ಟೂರು)

ಮಕ್ಕಳನ್ನು ಎತ್ತಿಕೊಂಡು ಹೋಗುವ ಸುದ್ದಿ ಸುಳ್ಳು.

೧೭ ನೇಯ ದಿನಾಂಕ ಕಲೆಕ್ಟರ್‌ರವರ ಕಛೇರಿಯಲ್ಲಿ ಕಲೆಕ್ಟರವರ ಅಧ್ಯಕ್ಷತೆಯಲ್ಲಿ ಸಭೆಯು ನಡೆದು ಈಸುಳ್ಳು ಸುದ್ದಿಗಳನ್ನು ನಂಬಬಾರದೆಂದು ಹೇಳಲಾಯಿತು. ತುಂಗಭದ್ರಾ ಯೋಜನೆಯನ್ನು ನಡೆಸುವ ಮದ್ರಾಸ್ ಸರ್ಕಾರದ ಚೀಫ್ ಎಂಜಿನಿಯರ್ ಶ್ರೀ ಗೋವಿಂದ ರಾಜಯ್ಯಂಗಾರ್ಯರು ಕೂಡ ಇಂಥಾ ಆಧಾರವಿಲ್ಲದ ಸುದ್ದಿಗಳನ್ನು ನಂಬಬಾರದೆಂದರು.

ಭಾರತಕ್ಕೆ ಧಾನ್ಯದ ಆಯಾತ

ಕಳೆದ ಜನವರಿ ತಿಂಗಳಲ್ಲಿ 9 ವಿವಿಧ ದೇಶಗಳಿಂದ 303000 ಟನ್ ಆಹಾರ ಧಾನ್ಯಗಳನ್ನುಳ್ಳ 50 ಹಡಗುಗಳು ವಿವಿಧದೇಶಗಳಿಂದ ಬಂದವೆಂದು ಕೇಂದ್ರ ಆಹಾರ ಶಾಖೆಯು ಪ್ರಕಟನೆಯೊಂದು ತಿಳಿಸುತ್ತದೆ. 84,8000 ಟನ್ನು ಗೋಧಿ ನುಚ್ಚು ಹಿಟ್ಟುಬಂದಿದೆ. ಉಳಿದದ್ದು ಅಕ್ಕಿ, ಮೆಕ್ಕೆಜೋಳ, ಬಾರ್ಲಿ, ಜೋಳ ವಗೈರೆ.

ಫೆಬ್ರುವರಿ ತಿಂಗಳಲ್ಲಿ 206,000 ಟನ್ನುಗಳಷ್ಟು ಧಾನ್ಯವು ಬಂದಿದೆ. ಇದರಲ್ಲಿ ಗೋಧಿ ನುಚ್ಚು ಹಿಟ್ಟು 37,6000 ಟನ್ನು.

ನವಭಾರತಕ್ಕೆ ಚಂದಾದಾರರಾಗಿರಿ.

ಮೋಟಾರ ಸಾರಿಗೆ ರಾಷ್ಟ್ರೀಕರಣ

ಯುದ್ಧಕಾಲದ ವಿಶೇಷ ಪರಿಸ್ಥಿತಿಯಿಂದಲೂ, ಸೈನ್ಯಸಂಚಲನದ ಕಾರ್ಯಕ್ಕಾಗಿಯೂ, ಸರಕಾರದವರು ಉತ್ಪತ್ತಿಯ ಬಹುಭಾಗವನ್ನು ಉಪಯೋಗಿಸಿಕೊಂಡ ಕಾರಣ ಸಾರ್ವಜನಿಕರಿಗೆ ವಾಹನ ಕೊರತೆಯಾಯಿತು. ಈಚೆಗೆ ಮೋಟಾರ ಸಾರಿಗೆಯನ್ನು ಸರಕಾರದವರೇ ವಹಿಸಬೇಕೆಂಬ ಸಲಹೆಯು ಕೇಳಿಬರುತ್ತಲಿದೆ ಇದರ ಯುಕ್ತಾಯುಕ್ತತೆಯನ್ನು ನಾವು ವಿಚಾರಿಸಬೇಕು.

ಮದ್ರಾಸ್ ಪ್ರಾಂತದಲ್ಲಿ ಖಾಸಗೀ ಜನರು ಮೋಟಾರ ನಡೆಸಲು ಕೊನೆಯಪಕ್ಷ ೨೦ ವಾಹನಗಳನ್ನಾದರೂ ಇಡಬೇಕೆಂಬ ನಿಯಮವು ಕೆಲಕಾಲ ಜಾರಿಯಲ್ಲಿದ್ದಿತು. ಈಚೆಗೆ ೩ ಬಸ್‌ಗಳಿದ್ದರೆ ಸಾಕೆಂದು ಹೊಸ ಆಜ್ಞೆಯಾಗಿದೆ ಖಾಸಗಿ ಜನರು ನಡೆಸುವ ಸಂಸ್ಥೆಗಳಲ್ಲಿ ಭಂಡವಲವ ಕೊರತೆ, ತಜ್ಞರ ಅಭಾವ, ಅಲ್ಪಖರ್ಚಿನಿಂದ ಹೆಚ್ಚಿಗೆ ಲಾಭಸಂಪಾದಿಸಬೇಕೆಂಬುವ ಮನೀಷೆ ಇರುತ್ತವೆ. ಇದರಿಂದ ವಾಹನಗಳು ಒಳ್ಳೆಯ ಸ್ಥಿತಿಯಲ್ಲಿರುವುದಿಲ್ಲ. ಅಲ್ಪವೇತನದ ನೌಕರರಿರುವ ಕಾರಣ ಅವರು ಅಷ್ಟಪ್ರಾಮಾಣಿಕರಿರುವುದಿಲ್ಲ ಪ್ರಯಾಣೀಕರಿಗೆ ಅನೇಕಸಲ ಅತಿಶಯ ತೊಂದರೆಯಾಗುತ್ತೆ. ಗಾಡಿಗಳಲ್ಲಿ ಸೌಕರ್ಯ, ಜಾಗದ ಸರಿವೆಯಿಲ್ಲದೇ ಜನರನ್ನು ತುಂಬುತ್ತಾರೆ ದರಗಳು ಒಂದೇ ಸಮನಾಗಿರುವುದಿಲ್ಲ ಮನಬಂದಂತೆ ಹೆಚ್ಚಿಸುವರು ಟಿಕೆಟನಲ್ಲಿ ಬರೆಯುವುದೊಂದು, ಕೊಡುವುದೊಂದು ಆಗುತ್ತದೆ. ಗಾಡಿಗಳ ದೌರ್ಬಲ್ಯದಿಂದ ಅಪಾಯ ಘಟನೆಗಳಾಗುತ್ತವೆ. ಗಾಡಿಗಳನ್ನು ರಿಪೇರಿ ಮಾಡಿಸುವ ಮನಸ್ಸಿಲ್ಲ. ರಿಪೇರಿಮಾಡಿಸಬೇಕೆಂದರೂ ಹಣವಿಲ್ಲ

ಸರ್ಕಾರದವರು ಸಾರಿಗೆಯನ್ನು ವಹಿಸಿಕೊಂಡು ವ್ಯವಸ್ಥಿತ ಆಡಳಿತಕ್ಕೇರ್ಪಡಿಸಿದರೆ ಸಾರ್ವಜನಿಕರಿಗೆ ಅನುಕೂಲವಾಗುವುದು. ನಿಯಮಿತ ದರಗಳು, ನಿಯಮಿತ ವೇತನ, ಮುಖ್ಯ ಮುಖ್ಯ ಕೇಂದ್ರಗಳಲ್ಲಿ ಕಾಖಾ ನೆಗಳು ಜಾರಿಯಲ್ಲಿ ಬರಬೇಕು. ಪೋಲೀಸ್ ನಿಯಂತ್ರಣದಲ್ಲಿ ಪರಿವರ್ತನೆಯಾಗಬೇಕು. ಸರಕಾರದವರು ಆದಷ್ಟು ಜಾಗ್ರತೆ ವಾಹನಗಳನ್ನೆಲ್ಲಾ ತಮ್ಮ ಸ್ವಾಧೀನ ಪಡಿಸಿಕೊಂಡು ಸಾರಿಗೆಯ ಬಾಧ್ಯತೆಯನ್ನು ವಹಿಸಬೇಕು.

ಹರಪನಹಳ್ಳಿ ಸಾಹಿತ್ಯ ಸಮ್ಮೇಳನ

ಮೇ 7, 8, 9,

ಶ್ರೀ ಮದ್ರಂಭಾಪುರೀ ಸಿಂಹಾಸನದ ಪಟ್ಟಾಭಿಷೇಕ ಮಹೋತ್ಸವದ ಕಾರಣಕ್ಕಾಗಿ ಹರಪನಹಳ್ಳಿಯಲ್ಲಿನಡೆಯುವ 30 ನೆಯ ಸಾಹಿತ್ಯ ಸಮ್ಮೇಳನವು ಮೇ ತಿಂಗಳ 7, 8, 9, ಕ್ಕೆ ನಡೆಯುವುದೆಂದು ಉಪಾಧ್ಯಕ್ಷರಾದ ಡಾಕ್ಟರ್ ರಾಮರಾಯರು ತಿಳಿಸುತ್ತಾರೆ.

ಎಮ್ಮಿಗನೂರು

ಇಲ್ಲಿಯ ಹೈಸ್ಕೂಲು ಮತ್ತು ಹಾಸ್ಪೆಲ್ ಕಟ್ಟಡಗಳಿಗಾಗಿ ಎಸ್. ಕೈರುಫಳಪ್ಪನವರು 50000 ರೂ ವಾಯಿ ಶ್ರೀ ಮಾಚಾವಿ ಸೋವಪ್ಪನವರು 50000 ರೂ ಪಾಯಿ ದಾನವಾಗಿ ಕೊಟ್ಟಿರುವರು.

ಪಂಜಾಬ ಪರಿಹಾರನಿಧಿಗೆ ಕೊಡುಗೈಯಿಂದ ಸಹಾಯಮಾಡಿರಿ. ಅಲ್ಲಿ ಆಗಿರುವ ಅನರ್ಥವು ಅಪಾರವಾದುದು. ಕೊಲೆ, ಸುಲಿಗೆಗಳಿಗೆ ಲೆಕ್ಕವಿಲ್ಲ. ನಿರಾಶ್ರಿತರು ಲಕ್ಷಗಟ್ಟಲೆಯಾಗಿದ್ದಾರೆ. ಎಂದು ಕಾಂಗ್ರೆಸ ನಿಧಿ ಜಾಲಕರಾಗಿ ನಡುಗಾಲ ಸರ್ಕಾರದ ಮಂತ್ರಿಗಳೆಲ್ಲೊಬ್ಬರಾದ ಸರ್ದಾರ ವಲ್ಲಭಭಾಯಿ ಪಟೇಲರು ಒಂದು ಬಿನ್ನಹ ಪತ್ರಿಕೆಯನ್ನು ಹೊರಡಿಸಿರುವರು.

ಲಕ್ಷ್ಮಿ– ಸೆಹಗಲ ವಿವಾಹ

ಮದ್ರಾಸಿನ ಶ್ರೀಮತಿ ಅಮ್ಮುಸ್ವಾಮಿನಾಥನ್‌ರ ಮಗಳಾದ ಮತ್ತು ಸುಭಾಸಸೇನೆಯಲ್ಲಿ ಕ್ಯಾಪ್ಟನ್ ಲಕ್ಷ್ಮಿಯೆಂದು ಹೆಸರುಗೊಂಡ ಲಕ್ಷ್ಮಿಯ ವಿವಾಹವು ಲಾಹೋರ್ I. N. A. ಸೆಹಗಲ್‌ರವರೊಂದಿಗೆ ಕಳೆದವಾರ ನೆರವೇರಿತು.

ಮಹಾತ್ಮಗಾಂಧಿ

ಪೈಗಂಬರರ ವಚನಗಳು

ಕಾ. ೨೨ ಕ್ಕೆ ಚಾರಕೃಷ್ಣಪುರದಲ್ಲಿ ಪ್ರಾರ್ಥನೋತ್ತರ ಭಾಷಣದ ಪ್ರಾರಂಭಕ್ಕೆ ಬಲುಚಿಸ್ತಾನದ ಗೆಳೆಯರೊಬ್ಬರು ಪೈಗಂಬರರ ಮತ್ತು ಇತರ ಧರ್ಮ ಗುರುಗಳ ವಚನಗಳ ಹಸ್ತ ಪತ್ರಿಕೆಯನ್ನು ತಮಗೆ ಕಳಿಸಿದ್ದಾರೆಂದು ಗಾಂಧೀಜಿ ಹೇಳಿ ಅವುಗಳಲ್ಲಿ ಮಹಮ್ಮದರ ಕೆಳಗಿನ ವಚನವನ್ನು ಓದಿದರು.

"ದೇವರು ಭೂಮಿಯನ್ನು ಸೃಜಿಸಿದಾಗ ಅದು ಅತ್ತಿತ್ತ ಓಲಾಡಹತ್ತಿತು. ಅದನ್ನು ಅಚಲವಾಗಿರಿಸಲು ಅವನು ಪರ್ವತಗಳನ್ನು ಹೇರಿದನು. ಆಗ ದೇವತೆಗಳು ಕೇಳಿದರು, ಓ ಪರಮಾತ್ಮಾ, ನಿನ್ನ ಸೃಷ್ಟಿಯಲ್ಲಿ ಈ ಪರ್ವತಗಳಿಂದ ಬಲಿಷ್ಟವಾದುದೇನಾದರೂ ಇದೆಯೇ ಆಗ ದೇವರು ಉತ್ತರವಿತ್ತನು., ಈ ಪರ್ವತಗಳಿಂದ ಕಬ್ಬಿಣ ಬಲಿಷ್ಟ. ಏಕೆಂದರೆ ಅದು ಇವುಗಳನ್ನು ಒಡೆಯುತ್ತದೆ

ಹಾಗಾದರೆ ನಿನ್ನ ಸೃಷ್ಟಿಯಲ್ಲಿ ಕಬ್ಬಿಣಕ್ಕಿಂತ ಬಲಿಷ್ಟವಾದುದೇನಾದರೂ ಉಂಟೆ?

ಹೌದು, ಕಬ್ಬಿಣಕ್ಕಿಂತ ಬೆಂಕಿ ಬಲಿಷ್ಟ, ಅದನ್ನು ಇದು ಕರಗಿಸುತ್ತದೆ.

ಬೆಂಕಿಗಿಂತ ಬಲಿಷ್ಟವಾದುದೇನಾದರೂ ಉಂಟೆ?

ಹೌದು, ಗಾಳಿಯಿದೆ. ಅದು ನೀರನ್ನು ಚಲಿಸುವಂತೆ ಮಾಡುತ್ತದೆ.

ಹೇ ನಮ್ಮ ಸಂರಕ್ಷಕಾ, ಗಾಳಿಗಿಂತ ಬಲಿಷ್ಟವಾದುದೇನಾದರೂ ಉಂಟೆ?

ಹೌದು; ಭೀಕ್ಷೆನೀಡುವ ಧರ್ಮಾತ್ಮನಿರುವ ಬಲಗೈಯಿಂದ ಭಿಕ್ಷೆ ನೀಡಿ ಅದನ್ನು ಎಡಗೈಗೆ ತಿಳಿಸದಿದ್ದರೆ ಅವನು ಎಲ್ಲವನ್ನೂ ಗೆಲ್ಲುವ. ಸತ್ಕರ್ಮಗಳೆಲ್ಲವೂ ಧರ್ಮ. ನಿಮ್ಮ ಗೆಳೆಯನನ್ನು ಕಂಡಾಗ ನಸುನಕ್ಕರೆ, ದಾರಿಗನೊಬ್ಬನಿಗೆ ಸರಿದಾರಿ ತೋರಿಸಿದರೆ ನೀರಡಿಸಿದವನಿಗೆ ನೀರು ಕೊಟ್ಟರೆ ಅದು ಧರ್ಮಕೊಟ್ಟಂತೆಯೆ. ಮನುಷ್ಯನ ನಿಜವಾದ ಐಶ್ವರ್ಯವೆಂದರೆ ಪರೋಪಕಾರ. ಮನುಷ್ಯ ಸತ್ತಾಗ ಜನರು ಕೇಳುತ್ತಾರೆ ಏನು ಸೊತ್ತು ಬಿಟ್ಟು ಹೋಗಿದ್ದಾನೆಂದು. ಆದರೆ ದೇವತೆಗಳು ಕೇಳುವರು, ಏನು ಸತ್ಕರ್ಮ ಮಾಡಿದ್ದಾನೆಂದು ಸನ್ಮಾರಂಭಗಳೆಂದು ಅವರು ಬಗೆಯುತ್ತಾರೆ. ಜಗನ್ನಾಥ ದೇವಸ್ಥಾನದಲ್ಲಿ ಪ್ರಸಾದಾನ್ನವನ್ನು ಜಾತೀ ನೀತಿಗಳನ್ನೆಣಿಸದೆ ಸ್ವೀಕರಿಸುವಂತೆ. ಅಸ್ಪೃಶ್ಯತಾ ವಿರೋಧ ನಮ್ಮ ಜನರ ಸಾಮಾಜಿಕ ಜೀವನದಲ್ಲಿ ಅಳವಾಗಿ ಬೇರೂರಿಲ್ಲ. ಮಂದಿರ ಪ್ರವೇಶದಲ್ಲಿಯೂ ಒಂದು ಪ್ರಶ್ನೆಯುಂಟು. ಸ್ವತಂತ್ರ ಹಿಂದುಸ್ತಾನದಲ್ಲಿ ಸಾರ್ವಜನಿಕ ಸೇವೆಯಲ್ಲಿರುವ ಪೂಜಾರಿ ಪುರೋಹಿತರನ್ನು, ಹಿಂದಿನ ಜಾತಿಯನ್ನು ಎಣಿಸದೆ ಕೇವಲ ಯೋಗ್ಯತಾದೃಷ್ಟಿಯಿಂದ, ಆರಿಸಲಾಗುವದೆಂದು ನಿನ್ನಭಿಪ್ರಾಯವೆ?

ಉ— ನಾವುಶೂದ್ರರು ಬಹಳ ಜನರಿರುವ ಬಂಗಾಲದ ಈ ಭಾಗದಲ್ಲಿ ಇದು ಪ್ರಸಂಗೋಚಿತ ಪ್ರಶ್ನೆಯೆ ಸರಿ. ಎಲ್ಲರೂ ನನ್ನಂತೆ ಜಾತೀಯ ನಿಶ್ಚಣಿಕೆಯಲ್ಲಿ ವಿಶ್ವಾಸವನ್ನು ಕಳೆದೊಗೆದು ಆ ನಿಶ್ಚಣಿಕೆಯ ಅತಿ ಕೆಳಗಿನ ನೆಟ್ಟಲಲ್ಲಿ ಬಂದು ನಿಲ್ಲಬೇಕೆಂದು ಆಮಂತ್ರಿಸುವೆ. ಹಾಗಾದರೆ ಇಂಥ ಪ್ರಶ್ನೆಗಳಿಗೆ ಅವಕಾಶವೇ ಉಳಿಯುವದಿಲ್ಲ ಅದು ಸಾಧಿಸುವವರೆಗೆ ನಾನು ಈ ಸಮಸ್ಯೆಯನ್ನು ಎದುರಿಸಲೇ ಬೇಕು. ಜಾತಿಮೂಲವಾದ ಆ ಪಕ್ಷಪ್ರತೆಗಳನ್ನೆಲ್ಲ ರದ್ದುಗೊಳಿಸಿದಾಗಲೇ ಅಸ್ಪೃಶ್ಯತೆಯ ನಾಶವಾಗುವದೆಂದು ನಾನೊಪ್ಪುವೆ. ಆದರೂ ಅಸ್ಪೃಶ್ಯತಾ ನಿವಾರಣೆಯ ಕಾರ್ಯಕ್ರಮುಮಲ್ಲಿ ಮಂದಿರ ಪ್ರವೇಶಕ್ಕೆ ಪ್ರಥಮ ಸ್ಥಾನವಿದೆಯೆಂದು ನನ್ನ ದೃಢವಾದ ನಂಬಿಕೆ. ಅಸ್ಪೃಶ್ಯತಾರಾಕ್ಷಸನ ಸಂಹಾರವಾಗಬೇಕಾದರೆ ಸಾರ್ವಜನಿಕ ಭೋಜನಗಳು ಮೊದಲು ನಡೆಯಬೇಕು. ಬ್ರಿಟಿಶ ಆಳಿಕೆ ಅಳಿಯದಿದ್ದರೆ ಬ್ರಿಟಿಶ ಜಾತಿಯು ಹೇಗಾಲ್ಲದಾಗುವಂತೆ ಅಸ್ಪೃಶ್ಯತೆ ಅಳಿಯದೆ ಹೋದರೆ ಹಿಂದೂ ಧರ್ಮ ನಾಶಹೊಂದುವದೆಂದು ನಾನು ಭವಿಷ್ಯ ಹೇಳುವೆ,

ಇನ್ನೊಂದು ಪ್ರಶ್ನೆ ಆರ್ಥಿಕ ಸಮಾನತೆಯ ವಿಷಯಕ್ಕೆತ್ತು. ಸಮಾಜಕ್ಕೆ ಉಪಯುಕ್ತ ಸೇವೆಯೂ

ಡುವವರಿಗೆಲ್ಲರಿಗೂ ಅವರು ಭಂಗಿಗಳಿರಲಿ, ಡಾಕ್ಟರ ಎಂಜಿನಿಯರ, ಅಧ್ಯಾಪಕ, ಲೆಕ್ಕಿಗರಿರಲಿ, ಸಮಾನವಾದ ಸಂಬಳ ಸಿಗಬೇಕೆಂದು ನಿನ್ನ ಹೇಳಿಕೆಯೆ? ಹೀಗಾದರೆ ಎಂದಾದರೊಂದುದಿನ ಅಸ್ಪೃಶ್ಯತೆ ನಾಶವಾಗುವದೆಂದು ನಿನಗನಿಸುವದಿಲ್ಲವೇ? ಉತ್ತರ ಕೊಡುತ್ತ ಗಾಂಧೀಜಿ ಭಂಗಿ, ಡಾಕ್ಟರ, ಅಧ್ಯಾಪಕ ವ್ಯಾಪಾರಿಗಳೆಲ್ಲರಿಗೂ ಸಮಾನ ಪ್ರತಿಫಲ ದೊರೆತರೇ ಹಿಂದುಸ್ತಾನ ಜಗತ್ತೆಲ್ಲ ಅಸೂಯೆಪಡುವಂಥ ಸ್ವಾತಂತ್ರ್ಯವನ್ನು ಅನುಭೋಗಿಸಬಲ್ಲದೆಂದರು ಆ ಧ್ಯೇಯವನ್ನು ಪೂರ್ತಿ ಸಾಧಿಸುವುದು ಅಸಾಧ್ಯವಾದರೂ ಆ ದಿಶೆಯಲ್ಲಿ ಪ್ರಯತ್ನ ಮಾಡುವದು ಕರ್ತವ್ಯ. (ಕರ್ಮವೀರ)

ಕರ್ನಾಟಕದ ಕಣ್ಮಣಿಯಾದ ಕೆಚ್ಚೆದೆಯ ಕಡುಗಲಿಗಳ ದಿನಾಚರಣೆ

೧—೪—೧೯೪೭

ಹೂವಿನಹಡಗಲಿ ವಿದ್ಯಾರ್ಥಿ ಕಾಂಗ್ರೆಸ್ ಸಮಿತಿ ಸದಸ್ಯರಾದ ಪಾ. ಚಂದ್ರಶೇಖರ ಗೌಡರು ಹೀಗೆ ತಿಳಿಸುತ್ತಾರೆ.

ಆಗಸ್ಟ್ ಆಂದೋಲನದಲ್ಲಿ ಕರ್ನಾಟಕವು ಹಿಂದುಳಿಯದೆ ಹಿರಿದಾದ ಸೇವೆಯನ್ನು ಸಲ್ಲಿಸಿತು: ಎಂಬುದನ್ನು ತೋರಿಸಿಕೊಟ್ಟ ವೀರಾಗ್ರಣಿಗಳಲ್ಲಿ ಮುಹದೇವ ಮೈಲಾರರೂ ಒಬ್ಬರು. ಎಷ್ಟೋ ಭಾರತ ಪತರುಗಡು ಭಾರತಮಾತೆಯ ದಾಸ್ಯಜೀವನದ ಆರ್ತಧ್ವನಿಯನ್ನುಕೇಳಿ ಕನಿಕರದಿಂದ ಮರುಕಗೊಂಡು ಕಾಂಗ್ರೆಸ್ಸಿನ ಕರೆಗೆ ಓ ಗೊಟ್ಟು ಮಾತೆಯ ದಾಸ್ಯಜೀವನದ ಮುಕ್ತಿಗಾಗಿ ತಮ್ಮ ಅಮೂಲ್ಯವೂ ಪವಿತ್ರವೂ ಆದ ರಕ್ತವನ್ನು ಧಾರಾತೀರ್ಥವಾಗಿ ಹರಿಯಿಸಿ ಸ್ವಾತಂತ್ರ್ಯಕ್ಕಾಗಿ ತಮ್ಮ ಆತ್ಮಗಳನ್ನೇ ಬಲಿದಾನಮಾಡಿದರು. ಅಂತೆಯೇ ಮುಹದೇವ ಮೈಲಾರ, ವೀರಯ್ಯ, ತಿರುಕಪ್ಪ ಈ ಮೂವರ ಹೃದಯಾಂತರಾಳದಲ್ಲಿ ಕನ್ನತತನವು ಕುದಿಕುದಿದು. ಹೊರಹೊಮ್ಮಿ ಮಾತೆಯ ಮೋಕ್ಷಕ್ಕಾಗಿ, ಪರಕೀಯರ ದಬ್ಬಾಳಿಕೆಯಿಂದ ತಲ್ಲಣಿಸಿ, ತತ್ತರಿಸಿ ಹೋಗಿದ್ದ ಭಾರತದ ಭಾಗ್ಯೋದಯಕ್ಕಾಗಿ, ದಿನಾಂಕ ೧-೪-೧೯೪೩ ಉದಯಕ್ಕೆ ಹೊಸರಿತ್ತಿಯಲ್ಲಿ ಸಾಮ್ರಾಜ್ಯ ಶಾಹೀದೂತರಾದ ಪೋಲೀಸಿನವರ ಗುಂಡಿನೇಟಿಗೆ ತುತ್ತಾಗಿ, ತಮ್ಮ ಆತ್ಮಗಳನ್ನು ಸ್ವಾತಂತ್ರ್ಯದೇವಿಗೆ ಬಲಿದಾನಮಾಡಿದರು ಇಂಥ ಗಂಡುಗಲಿಗಳ ಸ್ವಾರ್ಥತ್ಯಾಗ, ಬಲಿದಾನ, ರಕ್ತತರ್ಪಣದಿಂದ ತಲೆಯೆತ್ತಿ ನಿಂತಿರುವ ಸ್ವತಂತ್ರ ಭಾರತ ಸಹೋದರರೇ ಕರ್ನಾಟಕದ ಕನ್ನಡಿಗರೇ ಮಹದೇವ ಮೈಲಾರ, ತಿರುಕಪ್ಪ ವೀರಯ್ಯ ಈ ಮೂರುಗಂಡುಗಲಿಗಳ ದಿನಾಚರಣೆ, ಏಪ್ರೀಲ್ ೧ ನೇ ತೇದಿ ಇರುತ್ತದೆ. ಪ್ರತಿಯೊಬ್ಬಕನ್ನಡಿಗನೂ ಹೆಮ್ಮೆ, ಅಭಿಮಾನದಿಂದ ಈ ಮೂವರದಿನಾಚರಣೆಯನ್ನು ಆಚರಿಸಿ ಕೃತಾರ್ಥರಾಗಬೇಕಾಗಿ ಪ್ರಾರ್ಥನೆ.

ಲೇಬರು ಉಪಾಧ್ಯಾಯರ ತಿಪ್ಪ ಮಂಡಳ

14 ನೆಯ ದಿನಾಂಕ ಬಳ್ಳಾರಿಜಿಲ್ಲ ಲೇಬರು ಶಾಲೋಪಾಧ್ಯಾಯರ ಪರವಾಗಿ ಹಿಂದಿನ ಸಭೆಯಲ್ಲಿ ನಿಶ್ಚಿತವಾದಂತೆ ಅಧ್ಯಕ್ಷರಾದ ಶ್ರೀ ಕೇಶವರಾಯರು ಕಾರ್ಮಿಕಶಕ್ತಿ ಜೋನಾಥನ್‌ರವರು, ಬೇವಿನಹಳ್ಳಿ ಸ್ಕೂಲ್ ಹೆ. ಮಾ. H. M. ಶಿದ್ದರಾಮಯ್ಯನವರು, ದೊಡ್ಡನಹಳ್ಳಿ ಶಾಲೆಯ ಗುರುಶಾಂತಯ್ಯನವರು ಸಂಗನಕಲ್ಲು ಹೆ. ಮಾ ದೇವದಾನಂರವರು, ಪುಲುಕುರ್ತಿ ಶಾಲೆಯ ಹುಸೇನ್ ಸಾಹೇಬರು ಕಲೆಕ್ಟರ್ ದರ್ಬಾರ್ ಹಾಲಿನಲ್ಲಿ ಕಲೆಕ್ಟರ್ ಶ್ರೀ ಕೆ. ಯನ್. ಅನಂತರಾಮನ್‌ರವರನ್ನು ಕಂಡರು. ಮೊಮೋರಾಂಡಮ್‌ನಲ್ಲಿ ಕಾಣಿಸಿದ ವಿಷಯಗಳಿಗೆ ಈ ಪ್ರಕಾರವಾಗಿ ಕಲೆಕ್ಟರವರು ಉತ್ತರ ಕೊಟ್ಟರು.

1) ಎಲ್ಲಾ ಉಪಾಧ್ಯಾಯರನ್ನು ಕಾಯಂಮಾಡುವ ವಿಷಯಕ್ಕೆ ಸರ್ಕಾರಕ್ಕೆ ಸಿಫಾರಸು ಮಾಡುವುದರಲ್ಲೇನೂ ಅಡ್ಡಿಯಿಲ್ಲ. ಆದರೆ ಅದಕ್ಕೆ ಪೂರ್ವದಾವು ಎಲ್ಲಾ ವಿವರಗಳನ್ನು ತಿಳಿದುಕೊಳ್ಳಬೇಕು. ೫ ವರ್ಷ

ಕ್ಕಿಂತಲೂ ಹೆಚ್ಚಿನ ಸವೀಸಿನವರನ್ನು ಕಾಯಂಮಾಡಬಹುದೆಂದು D. L. O. ರವರು ತಮ್ಮ ಅಭಿಪ್ರಾಯ ಸೂಚಿಸಿದರು.

2) ಮಧ್ಯಾನದ ಊಟಕ್ಕಾಗಿ ತಲೆಗೆ 4 ಆಣೆ ಏರಿಸುವುದು ಸಾಧ್ಯವಿಲ್ಲ. ಈಗ ಇರುವ 0-1-9 ಇಂದ 0-2-0 ಗೇರಿಸಿ 6 ದಿವಸಗಳೂ ಊಟಕೊಡಬಹುದೆಂದು ಸಿಫಾರಸು ಮಾಡಬಹುದು. ಶಾಲೆಯ ರೋಗಿಮಕ್ಕಳಿಗೆ ಕಜ್ಜಿ ಮಲೇರಿಯಾ ಔಷದ, ಕಣ್ಣಿಗೆ ಪಟಿಕದ ನೀರು ಒದಗಿಸಬಹುದು.

3) ಸ್ಕೇಲ್ ಆಫಾಪೇ ಇಂಕ್ರಿಮೆಂಟು ಟಿ. ಎಬಿಲ್ಲುಗಳ ಬೇಡಿಕೆಗಳನ್ನು ಸಾಧ್ಯವಾದಷ್ಟು ಜಾಗ್ರತೆ ಇತ್ಯರ್ಥ ಪಡಿಸಲಾಗುವದು. ಸದ್ಯಕ್ಕೆ ಈಕೆಲಸ ಜಾರಿಯಲ್ಲಿದೆ.

4) ಸರ್ಕಾರಕ್ಕೆ ಖರ್ಚಿಲ್ಲದೆ ಪರಸ್ಪರ ರಾಜಿಯಿಂದ ವರ್ಗವಾಗಲು ಇಚ್ಛೆಪಡುವವರನ್ನು D. E. O. ರವರ ಒಪ್ಪಿಗೆ ಪಡೆದು ವರ್ಗಾಯಿಸಬಹುದು.

5) ಲೇಬರ್ ಶಾಲೆಗಳಿಗೆ ಕಂಟಿನ್‌ಜನ್ಸಿ ಹೆಚ್ಚಿಸುವ ವಿಚಾರ ಸಾನುಭೂತಿ ಪೂರ್ವಾಗಿ ಆಲೋಚಿಸಲಾಗುತ್ತದೆ.

6) ಲೇಬರ್ ಶಾಲೆಗಳಲ್ಲಿ ಕೆಲಸಮಾಡಿ ಊನ ಆದವರಿಗೆ ಪುನಃ ಖಾಲಿಬಿದ್ದಾಗ ಕೆಲಸಕೊಡಬಹುದಾದ ತತ್ವವನ್ನು ತಪ್ಪದೇ ಅಂಗೀಕರಿಸುತ್ತೇವೆ.

7) ಆಹಾರ, ಬಟ್ಟೆಗಳಿಗೆ ಎಲ್ಲಾ ಕಡೆಗಳಲ್ಲೂ ಕೊರತೆಯಿದೆ. ಉಪಾಧ್ಯಾಯರಿಗೆ ಪ್ರತ್ಯೇಕವಾಗಿ ನಿಯಮಗಳನ್ನು ಬದಲಿಸಲು ಸಾಧ್ಯವಿಲ್ಲ.

8) ಪ್ರತಿ ತಿಂಗಳು 10 ನೇ ತಾರೀಕುನೊಳಗಾಗಿ ಸಂಬಳ ಮುಟ್ಟುವಂತೆ ಮಾಡಲು D. L. O. ರವರಿಗೆ ತಿಳಿಸುತ್ತೇನೆ.

9) ಉಪಾಧ್ಯಾಯರಾಗಿ ಕೆಲಸಮಾಡಿ ಈಗ ಗತಿಸಿದ ಲಕ್ಷ್ಮಪ್ಪ ಮತ್ತು ಹನುಮಂತಪ್ಪ ಇವರ ಕುಟುಂಬಗಳಿಗೆ G. P. F. ಅಲವೆನ್ಸ್ ಕೊಡಿಸುವುದು ಶ್ರೇಶ್ರೇಯಸ್ಕರವಾಗುತ್ತೆ.

10) D. L. O. ರೇ ಇನ್ನುಮೇಲೆ ಫಾರಂಗಳನ್ನು ತರಿಸಿ G. P. F. ಕಟ್ಟಲಿಚ್ಛಿಸುವವರಿಗೆ ಸೌಕರ್ಯಗಳನ್ನೇರ್ಪಡಿಸುವರು.

11) ಸಸ್ಪೆಂಡಾದ ಉಪಾಧ್ಯಾಯರಿಗೆ ¼ ಭಾಗದ ಪೇ ಕೊಡುವ ವಿಷಯ ಆಲೋಚಿಸಲಾಗುತ್ತೆ. ಅಲ್ಲದೆ ಅವಧಿ ಮುಗಿದ ತಕ್ಷಣವೇ ಅವರನ್ನು ಬೇರೊಂದೆಡೆಗೆ ವರ್ಗಾಯಿಸಲು ಏರ್ಪಡಿಸಲಾಗುವುದು.

Woolen Coatings, Silk Sarees, Benares and other latest designs Handloom and Mill made Clothes Etc.,
Colours Guaranteed, Prices very reasonable. Trial Solicited.

G. GOPAL SING & SON.,
CLOTH MERCHANT
No. 15 Old Market BELLARY.
ಜಿ. ಗೋಪಾಲ ಸಿಂಗ್ ಅಂಡ್ ಸನ್,
ಜವಳಿ ವ್ಯಾಪಾರಿ, ನಂ. 15
ಹಳೇ ಮಾರ್ಕೆಟ್, ಬಳ್ಳಾರಿ.

ಉಲನ್ ಕೋಟಿಂಗ್ ಬಟ್ಟೆ, ಬನಾರಸ್ ಜರಿ ಶಿಲ್ಕು-ಟಿಶ್ಯು ಸೀರೆ ಜಾಕೆಟ್ ಲೇಸ್ ಬಾರ್ಡರ್ ಮತ್ತು ಇತರ ಅನೇಕ ವಿವಿಧ ಅತ್ಯಂತ ಆಧುನಿಕ ಉಡುಪಿನ ಬೇಡಿಕೆಯನ್ನು ನಾವು ಪೂರೈಸಲಿದ್ದೇವೆ. ಕೈ ಮಗ್ಗದ ಮಿಲ್ ಬಟ್ಟೆಗಳು ವಿಧಾಯಕ ಬೆಲೆಗೆ ದೊರೆಯುತ್ತವೆ. ಬಣ್ಣ ಗ್ಯಾರಂಟಿ, ಬೆಲೆ ಸರಿಯಾದ್ದು. ಪರೀಕ್ಷಿಸಿ ಮನಗಾಣಿರಿ.

ಪಂಡಿತ ಜವಹರಲಾಲರು ಪಂಜಾಬಿನ ಗಲಭೆ ಪ್ರದೇಶಗಳಲ್ಲಿ ಸಂಚರಿಸಿ ಮಿಲಿಟರಿ ಅಧಿಕಾರಿಗಳೊಂದಿಗೂ ಇತರ ಹಿಂದು ಮುಸಲ್ಮಾನ ಮುಖಂಡರೊಂದಿಗೂ ಕಲೆತು ಶಾಂತಿಯತ್ನವನ್ನು ಮಾಡಿದರು.

ಹಳ್ಳಿಗರಿಗೆ ಬಟ್ಟೆ ಏಕೆ ಕನಸೆ?

ಕಲೆಕ್ಟರ್ ಮತ್ತು ಎ. ಐ. ಟಿ ಸಿ ಯವರು ಉತ್ತರ ಕೊಡುವರೇ?

ಒಬ್ಬ ಬಾತ್ಮಿದಾರರು ಹೀಗೆ ಬರೆಯುತ್ತಾರೆ—ನವಭಾರತದ ಕಳೆದ ಸಂಚಿಕೆಯಲ್ಲಿ ಪಟ್ಟಣಗಳಲ್ಲಿರುವ 2½ ಲಕ್ಷ ಜನರಿಗೆ ದೊಡ್ಡವರಿಗೆ 2 ಗಜ ಚಿಕ್ಕವರಿಗೆ 1 ಗಜ ಬಟ್ಟೆಯನ್ನು ತಾತ್ಕಾಲಿಕವಾಗಿ ಹಂಚಲಾಗಿದೆಯೆಂದೂ, ಇನ್ನು ಹಳ್ಳಿಗಳಲ್ಲಿ ಉಗಾದಿ ಹಬ್ಬದೊಳಗಾಗಿ ಇನ್ನುಳಿವ ಜಿಲ್ಲೆಯ 9 ಲಕ್ಷ ಜನರಿಗೆ ಈಸ್ರ ಕಾರ ಹಂಚಲಾಗುವುದೆಂದೂ ಸೂಚಿಸಿರುವಿರಿ. ಬಹಳ ಸಂತೋಷ. ಆದರೆ ನೀವು ಸೂಚಿಸುವಂತೆ ಇರುವ ೨½ ಲಕ್ಷ ಗಜ ಬಟ್ಟೆಯು 9 ಲಕ್ಷ ಜನರಿಗೆ ಹೇಗೆ ಸಾಕಾಗುತ್ತದೆ? ಪಟ್ಟಣದ ಕಡೆಗಳಿಂದ ಹಳ್ಳಿಗಳ ಪ್ರದೇಶಕ್ಕೆ ಮಾರಲು ಬಂದ ವ್ಯಾಪಾರಿಗಳೊಡನೆ ಹೊಡದಾಟಗಳಾಗಿವೆ. ಕೊಟ್ಟರೆ ಎಲ್ಲರಿಗೂ ಸಮನಾಗಿ ಕೊಡಬೇಕು ಹಾಗೆ ಮಾಡಲು ಸಾಧ್ಯವಿಲ್ಲವಾದರೆ ಸುಮ್ಮನಾಗಬೇಕು.— ಟೆಕ್ಸ್‌ಟೈಲ್ ಆಫೀಸರೇ ಒಪ್ಪಿಕೊಳ್ಳುವಂತೆ ಹಳ್ಳಿಗಳಿಗೆ ಕಳೆದ ಐರು ತಿಂಗಳಿಂದ ಬಟ್ಟೆಯು ಪೂರೈಕೆ ಇಲ್ಲ. ಕೆಲ ಹಳ್ಳಿಗರು ಕಳೆದ ಒಂದು ವರ್ಷದಿಂದಲೂ ಬಟ್ಟೆಯನ್ನು ಕಂಡಿಲ್ಲ ಹೀಗಿದ್ದೂ ಕೊಡುವ ೧ ಗಜ ೨ ಗಜ ಬಟ್ಟೆಯಾದರೂ ಎಲ್ಲರಿಗೂ ಬರದಿದ್ದರೆ ಏನು ಮಾಡಬೇಕು? ಹಳ್ಳಿಗರ ದುರ್ದೈವವೆನ್ನಬೇಕು. ಪ್ರಜಾ ಸರ್ಕಾರದ ಕಾಲದಲ್ಲೂ ಹಳ್ಳಿಗರನ್ನು ದುರ್ಲಕ್ಷಿಸಿ ತುಳಿಯುತ್ತಿರುವುದು, ದೇಶದ ಭಾವೀ ಕಲ್ಯಾಣಕ್ಕೆ ಶುಭದಾಯಕವಾದುದಲ್ಲ.

ಪಟ್ಟಣಗಳಿಗೇ ಎಲ್ಲಾ ಸೌಕರ್ಯಗಳನ್ನೊದಗಿಸಿ ಕೊಡುತ್ತಿರುವರು. ರೂಪಾಯಿಯಲ್ಲಿ ಹದಿನೈದಾಣೆ ಭಾಗ ವ್ಯಾಪಾರಿಗಳು ಪಟ್ಟಣಗಳಲ್ಲೇ ಇರುವರು. ಬ್ಲಾಕ್‌ಮಾರ್ಕೆಟಿನಲ್ಲಿ ಹೇರಳವಾಗಿ ಹಣವನ್ನು ಸಂಪಾದಿಸಿದವರು ಅತಿಶಯವಾಗಿ ಹೆಚ್ಚಿನ ಬೆಲೆಯಿಂದ ಕತ್ತಲೆಸೀಟಿಯಲ್ಲಿ ಬಟ್ಟೆ ಕೊಳ್ಳುವರು. ಜೊಬ್ಬಾಟ ಏಡುವವರೆಲ್ಲಾ ಪಟ್ಟಣಗಳಲ್ಲಿದ್ದಾರೆ. ಅವರಿಗೆ ಆಹಾರ ಧಾನ್ಯ, ಔಷದೋಪಚಾರ, ವಿದ್ಯಾಭ್ಯಾಸ, ವಗೈರೆಎಲ್ಲ ಸೌಕರ್ಯಗಳು ಅಧಿಕಾರಿಗಳ ಕೃಪಾಛತ್ರದಲ್ಲಿ ಸಾರೋದ್ಧಾರವಾಗಿ ನಡೆದಿವೆ. ಒಂದು ಕಣ್ಣಲ್ಲಿ ಎಣ್ಣೆ, ಒಂದರಲ್ಲಿ ಸುಣ್ಣ. ಹೇಳುವುದೊಂದು, ಮಾಡುವುದೊಂದು ಗ್ರಾಮೋದ್ಧಾರವು ಆಗಬೇಕು. ಹೇಗಾಗಬೇಕೋ ದೇವರೇಬಲ್ಲ.

ನಮಗೆಲ್ಲಾ ಬಟ್ಟೆಯನ್ನು ಯಾವಾಗ ಪೂರೈಸುವರೆಂಬುದನ್ನು ಕಲೆಕ್ಟರವರೂ, A. I. T. C. ಯವರು ದಯವಿಟ್ಟು ತಿಳಿಸುವರೇ?

—: ಒಬ್ಬ ಹಳ್ಳಿಯವ :—

ಬಳ್ಳಾರಿ ಉಪಚುನಾವಣೆ.

ಮುಸ್ಲಿಂಲೀಗಿಗೆ ಜಯ

ಜನಾಬ್ ಅಬ್ದುಲ ರಾವುಫ್ ಸಾಹೇಬರವರ ಮರಣದಿಂದ ಖಾಲಿಬಿದ್ದ ಬಳ್ಳಾರಿ ಜಿಲ್ಲಾ ಮುಸ್ಲಿಂ ಸ್ಥಾನಕ್ಕೆ ಉಪಚುನಾವಣೆಯು ೧೦ ನೆಯ ದಿನಾಂಕ ನಡೆದು ೧೨ ನೇ ತಾರೀ ಫಲಿತಾಂಶವು ಹೊರಬಿದ್ದಿತು.

ಜಿ॥ ಹಾಜಿಮುಹಮ್ಮದ್ ಇಸ್ಮಾಯಿಲ್ (ಲೀಗ) 6941
ಜಿ॥ ಎಸ್. ಅಬ್ದುಲರಜಾಕ್ (ಜಿಲ್ಲಾಲೀಗ) 6562.

ನಿರುಪಯುಕ್ತ ಮತಗಳು 9

ಲೀಗ್ ಉಮೇದುವಾರರಿಗೆ ಆದವಾನಿ- ಹೊಸಪೇಟೆನಗರ ಮತ್ತು ತಾಲೂಕುಗಳಿಂದ 6000 ಮತಗಳು ದೊರೆತವು. ಸ್ವತಂತ್ರ ಹುರಿಯಾಳುವಿಗೆ ಇನ್ನು ಉಳಿದ 7 ತಾಲೂಕುಗಳಲ್ಲಿ ಬಹಳ ಹೆಚ್ಚಿನ ಮತಗಳು ಬಿದ್ದವು. ಚುನಾವಣೆಯ ಪ್ರಚಾರವು ಒಳ್ಳೇತುರುಸಿನಿಂದ ನಡೆಯಿತು. ಸಾರ್ವಜನಿಕಾಭಿಪ್ರಾಯವು ಜಿಲ್ಲೆಯುದ್ದಕ್ಕೂ ದೂರ ಪ್ರದೇಶಗಳ ಹಳ್ಳಿಗಳಿಂದ ಗಮನಿಸಲ್ಪಟ್ಟು ಮುನ್ನಣೆ ಪಡೆಯುವಂತಿದ್ದರೆ (Democracy) ಜ. ಅಬ್ದುಲ್ ರಜಾಕರು ಸೋತರೆಂದು ಹೇಳಲ್ಲಿಕ್ಕೆ ಬರುತ್ತಿದ್ದಿಲ್ಲ. ಎರಡು ಪಟ್ಟಣಗಳಲ್ಲಿ ಮಾತ್ರ ಲೀಗ್ ಹುರಿಯಾಳುವಿಗೆ ಬೆಂಬಲ ದೊರೆತಿದ್ದೆ ಅವರ ಎದುರಾಳಿಗೆ ಜಿಲ್ಲೆಯ 7 ತಾಲೂಕುಗಳ ಹಳ್ಳಿ ಪ್ರದೇಶದಿಂದ ಬೆಂಬಲ ದೊರೆತಿದೆ.

150

ವಿದ್ಯಾರಣ್ಯ ವಿಜ್ಞಾನ ಸಮಿತಿ.— (೩ ನೆಯ ಪುಟದಿಂದ ಮುಂದುವರಿದುದು)

ನಿಯಮ ನಿಬಂಧನೆಗಳು:— ಈ ಕೆಳಗೆ ಕಾಣಿಸಿದ ಮೌಲ್ಯವನ್ನು ಕೊಡುವವರು ಸದಸ್ಯರಾಗಿ ಗಣಿಸಲ್ಪಡುವರು

೧. **ಸಾಮಾನ್ಯ ಸದಸ್ಯ:**— ವಾರ್ಷಿಕವಾಗಿ ರೂ ೩/- ಕೊಡುವವರು.

೨. **ಜೀವಾವಧಿ ಸದಸ್ಯ:**— ೧೦೦ ರೂ, ಅಥವಾ ಅದಕ್ಕಿಂತ ಹೆಚ್ಚು ಹಣ ಸಲ್ಲಿಸುವವರು.

೩. **ಆಶ್ರಯದಾತ:**— ೧೦೦೦ ರೂ, ಅದಕ್ಕೆ ಹೆಚ್ಚಿನ ಹಣ ಅಥವಾ ಆಸ್ತಿಯನ್ನು ಕೊಡುವವರು.

೪. **ರಾಜಪೋಷಕ:**— ೫೦೦೦ ರೂ, ಅಥವಾ ಅದಕ್ಕೆ ಹೆಚ್ಚಿನ ಹಣ ಅಥವಾ ಆಸ್ತಿಯನ್ನು ಕೊಡುವವರು

೫. **ಅಭಿಮಾನಿ:**— ಮೇಲ್ವಾಣಿಸಿದ ಯಾವುದಾದರೊಂದು ತರಗತಿಯ ಹಣ ಅಥವಾ ಆಸ್ತಿಯನ್ನು ಸಲ್ಲಿಸಿ ಸದಸ್ಯರಾಗಲು ಇಚ್ಛೆ ಇಲ್ಲದೆ ಉಳಿದವರು ಅಭಿಮಾನಿಗಳಾಗುವರು

ಮುಖ್ಯಕಾರ್ಯಾಲಯ:— ರಿಜಿಸ್ಟರಾದ ಸಮಿತಿಯ ಮುಖ್ಯಕಾರ್ಯಾಲಯವು ಹೊಸಪೇಟೆ ಸಬ್‌ರಿಜಿಸ್ಟ್ರಾರ್ ಆಫೀಸ್ ಎಳಿ ಇರುವ ಟೌನ್‌ಹಾಲ್ ರೂಂ ಸಲ್ಲಿರುವುದು ಶಾಖಾಕಾರ್ಯಾಲಯವು ಹಂಪೆ ಬಾಜಾರದಲ್ಲಿನ ಹೇಮಕೂಟಾಶ್ರಮದಲ್ಲಿ ನಡೆಸಲ್ಪಡುವುದು.

ಸಂಘಟನೆ:— ಸದಸ್ಯರಾಗಿ ಸೇರಿದವರು ಸಮಿತಿಯ ಸಾಮಾನ್ಯಕರ್ತರು ಮೊದಲನೆಯ ವರ್ಷದ ಕಾರ್ಯಕಾರೀ ಮಂಡಲವು ಮೇಲ್ವಾಣಿಸಿದ ಮಹನೀಯರಿಂದ ಕೂಡಿರುವುದಾಗಿದೆ ಈ ಸಂಘದ ಆಸ್ತಿಗಳೆಲ್ಲಾ, ಸಂಘದ ವರ ಅಧಿಕಾರವನ್ನು ಒಳಗಿಟ್ಟುವೆ. ಕಾರ್ಯಕಾರೀ ಸಮಿತಿಯಲ್ಲಿ ೭ ಮಂದಿ ಕಾರ್ಯಕರ್ತರು ಇರುವರು. ಜೀವ ಸದಸ್ಯರು, ಸಾಮಾನ್ಯ ಸದಸ್ಯರು ಮತ್ತು ಆಶ್ರಯದಾತರಿಂದ ಆಯ್ಕೆಯಾದ ೫ ಮಂದಿ ಹೆಚ್ಚು ಸದಸ್ಯರನ್ನು ಇವರೊಂದಿಗೆ ಸೇರಿಸಿಕೊಳ್ಳಬಹುದು

ನಿಧಿ:— ಸಂಘದ ಸಹಾಯಾರ್ಥವಾಗಿ ಜೀವಾವಧಿ ಸದಸ್ಯರು ಮತ್ತು ಪೋಷಕರಿಂದ ವಸೂಲಾದ ಹಣವನ್ನು ರಾಯಲಸೀಮ ಬ್ಯಾಂಕಿನಲ್ಲಿ **ಕ್ಷೇಮನಿಧಿಯಾಗಿ** ಠೇವಣಾತಿ ಇಡಲಾಗುವುದು ಈ ನಿಧಿಯಮೇಲೆ ಜಿಲ್ಲಾ ಕೋಶಾಧಿಕಾರಿಗೆ ಮಾತ್ರ ವ್ಯವಹಾರದ ಹಕ್ಕು ಇರುವುದು ಸದಸ್ಯರಿಂದಲೂ, ಸಹಾಯಕರಿಂದಲೂ ವಸೂಲಾದ ಮೊತ್ತವನ್ನೆಲ್ಲ ಹೊಸಪೇಟೆ ಪೋಸ್ಟಾಫೀಸಿನ ಸೇವಿಂಗ್ಸ್ ಬ್ಯಾಂಕದಲ್ಲಿ ಠೇವಣಾತಿ ಮಾಡಿ ಇಡಲಾಗುವುದು ಸ್ಥಾನಿಕ ಕೋಶಾಧಿಕಾರಿಯು ಈ ಮೊತ್ತದ ವ್ಯವಹಾರಕರ್ತನಾಗಿರುವನು.

ಕಾರ್ಯಕಾರೀ ಸಮಿತಿ:— ಈ ಸಭೆಯು ತಿಂಗಳಿಗೊಂದುಸಲ ಸಮಾವೇಶವಾಗಬೇಕು ಸಭೆ ನಡೆಯಲು ಕನಿಷ್ಠ ಸಮಿತಿಯ ಸದಸ್ಯರಲ್ಲಿ ಐದುಮಂದಿ ಹಾಜರಿರಬೇಕು ಈ ಸಮಿತಿಯು ಸಂಸ್ಥೆಯ ಯೋಗ್ಯ ವ್ಯವಸ್ಥೆಗಾಗಿ ಅಗತ್ಯಕಂಡ ಹೊಸನಿಯಮಗಳನ್ನು ಮಾಡಿ ಸಾಮಾನ್ಯ ಸಭೆಯಲ್ಲಿಟ್ಟು ಮುಂಜೂರು ಮಾಡಿಸಿಕೊಳ್ಳಬೇಕು.

ವರ್ಷಕ್ಕೊಂದುಸಲ ಸಾಮಾನ್ಯವಾಗಿ ಹಂಪಿ ಚಾತ್ರೆಯ ಒಂದು ದಿನದ ಮುಂಚೆ ಸಾಮಾನ್ಯ ಸಭೆಯು (General Body) ಸಮಾವೇಶವಾಗಿ ಸಂಘದ ವರದಿ ಪರಿಶೋಧಿತ ಲೆಕ್ಕಗಳನ್ನು ವಿಮರ್ಶಿಸುವುದು ವಾರ್ಷಿಕ ವರ್ಧಂತಿಯು ಇದೇ ಸಮಯದಲ್ಲಿ ಆಚರಿಸಲ್ಪಡುವುದು. ಈ ಸಭೆಯ ಸಮಾವೇಶಕ್ಕೆ ಕನಿಷ್ಠ ಸಂಖ್ಯೆಯು ೧೫ ಇರಬೇಕು

The Rayalaseema Bank Limited, Bellary.
ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:— ಬಳ್ಳಾರಿ ಜಿಲ್ಲಾ:- ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ, ಬಳ್ಳಾರಿ, ಹಡಗಲಿ, ಕೂಡ್ಲಿಗಿ, ಆದವಾನಿ **ಅನಂತಪುರ:-** ಅನಂತಪುರ, ಬೆಳಗುಪ್ಪ, ಧರ್ಮಾವರಂ, ಕದಿರಿ, ಪಾವಿಡಿ, ತಿಮ್ಮನಚೆರ್ಲ, ಉರವಕೊಂಡ, ಹಿಂದೂಪುರ, ಗುತ್ತಿ. **ಕರ್ನೂಲು:-** ಕರ್ನೂಲು ಪತ್ತಿಕೊಂಡ.
ಕಡಪ:- ರಾಜಂಪೇಟೆ, ಕಡಪ. **ಚಿತ್ತೂರು:-** ಚಿತ್ತೂರು, ಮದನಪಲ್ಲಿ, ತಿರುಪತಿ, ನಾಗರಿ, ವಾಯಲ್ಪಾಡು

ಫಿಕ್ಸಡ್ ಡಿಪಾಜಿಟ್‌ನ ಬಡ್ಡೀದರ: - 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2ವರ್ಷಗಳಿಗೆ 3½%.
ಕರೆಂಟು ಅಕೌಂಟು: 1%, **ಸೇವಿಂಗ್ಸ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.
ಮಾಸಿಕ ಸ್ಕಾವಿಡೆಂಟ್ ಫಂಡ ಡಿಪಾಜಿಟ್:- 3%. **ಬಿ. ವಿ. ಶೇಷಗಿರಿರಾವ್, ಕಾರ್ಯದರ್ಶಿ.**

Vidyaranya Vignana Samiti
HAMPI (H. O. HOSPET)

The first anniversary of the above Association will be held at Hampi on 4-4—1947 at 4 P. M. i e. a day in advance of the Hampi Car Festival when research workers in Kanarese will speak on the glory and grandeur of Vijayanagar Empire with special reference to the works of Sri Vidyaranya. All are cordialy invited to attend the function

M. Tirumalachar, T H. M. Gurusaakraiah, Secretaries. } Shankaraanda Swamy, President

ವಿದ್ಯಾರಣ್ಯ ವಿಜ್ಞಾನಸಮಿತಿ ಹಂಪಿ
ಮುಖ್ಯಕಾರ್ಯಾಲಯ-ಹೊಸಪೇಟೆ

ಪ್ರಥಮ ವಾರ್ಷಿಕೋತ್ಸವವು 4-4-1947 ನೆಯ ದಿನಾಂಕ ಶುಕ್ರವಾರ ಸಾಯಂಕಾಲ ಅಂದರೆ ಹಂಪಿವಿರೂಪಾಕ್ಷೇಶ್ವರ ರಥೋತ್ಸವಕ್ಕೆ ಒಂದುದಿನ ದಮುಂಚೆ ಪುರಾತನ ಹಂಪಿಯಲ್ಲಿ (ರಾಜಬೀದಿ) ನೆರವೇರುವುದು. ವಿಜಯನಗರ ಸಾಮ್ರಾಜ್ಯದ ಗತವೈಭವ, ಮತ್ತು ಸಂಸ್ಥಾಪಕ ಶ್ರೀ ವಿದ್ಯಾರಣ್ಯರ ಕೃತಿಗಳ ವಿಷಯವನ್ನು ಕುರಿತು ಕರ್ನಾಟಕದ ಸುಪ್ರಸಿದ್ಧ ಪರಿಶೋಧಕರು ಉಪನ್ಯಾಸಕೊಡಲಿರುವರು. ಈಮಹೋತ್ಸವಕ್ಕೆ ಎಲ್ಲರು ಆಗಮಿಸಲು ಕೋರುತ್ತೇವೆ.

ಶಂಕರಾನಂದ ಸ್ವಾಮಿ **ಅಧ್ಯಕ್ಷ**
ಮೈದೂರು ತಿರುಮಲಾಚಾರ್ಯ } **ಕಾರ್ಯದರ್ಶಿಗಳು**
ಟಿ. ಯಚ್. ಯಂ. ಗುರುಶಂಕರಯ್ಯ }

ಪಂಜಾಬಿನ ಗಲಭೆಗೆ ರಾಜಕೀಯವೇ ಕಾರಣವೆಂದು ಸಂತ್ರಸ್ತ ಪ್ರದೇಶಗಳಲ್ಲಿ ಸಂಚರಿಸಿ ಬಂದ ಪಂಡಿತ ಜವಹರಲಾಲರು ವ್ಯಕ್ತ ಪತ್ರಿಕೋದ್ಯೋಗಿಗಳ ಸಭೆಯಲ್ಲಿ ಹೇಳಿದರು.

152

Guarranteed Pure Pyra Gingelly oil

Best for Pickles, Cooking & Cooling

DISTRIBUTORS:—

1 M/S V. M. GIRI & SONS,
(Pro:- M, S Acharya) Car Street, Bellary
2 M/S. . HUSANJEE RAO, M VENKOJI RAO
General Merchants, Car Street Bellary.

ಶುದ್ಧ! ಗ್ಯಾರಂಟಿಯಾದ್ದು !! ಸತ್ಕಾರಿ !!!

—ಪೈರ ಎಳ್ಳೆಣ್ಣೆ—

ಕಣ್ಣಿಗೆ ಬಹಳ ತಂಪಾದ್ದು. ಅಡಿಗೆಯ ಎಲ್ಲಾ ಪದಾರ್ಥಗಳಿಗೆ ಬಳಸಲು ಶ್ರೇಷ್ಠವಾದ ಎಣ್ಣೆಯಿದು. ಉಪ್ಪಿನಕಾಯಿಗೆ ಈ ಎಣ್ಣೆಯನ್ನು ಉಪಯೋಗಿಸುವದರಿಂದ ಬಹಳಕಾಲ ಕೆಡದಂತಿಡಬಹುದು.

ಹಂಚಲಧಿಕಾರ ಉಳ್ಳವರು. 1) ಎ ಎಂ ಗಿರಿ ಆಂಡ್ ಸನ್ಸ್-ತೇರು ಬೀದಿ, ಬಳ್ಳಾರಿ. (ಎಂ. ಎಸ್. ಆಚಾರ್ಯ)
2) ಎಂ. ಹುಸೇಂಜೀರಾವ್, ಎಂ ವೆಂಕೋಬರಾವ್. ತೇರುಬೀದಿ, ಬಳ್ಳಾರಿ.

ಸು ಭಾ ಸ್

ರಾ ಷ್ಟ್ರ ಗೀ ತೆ.

ಸಿದ್ಧವಾಯಿತು— ಕ್ರಯ ೦—೮—೦

ಸುಂದರ ಮುದ್ರಣ— ಇಲ್ಲಿಯವರೆವಿಗೆ ಪ್ರಭಾತ ಫೇರಿ, ರಾಷ್ಟ್ರೀಯ ಸಮಾವೇಶಗಳಲ್ಲಿ ಹಾಡಲ್ಪಟ್ಟ ಎಲ್ಲಾ ಮುಖ್ಯ ದೇಶಭಕ್ತ ಕವಿಗಳ ಕನ್ನಡ ಮತ್ತು ಹಿಂದೀ ಭಾಷೆಯಲ್ಲಿನ ರಾಷ್ಟ್ರಗೀತೆಗಳ ಸಮಗ್ರ ಸಂಗ್ರಹ. ಕರ್ನಾಟಕದಲ್ಲಿ ರಾಷ್ಟ್ರ ಗೀತೆಗಳ ಇಷ್ಟುದೊಡ್ಡ ಸಂಗ್ರಹವು ಇದುವರೆಗೆ ಪ್ರಕಟವಾಗಿಲ್ಲ. ಸ್ವಲ್ಪೇ ಪ್ರತಿಗಳು ಪ್ರಕಟವಾಗಿವೆ. ಹೆಚ್ಚು ಕೊಳ್ಳುವವರಿಗೆ ಕಮಿಷನ್ ಕೊಡಲಾಗುತ್ತದೆ.

'ನವಭಾರತ' ಕಾರ್ಯಾಲಯ ಬಳ್ಳಾರಿ.

—ರಾಷ್ಟ್ರೀಯ ಪುಸ್ತಕಗಳು.—

—ಕಾಂಗ್ರೆಸ್ ಸ್ವರೂಪ ದರ್ಶನ—

ರಾಷ್ಟ್ರೀಯ ಶಿಕ್ಷಣ	0—8—0
ಅಸ್ಪೃಶ್ಯತಾ ನಿವಾರಣೆ	0—12—0
ಪ್ರಾಂತಭಾಷೆ-ರಾಷ್ಟ್ರಭಾಷೆ	0—6—0
ಖಾದಿ	0—8—0

ಕಾಂಗ್ರೆಸ್ ಮತ್ತು ಸ್ವಯಂಸೇವಕದಳ 0-10-0
ಸತ್ಯಾಗ್ರಹ (ಇತಿಹಾಸ-ತಂತ್ರ) 0—8—0
ವಿ. ಪಿ. ಖರ್ಚಿನವೇರೆ. ಇನ್ನು ಅನೇಕ ಪುಸ್ತಕಗಳು ದೊರೆಯುತ್ತವೆ—

ನವಭಾರತ ಕಾರ್ಯಾಲಯ, ಬಳ್ಳಾರಿ.

NAVA BHARAT, BELLARY. Reg. No. M. 4746

ನವಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು.	Subscription Rates
ವರ್ಷಕ್ಕೆ 5-0-0	One Year 5—0—0
6 ತಿಂಗಳಿಗೆ 3-0-0	Six months 3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

SRI..... .. ..

....

....

Printed at Krishna Press Bellary QH No. B 17 FOR (Q.H. No. B-5.)
Edited & Published by T B. KESHAVARAO

ಜೈಹಿಂದ್ Reg. No. M 47

ನವಚೇತನ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಕಟ್ಟು ೬ ಸಂಚಿಕೆ ೧೩ ಬಳ್ಳಾರಿ ಮಾರ್ಚ ೩೧ ಸೋಮವಾರ ೧೯೪೬ ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವ್.

ಬಳ್ಳಾರಿಯವರು

ಮಂತ್ರಿಗಳಾದರು

ಶ್ರೀ ಹಾಲಪರ್ವಿ ಶೀತಾರಾಮರೆಡ್ಡಿ ಬಿ. ಎ. ಬಿ. ಎಲ್. (ಎಂ. ಎಲ್. ಎ.) ಯವರು, ಹೊಸದಾಗಿ ಸ್ಥಾಪಿಸಲ್ಪಟ್ಟ ಮದ್ರಾಸ್ ಮಂತ್ರಿವರ್ಗದಲ್ಲಿ ಆಬ್ಕಾರಿ, ಮುದ್ರಣನಿಷೇಧ, ಉದ್ಯೋಗ ಮತ್ತು ವೃತ್ತ ಪ್ರಸಾರ ಭಾಗಗಳ ಮಂತ್ರಿಗಳಾದರೆಂದು ತಿಳಿಸಲು ಸಂತೋಷಿಸುತ್ತೇವೆ. ರಾಯಲ್ ಸೀಮಾ ಮಿಲ್ಸ್, ರಾಯಲಸೀಮಾ ಬ್ಯಾಂಕ, ಪೃಥ್ವೀ ಇನ್‌ಶೂರೆನ್ಸ್ ಕಂಪನಿಗಳಲ್ಲಿ ಇವರಿಗೆ ಸಂಬಂಧವಿದೆ. ಕ್ಷಾಮ ಪೀಡಿತ ಜಿಲ್ಲೆಗಳ ಅಭಿವೃದ್ಧಿಯಲ್ಲಿ ಇವರಿಗೆ ಬಹಳ ಆಸಕ್ತಿ—

ಇವರಿಂದ ನಮ್ಮ ಜಿಲ್ಲೆಗಳಿಗೆ ತಕ್ಕ ಸೌಕರ್ಯಗಳು ಲಭಿಸಲೆಂದು ನಮ್ಮ ಹಾರೈಕೆ.—

154

ಹೊಸಪೇಟೆ

ಹೊಸಪೇಟೆ ಶೆಂಟ್ರಲ್ ಕೋ ಆಪರೇಟಿವ್ ಬ್ಯಾಂಕಿಗೆ ಈ ಕೆಳಗೆ ಕಾಣಿಸಿದ ಮಹನೀಯರು ಡೈರೆಕ್ಟರ್‌ರಾಗಿ ಆರಿಸಲ್ಪಟ್ಟಿರುವರು.

ಶ್ರೀ ನಿಂಬಗಲ ಚನ್ನವೀರಯ್ಯನವರು,
,, ಪತ್ತಿಕೊಂಡ ಗುರುನಾಥಪ್ಪಶೆಟ್ಟಿ
,, ಸೊಂತಾ ಶೀತಾರಾಮು ಶೆಟ್ಟಿ
,, ರಾವಬಹದೂರ ವೈ. ಮಹಾಬಲೇಶ್ವರಪ್ಪ ನವರು
,, ರಾವಸಾಹೇಬ ಮುರಾರಿ ವೆಂಕಟಸ್ವಾಮಿ
,, ಡಾಕ್ಟರ್ ಆರ್. ನಾಗನಗೌಡರು.

ಹೊಸಪೇಟೆ — ಮೈಲಾರ ರಸ್ತೆ

ನಾರಾಯಣದೇವರಕೆರೆಯಿಂದ ಹಡಗಲಿ ಭಾಗಕ್ಕೆ ತಿರುಗುವ ರಸ್ತೆಯಿಂದ ಪ್ರಾರಂಭವಾಗಿ ಮೈಲಾರದವರಿವಿಗೆ ಅದನ್ನು ರಸ್ತೆಯೆಂದು ಕರೆಯುವುದು ತಪ್ಪಾಗುತ್ತದೆ. ಕನಿಷ್ಟಕ್ಕೆ ಕಳೆದ ೧೦ ವರ್ಷಗಳಿಂದಾದರೂ ರಿಪೇರಿಯಾದಂತೆ ಕಂಡುಬರುವುದಿಲ್ಲ ಇಂಜನಿಯರಿಂಗ್ ಸ್ಟಾಫ್, ಮತ್ತು ಹೈವೇಸ್ ಡಿಪಾರ್ಟಮೆಂಟ್ ಯಾವ ಕೆಲಸಕ್ಕಾಗಿದೆ? ಸ್ಥಾನಿಕ ಶಾಸನಸಭ್ಯರೇನು ಮಾಡುತ್ತಿರುವರು? ಹೊಸಪೇಟೆಯಿಂದ ಹಡಗಲಿಗೆ ಪ್ರಯಾಣ ಮಾಡಿದರೆ ಸೊಂಟ ನೋವು ಬರುತ್ತೆ. ಇಂಥಾ ಪರಿಸ್ಥಿತಿಯು ಪ್ರಜಾಸರ್ಕಾರಕ್ಕೆ ಕಳಂಕಪ್ರಾಯ. [ಒಬ್ಬ ಪ್ರಯಾಣಿಕ]

ಬಟ್ಟೆಗಳ ಹಂಚುವಿಕೆಯಲ್ಲಿ ತಕರಾರು

ನಾರಾಯಣದೇವರ ಕೆರೆಯಲ್ಲಿ ಒಬ್ಬ ವರ್ತಕರು ಹಿಂದಿ ಬೆಲೆಗಿಂತಲೂ ಅಧಿಕ ಬೆಲೆಗೆ ಮಾರಿದ ಏಳು ಕೇಸುಗಳನ್ನು ಅಧಿಕಾರಿಗಳಿಗೆ ಹಿಡಿದು ಕೊಟ್ಟಿರುವುದಾಗಿಯೂ, ರಾರಾವಿಯಲ್ಲಿ ಗೌಡ- ಶಾನುಭೋಗರು ಬಂದ ಬಟ್ಟೆಯನ್ನೆಲ್ಲಾ ಹಿಂದೂಗಳಲ್ಲೇ ಹಂಚಿಕೊಂಡು ಪಾಪಜನರಿಗೆ ಒಂದು ಗಜ ಬಟ್ಟೆಯೂ ಕೂಡ ದೊರೆಯದಂತೆ ಮಾಡಿರುವುದಾಗಿಯೂ ಪತ್ರಗಳು ಬಂದಿವೆ ಇದನ್ನು ಸಂಬಂಧಿಸಿದ ಅಧಿಕಾರಿಗಳು ವಿಚಾರಿಸಿ ತಕ್ಷಣವೇ ತಪ್ಪಿತಸ್ಥರ ಮೇಲೆ ಚರ್ಯೆ ತೆಗೆದುಕೊಳ್ಳಬೇಕೆಂದು ನಾವು ಸೂಚಿಸುತ್ತೇವೆ.

ಮದ್ರಾಸ್ ಮಂತ್ರಿವರ್ಗ

ಶ್ರೀ ಟಿ ಪ್ರಕಾಶಂರು ಕಾಂಗ್ರೆಸ್ ಶಾಸನಸಭೆ ಪಕ್ಷದ ಮುಖಂಡತ್ವದಿಂದ ಬಿಡುಗಡೆ ಹೊಂದಿ (ಶ್ರೀ ಪ್ರಕಾಶಂಗೆ ೭೩ ಮತ ಶ್ರೀ ಓಮಂಡೂರ ರಾವ್ಯ ಸ್ವಾಮಿರೆಡ್ಡಿ ೧೧೬ ಮತ. ಬಂದಕಾರಣ) ಎಲ್ಲರೂ ರಾಜೀನಾಮೆ ಕೊಟ್ಟಮೇಲೆ, ಗವರ್ನರರು ಶ್ರೀ ರಾವ್ಯ ಸ್ವಾಮಿರೆಡ್ಡಿಯವರನ್ನು ಕರೆಸಿ ಹೊಸ ಮಂತ್ರಿ ಮಂಡಳವನ್ನು ರಚಿಸಲು ಕೇಳಿಕೊಂಡರು. ಶ್ರೀ ರೆಡ್ಡಿಯವರು ೧೩ ಮಂತ್ರಿಗಳನ್ನಾರಿಸಿಕೊಂಡಿರುವರು.

೧) ಮುಖ್ಯ ಮಂತ್ರಿ ಶ್ರೀ ಓ ರಾವಸ್ವಾಮಿರೆಡ್ಡಿ
೨) ಶ್ರೀ ಡಾಕ್ಟರ್ ಟಿ. ಯಸ್. ಯಸ್. ರಾಜನ್
೩) ,, ,, ಪಿ. ಸುಬ್ಬರಾಯನ್
೪) ,, ಎಂ. ಭಕ್ತವತ್ಸಲಂ,
೫) ,, ಬಿ. ಗೋಪಾಲರೆಡ್ಡಿ,
೬) ,, ಪೆಜ್. ಸೀತಾರಾಮುರೆಡ್ಡಿ.
೭) ,, ಕೆ. ಚಂದ್ರಮೌಳಿ.
೮) ,, ಕೆ. ಮಾಧವಮೆನನ್.
೯) ,, ಟಿ. ಯಸ್. ಅವಿನಾಶಿಲಿಂಗ.
೧೦) ,, ಕಲಾ ವೆಂಕಟರಾವು.
೧೧) ,, ಡ್ಯಾಸಿಯಲ್ ಧಾಮಸ್,
೧೨) ,, ಕೂರ್ಮಯ್ಯ.
೧೩) ,, ಎ. ಬಿ. ಶೆಟ್ಟಿ.

ಇವರಲ್ಲಿ ೪, ೯, ೧೧, ೧೨, ೧೩ ನೇ ನಂಬರದವರು ಪ್ರಕಾಶಂ ಮಂತ್ರಿವರ್ಗದಲ್ಲಿದ್ದವರಿರುವರು.

ಜಿ. ಕೋಡಿಹಳ್ಳಿ

೨೨-೩-೪೭ ನೆಯ ದಿನಾಂಕ ಹಳ್ಳಿಗಳ ವಿಗಿನೆಯ ವಿಷಯವನ್ನು ಕುರಿತು ವಿಶೇಷ್ ಗೈಡ್ ಕೊಟ್ರಗಡನು, ವಾಟೀಲ ಚಂದ್ರಶೇಖರಗೌಡರು ಮತ್ತು ಚಂದ್ರಶೇಖರಪ್ಪನವರು ಸಭೆಯಲ್ಲಿ ಭಾಷಣ ಮಾಡಿದರು.



10th Year of Publication
31st March 1947

Rationing in Bellary.

The inconvenience caused to the general public of Bellary as a result of not only the rigours of rationing but the absence of proper planning and equity in the methods of distribution of foodstuffs, can be easily mitigated. At present large crowds have to wait for long hours (to the detriment of their daily legitimate duties) at the only Rationing Office in Brucepettah to get their needs fulfilled. Proper planning to relieve congestion by taking stock of the daily figures is the need of the hour. We suggest that two other Rationing Offices, one for Cowl Bazaar and other for Gandhinagar may be opened and we trust the Rationing Officer and his assistant with the present staff can manage two centres, necessitating the employment of one more officer to supervise the remaining centre. **We hope the authorities will take due note of this and redress the grievance expeditiously.**

ಹೊಸ ವೈಸ್ರಾಯರು

ಗಾಂಧಿ- ಜಿನ್ನಾರವರೊಡನೆ ಸಂಧಾಷಣೆ.

ಹೊಸ ವೈಸ್ರಾಯರಾದ ಲಾರ್ಡ್ ಮೌಂಟ್ ಬ್ಯಾಟನ್‌ರವರು, ತಾವು ಅಧಿಕಾರ ಸ್ವೀಕಾರಮಾಡಿದೊಡನೆಯೇ ಹಿಂದೂಸ್ಥಾನದ ಪ್ರಮುಖ ಮುಖಂಡರಾದ ಮಹಾತ್ಮಗಾಂಧಿ, ಮತ್ತು ಜಿನ್ನಾರವರನ್ನು ಕರೆಸಿಕೊಂಡು ರಾಜಕೀಯ ಪರಿಸ್ಥಿತಿ, ಮತ್ತು ಶಾಂತಿ ಸ್ಥಾಪನೆಗಳನ್ನು ಚರ್ಚಿಸಿ, ಅವರ ಸಲಹೆ ಸೂಚನೆಗಳನ್ನು ಕೇಳಿಕೊಳ್ಳಲಿರುವರು

ಬಳ್ಳಾರಿ.

ಸೆಟ್ರ ಗುರುಶಾಂತಪ್ಪ ಹೈಸ್ಕೂಲ ವಾರ್ಷಿಕೋತ್ಸವವು ಮೇಜರ್ ಡಾಕ್ಟರ್ ಮರಿಸ್ವಾಮಪ್ಪನವರ ಅಧ್ಯಕ್ಷತೆಯಲ್ಲೂ ಹೀರದ ಸೂಗಮ್ಮನಶಾಲೆಯವಾರ್ಷಿಕೋತ್ಸವವು ಶ್ರೀ ಕೆ. ಯನ್. ಅನಂತರಾಮನ್ (ಕಲೆಕ್ಟರ್) ರವರ ಅಧ್ಯಕ್ಷತೆಯಲ್ಲೂ ನೆರವೇರಿತು. ಪಂದ್ಯಾದಾಟಗಳಾಗಿ ಗೆದ್ದವರಿಗೆ ಬಹುಮಾನಕೊಡಲಾಯಿತು. ಅಧ್ಯಕ್ಷರು ಈ ಶಾಲೆಗಳ ಅಭಿವೃದ್ಧಿಗಾಗಿತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು

ಹಂಪಿ ರಥೋತ್ಸವಕ್ಕೆ ಹೋಗಲಿರುವರು 'ಕಾಲರಾ ಇನಾಕುಲೇಷನ್' ಮಾಡಿಸಿಕೊಂಡು ಹೋಗಬೇಕೆಂದು ಜಿಲ್ಲಾ ಆರೋಗ್ಯಾಧಿಕಾರಿಗಳು, ಯಾತ್ರೀಕರಿಗೆ ಎಚ್ಚರಿಸುತ್ತಾರೆ.

ನವಭಾರತಕ್ಕೆ ಚಂದಾದಾರರಾಗಿರಿ.

ಗಾಂಧೀಜಿ ಉಪದೇಶಮಾಲೆ
ಸ್ತ್ರೀಯರೇನು ಮಾಡಬೇಕು?

ತಾ. ೨ ಕ್ಕೆ (ಮಾರ್ಚ್) ಕಿಕ್ಕಿರಿದ ಸಭೆಯಲ್ಲಿ ಬಜಾಸ್ತಿಯಿಂದಲೂ ಅನೇಕ ಸ್ತ್ರೀಪುರುಷರು ಸೇರಿದ್ದರು. ಬಜಾಸ್ತಿಯನ್ನು ಕಾರ್ಯಕ್ರಮದಿಂದ ತೆಗೆದು ಹಾಕಿದ್ದಕ್ಕೆ ದೂರಿಕೊಳ್ಳಲು ಅವರು ಬಂದಿದ್ದರು. ಮರಳಿ ಬಂದ ನಂತರ ತಾವು ಬಜಾಸ್ತಿಗೂ ಭೆಟ್ಟಿ ಕೊಡಲೆತ್ನಿಸುವದಾಗಿ ಗಾಂಧೀಜಿ ಹೇಳಿದರು. ಹೃದಯ ಸಖ್ಯವನ್ನು ಸ್ಥಾಪಿಸದೆ ತಾವು ನೌಖಾಲಿ ತಿಪ್ಪೇರಾಗಳನ್ನು ಬಿಟ್ಟು ಹೋಗುವದಿಲ್ಲ. ಬಿಹಾರದಲ್ಲಿ ಬಹಳ ದಿನ ಉಳಿಯುವ ವಿಚಾರ ತಮಗಿಲ್ಲ.

ಪ್ರ:- ನೀವು ನಮ್ಮಲ್ಲಿ ಪ್ರಚಲಿತವಾಗಿರುವ ಅನೇಕ ಸಾಮಾಜಿಕ ದುಸ್ಸಂಪ್ರದಾಯಗಳನ್ನು ಎತ್ತಿ ತೋರಿಸಿದ್ದೀರಿ. ಅವು ಇರುವದು ನಿಜ ಆದರೆ ಗಂಡಸರಿಗೆ ಬೇಡವಾಗಿದ್ದರೆ ಆ ಬಗ್ಗೆ ಹೆಂಗಸರೇನು ಮಾಡಬೇಕು?

ಉತ್ತರ:- ಸ್ತ್ರೀಯರು ತಾವು ಪುರುಷರಿಗಿಂತ ಕೀಳೆಂದು ತಿಳಿದುಕೊಳ್ಳಬೇಕಾದ ಪ್ರಸಂಗವೇ ಇಲ್ಲ. ಪುರುಷನ ಅರ್ಧಾಂಗಿ ಸ್ತ್ರೀಯೆಂದು ರೂಢಿಮಾತು ಹೇಳುತ್ತದೆ. ಅರ್ಥಾತ್ ಪುರುಷನು ಸ್ತ್ರೀಯು ಅರ್ಧವಿದ್ದಂತಾಯಿತು. ಅವರು ಎರಡು ಬೇರೆ ಬೇರೆ ವಸ್ತುಗಳಾಗಿರದೆ ಒಂದೇ ವಸ್ತುವಿನ ಎರಡು ಹೋಳುಗಳು. ಇಂಗ್ಲೀಷ ಭಾಷೆಯಂತೂ ಅದಕ್ಕೂ ನುಂದೆ ಹೋಗಿ ಸ್ತ್ರೀಯರನ್ನು ಪುರುಷನ ಉತ್ತಮಾರ್ಧವೆಂದು ಸಾರುತ್ತದೆ. ಆದುದರಿಂದ ಸ್ತ್ರೀಯರು ಅಯೋಗ್ಯವೂ ಅನಪೇಕ್ಷಣಿಯವೂ ಆದ ನಿರ್ಬಂಧಗಳನ್ನು ಮುರಿಯಲು ಸವಿನಯ ಬಂಡಾಯ ಹೂಡಬೇಕೆಂದು ಗಾಂಧೀಜಿ ಸೂಚಿಸಿದರು. ಯಾವುದೇ ನಿರ್ಬಂಧ ಹಿತಾವಾಗಬೇಕಿದ್ದರೆ ಅದು ಸ್ವೇಚ್ಛಾಪೂರ್ವಕವಾಗಿರಬೇಕು. ಸವಿನಯ ಬಂಡಾಯದಿಂದ ಹಾನಿಯೇನೂ ಆಗದು. ಅದರಲ್ಲಿ ಪಾರಿಶುದ್ಧ್ಯವೂ ವಿವೇಕ ಶೀಲ ಪ್ರತಿಭಟನೆಯೂ ಇದ್ದೇತೀರಬೇಕಾಗುವದು.

ಬಂಗಾಲ ವಿಭಜನೆಯನ್ನು ಕುರಿತ ಇನ್ನೊಂದು ಪ್ರಶ್ನೆಗೆ ಗಾಂಧೀಜಿ ಉತ್ತರಿಸಿದ್ದು.

ಎರಡು ಅಡಳಿತ ವಿಭಾಗಗಳನ್ನು ಮಾಡುವದೂ ಪ್ರಜೆಗಳ ಸ್ಥಳಾಂತರದಷ್ಟೇ ಅವ್ಯವಹಾರ್ಯ. ಅದರಿಂದ ಸಶಸ್ತ್ರ ತಾಟಸ್ಥ್ಯ ಪರಿಣಮಿಸಿಯೋಗ್ಯ ಬೆಳವಣಿಗೆ ಕುಂಠಿತವಾಗುವದು. ಎರಡು ಜಾತಿಯ ಮುಂದಾಳುಗಳು ಸೇರಿ ತಮ್ಮ ಭಿನ್ನಾಭಿಪ್ರಾಯಗಳನ್ನು ಕಡಿಮೆ ಮಾಡಿಕೊಂಡು ಉಳಿದವುಗಳನ್ನು ಸಹಿಸಬೇಕು. ಇದಲ್ಲದೆ ಬೇರೆ ಹಾದಿಹಿಡಿದರೆ ಬರ್ಬರತೆಯಲ್ಲಿಯೂ ಮೂರನೆಯವರ ಆಕ್ರಮಣದಲ್ಲಿಯೂ ಪರಿಣಮಿಸದಿರದು.

ಹೋಳಿಯನ್ನು ಹೇಗೆ ಆಚರಿಸಬೇಕು

ಹಿಂದಿನ ದಿನದಂತೆ ತಾ. ೬ ಕ್ಕೆ ಗದ್ದಲವಿದ್ದಿಲ್ಲ. ಸ್ತ್ರೀಸ್ವಯಂಸೇವಕರ ಕಾವಲು ಸಾಲುಗಳ ನಡುವೆ ಗಾಂಧೀಜಿ ನಡೆದು ಹೋಗುತಿದ್ದಾಗ ಶುದ್ಧ ಶಾಂತಿ ನೆಲಸಿತ್ತು. ಜನಜಂಗುಳಿಯೂ ಹೆಚ್ಚು ವ್ಯವಸ್ಥಾಶೀಲವಾಗಿತ್ತು ಅದಕಾಗಿ ಗಾಂಧೀಜಿ ಧನ್ಯವಾದ ಅರ್ಪಿಸಿದರು.

ಮರುದಿನ ಹೋಳಿಯಿದ್ದುದರಿಂದ ಅದನ್ನು ಹೇಗೆ ಆಚರಿಸಬೇಕೆಂಬ ಬಗ್ಗೆ ಗಾಂಧೀಜಿಯ ಅಭಿಪ್ರಾಯ ಕೇಳಲಾಯಿತು. ಹೋಳಿಯಂಥ ಹಬ್ಬದ ಕಾಲದಲ್ಲಿ ಹುಚ್ಚು ಮತ್ಸರಕ್ಕೆಡೆಗೊಡದೆ ಪರಮಾತ್ಮನಲ್ಲಿ ಬುದ್ಧಿಯನ್ನು ಲಯಗೊಳಿಸುವ ಪ್ರಯತ್ನ ಮಾಡಬೇಕೆಂದು ಗಾಂಧೀಜಿ ಉತ್ತರವಿತ್ತರು

ಹಿಂದೂ ಮುಸಲ್ಮಾನರು ಗೆಳೆಯರಂತೆ ನೆರೆಹೊರೆಯಲ್ಲಿ ಬಾಳುತಿದ್ದ ಕಾಲವೊಂದಿತ್ತು. ಇಂದು ಅವರು ಪರಸ್ಪರ ಗೆಳೆಯರೆನ್ನಿಸಿಕೊಳ್ಳಲಾರದಂಥ ಪರಿಸ್ಥಿತಿ ಒದಗಿದ್ದರೂ ಪರಸ್ಪರ ವೈರಿಗಳೆಂಬ ಭಾವನೆಯಾದರೂ ಇಲ್ಲದಿರಲಿ. ಹೋಳಿಯ ಕಾಲದಲ್ಲಿ ತಮ್ಮ

ಮೇಲೆ ಪುನಃ ದಾಳಿಯಾಗಬಹುದೆಂದು ಮುಸ್ಲಿಮರು ಹೆದರಿದ್ದಾರೆ. ಹಿಂದುಗಳು ನೌಖಾಲಿ ತಿಪ್ಪೇರಾಗಳಲ್ಲಿ ತಮಗೆ ಹೇಳಿದ್ದನ್ನೆ ಮುಸ್ಲಿಮರು ಇಲ್ಲಿ ಹೇಳುವದು ನೋಡಿ ಆಶ್ಚರ್ಯವಾಗುತ್ತದೆ ಪಾಟಣಾ ನೌಖಾಲಿಗಳೆ ರಡರಲ್ಲಿಯೂ ಒಂದೇ ಕಥೆ ಕೇಳಲು ನನಗೆ ನಾಚಿಕೆ ಯಾಗುತ್ತಪೆ. ಆದ್ಕರಿಂದ ನೌಖಾಲಿಯ ಹಿಂದುಗಳಿಗೆ ಕೊಟ್ಟ ಉಪದೇಶವನ್ನೆ ಇಲ್ಲಿಯ ಮುಸ್ಲಿಮರಿಗೆ ಕೊಡುವೆ. ದೇವರಮೇಲೆ ವಿಶ್ವಾಸವಿಟ್ಟು ಭಯವನ್ನು ಕಳೆದೊಗೆಯಿರಿ ಇದು ಪರಿಪೂರ್ಣತೆಯ ಉಪದೇ ಶವೆಂದು ನಾ ಬಲ್ಲೆ.

ವಂದೇ ಮಾತರಂ, ಜಯಭಾರತ, ಜಯಹಿಂದ ಘೋಷಣೆಗಳು ಇಂದು ಮುಸ್ಲಿಮರಿಗೆ ಹೆದರಿಕೆಯುಂ ಟುಮಾಡುತ್ತಿವೆ ಭಾರತಕೀಜಯ ಎಂದರೆ ಮುಸ್ಲಿ ಮರಿಕೀ ಕ್ಷಯ ಎಂದರ್ಥವಾಗಬೇಕೆ? ಮುಸ್ಲಿಂ ಲೀಗ್ ನೆಳೆಯರನೇಕರು ಮುಸ್ಲಿಮರನ್ನು ಬಿಹಾರ ದಲ್ಲಿ ಇರಗೊಡಿಸಲಾಗುವದೇ ಇಲ್ಲವೇ ಎಂದು ಕೇಳು ತ್ತಾರೆ. ನಾವು ಒಂದು ಹುಚ್ಚು ಕುಣಿತಕ್ಕೆ ಇನ್ನೊಂದು ಹುಚ್ಚು ಕುಣಿತದಿಂದಲೇ ಉತ್ತರ ಕೊಡಬೇಕೆ? ಹಾಗಾದರೆ ಹಿಂದುಸ್ತಾನ ನೆತ್ತರ ಕಡಲಲ್ಲಿ ಮುಳುಗಿ ಹೋಗುವದೇ ಸೈ.

ಅಹಿಂಸೆ, ಆತ್ಮಬಲಿದಾನಗಳ ಪ್ರತೀಕಗಳಾದ ಸ್ತ್ರೀಯರಲ್ಲೇ ಗಾಂಧೀಜಿ ಹೆಚ್ಚು ಶ್ರದ್ಧೆಯನ್ನು ವ್ಯಕ್ತ ಗೊಳಿಸಿದರು ಹಿಂದುಗಳು ಹೋಳಿಯನ್ನಾಚರಿಸುವ ರೀತಿಯಿಂದ ಮುಸ್ಲಿಮರಿಗೆ ಹಿಂದುಗಳು ಪಶ್ಚಾತ್ತಾಪ ಪಡುತಿದ್ದಾರೆಂದಿಷ್ಟೇ ಅಲ್ಲ, ಮೊದಲಿದ್ದುದಕಿಂತಲೂ ಹೆಚ್ಚು ತಮ್ಮಲ್ಲಿ ಪ್ರೀತಿಯಿಟ್ಟಿದ್ದಾರೆಂದು ಅನಿಸಿರ ಬೇಕು. ಹೀಗೆ ಹಿಂದಿನ ಸೌಹಾರ್ದತ ಪುನರುಜ್ಜೀ ವನದಲ್ಲಿ ಹೋಳಿ ಪರಿಣಮಿಸಿದರೆ ಆಗ ಅದು ನಿಜ ವಾದ ಧಾರ್ಮಿಕ ಉತ್ಸವವೆನಿಸುವದು

ಇನ್ನೂ ಅನೇಕ ಹಿಂದೂ ಮನೆಗಳಲ್ಲಿ ಮುಸ್ಲಿಂ ಸ್ತ್ರೀಯರನ್ನು ಬಲಾತ್ಕಾರದಿಂದ ಇರಿಸಿಕೊಳ್ಳಲಾಗಿದೆ ಯೆಂದು ಕೇಳಿದ್ದೇನೆ ಅದು ನಿಜವಾಗಿದ್ದರೆ ಒಡನೆ ಅವರನ್ನು ಅವರವರ ಮನೆಗಳಿಗೆ ಕಳಿಸಿ, ದುರಾಚಾರ ಮಾಡಿದವರು ಪಶ್ಚಾತಾಪ ಪಡಬೇಕೆಂದು ಗಾಂಧೀಜಿ ಉಪದೇಶಿಸಿದರು. ಪಶ್ಚಾತ್ತಾಪ ಪಡುವದಲ್ಲದೆ ದುಷ್ಕರ್ಮಕ್ಕೆ ತಕ್ಕ ಶಿಕ್ಷೆಯನ್ನು ಕೂಡ ಪಡೆಯಲು ಸಿದ್ಧರಾಗಬೇಕು. ಇಷ್ಟು ಧೈರ್ಯವಿಲ್ಲದಿದ್ದರೆ ಕೂನೆ ಯ ಪಕ್ಷ ಆ ಸ್ತ್ರೀಯರನ್ನು ಸುರಕ್ಷಿತವಾಗಿ ರಾಜೀಂ ದ್ರ ಬಾಜುಗಳಿದ್ದಲ್ಲಿಗಾದರೂ ಮುಟ್ಟಿಸಬೇಕು.

---

೫೦ ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಹರಪನಹಳ್ಳಿ.

ಬಂಧುಗಳೇ,

ಇದೇ ಮೇ ತಿಂಗಳು ೭, ೮ ಮತ್ತು ೯ ನೆ ಯ ದಿನಾಂಕಗಳಲ್ಲಿ ಮೇಲ್ಕಂಡ ಸಮ್ಮೇಳನವನ್ನು ಜರುಗಿ ಸಬೇಕೆಂದು ನಿರ್ಧರಿಸಲಾಗಿದೆ.

ತಾವುಗಳು ಈ ಮಹತ್ಕಾರ್ಯಕ್ಕೆ ತನು, ಮನ, ಧನದಿಂದಲೂ, ಹೃತ್ಪೂರ್ವಕ ಸಹಕಾರದಿಂದಲೂ, ಈ ಕೆಲಸವು ಎಲ್ಲಾರೀತಿಯಿಂದಲೂ ಯಶಸ್ವಿಯಾಗುವಂತೆ ಸಹಾಯ ಮಾಡಬೇಕಾಗಿ ಪ್ರಾರ್ಥನೆ.

ಕೆಲಸವು ದೊಡ್ಡದು. ಕಾಲವು ಸ್ವಲ್ಪ. ಕಾರಣ ಸಕಲರೂ ಇವರಬಗ್ಗೆ ಬೆಚ್ಚುಗನುನ ಕೊಡುವಿರೆಂದು ವಿಶ್ವಾಸಪಡುತ್ತೇನೆ.

ಚಂದಾ ವಿವರ— ರೂ ೧೫೦ ಕ್ಕೆ ಕಡಮೆಯಾಗದಂತೆ ಹಣ ಸಹಾಯಮಾಡುವವರು ಪ್ರಧಾನ ಪೋಷಕರು

ರೂ ೧೦೦ ಕ್ಕೆ ಕಡಮೆಯಾಗದಂತೆ ಹಣ ಸಹಾಯ ಮಾಡುವವರು ಪೋಷಕರು.

ರೂ ೫೦ ಕ್ಕೆ " " ದಾತೃಗಳು.

ರೂ ೨೫ ಕೊಡುವವರು ಸ್ವಾಗತ ಸಮಿತಿಯ ಸದಸ್ಯರು.

ರೂ ೧೦ " ಸ್ವಾಗತ ಸಮಿತಿಯ ಸಹಾಯಕ ಸದಸ್ಯರು.

ರೂ ೧೦ " ಸ್ವಾಗತ ಸಮಿತಿಯ ಮಹಿಳಾ ಸದಸ್ಯರು,

ರೂ ೨ " ಪ್ರತಿನಿಧಿಗಳು.

ಹರಪನಹಳ್ಳಿ ತಾ|| ೧೮-೩-೪೭ ಸ್ವಾಗತ ಸಮಿತಿ.

158

ವನಸ್ಪತಿ ತುಪ್ಪದ ಮೋಸ

(ಹರಿಜನ ಪತ್ರಿಕೆಯಿಂದ, ಕರ್ಮವೀರ)

ವನಸ್ಪತಿ ತುಪ್ಪದ ವ್ಯಾಪಾರದ ಮೇಲೆ ಸರಕಾರದವರು ಏನಾದರೂ ನಿಯಂತ್ರಣವನ್ನು ಹಾಕಬಯಸಿರುವರೇ ಎಂದು ಒಂದು ದಿನ ಪ್ರಾಂತಿಕ ಶಾಸನ ಸಭೆಯಲ್ಲಿ ಪ್ರಶ್ನೆ ಕೇಳಿದಾಗ ಮಧ್ಯಪ್ರಾಂತ ಮತ್ತು ವರ್ಹಾಡ ಸರಕಾರದ ಆರೋಗ್ಯ ಮಂತ್ರಿಗಳಾದ ಡಾ. ಹಾಸನ್‌ರು ಶುದ್ಧ ವನಸ್ಪತಿ ತುಪ್ಪದ ವ್ಯಾಪಾರವನ್ನು ನಿರ್ಬಂಧಿಸಲು ಇಲ್ಲವೆ ಅದರ ಧಾರಣೆ ಹೆಚ್ಚುವಂತೆ ಹೆಚ್ಚು ಕರ ಹೇರುವದು ಸಾರ್ವಜನಿಕ ಆರೋಗ್ಯ ದೃಷ್ಟಿಯಿಂದ ಹಿತಪ್ರದವಾಗಲಾರದೆಂದು ಸರಕಾರಕ್ಕೆ ಸಲಹೆ ಕೊಡಲಾಗಿದೆ ಎಂದು ಉತ್ತರಿಸಿದರು.

ಈ ವರದಿಯನ್ನೋದಿ ನನಗೆ ಅತ್ಯಂತ ಆಶ್ಚರ್ಯವೆನಿಸಿತು. ಕೆಲ ವಾರಗಳ ಹಿಂದೆಯೇ ಮಹಾತ್ಮ ಗಾಂಧಿಯವರು ಹರಿಜನರಲ್ಲಿ ಲೇಖ ಬರೆದು ವನಸ್ಪತಿ ತುಪ್ಪದ ವ್ಯಾಪಾರವನ್ನು ತೀವ್ರ ಶಬ್ದಗಳಲ್ಲಿ ನಿಷೇಧಿಸಿದ್ದಲ್ಲದೆ ಅದೊಂದು ಸಾರ್ವಜನಿಕರಿಗೆ ಆಗುತ್ತಿರುವ ದೊಡ್ಡ ಮೋಸವೆಂದು ಅಭಿಪ್ರಾಯಪಟ್ಟರು. ಶಾಸ್ತ್ರೀಯ ದೃಷ್ಟಿಯಿಂದ ವಿಚಾರ ಮಾಡಿದರೂ ಆರೋಗ್ಯಕ್ಕೆ ವನಸ್ಪತಿ ತುಪ್ಪ ಅತ್ಯಂತ ಘಾತಕವಾಗಿದೆಂದು ನಿಃಸಂದೇಹವಾಗಿ ಈಗ ಸಿದ್ಧವಾಗಿ ಬಿಟ್ಟಿದೆ. ಹೀಗಿರುವಾಗ ಆರೋಗ್ಯ ಮಂತ್ರಿಗಳಿಗೆ ಇದರ ಗಂಭೀರ ಸ್ವರೂಪದ ಅರಿವು ಇಂಟಾಗದಿರುವದು ಆಶ್ಚರ್ಯಕರವಾಗಿದೆ.

ಕಳೆದ ವರ್ಷ ಬೆಂಗಳೂರಿನಲ್ಲಿ ಸಾಯಿಸ್ಸ ಕಾಂಗ್ರೆಸ ಸಪ್ತಾಹದ ಕಾಲಕ್ಕೆ ವನಸ್ಪತಿ ತುಪ್ಪದ ಸಂಬಂಧದಲ್ಲಿ ವಿಚಾರ ಸಂಕಿರಣದ ಪ್ರಸಿದ್ಧವಾದ ವರದಿಯ ಕೆಲ ಭಾಗವನ್ನು ಇಲ್ಲಿ ಉಲ್ಲೇಖಿಸುವದು ಅವಶ್ಯವೆನಿಸುತ್ತದೆ.

ವನಸ್ಪತಿ ತುಪ್ಪದ ಪೌಷ್ಟಿಕ ಗುಣಾವಗುಣಗಳ ಪ್ರಶ್ನೆಯನ್ನು ಕೂಲಂಕಷವಾಗಿ ಚರ್ಚಿಸಲಾಯಿತು. ವನಸ್ಪತಿ ತುಪ್ಪದ ಪೌಷ್ಟಿಕತೆಯ ಬಗ್ಗೆ ಅಧಿಕೃತ ಮತ್ತು ವಿಶ್ವಾಸಾರ್ಹ ಘೋಷಣೆ ಹೊರಬೀಳುವ ವರೆಗೆ ಕನಿಷ್ಠ ಅದರ ಅನಪಾಯಕಾರಿತ್ವದ ಬಗ್ಗೆ ಗೊತ್ತಾಗುವವರೆಗೆ ಭಾರತೀಯರ ಆಹಾರ ಪದಾರ್ಥಗಳಲ್ಲಿ ಅದಕ್ಕೆ ವ್ಯಾಪಕವಾದ ಮತ್ತು ಅನಿರ್ಬಂಧ ಸ್ಥಾನವನ್ನು ಕೊಡುವದು ರಾಷ್ಟ್ರೀಯ ಆರೋಗ್ಯದ ದೃಷ್ಟಿಯಿಂದ ಘಾತಕವಾದುದೆಂದು ಎನಿಸುತ್ತದೆ. ಈ ಉದ್ಯೋಗದ ಅಭಿವೃದ್ಧಿ ಮತ್ತು ಪ್ರಗತಿ ಇಷ್ಟೊಂದು ಆಗಿದ್ದರೂ ಅದರ ಪೌಷ್ಟಿಕ ಮೂಲ್ಯದ ಬಗ್ಗೆ ಸುದ್ದಿ ಸಂಗತಿಗಳು ಗೊತ್ತಾಗದಿದ್ದುದು ಆಶ್ಚರ್ಯಕರವೆಂದು ಮುಂಬ್ರಾಸಿನ ಪ್ರೊಫೆಸರ ದಾಮೋದರನ್‌ರವರು ಅಭಿಪ್ರಾಯಪಟ್ಟಿದ್ದು ಉಲ್ಲೇಖನೀಯವಾಗಿದೆ. ವನಸ್ಪತಿ ತುಪ್ಪದ ಬಗ್ಗೆ ಹೆಚ್ಚು ಸಂಗತಿಗಳು ಗೊತ್ತಾದರೆ ತಮ್ಮ ಆ ಉದ್ಯೋಗದ ಮೇಲೆ ದುಷ್ಪರಿಣಾಮವಾಗುವದೆಂದು ಸಮರ್ಥ ವಿಶಿಷ್ಟ ಹಿತಸಂಬಂಧವುಳ್ಳವರು ಅವನ್ನೆಲ್ಲ ಮರೆಮಾಚಲು ಒಂದು ಬಗೆಯಿಂದ ಗುಪ್ತ ಕಾರಸ್ಥಾನ ನಡೆಸಿರುವರೆಂದು ಹೇಳಬಹುದು.

ಇದರ ಪೌಷ್ಟಿಕ ಮೌಲ್ಯವನ್ನು ಕಂಡುಹಿಡಿಯುವುದಕ್ಕಾಗಿ ದೇಶದಲ್ಲಿಯ ಕೆಲ ಶಾಸ್ತ್ರಿಗಳು ಪರಿಶ್ರಮ ಪಡುತಿರುವದು ನಿಜವಾದ ಸುದ್ದಿಯವದ ಸಂಗತಿಯಾಗಿದೆ. ಡಾ. ವಿ. ಎನ್. ಪಟವರ್ಧನ (ಮುಂಬಯಿ) ಇವರು ಈ ವಿಚಾರ ಸಂಕಿರಣದ ಕಾಲಕ್ಕೆ ಭಾಷಣ ಮಾಡುತ್ತ ವನಸ್ಪತಿ ತುಪ್ಪದಿಂದ ಪ್ರಾಣಿಗಳ ಬೆಳವಣಿಗೆ ಮತ್ತು ಉತ್ಪಾದಕ ಶಕ್ತಿಯ ಮೇಲೆ ದುಷ್ಪರಿಣಾಮವುಂಟಾಗುವದೆಂದು ಸಿದ್ಧಮಾಡಿ ಹೇಳಿದರು. ಕೇವಲ ವನಸ್ಪತಿ ತುಪ್ಪದ ಮೇಲೆ ಹುಲ್ಲಿನ ಆಸನದಲ್ಲಿ ಇಡಲ್ಪಟ್ಟ ಇಲಿಗಳು ಬಾಲ್ಯದಲ್ಲಿಯೆ ಮರಣ ಹೊಂದಿದವು ಹಲ ಕೆಲವು ಜೀವಂತ ಉಳಿದರೂ ಹೆಚ್ಚು ಬೆಳವಣಿಗೆ ಹೊಂದಲಿಲ್ಲ. ಅವರ ಪ್ರಯೋಗಗಳಿಂದ ಸಿದ್ಧವಾದ ಮಾತಿದು. ಪ್ರಗತಿ, ಉತ್ಪಾದನೆ ಸ್ತನ್ಯೋತ್ಪಾದನೆ ಮೊದಲಾದ ಯಾವ ದೃಷ್ಟಿಯಿಂದ ವಿಚಾರ ಮಾಡಿದರೂ ಬೆಣ್ಣೆ ಸರ್ವೋತ್ಕೃಷ್ಟ ಪೌಷ್ಟಿಕ ಪದಾರ್ಥವೆಂ

ದು ಡಾ. ಪಟವರ್ಧನರು ಅಭಿಪ್ರಾಯಪಟ್ಟರು. ಶುದ್ಧ ಎಣ್ಣೆಯು ಅಷ್ಟೇ ಪೌಷ್ಟಿಕ ಪದಾರ್ಥವಾದ್ದರಿಂದ ವನಸ್ಪತಿ ಎಣ್ಣೆಯ ಶುದ್ಧೀಕರಣ ಮತ್ತು ನಿರ್ಗಂಧೀಕರಣದಿಂದ ಯಾವ ವಿಶಿಷ್ಟ ಪೌಷ್ಟಿಕತೆಯೂ ಉಂಟಾಗುವದಿಲ್ಲ. ತದ್ವಿರುದ್ಧವಾದ ಇಂಥ ಎಣ್ಣೆಯನ್ನು ಪಯೋಗಿಸುವ ಸ್ತ್ರೀಯರಿಗೆ ಎರಡನೆ ಮೂರನೆ ತಲೆಮಾರಿನವರಲ್ಲಿ ಅದರ ದುಷ್ಪರಿಣಾಮಗಳು ಕಂಡು ಬರುವುವೆಂದು ತೋರಿಬಂದಿದೆ.

ವನಸ್ಪತಿ ತುಪ್ಪವನ್ನು ಮಾಡುವುದಕ್ಕಾಗಿ ಎಣ್ಣೆಯನ್ನು ಶುದ್ಧೀಕರಿಸುವ ಮತ್ತು ನಿರ್ಗಂಧೀಕರಿಸುವ ಎರಡು ಮುಖ್ಯ ವಿಧಾನಗಳಿವೆ. ಈ ವಿಧಾನಗಳಿಂದ ಬಹುಶಃ ಎಣ್ಣೆಯಲ್ಲಿಯ ಸತ್ವ ಇಲ್ಲದಂತಾಗುವದು. ಅದರಲ್ಲಿದ್ದ ಮುಖ್ಯವಾದ ಆಹಾರಸತ್ವಗಳು ಇಲ್ಲದಂತಾಗುವವು. ಅಲ್ಲದೆ ಅಶುದ್ಧ ನೆಣ ಪದಾರ್ಥಗಳು ನಾಶವಾಗುವವು. ಪ್ರೊ. ಡಿಸೌಜಾ ಇವರು ಇಂಡಿಯನ್ ಸಾಯಿನ್ಸ ಇನ್ಸಿಟ್ಯೂಟಿನ ಫರ್ಮೆಂಟೇ ಶಾನ ಟೆಕ್ನಾಲಜಿ ವಿಭಾಗದಲ್ಲಿ ನಡೆಸಿದ ಕ್ರಿಮಿ ಆಹಾರ ಪ್ರಯೋಗಗಳಿಂದಲೂ ಈ ಮಾತಿಗೆ ಪುಷ್ಟಿ ದೊರೆಯುತ್ತದೆ.

ಪೌಷ್ಟಿಕತೆಯ ದೃಷ್ಟಿಯಿಂದಲೂ ಇಷ್ಟೊಂದು ಪ್ರಚಾರಹೊಂದಿದ ಘಾತಕ ರೀತಿಯಲ್ಲಿ ಲೋಕಪ್ರಿಯವಾದ ಶುದ್ಧೀಕರಣ ಮತ್ತು ನಿರ್ಗಂಧೀಕರಣ ಹೊಂದಿದ ವನಸ್ಪತಿ ತುಪ್ಪ ಬೆಣ್ಣೆಯ ತುಪ್ಪಕ್ಕಿಂತ ಬಹಳ ಕಡಮೆ ಗುಣಕಾರಿಯಾಗಿರುವದಲ್ಲದೆ ಬಹುಶಃ ಅದನ್ನು ಬಳಸುವವರಿಗೆ ಅಪಾಯಕರವಾಗಿದೆ. ಶಕ್ಯವಾದರೆ ಬೆಣ್ಣೆಯನ್ನು ತಿನ್ನಿರಿ ಇಲ್ಲದಿದ್ದರೆ ಯಾವದೇ ಬಗೆಯ ವಿಕಾರವನ್ನು ಹೊಂದದ ಶುದ್ಧ ಒಳ್ಳೆಣ್ಣೆಯನ್ನು ತಿನ್ನಿರೆಂದು ಈ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದ ಶಾಸ್ತ್ರಿಗಳೆಲ್ಲರು ಸ್ಪಷ್ಟ ನಿಃಸಂದಿಗ್ಧನಿರ್ಣಯ ಮಾಡಿದರು.

ವನಸ್ಪತಿ ತುಪ್ಪದ ಉತ್ಪಾದನೆಯಲ್ಲಿ ಜನ ಸಾಮಾನ್ಯರ ಸುಲಿಗೆ ಬಹಳ ದೊಡ್ಡ ಪ್ರಮಾಣದಲ್ಲಿ ಆಗುತಿದೆ. ಕಾಂಗ್ರೆಸ್ ಮಂತ್ರಿಗಳು ಅದಷ್ಟುಬೇಗ ಈ ವನಸ್ಪತಿ ತುಪ್ಪದ ಮಾರಾಟದ ಮೇಲೆ ನಿಯಂತ್ರಣ ಹಾಕುವ ಅವಶ್ಯಕತೆಯನ್ನು ಕಂಡುಕೊಳ್ಳಬೇಕಾಗಿದೆ. ವಸ್ತುತಃ ವನಸ್ಪತಿ ಎಣ್ಣೆಯನ್ನು ವಿಕಾರಗೊಳಿಸುವದನ್ನು ನಿರ್ಬಂಧಿಸಬೇಕು. ವನಸ್ಪತಿ ತುಪ್ಪ ಆರೋಗ್ಯಕ್ಕೆ ಅನಪಾಯಕಾರಿಯಾಗಿರುವದೆಂದು ಜನತೆಯನ್ನು ಮೋಸಗೊಳಿಸುತಿರುವ ಜಾಹೀರಾತುಗಳನ್ನೆಲ್ಲ ಕಾಯ್ದೆಯಿಂದ ನಿರ್ಬಂಧಿಸಬೇಕು. ತುಪ್ಪಕೊಳ್ಳುವ ಶಕ್ತಿಯಾರಿಗೆ ಇಲ್ಲವೊ ಅಂಥವರು ಶುದ್ಧ ವನಸ್ಪತಿ [ಎಣ್ಣೆಯನ್ನು ಕೊಳ್ಳಬೇಕು. ಆದರೆ 'ತುಪ್ಪ' ವನ್ನು ಕೊಳ್ಳಕೂಡದೆಂದು ಜನರ ಮನವೊಲಿಸಬೇಕು. ಆದುದರಿಂದ ಈ ವಿಷಯದಲ್ಲಿ ಸಾರ್ವಜನಿಕರ ಅಭಿಪ್ರಾಯವನ್ನು ಹದಗೊಳಿಸುವದು ಅವಶ್ಯವಾಗಿದೆ. ಸಮಾಜದ್ರೋಹಿಯಾದ ಈ ಅಪರಾಧದ ವಿರುದ್ಧ ಸುಸಂಸ್ಕೃತಸಾರ್ವಜನಿಕರೂ ತಮ್ಮ ಸಮರ್ಥ ದನಿಗೂಡಿಸಬೇಕಾಗಿದೆ—

ಎಸ್. ಎನ್. ಅಗರವಾಲ

ಹಂಪಿ ರಥೋತ್ಸವ

ಹಂಪಿ ಶ್ರೀವಿರೂಪಾಕ್ಷೇಶ್ವರ ಸ್ವಾಮಿ ರಥೋತ್ಸವದ ಕಾಲಕ್ಕೆ ಸ್ಮಾರಕ ಕಟ್ಟಡಗಳನ್ನು ತಮ್ಮ ವಾಸ ಸ್ಥಾನಗಳಾಗಿ ಉಪಯೋಗಿಸಿಕೊಳ್ಳಬಾರದೆಂದೂ, ಪ್ರೇಕ್ಷಕರಿಗೆ ಅನಾನುಕೂಲವುಂಟುಮಾಡಬಾರದೆಂದೂ, ಶ್ರೀ ದೇಶಾಯಿಯವರು ತಿಳಿಸುತ್ತಾರೆ.

ಈ ಹಣವೆಲ್ಲಿ ಮಾಯವಾಗುತ್ತಲಿದೆ ?

೧) ಜೋಳದ ಬೋನಸ್, ಹತ್ತಿ ಬೋನಸ್ ಸಿಗಬೇಕಾದ ರೈತರಿಗೆಲ್ಲಾ ಆ ಹಣ ಏಕೆ ದೊರೆತಿರುವದಿಲ್ಲ? ಅದುಯಾರಿಗೆ ಹೋಗುತ್ತಲಿದೆ? ೨) ಮದ್ಯಪಾನವಿದ್ದ ಊರುಗಳಲ್ಲಿ ಚಹಾ ಅಂಗಡಿಗಳನ್ನಿಡಲು ೧೦೦ ರೂ. ಗಳಂತೆ ಕೊಡಬೇಕಾದ ಹಣವನ್ನು ಯಾರಿಗೆ ಕೊಡುತ್ತಿರುವರು? ಇಂಥಾ ಅಂಗಡಿಗಳು ಎಲ್ಲಿ ಏರ್ಪಟ್ಟಿವೆ? ಆ ಹಾರ ಬಟ್ಟೆಯ ಕೊರತೆ ಲಂಚ ನಿರ್ಮೂಲನವೆಂದಾಗುವುದು [ಶಿ. ನೆ. ದೇ]

160

ಜನತೆಯು

ಕಾಂಗ್ರೆಸ್ ಸರ್ಕಾರವನ್ನು ಹೇಗೆ ನೋಡಬೇಕು?

ಇಂದು ಹಿಂದುಸ್ಥಾನದ ಅನೇಕ ಪ್ರಾಂತಗಳಲ್ಲಿ ಮತ್ತು ಮಧ್ಯವರ್ತಿ ಮಂತ್ರಿಮಂಡಳದಲ್ಲಿ ಕೂಡ ಸರಕಾರಿ ಅಧಿಕಾರ ಸೂತ್ರಗಳನ್ನು ಕಾಂಗ್ರೆಸ ಮುಖಂಡರು ವಹಿಸಿಕೊಂಡು ರಾಜ್ಯಭಾರ ನಡೆಸಿದ್ದಾರೆ. ಕಾಂಗ್ರೆಸು ಕಳೆದ ೬೦-೬೫ ವರ್ಷಗಳಿಂದ ಹಿಂದುಸ್ಥಾನದ ಜನತೆಯ ಹಿತಸಂರಕ್ಷಣೆಗಾಗಿ ದುಡಿದು ಹೆಸರಾದ ಸಂಸ್ಥೆ ಅದರ ಹೆಸರು ಕೇಳಿದ ಕೂಡಲೆ ಭಾರತೀಯರು ಹೆಮ್ಮೆ ಪಡುವಂತಾಗಿದೆ. ಮತ್ತು ಯಾವುದಾದರೂ ಸಂಸ್ಥೆಯಿಂದ ತಮ್ಮ ಕಷ್ಟನಷ್ಟಗಳು ನಿವಾರಿಸಲ್ಪಡುವುದಾದರೆ ಅದು ಕಾಂಗ್ರೆಸ ಸಂಸ್ಥೆಯಿಂದಲೇ ಎಂಬ ಬಗ್ಗೆ ಅವರು ಅನ್ನುತ್ತಾರೆ.

ರಾಜಕಾರಣದ ಜ್ಞಾನ, ಮತ್ತು ಇಂದು ಯಾವ ಪರಿಸ್ಥಿತಿಯಲ್ಲಿ ಕಾಂಗ್ರೆಸು ಅಧಿಕಾರ ಸೂತ್ರಗಳನ್ನು ವಹಿಸಿಕೊಂಡಿದೆ, ಎಂಬ ವಿಷಯದಲ್ಲಿ ತಿಳುವಳಿಕೆ ಇದ್ದವರು ಮೇಲಿನ ಮಾತುಗಳನ್ನು ಇಂದು ಕೂಡ ನಂಬುತ್ತಿದ್ದಾರೆ. ಮತ್ತು ತಮಗೆ ಇಂದು ಒಂದ ಯಾವುದೇ ಅನಾನುಕೂಲಗಳ ದೃಷ್ಟಿಯಿಂದ ಕೂಡಾ ಕಾಂಗ್ರೆಸ ಜನರು ಮತ್ತು ಅವರು ವಹಿಸಿಕೊಂಡಿರುವ ಮಂತ್ರಿಮಂಡಲಗಳ ಕಾರ್ಯಗಳ ಬಗ್ಗೆ ತಪ್ಪು ತಿಳಿವಳಿಕೆ ಮಾಡಿಕೊಳ್ಳುತ್ತಿಲ್ಲ.

ಪರಿಸ್ಥಿತಿಯ ಜ್ಞಾನವಿಲ್ಲದವರು ಆಡುವ ಮಾತುಗಳು ಬಹಳವಿದ್ದು ಅವುಗಳಲ್ಲಿ ಮುಖ್ಯವಾದವುಗಳು ಈ ಕೆಳಗಿನವಾಗಿವೆ ೧) ಕಾಂಗ್ರೆಸ ಜನರು ಅಧಿಕಾರ ನಡೆಸಲು ಅಸಮರ್ಥರಾಗಿದ್ದಾರೆ. ೨) ಕಾಂಗ್ರೆಸ ಜನರೇ ಲಂಚ ತೆಗೆದುಕೊಳ್ಳಹತ್ತಿದ್ದಾರೆ ೩) ಇವರ ರಾಜ್ಯಕ್ಕಿಂತ ಬ್ರಿಟಿಶ ರಾಜ್ಯವೇ ಮೇಲಾಗಿತ್ತು. ೪) ಕಾಂಗ್ರೆಸ ಜನರು ತಮ್ಮ ಕೈಯಲ್ಲಿ ಅಧಿಕಾರ ಬಂದ ಕೂಡಲೆ ನ್ಯಾಯಾನ್ಯಾಯ ಬುದ್ಧಿಯನ್ನೇ ಕಳೆದು ಕೊಂಡಿದ್ದಾರೆ. ಮುಂತಾದವು. ಈ ನಾಲ್ಕು ಮಾತುಗಳಿಗೆ ಉತ್ತರ ಕೊಟ್ಟುಬಿಟ್ಟರೆ ಅವರ ಎಲ್ಲ ಆಕ್ಷೇಪಗಳಿಗೆ ಸಮಾಧಾನ ಹೇಳಿದಂತಾಗುವುದೆಂದು ಹೇಳಲಡ್ಡಿಯಿಲ್ಲ. ಅವರಾಡುವ ಇನ್ನಿತರ ಅಸಂಖ್ಯ ಮಾತುಗಳು ಈ ನಾಲ್ಕು ಸಂಗತಿಗಳ ಅವಾರದಲ್ಲಿ ಬರುತ್ತವೆ.

ಕಾಂಗ್ರೆಸ ಜನರ ಅಸಮರ್ಥತೆಯನ್ನು ಜನರು ಕಾಣುವುದಕ್ಕೆ ಈ ಕೆಳಗಿನ ಸಂಗತಿಗಳು ಕಾರಣವಾಗಿವೆ. ೧) ದೇಶವಲ್ಲಾದ ಜಾತೀಯ ಗೊಂದಲಗಳು ೨) ಲಂಚಗುಳಿತನವನ್ನು ಹೋಗಲಾಡಿಸಲು ಅಸಾಧ್ಯವಾದದ್ದು ಮತ್ತು ಕಾಂಗ್ರೆಸಿನ ಕೆಲವು ಜನರೇ-ಕಾರ್ಯಕರ್ತರು ಕೂಡ ಈ ಸೆಳೆತಕ್ಕೆ ಬಿದ್ದದ್ದು ೩) ಕಳ್ಳಪೇಟೆಯನ್ನು ನಿಲ್ಲಿಸಲಾರದೆ ಅಕ್ಕಿ, ಗೋಧಿ, ಸಕ್ಕರೆ, ಬೆಲ್ಲ, ಕೊಬ್ಬರಿ ಎಣ್ಣೆ ಮೊದಲಾದವುಗಳನ್ನು ಜನರಿಗೆ ಪೂರೈಸಲು ಅಸಮರ್ಥರಾದದ್ದು.

ಜಾತೀಯ ಗೊಂದಲಗಳಿಂದಾಗಿ ಯಾವ ಸರಕಾರವೂ ಇದನ್ನು ಸಮೂಲವಾಗಿ ನಿರ್ನಾಮಗೊಳಿಸಲು ಸಮರ್ಥವಾಗುವದಿಲ್ಲ. ಸೈನ್ಯ ಮತ್ತು ಪೋಲೀಸ ವಿಭಾಗಗಳು ಹಲ ಕೆಲವು ಕಡೆಗಳಲ್ಲಿ ಆಕಸ್ಮಾತ್ತಾಗಿ ನಡೆಯುವ ಗೊಂದಲಗಳನ್ನು ನಿಲ್ಲಿಸಲು ಮಾತ್ರ ಸಮರ್ಥವಿರುತ್ತವೆ. ಇಡೀ ದೇಶವೇ ಅಥವಾ ವ್ಯಾಪ್ತವೇ ಈ ತರಹದ ಕೊಲೆ ಸುಲಿಗೆಗಳನ್ನು ನಡೆಸಲು ಮುಂದೆ ಬಂದರೆ ಸೈನ್ಯ ಮತ್ತು ಪೋಲೀಸರು ಹತಾಶರಾಗುತ್ತಾರೆ ಕೆಲವು ದಿನಸಗಳ ನಂತರ ಸೈನಿಕರು ಅಲ್ಲಿ ಶಾಂತತೆಯನ್ನು ಪುಟ್ಟಿಸಬಲ್ಲರೇ ಹೊರ್ತು, ಅಷ್ಟು ದಿನಸಗಳವರೆಗೆ ನಡೆಯುವ ಆ ಗಲಭೆಗಳ ತಾಂಡವ ನೃತ್ಯವು ತಪ್ಪಿದ್ದಲ್ಲ. ಈ ಮಾತನ್ನು ತಿಳಿಯದವರು ಇಂದಿನ ಕಾಂಗ್ರೆಸ ಮಂತ್ರಿಮಂಡಳಗಳನ್ನು ಟೀಕಿಸುತ್ತಾರೆ. ಜಾತೀಯ ಗೊಂದಲಗಳು ಯಾವ ಕಾಲದಲ್ಲಿ ನಡೆದರೂ ಈ ರೀತಿಯಾಗತಕ್ಕದ್ದೇ. ಈ ತರಹದ ಗಲಭೆಗಳಿಗೆ ಹಲ ಕೆಲವು ಸರಕಾರಗಳು ಪ್ರೋತ್ಸಾಹ ಕೊಡುತ್ತವೆ. ಅವನ್ನು ಮಾತ್ರ ಕಾಂಗ್ರೆಸ ಮಂತ್ರಿಗಳು ಮಾಡಿಲ್ಲ ಇವರಿಂದಲೇ ನಮ್ಮ ಬೆಂಬಲವು ಈ ಮಂತ್ರಿಗಳಿಗೆ ಇರಬೇಕಾದುದು ಅವಶ್ಯ

ವಾಗಿದೆ. ಗಲಭೆಗಳನ್ನು ನಿಲ್ಲಿಸುವುದಕ್ಕೆ ಮಾತ್ರ ನಮ್ಮ ಮಂತ್ರಿಗಳು ಮನಃಪೂರ್ವಕ ಯತ್ನಿಸಿದ್ದಾರೆ.

ಲಂಚಗುಳಿತನವು ಸಮೂಲ ನಾಶವಾಗಲಾರದು. ಅದರ ಪ್ರಮಾಣವನ್ನು ಕಡಿಮೆ ಮಾಡಲು ಉಗ್ರಉಪಾಯಗಳನ್ನು ಕೈಕೊಂಡರೆ ಅದರ ತೀವ್ರತೆಯು ಬಹುಮಟ್ಟಿಗೆ ಕಡಿಮೆಯಾಗುವದರಲ್ಲಿ ಸಂಶಯವಿಲ್ಲ. ಈ ಬಗ್ಗೆ ಕಾಂಗ್ರೆಸ ಮಂತ್ರಿಮಂಡಲಗಳು ಅವ್ಯಾಹತವಾಗಿ ಹೆಣಗಬೇಕು. ಈ ಹೆಜ್ಜೆಯ ಉಪಯೋಗವನ್ನು ಹೊಂದಲು ಜನತೆಯು ಸಾಕಷ್ಟು ದಿಟ್ಟತನದಿಂದ ಮುಂದೆ ಬರಬೇಕಾಗುತ್ತದೆ. ಅಷ್ಟು ದಿಟ್ಟತನವು ನಮ್ಮ ಜನರಲ್ಲಿ ಅಂದು ಹುಟ್ಟದಿರುವುದರಿಂದಲೇ ಈ ಕಾರ್ಯದಲ್ಲಿ ಸಾಕಷ್ಟು ಯಶದೊರೆತಿಲ್ಲ.

ಇನ್ನು ಕಾಂಗ್ರೆಸ ಜನರೇ ಲಂಚಕ್ಕೆ ಕೈಹಾಕಿದುದು ಉಂಟು ಎಂಬ ಮಾತು ಕೇಳಿಬರುತ್ತಿದೆ. ಹೌದು. ಅಲ್ಲಲ್ಲಿ ಅಂತಹ ಘಟನೆಗಳು ಕಂಡು ಬರುತ್ತಿವೆ. ಆದರೆ ಈ ಘಟನೆಗಳಿಂದ ಕಾಂಗ್ರೆಸ ಸಂಸ್ಥೆಗೆ ಬೈಯುವದು ತಪ್ಪು. ಲಂಚ ತೆಗೆದುಕೊಳ್ಳಿರೆಂದು ಕಾಂಗ್ರೆಸ ಎಂದೂ ಹೇಳಿಲ್ಲ. ಆದರೆ ಗಾಂಧೀಟೊಪ್ಪಿಗೆ ಹಾಕಿಕೊಂಡು ಕಾಂಗ್ರೆಸ ಸಂಸ್ಥೆಯ ತತ್ವಗಳಿಗೆ ಬಾಧೆ ತರುವಂತೆ ಯಾವನಾದರು ವರ್ತಿಸಿದರೆ ಅದಕ್ಕೆ ಕಾಂಗ್ರೆಸು ಏನು ಮಾಡಬೇಕು ? ಆ ಕಾಲಕ್ಕೆ ಅವನ ಕಾಂಗ್ರೆಸ್ಸಿಗನಾಗಿರದೆ ಕಾಂಗ್ರೆಸ ದ್ರೋಹಿಯೆಂದು ಹೇಳಬೇಕಾಗುವದು. ಅಂಥವನನ್ನು ಕಾಂಗ್ರೆಸಿನಿಂದ ಹೊರದೂಡಬೇಕೇ ಹೊರತು ಅವನನ್ನು ನೋಡಿ ಕಾಂಗ್ರೆಸಿಗೆ ಬೈಯುವದು ತಪ್ಪು.

ಕಳ್ಳಪೇಟೆಯನ್ನು ಮುಚ್ಚಲಾರದೆ, ಆಹಾರ ಸಾಮಗ್ರಿ ಸಿಗದಂತೆ ಮಾಡಿದರು. ಎಂದು ಕೆಲವರು ಅಡಿಕೊಳ್ಳುತ್ತಿದ್ದಾರೆ. ಇದಂತೂ ಅಜ್ಞಾನದ ಪರಮಾವಧಿ. ಕಾಂಗ್ರೆಸ ಜನರು ರಾಜ್ಯಭಾರ ಮಾಡುತ್ತಿರುವಾಗ ಇಂತಹ ದುರ್ದೈವದ ಪರಿಸ್ಥಿತಿಯು ಉಂಟಾದ್ದರಿಂದ ಈ ಆರೋಪವು ಕಾಂಗ್ರೆಸ್ಸಿನ ಮೇಲೆ ಬರುವದು ಸ್ವಾಭಾವಿಕವಾಗಿದೆ. ಆದರೆ ಇದಕ್ಕೆ ಮೂಲ ಕಾರಣವಾದ ಸಂಗತಿಯು ಎಲ್ಲಿದೆ ? ಎಂಬುದನ್ನು ನೋಡಿದರೆ ಇದರ ಮರ್ಮವು ತಿಳಿಯುವುದು.

ಆಹಾರಧಾನ್ಯ ಮತ್ತು ವಸ್ತುಗಳ ಉತ್ಪತ್ತಿ ಕಡಮೆ ಮತ್ತು ಬೇಡಿಕೆ ಹೆಚ್ಚಾಗಿದೆ. ಈ ಕಾರಣ ಕಳ್ಳಪೇಟೆಯವರು ಅದನ್ನು ಹೆಚ್ಚು ದುಡ್ಡುಕೊಟ್ಟು ತಂದು ಹೆಚ್ಚು ಬೆಲೆಗೆ ಮಾರುತ್ತಿದ್ದಾರೆ. ಅವರಿಗೆ ತರಲು ಹೇಗೆ ಬಿಡುತ್ತಾರೆ ? ಎಂದು ಕೇಳಬಹುದು. ಅಂಥವರಲ್ಲಿ ಕೆಲವರು ಸಿಗುವುದೂ ಉಂಟು. ಆದರೆ ಕಾವಲುಗಾರರನ್ನು ಲಂಚದಿಂದ ಕೊಳ್ಳುವುದು ದೊಡ್ಡಮಾತಲ್ಲ. ಇವೆಲ್ಲ ಕಾರಣಗಳಿಂದ ಈ ಸ್ಥಿತಿಯುಂಟಾಗಿದೆ. ಆದರೂ ಕಾಂಗ್ರೆಸ ಮಂತ್ರಿಮಂಡಲಗಳು ಈ ವಸ್ತುಗಳನ್ನು ಜನರಿಗೆ ಒದಗಿಸಲು ವಿಶ್ವಪ್ರಯತ್ನ ಮಾಡುತ್ತಿದ್ದಾರೆ. ಕೈಮೀರಿದ ಸಂಗತಿಗಳಿಗೆ ಅವರಾದರೂ ಏನುಮಾಡಬೇಕು ? ಹೀಗಿರುವಾಗ ನಮ್ಮದೇ ಆದ ಮತ್ತು ತನ್ನ ಜನಹಿತಬುದ್ಧಿಯಿಂದ ಪ್ರಸಿದ್ಧವಿದ್ದ ಕಾಂಗ್ರೆಸಿಗೆ ಜನರು ಹೀಗೆ ಮಾತಾಡುವದು ಅಜ್ಞಾನದ ಅತಿರೇಕವೇಸರಿ.

ಎತಡನೆಯ ಮಾತಾದ, ಕಾಂಗ್ರೆಸ ಜನರೇ ಲಂಚ ತೆಗೆದುಕೊಳ್ಳುತಿದ್ದಾರೆ. ಎಂಬುದರಬಗ್ಗೆ ಮೊದಲಿನ ಮಾತಿನ ಉತ್ತರದಲ್ಲಿಯೇ ಸಮಾಧಾನವು ಹೇಳಲ್ಪಟ್ಟಿದೆ. ಅದು ಅಲ್ಲದೆ ಇಡೀ ದೇಶದೇ ಕಾಂಗ್ರೆಸ್ಸಾಗಿದೆ ಕಾಂಗ್ರೆಸ್ಸಿನ ಕಷ್ಟಮಯ ಕಾರ್ಯಕ್ರಮಗಳು ಹೋಗಿ, ಈಗ ಅಧಿಕಾರ ದೊರೆಯುವ ಪ್ರಸಂಗವು ಬಂದದ್ದರಿಂದ ಹಲ ಕೆಲವರು ಆದರಲ್ಲಿ ಮೇಲಾಟ ಮಾಡುತ್ತ ಬಂದು ಪ್ರವೇಶ ಮಾಡಿದ್ದಾರೆ. ದೇಶದಲ್ಲಿದ್ದ ಸರ್ವಗುಣಾನಗುಣಗಳೂ ಅದರಲ್ಲಿ ಬಂದು ಸೇರಿವೆ. ಅಂದಬಳಿಕ ಹಿಂದೆ ಅದರಲ್ಲಿದ್ದ ಪಾವಿತ್ರ್ಯ ಶಿಸ್ತು ಸಂಘಟನೆಗಳು ಇಂದು ಉಳಿಯುವುದು ಸಾಧ್ಯವಿಲ್ಲ ಇತರರನ್ನು ಕಳ್ಳಪೇಟೆ, ಲಂಚ ಮುಂತಾದ ಅಪರಾಧಗಳಿಗಾಗಿ ಹಿಡಿಯುವಾಗ ಇಂದು ಕಾಂಗ್ರೆಸಿಗರೂ ಅದರಲ್ಲಿ ಸಿಗುತ್ತಿದ್ದಾರೆ. ಅವರ ಬಗ್ಗೆಯೂ ಕರುಣೆ ತೋರಿಸಿ ಪ್ರಯೋಜನವಿಲ್ಲ.

162.

ಅವರನ್ನು ಹಿಡಿದರೆ ಕಾಂಗ್ರೆಸ್ಸಿನ ಹೆಸರಿಗೆ ಕಳಂಕ ಹತ್ತುವುದು ಎಂದು ಕೆಲವರು ಹೆದರುತ್ತಿದ್ದಾರೆ. ಅದು ತಪ್ಪು. ಇಂಥವರನ್ನು ಮುಚ್ಚಿ ಇಟ್ಟರೂ ಕಾಂಗ್ರೆಸ್ಸಿನ ಹೆಸರು ಶುದ್ಧವಾಗಿ ಉಳಿಯುವುದು ಸಾಧ್ಯವಿಲ್ಲ ಈಗಾಗಲೇ ಈ ಜನರ ಕಾರಣದಿಂದ ಈ ಸಂಸ್ಥೆಗೆ ಜನರು ಬೈಯುತ್ತಿದ್ದಾರೆ. ಆದರೆ ಸಂಸ್ಥೆಗೆ ಇಂತಹ ಜನರ ಮೂಲಕ ಕಳಂಕ ಹತ್ತುವುದೂ ಇಲ್ಲ. ಹತ್ತ ಬಾರದು. ಜನರು ಅಪರಾಧಿಗಳನ್ನು ಹೊರದೂಡಿ ಮೂಲ ಸಂಸ್ಥೆಯನ್ನು ಶುದ್ಧವಾಗಿಡಲು ಯತ್ನಿಸುವುದು ಶ್ರೇಯಸ್ಕರವಾಗಿದೆ.

ಇವರ ರಾಜ್ಯಕ್ಕಿಂತ ಬ್ರಿಟಿಶರ ರಾಜ್ಯವೇ ಮೇಲಾಗಿತ್ತು ಎಂಬುದು ಜನರಾಡುವ ಮಾತುಗಳಲ್ಲಿ ಮತ್ತೊಂದಾಗಿದೆ. ಇದು ಅದೂರದೃಷ್ಟಿಯ ಮಾತು. ತಾತ್ಕಾಲಿಕವಾಗಿ ಈಗ ಹಿಂದಿನಕಿಂತ ದೊಡ್ಡ ಕಷ್ಟವು ಬಂದಿರಬಹುದು. ಆದರೆ ಪರಕೀಯರು ಕೊಡುವ ಸುಖಕ್ಕಿಂತ ನಮ್ಮ ಜನರು ಕೊಡುವ ಕಷ್ಟವು ಮೇಲೆಂಬುದು ಸಾಮಾನ್ಯರಿಗೆ ತಿಳಿಯದ ಮಾತು. ಏನೇ ಆದರೂ ನಮ್ಮ ಜನರ ಕೈಯ್ಯಲ್ಲಿ ಅಧಿಕಾರವಿದ್ದರೆ ಅದರ ಲಾಭ ಹಾನಿಗಳು ನಮ್ಮಲ್ಲಿಯೇ ಇರುತ್ತವೆ. ಇಂದು ನಾವು ರಾಜ್ಯಭಾರದಲ್ಲಿ ಅನುಭವಿಕರಿದ್ದೇವೆ. ಆದರೆ ಹೀಗೆ ಎಡವುತ್ತ ಮುಗ್ಗುರಿಸುತ್ತ ನಾವು ಮುಂದೆ ಸಾಗಬೇಕಾಗಿದೆ. ಈ ಅವಸ್ಥೆಯನ್ನು ನಾವು ದಾಟಲೇಬೇಕು.

ನಮ್ಮ ಅನನುಭವಿಕತನದ ಮೂಲಕವೇ ಈ ಸ್ಥಿತಿಯು ವ್ಯಾಪ್ತವಾಗಿದೆಯಂದಲ್ಲ. ಇದು ಕ್ರಾಂತಿಯಕಾಲ. ನಮ್ಮ ನಮ್ಮಲ್ಲಿ ಇಂದು ಅನೇಕ ತರಹದ ಒಡಕುಗಳಿವೆ. ಅದಕ್ಕಾಗಿ ನಾವು ಇಂದು ಬಹಳ ಕಷ್ಟದಲ್ಲಿ ಬಿದ್ದಿದ್ದೇವೆ. ನಾವೆಲ್ಲರೂ ಕೂಡಿ ಒಕ್ಕಟ್ಟನಿಂದ ಮುಂದೆ ಸಾಗಿದರೆ ಈ ಕಷ್ಟದ ದಿನಗಳು ಮುಂದೆ ಉಳಿಯಲಾರವು.

ಅದೆಲ್ಲವನ್ನೂ ಬಿಟ್ಟು ನಾವು ನಮ್ಮ ಆಡಳಿತವನ್ನೇ ತಿಗಳುತ್ತ ಸಾಗಿದರೆ ಬ್ರಿಟಿಶರಿಗೆ ಆನಂದವಾಗದೆ ಇರಲಾರದು. ಇವರು "ನೀವು ಸ್ವರಾಜ್ಯಕ್ಕೆ ಅರ್ಹರಿಲ್ಲ" ಎಂದು ಹೇಳುತ್ತಿದ್ದ ಮಾತಿಗೆ ನಾವೇ ಅನುಮತಿ ಕೊಟ್ಟಂತಾಗುವುದು. ಆದ್ದರಿಂದ ನಮ್ಮ ವಿಶ್ವಾಸಿಕರಾದ ಕಾಂಗ್ರೆಸಿಗರು ಮಾಡುತ್ತಿರುವ ಕಾರ್ಯ ಮತ್ತು ಅವರ ದಾರಿಯಲ್ಲಿರುವ ಅಡ್ಡಿ ಆತಂಕಗಳು ಇವುಗಳ ಬಗ್ಗೆ ನಾವು ತಿಳಿದುಕೊಂಡು ಅವರಿಗೆ ನಮ್ಮ ಸಹಾಯ ಸಹಕಾರಗಳನ್ನು ನೀಡಿ ಅವರಿಂದ ಹೆಚ್ಚು ಕಾರ್ಯವಾಗುವಂತೆ ನೋಡುವುದು ಅವಶ್ಯವಾಗಿದೆ

ತಮ್ಮ ಕೈಯ್ಯಲ್ಲಿ ರಾಜ್ಯ ಸೂತ್ರಗಳು ಬಂದ ಕೂಡಲೇ ಕಾಂಗ್ರೆಸಿಗರ ನ್ಯಾಯನ್ಯಾಯ ಬುದ್ಧಿಯೇ ಮಸಣಿಸಿ ಹೋಗಿದೆಯೆಂಬುದು ಟೀಕಾಕಾರರ ಮತ್ತೊಂದು ಅಭಿಪ್ರಾಯವಾಗಿದೆ.

ಈ ಬಗ್ಗೆ ವಿಚಾರ ಮಾಡುವಾಗ ಕಾಂಗ್ರೆಸು ಇವೆಲ್ಲ ಕಾರ್ಯಗಳನ್ನು ಯಾವ ಉದ್ದೇಶದಿಂದ ಮಾಡುತ್ತಿದೆಯೆಂಬುದನ್ನು ನೋಡಬೇಕಾಗುತ್ತದೆ. ತಮ್ಮ ಮುಂದಿನ ಪರಿಸ್ಥಿತಿಯನ್ನು ಸುಧಾರಿಸುವ ದೃಷ್ಟಿಯಿಂದ ಜನರಿಗೆ ಇದ್ದ ಸ್ಥಿತಿಯಲ್ಲಿ ಸುಖ ಸಮಾಧಾನಗಳು ಸಾಧ್ಯವಿದ್ದಷ್ಟು ದೊರೆಯಲೆಂಬ ಉದ್ದೇಶದಿಂದ ಈ ಕಾರ್ಯಗಳನ್ನು ಮಂತ್ರಿ ಮಂಡಲಗಳು ಕೈಕೊಂಡಿವೆ. ಆಂದ ಬಳಿಕ ಅವಗ ಮೇಲೆ ಹರಿಹಾಯುವದು ಸಮಂಜಸವಾಗುವುದಲ್ಲ. ಈ ತರಹದ ಕಾಯಿದೆಗಳಾಗುವಾಗ ಅವುಗಳ ಪರಿಣಾಮಗಳಿಗೆ ಒಳಗಾಗುವ ಜನರು ಅಸಾಮಧಾನಪಡುವುದು ಸ್ವಾಭಾವಿಕವಾಗಿದೆ. ನಮಗೆ ಹಾನಿಯಾಗುವುದೆಂಬ ಕಾರಣದಿಂದ ಆ ಕಾರ್ಯವೇ ತಪ್ಪು ಎಂದು ಹೇಳಲು ಬರಲಾರದು. ಇನ್ನು ಅದರಲ್ಲಿ ಅಸಮಂಜಸತನವೇನಾದರೂ ಇದ್ದರೆ ಆ ಬಗ್ಗೆ ಸೂಚನೆ ಕೊಡಲು ಅಡ್ಡಿಯಿಲ್ಲ ಆದರೆ ಒಂದು ಮಾತು ಬಹುಜನರಿಗೆ ಒಪ್ಪಿಗೆಯಾದ ಮೇಲೆ ಅದರ ಬಗ್ಗೆ ಕೊಗುವದು ಜಾಣತನದ ಮಾತಲ್ಲ.

ಹೀಗೆ ಇಂದಿನ ಕಾಂಗ್ರೆಸ ಮಂತ್ರಿಮಂಡಳಗಳು ಮಾಡುತ್ತಿರುವ ಕಾರ್ಯವನ್ನು ಒಳಹೊಕ್ಕು ನೋಡಿ ಅವುಗಳ ಬಗ್ಗೆ ನಮ್ಮ ಅಭಿಪ್ರಾಯ ಕಟ್ಟುವುದು ಅವಶ್ಯವಾಗಿದೆ. ಎಲ್ಲರಿಗೂ ಈ ಮಾತು ತಿಳಿಯು

The Rayalaseema Bank Limited, Bellary.
ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:— ಬಳ್ಳಾರಿ ಜಿಲ್ಲಾ:- ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ, ಬಳ್ಳಾರಿ, ಹಡಗಲಿ, ಕೂಡ್ಲಿಗಿ, ಆದವಾನಿ **ಅನಂತಪುರ:-** ಅನಂತಪುರ, ಬೆಳಗುಪ್ಪ, ಧರ್ಮಾವರಂ, ಕದಿರಿ, ಪಾಮಿಡಿ, ತಿಮ್ಮನಚೆರ್ಲ, ಉರವಕೊಂಡ, ಹಿಂದೂಪುರ, ಗುತ್ತಿ. **ಕರ್ನೂಲು:-** ಕರ್ನೂಲು ಪತ್ತಿಕೊಂಡ.
ಕಡಪ:- ರಾಜಂಪೇಟೆ, ಕಡಪ. **ಚಿತ್ತೂರು:-** ಚಿತ್ತೂರು, ಮದನಪಲ್ಲಿ, ತಿರುಪತಿ, ನಾಗರಿ, ವಾಯಲ್ಪಾಡು
ಫಿಕ್ಸ್‌ಡ್ ಡಿಪಾಜಿಟ್‌ನ ಬಡ್ಡೀದರ:- 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2 ವರ್ಷಗಳಿಗೆ 3½%.
ಕರೆಂಟು ಅಕೌಂಟು: 1%, **ಸೇವಿಂಗ್ಸ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%
ಮಾಸಿಕ ಪ್ರಾವಿಡೆಂಟ ಫಂಡ ಡಿಪಾಜಿಟ್:- 3%. **ಬಿ ವಿ. ಶೇಷಗಿರಿರಾವ್, ಕಾರ್ಯದರ್ಶಿ.**

ವುದಿಲ್ಲ. ಬೆಲ್ಲವು ಸಿಗದಾದ ಕೂಡಲೇ "ಕಾಂಗ್ರೆಸಿಗರು ಬಂದು ಹಬ್ಬಕ್ಕೆ ಬೆಲ್ಲವಿಲ್ಲದಂತೆ ಮಾಡಿದರು." ಎಂದು ಅನ್ನಲು ಜನರು ಪ್ರಾರಂಭಿಸುತ್ತಾರೆ. ಅವರಿಗೆ, ತಿಳಿದವರು ತಿಳಿಸಿ ಹೇಳಬೇಕು. ಮತ್ತು ಕಾಂಗ್ರೆಸ ಮಂತ್ರಿ ಮಂಡಳಿಗಳು ಕಷ್ಟನಷ್ಟಗಳನ್ನು ತಿಳಿದುಕೊಂಡು, ಅವುಗಳನ್ನು ನಿವಾರಿಸುವ ಕಾರ್ಯ ಮಾಡಲು ಬಂದರೆ ಅದನ್ನು ನೀಡಲು ಮುಂದೆ ಬರಬೇಕು. ಕನಿಷ್ಟ ಅವರ ಬಗ್ಗೆ ಟೀಕೆಗಳನ್ನು ಮಾಡುವುದನ್ನು ಬಿಟ್ಟರೂ ಬಹಳ ಕಾರ್ಯ ಮಾಡಿದಂತಾಗುತ್ತದೆ. ಈ ರಾಜಕಾರಣಿ ಮಾತನ್ನು ಅರಿತುಕೊಂಡು ನಾವು ಮುಂದೆ ಸಾಗಿದರೆ ನಮ್ಮ ದೇಶದ ಗೌರವವು ಇಡೀ ಜಗತ್ತಿನಲ್ಲಿ ಮನ್ನಿಸಲ್ಪಡುವ ಸ್ಥಿತಿಗೆ ನಾವು ಮುಟ್ಟುವೆವು. (ಜಯ ಹಿಂದ)

ಕೂಡ್ಲಿಗೆ

ನೆಹರೂ ತರುಣಸಂಘದವರು ಏಪ್ರಿಲ್ ೬ ನೆಯ ದಿನಾಂಕದಿಂದ ೧೩ ರವರೆಗೆ ನಡೆದ ರಾಷ್ಟ್ರೀಯ ಪಾಠವನ್ನಾಚರಿಸಲು ನಿರ್ಧರಿಸಿ ಶ್ರೀಗಳಾದ ಟೇಕೂರು ಸುಬ್ರಹ್ಮಣ್ಯಂ, ಚನ್ನಪ್ಪವಾಲಿ, ಇಜಾರಿ ಸಿರನಪ್ಪ ಜೋಳದರಾಸಿ ದೊಡ್ಡನಗೌಡ ವಗೈರೆ ಮಹನೀಯರನ್ನು ಆಹ್ವಾನಿಸಿತ್ತಿರುವರು.

ಎಮ್ಮಿಗನೂರು (ಆದವಾನಿ)

೧೬-೩-೪೭ ನೆಯ ದಿನಾಂಕ ಇಲ್ಲಿ ನಡೆದ ಆದವಾನಿತಾಲೂಕು ಉಪಾಧ್ಯಾಯ ಸಂಘದ ಸಾಮಾನ್ಯ ಸಭೆಯಲ್ಲಿ ಈ ಕೆಳಗಿನ ಮಹನೀಯರು ಅಧಿಕಾರವರ್ಗಕ್ಕೆ ಆರಿಸಲ್ಪಟ್ಟರು.

ಅಧ್ಯಕ್ಷ—ಜಿ ಯಸ್. ಮುಸ್ತಾಸಸಾಹೇಬ್, ಕಾರ್ಯದರ್ಶಿ ರಾಮಾಚಾರ್ಯ ಉಪಕಾರ್ಯದರ್ಶಿ ಕೆ ಯಜ್. ನರಸಿಂಗರಾವು ಕೋಶಾಧ್ಯಕ್ಷ ಎಂ. ಕುಪ್ಪಮ್ಮ ಕಾರ್ಯಕಾರೀಸಮಿತಿಯಲ್ಲಿ ನಬಿಸಾಹೇಬ್, ಖಾಜಾಹುಸೇನ್, ರಾಜಾರಾಂಸಿಂಗ್, ಮಾರೆಪ್ಪ, ಬೂದಯ್ಯ, ಲಕ್ಷ್ಮಣಾಚಾರ್, ಕೃಷ್ಣಮೂರ್ತಿ, ಜ್ಞಾನಪ್ಪ, ವಿರುಪಾಕ್ಷಭಟ್ಟ ಇವರಿದ್ದಾರೆ.

ಏಪ್ರಿಲ್ ೧೯. ೫೦ ನೆಯ ದಿನಾಂಕ ಗುಂಟೂರಿನಲ್ಲಿ ನಡೆಯುವ ಆಂಧ್ರೋದ್ಭವ ಪ್ರಾಥಮಿಕೋಪಾಧ್ಯಾಯರ ಸಮ್ಮೇಳಕ್ಕೆ ಕಸಿಷ್ಟರ ಪ್ರತಿನಿಧಿಗಳನ್ನಾದರೂ ಕಳುಹಿಸಬೇಕೆಂದು ಶ್ರೀ ಮುಸ್ತಾಸಸಾಹೇಬರು ಕೋರಿದ್ದಾರೆ.



Guarranteed Pure Pyra Gingelly oil

Best for Pickles, Cooking & Cooling.

DISTRIBUTORS:—

1 M/S. V. M. GIRI & SONS.

(Pro:- M, S Acharya) Car Street, Bellary

2 M/S. . HUSANJEE RAO. M VENKOJI RAO

General Merchants, Car Street Bellary.

ಶುದ್ಧ ! ಗ್ಯಾರಂಟಿಯಾದ್ದು !! ಸತ್ವಕಾರಿ !!!

—ಪೈರ ಎಳ್ಳೆಣ್ಣೆ—

ಕಣ್ಣಿಗೆ ಬಹಳ ತಂಪಾದ್ದು. ಅಡಿಗೆಯ ಎಲ್ಲಾ ಪದಾರ್ಥಗಳಿಗೆ ಬಳಸಲು ಶ್ರೇಷ್ಠವಾದ ಎಣ್ಣೆಯಿದು. ಉಪ್ಪಿನಕಾಯಿಗೆ ಈ ಎಣ್ಣೆಯನ್ನುಪಯೋಗಿಸುವದರಿಂದ ಬಹಳಕಾಲ ಕೆಡದಂತಿಡಬಹುದು.

ಹಂಚಿಕೆದಾರರು ಉಳ್ಳವರು. 1) ವಿ ಎಂ. ಗಿರಿ ಅಂಡ್ ಸನ್ಸ್-ತೇರು ಬೀದಿ, ಬಳ್ಳಾರಿ. (ಎಂ. ಎಸ್. ಆಚಾರ್ಯ) 2) ಎಂ. ಹುಸೇಂಜಿರಾವ್, ಎಂ. ವೆಂಕೋಬರಾವ್. ತೇರುಬೀದಿ, ಬಳ್ಳಾರಿ.

ಸು ಭಾ ಷ್
ರಾ ಷ್ಟ್ರ ಗೀ ತೆ.

ಸಿದ್ಧವಾಗಿರುತ್ತದೆ — ಕ್ರಯ ೦—೮—೦.

ಸುಂದರ ಮುದ್ರಣ — ಇಲ್ಲಿಯವರೆವಿಗೆ ಪ್ರಭಾತ ಫೇರಿ ರಾಷ್ಟ್ರೀಯ ಸಮಾವೇಶಗಳಲ್ಲಿ ಹಾಡಲ್ಪಟ್ಟ ಎಲ್ಲಾ ಮುಖ್ಯ ದೇಶಭಕ್ತ ಕವಿಗಳ ಕನ್ನಡ ಮತ್ತು ಹಿಂದೀ ಭಾಷೆಯಲ್ಲಿನ ರಾಷ್ಟ್ರಗೀತೆಗಳ ಸಮಗ್ರ ಸಂಗ್ರಹ. ಕರ್ನಾಟಕದಲ್ಲಿ ರಾಷ್ಟ್ರ ಗೀತೆಗಳ ಇಷ್ಟುದೊಡ್ಡ ಸಂಗ್ರಹವು ಇದುವರೆಗೆ ಪ್ರಕಟವಾಗಿಲ್ಲ. ಸ್ವಲ್ಪೇ ಪ್ರತಿಗಳು ಪ್ರಕಟವಾಗಿವೆ. ಹೆಚ್ಚು ಕೊಳ್ಳುವವರಿಗೆ ಕಮಿಶನ್ ಕೊಡಲಾಗುತ್ತದೆ.

'ನವಭಾರತ' ಕಾರ್ಯಾಲಯ ಬಳ್ಳಾರಿ.

—ರಾಷ್ಟ್ರೀಯ ಪುಸ್ತಕಗಳು.—

— ಕಾಂಗ್ರೆಸ್ ಸ್ವರೂಪ ದರ್ಶನ —

ರಾಷ್ಟ್ರೀಯ ಶಿಕ್ಷಣ	0—8—0
ಅಸ್ಪೃಶ್ಯತಾ ನಿವಾರಣೆ	0—12—0
ಪ್ರಾಂತಭಾಷೆ-ರಾಷ್ಟ್ರಭಾಷೆ	0—6—0
ಖಾದಿ	0—8—0
ಕಾಂಗ್ರೆಸ್ ಮತ್ತು ಸ್ವಯಂಸೇವಕದಳ	0-10-0
ಸತ್ಯಾಗ್ರಹ (ಇತಿಹಾಸ-ತಂತ್ರ)	0—8—0

ವಿ. ಪಿ. ಖರ್ಚಿಗೆ ಬೇರೆ. ಇನ್ನು ಅನೇಕ ಪುಸ್ತಕಗಳು ದೊರೆಯುತ್ತವೆ —

ನವಭಾರತ ಕಾರ್ಯಾಲಯ, ಬಳ್ಳಾರಿ.

NAVA BHARAT, BELLARY. Reg. No. M. 4746

ನವಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು. **Subscription Rates**

ವರ್ಷಕ್ಕೆ	5-0-0	One Year	5—0—0
೬ ತಿಂಗಳಿಗೆ	3-0-0	Six months	3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ		Subscription will not be accepted for less than 6 months.	

To

SRI..... .. ..

....

....

Printed at Krishna Press Bellary QH No. B 17 FOR (Q.H. NO. B-5.)
Edited & Published by T. B. KESHAVARAO

ಜೈಹಿಂದ್ Reg. No. M. 4746

ನವಚೇತನ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಸಂಪುಟ ೬ ಸಂಚಿಕೆ ೧೪ | ಬಳ್ಳಾರಿ ಏಪ್ರೆಲ್ ೭ ಸೋಮವಾರ ೧೯೪೭ | ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವ್.

—ಹರಿಜನರಿಗೆ ಮುಕ್ತದ್ವಾರ—

ಕಾಯ್ದೆಯು ಜಾರಿಯಲ್ಲಿಬಂದಿತು.

ಭಾವಿ, ಕೆರೆ, ಛತ್ರಸಾರ್ವಜನಿಕ ಸಂಸ್ಥೆಗಳೇ ಅಲ್ಲದೆ ಕ್ಷೌರದಂಗಡಿಗಳು ಹೋಟೆಲುಗಳು, ಮೇಳ ಭಜಂತ್ರಿಯವರು ಇನ್ನುಮೇಲೆ ಹರಿಜನರಿಗೆ ಆಟಂಕ ಮಾನದಂತೆ ಸಮಾನ ವರ್ತನೆಯನ್ನುಕೊಡಬೇಕು. ಈ ಕಾಯ್ದೆಯು ೧೧—೪—೪೭ ರಿಂದ ಜಾರಿಯಲ್ಲಿ ಬಂದಿದೆ ಇದನ್ನು ಉಲ್ಲಂಘಿಸಿದವರಿಗೆ ಜುಲ್ಮಾನೆ, ಶಿಕ್ಷೆಯಾಗುವುದು.

ಆಸಾಮ ಮೇಲೆ ದಾಳಿ

ಬಂಗಾಲದ ಮೈಮೆನ್‌ಸಿಂಗ್ ಜಿಲ್ಲೆಯಿಂದ ೧೦ ಸಾವಿರ ಮುಸಲ್ಮಾನರು ದಾಳಿಮಾಡುವ ಭಯ ತೋರಿಸಿದ್ದಾರೆ. ಆಸಾಮಸರ್ಕಾರದವರು ಕೇಂದ್ರ ಸರಕಾರದ ಸಹಾಯ ಕೋರಿ ಆಸಾಮಿನಲ್ಲಿ ಗಲಭೆಯಾಗದಂತೆ ಸೈನ್ಯದ ವ್ಯವಸ್ಥೆಗೇರ್ಪಡಿಸಿರುವರು.

ಗಾಂಧಿ-ವೈಸ್ರಾಯರ ಸಂಧಾಸನೆ

ಮಹಾತ್ಮಗಾಂಧಿ ಮತ್ತು ವೈಸ್ರಾಯರಾದ ಲಾರ್ಡ್‌ಮೌಂಟ್ ಬ್ಯಾಟನ್ನರೊಡನೆ ಕಳೆದ ಸೋಮವಾರದಿಂದ ಮಾತುಕತೆಗಳ ಪ್ರಾರಂಭವಾಗಿವೆ. ಹಿಂದೂಸ್ತಾನಕ್ಕೆ ಬರುವವರ್ಷ ಅಧಿಕಾರ ಬಿಟ್ಟುಕೊಡುವ ಸಂದರ್ಭದಲ್ಲಿ ಪೂರ್ವಭಾವಿಯಾಗಿ ಮಾಡಬೇಕಾದ ಕೆಲಸಗಳನ್ನು ಕುರಿತು, ಮತ್ತು ಹಿಂದೂಸ್ತಾನದಲ್ಲಿ ಐಕ್ಯವನ್ನು ಮಾಡಿ ಶಾಂತಿಪ್ರಸ್ಥಾಪನೆ ಮಾಡುವದಕ್ಕಾಗಿ ಸಲಹೆಗಳಿಗೆ ವಿಚಾರ ವಿನಿಮಯನಡೆದಿದೆ ಕಾಂಗ್ರೆಸ್ ಅಧ್ಯಕ್ಷರಾದ ಆಚಾರ್ಯಕೃಪಾಲಿನಿಯವರು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸದಸ್ಯರುನೆಹಲಿಯಲ್ಲಿ ಹಾಜರಿರಬೇಕೆಂದು ತಿಳಿಸಿರುವರು.

ಶ್ರೀ ಸೀತಾರಾಮರೆಡ್ಡಿ

ಮಾನ್ಯಮಂತ್ರಿಗಳಾದ ಶ್ರೀ ಹೆಚ್. ಸೀತಾರಾಮರೆಡ್ಡಿಯವರು ಬಳ್ಳಾರಿ ಜಿಲ್ಲೆಯಲ್ಲಿ 4–5 ನೆಯ ತಾ. ಆದವಾನಿ, ಕೋಸಿಗಿ, ಎಮ್ಮಿಗನೂರು, ಆಲೂರು ಮೊಲಗವೇಲಿ ಹಾಲಹರ್ವಿ, ಹರ್ದಿಗೆರೆಗಳನ್ನು ಸಂದರ್ಶಿಸಿ 6–7 ನೆಯ ತಾ. ಬಳ್ಳಾರಿ ಕಾರ್ಯಕ್ರಮಗಳನ್ನು ಪೂರೈಸಿಕೊಂಡು ಮದ್ರಾಸಿಗೆ ತೆರಳಿದರು.

166



10th Year of Publication
7th April 1947

ಈ ಅನ್ಯಾಯವನ್ನು ಹೋಗಲಾಡಿಸಿರಿ ಹಳ್ಳಿಗರಲ್ಲಿ ವಿನಂತಿ.

ಹರಿಜನರನ್ನು ಅಸ್ಪೃಶ್ಯರೆಂದು ಗಣಿಸಿ, ಅವರನ್ನು ಕೀಳುತರದ ಮನುಷ್ಯರನ್ನಾಗಿ ನೋಡಿಕೊಳ್ಳುವರೂಢಿ ಸಾಂಪ್ರದಾಯಗಳಿಗೆ ಶಾಸ್ತ್ರಾಧಾರವಿಲ್ಲ. ಮನುಷ್ಯರನ್ನು ಮನುಷ್ಯರೇ ಈ ಪ್ರಕಾರವಾಗಿ ಶಾರೀರಿಕ, ಮಾನಸಿಕ ಬಾಧೆಗಳಿಗೆ ಗುರಿಮಾಡುವ ಉದಾಹರಣೆಗಳು ಭಾರತದಲ್ಲಿ ಬಿಟ್ಟರೆ, ಮತ್ತೆಲ್ಲಿಯೂ ದೊರೆಯುವುದಿಲ್ಲ. ಕುಡಿಯಲಿಕ್ಕೆ ನೀರಿನಸೌಲಭ್ಯ, ವಿದ್ಯಾಭ್ಯಾಸ, ಆರ್ಥಿಕ ಪರಿಸ್ಥಿತಿಗಳಲ್ಲಿ ಸುಧಾರಣೆ, ಸವರ್ಣೀಯರಿಗಿರುವ ಸಾಮಾನ್ಯಹಕ್ಕುಗಳು ಹರಿಜನರಿಗೂಬೇಕು. ಸರ್ಕಾರದವರು ಇವರಿಗೆ ಪ್ರತ್ಯೇಕ ಏರ್ಪಾಟುಗಳನ್ನುಮಾಡಿ ಕಾಯ್ದೆಗಳನ್ನು ಮಾಡಬೇಕಾಯಿತು. ಇನ್ನೂಅನೇಕ ಹಳ್ಳಿಗಳಲ್ಲಿ ಸವರ್ಣೀಯರು ಹರಿಜನರನ್ನು ಪಶುಗಳಂತೆ ನೋಡಿಕೊಳ್ಳುತ್ತಿರುವರು.

ಇಪ್ಪತ್ತನೆಯ ಶತಮಾನದ ಈ ಕಾಲದಲ್ಲಿ ಜಾತಿಭೇದವರ್ಣಭೇದಗಳು ಮಾಯವಾಗುತ್ತಲಿವೆ. ದೇಶದೇಶಗಳೇ ಸ್ವತಂತ್ರವಿರಲು ಸಾಧ್ಯವಿಲ್ಲೆಂದು ಪ್ರಸಂಗವಸಂಸ್ಥೆ ಸಂಘಗಳು ಏರ್ಪಾಟಾಗುತ್ತಲಿವೆ. ನಮ್ಮ ಆಹಾರಧಾನ್ಯಗಳ ಪೂರೈಕೆಗಾಗಿ ನಾವು ಅಮೆರಿಕಾ ಆರ್ಜೆಂಟೈನಾ ದೇಶಗಳನ್ನವಲಂಬಿಸ ಬೇಕಾಗಿದೆ-ಹೀಗಿರಲು ನಮ್ಮ ದೇಶದಲ್ಲಿ ಹುಟ್ಟಿ, ನಮ್ಮ ಸಮಾಜದಲ್ಲಿ ಬೆಳೆದು, ನಮ್ಮಂತಿರುವವರನ್ನೇ ದೂರಮಾಡುವುದುಯೋಗ್ಯವಲ್ಲ.

ಸರಕಾರದ ಕಾಯ್ದೆಗಳಾದ್ದರೂ, ಸಾರ್ವಜನಿಕರ ಸಹಕಾರದಿಂದ ಯಶಶ್ಶಿಯಾಗುತ್ತಲಿವೆ. ತಮಗೆ ಕಾಯ್ದೆಯ ಬೆಂಬಲವಿದೆಯೆಂದು, ಇತರ ಹಿಂದೂಗಳೊಡನೆ ವೈಷಮ್ಯವನ್ನು ಕಟ್ಟಿಕೊಳ್ಳಬಾರದು. ಹಿಂದೂಗಳಾದರೂ, ದುಷ್ಟ ಪೂರ್ವಾಚಾರಗಳನ್ನು ಬದಿಗೊತ್ತಿ ಹರಿಜನರನ್ನು ತಮ್ಮ ಸೋದರರಂತೆ, ಬಂಧುಗಳಂತೆ ಸ್ವಾಗತಿಸಿ, ಅವರಿಗೆ ಎಲ್ಲಾ ಹಕ್ಕುಗಳನ್ನುಕೊಡಿಸಿ ಸಮಾಜದಲ್ಲಿ ತಮಗಿರುವ ಗೌರವಸ್ಥಾನವನ್ನು ಕಾಪಾಡಿಕೊಳ್ಳಬೇಕು.

ಏಶಿಯಾಪರಿಷತ್ತು ಮಹಾತ್ಮರ ಭಾಷಣ

ಏಷಿಯಾ ಪರಿಷತ್ತಿನಲ್ಲಿ (ದೆಹಲಿ) ಮಹಾತ್ಮಗಾಂಧಿಯವರು ಭಾಷಣಮಾಡುತ್ತಾ ವಿಶ್ವಜಗತ್ತಿನ ನಿರ್ಮಾಣಕ್ಕಾಗಿ ಎಲ್ಲರು ಹೆಣಗಬೇಕೆಂದೂ, ಭಾರತದಲ್ಲೇ ಪ್ರತಿಸರ್ವವೂ ಏಷಿಯಾ ರಾಷ್ಟ್ರಗಳ ಪರಿಷತ್ತು ಕೂಡಬೇಕೆಂದೂ, ಭಾರತದ ಜಾತೀಯ ದಂಗೆಗಳನ್ನುನೋಡಿ ಭಾರತೇಯರು ಒಕ್ಕಟ್ಟಾಗಿರಲು ಯೋಗ್ಯರಲ್ಲವೆಂಬ ಭಾವನೆಯನ್ನು ಇಲ್ಲಿಂದ ಕೊಂಡೆಯೊಯ್ಯಬಾರದೆಂದೂ ವಿಸ್ತರಿಸಿದರು.

ಕಳೆದವಾರ ಬೊಂಬಾಯಿಯಲ್ಲಿ ಆಕಸ್ಮಿಕವಾಗಿ ಬಂಗೆಯಾಗಿ ೫೩ ಜನಗಳುಸತ್ತರು. ಕಲ್ಕತ್ತೆಯಲ್ಲಿ ಪರಿಸ್ಥಿತಿಯು ಹಿಮಿತಕ್ಕೆಬಂದಿಲ್ಲ. ಪಶ್ಚಿಮ ಪಂಜಾಬಿನಿಂದ ಹಿಂದೂ-ಸಿಕ್ ಜನರು ಆಸ್ತಿ-ಪಾಸ್ತಿಗಳನ್ನು ಬಿಟ್ಟುಕೊಟ್ಟು ಪಟ್ಟಣಗಳಿಗೆ ಬರುತ್ತಿರುವುದಾಗಿ ಒಂದು ಪ್ರಕಟನೆ ಹೊರಟಿದೆ.

ಮದ್ರಾಸ್ ವೀರಶೈವಮಹಾಸಭೆ.

ಮದ್ರಾಸಿನಲ್ಲಿ ಸಮಾವೇಶನಾಗಲಿರುವ ದಕ್ಷಿಣ ಹಿಂದೂಸ್ತಾನದ ವೀರಶೈವ ಮಹಾಸಭೆಗೆ ರಾವಬಹದ್ದೂರ್ ಶ್ರೀ. ಮಹಾಬಲೇಶ್ವರಪ್ಪನವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು.

The Rayalaseema Bank Limited, Bellary.
ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:— ಬಳ್ಳಾರಿ ಜಿಲ್ಲಾ:- ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ, ಬಳ್ಳಾರಿ, ಹಡಗಲಿ, ಕೂಡ್ಲಿಗಿ, ಆದವಾನಿ **ಅನಂತಪುರ:-** ಅನಂತಪುರ, ಬೆಳಗುಪ್ಪ, ಧರ್ಮಾವರಂ, ಕದಿರಿ, ಪಾವಿಡಿ, ತಿಮ್ಮನಚೆರ್ಲ, ಉರವಕೊಂಡ, ಹಿಂದೂಪುರ, ಗುತ್ತಿ. **ಕರ್ನೂಲು:-** ಕರ್ನೂಲು ಪತ್ತಿಕೊಂಡ. **ಕಡಪ:-** ರಾಜಂಪೇಟೆ, ಕಡಪ. **ಚಿತ್ತೂರು:-** ಚಿತ್ತೂರು, ಮದನಪಲ್ಲಿ, ತಿರುಪತಿ, ನಾಗರಿ, ವಾಯಲ್ಪಾಡು

ಫಿಕ್ಸ್‌ಡ್ ಡಿಪಾಜಿಟ್‌ನ ಬಡ್ಡಿದರ:— 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2 ವರ್ಷಗಳಿಗೆ 3½%.
ಕರೆಂಟು ಅಕೌಂಟು: 1%, **ಸೇವಿಂಗ್ಸ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.
ಮಾಸಿಕ ಪ್ರಾವಿಡೆಂಟ ಫಂಡ ಡಿಪಾಜಿಟ್:- 3%.

ಬಿ. ವಿ. ಶೇಷಗಿರಿರಾವ್, ಕಾರ್ಯದರ್ಶಿ.

ಬಳ್ಳಾರಿ ಜಿಲ್ಲಾ
—: ಆಹಾರ ಬಟ್ಟೆ ಸಮಿತಿ :—

ಜಿಲ್ಲಾ ಕಲೆಕ್ಟರ್ ಶ್ರೀ ಕೆ. ಎನ್. ಅನಂತರಾಮನ್‌ರ ಅಧ್ಯಕ್ಷತೆಯಲ್ಲಿ 31—3—47 ನೆಯ ಸೋಮವಾರ ಸಭೆಯು ಸಮಾವೇಶವಾಗಿ ಆಹಾರ, ಬಟ್ಟೆಗಳ ಪರಿಸ್ಥಿತಿಯು ವಿಮರ್ಶಿತವಾಯಿತು. ಹಳ್ಳಿಗಳಿಗೆ ಸಾಕಷ್ಟು, ಸಕಾಲಕ್ಕೆ ಅಕ್ಕಿ, ಚಿನ್ನಿಎಣ್ಣೆ ದೊರೆಯುತ್ತಿಲ್ಲ. ಕೆಲ ತಾಲೂಕುಗಳಲ್ಲಿ ಕಡಮೆ ಬೆಳೆಯಾದಕಾರಣ ಧಾನ್ಯ ಸಂಗ್ರಹ (ಸರ್ಕಾರದವರಿಂದ) ಕಠಿಣವಾಗುತ್ತಲಿದೆ. ಗೋಧಿ ಇಲ್ಲದುದರಿಂದ ಇದನ್ನುಪಯೋಗಿಸುವವರಿಗೆ ಕಷ್ಟವಾಗುತ್ತಲಿದೆ. ವಾರಕ್ಕೆರಡುಸಲ ಧಾನ್ಯ ಸಂಗ್ರಹ ಡಿಪೋಗಳಿಗೆ ಓಡಾಡುವುದು ಅಸಾಧ್ಯ — ಬಂದರೂ ಜಾಗ್ರತೆ ಕೆಲಸವಾಗುವುದಿಲ್ಲ. ಹರಪನಹಳ್ಳಿ ಹಡಗಲಿ ತಾಲೂಕುಗಳಲ್ಲಿ ಧಾನ್ಯಸಾಗಿಸಲು, ಸಂಗ್ರಹಿಸಲು ಲಾರಿಬೇಕು. ಮಗ್ಗೆರೆ ವಿಷಯಗಳ ವಿಮರ್ಶೆಯಾಯಿತು.

ಬಟ್ಟೆ ವಿಷಯಕ್ಕೆ :- ಐ. ಎ. ಟಿ. ಸಿ. ಶ್ರೀ ಸುಬ್ಬರಾಯರ ಸೂಚನೆಗಳು ಮಾನ್ಯವಾದವು. ಆ ಸೂಚನೆಗಳು ಹಿಂದೆ ನವಭಾರತದಲ್ಲಿ ಪ್ರಕಟಿಸಲಾಗಿವೆ. ಹರಿಜನರಿಗೂ, ಲಂಬಾಣಿಗಳಿಗೂ ಲೈಸನ್ಸು ಕೊಡುವರು. ಇನ್ನು ಆದವಾಸಿಯವರೇ ನೂಲಿನ ವ್ಯಾಪಾರ ಮಾಡದಂತೆ ಜಿಲ್ಲೆಯವರೆಲ್ಲಾ ಈ ವ್ಯಾಪಾರಕ್ಕೆ ಕೈಹಾಕಲು ಅವಕಾಶ ಕೊಡಲಾಗುವುದು. 1939 ರಲ್ಲಿ 7 ಸಾವಿರ ಮಗ್ಗಗಳಿದ್ದು ಈಗ 20 ಸಾವಿರ ಮಗ್ಗಗಳಾಗಿವೆ. ಸುಳ್ಳು ಮಗ್ಗಗಳ ಲೆಕ್ಕ ಕೊಟ್ಟಿರುವುದೇ ಕಾರಣ ಇನ್ನುಮೇಲೆ ಮಗ್ಗಗಳಿರುವವರಿಗೇ ನೂಲು ಕೊಡುವಾಗುತ್ತೆ ಎಂದು ಶ್ರೀ ಸುಬ್ಬರಾಯರು ತಿಳಿಸಿದರು.

ಬಳ್ಳಾರಿ ಗಾಂಧಿನಗರ ಸೈಯರ್ ಎಲಿಮೆಂಟರಿ ಶಾಲೆಯಲ್ಲಿ "ಹಳ್ಳಿವಾಸ, ಹಳ್ಳಿಣವಾಸ" ಈ ವಿಷಯದಬಗ್ಗೆ ಶ್ರೀ ಸೂರ್ಯನಾರಾಯಣ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಚರ್ಚೆಯು ನಡೆಯಿತು. ಇಂದಿರು ಶ್ರೀನಿವಾಸದಾಸ್, ರಹೀಂ, ತಿಮ್ಮಾರೆಡ್ಡಿ ಭಾಗವಹಿಸಿದರು.

ನವಭಾರತಕ್ಕೆ ಚಂದಾದಾರರಾಗಿರಿ

Woolen Coatings, Silk Sarees, Benares and other latest designs Handloom and Mill made Clothes Etc, Colours Guaranteed, Prices very reasonable. Trial Solicited.

G. GOPAL SING & SON.,
CLOTH MERCHANT
No. 15 Old Market BELLARY.
ಜಿ. ಗೋಪಾಲ ಸಿಂಗ್ ಅಂಡ್ ಸನ್,
ಜವಳಿ ವ್ಯಾಪಾರಿ, ನಂ. 15
ಹಳೇ ಮಾರ್ಕೆಟ್, ಬಳ್ಳಾರಿ.

ಉಲನ್ ಕೋಟ್ ಬಟ್ಟೆ, ಬನಾರಸ್ ಜರಿ, ಶಿಲ್ಕ್-ಟಿಶ್ಯು ಸೀರೆ ಜಾಕೆಟ್ ಲೇಸ್ ಬಾರ್ಡರ್ ಮತ್ತು ಇತರ ಜನೀಕ ವಿವಿಧ ಅತ್ಯಂತ ಅಧುನಿಕ ಉಡುಪಿನ ಬೇಡಿಕೆಯನ್ನು ನಾವು ಪೂರೈಸಲಿದ್ದೇವೆ. ಕೈ ಮಗ್ಗದ ಮಿಲ್ ಬಟ್ಟೆಗಳು ವಿಧಾಯಕ ಬೆಲೆಗೆ ದೊರೆಯುತ್ತವೆ. ಬಣ್ಣ ಗ್ಯಾರಂಟಿ, ಬೆಲೆ ಸರಿಯೂದ್ದು. ಪರೀಕ್ಷಿಸಿ ನುಸಗಾಣಿರಿ.

ಹ ಚ್ಚೊ ಳ್ಳಿ

'ನವಭಾರತ'ದಲ್ಲಿ ಸೂಚಿತವಾದ ಪ್ರಕಾರಕ್ಕೆ ಇಲ್ಲಿಗೆ ಉಗಾದಿ ಹಬ್ಬದ ದಿನವೇ 1360 ಗಜ ಬಟ್ಟೆ ಯುಬಂದಿತು. ಇಲ್ಲಿನ ಜನಸಂಖೆ 2100. ಬಟ್ಟೆಯನ್ನು ಒಂದುಗಜದ ಪ್ರಕಾರ ಹಂಚಲುಯತ್ನಿಸಿ ವಿರೋಧಿಪಕ್ಷದವರಿಂದ ಸಾಗದೆ ನಿಂತು ಹೋಯಿತು. ಅರ್ಧ ಗಜದಂತೆ ಹಂಚಲಿತ್ನಿಸಿ ಅದೂ ಸಾಧ್ಯವಾಗದೆ, ಗ್ರಾಮಚಾವಡಿಯಲ್ಲಿ ಅಧಿಕಾರಿಗಳಿಗೆಂದು ಗಜಕೊಟ್ಟು ಉಳಿದ ಕೆಲವರಿಗೆ ಮಾತ್ರ ಹಂಚಲಾಯಿತು— ಮುಂದಾದರೂ ಇಂಥಾ ಅವಿವೇಕವಾಗದಂತೆ ನೋಡಿಕೊಳ್ಳಬೇಕು. ಧಾನ್ಯವಸೂಲಿ ಈಗ ಪ್ರಾರಂಭವಾಗಿ, ಎಕರೆಗೆ 20 ಸೇರು ಕೊಡಬೇಕೆಂದು ನಿರ್ಣಯಿಸಿದ್ದಾರೆ. ಈ ವರ್ಷ ರೈತರಿಗೆ ಮುಂಗಾರಿ ಜೋಳತಕ್ಕ ಮಟ್ಟಿಗಾಗಿದ್ದು, ನವಣೆ ಬಿಳಿಜೋಳ ಒಂದೆರಡಾಣೆ ಯಾಗಿದೆ. ಮುಂಗಾರಿ ಕಣಗಳು ನವಂಬರಿನಲ್ಲಿಯೇ ಮುಗಿದವು. 6 ತಿಂಗಳು ಕಡಿಮೆ ಗ್ರಾಸಬಂದ ಕಾರಣ ಈಗ ಮುಗಿದುಹೋಗಿದೆ. ನವಣೆ ಬಿಳಿಜೋಳ ಕೊಯ್ಯುವ ಕೂಲಿ, ಕಣದಖರ್ಚಿಗೆ ಸಾಲದಾಯಿತು. ದೊಡ್ಡರೈತರು ಪ್ರೊಕ್ಯೂರ್‌ಮೆಂಟ್ ಕೊಡಬಲ್ಲರು. ಕೂಲಿಯವರಿಗೆ ಈ ಭಾದೆಯಿಲ್ಲ. ಮಧ್ಯವರ್ಗದವರಿಗೆ ಬಹಳ ಕಷ್ಟಕಾಲಬಂದಿದೆ. ಕಾಳಿಲ್ಲದವರಿಗೆ ಕಾಳುಕೊಡಿಸಬೇಕು. ಅವರ ಮೇಲೆ ಸರ್ಕಾರದವರು ಒತ್ತಾಯ ನಡೆಸಬಾರದು.

[ಇಂಥಾ ವಿಷಯಗಳನ್ನು ದಸ್ಕತ್ತುಹಾಕಿ ಕಳುಹಿಸುವುದರಲ್ಲೇನೂತಪ್ಪಿಲ್ಲ. ಅಂಜಿಕೆಯಿಂದ ನೀವು ಹೆಸರಿಲ್ಲದೆ ಪತ್ರಗಳನ್ನು ಕಳುಹಿಸಿದರೆ ಇನ್ನುಮೇಲೆ ಪ್ರಕಟಿಸುವುದಿಲ್ಲ. ನಿಮ್ಮ ವ್ಯವಸಾಯಸಂಘದ ಕಾರ್ಯದರ್ಶಿಗಳ ಮೂಲಕ ನಮಗೆ ನಿಜಾಂಶಗಳನ್ನು ತಿಳಿಸಿರಿ. ಸಂಪಾದಕ]

ಉಪವಾಸವು ಸದ್ಯಕ್ಕೆ ನಿಂತಿದೆ

ದತ್ತಾತ್ರೇಯಾಶ್ರಮದ ಸಣ್ಣಸ್ವಾಮಿ ವೈರಾಗ್ಯನಂದರು ೫೫ ನೆಯ ದಿನಾಂಕ ಪ್ರಾರಂಭವಾಗಬೇಕಾದ ಉಪವಾಸವನ್ನು ಮುಂದುವರಿಸಿರುವರು. ಜಿಲ್ಲಾ ಹರಿಜನ ಸೇವಕ ಸಂಘದ ಶ್ರೀ ಕೇಶವರಾಯರೂ, ಬಳ್ಳಾರಿ ಡೆಪ್ಯುಟೀ ಕಲೆಕ್ಟರ್ ಶ್ರೀ ನಿಚ್ಚಿರೆಡ್ಡಿಯವರೂ ಸ್ವಾಮಿಗಳಿಗೆ ತಕ್ಕ ಸಲಹೆ ಸೂಚನೆ ಕೂಟ್ಟು ಸರಿಯಾದ ಬೇಡಿಕೆಗಳನ್ನು ಮುಂದಿಟ್ಟು ಅವುಗಳನ್ನು ಸಂಬಂಧಿಸಿದ ಅಧಿಕಾರಿಗಳು ಪೂರ್ಣ ಮಾಡದಿದ್ದರೆ ಆಗ ಉಪವಾಸದಾಲೋಚನೆ ಮಾಡಲು ಹೇಳಿದ ನಂತರ ಸ್ವಾಮಿಗಳೊಪ್ಪಿದರು.

ಪಂಜಾಬಿನಲ್ಲಿ ಜಾತೀಯ ಮಂತ್ರಿಮಂಡಲವನ್ನು ಸ್ಥಾಪಿಸುವುದು ಅನ್ಯಾಯವೂ, ಅಯೋಗ್ಯವೂ ಆಗುವುದೆಂದು ಕಾಂಗ್ರೆಸ್ ಪಾರ್ಟಿ ಮುಖಂಡರಾದ ಲಾಲಾಭೀಮಸೇನ ಸಾಚಾರರು ಹೇಳಿದ್ದಾರೆ.

ದಕ್ಷಿಣ ಹಿಂದೂಸ್ತಾನದ ಸುಪ್ರಶಿದ್ಧ ಹಿಂದೂ ರಾಜಧಾನಿಯಾಗಿದ್ದ ಹಂಪಿಯಲ್ಲಿ, ವಿಜಯನಗರ ಚಕ್ರಾಧಿಪತ್ಯದ ವೈಭವ ಮತ್ತು ಸಾಹಿತ್ಯ, ಸಂಸ್ಕೃತಿಗಳನ್ನು ಸ್ಮೃತಿಪಥಕ್ಕೆ ತರಲಾನಡೆದ.

ಇತಿಹಾಸೋತ್ಸವದ ವರದಿ.

[ಹೊಸಪೇಟೆಯ ವಿದ್ಯಾರಣ್ಯ ವಿಜ್ಞಾನ ಸಮಿತಿಯವರಿಂದ ಪ್ರಶಿದ್ಧವಾದುದು.]

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ 600 ನೆಯ ವರ್ಷದ ಸ್ಮಾರಕೋತ್ಸವವು 25 ನೆಯ ಡಿಶಂಬರ್ 1936 ರಿಂದ 3 ದಿನಗಳು ನೆರವೇರಿತು. ಇತಿಹಾಸ ಮತ್ತು ಸಾಹಿತ್ಯ ಸಂಬಂಧದ ಸಭೆಗಳು, ಪ್ರದರ್ಶನವು ನಡೆದು ವಿಜಯನಗರ ಸಾಮ್ರಾಜ್ಯದ ವೈಭವದ ದಿನಗಳನ್ನು ಜ್ಞಾಪಕಕ್ಕೆ ತಂದವು ವಿಜಯನಗರ ಚಕ್ರಾಧಿ ಪ್ರತ್ಯದ ಸಾಹಿತ್ಯ ಸಂಸ್ಕೃತಿಗಳ ಕೊಡುಗೆಯಿಂದಾದ ಮಹತ್ವವು ಎಲ್ಲಾ ಪ್ರಾಂತಗಳಿಗೆ ಒಗ್ಗಿತಾದರೂ, ವ್ಯವಸ್ಥಾಪಕರು ಬೊಂಬಾಯಿ ಪ್ರಾಂತದವರೇ ಅಧಿಕವಿದ್ದರು— ಧಾರ್ವಾಡದ ಕರ್ನಾಟಕ ಇತಿಹಾಸ ಪರಿಶೋಧನಾ ಸಂಸ್ಥೆಯವರು ಇಂಗ್ಲೀಷ ಭಾಷೆಯಲ್ಲಿ ಸ್ಮಾರಕ ಗ್ರಂಥವನ್ನು ಪ್ರಸಿದ್ಧಿಪಡಿಸಿದರು. ಇದರ ಕನ್ನಡ ಮತ್ತು ಮರಾಠಿ ಭಾಷಾಂತರಗಳಾಗಿವೆ.

ಈ ಮಹೋತ್ಸವದ ಸ್ಮಾರಕವಾಗಿ ಗ್ರಂಥವೊಂದುಳಿಯಿತಾಗಲಿ, ಮತ್ತೇನೂ ಮಹತ್ವದ್ದು, ಚಾರಿತ್ರಾರ್ಹಕ ಸ್ಥಳದಲ್ಲಿ ಕುರುಹಾಗಿ ಎಲ್ಲರ ಕಣ್ಣಮುಂದೆ ಉಳಿಯಲಿಲ್ಲ ಈ ಕೊರತೆಯನ್ನು ಹೋಗಲಾಡಿಸಲು ೧೦ ವರ್ಷಗಳ ನಂತರ ಕಾಮುಲಾಪುರದಲ್ಲಿ ಶ್ರೀಕೃಷ್ಣದೇವರಾಯರ ಶಿಸೆಂಟಮೂರ್ತಿಯ ಸ್ಥಾಪನೆಯಾಯಿತಲ್ಲದೆ ಜೂಟೂರು ಚಂದ್ರಪ್ಪನವರ ಬೋರ್ಡಿಂಗ್ ಹೈಯ್ಯರ್ ಹಿಂದೂ ಶಾಲೆಯಲ್ಲಿ ಪುಸ್ತಕ ಭಂಡಾರವೂ ಸ್ಥಾಪನೆಯಾಯಿತು ಸಂಡೂರ ಸಂಸ್ಥಾನಾಧೀಶರಾದ ಶ್ರೀಮಂತ ಸರ್ದಾರ ಮಹಾರಾಜ ಯಶವಂತರಾವ, ಹಿಂದೂರಾವ ಘೊರ್ಪಡೆಯವರು ಅನೆಗುಂದಿ ಪಟ್ಟಾಳರ ಕೃಷ್ಣರಾಯರಿಂದ ಕೊಡಲ್ಪಟ್ಟ ಕೃಷ್ಣದೇವರಾಯರ ಮೂರ್ತಿಯ ಅನಾವರಣೋತ್ಸವವನ್ನು 1—6—41 ರಲ್ಲಿ ನೆರವೇರಿಸುತ್ತಾ, ಮಾಧವಾಚಾರ್ಯ ವಿದ್ಯಾರಣ್ಯರ ಪುಣ್ಯ ಭೂಮಿಯಲ್ಲಿ ತಮ್ಮ ರಾಜಧಾನಿಯ ಸ್ಥಳದಲ್ಲೇ ಕೃಷ್ಣದೇವರಾಯರ ಮೂರ್ತಿಯ ಪ್ರತಿಷ್ಠಾಪನೆ ಯೋಗ್ಯವಾಗಿದೆಯೆಂದರು.

ವಿಜಯನಗರಕ್ಕೆ ಬರುವ ಯಾತ್ರೀಕರಿಗೆ ಪ್ರಾಚೀನ ವೈಭವ ಸಾಹಿತ್ಯ ಸಂಸ್ಕೃತಿಗಳ ಪರಿಚಯ ಮಾಡಿಸಲು, ಈ ಸಂಬಂಧದಲ್ಲಿ ಇತರ ಸಂಸ್ಥೆಗಳ ಚಟುವಟಿಕೆಗಳನ್ನು ಕೇಂದ್ರೀಕರಿಸಲು ಒಂದು ಸಮಿತಿಯ ಆವಶ್ಯಕತೆಯು ಕೋರಿ ಪ್ರಾತಿನಿಧಿಕವಾದ ವಿದ್ಯಾರಣ್ಯ ವಿಜ್ಞಾನ ಸಮಿತಿಯ ಮುಖ್ಯ ಕಛೇರಿಯು ಹೊಸಪೇಟೆಯಲ್ಲಿ ಸಂಸ್ಥಾಪಿತವಾಗಿ ಅದರ ಶಾಖೆಯು ಹೇಮಕೂಟಾಶ್ರಮವೆಂಬ ಹಿಂದಿನ ಸುಪ್ರಸಿದ್ಧ ಹಂಪೆ ಬಾಜಾರದಲ್ಲಿನ ಭವನವೊಂದರಲ್ಲಿ ಪ್ರಾರಂಭ ವಾಯಿತು.

ಸಮಿತಿಯವರ ಬೇಡಿಕೆಯನ್ನು ಮನ್ನಿಸಿ ಮದ್ರಾಸ್ ಪ್ರಾಂತೀಯ ವಿದ್ಯಾಪರಿಷತ್ತಿನ ಸುಮಾರು 60 ಪ್ರತಿನಿಧಿಗಳು 18 ಮೇ 1946 ರ ದಿನಾಂಕ ಹಂಪಿಗೆ ಬಂದರು ಶ್ರೀ ಎ. ಕೆ. ಬಾಲಸುಂದರಂರವರಿಂದ ಪುರಾತನ ವಿಜಯನಗರ ರಾಜ್ಯದ ರಾಜಧಾನಿ, ಹಿಂದು ಮುಲಿಯಜನ ಸಂಖೆಯ ವಿಜಯನಗರ, ಸಾಮ್ರಾಜ್ಯದ ವೈಭವ, ಸಾಹಿತ್ಯ, ಸಂಸ್ಕೃತಿಗಳ ಸಂಪತ್ತು ಕೃಷ್ಣದೇವರಾಯರ ರಾಜ್ಯಭಾರಕ್ರಮದ ವಿಶೇಷ ವಿವರಗಳ ಸ್ಫೂರ್ತರು ಈ ಹಿಂದೆ ಸೂಚಿಸಿದ ಅನಾವರಣೋತ್ಸವ (1941) ದ ಪ್ರಕಾರಕ್ಕೆ ಪೂರ್ಣವಾದ, ಶ್ರೀಕೃಷ್ಣದೇವರ ಮೂರ್ತಿಯ ಪ್ರತಿಷ್ಠಾಪನೆಯು— ಪ್ರಾಂತೀಯ ವಿದ್ಯಾಪರಿಷತ್ತಿನ ಅಧ್ಯಕ್ಷರಾದ ಶ್ರೀ ಏಕಾಂಬ್ರರಾಯರಿಂದಾಯಿತು. ಇದು ಕಾಮುಲಾಪುರದ ಪ್ರಯಾಣೀಕರಿರುವ ಬಂಗ್ಲೆ ಬಳಿಯಿದೆ.— ಅವರು-ತಮ್ಮ ಸ್ಫೂರ್ತಿ

1. 170

ಭಾರತದೇಶ–ಪ್ರಪಂಚದ ಆಹಾರ ಸಮಸ್ಯೆ, ಉತ್ಪತ್ತಿ ವಿವರಣ

(ಶೊಂಠಿ ರಾಮಮೂರ್ತಿ ಮದ್ರಾಸ್‌ಸರ್ಕಾರದ ಮುಖ್ಯ ಕಾರ್ಯದರ್ಶಿ)

ಪ್ರಪಂಚದ ಆಹಾರ- ವ್ಯವಸಾಯ ಸಂಸ್ಥೆಯು ಜಗ ದೇಶಗಳ ಪ್ರತಿನಿಧಿಗಳಿಂದ ಕೂಡಿರುತ್ತದೆ. ಕಳೆದ ಆಗಷ್ಟನಲ್ಲಿ ಕೋಪೆನ್ ಹೇಗೆನ್ ನಗರದಲ್ಲಿ ಈ ಸಂಸ್ಥೆಯು ಸಮಾವೇಶವಾಗಿ, ಪ್ರಪಂಚದ ಆಹಾರ ಉತ್ಪತ್ತಿ ವಿತರಣ ವಿಧಾನವನ್ನು ತಯಾರು ಮಾಡುವುದಕ್ಕಾಗಿ ೧೮ ದೇಶಗಳ ಪ್ರತಿನಿಧಿಗಳಿಂದ ಕೂಡಿದ ಒಂದು ಕಮಿಷನ್‌ನ್ನು ನಿಯಮಿಸಿತು. ಅಮೇರಿಕಾ ಸಂಯುಕ್ತ ರಾಷ್ಟ್ರಗಳು, ಬ್ರಿಟನು, ಭಾರತವು ಇದರಲ್ಲಿ ಮುಖ್ಯವಾಗಿ ಭಾಗವಹಿಸಿದವು. ಈ ಸಮಾವೇಶದಲ್ಲಿ ಪಾಲ್ಗೊಂಡ ಇತರದೇಶಗಳಲ್ಲಿ ಫ್ರಾನ್ಸ್, ಹಾಲೆಂಡು, ಡೆನ್ಮಾರ್ಕು, ಕೆನಡಾ, ಆಸ್ಟ್ರೇಲಿಯಾ, ಚೀನಾ, ಈಜಿಪ್ಟು, ಬ್ರೆಜಿಲ್ ಸೇರಿರುತ್ತವೆ. ರಷಿಯಾ ಸೇರಿರುವುದಿಲ್ಲ. ಆರ್ಜೆಂಟೈನಾ ದೇಶವು ಒಬ್ಬ ಪರಿಶೀಲಕನನ್ನು ಕಳಿಸಿತು. ವೈಕೌಂಟ್ ಬ್ರೂಸ್ ಈಸಮಾವೇಶಕ್ಕೆ ಅಧ್ಯಕ್ಷನಾಗಿ, ಪ್ರಶಂಸನೀಯವಾಗಿ ಕೆಲಸಮಾಡಿದನು. ಆತನು ಈ ಸಭೆಯನ್ನು ಕಡುಜಾಣ್ಮೆಯಿಂದ ನಡಿಸುತ್ತಿರುವುದನ್ನು ನೋಡಿದರೆ ಬಹು ಸಂತೋಷವಾಗುತ್ತದೆ. ಭಾರತದೇಶದ ಪ್ರತಿನಿಧಿ ವರ್ಗಕ್ಕೆ ಡಾ॥ ಕಾಟ್ಜೂರವರು ನಾಯಕತ್ವವನ್ನು ವಹಿಸಿದರು. ಅವರು ಬಹು ಆಸಕ್ತಿ ವಿವೇಕಗಳಿಂದ ನಿಸ್ವಾರ್ಥವಾಗಿ ಕೆಲಸ ಮಾಡಿದರು. ಅವರ ಜೊತೆಗೆ ನಾನುಸಹೋದ್ಯೋಗಿಯಾಗಿ ಕೆಲಸ ಮಾಡಿದೆನು.

ನಾವು ವಾಷಿಂಗ್ಟನ್ ನಗರಕ್ಕೆ ಹೋಗಿದ್ದಾಗ ಪ್ರಪಂಚದ ಆಹಾರ ವ್ಯವಸಾಯ ಸಂಸ್ಥೆಯ ಡೈರೆಕ್ಟರ್ ಜನರಲು ಸರ್ ಜಾನ್ ಬಾಯಿಡ್ ರವರು ಸೂಚಿಸಿದ ಪ್ರಕಾರ ಒಂದು ಪ್ರಪಂಚದ ಸಂಘವು ಏರ್ಪಾಟಾಗುವ ವಿಷಯದಲ್ಲಿ ಯುನೈಟೆಡ್‌ಸ್ಟೇಟ್ಸ್, ಬ್ರಿಟನ್ ದೇಶಗಳ ಧೋರಣೆಯಲ್ಲಿ ವ್ಯತ್ಯಾಸವು ಕಂಡು ಬಂದಿತು. ಕೋಪೆನ್ ಹೇಗೆನ್ ನಗರದಲ್ಲಿ ಆಹಾರ ಸಮ್ಮೇಳನ ಜರುಗಿದ ತರುವಾಯ, ಅದರಲ್ಲಿ ಭಾಗವಹಿಸಿದ ದೇಶಗಳೇ ಲಂಡನಲ್ಲಿ ಅಂತರ್ಜಾತೀಯವರ್ತಕ ಸಮಾವೇಶವನ್ನು ಜರುಗಿಸಿದವು. ಈಪ್ರಾಮುಖ್ಯ ಪಾಶ್ಚಾತ್ಯ ದೇಶಗಳು ಪ್ರಪಂಚ ಆಹಾರ ಸಂಸ್ಥೆಯನು ಏರ್ಪಾಟು ಮಾಡುವ ಉದ್ದೇಶವನ್ನು ಬಿಟ್ಟುಬಿಟ್ಟು ವಿವಿಧ ದೇಶಗಳ ಮಧ್ಯೆ ವರ್ತಕ ಒಡಂಬಡಿಕೆಗಳನ್ನು ಮಾಡಿಕೊಳ್ಳಲಿಕ್ಕೆ ಉದ್ದೇಶಿಸಿದವು. ವಾಷಿಂಗ್ಟನ್ನಿನಲ್ಲಿ ನಾವು ಸಮಾವೇಶವಾದ ಕಾಲದಲ್ಲಿಯೇ, ಯುನೈಟೆಡ್ ಸ್ಟೇಟ್ಸು ಬ್ರಿಟನ್, ದೇಶಗಳ ಧೋರಣಗಳಲ್ಲಿ ಮಾರ್ಪಾಟು ನೋಡಿ ಆಶ್ಚರ್ಯಪಟ್ಟೆವು. ಅಮೇರಿಕಾ ಬ್ರಿಟನ್, ದೇಶಗಳ ಧೋರಣೆಯನ್ನು ಪ್ರತಿಘಟಿಸುವುದು ಚಿಕ್ಕ ದೇಶಗಳಿಗೆ ಕಷ್ಟವಾಗಿ ತೋಚಿತು. ಪ್ರಪಂಚದ ಆಹಾರ ಸಂಘದ ಏರ್ಪಾಟಿನ ವಿಷಯದಲ್ಲಿ ಭಾರತ ದೇಶವು ಮಾತ್ರವೇ ದೃಢವಾಗಿ ನಿಂತಿತು. ಎರಡು ಮಾಸಗಳ ವರೆಗೆ ನಾವು ಒಂಟಿಯಾಗಿ ಹೋರಾಟವನ್ನು ಸಾಗಿಸಿದೆವು ಆಮೇಲೆ ಚಿಕ್ಕ ದೇಶಗಳು ಧೈರ್ಯವನ್ನು ತಂದುಕೊಂಡು ನಮ್ಮ ಅಭಿಪ್ರಾಯದ ಕಡೆಗೆ ಕ್ರಮವಾಗಿ ತಿರುಗಿದವು. ಕೊನೆಗೆ ಯುನೈಟೆಡ್ ಸ್ಟೇಟ್ಸು ಒಂದು ದಿನವೆಲ್ಲಾ ಜರುಗಿದ ಚರ್ಚೆಯನ್ನು ಪರಿಶೀಲಿಸಿದ ತರುವಾಯ ನಮ್ಮನ್ನು ಕೂಡಿಕೊಂಡಿತು. ಆಮೇಲೆ ಬ್ರಿಟನ್ ಸಹಾ ಭಾಗವಹಿಸಿತು

ಆಹಾರ ಉತ್ಪತ್ತಿಗೂ, ವಿತರಣಕ್ಕೂ ಒಂದು ಪ್ರಪಂಚ ಸಂಸ್ಥೆಯು ಅವಶ್ಯವೆಂದು ಸರ್ ಜಾನ್ ಆರ್ ಮಾಡಿದ ಸೂಚನೆಯನ್ನು ದೃಢಪಡಿಸಲಿಕ್ಕೆ ಭಾರತ ದೇಶವೇ ಕಾರಣಭೂತ ವಾಯಿತು. ಪ್ರಪಂಚದ ಆಹಾರ ಸಂಸ್ಥೆಯು ಏರ್ಪಾಡಿಗೆ ಸಹಾಯ ಪಡುವುದರಲ್ಲಿ ನಮ್ಮ ದೇಶವು ಅಂಥಾ ಸಂಸ್ಥೆಯಿಂದ ಪ್ರತ್ಯೇಕ

ಲಾಭವನ್ನು ಹೊಂದುವುದಕ್ಕೋಸ್ಕರವಲ್ಲ. ಸ್ವಯಂ ಪೋಷಣಶಕ್ತಿಯು ಪ್ರಪಂಚದಲ್ಲಿ ಭಾರತ ದೇಶಕ್ಕೆ ವಿನಾ ಉಳಿದ ಭಾಗಕ್ಕೆ ಇಲ್ಲದೆ ಹೋದರೂ, ಭಾರತ ದೇಶದ ಮಟ್ಟಿಗೆ ತನ್ನ ತಾನು ಪೋಷಿಸಿಕೊಳ್ಳಲೂ ಬೇಕಾದಷ್ಟು ವೈಶಾಲ್ಯವು, ಶಕ್ತಿಯು, ಸಾಧನ ಸಂಪತ್ತು ಹೊಂದೇ ಇರುತ್ತದೆ. ಆದರೆ, ಪ್ರಪಂಚದ ಐಕ್ಯತೆಯಲ್ಲಿ ನಮಗಿರುವ ವಿಶ್ವಾಸವನ್ನು ಹಿಡಿದು ನಾವು ಪ್ರಪಂಚದ ಆಹಾರ ಸಂಸ್ಥೆಯನ್ನು ಕೋರುತ್ತಲಿದ್ದೇವೆ. ಪ್ರಪಂಚವೆಲ್ಲಾ ಒಂದೇ ಎಂಬ ಭಾವವು ನಮ್ಮ ದೇಶದಲ್ಲಿ ಸಾವಿರಾರು ವರ್ಷಗಳಿಂದ ನಾಟಿಕೊಂಡೇ ಇರುತ್ತದೆ. ಉಳಿದ ದೇಶಗಳು ಏಕೈಕ ಪ್ರಪಂಚಾನ್ವೇಷಣಕ್ಕೆ ಈಗೀಗಲೆ ಪ್ರಾರಂಭವನ್ನು ಮಾಡುತ್ತಿವೆಯಾಗಲಿ, ಪ್ರಪಂಚದ ಐಕ್ಯತೆ, ವಿಶ್ವಾಸವು ಈ ದೇಶಗಳಿಗೆ ಇನ್ನೂ ಹುಟ್ಟಿರುವುದಿಲ್ಲ. ಪ್ರಪಂಚ ಐಕ್ಯತಾ ಭಾಗಕ್ಕೆ ಈ ದೇಶಗಳು ಆಗಾಗ ಸಮೀಪಿಸುತ್ತಲೂ, ಮತ್ತು ದೂರ ದೂರವಾಗಿ ಹೋಗುತ್ತಲೂ ಇವೆ. ನಾವು ಮಟ್ಟಿಗೆ ದೃಢವಿಶ್ವಾಸದಿಂದ ಮುಂದುನಿಂತಿದ್ದೇವೆ. ಪ್ರಪಂಚದ ಆಹಾರ ಸಂಸ್ಥೆಯು ಏರ್ಪಡುವುದೆಂದರೆ ಪ್ರಪಂಚದ ಐಕ್ಯತೆಯಲ್ಲಿ ಭಾರತದೇಶಕ್ಕಿರುವ ವಿಶ್ವಾಸವು ವಿಚಾರಣೆಯಲ್ಲಿ ಬರುವುದೇ ಎಂಬ ಮಾತು.

ಪ್ರಪಂಚದ ಆಹಾರಸಂಸ್ಥೆಯು ಏರ್ಪಾಡಿಸಿ, ಸಮಾವೇಶವು ಒಪ್ಪಿಕೊಂಡ ತರುವಾಯ, ಅಂಥಾ ಸಂಸ್ಥೆಗೆ ಇರಬೇಕಾದ ಅಧಿಕಾರವು ಆಹಾರಧಾನ್ಯಗಳಲ್ಲದ ಇತರ ದಿನಸುಗಳ ವಿಷಯದಲ್ಲಿ ಅಂತರ್ಜಾತೀಯ ವರ್ತಕ ಸಂಸ್ಥೆಗಿರುವ ಅಧಿಕಾರದಂತದ್ದಾಗಿಯೇ ಇರಬೇಕೆಂದು ನಾವು ವಾದಿಸಿದೆವು. ಈ ಭೂಲೋಕವು ಮಾನವರೆಲ್ಲರಿಗೆ ಸಾಮಾನ್ಯ ಸೊತ್ತಾಗಿರುವುದರಿಂದ ಬೇಕಾದಷ್ಟು ಆಹಾರ ಉತ್ಪತ್ತಿಮಾಡುತ್ತಿರುವ ಪ್ರತಿಯೊಂದು ದೇಶವು ಇತರ ಯಾವ ದೇಶವಾಗಲಿ ಕ್ಷಾಮಭಾಧೆ ಪಡುತ್ತಿರುವಾಗ ಅದು ಉತ್ಪತ್ತಿಮಾಡಿದ ಆಹಾರವನ್ನು ಅಂಥಾದೇಶಗಳಿಗೆ ಕಳುಹಿಸಿಕೊಡದೆ ಅದು ಬಚ್ಚಿಟ್ಟುಕೊಳ್ಳಲು ಹಕ್ಕುಇಲ್ಲ. ಇತರವಸ್ತುಗಳ ವಿಷಯದಲ್ಲಿ ಒಂದುದೇಶವು ಇನ್ನೊಂದು ದೇಶದಸಂಗಡ ತನಗೆ ತೋಚಿದ ರೀತಿಯಲ್ಲಿ, ವರ್ತಕ ಒಡಂಬಡಿಕೆಯನ್ನು ಮಾಡಿಕೊಳ್ಳಬಹುದು. ಆದರೆ, ಆಹಾರ ದಿನಸುಗಳ ವಿಷಯದಲ್ಲಿ ಮಟ್ಟಿಗೆ, ಯಾವತ್ತೂ ಪ್ರಪಂಚ ಶ್ರೇಯಸ್ಸನ್ನೆ ಕಾಪಾಡಬೇಕಾಗಲಿ, ಯಾವ ಒಂದು ದೇಶವುಕೂಡ ಪ್ರತ್ಯೇಕಲಾಭವನ್ನು ಹೊಂದುವುದು ನ್ಯಾಯವಲ್ಲ. ಆದುದರಿಂದ ಆಹಾರ ವ್ಯವಸಾಯ ಸಂಸ್ಥೆಯ ಆದರ್ಶವು ಅಂತರ್ಜಾತೀಯ ವರ್ತಕ ಸಂಸ್ಥೆಯ ಆದರ್ಶದಂತೆಅಲ್ಲ. ಪ್ರಾಣಾಧಾರವಾಗಿರುವ ಧಾನ್ಯಗಳು ಅಂದರೆ ಅಕ್ಕಿ, ಗೋಧಿ, ಇತರಧಾನ್ಯಗಳು, ಸಕ್ಕರೆ, ಇವೆಲ್ಲಾ ಕೂಡ ಪ್ರಪಂಚದ ಆಹಾರಸಂಸ್ಥೆಯ ಅಧಿಕಾರದಲ್ಲಿರಬೇಕಾಗಲಿ, ಅಂತರ್ಜಾತೀಯವರ್ತಕ ಸಂಸ್ಥೆಯ ಅಧಿಕಾರದಲ್ಲಿರಕೂಡದೆಂದು ನಾವು ವಾದಿಸಿದೆವು.

ಆಹಾರ ವ್ಯವಸಾಯ ಸಂಸ್ಥೆಯು ಮತ್ತೆ ಸಮಾವೇಶವಾಗಿ ವಾಷಿಂಗ್ಟನ್ ರಿಪೋರ್ಟನ್ನು ಚರ್ಚಿಸುವಾಗ ಮೇಲಿನ ನಿಶ್ಚಯಕ್ಕೆ ಬಂದಿತು.

ಪ್ರಪಂಚದಲ್ಲಿ ಹಸಿನೆಯಭಾವ, ಕ್ಷಾಮವು, ಇಲ್ಲದಂತೆ ಮಾಡಬೇಕಾದ ಅವಸರವನ್ನಿಡಿದು ಪ್ರಪಂಚದಆಹಾರ ಸಂಸ್ಥೆಯನ್ನು ಏರ್ಪಾಟು ಮಾಡಬೇಕಾದ ಅವಶ್ಯವು ಉದಯಿಸುತ್ತಿದೆ. ಆದ್ದರಿಂದ ಈ ಸಂಸ್ಥೆಯಲ್ಲಿ ಸೇರಿದ ದೇಶಗಳು ಕ್ಷಾಮವು ಬರದಂತೆ ಮಾಡುವುದಕ್ಕೋಸ್ಕರ ಬೇಕಾದಷ್ಟು ಆಹಾರವನ್ನು ಕೂಡಿಸುವಂತೆ ಮಾಡಬೇಕಾಗುತ್ತದೆ. ಹೀಗೆ ಕೂಡಿಸಿಟ್ಟಂಥ ಆಹಾರವನ್ನು ಪ್ರಪಂಚದ ಆಹಾರಸಂಸ್ಥೆಯ ಆದೇಶದ ಪ್ರಕಾರ ಅಂತರ್ಜಾತೀಯ ಅವಸರಗಳನ್ನು ತೀರಿಸುವ ದಕ್ಕಾಗಿ ವಿನಿಯೋಗಿಸಲ್ಪಡುತ್ತಿರಬೇಕು. ಆಹಾರ ಉತ್ಪತ್ತಿಮಾಡುತ್ತಿರುವ ದೇಶಗಳು ಕೂಡಿಟ್ಟ ಆಹಾರವನ್ನು ಪ್ರಪಂಚದ ಆಹಾರಸಂಸ್ಥೆ ಇತರದೇಶಗಳಿಗೆ ಹಂಚಿಡುವುದರಲ್ಲಿ ಈ ಬರುವಕೆಲವು ವರ್ಷಗಳಲ್ಲಿ ಯೂರೋಪ್ ತನ್ನಪೂರ್ವಸ್ಥಿತಿಗೆ ಬರುವಾಗ್ಯೆ ಗಿರಾಕಿಗೆ ಒಳ್ಳೆ ಉತ್ಪತ್ತಿಯಿಂದ ಅಧಿಕ ಮಾಂ

(9 ನೇ ಪುಟವನ್ನು ನೋಡಿರಿ)

ದಾಯಕವಾದ ಕನ್ನಡ ಭಾಷಣದಲ್ಲಿ ವಿಜಯನಗರ ಸಾಮ್ರಾಜ್ಯದಿಂದ ಕರ್ನಾಟಕದ ಕೀರ್ತಿ, ಏಳಿಗೆಯಾದ್ದನ್ನು ವಿವರಿಸಿ ಭವಿಷ್ಯದಲ್ಲಿ ಈ ಭಾಗದಲ್ಲಿ ಪ್ರಾರಂಭವಾಗಲಿರುವ ತುಂಗಭದ್ರಾಯೋಜನೆ, ವಿದ್ಯುತ್‌ಶಕ್ತಿ ಯುತ್ಪಾದನೆಯಿಂದ ಪ್ರಾಚೀನ ಕಾಲದಲ್ಲಿನ ಸಂಪತ್ತಿಯ ಮಟ್ಟಕ್ಕೆ ಏರುವ ಆಶೆಯು ಕನ್ನಡಿಗರಿಗೆ ಸಾಫಲ್ಯವಾಗಲೆಂದು ಹಾರೈಸಿದರು.

ರಾಜಮಹೇಂದ್ರವರದ ಆಂಧ್ರ ಇತಿಹಾಸ ಪರಿಶೋಧನಾ ಸಂಸ್ಥೆಯವರು ಕೆಲ ವರ್ಷಗಳಿಂದ ವಿಜಯನಗರ ದಿನಾಚರಣೆ ಮಾಡಲು ಯತ್ನಿಸುತ್ತಿದ್ದು ಸಮಿತಿಯ ಸಹಾಯ, ಸಹಕಾರಗಳನ್ನು ಕೋರಿದರು. ಭಾಷಾ ಭೇದವಿದ್ದರೂ ಉದ್ದೇಶಗಳ ಸಮತ್ವ ವಿದ್ದ ಕಾರಣ ಆಂಧ್ರರ ಇತಿಹಾಸ ಸಭೆ, ಪ್ರದರ್ಶನಗಳಿಗೆ ಸಮಿತಿಯು ಸಹಾಯ ಮಾಡಿತು. ಆಂಧ್ರ ಇತಿಹಾಸ ಪರಿಶೋಧನಾ ಸಂಸ್ಥೆಯವರು 13-10-46 ರ ದಿನ ವಿಜಯನಗರ ಸಾಮ್ರಾಜ್ಯದಿನವನ್ನು ಹಂಪೆಯಲ್ಲಿ ಆಚರಿಸಿ ತಮ್ಮ ಹಳೆಯ ಪತ್ರಿಕೆಗಳನ್ನೆಲ್ಲಾ ಕೊಟ್ಟು ಇನ್ನು ಮುಂದೆ ಸರಿಯಾಗಿ ಕಳುಹಿಸಲು ಹೇಳಿದರು. ಪ್ರತಿನಿಧಿಗಳೂ, ಪ್ರೇಕ್ಷಕರೂ ಬಂದಿದ್ದರು. ಮಹಾ ಸಭೆಯ ಅಧ್ಯಕ್ಷರು ತಾವು ಕೆಲಸ ಮಾಡುತ್ತಲಿರುವ ವಿಲ್ಸನ್ ಕಾಲೇಜದಿಂದ 40 ಜನ ಸ್ತ್ರೀ ಪುರುಷ ವಿದ್ಯಾರ್ಥಿಗಳನ್ನು ಕರೆತಂದಿದ್ದರು ತಮ್ಮ ಆಟ ಪಾಟ ನೃತ್ಯಗಳಿಂದ ಈ ವಿದ್ಯಾರ್ಥಿಗಳು ಎಲ್ಲರ ಮನರಂಜನೆ ಮಾಡಿದರು.

ಬಳ್ಳಾರಿ, ಕೊಟ್ಟೂರು ಭಾಗಗಳಿಂದ ಸುಮಾರು 100 ಕನ್ನಡ ಯುವಕರು ಬಂದು ಆಂಧ್ರರ ಈ ಉತ್ಸವಕ್ಕೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿದರು. ಈ ವಿರೋಧವೂ ಕೂಡ ನೇವಸ್ಥಾನದ ಆವರಣದಲ್ಲೇ ಆಯಿತು. ರಾಜಕೀಯ ಮತ್ತು ಭಾಷಾಕ್ಷೇತ್ರದ ಮೇಲೆ ಇದು ದಾಳಿಯಲ್ಲವೆಂದೂ, ಸಾಹಿತ್ಯ ಮತ್ತು ಸಂಸ್ಕೃತಿಗೆ ಸಂಬಂಧಿಸಿದುದೆಂದೂ, ಕನ್ನಡಿಗರಿಗೆ ಮನವರಿಕೆಯಾದ ಮೇಲೆ ಅವರೂ ಇದರಲ್ಲಿ ಭಾಗವಹಿಸಿದರು.

ಆನೆಗುಂದಿ ರಾಜರೂ, ಅನಂತಪುರದ ಜಿಲ್ಲಾ ಬೋರ್ಡ್ ಅಧ್ಯಕ್ಷ ಪೈಡಾ ಲಕ್ಷ್ಮಯ್ಯನವರೂ ಪ್ರತಿನಿಧಿಗಳನ್ನು ಸ್ವಾಗತಿಸಿದನಂತರ ಬಳ್ಳಾರಿ ಕಲೆಕ್ಟರ್ ರವರಾದ ಶ್ರೀ ಅನಂತರಾಮನ್‌ರವರು ಇತಿಹಾಸ ಸಭೆಯ ಪ್ರಾರಂಭ ಸಮಾವೇಶವನ್ನು ಜರುಗಿಸಿದರು. ಶ್ರೀ ಪ್ರತಾಪಗಿರಿ ರಾಮಮೂರ್ತಿ ಎಂ. ಎ. ರವರ ಅಧ್ಯಕ್ಷ ಭಾಷಣವಾಯಿತು.

ಅದೇ 14-10-47 ರ ಸಾಯಂಕಾಲ ಇತಿಹಾಸ ಪರಿಶೋಧನೆಗೆ ಸಹಾಯವಾದ ಪ್ರದರ್ಶನವು ಶ್ರೀ ಅನಂತರಾಮನ್‌ರಿಂದ ಪ್ರಾರಂಭವಾಯಿತು. ಶಿಲಾ ಶಾಸನಗಳ ಪ್ರತಿಗಳು ಸೀಸ ಮತ್ತು ಭಂಗಾರದ ಪ್ರಾಚೀನ ನಾಣ್ಯಗಳು ತಾಮ್ರ ಪಟಗಳ ನಮೂನೆಗಳು ಪ್ರದರ್ಶನದಲ್ಲಿ ಅಡಕವಿದ್ದವು. ಮಾರನೆಯ ದಿನ ಸಾಹಿತ್ಯ ಭಾಗದ ಅಧ್ಯಕ್ಷರಾದ ಡಾಕ್ಟರ್ ಚಿಲಕೂರು ನಾರಾಯಣರಾಯರು ಆಂಧ್ರ ಕರ್ನಾಟಕ ಸಾಹಿತ್ಯಕ್ಕೆ ಪ್ರೋತ್ಸಾಹ ಕೊಟ್ಟು ವಿಜಯನಗರ ರಾಜರನ್ನು ಹೊಗಳಿ, ಅವುಗಳನ್ನು ಕಾಪಾಡುವದವಶ್ಯವೆಂದು ಹೇಳಿ ೨೦೦೦ ತಾಳೆ ಎಲೆಯ ಬರವಣಿಗೆಯನ್ನು ಕೊಟ್ಟರು.

14-10-46 ರ ದಿನ ಶ್ರೀ ಪಿ. ಶ್ರೀನಿವಾಸಾಚಾರು (ಬೆಜವಾಡ ಕಾಲೇಜ ಪ್ರಿನ್ಸಿಪಾಲರು) ಇತಿಹಾಸ ಸಭೆಗೂ, ಬಳ್ಳಾರಿ ವೀರಶೈವ ಕಾಲೇಜ ಪ್ರಿನ್ಸಿಪಾಲರಾದ ಶ್ರೀಭಾಯಪ್ಪನವರು ಸಂಗೀತ ಸಭೆಗೂ ಅಧ್ಯಕ್ಷರಾಗಿ ಕಾರ್ಯ ಕ್ರಮಗಳನ್ನು ನಡೆಸಿದರು. 15 ನೆಯ ತಾ. ಹಂಪಿಯ ವಿವಿಧ ಸ್ಥಳಗಳ ಸಂದರ್ಶನಕ್ಕೆ ಕಾದಿಡಲಾಯಿತು. ರಾಜ ಮಂದ್ರಿಯ ಇತಿಹಾಸ ಪರಿಶೋಧನಾ ಸಂಸ್ಥೆಯವರು 13 ರಿಂದ 15 ನೆಯ ಅಕ್ಟೋಬರವರಿಗೆ ನಡೆದ ಈ ಮಹೋತ್ಸವಗಳ ವಿವರಗಳನ್ನು ತಮ್ಮ ಪತ್ರಿಕೆಗಳಲ್ಲಿ ಇಂಗ್ಲೀಷ್ ತೆಲುಗು ಭಾಷೆಗಳಲ್ಲಿ ಪ್ರಕಟಿಸಲಿದ್ದಾರೆ. ಹಂಪಿ ಜಾತ್ರೆಗೆ ಒಂದು ದಿನದ ಮಂಚೆ ಪ್ರತಿವರ್ಷವೂ ವಾರ್ಷಿಕೋತ್ಸವವನ್ನು ನೆರವೇರಿಸಿ ಯಾತ್ರಿಕರಿಗೆ ಎಲ್ಲಾ ಮಾಹಿತಿ ಪೂರೈಸಿ ಈ ಸಮಿತಿಯು ಸಾಹಿತ್ಯ ಸಂಸ್ಕೃತಿಗಳ ವಿಜ್ಞಾನವನ್ನು ಬೀರುತ್ತಲಿದೆ

ಇದಕ್ಕೆ ಎಲ್ಲರೂ ತನು ಮನ ಧನದಿಂದ ಸಹಾಯ ಸಹಕಾರಗಳನ್ನೊದಗಿಸಲು ಕೋರಲಾಗಿದೆ.

K. P. W. Bellary QH No. B 17 For (QH No. B-5) 600 Nava Bharat Sp'l. Supplement.

ಭಾರತದೇಶ-ಪ್ರಪಂಚದ ಆಹಾರಸಮಸ್ಯೆ

(7 ನೆಯ ಪುಟದಿಂದ ಮುಂದುವರಿದಿದೆ)

ದ್ಯವು ಬರದಂತೆ ನೋಡಬೇಕು. ಪ್ರಪಂಚದಲ್ಲಿ ಉತ್ಪತ್ತಿಸಾಧನ ಶಕ್ತಿಯು ಕಳೆದ ಯುದ್ಧಕಾಲದಲ್ಲಿಯೂ, ಅಮೇಲೆ ಬಹುಅಧಿಕವಾಗಿ ಮಾಡಲ್ಪಟ್ಟಿತು. ಆಹಾರ ಕೋಸ್ಕರ ಕಷ್ಟಪಡುತ್ತಿರುವ ಕ್ಷುದಾರ್ಥರು ಎಷ್ಟೋ ಮಂದಿ ಇರುವಾಗ ಅವಸರಕ್ಕಿಂತಲೂ ಅಧಿಕವಾಗಿ ಉಪ್ಪತ್ತಿಮಾಡಿದ ಆಹಾರವನ್ನು, ಜಂತುಗಳಿಗುಪಯೋಗಿಸುವುದಕ್ಕಾಗಲಿ, ಇಲ್ಲವೆ ಆಲ್ಕಹಾಲ್ ಎಂಬ ಸಾರಾಯಿಯನ್ನು ಮಾಡಲಿಕ್ಕೆ ಉಪಯೋಗಿಸುವುದಕ್ಕಾಗಲಿ ಇನ್ನುಮೇಲೆ ಮಾನವಲೋಕಕ್ಕೆ ಅತ್ಯಸಮ್ಮತವಾಗಲಾರದು. ಆದ್ದರಿಂದ ಇನ್ನೂ ಉತ್ಪತ್ತಿಮಾಡುತ್ತಲಿರಬೇಕಾಗಲಿ, ಆರ್ಥಿಕ ಮಾಂದ್ಯಸ್ಥಿತಿಯು ಏರ್ಪಡದಂತೆ ನೋಡಿಕೊಳ್ಳಬೇಕು ಈ ಕಾರಣದಿಂದಲೇ ನಾವು ಪ್ರತಿದೇಶದಲ್ಲಿಯೂ ಅವಸರ ಸಮಯಗಳಿಗೆ ಕೆಲಸಕ್ಕೆ ಬರುವ ಆಹಾರವನ್ನು ಕೂಡಿಡುವುದು ಪ್ರಪಂಚ ಆಹಾರಸಂಸ್ಥೆಯ ಆದೇಶದ ಪ್ರಕಾರ ಅಂತರ್ಜಾತೀಯ ಬೇಡಿಕೆಗಳನ್ನು ಗಣಿಸಿ ವಿನಿಯೋಗಿಸುತ್ತಲೂ ಇರುವುದಕ್ಕೆ ಏರ್ಪಾಟುಮಾಡಿದೆವು.

ಆವಶ್ಯಕ ಸಮಯಗಳಿಗೋಸ್ಕರ ಉಳಿಸಲ್ಪಟ್ಟ ಆಹಾರ ಸಂಗ್ರಹವು ಕಾಲಮಾನ ಪರಿಸ್ಥಿತಿಗಳು ಚನ್ನಾಗಿಲ್ಲದ ಸಮಯದಲ್ಲಿ ಮಾತ್ರವೇ ಆಹಾರಕೊರತೆಯನ್ನು ತೀರಿಸಬಲ್ಲವು. ಸಾಧಾರಣವಾಗಿ ಮಾರ್ಕೆಟ್ಟುಗಳಲ್ಲಿ ಮಾರುವಿಕೆ ಆಗದೆ ಇರುವುದರಿಂದ ಆಹಾರಅಧಿಕವಾಗಿ ಸಂಗ್ರಹಿಸಲ್ಪಡುವುದು ಯಾವಾಗಲು ಜರುಗುತ್ತಲೇ ಇರುತ್ತದೆ. ಆದ್ದರಿಂದ ಅಂಥಾ ಆಹಾರಸಂಗ್ರಹಗಳನ್ನು ಆಹಾರಕೊರತೆ ಇರುವದೇಶಗಳಿಗೆ ಪ್ರಜೆಗಳು ಕೊಳ್ಳಲಿರುವ ಧರಗಳಿಗೆ ಮಾರುವ ಪದ್ಧತಿಯನ್ನು ನಾವು ಏರ್ಪಾಟುಮಾಡಿದೆವು.

ಈ ವಿಧವಾದ ಪ್ರತ್ಯೇಕ ಧರಗಳ ನಿರ್ಣಯ ಪದ್ಧತಿಯ ಏರ್ಪಾಟು ಭಾರತದೇಶದ ಪ್ರತಿನಿಧಿವರ್ಗವೇವಿಧಿಸಕೊಡಗಿತು. ಈವಿಷಯದಲ್ಲಿ ಕೂಡಾ ಅಮೆರಿಕಾದ ಒಪ್ಪಿಗೆ ಹೊಂದುವುದಕ್ಕಾಗಿ ನಾವುಇಂಟೆರಿಯಾಗಿ ಎರಡು ತಿಂಗಳಕಾಲ ಹೋರಾಡಬೇಕಾಯಿತು. ಉತ್ಪತ್ತಿ ವಿತರಣ ವಿಷಯಗಳಲ್ಲಿ ನಮ್ಮ ಸೂಚನೆ ಒಂದು ಹೊಸಸೂತ್ರವನ್ನು ಪ್ರವೇಶಮಾಡುತ್ತಲಿದೆ. ಅದನ್ನು ಅಂತರ್ಜಾತೀಯ ಏರ್ಪಾಡು ಅನ್ನುವದಕ್ಕಿಂತ ಮಾನವ ಜೀವನದ ಸೂತ್ರವೆಂದೆಣಿಸಬಹುದು.

ಮೇಲೆ ಹೇಳಿದ ಎರಡು ಏರ್ಪಾಟುಗಳು ಸಮಾವೇಶದಲ್ಲಿ ಒಪ್ಪಿಗೆ ಹೊಂದುವಾಗ ವೈಕೌಂಟ್ ಬೂಸ್ (ಅಧ್ಯಕ್ಷರು) ಡಾ॥ ಕಾಟ್ಲೂ ಸಂಗಡ ಮಾತಾಡುತ್ತಾ ಈ ಸಮಾವೇಶವು ಭಾರತೀಯಾಭಿಪ್ರಾಯದ ಕಡೆಗೆ ತಿರುಗುತ್ತಲಿದೆ ಎಂದರು. ಪ್ರಾಚ್ಯ ಪ್ರಪಂಚದ ಆದರ್ಶವು ಇದೇಎಂದು ಡಾ॥ ಕಾಟ್ಲುರವರಂದರು.

ಈ ಎರಡು ಏರ್ಪಾಡುಗಳಲ್ಲದೆ, ಅಕ್ಕಿಯ ಉತ್ಪತ್ತಿ ವಿತರಣ ವಿಷಯಗಳಲ್ಲಿ ಅಧಿಕಾರವನ್ನು ಅಜ್ಞೇಯ ಏಷಿಯಕ್ಕೆ ಒಪ್ಪಿಸಬೇಕೆಂದು ನಾವು ಒತ್ತಾಯಮಾಡಿದೆವು. ಅಕ್ಕಿಯ ಉತ್ಪತ್ತಿ, ವಿನಿಯೋಗವು ಪ್ರಪಂಚದಲ್ಲಿ 80% ದಕ್ಷಿಣ ಪೂರ್ವಏಷಿಯಾದಲ್ಲಿಯೇ ಜರುಗುತ್ತಲಿದೆ. ನಿಜವಾಗಿ, 95% ಏಷಿಯಾಖಂಡದಲ್ಲಿಯೂ, 5% ಮಾತ್ರವೇ ಏಷಿಯಾಖಂಡದಹೊರಗೂ ಜರುಗುತ್ತಲಿದೆ. ಏಶಿಯಾದಲ್ಲಿ ಅಕ್ಕಿಯೇ ಎಲ್ಲವ್ರದಕ್ಕಿಂತಲೂ ಮುಖ್ಯ ಆಹಾರಧಾನ್ಯವು. ಮೊಟ್ಟಮೊದಲು ಇದರ ಉತ್ಪತ್ತಿಸ್ಥಾನವು ಅಜ್ಞೇಯ ಭಾರತದೇಶವೂ, ಚೀನಾದೇಶವೂ ಆಗಿದ್ದಿತು. ಆದ್ದರಿಂದ, ಅಕ್ಕಿಯ ಉತ್ಪತ್ತಿ ವಿತರಣ ವಿಷಯಗಳಲ್ಲಿ ಅಧಿಕಾರವನ್ನು ವಹಿಸಲು ವಾಷಿಂಗ್ಟನ್ ಲಂಡನ್ ಅಹರ್ತೆ ಇಲ್ಲವೆಂದು ನಾವ್ಹೇಳಿದೆವು. ಕಳೆದವರ್ಷದಲ್ಲಿ ಭಾರತದೇಶದಲ್ಲಿ ಕ್ಷಾಮಭಯವು ತಲೆದೋರಿದಾಗ ನಾನು ಬಿನ್ನವೆತ್ತಲಿಕ್ಕಾಗಿ ವಾಷಿಂಗ್ಟನ್‌ಗೆ ತೆರಳಿದ್ದೆನು. ಭಾರತದೇಶದ ನೆರೆಹೊರೆಯಲ್ಲಿಯೇ ಅಕ್ಕಿಯ ಉತ್ಪತ್ತಿಯಾಗುತ್ತಿರುವಾಗ ನಾನು ವಾಷಿಂಗ್ಟನ್‌ಗೆ ಬರಲು ಕಾರಣವೇನೆಂದು ಆಗ ನನ್ನನ್ನು ಪ್ರಶ್ನಿಸಿದರು. ಬರ್ಮಾ, ಸಯಾಂ ಅಕ್ಕಿಗೋಸ್ಕರ ಟಿಕೆಟ್ಟುಗಳು ವಾಷಿಂಗ್ಟನ್‌ನಲ್ಲಿ ಮಾತ್ರವೇ ಲಭಿಸುವು

ದರಿಂದ ನಾನು ಅಲ್ಲಿಗೆ ಬಂದೆನೆಂದೆನು. ಇಂಥಾ ಪದ್ಧತಿಯನ್ನು ಅಂತ್ಯ ಮಾಡಲಿಕ್ಕಾಗಿ ನಾನು ಈಸಲ ನಿಶ್ಚಯಿಸಿಕೊಂಡಿನು. ವಾಷಿಂಗ್ಟನ್ ಸಮಾವೇಶವು ಅದಕ್ಕೆ ಒಪ್ಪಿತು. ಬರುವ ಮೇ ತಿಂಗಳಲ್ಲಿ ಒಂದು ಅಂತರ್ಜಾತೀಯ ಅಕ್ಕಿಯ ಸಮಾವೇಶವನ್ನು ಜೂಲೈ ತಿಂಗಳಲ್ಲಿ ದಕ್ಷಿಣ ಪೂರ್ವ ಏಸಿಯಾದಲ್ಲಾಗಲಿ, ಅಥವಾ ಬಹುಶ ಭಾರತದೇಶದಲ್ಲಾಗಲಿ, ಜರುಗಿಸುವುದಕ್ಕೆ ಒಂದು ಕಾರ್ಯಕ್ರಮವನ್ನು ತಯಾರುಮಾಡಲಿರುವರು.

ನಾನು ಉತ್ತರ ಅಮೆರಿಕಾ ಬಿಡುವುದಕ್ಕೆ ಮೊದಲು ಕೆಲವುಕಾಲ ದಕ್ಷಿಣ ಅಮೆರಿಕಾಕ್ಕೆಹೋಗಿ ಅಲ್ಲಿಯ ಪರಿಸ್ಥಿತಿಗಳನ್ನು ತಿಳಿದುಕೊಂಡೆನು. ಕಳೆದವರ್ಷದವರೆಗೂ ನಮಗೆ ದಕ್ಷಿಣ ಅಮೆರಿಕೆಯೊಂದಿಗೆ ಸಂಬಂಧವಿರಲಿಲ್ಲ. ಆದರೆ, ಈ ದಿವಸ ನನಗೆ ಮೆಕ್ಕೆಜೋಳವು ಅರ್ಜಂಟೈನದಿಂದಲೂ, ಅಕ್ಕಿಯು ಬ್ರೆಜಿಲ್‌ನಿಂದಲೂ ಬಂದವು, ಅರ್ಜೆಂಟೈನಾ. ಬ್ರೆಜಿಲ್ ದೇಶಗಳನ್ನು ದರ್ಶಿಸುವಾಗ ಭಾಸವಾಯಿತು. ವ್ಯವಸಾಯ ಪರಿಸ್ಥಿತಿಯಲ್ಲಿ ದಕ್ಷಿಣ ಅಮೆರಿಕಾ, ಭಾರತದೇಶದ ಪ್ರತಿಬಿಂಬವಾಗಿ ತೋರುತ್ತದೆ. ಬ್ರೆಜಿಲ್ ದೇಶದಲ್ಲಿ ಬೆಳೆಯದೆ ಇರುವ ಪೈರು ಯಾವುದೂ ಇಲ್ಲವೆಂದು ಹೇಳಬಹುದು. ಅರ್ಜೆಂಟೈನಾ ದೇಶವು ಉತ್ತರಹಿಂದೂಸ್ಥಾನದಂತೆಯೇ ಕಾಣಿಸುತ್ತದೆ. ದಕ್ಷಿಣ ಅಮೆರಿಕಾ ಬೆಳೆಸುತ್ತಿರುವ ವೃಕ್ಷಗಳು, ಪೈರುಗಳನ್ನು ಭಾರತೀಯರು ತರಿಸಿಕೊಂಡು ಲಾಭ ಹೊಂದಬಹುದು. ಮದ್ರಾಸಿನಿಂದ ಒಬ್ಬಿಬ್ಬರನ್ನು ಈ ಶಾಲೆಯ ಶಿಕ್ಷಣಕ್ಕಾಗಿ ದಕ್ಷಿಣ ಅಮೆರಿಕಾಕ್ಕೆ ಕಳುಹಿಸಿ, ನಮಗೆ ಇನ್ನೂ ಕೊರತೆ ಇರುವ ಎಣ್ಣೆಬೀಜಗಳು, ಕಟ್ಟಿಗೆ ಕೊಡುವ ನೂತನ ಗಿಡಗಳನ್ನು ತರಿಸಿಕೊಂಡರೆ ಎಷ್ಟೊಲಾಭವಿರುತ್ತದೆ. ಭಾರತದೇಶಕ್ಕೂ ದಕ್ಷಿಣ ಅಮೆರಿಕಾಕ್ಕೂ ಮಧ್ಯೆಸಂಬಂಧವು ಬೆಳೆಯುತ್ತ ಉಭಯದೇಶಗಳು ಇದರಿಂದ ಲಾಭಹೊಂದಬಹುದೆಂದು ನಾನು ನಂಬುತ್ತೇನೆ.

೩೦ನೆಯ ಕನ್ನಡ ಸಾಹಿತ್ಯಸಮ್ಮೇಳನ ಹರಪನಹಳ್ಳಿ.

೩೦ನೆಯ ಕನ್ನಡ ಸಾಹಿತ್ಯಸಮ್ಮೇಳನ ಸ್ವಾಗತ ಸಮಿತಿಯವರು ಈ ಕೆಳಗಿನ ಪ್ರಕಟನೆ ಹೊರಡಿಸಿದ್ದಾರೆ.

ಊಟ—ಉಪಹಾರ:— ಇಷ್ಟು ಮಂದಿ ಸಮ್ಮೇಳನಕ್ಕೆ ಬರುವರೆಂಬ ನಿರ್ದಿಷ್ಟ ಸಂಖೆಯನ್ನು ಸರ್ಕಾರದವರಿಗೆ ಮುಂಚಿತವಾಗಿಯೇ ತಿಳಿಸಬೇಕಾಗಿರುವುದರಿಂದ ಸಮ್ಮೇಳನಕ್ಕೆ ಬರುವವರೆಲ್ಲರೂ ೨೦-೪-೪೭ ನೆಯ ದಿನಾಂಕದೊಳಗಾಗಿ ಊಟೋಪಹಾರಗಳಬಗ್ಗೆ ಪ್ರಾರ್ಥನಾ ಪತ್ರಗಳನ್ನು ಸ್ವಾಗತ ಸಮಿತಿಯ ಕಛೇರಿಗೆ ಕಳುಹಿಸತಕ್ಕದ್ದು.

ಊಟೋಪಹಾರದ ದರಗಳು ಇಂತಿವೆ:— ಪ್ರತಿಯೊಂದು ಊಟಕ್ಕೆ ಒಂದುರೂಪಾಯಿ ಒಂದು ದಿವಸಕ್ಕೆ ಎರಡು ಊಟ, ಎರಡು ಉಪಹಾರಗಳು ಸೇರಿ) ಎರಡು ರೂಪಾಯಿಗಳು. ಬೆಳಗಿನ ಉಪಹಾರಕ್ಕೆ ನಾಲ್ಕಾಣೆಗಳು, ಸಂಜೆಯ ಉಪಹಾರಕ್ಕೆ ಆರಾಣೆಗಳು ವಸತಿಯ ಏರ್ಪಾಡಿಗಾಗಿ ಪ್ರತ್ಯೇಕ ಹಣವಿಲ್ಲ ಬರಲು ಬಯಸುವ ಪ್ರತಿನಿಧಿಗಳು ತಮ್ಮಪ್ರತಿನಿಧಿಯ ಶುಲ್ಕ ಎರಡು ರೂಪಾಯಿಗಳನ್ನು ಊಟೋಪಹಾರದರುಸುಮ ಆರು ರೂಪಾಯಿಗಳನ್ನು ಪ್ರಾರ್ಥನಾ ಪತ್ರದೊಡನೆ ಕಳಿಸತಕ್ಕದ್ದು.

ಮಳಿಗೆಗಳು:— (ಸ್ಟಾಲುಗಳು) ಪ್ರತಿಯೊಂದು ಸಣ್ಣಮಳಿಗೆಗಳಿಗೆ (೮×೧೦ ಚ. ಅ ಉಳ್ಳದ್ದು ರೂ ೧೦/- ರಂತೆಯೂ. ಪ್ರತಿಯೊಂದು ದೊಡ್ಡಮಳಿಗೆಗೆ (೮×೧೫ ಚ. ಅ ಉಳ್ಳದ್ದು ರೂ ೧೫/-ರಂತೆಯೂ ಬಾಡಿಗೆಯನ್ನು ನೊತ್ತುಪಡಿಸಿದೆ. ಇವುಗಳಿಗೆ ತಗಲುವ ದೀಪದವೆಚ್ಚವನ್ನು ಪ್ರತ್ಯೇಕ ಕೊಡಬೇಕಾಗುವದು. ಪ್ರದರ್ಶನಕ್ಕೆ (ವ್ಯಾಪಾರವಿಲ್ಲದೆ ಜ್ಞಾನಪ್ರಸರಣಕ್ಕೆ) ಬರುವವರಿಗೆಲ್ಲ ಮಳಿಗೆಗಳನ್ನು ಉಚಿತವಾಗಿ ಒದಗಿಸಲಾಗುವುದು ಮಳಿಗೆಗಳು ಬೇಕಾದ

ವರು ಶ್ರೀ ಹೊನ್ನಪ್ಪಾಒಣಗಾರ, ಪ್ರದರ್ಶನ ಸಮಿತಿಯಸಂಚಾಲಕರು ಇವರೊಡನೆ ಪತ್ರವ್ಯವಹಾರಮಾಡಿರಿ.

ವಿಶೇಷಸೂಚನೆ:— ಸಾಹಿತ್ಯಗೋಷ್ಠಿಯಲ್ಲಿ ಲೇಖನಗಳನ್ನು ಓದಲು ಬಯಸುವವರೆಲ್ಲರು ತಮ್ಮ ಲೇಖನಗಳನ್ನು ೨ ಪ್ರದರ್ಶನಕ್ಕೆ ಯೋಗ್ಯವಾದ ಪುಸ್ತಕ, ಪತ್ರಿಕೆ, ಕಲಾಕೃತಿಗಳು ಮುಂತಾದವುಗಳನ್ನು ಕಳುಹಿಸುವವರು ಅಂಥವುಗಳನ್ನು ಇದೇಏಪ್ರಿಲ ತಿಂಗಳು ೨೦ ನೆಯ ದಿನಾಂಕದೊಳಗಾಗಿ ತಲಪುವಂತೆ ಕಾರ್ಯದರ್ಶಿಗಳು ೩೦ನೆಯ ಕನ್ನಡ ಸಾಹಿತ್ಯಸಮ್ಮೇಳನ ಹರಪನಹಳ್ಳಿಇವರಿಗೆ ಕಳುಹಿಸಲು ಪ್ರಾರ್ಥನೆ.

ಸೌಕರಿಗಳಲ್ಲಿ ಜಾತೀಯ ಪ್ರಾತಿನಿಧ್ಯ.

ಮದ್ರಾಸ್ ಸರ್ಕಾರದವರು ಈ ಕೆಳಗಿನ ವಿಧಾನದಂತೆ ವಿವಿಧ ಜಾತಿಗಳವರಿಗೆ ನೌಕರಿಗಳಲ್ಲಿ ಪ್ರಾತಿನಿಧ್ಯವನ್ನು ಕೊಡಲಿರುವರೆಂದು ತಿಳಿದುಬಂದಿದೆ. 24 ಖಾಲಿಬೀಳುವ ಸ್ಥಳಗಳಲ್ಲಿ ಈ ಕೆಳಗಿನಂತೆ ವಿಭಾಗಿಸಲ್ಪಟ್ಟಿದೆ.

ಬ್ರಾಹ್ಮಣೇತರ ಹಿಂದುಗಳು	— 7.
ಬ್ರಾಹ್ಮಣರು	— 4.
ಮಹಮ್ಮದೀಯರು	— 4.
ಕ್ರೈಸ್ತರು (ಆಂಗ್ಲೋ ಇಂಡಿಯನ್ಸ್ ಮತ್ತು ಏಷಿಯೇತರರು ಸೇರಿ)	— 4.
ಹಿಂದುಳಿದ ಜಾತಿಗಳವರು	— 2.
ಹರಿಜನರು	— 3.
ಒಟ್ಟು	24

ಅಖಿಲಭಾರತ ಪೂರ್ವಗಾನೀಯಪಕ್ಷದ ಅಧ್ಯಕ್ಷರಾದ ಸರ್ದಾರ್ ಶಾರ್ದೂಲಸಿಂಹ ಕವೀಶ್ವರ್ ಮತ್ತು ಮುಖ್ಯ ಕಾರ್ಯದರ್ಶಿಗಳಾದ ಶೀಲಭದ್ರ ಯಾಜಿಯವರು ತಮ್ಮ ಕರ್ನಾಟಕ ಸಂಚಾರದಲ್ಲಿ ಬಳ್ಳಾರಿಗೆ ಈ ತಿಂಗಳು 14 ನೇ ತಾರೀಕಿಗೆ ಬರುವರೆಂದು ಕಾರ್ಯದರ್ಶಿಗಳು ತಿಳಿಸಿರುವರು.

ಬಳ್ಳಾರಿ ಜಿಲ್ಲಾ

ಕರ್ನಾಟಕ ಏಕೀಕರಣ ಪರಿಷತ್ತು

12-4-47 ನೆಯದಿನ ಬಳ್ಳಾರಿ ಜಿಲ್ಲಾ ಕರ್ನಾಟಕ ಏಕೀಕರಣಪರಿಷತ್ತು ಆದವಾನಿತಾಲೂಕು ಬದನೆಹಾಳಿನಲ್ಲಿ ಬಳ್ಳಾರಿ ಜಿಲ್ಲೆಯ ಮದ್ರಾಸ್ ಶಾಸನಸಭೆ (ಮೇಲ್ಮನೆ) ಸದಸ್ಯರೂ, ಸುಪ್ರಸಿದ್ಧ ವಕೀಲರೂ ಆದ ಶ್ರೀ ಬೆಲ್ಲೂಣ ಭೀಮರಾಯರ ಅಧ್ಯಕ್ಷತೆಯಲ್ಲಿ ಸೇರಲಿದೆ. ಜಿಲ್ಲೆಯವರೆಲ್ಲಾ ಬಂದು ಈ ಸಭೆಯ ಕಾರ್ಯಕಲಾಪಗಳನ್ನು ಯಶಸ್ವಿಮಾಡಲು ಜಾಲಕರು ಕೋರುತ್ತಾರೆ.

ಪ್ರಾಥಮಿಕ ಶಾಲೋಪಾಧ್ಯಾಯರಸಭೆ.

ಬಳ್ಳಾರಿ ಜಿಲ್ಲೆಯಲ್ಲಿನ ಬೊರ್ಡು, ಲೇಬರು, ಎಡೆಡ್ ಶಾಲೆಗಳಲ್ಲಿ ಕೆಲಸಮಾಡುತ್ತಲಿರುವ ಉಪಾಧ್ಯಾಯರನ್ನೆಲ್ಲಾ ಕೂಡಿಸಿ, ಬೇಡಿಕೆಗಳನ್ನೆಲ್ಲಾ ಸಾರ್ವತ್ರಿಕವಾಗಿ ಮತ್ತು ಸಮವಾಗಿ ಅಧಿಕಾರಿಗಳಮುಂದಿಡಲು ಆದವಾನಿತಾಲೂಕು ಯುನಿಯನ್ ಅಧ್ಯಕ್ಷರಾದ ಶ್ರೀ ಮಸ್ತಾನಸಾಹೇಬರು ಯತ್ನಿಸುತ್ತಲಿರುವರು. ಈ ಸಭೆಯು ಬಳ್ಳಾರಿಯಲ್ಲೇ ನೇರಬೇಕೆಂದಾಗಿದೆ. ಜಿಲ್ಲೆಯಲ್ಲಿನ ಎಲ್ಲಾ ಉಪಾಧ್ಯಾಯರು ಇವರೊಡನೆ ಸಹಕರಿಸಿ ಈ ಪ್ರಯತ್ನವನ್ನು ಸೊಫಲ್ಯಗೊಳಿಸಲು ಕೋರಲಾಗಿದೆ.

ಜಾತೀಯ ಗಲಭೆ

ಬೆಂಗಳೂರಿನಲ್ಲಿ ಗಲಭೆಪರಿಸ್ಥಿತಿಯು ಸುಧಾರಿಸಿದ್ದರಿಂದ ಇಂದು ಪುನಃ 48 ತಾಸುಗಳ ಕಾರ್ಫ್ಯೂವನ್ನು ಪ್ರಯೋಗಿಸಲಾಗಿದೆ. ಇಂದುಮುಂಜಾನೆ ಅನೇಕ ಇರಿತಗಳು ಸಂಭವಿಸಿದವು. ಕಾನಪುರದ ಗಲಭೆಯು ಪುನಃ ಪ್ರಜ್ವಲಿಸಿತು. ನಗರದ ಕೆಲಪ್ರದೇಶಗಳಮೇಲೆ 2 ಲಕ್ಷ ರೂ. ಪುಂಡಗಂಡಾಯ ಹೇರಲಾಗಿದೆ

Guarranteed Pure Pyra Gingelly oil

Best for Pickles, Cooking & Cooling.

DISTRIBUTORS:—

1 M/S V. M. GIRI & SONS,

(Pro:- M. S Acharya) Car Street, Bellary

2 M/S. . HUSANJEE RAO. M VENKOJI RAO

General Merchants, Car Street Bellary.

ಶುದ್ಧ ! ಗ್ಯಾರಂಟಿಯಾದ್ದು !! ಸತ್ವಕಾರಿ !!!

—ಪೈರ ಎಳ್ಳೆಣ್ಣೆ—

ಕಣ್ಣಿಗೆ ಬಹಳ ತಂಪಾದ್ದು. ಅಡಿಗೆಯ ಎಲ್ಲಾ ಪದಾರ್ಥಗಳಿಗೆ ಬಳಸಲು ಶ್ರೇಷ್ಠವಾದ ಎಣ್ಣೆಯಿದು. ಉಪ್ಪಿನಕಾಯಿಗೆ ಈ ಎಣ್ಣೆಯನ್ನುಪಯೋಗಿಸುವದರಿಂದ ಬಹಳಕಾಲ ಕೆಡದಂತಿಡಬಹುದು.

ಹಂಚಲಧಿಕಾರ ಉಳ್ಳವರು. 1) ವಿ ಎಂ. ಗಿರಿ ಅಂಡ್ ಸನ್ಸ್-ತೇರು ಬೀದಿ, ಬಳ್ಳಾರಿ. (ಎಂ. ಎಸ್. ಆಚಾರ್ಯ)
2) ಎಂ. ಹುಸೇಂಜಿರಾವ್, ಎಂ. ವೆಂಕೋಬರಾವ್. ತೇರುಬೀದಿ, ಬಳ್ಳಾರಿ.

ಸು ಭಾ ಷ್
ರಾ ಷ್ಟ್ರ ಗೀ ತೆ.

ಸಿದ್ಧವಾಯಿತು— ಕ್ರಯ ೦—೮—೦'

ಸುಂದರ ಮುದ್ರಣ— ಇಡ್ಲಿಯವರೆವಿಗೆ ಪ್ರಭಾತ ಫೇರಿ ರಾಷ್ಟ್ರೀಯ ಸಮಾವೇಶಗಳಲ್ಲಿ ಹಾಡಲ್ಪಟ್ಟ ಎಲ್ಲಾ ಮುಖ್ಯ ದೇಶಭಕ್ತ ಕವಿಗಳ ಕನ್ನಡ ಮತ್ತು ಹಿಂದೀ ಭಾಷೆಯಲ್ಲಿನ ರಾಷ್ಟ್ರಗೀತೆಗಳ ಸಮಗ್ರ ಸಂಗ್ರಹ. ಕರ್ನಾಟಕದಲ್ಲಿ ರಾಷ್ಟ್ರ ಗೀತೆಗಳ ಇಷ್ಟುದೊಡ್ಡ ಸಂಗ್ರಹವು ಇದುವರೆಗೆ ಪ್ರಕಟವಾಗಿಲ್ಲ. ಸ್ವಲ್ಪೇ ಪ್ರತಿಗಳು ಪ್ರಕಟವಾಗಿವೆ. ಹೆಚ್ಚು ಕೊಳ್ಳುವವರಿಗೆ ಕಮಿಷನ್ ಕೊಡಲಾಗುತ್ತದೆ.

'ನವಭಾರತ' ಕಾರ್ಯಾಲಯ ಬಳ್ಳಾರಿ.

—ರಾಷ್ಟ್ರೀಯ ಪುಸ್ತಕಗಳು.—

—ಕಾಂಗ್ರೆಸ್ ಸ್ವರೂಪ ದರ್ಶನ—

ರಾಷ್ಟ್ರೀಯ ಶಿಕ್ಷಣ	0—8—0
ಅಸ್ಪೃಶ್ಯತಾ-ನಿವಾರಣೆ	0—12—0
ಪ್ರಾಂತಭಾಷೆ-ರಾಷ್ಟ್ರಭಾಷೆ	0—6—0
ಖಾದಿ	0—8—0
ಕಾಂಗ್ರೆಸ್ ಮತ್ತು ಸ್ವಯಂಸೇವಕದಳ	0-10-0
ಸತ್ಯಾಗ್ರಹ (ಇತಿಹಾಸ-ತಂತ್ರ)	0—8—0

ವಿ. ಪಿ. ಖರ್ಚುಬೇರೆ. ಇನ್ನು ಅನೇಕ ಪುಸ್ತಕಗಳು ದೊರೆಯುತ್ತವೆ —

ನವಭಾರತ ಕಾರ್ಯಾಲಯ, ಬಳ್ಳಾರಿ.

NAVA BHARAT, BELLARY. Reg. No. M. 4746

ನವಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು. **Subscription Rates**

ವರ್ಷಕ್ಕೆ	5-0-0	One Year	5—0—0
6 ತಿಂಗಳಿಗೆ	3-0-0	Six months	3—0—0

ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ

Subscription will not be accepted for less than 6 months.

To

SRI..... .. ..

....

....

Printed at Krishna Press Bellary QH No. B 17 FOR (Q.H. No. B-5.)

Edited & Published by T. B. KESHAVARAO

177

ಜೈಹಿಂದ್ Reg. No. M. 4746

ನವಚೇತನ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0--2--0

ಕಟ್ಟು ೬ ಸಂಚಿಕೆ ೧೫ | ಬಳ್ಳಾರಿ ಏಪ್ರೆಲ್ ೧೪ ಸೋಮವಾರ ೧೯೪೭ | ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವ್.

ಮದ್ರಾಸ್ ಸರ್ಕಾರದ ಆಜ್ಞೆಗಳು

(ವೃತ್ತಪತ್ರಿಕೆಗಳಿಗಾಗಿ ಕಾಗದ, ನ್ಯೂಸ್ ಪ್ರಿಂಟ್)

ಇಂತಹ ಕಾಗದಗಳಲ್ಲಿ ಹೊಸ ವರ್ತಮಾನಪತ್ರಿಕೆಗಳನ್ನು ಮುದ್ರಿಸಿ ಪ್ರಕಟಿಸುವುದಕ್ಕೆ ೧-೪-೪೭ ರಿಂದ ಕೇಂದ್ರ ಸರಕಾರದ ಅನುಮತಿ ಬೇಕಾಗಿಲ್ಲ. ಆದರೆ ಈ ಕಾಗದಗಳಲ್ಲದೆ ಬೇರೆ ಸಾಮಾನ್ಯತರದ ಕಾಗದಗಳಲ್ಲಿ ಯಾವ ಬಗೆಯ ಹೊಸ ಮುದ್ರಣ ಕಾರ್ಯಕ್ಕೆ ಕೇಂದ್ರ ಸರಕಾರದಿಂದ ಅನುಮತಿ ಸಿಗಲಾರದು. ಆದರೆ ಪತ್ರಿಕೆಗಾಗಿರುವ ಕಾಗದಗಳಲ್ಲಿ ಸರ್ವಸ್ವಾ ಅಚ್ಚುವಾಡಲು ಸಾಧ್ಯವಿಲ್ಲದ ಸಂದರ್ಭದಲ್ಲಿ ಹೊರತು ಇತರ ವಿಷಯಗಳಿಗಾಗಿ ಮಾಡುವ ಅರ್ಜಿಗಳನ್ನು ಗಮನಿಸಲಾಗುವುದಿಲ್ಲ. ನ್ಯೂಸ್‌ಪ್ರಿಂಟಿಗಾಗಿ ಬರೆದ ಅರ್ಜಿಗಳಲ್ಲಿ ಬಾಕಿ ಇರುವ ಅರ್ಜಿಗಳನ್ನೆಲ್ಲಾ ತಳ್ಳಿಹಾಕಲಾಗುವುದು.

೩೦ ಜನರಿಗೆ ಮಾತ್ರ ಊಟ

ಮದುವೆ ಹೊರತು ಇತರ ಸಮಾರಂಭಗಳಲ್ಲಿ ಮೂವತ್ತುಮಂದಿಗಿಂತ ಹೆಚ್ಚಿಗೆ ಜನರಿಗೆ ಊಟಕೊಡಕೂಡದೆಂಬ ನಿರ್ಬಂಧದಿಂದ ವಿನಾಯಿತಿಗಾಗಿ ಮಾಡುವ ಅರ್ಜಿಗಳನ್ನು ಗಮನಿಸಲಿಕ್ಕಿಲ್ಲ ಎಂದು 13-2-47 ರಲ್ಲಿ ಸೂಚಿಸಿದ್ದರೂ ಇನ್ನೂ ಲೆಕ್ಕವಿಲ್ಲದಷ್ಟು ಅರ್ಜಿಗಳು ಬರುತ್ತಿವೆ. 15-3-47 ರಿಂದ ಅಂತಹ ಅರ್ಜಿಗಳ ಕಡೆಗೆ ಯಾವ ರೀತಿಯ ಗಮನವನ್ನು ಕೊಡಲಾರದು.

ಸತ್ತವರನ್ನು ಬದುಕಿಸುವ ವಿಜ್ಞಾನಿ

ಅಮೆರಿಕೆಯ ವಿಜ್ಞಾನಿಯಾದ ಡಾ|| ರಾಬರ್ಟ್ ಕಾರ್ನಿಸ್ ಎಂಬಾತನು ಅನೇಕ ನಾಯಿಗಳನ್ನು ತನ್ನ ಪ್ರಯೋಗಗಳ ಮೂಲಕ ಬದುಕಿಸಿರುವನು. ಹೀಗೆ ಬದುಕಿದ ನಾಯಿಗಳು ಬೊಗಳಿದವು. ಮತ್ತು ಕೆಲವು ಒಂದುವರೆ ವರ್ಷದವರೆವಿಗೂ ಜೀವಿಸಿವೆ. ಈ ಪ್ರಯೋಗಗಳನ್ನು ಮನುಷ್ಯರ ಶವಗಳ ಮೇಲೆಯೂ ಉಪಯೋಗಿಸಿದರೆ ಅವರು ಬದುಕುತ್ತಾರೆಂಬ ಭರವಸೆಯು ನನಗಿದೆಯೆಂದು ಹೇಳಿವನು. ಗಲ್ಲಿಗೇರಿಸಲ್ಪಟ್ಟ ಕೈದಿಗಳ ಶವಗಳ ಮೇಲೆ ತನ್ನ ಪ್ರಯೋಗಗಳನ್ನುಪಯೋಗಿಸಲು ಅಪ್ಪಣೆಯನ್ನು ಕೇಳಲು ಸರ್ಕಾರವು ಪ್ರಾರಂಭದಲ್ಲಿ ಈತನಿಗೆ ಅಪ್ಪಣೆಯನ್ನು ಕೊಡಲಿಲ್ಲ. ಆದರೆ ಈಗ ಸರ್ಕಾರವು ಈತನ ಬುದ್ಧಿ ಕುಶಲತೆಯನ್ನು ತಿಳಿದು ಅದಕ್ಕೆ ಅಪ್ಪಣೆಯನ್ನು ಕೊಡಬಹುದೆಂದು ತೋರುತ್ತದೆ.

178

ಆದರ್ಶ ವಿದ್ಯಾಭ್ಯಾಸ

[ಪಂಡಿತ ಜವಹರಲಾಲ್ ನೆಹರು]

[ಭಾರತದ ಬಾಲ ಬಾಲಕಿಯರ ವಿದ್ಯಾಭ್ಯಾಸದ ಗುರಿಯು ಜ್ಞಾನಸಂಪಾದನೆಯೂ ಜನತೆಯ ಸೇವೆಯೂ ಆಗಿರಬೇಕು. ಹಳ್ಳಿಗಳ ದೇಶವಾದ ಭಾರತದ ಸೇವೆಯಲ್ಲಿ ಆಸಕ್ತಿಯುಳ್ಳವರಿಗೆ ನಗರಗಳಲ್ಲೇ ನೆಲೆನಿಲ್ಲಲು ಸಾಧ್ಯವಿಲ್ಲ. ನಿಜವಾದ ಸೇವೆಯು ಹಳ್ಳಿಗಳಿಗೇ ಸಲ್ಲಬೇಕಾಗಿದೆ. ತಾಳ್ಮೆ ಸಹಕಾರಗಳನ್ನು ಆಚರಣೆಗೆ ತರುವಂತೆ ನಮ್ಮ ತರುಣ ತರುಣಿಯರನ್ನು ತರಬೇತು ಮಾಡುವುದು ನಮ್ಮ ಶಾಲೆಗಳ ಕರ್ತವ್ಯವಾಗಿದೆ.]

ಭಾರತವು ಇಂದು ದಿನದಿನಕ್ಕೂ ವ್ಯತ್ಯಾಸ ಹೊಂದುತ್ತಿದೆ. ಅತಿ ಬೇಗನೆ ಇದು ಸಂಪೂರ್ಣ ಸ್ವಾತಂತ್ರ್ಯವನ್ನು ಅನುಭವಿಸಲಿದೆ. ಆದರೆ ಯಾವ ರಾಷ್ಟ್ರವೂ ತಾನು ಪ್ರಚಾರಕ್ಕೆ ತರುತ್ತಿರುವ ನ್ಯಾಯ ಶಾಸನಗಳಿಂದ ರಚಿಸಲ್ಪಡುವುದಿಲ್ಲ. ರಾಷ್ಟ್ರಕ್ಕಾಗಿ ದುಡಿಯುವ ಸ್ತ್ರೀಪುರುಷರಿಂದಲೇ ರಾಷ್ಟ್ರವು ನಿರ್ಮಾಣವಾಗುವುದು. ನಮ್ಮ ದೇಶದಸೇವೆ ಮಾಡುವ ಹಕ್ಕುಭಾಧ್ಯತೆಗಳು ಇಂದಿನ ವಿದ್ಯಾಮಂದಿರಗಳಲ್ಲಿ ಅಭ್ಯಾಸಮಾಡುತ್ತಿರುವ ತರುಣತರುಣಿಯರ ಹೆಗಲಮೇಲಿವೆ.

ಭಾರತವು ಪ್ರಗತಿಶೀಲವಾದ ಮೊದ್ದ ರಾಷ್ಟ್ರವಾಗುವಾಗ ವಿಶೇಷ ಶಿಕ್ಷಣ ಹೊಂದಿದ ಕೆಲವೇ ಜನರ ಮೇಲೆ ಹೊಂದಿಕೊಂಡಿರಲು ಸರ್ವಥಾ ಸಾಧ್ಯವಿಲ್ಲ ಜನಸಾಮಾನ್ಯರನ್ನೆಲ್ಲಾ ವಿದ್ಯಾವಂತರನ್ನಾಗಿ ಮಾಡಲು ಎಲ್ಲ ವಿಧದಿಂದಲೂ ಯತ್ನಿಸಬೇಕು. ದೇಶದ ಎಲ್ಲೆಡೆಗಳಲ್ಲೂ ಮೇಧಾವಿಗಳು ಇರುವರೆಂಬುದರಲ್ಲಿ ಸಂದೇಹವಿಲ್ಲ. ಅವರಿಗೆ ಸಾಕಷ್ಟು ಪ್ರೋತ್ಸಾಹ ಸಂದರ್ಭಗಳು ಈಗ ದೊರೆಯುವುದಿಲ್ಲ. ಪ್ರತಿಯೊಬ್ಬ ವ್ಯಕ್ತಿಗೂ ತನ್ನ ಪ್ರತಿಭೆ ಸಾಂಡಿತ್ಯಗಳನ್ನು ಬೆಳಕಿಗೆ ತರುವ ಸುಯೋಗವನ್ನು ಕಲ್ಪಿಸಿಕೊಡಲೇಬೇಕು. ಅಷ್ಟೇ ಅಲ್ಲದೆ ಸಮರ್ಥರಾದ ಕೆಲವರಿಗೆ ವಿಶೇಷ ಶಿಕ್ಷಣ ತರಬೇತಿಗಳನ್ನೊದಗಿಸಿ ದೇಶದ ಸೇವೆಯಲ್ಲಿ ದಕ್ಷತೆಯಿಂದ ಭಾಗವಹಿಸುವಂತೆ ಮಾಡಬೇಕು.

ಭಾರತದಲ್ಲಿ ಕೇವಲ ಧನಸಂಗ್ರಹ ಮಾಡಿಡುವುದಕ್ಕೆ ಮನ್ನಣೆ ಇದ್ದಿಲ್ಲ. ಜ್ಞಾನ ಸಂಪಾದನೆಯೂ ಜನಸೇವೆಯೂ ಭಾರತದ ಆದರ್ಶ ಜೀವನವಾಗಿತ್ತು. ಇಂದು ನಮ್ಮ ದೌರ್ಭಾಗ್ಯದಿಂದಲೋ ಎಂಬಂತೆ ಶ್ರೀಮಂತರೂ, ದೊಡ್ಡ ದೊಡ್ಡ ಪದವೀಧರರೂ ತಮ್ಮಲ್ಲಿನಿಜವಾದವಿದ್ಯೆ ಸಂಸ್ಕೃತಿ ಆದರ್ಶತೆ ಇವುಗಳಿಲ್ಲದಿದ್ದರೂ, ಇತರರಿಗಿಂತ ತಾವೇ ಗಣನೀಯರೆಂದೂ ಒಳ್ಳೆಯವರೆಂದೂ ತಿಳಿದುಕೊಳ್ಳುತ್ತಾರೆ

ನಿಜವಾದ ವಿದ್ಯಾಭ್ಯಾಸವು ಬಾಲಕ ಬಾಲಕಿಯರನ್ನು ತಮ್ಮ ಮುಂದಿನ ಸಮಾಜ ಜೀವನಕ್ಕೆ ಸರ್ವವಿಧದಿಂದಲೂ ಸಮರ್ಥರನ್ನಾಗಿ ಮಾಡಲು ತರಬೇತಿ ಮಾಡಬೇಕು. ಭಾರತವು ಅನೇಕ ಪಟ್ಟಣ ಮಹಾ ನಗರಗಳಿಂದ ಕೂಡಿದ್ದರೂ ಕೇವಲ ಹಳ್ಳಿಗಳ ದೇಶವಾಗಿದೆ. ಆದುದರಿಂದ ದೇಶಸೇವೆ ಮಾಡಬೇಕೆಂದು ಬಯಸುವವರು ಹಳ್ಳಿಗಳಿಗೆ ಸಾಗಲೇಬೇಕು. ಸೇವೆಯನ್ನು ಆಶಿಸುತ್ತಿರುವವರೆಂದರೆ ಹಳ್ಳಿಗರು.

ತಾಳ್ಮೆ-ಸಹಕಾರ

ಶಾಲೆಗಳು ಒಂದಾಗಿ ವಾಸಮಾಡುವ ಹಾಗು ಒಂದಾಗಿ ದುಡಿಯುವ ಕಲೆಯನ್ನು ಕಲಿಸಬೇಕು. ಇದು ಇತರ ದೇಶಗಳಿಗಿಂತ ಭಾರತದಲ್ಲಿ ಇಂದು ಅತಿ ಪ್ರಾಮುಖ್ಯವಾದ ಕಾರ್ಯವಾಗಿದೆ ಅನೇಕರು ನಮ್ಮ ದೇಶದಲ್ಲಿ ತಪ್ಪುದಾರಿಯಲ್ಲೇ ಸಾಗುತ್ತಲಿರುವರು. ಬೇರೆ ಬೇರೆ ಪಂಗಡಗಳು ಒಂದಕ್ಕೊಂದು ವಿರೋಧವಾಗಿ ವರ್ತಿಸುವಂತೆ ಮಾಡುತ್ತಿದ್ದಾರೆ ಭಾರತದಲ್ಲಿರುವ ಬಗೆ ಬಗೆಯ ಜಾತಿ ಮತ ಪಂಗಡಗಳು ಸಹಕಾರದಿಂದಲೂ ಪರಸ್ಪರ ಸಾಧಿಸಿ ಸಹಾನುಭೂತಿಗಳಿಂದಲೂ ಒಂದಾಗಿ ಜೀವಿಸಲು ತುಂಬ ಅವಕಾಶವಿದೆ. ಯಾವ ಮತಕ್ಕೇ ಸೇರಲಿ ನಾವು ಮಾನವರು; ಅದರಲ್ಲೂ ಭಾರತವಲ್ಲಿ ಹುಟ್ಟಿದವರು ಎಂಬುದನ್ನು ಮರೆಯದಿರುವುದು ನಮ್ಮೆಲ್ಲರ ಮೊಟ್ಟವೊದಲನೆಯ ಕರ್ತವ್ಯವಾಗಿರಬೇಕು. ಭಾರತದ ರಕ್ಷಣೆ ಪೋಷಣೆಗಳಲ್ಲಿ ನಾವೆಲ್ಲರೂ ಒಂದಾಗಿ ನಡೆಯುವುದು ನಮ್ಮಲ್ಲಿ ಪ್ರತಿಯೊಬ್ಬನಿಗೂ ಗೌರವವಾಗಿದೆ. ಬೇರೆ ಬೇರೆ ದೇಶಗ

ಳಲ್ಲಿ ಕೇವಲ ಅಲ್ಪವಿಷಯಗಳಿಗಾಗಿ ಜನರು ಹೊಡೆದಾಡುತ್ತಿದ್ದಾಗ ಭಾರತವು ತನ್ನ ತಾಳ್ಮೆಯನ್ನು, ತೋರಿಸಿ ಜಗತ್ಪ್ರಸಿದ್ಧವಾಗಿತ್ತು. ಇಂದು ಪುರಾತನ ಕಾಲದಿಂದಲೂ ಭಾರತದ ಸ್ವಭಾವವಾಗಿರುವ ಅಂತಹ ಸಹನೆಯನ್ನು ಮರೆತು, ನಡೆಯುವ ನೂರಾರುಸುಂದಿ ಅವಿವೇಕಿಗಳು ನಮ್ಮ ದೇಶದಲ್ಲಿ ಅನೇಕರಿರುವರು. ಇದರಿಂದ ನಮ್ಮದೇಶದ ವಿದ್ಯಾರ್ಥಿ ನಿದ್ಯಾರ್ಥಿನಿಯರನ್ನು ಸಹಕಾರ ಸಹನೆಗಳಲ್ಲಿ ಚೆನ್ನಾಗಿ ತರಬೇತಿ ಮಾಡುವುದು ಎಲ್ಲಾ ಶಾಲೆಗಳ ಮುಖ್ಯ ಕರ್ತವ್ಯವಾಗಿದೆ.

ಇಂದು ಶರೀರ ಪರಿಶ್ರಮವು ತನ್ನ ಗೌರವಕ್ಕೆ ಕಡಮೆಯಾದ ಕೇವಲ ಕೆಳತರಗತಿಯ ಕೆಲಸವೆಂದು ತಿಳುಕೊಳ್ಳುವುದು ಆಶ್ಚರ್ಯಕರವಾಗಿದೆ. ಕೆಲಸವೇ ಮಾನವನಿಗೆ ನಿಜವಾದ ಗೌರವವನ್ನು ತರುವುದು. ತಾವು ದುಡಿಯದೆ ಇತರರ ದೈಹಿಕ ಅಥವಾ ಮಾನಸಿಕ ಪರಿಶ್ರಮಗಳ ಮೇಲೆ ಹೊಂದಿಕೊಂಡಿರುವುದರಿಂದ ಯಾರಿಗೂ ಪ್ರಯೋಜನವಿಲ್ಲ. ದೈಹಿಕ ಪರಿಶ್ರಮದಿಂದ ಜೀವನ ಮಾಡುವುದು ಕೀಳೆಂಬ ಭಾವನೆಯು ಎಲ್ಲೆಲ್ಲೂ ಹಬ್ಬಿಕೊಂಡಿದೆ. ಇದರಿಂದ ಸಮಾಜದಲ್ಲಿ ಕೆಲಸಗಾರರಿಗೆ ತಕ್ಕ ಸ್ಥಾನವಿಲ್ಲ. ಯಾರು ಇತರರ ಕೆಲಸದ ಮೇಲೆ ಅವಲಂಬಿಸಿಕೊಂಡು ಜೀವನ ಸಾಗಿಸುತ್ತಿರುವರೋ ಅಂತಹವರಿಗೆ ಸಮಾಜದಲ್ಲಿ ಹೆಚ್ಚಿನ ಸ್ಥಾನಮಾನಗಳು ಸಲ್ಲುತ್ತವೆ. ಇದರಿಂದ ನಿಜವಾಗಿ ಯಾರಿಗೆ ಮನ್ನಣೆ ಸಲ್ಲತಕ್ಕದ್ದೋ ಅವರಿಗೆ ಮರ್ಯಾದೆಯೇ ಇಲ್ಲವೆಂದಾಯಿತು. ಆದುದರಿಂದ ಇಂತಹ ಪದ್ಧತಿಯನ್ನು ವ್ಯತ್ಯಾಸಗೊಳಿಸಲೇ ಬೇಕು.

ಹಿಂದುಸ್ಥಾನಿ—ಇಂಗ್ಲಿಷ್

ಭಾರತದ ಎಲ್ಲಾ ಕಾರ್ಯಕಲಾಪಗಳೂ ದೇಶ ಭಾಷೆಯಲ್ಲೇ ನಡೆಸಲ್ಪಡುವ ಅವಶ್ಯಕತೆ ಬರಬಹುದು. ಶಾಲೆಗಳಲ್ಲೆಲ್ಲಾ ಉರ್ದು ಅಥವಾ ಹಿಂದೀ ರೂಪದಲ್ಲಿರುವ ಹಿಂದೂಸ್ಥಾನಿ ಭಾಷೆಯೇ ಹೆಚ್ಚಿನ ಸ್ಥಾನವನ್ನು ಪಡೆಯಲಿದೆ. ಆದರೂ ಇಂಗ್ಲಿಷ್ ಭಾಷೆಯು ನಮ್ಮ ದೇಶದಲ್ಲಿ ಎರಡನೆಯ ಸ್ಥಾನವನ್ನು ವಹಿಸಿ ಬದುಕಬೇಕಾಗಿದೆ. ಏಕೆಂದರೆ ಇಂಗ್ಲಿಷ್ ಎಷ್ಟೋ ವರ್ಷಗಳಿಂದ ನಮ್ಮ ದೇಶದಲ್ಲಿ ಪ್ರಚಾರದಲ್ಲಿದ್ದುದಲ್ಲದೆ ಅದು ಇಂದು ಪ್ರಪಂಚದಲ್ಲೆಲ್ಲಾ ಹಬ್ಬಿಕೊಂಡಿರುವ ಅಂತರ ರಾಷ್ಟ್ರೀಯ ಭಾಷೆಯಾಗಿದೆ. ಆದರೆ ನಮ್ಮ ಶಾಲೆಗಳಲ್ಲಿ ಹಿಂದುಸ್ಥಾನಿಯನ್ನು ಕಲಿಸುವಂತೆ ಇಂಗ್ಲೀಷನ್ನು ಕಲಿಸಲು ಸಾಧ್ಯವಾಗದು.

ನಾವು ಅತಿ ಕಠಿಣ ಹಾಗೂ ತೊಂದರೆಗಳಿಂದ ತುಂಬಿದ ಕಾಲದಲ್ಲಿದ್ದೇವೆ. ಆದರೆ ಅನೇಕ ಸಾಹಸ ಕೃತ್ಯಗಳನ್ನೂ ಕೈಗೊಳ್ಳಬೇಕಾಗಿದೆ. ಈ ಮಹಾ ಸಾಹಸಗಳಿಗಾಗಿ ಸಿದ್ಧರಾಗಿರುವುದು ನಮ್ಮ ಶಾಲೆ ಹಾಗೂ ಕಲಾಶಾಲೆಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರ ಹಕ್ಕು ಬಾಧ್ಯತೆಗಳಾಗಿವೆ. ಈ ಸಾಹಸಕಾರ್ಯಗಳಿಂದ ಒದಗುವ ಕಷ್ಟಗಳನ್ನು ನಿಷ್ಕಲಂಕವಾದ ಬುದ್ಧಿಯಿಂದಲೂ ಧೈರ್ಯಸ್ಥೈರ್ಯಗಳಿಂದಲೂ ಎದುರಿಸಲು ಸರ್ವಥಾ ಬದ್ಧಕಂಕಣರಾಗಿರುವುದೂ ಅವರ ಮುಖ್ಯ ಕರ್ತವ್ಯವಾಗಿದೆ.

ರೈಲ್ವೇ ಪ್ರಯಾಣಿಕರಿಗೆ ಸೌಕರ್ಯ

ರೈಲ್ವೇ ಬಂಡಿಯಲ್ಲಿ ಪ್ರಯಾಣ ಮಾಡುವ ತೀನೇ ತರಗತಿಯ ಪ್ರಯಾಣಿಕರ ಸೌಕರ್ಯಗಳನ್ನು ಹೆಚ್ಚಿಸುವುದಕ್ಕೆ ಬರುವ ವರ್ಷದಲ್ಲಿ ಕನಿಷ್ಠಪಕ್ಷ ಒಂದು ಕೋಟಿ ರೂಪಾಯಿವೆಚ್ಚ ಮಾಡಲಾಗುವುದು. ಈಗ ಇರುವ ಒಂದನೆ, ಎರಡನೆ, ಇಂಟರ್, ಮೂರನೇ ಎಂಬ ತರಗತಿಗಳ ಪೈಕಿ ಇಂಟರ್ ತರಗತಿಯನ್ನು ತೆಗೆದುಹಾಕಲಾಗುವುದು. ಉಳಿದ ಮೂರು ತರಗತಿಗಳಲ್ಲಿ ಈಗ ಇರುವ ಎರಡನೆ, ಇಂಟರ್, ಮೂರನೆ ತರಗತಿಗಳ ಸೌಕರ್ಯಗಳಿರುವವು. ಬ್ರಾಂಚು ಲೈನುಗಳಲ್ಲಿ ವಿಶೇಷ, ಸಾಮಾನ್ಯ ಎಂಬ ಎರಡೆ ತರಗತಿಗಳಿರುವುವು. ಈಗ ಒಂದನೇ ತರಗತಿಯಲ್ಲಿರುವ ಸೌಕರ್ಯಗಳನ್ನು ತೆಗೆದುಹಾಕಲಾಗುವುದು.

ನವಭಾರತಕ್ಕೆ ಚಂದಾದಾರರಾಗಿರಿ.

180

ರಾಯದುರ್ಗದ ಸಮಾಚಾರ

ಕಳ್ಳತನ:—ನಿನ್ನೆಯರಾತ್ರಿ ಅನಂತಮ್ಮನ ಛತ್ರದಬಳಿಯಲ್ಲಿದ್ದ ಸಾಲಕುಂಟೆಯ ಗೌರಮ್ಮ ಎಂಬೊಬ್ಬ ರೋಗಿಯ ಬಳಿಯಿಂದ ಬಟ್ಟೆಗಳನ್ನೂ ಹಣ್ಣುಗಳನ್ನೂ ಒಬ್ಬಕಳ್ಳನು ಕದ್ದು ಹಣ್ಣನ್ನುತಿನ್ನುತ್ತಿರುವಾಗ್ಗೆ ಆಕಳ್ಳನು ಪೋಲೀಸರಿಂದ ಹಿಡಿಯಲ್ಪಟ್ಟನು.

ನೆಲ್ಲಿನ ಅಧಾವ:— ಸೇಖರಿಸಲಾದ ನೆಲ್ಲು ಡಿಪೋಗಳಲ್ಲಿ ಕೂಳೆಯುತ್ತಿರುವಾಗ, ತಂಜಾವೂರು ನೆಲ್ಲು ಇನ್ನೂ ಬಂದಿರುವುದಿಲ್ಲವೆಂದು ಈ ಸಂಗ್ರಹಿಸಲಾದ ನೆಲ್ಲನ್ನು ಅಕ್ಕಿಯನ್ನು ತಿನ್ನುವವರಿಗೆ ಕೊಡದಿರುವರು. ಸರ್ಕಾರವು ಸಂಗ್ರಹಿಸಲಾದ ನೆಲ್ಲನ್ನು ಏಕೆ ಕೊಡಬಾರದೊ ತಿಳಿಯುವಂತಿಲ್ಲ. ನಮ್ಮಿಂದ ಒಳ್ಳೆ ನೆಲ್ಲನ್ನು ಸಂಗ್ರಹಿಸಿ ಯಾವುದೋ ಕೆಲಸಕ್ಕೆ ಬಾರದ ಅಕ್ಕಿಯನ್ನು ನಮಗೆ ಕೊಡುತ್ತಿರುವರು. ರಾಯದುರ್ಗದ ಜನರು ಬಳ್ಳಾರಿ ಜನರಷ್ಟೇ ಮನುಷ್ಯರಾಗಿದ್ದಾರೆ. ಮತ್ತು ಒಳ್ಳೇತರದ ನೆಲ್ಲನ್ನು ಉಪಯೋಗಿಸಲು ಇವರೂ ಯೋಗ್ಯರಿರುವರು.

ಪ್ರಜೆಗಳೂ ದೋಷಿಗಳೇ:—ತಾಲೂಕ ಸಪ್ಲೈ ಆಫೀಸರಾದ ಶ್ರೀ L. S. ನೂರರು ಧಾನ್ಯಗಳ ಸಂಗ್ರಹದವಿಷಯಕ್ಕೆ ಈರೀತಿ ಹೇಳುತ್ತಾರೆ. ಧಾನ್ಯ ಸಂಗ್ರಹದಲ್ಲಿ ರಾಯದುರ್ಗ ತಾಲೂಕವು ಎರಡನೆಯದಾಗಿದೆ. ಸೈರುಗಳು ಕೆಟ್ಟಕಾರಣ ಬೀಳಿಜೋಳದ ಪರಿಸ್ಥಿತಿಯು ಚನ್ನಾಗಿರುವುದಿಲ್ಲ. ಬೇರೆಕಡೆಯಿಂದ ತರಿಸಲು ಕೆಲವು ತಿಂಗಳು ಹಿಡಿಯಬಹುದೆಂದು ಕಲೆಕ್ಟರವರು ಅಭಿಪ್ರಾಯಪಡುತ್ತಾರೆ. ಬ್ಲಾಕ್ ರಿಜಿಸ್ಟಾರ್ ಮತ್ತು ಪರಿವರ್ಧಿತ ಪಟ್ಟಿಗಳು ಇನ್ನೂತಯಾರಾಗಿರುವುದಿಲ್ಲ. ಜನರು ಎರಡು ಕಾರ್ಡುಗಳಿಂದ ಸರ್ಕಾರವನ್ನು ಮೋಸಮಾಡಲು ಪ್ರಯತ್ನಿಸುತ್ತಿದ್ದಾರೆ. ಕರಿಣ್ಣನೆಂಬಾತನು 18 ಜನರಿಗಾಗಿ ಕಾರ್ಡನ್ನು ಹೊಂದಿರುತ್ತಾನೆ. ಮತ್ತು 4 ಜನರಿಗಾಗಿ ಪ್ರತ್ಯೇಕವಾದಕಾರ್ಡು ಸಹಾ ಅವನು ಹೊಂದಿರುತ್ತಾನೆ. ರೈತರುಸಹಾ ಕಳ್ಳಪೇಟೆಯ ವ್ಯಾಪಾರವನ್ನು ಈಗ ಕಲಿಯುತ್ತಲಿದ್ದು ಅವರು ಸಹಾ ದೋಷಿಗಳಾಗಿದ್ದಾರೆ.

ಕೊಡ್ಲಿಗಿ

ರಾಷ್ಟ್ರೀಯ ಸಪ್ತಾಹವು ಉಪಾಧ್ಯಾಯ, ವಿದ್ಯಾರ್ಥಿ ಮತ್ತು ಇತರ ಪುರಜನರಿಂದ ಕೂಡಿದ ಪ್ರಭಾತ ಫೇರಿಯಿಂದಾರಂಭವಾಗಿ ಶ್ರೀ ವಿರುಪಾಕ್ಷರಾಯರಿಂದ ಧ್ವಜವಂದನೆಯಾಯಿತು. ನೆಹರೂ ತರುಣಸಂಘದ ಭವನದಲ್ಲಿ ಸಾಮೂಹಿಕ ನೂಲುವುದಾಯಿತು. ಸಾಯಂಕಾಲ ಶ್ರೀ ಸ್ವರೂಪಸಿಂಗರ ಅಧ್ಯಕ್ಷತೆಯಲ್ಲಿ ಬಿಂದು, ಜೋಷಿ, ಶಾಸ್ತ್ರಿ, ರಾಮರಾಯರು ರಾಷ್ಟ್ರೀಯ ಸಪ್ತಾಹದ ಮಹತ್ವವನ್ನು ತಿಳಿಯುಹೇಳಿದರು. ಸಂಘಾಧ್ಯಕ್ಷರಾದ ಸುಮಿತ್ರರವರು ಧನ ಸಹಾಯ ಬೇಡಿದ ನಂತರ, ಸಿದ್ಧರಾಮಗೌಡರು ವಂದನಾರ್ಪಣಮಾಡಿ ವಂದೇಮಾತರಂದಿಂದ ಸಭೆಯು ಮುಕ್ತಾಯವಾಯಿತು.

ಆದವಾನಿ

ಕನ್ನಡವೀರಮಾತೆಯ ಮೂರನೆಯ ವಿಜಯೋತ್ಸವವು ೫ನೆಯ ದಿನಾಂಕ ಕಿಲಚಿಗಿನ ಪೇಟೆಯಲ್ಲಿ ಕನ್ನಡಮ್ಮನ ಧ್ವಜಾರೋಹಣದಿಂದಾರಂಭವಾಗಿ ಸುಮಾರು ೨೦೦ ಬಾಲ ಬಾಲೆಯರು ಪ್ರಭಾತಫೇರಿಯನ್ನು ಕನ್ನಡ ವೀರಮಾತೆಯ ಭಾವಚಿತ್ರದೊಂದಿಗೂ, ವಾದ್ಯದೊಂದಿಗೂ ನಡೆಸಿದರು ೬ನೆಯ ದಿನಾಂಕ ಸಾಯಂಕಾಲ ಶ್ರೀ ಶಿ. ಮು. ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಹಿಂದೂಸ್ತಾನೀ ಪಂಡಿತರಾದ ಶ್ರೀ ವಾಸುದೇವ ಮೂರ್ತಿಗಳು '**ಕನ್ನಡದ-ಕಡುಗಲಿಗಳು**' ಎಂಬ ವಿಷಯದ ಮೇಲೆ ಸವಿಸ್ತಾರ ಭಾಷಣಕೊಟ್ಟರು. ಕರ್ನಾಟಕ ಬಾಲ, ಬಾಲಕಿಯರ ಸಂಘದವರ ಚಟುವಟಿಕೆಗಳು ಈಭಾಗದಲ್ಲಿ ಮಾದರಿಯಾಗಿ, ಅನುಕರಣಯೋಗ್ಯವಾಗಿವೆ.

ಜೈಲು ಅಪರಾಧಿಗಳಿಗಾಗಿ ಚಬುಕಿನ ಹೊಡತಗಳನ್ನು ಕೊಡುವ ಕ್ರೂರಪದ್ಧತಿಯನ್ನು ಮದ್ರಾಸ್ ಸರ್ಕಾರದ ಇನ್ನುಮೇಲೆ ತೆಗೆದುಹಾಕಿವುದು.

ಮುಂಬಯಿಯ ಶಾಸನಸಭೆಯಲ್ಲಿ ಶ್ರೀ ದೊಡ್ಡಮೇಟಿಯವರ ಪ್ರಾಂತೀಕರಣ ಗೊತ್ತುವಳಿಯು 60 ವಿರುದ್ಧ 8 ಮತಗಳಿಂದ ಸ್ವೀಕಾರವಾಯಿತು.

ಬಳ್ಳಾರಿ.

ರಾಷ್ಟ್ರೀಯ ವಾರ.— ೬ನೆಯ ದಿನಾಂಕ ಸಾಯಂಕಾಲ ಸಾರಿಬನೂರಿನ ಮೈದಾನದಲ್ಲಿ ಶ್ರೀ ಟಿ. ಸುಬ್ರಹ್ಮಣ್ಯಂರವರ ಅಧ್ಯಕ್ಷತೆಯಲ್ಲಿ ಮಾನ್ಯ ಮಂತ್ರಿಗಳಾದ ಶ್ರೀ ಹಾ ಶೀತಾರಾಮರೆಡ್ಡಿಯವರು ರಾಷ್ಟ್ರೀಯ ವಾರದ ಮಹತ್ವವನ್ನು ತಿಳಿಸುತ್ತಾ ಮಂತ್ರಿವರ್ಗದ ಕಾಂಗ್ರೆಸ್ ಕಾರ್ಯಕ್ರಮಕ್ಕೆ ಜನತಾ ಬೆಂಬಲವನ್ನು ಕೋರಿದರು. ಅಧ್ಯಕ್ಷರು ಕಾಂಗ್ರೆಸ್ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸವನ್ನು ಹೇಳಿದರು. ನಗರದ ವಿವಿಧ ಸಂಸ್ಥೆಗಳವರು ಮಾನ್ಯ ಮಂತ್ರಿಗಳಿಗೆ ಮಾನಪತ್ರಗಳನ್ನರ್ಪಿಸಿದರು.

ಜಿಲ್ಲಾ ವೃತ್ತ ಪತ್ರಿಕೋದ್ಯೋಗಿಗಳ ಸಂಘ:— ೬ನೆಯ ಸಾಯಂಕಾಲ ವೃತ್ತ ಪತ್ರಿಕೋದ್ಯೋಗಿಗಳ ಸಂಘದ ಸಭೆಯು ಶ್ರೀ ಶೀತಾರಾಮರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸಮಾವೇಶವಾಗಿ ಘಟನೆಯನ್ನು ಸ್ವೀಕರಿಸಿತು 1947—48 ನೆಯ ವರ್ಷಕ್ಕಾಗಿ ಶ್ರೀ ಡಿ. ಯಸ್. ಹನುಮಂತರಾಯರು ಅಧ್ಯಕ್ಷರಾಗಿಯೂ. ಶ್ರೀ ಟಿ. ಬಿ ಕೇಶವರಾಯರು ಕಾರ್ಯದರ್ಶಿಗಳಾಗಿಯೂ, ಶ್ರೀ ಡಿ. ಯಲ್ ಶೆಟ್ಟಿಯವರು ಕೋಶಾಧ್ಯಕ್ಷರಾಗಿಯೂ, ಆರಿಸಲ್ಪಟ್ಟರು. ಸಂಘಾಧ್ಯಕ್ಷರು ಸುದ್ದಿ ಖಾತೆಯ ಮಂತ್ರಿಗಳಾದ್ದಕ್ಕೆ ಸಂತೋಷವನ್ನು ವ್ಯಕ್ತಪಡಿಸುವ, ಗುಂತಕಲ್ಲಿನ ಪ್ರಚಾರಸಂಸ್ಥೆಯನ್ನು ಬಳ್ಳಾರಿಗೆ ವರ್ಗಾಯಿಸಿ ಅಂಧ್ರ ತಮಿಳು ಯೋಜನೆಗಳಿಂತೆ ಮುಖ್ಯ ಪ್ರಚಾರ ಸಂಸ್ಥೆಯನ್ನಾಗಿ ಮಾಡಬೇಕೆಂದು ಕೇಳುವ, ಮತ್ತು ವೃತ್ತಪತ್ರಿಕೋದ್ಯೋಗಿಗಳ ಪರಿಸ್ಥಿತಿ ಸುಧಾರಿಸಲು ಸರ್ಕಾರದವರು ಒಂದು ಉಪಸಮಿತಿಯನ್ನು ನಿಯಮಿಸಬೇಕೆಂಬುವ ನಿರ್ಣಯಗಳಾದವು. ನಿರ್ಣಯಗಳಾಗುವ ಮುಂಚೆ ಶ್ರೀ ಹನುಮಂತರಾಯರು ಅಧ್ಯಕ್ಷ ಪದವಿಯನ್ನು ವಹಿಸಿದ್ದರು. ಶ್ರೀ ಎ, ವೀರಾಸ್ವಾಮಿಯವರು ಸದಸ್ಯರಿಗೂ ಇತರ ಮಾನ್ಯ ಅತಿಥಿಗಳಿಗೂ ಭೂರಿಭೋಜನ ಕೊಟ್ಟರು. —ಸುನಂದ—ಸುಜಾತ ಎಂಬ ಬಾಲೆಯರ ಮನೋಹರ ಪ್ರಾರ್ಥನಾ ಮಂಗಳ ಗಾಯನದಿಂದ ಕಾರ್ಯಕ್ರಮವಾರಂಭವಾಯಿತು.

ವರ್ತಕ ಸಂಘ—ಬಟ್ಟೆವ್ಯಾಪಾರಿಗಳ ಸಂಘ:— ಬಳ್ಳಾರಿ ಛೇಂಬರ್ ಆಫ್ ಕಾಮರ್ಸ, ಮತ್ತು ಬಟ್ಟೆ ವ್ಯಾಪಾರಿಗಳು ೭ನೆಯ ತಾ!! ಪ್ರಾತಃಕಾಲ ಪ್ರಭಾತ ಟಾಕೀಜಿನಲ್ಲಿ ಮಾನಪತ್ರ ಚಹಾಪಾನದಿಂದ ಮದ್ರಾಸ್ ಔದ್ಯೋಗಿಕ ಮಂತ್ರಿಗಳನ್ನು ಗೌರವಿಸಿದರು. ಶ್ರೀ ಜಿ. ತಿಮ್ಮಪ್ಪ, ಮುಶಲಪ್ಪ. ಮಹಾಬಲೇಶ್ವರಪ್ಪ ರಾಜ ಗೋಪಾಲಶೆಟ್ಟಿಯವರು ವರ್ತಕರ ಕಷ್ಟಗಳು ಕಂಟ್ರೋಲಿನ ತೊಂದರೆಗಳನ್ನು ವಿವರಿಸಿ ಸರ್ಕಾರದಿಂದ ಬೇಕಾದ ಪರಿಹಾರವನ್ನು ಕೋರಿದರು. ಕಲೆಕ್ಟರವರೂ, ಮಾನ್ಯ ಮಂತ್ರಿಗಳೂ ಸರ್ಕಾರದ ಪರವಾಗಿ ಉತ್ತರಕೊಟ್ಟು ಸಹಾನುಭೂತಿ ಸಹಕಾರಗಳನ್ನು ಕೋರಿದರು. "ನಾನು ನಿಮ್ಮವನೇ ಇದ್ದೇನೆ. ನಿಮ್ಮ ಕಷ್ಟಗಳೆಲ್ಲಾ ನನಗೆ ಚನ್ನಾಗಿ ಗೊತ್ತು ನನ್ನನ್ನು ಬೇರೆಯವನೆಂದು ತಿಳಿಯ ಬೇಡಿರಿ.—ಎಂದರು"— ಮುನಿಸಿಪಲ್ ಹೈಸ್ಕೂಲಿನಲ್ಲಿ ಮುಖ್ಯೋಪಾಧ್ಯಾಯರು ಮತ್ತು ಸಹೋದ್ಯೋಗಿಗಳು ಮಾನ್ಯ ಮಂತ್ರಿಗಳನ್ನು ಗೌರವಿಸಿದರು.—

7 ನೆಯ ಸಾಯಂಕಾಲ ಔದ್ಯೋಗಿಕ ಮಂತ್ರಿಗಳಾದ ಶ್ರೀ ಸೀತಾರಾಮರೆಡ್ಡಿಯವರು ಮದ್ರಾಸಿಗೆ ತೆರಳಿದರು—

ರಾಷ್ಟ್ರೀಯ ವಾರವನ್ನಾಚರಿಸಿರಿ.

ಕಾಂಗ್ರೆಸ್ ಅಧ್ಯಕ್ಷರಾದ ಆಚಾರ್ಯ ಕೃಪಾಲಿನಿಯವರು ಒಂದು ವಿನ್ನಹವನ್ನು ಹೊರಡಿಸಿ ಏಪ್ರಿಲ 6 ರಿಂದ 13 ರವರೆಗೆ ಶಾಂತಿದಾಯಕವಾಗಿ ರಾಷ್ಟ್ರೀಯ ವಾರವನ್ನಾಚರಿಸಲು ಬೇಡಿದ್ದಾರೆ.

ಮದ್ರಾಸ್ ಸರ್ಕಾರದವರು ವಿಶ್ವವಿದ್ಯಾಲಯದ ವಿದ್ವಾನ್ ಪರೀಕ್ಷೆಯನ್ನು ಸುಧಾರಿಸುವುದರ ಸಲುವಾಗಿ ಶಿಕ್ಷಣಪ್ರಣಾಲಿ ಮತ್ತು ಪುಸ್ತಕಗಳನ್ನು ಬದಲಿಸಲಿದ್ದಾರೆ.

182

ಮದ್ರಾಸ್ ಔದ್ಯೋಗಿಕ ಮಂತ್ರಿ ಮಾನ್ಯ

ಶ್ರೀ ಹಾಲರ್ವಿ ಶೀತಾರಾಮರೆಡ್ಡಿಯವರು

ಆದವಾನಿಯಲ್ಲಿ:- ೪ ನೆಯ ದಿನಾಂಕ ಪ್ರಾತಃಕಾಲ ಬೊಂಬಾಯಿ ಮೇಲಿನಿಂದ ಮದ್ರಾಸ್ ಸರ್ಕಾರದ ಔದ್ಯೋಗಿಕ ಮಂತ್ರಿ ಮಾನ್ಯ ಶ್ರೀ ಹಾ. ಶೀತಾರಾಮರೆಡ್ಡಿಯವರು ಇಲ್ಲಿಗೆ ಬಂದರು. ಕಾಂಗ್ರೆಸಿಗರೂ ಅಧಿಕಾರಿಗಳೂ ಮಂತ್ರಿಗಳನ್ನು ಸ್ವಾಗತಿಸಿ ಪೂ ಮಾಲೆಗಳಿಂದ ಸತ್ಕರಿಸಿದರು. ಶ್ರೀ ಪುರುಷೋತ್ತಮದಾಸ್ ಚಮನಲಾರರ ಭವನದಲ್ಲಿ ಅರಳೆ ವ್ಯಾಪಾರಿಗಳ ಪರವಾಗಿ ಶ್ರೀ ಎಂ. ಗೋಪಾಲರಾಯರು ಮಾನಪತ್ರವನ್ನೊಂದಿ ಈ ಭಾಗದ ಔದ್ಯೋಗಿಕೋನ್ನತಿಯನ್ನು ಕೋರಿದರು. ಅಲ್ಲಿ ಚಹಪಾನದ ಸತ್ಕಾರವಾಯಿತು. ಪ್ರಭಾತ ಚಲಚಿತ್ರ ಮಂದಿರದಲ್ಲಿ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಬೊಕ್ಕನಹಳ್ಳಿ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕರ ಸಭೆಯು ನೆರೆದಿದ್ದಿತು. ಕಾರ್ಯದರ್ಶಿ ಹಾಲ್ವಿ ಸತ್ಯನಾರಾಯಣ ಇವರು ರಾಯಲ ಸೀಮೆ ಜಿಲ್ಲೆಗಳ ಅಭಿವೃದ್ಧಿಯನ್ನು ಕೋರಿದರು. ಅಧ್ಯಕ್ಷರು ಈಗಿನ ಮಂತ್ರಿವರ್ಗದ ಕಾಲದಲ್ಲಿ ಮದ್ರಾಸ್ ಔದ್ಯೋಗಿಕೋನ್ನತಿಯ ನೂತನಯುಗಾರಂಭವಾಗಲೆಂದು ಆಶಿಸಿದರು.

"ಕಾಂಗ್ರೆಸ್ ಪಕ್ಷದ ಪರವಾಗಿ ನಾವು ಅಧಿಕಾರ ಸ್ವೀಕರಿಸಿದ್ದೇವೆ. ಪ್ರಜೆಗಳ ಸರ್ವವಿಧೋನ್ನತಿಯನ್ನು ಕೋರುವುದೇ ಕಾಂಗ್ರೆಸ್ ಧ್ಯೇಯ. ರಾಯಲ ಸೀಮೆ ಜಿಲ್ಲೆಗಳೇ ಏಕೆ, ಮದ್ರಾಸ್ ಪ್ರಾಂತವೇ ಔದ್ಯೋಗಿಕೋನ್ನತಿಯಲ್ಲಿ ಹಿಂದುಳಿದಿದೆ. ಅಹಾರ ಬಟ್ಟೆಗಳ ಕೊರತೆಯು ಸಾರ್ವತ್ರಿಕವಾದದ್ದು ಇದ್ದ ಸಂಗ್ರಹವನ್ನು ಸಾಳಪ್ಪು ಸಮವಾಗಿ ಹಂಚುವುದಕ್ಕೆ ಯತ್ನಿಸುತ್ತೇವೆ. ಪ್ರಜೆಗಳ ಬೇಡಿಕೆಗಳನ್ನು ಪೂರೈಸಲು ಶಕ್ತಿ-ಮೀರಿ ದುಡಿಯುತ್ತೇವೆ ಎಂದರು. ಡಾಕ್ಟರ್ ಲಕ್ಷ್ಮಣರು ವಂದನಾರ್ಪಣೆ ಮಾಡಿದ ನಂತರ ಸಭೆಯು ಮುಗಿಯಿತು. ಮಧ್ಯಾನ್ಹ ಈ ಊರಿನ ವರ್ತಕರು ಶಿಷ್ಟಮಂಡಳಿ ತೆಗೆದು ಕೊಂಡುಬಂದು ಬೇಡಿಕೆಗಳನ್ನು ಮಂಡಿಸಿದರು.

ಕೋಶಿಗಿ:— ಮಾನ್ಯ ಮಂತ್ರಿ ಶ್ರೀ ಹಾ. ಶೀತಾರಾಮರೆಡ್ಡಿಯವರಿಗೆ ಪುರಪ್ರಮುಖರು ಸ್ವಾಗತವಿತ್ತರು. ನೆಯ್ಗಾರ ಸಂಘದವರು ಮಾನಪತ್ರವನ್ನರ್ಪಿಸಿದರು. ಊರಿನಲ್ಲಿ ಕಳ್ಳ ಬಟ್ಟೆ ಸಾರಾಯಿಳಿಸುವದನ್ನು ತಪ್ಪಿಸಬೇಕು. ನೀರಿನ ಕೊರತೆಯನ್ನು ಹೋಗಲಾಡಿಸಬೇಕು. ಬಡವರಿಗೆ ಕಾಳು ಸರಿಯಾಗಿ ಸಿಗುವಂತೆ ಮಾಡಬೇಕು ಎಂದು ಕೇಳಿದರು ಅವಕ್ಕೆ ಮಂತ್ರಿಗಳು ಸಮರ್ಪಕ ಉತ್ತರ ಕೊಟ್ಟು ಶಕ್ಯವಿದ್ದಿದನ್ನೆಲ್ಲಾ ಮಾಡುವುದಾಗಿ ಹೇಳಿದರು.

ಎಮ್ಮಿಗನೂರು:— ಮಂತ್ರಿಗಳನ್ನು ಮೆರವಣಿಗೆಯಿಂದ ಸಭಾಸ್ಥಳಕ್ಕೊಯ್ಯಲಾಯಿತು ಶ್ರೀ ಮಾ. ಸೋಮಪ್ಪನವರು ಮಂತ್ರಿಗಳ ಗುಣಗಾನ ಮಾಡಿದರು. ಕೈ ಮಗ್ಗದವರು, ಪಂಚಾಯ್ತಿ ಬೋರ್ಡು, ಪ್ರಾಥಮಿಕ ಕೋವಾಧ್ಯಾಯರು ತಮ್ಮ ತಮ್ಮ ಬೇಡಿಕೆಗಳನ್ನು ಮುಂದಿಟ್ಟರು. ಇವುಗಳೆಲ್ಲಾ ಸಮರ್ಪಕ ಉತ್ತರ ಕೊಟ್ಟು ಭೋಜನ ತೀರಿಸಿಕೊಂಡು ಆದವಾನಿಗೆ ತೆರಳಿದರು.

ಆಲೂರು:— ಬೋರ್ಡು ಶಾಲಾ ಭವನದಲ್ಲಿ ಶ್ರೀ ಶೀತಾರಾಮರೆಡ್ಡಿಯವರನ್ನು ಪುರಜನರು ಹಿಂದು ಸ್ತಾನೀ ಪ್ರೇಮೀ ಮಂಡಲ್ಕ ಉನ್ನತ ಶಾಲೋಪಾಧ್ಯಾಯರು ಸತ್ಕರಿಸಿದರು. ಮಾನ್ಯ ಮಂತ್ರಿಗಳು ಎಲ್ಲರನ್ನೂ ಮಾತಿಸಿದರು. ಹರಿಜನ ಸಮತಿ ಗೃಹದಲ್ಲಿ ಶ್ರೀ ಗೋವಿಂದದಾಸರು ತಮ್ಮ ಸಂತೋಷವನ್ನು ವ್ಯಕ್ತಪ

ಬಳ್ಳಾರಿ, ಅನಂತಪುರ ಜಿಲ್ಲೆಗಳಲ್ಲಿ ಅಖಿಲ ಕರ್ನಾಟಕ ಏಕೀಕರಣ ಪ್ರಚಾರ ಕಾರ್ಯ

[೧—೧೦—೧೯೪೫ ರಿಂದ ೩೧—೩—೧೯೪೭ ರ ವರೆಗಿನ ಹದಿನೈದು ತಿಂಗಳ ವರದಿ]

ಸಂಘದ ಧ್ಯೇಯ ಪ್ರಚಾರಕ್ಕಾಗಿ ಸಂದರ್ಶಿಸಿದ ಹಳ್ಳಿಗಳು	ಸಂಘಗಳ ಸ್ಥಾಪನೆ
ಬಳ್ಳಾರಿ ಜಿಲ್ಲೆ ಆದವಾನಿ ತಾ. ಅಂ ಗ್ರಾಮ	ತಾಲೂಕು ಸಂಘಗಳು ೩
,, ಆಲೂರು ,, ೬೦ ,,	ಗ್ರಾಮಕೇಂದ್ರ ,, ೪
,, ರಾಯದುರ್ಗ ೪೦ ,,	ಗ್ರಾಮ ಸಂಯುಕ್ತ ,, ೧೦
,, ಬಳ್ಳಾರಿ ೬೦ ,,	ಗ್ರಾಮ ,, ೨೫
,, ಹಡಗಲಿ ೬೦ ,,	
,, ಹೊಸಪೇಟೆ ೬೦ ,,	ಒಟ್ಟು ೪೩ ಶಾಖಾ ಸಮಿತಿಗಳು
ಅನಂತಪುರ ಗುತ್ತಿ ಉರವಕೊಂಡ ೪೦ ,,	ವರ್ಗಟ್ಟಿವೆ. ಎರಡು ಸಾವಿರ ಜನರನ್ನು ೦-೪-೦
,, ಕಲ್ಯಾಣದುರ್ಗ ೨೦ ,,	ಸದಸ್ಯರಾಗಿ ಸೂಡಿವೆ
೪೦೦	

ರೇಡಿಯೋದಲ್ಲಿ ಕನ್ನಡ ಭಾಷೆಯ ನಿತ್ಯಕಾರ್ಯಕ್ರಮ, ಸರಕಾರದ ಪ್ರಕಟನೆ, ಕೋರ್ಟು ಕಛೇರಿಗಳ ವ್ಯವಹಾರ ಕನ್ನಡದಲ್ಲಿ ನಡೆಯಲು, ತಾಯ್ನುಡಿಯಾದ ಕನ್ನಡದಲ್ಲಿ ಬರೆದ ಪತ್ರಗಳನ್ನು ಓದಲು ಪ್ರಚಾರಾಂದೋಳನವು ಸಾಗಿತು. ಜನಗಣತಿಯ ಸರಿಯಾದ ಲೆಕ್ಕ ತಯಾರಿಸಿ ಕನ್ನಡ ಶಾಲೆಗಳ ಸ್ಥಾಪನೆಗೆ ವಿದ್ಯಾಧಿಕಾರಿಗಳನ್ನು ಕೇಳಿಕೊಳ್ಳಲಾಗಿದೆ. ಕನ್ನಡ ಬಾಲಕರಿಗೆ ವಿವಿಧ ಶಾಲೆಗಳಲ್ಲಿ ಕನ್ನಡ ಶಿಕ್ಷಣವನ್ನು ಕೊಡಲು ಸಂಬಂಧಿಸಿದ ಅಡಳಿತಗಾರರನ್ನು ಎಚ್ಚರಿಸಲಾಗಿದೆ. ಕನ್ನಡಿಗರಿಗಿರುವ ಅನೇಕ ಸಂಕಷ್ಟಗಳ ನಿವಾರಣೆಗಾಗಿ ಪ್ರಯತ್ನಿಸಲಾಯಿತು. ಉದಾಹರಣಾರ್ಥವಾಗಿ ಬೆಳೆನಷ್ಟ, ಮಳೆಯ ಅಭಾವದಿಂದುಂಟಾದ ಬರಗಾಲಕ್ಕಾಗಿ ಪರಿಹಾರೋಪಾಯ, ಸರಕಾರಿ ಹಣದ ಮೂಫಿ, ಆಣೆಕಲ್ಲಿನ ಅನಾಹುತಕ್ಕೆ ಸಹಾಯ, ಆಹಾರ, ಬಟ್ಟೆ, ಜಿನ್ನಿ ಎಣ್ಣೆ, ಸೀದಾ ಪದ್ಧತಿಗಳ ಅವ್ಯವಸ್ಥೆ, ಸಾಕಷ್ಟು ಸಕಾಲಕ್ಕೆ ದೊರೆಯದಿರುವದಕ್ಕಾಗಿ ಅಧಿಕಾರಿಗಳಿಗೂ, ಶಾಸನ ಸದಸ್ಯರಿಗೂ, ತಿಳಿಸಿ ವೃತ್ತ ಪತ್ರಿಕೆಗಳಲ್ಲಿ ಪ್ರಚಾರ ಮಾಡಲಾಗಿದೆ

ಹಂಪಿಯ ಸ್ಮಾರಕ ಕಟ್ಟಡಗಳನ್ನು ಅಧಿಕಾರಿಗಳು ಉಪಯೋಗಿಸದಂತೆ ಕಲೆಕ್ಟರ ಕಡೆಯಿಂದ ಆಜ್ಞೆ ಮಾಡಿಸಲಾಯಿತು. ಶ್ರೀ ಶೈಲಕ್ಷೇತ್ರದಲ್ಲಿ ಮಹಾಶಿವರಾತ್ರಿ ಕಾಲಕ್ಕೆ ಪೋಲೀಸಿನವರಿಂದಾದ ಕಿರುಕುಳ ಹಿಂಸೆಗಾಗಿ ಮೇಲಿನ ಅಧಿಕಾರಿಗಳಿಗೆ ತಿಳಿಸಲಾಯಿತು. ಹಡಗಲಿ ತಾಲೂಕಿನಲ್ಲಿ ಹರಿಯುವ ಹಗರಿಗೆ ಅಣೆಕಟ್ಟು ಕಟ್ಟಿ ಜೀವಂತ ಕೆರೆಗಳನ್ನು ತುಂಬಿ ನೀರಾವರಿಗೆ ಅನುಕೂಲಮಾಡಲು ಅಧಿಕಾರಿಗಳಿಗೂ ಮಂತ್ರಿಗಳಿಗೂ ತಿಳಿಸಲಾಗಿದೆ. ಸಂಚರಿಸಿದ ಗ್ರಾಮ ಮತ್ತು ಇತರ ವಿವರಗಳನ್ನು ಕೇಂದ್ರಕಛೇರಿಗೆ ವರದಿಮಾಡಲಾಯಿತು.

ಕನ್ನಡಿಗರ ಆಳು.
ಶಿ. ವೆ. ಜೋಶಿ
ಗೌ. ಕಾ. ಕ.-ಅ. ಕ. ಏ. ಸಂಘ ಬಳ್ಳಾರಿಜಿಲ್ಲಾ

The Rayalaseema Bank Limited, Bellary.
ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೧೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:— ಬಳ್ಳಾರಿ ಜಿಲ್ಲಾ:- ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ ಬಳ್ಳಾರಿ, ಹಡಗಲಿ, ಕೂಡ್ಲಿಗಿ, ಚಿಪನಾಳಿ **ಅನಂತಪುರ:-** ಅನಂತಪುರ, ಬೆಳಗುಪ್ಪ, ಧರ್ಮಾವರಂ, ಕದಿರಿ ಪಾಮಿಡಿ, ತಿಮ್ಮನಚೆರ್ಲ, ಉರವಕೊಂಡ, ಹಿಂದೂಪುರ, ಗುತ್ತಿ. **ಕರ್ನೂಲು:-** ಕರ್ನೂಲು ಪತ್ತಿಕೊಂಡ. ಕಡಪ:- ರಾಜಂಪೇಟೆ ಕಡಪ. **ಚಿತ್ತೂರು:-** ಚಿತ್ತೂರು, ಮದನಪಲ್ಲಿ, ತಿರುವತ್ತಿ, ನಾಗರಿ, ವಾಯಲ್ಪಾಡು

ಫಿಕ್ಸೆಡ್ ಡಿಪಾಸಿಟ್‌ನ ಬಡ್ಡೀದರ್:- 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2 ವರ್ಷಗಳಿಗೆ 3½%.
ಕರೆಂಟು ಅಕೌಂಟು: 1%, ಸೇವಿಂಗ್ಸ ಬ್ಯಾಂಕು: 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%
ಮಾಸಿಕ ಪಾವತಿ ಇಂಟಿ ಫಂಡ ಡಿಪಾಜಿಟ್:- 3%. **ಬಿ. ವಿ. ಶೇಷಗಿರಿರಾವ್, ಕಾರ್ಯದರ್ಶಿ.**

Woolen Coatings, Silk Sarees, Benares and other latest designs Handloom and Mill made Clothes Etc. Colours Guaranteed. Prices very reasonable. Trial Solicited.

G. GOPAL SING & SON.,
CLOTH MERCHANT
No. 15 Old Market BELLARY.
ಜಿ. ಗೋಪಾಲ ಸಿಂಗ್ ಅಂಡ್ ಸನ್,
ಜವಳಿ ವ್ಯಾಪಾರಿ, ನಂ. 15
ಹಳೇ ಮಾರ್ಕೆಟ್, **ಬಳ್ಳಾರಿ.**

ಉಲನ್ ಕೋಟ್ ಬಟ್ಟೆ, ಬನಾರಸ್ ಜರಿ, ಶಿಲ್ಕ್-ಟಿಷ್ಯು ಸೀರೆ ಜಾಕೆಟ್ ಲೇಸ್ ಬಾರ್ಡರ್ ಮತ್ತು ಇತರ ಅನೇಕ ವಿವಿಧ ಅತ್ಯಂತ ಅಧುನಿಕ ಉಡುಪಿನ ಬೇಡಿಕೆಯನ್ನು ನಾವು ಪೂರೈಸಲಿದ್ದೇವೆ. ಕೈ ಮಗ್ಗದ ಮಿಲ್ ಬಟ್ಟೆಗಳು ವಿಧಾಯಕ ಬೆಲೆಗೆ ದೊರೆಯುತ್ತವೆ. ಬಣ್ಣ ಗ್ಯಾರಂಟಿ, ಬೆಲೆ ಸರಿಯೂದ್ದು. ಪರೀಕ್ಷಿಸಿ ಮನಗಾಣಿರಿ.

ವಿದ್ಯಾರಣ್ಯ ವಿಜ್ಞಾನಸಮಿತಿ.
ಪ್ರಥಮ ವಾರ್ಷಿಕೋತ್ಸವ

ಈತಿಂಗಳ 4 ನೆಯ ದಿನಾಂಕ ಈ ಸಮಿತಿಯ ಪ್ರಥಮ ವಾರ್ಷಿಕೋತ್ಸವದ ಅಧ್ಯಕ್ಷ ಸ್ಥಾನದಿಂದ ಬಳ್ಳಾರಿ ಜಿಲ್ಲಾ ಕಲೆಕ್ಟರ್ ಶ್ರೀ ಅನಂತರಾಮನ್‌ರವರು ಹೀಗೆ ಭಾಷಣಮಾಡಿದರು

"ನನಗೆ ಗೊತ್ತಿದ್ದಂತೆ ಎಲ್ಲಾ ಭಾಷೆಗಳ, ಸಾಹಿತ್ಯಗಳ, ಧರ್ಮಗಳ, ತಿರುಳು, ಲಕ್ಷ್ಯವು ಒಂದೇ ಆಗಿದೆ ದ್ರಾವಿಡಭಾಷೆ ದ್ರಾವಿಡ ಸಂಸ್ಕೃತಿ ಒಂದನ್ನೊಂದು ಪೋಷಿಸುತ್ತವೆಯಾಗಲಿ ದ್ವೇಷಿಸುತ್ತಿಲ್ಲ ಪ್ರೇಮವೇ ಇದಕ್ಕೆ ಮೂಲ ಭಾಷಾ ಭೇದವಿದ್ದರೂ ತ್ರಕ್ಕೆ, ಭಾವನೆಯಲ್ಲೂ ಧ್ಯೇಯದಲ್ಲೂ ಭೇದವಿಲ್ಲ. ವಾಂಜ್ಞಯ, ಧರ್ಮಗಳಲ್ಲಿ ಭೇದವನ್ನು ತೋರಿಸಿ ಮೇಲುಕೀಳು ಭಾವನೆಯಿಂದ ವರ್ತಿಸುವವರು ಅವಿವೇಕಿ ನಾಗರೀಕರೆನಿಸಿಕೊಳ್ಳಲು ಯೋಗ್ಯರಾಗುವರು ಸಮನ್ವಯ ದೃಷ್ಟಿಯಿಂದ ಕೆಲಸಮಾಡಬೇಕು ಜಾತಿ ಮತ ಪಂಥಗಳ ಭೇದವಿಲ್ಲದೆ ಕಾರ್ಯಮಗ್ನರಾಗಬೇಕು. ಸ್ವಾತಂತ್ರ್ಯದ ಹೊಸ್ತಿಲಿನಲ್ಲಿ ನಿಂತಿರುವಾಗ ಈ ಕೆಲಸ ಮಹತ್ವವಾಗಿದೆ."

ದಿಸಿ ಹಾಸ್ಟೆಲ್‌ಗೆ ಸಹಾಯ ಮಾಡತಕ್ಕದ್ದೆಂದರು. ಅಲ್ಲದೆ ಮಂತ್ರಿಗಳನ್ನು ಜಿಲ್ಲೆಯ ಕೆಲ ವ್ಯಕ್ತಿಗಳು ಸ್ವಾರ್ಥಕ್ಕಾಗಿ ಉಪಯೋಗಿಸಬಾರದೆಂದರು. ಮಂತ್ರಿಗಳುತ್ತರಿಸುತ್ತಾ ಹರಿಜನಾಭಿವೃದ್ಧಿಯ ಕಾರ್ಯದಲ್ಲಿ ತಮ್ಮ ವಿಶ್ವಾಸವನ್ನು ವ್ಯಕ್ತಪಡಿಸಿ ಅವರ ಏಳಿಗೆಗೆ ಶ್ರೀ ಗೋವಿಂದದಾಸರೊಡನೆ ಸಹಕರಿಸುವುದಾಗಿ ಆಶ್ವಾಸನವಿತ್ತರು. ಮೊಲಗವೇಲಿ, ಹಾಲಹರ್ವಿ,—ಹರ್ದಿಗೆರೆಗಳನ್ನು ಸಂದರ್ಶಿಸಿ ಸಾಯಂಕಾಲ ಬಳ್ಳಾರಿಗೆ ತೆರಳಿದರು.

ಬಳ್ಳಾರಿಯಲ್ಲಿ

ಮದ್ರಾಸ ಸರ್ಕಾರದ ಔದ್ಯೋಗಿಕ ಮಂತ್ರಿ ಶ್ರೀ. ಹಾಲಹರ್ವಿ, ಸೀತಾರಾಮರೆಡ್ಡಿಯವರು ಬಳ್ಳಾರಿಗೆ ೫ನೆಯ ದಿನಾಂಕ ಸಾಯಂಕಾಲ ಬಂದರು. ಬಂದ ಕೆಲನಿಮಿಷಗಳಲ್ಲಿ ದಿವಂಗತರಾದ ರಾಘವಾಚಾರ್ಯರ ಪ್ರಥಮ ವಾರ್ಷಿಕ ತಿಥಿಯಸಭೆಯಲ್ಲಿ ಭಾಗವಹಿಸಿ ಸ್ಮಾರಕ ಸಮಿತಿಯವರ ಯತ್ನಗಳು ಸಾಫಲ್ಯವಾಗಲೆಂದು ಆಶಿಸಿದರು.

೬ನೆಯ ದಿನಾಂಕ ಪ್ರಾತಃಕಾಲ ಮಲ್ಲಸಜ್ಜನ ವ್ಯಾಯಾಮಶಾಲೆಯ ಆವರಣದಲ್ಲಿ ವ್ಯಾಯಾಮಶಾಲೆಯ ಯುವಕರು "ಇಡ್ಲಿಪಾರ್ಟಿ" ಯನ್ನೇರ್ಪಡಿಸಿ ಹುತಾತ್ಮರ ಸ್ಮಾರಕ ಮಂಟಪದಲ್ಲಿ ರಾಷ್ಟ್ರೀಯವಾರದ ಪ್ರಥಮದಿನವಾದ್ದರಿಂದ ಮಾನ್ಯ ಮಂತ್ರಿಗಳ ಹಸ್ತದಿಂದ ಧ್ವಜವಂದನೆ ಮಾಡಿಸಿದರು. ಸಾಂಬಮೂರ್ತಿಮೈದಾನದಲ್ಲಿ ಒಹಿರಂಗವಾಗಿ ಕಾಂಗ್ರೆಸಿಗರ ಸಮೂಹದ ಮಧ್ಯದಲ್ಲಿ ಧ್ವಜವಂದನೆಯಾಯಿತು. ಶ್ರೀ ರೆಡ್ಡಿಯವರು ಧ್ವಜಾರೋಹಣಮಾಡಿದರು—ಪ್ರಾತಃಕಾಲ ಕಾರ್ಯಕರ್ತರ ಸಭೆಯಲ್ಲಿ ಜಿಲ್ಲೆಯ ಕುಂದು ಕೊರತೆ, ಬೇಡಿಕೆ, ಮಂತ್ರಿವರ್ಗದವರು ಮಾಡಬೇಕಾದ ಕರ್ತವ್ಯ ಕರ್ಮಗಳನ್ನು ಕುರಿತು ಬಿಚ್ಚು ಹೃದಯದ ಚರ್ಚೆಯಾಯಿತು.

ರಾಯಲಸೀಮ ಮಹಾಸಭೆಯ ಕಾರ್ಯಕಾರೀಸಮಿತಿಯವರು ಒಂದು ವಿನ್ನವತ್ತಳೆಯನ್ನರ್ಪಿಸಿ, ಈಕೆಳಗಿನ ಬೇಡಿಕೆಗಳನ್ನು ಮಂಡಿಸಿದರು

೧) ರಾಯಲ ಸೀಮೆಯು ೫ ಜಿಲ್ಲೆಗಳಿಗೆ ೧ ಸ್ಥಾನವನ್ನು ಮಂತ್ರಿವರ್ಗದಲ್ಲಿಕೊಟ್ಟು ಸರ್ಕಾರಾಂಧ್ರರು ೪ ಸ್ಥಾನಗಳನ್ನಾಕ್ರಮಿಸಿರುವರು. ಈ ಅನ್ಯಾಯಕ್ಕಾಗಿ ನಮ್ಮ ನಿಷೇಧವನ್ನು ಸೂಚಿಸುತ್ತೇವೆ. ನಿಮ್ಮ ಪಕ್ಷದ ಮುಖಂಡರಿಗೆ ತಿಳಿಸಿರಿ.

೨) ಮಂತ್ರಿವರ್ಗಕ್ಕೆ ಸ್ಥಾಯಿತ್ವವು ಲಭಿಸಲೆಂದೂ, ಈಗಿನ ಮಂತ್ರಿವರ್ಗದವರು ವಿರೋಧ ಪಕ್ಷದವರೊಡನೆ, ಪ್ರೆಸ್‌ನವರೊಡನೆ ಮಧುರಸಂಬಂಧವನ್ನಿಟ್ಟುಕೊಳ್ಳಬೇಕೆಂದೂ, ಅನಾವಶ್ಯಕವಾದ ಪ್ರಜಾರ ಸಂಸ್ಥೆಯನ್ನು ತೆಗೆಯಲೂ ಸೂಚಿಸುತ್ತೇವೆ.

೩) ರೆವಿನ್ಯೂ, ಕಮರ್ಶಿಯಲ್ ಇಲಾಖೆಗಳಲ್ಲಿ ಮುಖ್ಯವಾಗಿ ಬಹಳ ಲಂಚವಿದೆ. ಇದನ್ನು ಹೇಗೆ ತಪ್ಪಿಸಬೇಕೆಂಬ ಬಗ್ಗೆ ಕೆಲ ಸಲಹೆಗಳನ್ನು ಕೊಡುತ್ತೇವೆ. ಯುದ್ಧಕಾಲದಲ್ಲೇರ್ಪಟ್ಟ ಅನಾವಶ್ಯಕ ಇಲಾಖೆಗಳನ್ನೂ ಅಯೋಗ್ಯ ಅಧಿಕಾರಿಗಳನ್ನೂ ಕಿತ್ತುಹಾಕಿರಿ. ಅಧಿಕಾರಿಗಳು ಪ್ರಜಾಸೇವಕರಾಗಬೇಕೆಂಬುದನ್ನು ಎಚ್ಚರಿಸಿರಿ. ಲಂಚವನ್ನುತಪ್ಪಿಸಲು ಜಿಲ್ಲಾ ಮ್ಯಾಜಿಸ್ಟ್ರೇಟರುತ್ತು D. S. P. ಯವರಿಗೆ ಅಧಿಕಾರಗಳನ್ನು ಕೊಟ್ಟು ಅವರನ್ನು ಹೆಚ್ಚು ಬಾಧ್ಯರಾದ ಅಧಿಕಾರಿಗಳನ್ನಾಗಿಮಾಡಿರಿ. ಸಣ್ಣವರನ್ನು ಶಿಕ್ಷಿಸದೆ ದೊಡ್ಡ ಅಧಿಕಾರಿಗಳನ್ನು ಶಿಕ್ಷಿಸಿರಿ. ಜೋಳ, ಹತ್ತಿ, ಬೋನಸ್ ಮತ್ತು ಭೂವಿಗಳನ್ನು ತೆಗೆಸಲು ಕೊಡುವಹಣ ಸದ್ವಿನಿಯೋಗವಾಗುವಂತೆ ಅದಕ್ಕೆ ಸರಿಯಾದ ಮೇಲ್ವಿಚಾರಕ ಸಂಘವನ್ನೇರ್ಪಡಿಸಿರಿ.

೪) ಜಿಲ್ಲೆಯ ಶಾಸನಭ್ಯರ ಸಲಹೆಯಂತೆ ಅನಾಧಿಕಾರೀ ಸಮಿತಿಗಳಲ್ಲಿ ಮುಖ್ಯರಾದವರಿಗೆ ಸ್ಥಾನ ಕೊಡಿರಿ. ಗ್ರಾಮಸಮಿತಿಗಳಲ್ಲೂ ಸಹ ಒಳ್ಳೆಯ ಜನವು ಬರುವಂತೇರ್ಪಡಿಸಿರಿ. ಆಸ್ಪತ್ರೆಗಳಲ್ಲಿ ಬಡವರಿಗೆ ಚಿಕಿತ್ಸೆಯು ದೊರೆಯುವದಿಲ್ಲ ಒಳ್ಳೆಯ ಸಲಹೆ ಸಮಿತಿಯನ್ನೇರ್ಪಡಿಸಿರಿ.

೫) ಕಂಟ್ರೊಲ ತೆಗೆದು ಹಾಕುವುದೊಳ್ಳೆಯದು. ಇದರಿಂದ ಹಳ್ಳಿಗರಿಗೆ ತೊಂದರೆಯಾಗುತ್ತಲಿದೆ.

ಖಾ ದಿ ಗೆ ಪ್ರೋತ್ಸಾಹ ಕೊಡಬೇಕಾದುದು ನ್ಯಾಯವಾದರೂ, ಮಿಲ್ ಉದ್ಯೋಗ ಕಾರ್ಖಾನೆಗಳೇ ಬೇಡವನ್ನುವುದು ಸರಿಯಾದುದಲ್ಲ. ಇದಕ್ಕೆ ಸರಿಯಾದ ಯೋಜನೆಯಾಗಬೇಕು.

೭) ಉಪಾಧ್ಯಾಯರ ಸಂಬಳ ಹೆಚ್ಚಿಸಬೇಕು.

೮) ಈಗಿರುವ ಮದ್ಯನಿಷೇಧ, ದೇವಸ್ಥಾನಪ್ರವೇಶ ಹರಿಜನೋದ್ಧಾರ ಯೋಜನೆಗಳೇಸಾಕು. ಇನ್ನು ಹೆಚ್ಚು ಯೋಜನೆಗಳನ್ನು ಕೈಗೊಳ್ಳದೆ ಕಾರ್ಯರೂಪದಲ್ಲಿ ಹೆಚ್ಚು ತೋರಿಸಬೇಕು.

ರಾಯಲಸೀಮಾ ಬೇಡಿಕೆಗಳು:—ಹಿಂದಿನ ಸರ್ಕಾರವು ನಮ್ಮನ್ನು ನಿರ್ಲಕ್ಷಿಸಿದೆ. ನಮ್ಮ ನೀರಾವರಿ ಮತ್ತು ಇತರ ಆರ್ಥಿಕಯೋಜನೆಗಳಿಗೆ ಜನಾಭಿಪ್ರಾಯವನ್ನು ಲಕ್ಷಿಸಿ ಬೆಂಬಲಕೊಡಿರಿ ನಮ್ಮಕ್ಷೇತ್ರವು ಆಂಧ್ರ ವಿಶ್ವವಿದ್ಯಾಲಯಕ್ಕೆ ಸೇರುವುದು ಬೇಡ ಕಾಲೇಜುಗಳಲ್ಲಿ ಹೆಚ್ಚಿನಸ್ಥಾನಗಳನ್ನು ನಮ್ಮ ಬಾಲಕರಿಗಾಗಿ ಬಿಡಿರಿ. ನಮ್ಮವರೇ ಬೇಕಾದಷ್ಟು ಜನರಿರಬೇಕಾದರೆ ಪರಜಿಲ್ಲೆಗಳವರಿಗೆ ನೌಕರಿಕೊಡುತ್ತಿರುವುದನ್ನು ತಪ್ಪಿಸಿರಿ ಆಹಾರಸಮಸ್ಯೆಯನ್ನು ಬಗೆಹರಿಸಿರಿ.

ಮಾನ್ಯಮಂತ್ರಿಗಳ ಉತ್ತರ

ನಾನು ನಿಮ್ಮವನಾಗಿ ನಿಮ್ಮಬೆಂಬಲದಿಂದ ಇಲ್ಲಿಗೆಹೋಗಿದ್ದೇನೆ. ರಾಯಲಸೀಮೆಗಷ್ಟೇ ಅಲ್ಲ. ಪ್ರಾಂತದ ಪ್ರತಿಯೊಂದು ಭಾಗದಲ್ಲೂ ಅಭಿವೃದ್ಧಿಯಯೋಜನೆಗಳನ್ನು ಸಾಗಿಸಲು ಯತ್ನಿಸುತ್ತೇವೆ. ಈ ಭಾಗದ ಬೇಡಿಕೆಗಳನ್ನು ಕುರಿತು. ನಮ್ಮ ಘನೀಣರಿಗೆ ತಿಳಿಸುತ್ತೇನೆ. ಲಂಚವೂ ಕಪ್ಪುಬಜಾರವು ಕಡಿಮೆಯಾಗಲು ಪ್ರಜೆಗಳ ಸಹಕಾರವು ಬೇಕು. ವಸ್ತುಗಳ ಕೊರತೆ ಇರುವವರೆಗೂ ಜನತೆಗೆ ತೊಂದರೆಗಳಿದ್ದೇ ಇರುತ್ತವೆ. ಆದರೂ ಶಕ್ಯವಿದ್ದಷ್ಟನ್ನೆಲ್ಲಾ ಮಾಡುತ್ತೇವೆ. ನೀವುಹೇಳಿದಾಂಶಗಳನ್ನೆಲ್ಲಾ ನಾನು ಗಮನಪಲ್ಲಿಟ್ಟು ಎಷ್ಟರಮಟ್ಟಿಗೆ ಕಾರ್ಯರೂಪದಲ್ಲಿತರಲು ಸಾಧ್ಯವೋ ಮಾಡಲಾಗುತ್ತದೆ. ಶ್ರೀ. ಡಿ. ಯಸ್ ಹನುಮಂತರಾಯರು ಮಂತ್ರಿಗಳನ್ನುವಂದಿಸಿದರು.

ರಾಘವ—ಸ್ಮಾರಕ

ಬಿ. ಡಿ ಎ. ಮೈದಾನದಲ್ಲಿ ೫ನೆಯ ದಿನಾಂಕ ಶ್ರೀ ಆರ್ ವಿ. ಜಾಗಿರ್ದಾರರ ಅಧ್ಯಕ್ಷತೆಯಲ್ಲಿ ಕಲಾವಂತ ರಾಘವರ ಪ್ರಥಮ ವಾರ್ಷಿಕ ಪುಣ್ಯದಿನವಾಚರಿಸಲ್ಪಟ್ಟಿತು. ಜಿಲ್ಲಾ ಜಡ್ಜಮ್ಯಾಕ್, ಕಲೆಕ್ಟರ್ ಅನಂತರಾಮನ್ ಬಾಸಿತ್‌ಸಾಹೇಬರು, ಜೋಳದರಾಶಿ ದೊಡ್ಡನಗೌಡರು, ಸಂಜೀವನಮೂರ್ತಿರಾಯರು ದಿವಂಗತರಾಘವರ ಕಲೆ, ನಾಟ್ಯಕಲೆಯಲ್ಲಿ ಅವರು ಮಾಡಿದ್ದ ಕ್ರಾಂತಿ, ಮತ್ತು ಅವರ ಇತರ ಗುಣವರ್ಣನೆಮಾಡಿ ರಾಘವಸ್ಮಾರಕಕ್ಕೆ ಸಹಾಯ ಮಾಡಲು ಕೋರಿದರು ಮಾನ್ಯ ಮಂತ್ರಿ ಶ್ರೀ ಶೇಷಾದ್ರಿರೆಡ್ಡಿಯವರೂ ಸಹಾ ಸಭೆಯು ನಡೆಯುತ್ತಿರುವಾಗ ಬಂದು ಇಮ್ಮುಸ್ತಾಫ ವಾದಕಾರ್ಯವೆಂದೂ ಈ ಸಮಿತಿಯ ಕಾರ್ಯವು ಯಶಸ್ವಿಯಾಗಲೆಂದು ಹಾರಸಿದರು

ಹುತಾತ್ಮರ ದಿನಾಚರಣೆ

ಹೂವಿನ ಹಡಗಲಿ:— ೧—೪—೪೭ ಮಂಗಳವಾರ ವಿದ್ಯಾರ್ಥಿ ಕಾಂಗ್ರೆಸ್ ಭವನದಲ್ಲಿ ಸಭೆಸೇರಿ, ವಿದ್ಯಾರ್ಥಿ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಬ. ರಾಮಪ್ಪನವರು, ಆಗಷ್ಟು ವೀರರಾದ ಮೈಲಾರ ಮಹದೇವ ತಿರುಕಪ್ಪ. ವೀರಯ್ಯನವರ ವೀರ ಚರಿತ್ರೆಯನ್ನು ಹೇಳಿ ತಮ್ಮ ಭಾಷಣ ಮುಗಿಸಿದರು ಹುತಾತ್ಮರ ಆತ್ಮಗಳಿಗೆ ಶಾಂತಿಯನ್ನು ಕೋರಲು ಸಭೆಯು ೩ ನಿಮಿಷ ಮೌನವಾಗಿ ಮುಕ್ತಾಯವಾಯಿತು.

ಹೆಬ್ಬಾಳ:— ಹುತಾತ್ಮ ಮಹದೇವ ಮೈಲಾರ ವೀರಯ್ಯ ಮತ್ತು ತಿರುಕಪ್ಪನವರ ಸ್ಮಾರಕ ದಿನಾಚರಣೆಯನ್ನು ನಮ್ಮೂರಲ್ಲಿ ಆಚರಿಸಲಾಯಿತು ೧-೪-೪೭ ಪ್ರಾ ೭ ಘಂಟೆಗೆ ಧ್ವಜವಂದನೆ. ಮಧ್ಯಾಹ್ನ ೨ ಘಂಟೆಗೆ ಜೇ ಎತ್ತುಗಳಿಂದ ಶೃಂಗರಿಸಿದ ಎತ್ತುಗಳ ಬಂಡಿಯಲ್ಲಿ ಹುತಾತ್ಮರ ಭಾವಚಿತ್ರದ ಮೆರವಣಿಗೆಯಾಯಿತು. ಸಂಜೆ ೫ ಘಂಟೆಗೆ ಬಿ ಲಂಕೆಪ್ಪ ಇನರ ಅಧ್ಯಕ್ಷತೆಯಲ್ಲಿ ವಿ. ಜಿ ಕುಂಬಿಯವರು ಹುತಾತ್ಮರ ಜೀವನ ಚರಿತ್ರೆಯವನ್ನು ಕುರಿತು ಭಾಷಣ ಮಾಡಿದರು.

ಬಳ್ಳಾರಿ ಜಿಲ್ಲಾ ಆದವಾನಿ ತಾಲೂಕು ಬದನೇಹಾಳು ಗ್ರಾಮದಲ್ಲಿ ಸಮೂವೇಶವಾದ
ಬಳ್ಳಾರಿ ಜಿಲ್ಲಾ ಪ್ರಥಮ ಏಕೀಕರಣ ಮಹಾ ಸಭೆಯಲ್ಲಿ
ಬಳ್ಳಾರಿ ಜಿಲ್ಲಾ ಶಾಸನಸಭ್ಯರೂ, ಬಳ್ಳಾರಿಯ ಸುಪ್ರಸಿದ್ಧ ವಕೀಲರೂ ಆದ
ಶ್ರೀ ಬೆಲ್ಲೋಣ ಭೀಮರಾವು [ಬಿ. ಎ ಬಿ ಎಲ್. ಎಂ. ಎಲ್. ಶಿ.]
ಇವರು ಕೊಟ್ಟ ಭಾಷಣ

ಸೋದರ, ಸೋದರಿಯರೆ!

ಈ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿ, ಇದರ ಕಾರ್ಯಕಲಾಪಗಳನ್ನು ಜರುಗಿಸಲು ನನ್ನನ್ನು ಆಹ್ವಾನಿಸಿದ್ದಕ್ಕೋಸ್ಕರ, ಈ ಸಭೆಯ ಸಂಚಾಲಕರನ್ನು ವಂದಿಸುತ್ತೇನೆ.

ಭಾರತ ರಾಷ್ಟ್ರೀಯ ಮಹಾ ಸಭೆಯು ಭಾಷಾವಾರ ಪ್ರಾಂತರಚನೆಯ ತತ್ವವನ್ನು 1917-20 ರಲ್ಲಿ ಮಾನ್ಯ ಮಾಡಿತು. 1915 ರಿಂದಲೆ ಆಂಧ್ರರು ಪ್ರತ್ಯೇಕ ಕಾಂಗ್ರೆಸ್ ಪ್ರಾಂತಕ್ಕಾಗಿ ಚಳುವಳಿ ಹೂಡಿದರು. ದಕ್ಷಿಣ ಹಿಂದು ಸ್ಥಾನದ ಕೆಲ ಪ್ರತಿನಿಧಿಗಳು, ಅಧ್ಯಕ್ಷರಾದ ಶ್ರೀಮತಿ ಡಾಕ್ಟರ್ ಅನಿಬಿಸೆಂಟರವರು ಕಡುವಿರೋಧಮೂಡಿದರೂ 1917 ನೆಯ ಇಸ್ವಿ ಕಲ್ಕತ್ತಾ ಕಾಂಗ್ರೆಸ್ ಅಧಿವೇಶನದಲ್ಲಿ ಪ್ರತ್ಯೇಕ **ಆಂಧ್ರ ಕಾಂಗ್ರೆಸ್ ಪ್ರಾಂತದ** ಘಟನೆಯು ಸ್ವೀಕೃತವಾಯಿತು. 1920 ನಾಗಪುರದ ಅಧಿವೇಶನದ ನಂತರ ಕರ್ನಾಟಕ ಮತ್ತು ಕೇರಳ ಪ್ರಾಂತಗಳ ಬೇಡಿಕೆಗಳೂ ಪೂರ್ಣವಾದವು. 1921 ರಿಂದ ಕರ್ನಾಟಕಕ್ಕೆ ಪ್ರತ್ಯೇಕ ಪ್ರಾಂತೀಯ ಕಾಂಗ್ರೆಸ್ ಸಮಿತಿ ಇದೆ.

ಹತ್ತೊಂಭತ್ತನೆಯ ಶತಮಾನದ ವಿಶೇಷ ಪರಿಸ್ಥಿತಿಯಿಂದಲೂ, ರಾಜಕೀಯ ಕಾರಣಗಳಿಗಾಗಿಯೂ, ನಮ್ಮ ಕರ್ನಾಟಕ ಪ್ರಾಂತವು, ಅನೇಕ ಸಂಸ್ಥಾನಗಳನ್ನೊಳಗೊಂಡ 22 ಭಾಗಗಳಲ್ಲಿ ಹರಿದು ಹಂಚಿ ಹೋಗಿದೆಯೆಂಬುದು ತಮಗೆಲ್ಲಾ ವೇದ್ಯವಿದೆ. ಇಷ್ಟು ಛಿದ್ರವಾಗಿದ್ದರೂ, ಕಾಂಗ್ರೆಸ್ ಆಧೀನದಲ್ಲಿ ಏಕಮಾತ್ರ ಸಂಸ್ಥೆಯಾಗಿ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯು ಬಹಳ ತೃಪ್ತಿಕರವಾಗಿ ಕೆಲಸ ಸಾಗಿಸಿದೆ. ರಾಜಕೀಯ ಕಾರಣಗಳೊಂದೇ ಅಲ್ಲದೆ, ಸಾಂಸ್ಕೃತಿಕ ಮತ್ತು ಸಾಮಾಜಿಕ ದೃಷ್ಟಿಯಿಂದಲೂ, ಕರ್ನಾಟಕ ಪ್ರಾಂತವು ಏಕೀಕೃತ ಒಂದೇ ಆಡಳಿತದಲ್ಲಿ ಸಮೂವೇಶಗೊಳಿಸಬ್ಬಟ್ಟು ರಚಿಸಲ್ಪಡಬೇಕಾದುದು ಅವಶ್ಯಕವಾಗಿದೆ.

ಕನ್ನಡವನ್ನು ಮಾತೃಭಾಷೆಯನ್ನಾಗುಳ್ಳ ಯಾವ ವ್ಯಕ್ತಿಯೇ ಆಗಲಿ ಸ್ವತಂತ್ರ ಕರ್ನಾಟಕ ಪ್ರಾಂತರಚನೆಗಾಗಿ ಅಸ್ಥೆಯಿಂದ ಬಯಸದಿರಲಾರನೆಂದು ಧಾರಾಳವಾಗಿ ಹೇಳಬಹುದು ಈ ಉದ್ದೇಶ ಸಾಧನೆಗಾಗಿ ಕರ್ನಾಟಕ ಏಕೀಕರಣ ಸಂಘವೂ ಮತ್ತು ಇತರ ಸಂಘಗಳೂ ವಿಶೇಷ ಕೃಷಿಮಾಡಿವೆ. ಆದರೆ ಕರ್ನಾಟಕದ ಬಹು ಭಾಗವು ವೇಶೀ ಸಂಸ್ಥಾನಗಳಲ್ಲಿ ಹರಿದು ಹಂಚಿ ಹೋಗಿರುವಕಾರಣ ತೊಂದರೆಗಳು ಬಹಳ ದೊಡ್ಡವಿವೆ ಬ್ರಿಟಿಷ್ ಹಿಂದುಸ್ಥಾನದ ಭಾಗಗಳು ಅಂದರೆ ಬೊಂಬಾಯಿ ಪ್ರಾಂತದಲ್ಲಿನ ವಿಜಾಪುರ, ಬೆಳಗಾಂ ಉತ್ತರ ಕನಡಾ ಜಿಲ್ಲೆಗಳು, ಮದ್ರಾಸ್ ಪ್ರಾಂತದಲ್ಲಿನ ದಕ್ಷಿಣ ಕನಡಾ ಮತ್ತು ಬಳ್ಳಾರಿ ಜಿಲ್ಲೆಗಳನ್ನೊಳಗೊಂಡ ಪ್ರತ್ಯೇಕ ಕರ್ನಾಟಕ ಪ್ರಾಂತವನ್ನು ರಚಿಸಲು ಯಾವ ಅಡ್ಡಿ ಆತಂಕಗಳೂ ಇರಬಾರದು. ಮದ್ರಾಸ್ ಶಾಸನ ಸಭೆಯು ಮೇಲ್ಮನೆಯಲ್ಲಿ (ಲೆಜಿಸ್ಲೇಟಿವ್ ಕೌನ್ಸಿಲ್) 31 ನೆಯ ಮಾರ್ಚ 1938 ರಲ್ಲಿ ಒಂದು ತೀರ್ಮಾನವು ಸ್ವೀಕೃತವಾಗಿ ತಕ್ಕ ಚರ್ಯೆಯನ್ನು ತೆಗೆದುಕೊಳ್ಳಲು ಭಾರತ ಮಂತ್ರಿಗಳಿಗೆ (ಸೆಕ್ರಟರಿ ಆಫ್ ಸ್ಟೇಟ್) ಕಳುಹಿಸಲಾಯಿತು. ತಮಿಳು, ತೆಲುಗು, ಕನ್ನಡ ಮತ್ತು ಮಲಯಾಳ ಭಾಷೆಗಳು ಅಧಿಕವಾಗಿ ಉಪಯೋಗಿಸಲ್ಪಡುವ ಪ್ರದೇಶಗಳು ಸ್ವತಂತ್ರ ಆಡಳಿತಗಳಾಗಿ ಬೇರ್ಪಟ್ಟು ಪ್ರತ್ಯೇಕ ಪ್ರಾಂತಗಳಾಗಿ ವಿಂಗಡಿಸಲ್ಪಡಬೇಕೆಂಬುದೇ ಈ ಸಾರಾಂಶ. ಆದರೆ ಭಾರತ ಮಂತ್ರಿಗಳು ಸದ್ಯ ಸಿಫಾರ್ಸನ್ನು ಒಪ್ಪಲಿಲ್ಲ. ಇದಾದನಂತರ ಶೀಘ್ರವೆ ಆಂಧ್ರ ಪ್ರಾಂತವನ್ನಾದರೂ ರಚಿಸುವ ಅಗತ್ಯ ವಿರುವದೆಂದು ಪ್ರಾಂತೀಯ ಸರಕಾರವು ಒತ್ತಾಯಿತ ಮಂತ್ರಿಗಳು ಈ ಬೇಡಿಕೆಯನ್ನೂ ಮನ್ನಿಸಲಿಲ್ಲ. 12 ನೆಯ ಮೇ 1939 ರ ದಿನ ಮದ್ರಾಸ್

ಕೌನ್ಸಿಲದಲ್ಲಿ, ಕರ್ನಾಟಕ ಪ್ರಾಂತರಚನೆಗಾಗಿ ಮದ್ರಾಸ್ ಸರ್ಕಾರವು ಏಕೆ ಒತ್ತಾಯ ಪಡಿಸಲಿಲ್ಲವೆಂದು ಕೇಳಿದಾಗ, ಅದು ಬೊಂಬಾಯಿ ಸರ್ಕಾರದ ಕೆಲಸವೆಂದು ಉತ್ತರ ಕೊಡಲಾಯಿತು. 1939 ರಲ್ಲಿ ಕಾಂಗ್ರೆಸ್ ಮಂತ್ರಿಗಳು ರಾಜೀನಾಮೆ ಕೊಟ್ಟು ಯುದ್ಧ ಪರಿಸ್ಥಿತಿಯಿಂದ ಈ ಪ್ರಶ್ನೆಗೆ ಮಹತ್ವವು ದೊರೆಯಲಿಲ್ಲ.

ಬ್ರಿಟಿಷ್ ಸರ್ಕಾರದ ಶಿಷ್ಟಮಂಡಲವು 1946 ರಲ್ಲಿ ಭಾರತಕ್ಕೆ ಬಂದಾಗ ಭಾರತದ ರಾಜ್ಯ ಘಟನೆಯ ವಿಷಯವನ್ನು ನಿರ್ಣಯಿಸಿದ ಪ್ರಕಾರಕ್ಕೆ ಘಟನಾ ಸಮಿತಿಯು ರಾಜ್ಯಾಂಗ ರಚನೆಗಾಗಿ ಏರ್ಪಟ್ಟಿರುವುದು, ನಮಗೆಲ್ಲಾ ಸಂತೋಷಪ್ರದವಾದ ವಿಷಯವಾಗಿದೆ. ಭಾಷಾವಾರ ಪ್ರಾಂತ ವಿಭಜನೆಯು ಭವಿಷ್ಯ ರಾಜ್ಯಾಂಗ ರಚನೆಯ ತಳಹದಿಯಾಗುವುದೆಂದು ಭಾವಿಸಲ್ಪಟ್ಟಿತ್ತು. ರಾಜ್ಯಾಂಗ ರಚನೆಗಾಗಿ ಬ್ರಿಟಿಷ್ ಸರ್ಕಾರದ ಸೂಚನೆಗಳ ಪ್ರಕಾರಕ್ಕೆ ಹಿಂದೂಸ್ತಾನವನ್ನು ಮೂರು ಭಾಗಗಳನ್ನಾಗಿ ವಿಂಗಡಿಸಿರುವ ಕಾರಣ ಭಾಷಾವಾರ ಪ್ರಾಂತ ರಚನೆಯ ಪ್ರಶ್ನೆಯು ಹಿಂದೂಪಲ್ಟಿಟ್ಟಿದೆ.

ಆದರೂ ಘಟನಾ ಸಮಿತಿಯಲ್ಲಿರುವ ನಮ್ಮ ಸದಸ್ಯರು ಈ ಉದ್ದೇಶಸಾಧನೆಗಾಗಿ ಒಳ್ಳೆಯ ಹೋರಾಟವನ್ನೇ ಹೂಡಿರುವರು. ನಮ್ಮ ಶಾಸನ ಸಭ್ಯರೂ ಕೂಡ ಆಂಧ್ರ ಕರ್ನಾಟಕ ಪ್ರಾಂತಗಳ ರಚನೆಗಾಗಿ ಒಂದು ಬಿನ್ನ ವತ್ತಳೆಯನ್ನು ಘಟನಾ ಸಮಿತಿಗೆ ಅರ್ಪಿಸಿರುವರು.

ಆಂಧ್ರ ಮಹಾ ಸಭೆಯ ಅಧಿವೇಶನವು 4 ನೆಯ ಏಪ್ರಿಲ್ 1947 ನೆಯ ದಿನಾಂಕ ಮದ್ರಾಸಿನಲ್ಲಿ ಕೂಡಿದಾಗ ಅಧ್ಯಕ್ಷರಾದ, ವುಯ್ಯೂರಿನ ರಾಜಕುಮಾರರು, ಹಿಂದೂಸ್ತಾನ ಸರಕಾರದ ರಾಜ್ಯಾಂಗ ಘಟನೆಯ ಸಲಹೆಗಾರರಾದ ಶ್ರೀ ಬಿ ಯನ್. ರಾಯರ ಸೂಚನೆಗಳನ್ನು ಕುರಿತು ಹೇಳಿದ ಮಾತುಗಳು ಗಮನಾರ್ಹವಾಗಿವೆ.

"ಆಂಧ್ರ—ತಮಿಳ ಪ್ರಾಂತಗಳ ಜೊತೆಯೊಂದಿಲ್ಲವೆ, ಈಗಿನ ಮೇರೆಗಳಿಗೆ ಕುಂದುಬಾರದೆ, ಈ ಯೋಜನೆಯೇನೊ ಕೆಲಭಾಗದ ಮಟ್ಟಿಗೆ ಪ್ರತ್ಯೇಕ ಪ್ರಾಂತದ ನಮ್ಮ ಬೇಡಿಕೆಯನ್ನು ಪೂರೈಸುತ್ತವೆ. ಮುಖ್ಯವಾಗಿ ಈ ಯೋಜನೆಯಿಂದ ಕೆಲವು ಪೆಚ್ಚಿನ ಮಂತ್ರಿಸಭೆಗಳೂ, ಅಲ್ಪಸ್ವಲ್ಪ ಹೆಚ್ಚಿನ ಅಧಿಕಾರ, ಅವಕಾಶಗಳು ದೊರೆಯಬಹುದಾಗಲಿ, ಪ್ರತ್ಯೇಕ ಪ್ರಾಂತರಚನೆಯು ಏರ್ಪಡುವುದಿಲ್ಲ—ಮದ್ರಾಸ್, ಬೊಂಬಾಯಿ ಪ್ರಾಂತಗಳು, ಹೈದ್ರಾಬಾದ್, ಮೈಸೂರು, ತಿರುವಾಂಕೂರು ಮತ್ತು ಕೊಚಿನ್ ಸಂಸ್ಥಾನಗಳ ಕ್ಷೇತ್ರಗಳಿಂದ ಆಂಧ್ರ ತಮಿಳು, ಕರ್ನಾಟಕ, ಕೇರಳ, ಮಹಾರಾಷ್ಟ್ರ ಪ್ರಾಂತಗಳು ಭಾಷಾವಾರ ತತ್ವದಮೇಲೆ ವಿಭಜಿಸಲ್ಪಡಬೇಕಾಗಿವೆ. ಆದರೆ ಈಗಿನ ರಚನೆಯಲ್ಲಿ ಆಶ್ರಿತರಾಜರ ಸಂಸ್ಥಾನಗೊಡವೆಗೆ ನಾವು ಹೋಗುವಂತಿಲ್ಲ. ಮದ್ರಾಸ್ ಜೊಂಬಾಯಿ ಅಧಿಪತ್ಯಗಳ ಕ್ಷೇತ್ರದಿಂದ ಭಾಷೆಯ ತತ್ವದಮೇಲೆ ಪ್ರಾಂತಗಳನ್ನು ವಿಭಜಿಸಲು ಕಷ್ಟವಾಗಲಾರದು. ಬ್ರಿಟಿಷ್ ಶಿಷ್ಟಮಂಡಲದ ಹೇಳಿಕೆಗನುಸಾರವಾದ 'ಎ' ಗ್ರೂಪಗಾಗಿ ರಾಜ್ಯಾಂಗರಚನೆ ಮಾಡುವಾಗ ಆ ತತ್ವಕ್ಕನುಸರಿಸಿ ಆ ಭಾಗದಲ್ಲಿಯೇ ಪ್ರತ್ಯೇಕ ಪ್ರಾಂತಗಳನ್ನು ರಚಿಸಲು ಅವಕಾಶವಿದೆ—ಕಾಂಗ್ರೆಸ್ ವರಿಷ್ಠರೂ, ಘಟನಾಸಮಿತಿಯವರೂ, ಈ ಸೂತ್ರಗಳಂತೆ ನಡೆಯುವುದಾದರೆ, ನೂತನ ಪ್ರಾಂತಗಳ ನಿರ್ಮಾಣಕ್ಕೆ ಯಾವ ವಿಘ್ನಗಳೂ ಬರುವುದಿಲ್ಲ."

1948 ನೆಯ ಜೂನ್‌ಒಳಗಾಗಿ ಹಿಂದೂಸ್ತಾನಕ್ಕೆ ಸ್ವಾತಂತ್ರ್ಯವು ಬರುವವರೆಲ್ಲೀನೂ ಸಂಶಯವಿಲ್ಲದ ಕಾರಣ ಅದರೊಳಗಾಗಿ ಬ್ರಿಟಿಷ್ ಇಂಡಿಯಾದ ಭಾಗಗಳಿಂದ ಸ್ವತಂತ್ರ ಕರ್ನಾಟಕ ಪ್ರಾಂತದ ಉದಯವು ಸಾಧ್ಯವೂ, ಸಹಜವೂ ಆಗುವುದೆಂದು ನನಗೆ ತೋರುತ್ತದೆ

ಈ ಸಂದರ್ಭದಲ್ಲಿ ನಮ್ಮ ಜಿಲ್ಲೆಯ ಸಮಸ್ಯೆಯನ್ನು ಸ್ವಲ್ಪ ಪರಿಶೀಲಿಸೋಣ. ಪೂರ್ವ ಭಾಗದ ಅನಂತಪುರ ಮತ್ತು ಇತರ ಜಿಲ್ಲೆಗಳಿಂದ ಕನ್ನಡ ಪ್ರದೇಶಗಳನ್ನು ಕರ್ನಾಟಕ ಪ್ರಾಂತದಲ್ಲಿ ಸಮಾವೇಶಗೊಳಿಸುವ ಯೋಜನೆಯ ವಿಮರ್ಶೆಗಾಗಿ ಕಳೆದ ತಿಂಗಳು ಉರವಕೊಂಡದಲ್ಲಿ ಪೂರ್ವ ಕರ್ನಾಟಕದ ಮಹಾ ಪರಿಷತ್ತು ಕೂಡಿತ್ತು. ಜನತೆಯ ಅಭಿಪ್ರಾಯಕ್ಕನುಸಾರವಾಗಿ ಇದನ್ನೂ ನಿರ್ಣಯಿಸುವುದಾಲ್ಲೀನೂ ತಪ್ಪಿಲ್ಲ.— ಸದ್ಯಕ್ಕೆ ನಮ್ಮ ಜಿಲ್ಲೆಯ ಸಮಸ್ಯೆಯನ್ನು ನಾವು ಬಗೆಹರಿಸಬೇಕಾಗಿದೆ.

ಕಾಂಗ್ರೆಸ್ ಕಾರ್ಯಕಾರೀ ಸಮಿತಿಯವರು ಶ್ರೀ ಎನ್. ಸಿ. ಕೇಳ್ಕರವರ ಅಧ್ಯಕ್ಷತೆಯಲ್ಲಿ ಆಂಧ್ರದವರು, ಕನ್ನಡಿಗರಿಬ್ಬರು ಸದಸ್ಯರನ್ನೊಳಗೊಂಡ ಸಮಿತಿಯನ್ನು ನಿರ್ಮಿಸಿ, ಒಳ್ಳೆರಿ ಜಿಲ್ಲೆಯ ಕ್ಷೇತ್ರವನ್ನು

ವಿಮರ್ಶಿಸಿ ಅದು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧೀನದಲ್ಲಿರಬೇಕೋ, ಆಂಧ್ರ ಪ್ರಾಂತೀಯ ಕಾಂಗ್ರೆಸ್ ದಾಧೀನದಲ್ಲಿರಬೇಕೋ ಎಂಬುದನ್ನು ನಿರ್ಣಯಿಸಲು ಒಪ್ಪಿಸಿದ್ದರು. ಇದು ನಡೆದದ್ದು ೧೯೩೧ ರಲ್ಲಿ **ಈ ಸಮಿತಿಯವರು ಬಳ್ಳಾರಿ ನಗರವನ್ನು ಮಾತ್ರ ಸಂದರ್ಶಿಸಿ, ಮೂರು ದಿನಗಳು ಮಾತ್ರವಿದ್ದು ಕೇವಲ ಕೆಲವು ಮಹನೀಯರೊಡನೆ ವಿಷಯವನ್ನು ವಿಮರ್ಶಿಸಿ ತಮ್ಮ ನಿರ್ಧಾರಕ್ಕೆ ಬಂದರು.** ಬಳ್ಳಾರಿ, ಸಿರುಗುಪ್ಪೆ, ಹೊಸಪೇಟೆ, ಹರಪನಹಳ್ಳಿ, ಹಡಗಲಿ, ಕೂಡ್ಲಿಗೆ ಈ ಆರು ತಾಲೂಕುಗಳು ಕನ್ನಡ ತಾಲೂಕುಗಳೆಂದೂ, ಆದವಾನಿ, ಆಲೂರು, ರಾಯದುರ್ಗ ತಾಲೂಕುಗಳು ತೆಲುಗು ತಾಲೂಕುಗಳೆಂದೂ ನಿರ್ಣಯಿಸಿ, ಆಯಾ ಪ್ರಾಂತೀಯ ಕಾಂಗ್ರೆಸ್ ಸಮಿತಿಗಳ ಆಡಳಿತಕ್ಕೆ ಅವನ್ನೊಪ್ಪಿಸಿದರು. ಈ ನಿರ್ಣಯಕ್ಕನುಸಾರವಾಗಿ ಕಾಂಗ್ರೆಸ್ ಅಧಿಕಾರಿಗಳು ಇಲ್ಲಿಯವರೆವಿಗೆ ವರ್ತಿಸುತ್ತ ಬಂದಿರುವರು. ಇಂಥಾ ಪ್ರಾಮುಖ್ಯ ಸಮಸ್ಯೆಯ ನಿರ್ಣಯವನ್ನು ಕೊಡಬೇಕಾದರೆ, ಉಪಯೋಗಿಸಲ್ಪಡುವ ಭಾಷೆಗಳ ಅಂಕೆ ಸಂಖೆಗಳನ್ನು ಅವರು ಲಕ್ಷಿಸಲಿಲ್ಲ. ಆಗ ಹಳ್ಳಿಯ ಅಂಕೆ-ಸಂಖೆಗಳೂ ದೊರೆಯುತ್ತಲಿದ್ದಿಲ್ಲ. ಇತ್ತೀಚೆಗೆ ಪ್ರಕಟಿಸಲ್ಪಟ್ಟ ಗ್ರಾಮಗಳ ಜನಗಣತಿ ವಿವರಗಳ ಪ್ರಕಾರಕ್ಕೆ ಆದವಾನಿ, ಆಲೂರು ತಾಲೂಕುಗಳ ಅನೇಕ ಗ್ರಾಮಾದಿಗಳಲ್ಲಿ ತೆಲಗಿಗಿಂತಲೂ, ಕನ್ನಡವೇ ಅಧಿಕವಾಗಿ ಬಳಸಲಾಗುತ್ತಿದೆ. ಕೇಳ್ಕರ ಸಮಿತಿಯವರು ಈ ಮೂರು ತಾಲೂಕುಗಳ ಭಾಷೆಯ ವಿಮರ್ಶೆಯನ್ನು ಅಂಕೆ-ಸಂಖೆಗಳಿಂದ ನೋಡಿದ್ದರೆ ಅವರ ನಿರ್ಣಯವೇ ಬೇರೆಯಾಗುತ್ತಿತ್ತೆಂದು ನನ್ನ ದೃಡನಂಬಿಕೆ. ಇಡೀ ಬಳ್ಳಾರಿ ಜಿಲ್ಲೆಯು ಕರ್ನಾಟಕ ಪ್ರಾಂತದಲ್ಲಿ ಸಮಾವೇಶವಾಗಬೇಕೆಂಬ ತಮ್ಮ ತೀರ್ಮಾನ, ಮತ್ತು ದೃಢ ನಿರ್ಧಾರಗಳನ್ನು ಪ್ರಮುಖ ವ್ಯಕ್ತಿಗಳೂ ಅನೇಕ ಸಭೆಗಳೂ ಸಂಬಂಧಿಸಿದವರಿಗೆ ಕಳುಹಿಸಿವೆ.

ಘಟನಾ ಸಮಿತಿಯು ಭಾಷಾವಾರ ಪ್ರಾಂತ ವಿಭಜನೆಯ ತತ್ವವನ್ನು ಮಾನ್ಯ ಮಾಡಿ, ಅದನ್ನು ಕಾರ್ಯರೂಪಕ್ಕೆ ತರಲು ಸರಹದ್ ಸಮಿತಿ (ಬೌಂಡರಿ ಕಮಿಶನ್) ಯನ್ನು ರಚಿಸಿದಾಗ ಪ್ರಜಾಭಿಮತವನ್ನು ತೆಗೆದು ಕೊಂಡು ಈ ಪ್ರಶ್ನೆಯನ್ನು ನಿರ್ಣಯಿಸುವುದು ಸರಿಯಾದ ಮಾರ್ಗವೆಂದು ನನ್ನ ಅಭಿಪ್ರಾಯ. ಜನಾಭಿಪ್ರಾಯಕ್ಕೆ ಮನ್ನಣೆ ದೊರೆಯುವ ಈ ಕಾಲದಲ್ಲಿ ಸಂಬಂಧಿಸಿದ ಕ್ಷೇತ್ರದಲ್ಲಿನ ಸರ್ವಜನಾಭಿಪ್ರಾಯವನ್ನು ತಿಳಿಯಲು ಇದಕ್ಕಿಂತ ಬೇರೊಂದು ಮಾರ್ಗವಿಲ್ಲ.

ಸರಹದ್ ಸಮಿತಿಯವರು ಅಧಿಕ ಸಂಖ್ಯಾಕರ ನಿರ್ಣಯವನ್ನು ಒಪ್ಪಲೇಬೇಕು ಈ ಪದ್ಧತಿಯನ್ನನುಸರಿಸಲಾಗದಿದ್ದರೆ. ಈ ಜಿಲ್ಲೆಯ ಮುಖ್ಯ ಭಾಷೆಯು ಕನ್ನಡವಾಗಿರುವ ಕಾರಣ ಇಡೀ ಜಿಲ್ಲೆಯನ್ನು ಛಿದ್ರಮಾಡದಂತೆ, ಕರ್ನಾಟಕ ಪ್ರಾಂತದಲ್ಲಿ ಸಮಾವೇಶಗೊಳಿಸಬೇಕಾದುದು ನ್ಯಾಯವಾಗಿದೆ. ಅಲ್ಲಿಯವರೆವಿಗೆಷ್ಟೆ ನಾವು ಹಳ್ಳಿಗಳಲ್ಲಿ ಪ್ರಚಾರಕ್ಕೆರ್ಪಡಿಸಿ ಕನ್ನಡದ ಪ್ರಮುಖಸ್ಥಾನವನ್ನು ಜನರಿಗೆ ತಿಳಿಯಪಡಿಸಿ ಇಡೀ ಜಿಲ್ಲೆಯು ಕರ್ನಾಟಕ ಪ್ರಾಂತದಲ್ಲಿ ಸೇರಲು ವಾತಾವರಣವನ್ನು ಕಲ್ಪಿಸಬೇಕು.

ಬಳ್ಳಾರಿ ಜಿಲ್ಲೆಯನ್ನೊಳಗೊಂಡ ರಾಯಲಸೀಮ-ಯಾ- ದತ್ತಮಂಡಲದ ಜಿಲ್ಲೆಗಳು ಆಂಧ್ರ ವಿಶ್ವವಿದ್ಯಾಲಯದ ಕ್ಷೇತ್ರದಲ್ಲಿ ಸೇರಬೇಕೆ ಬೇಡವೆ – ಎಂಬ ಸಮಸ್ಯೆಯ ನಿರ್ಧಾರಕ್ಕೆ ಮದ್ರಾಸ್ ಸರ್ಕಾರದವರು ಒಂದು ಸಮಿತಿಯನ್ನು ರಚಿಸಿದ್ದಾರೆ ಇದಕ್ಕೆ ಸಾರ್ವಜನಿಕರು ಶೀಘ್ರವಾಗಿ ತಕ್ಕ ಚರ್ಯೆಯನ್ನು ತೆಗೆದುಕೊಳ್ಳಬೇಕು. ನಿಮಗೆಲ್ಲರಿಗೂ ಗೊತ್ತಿದ್ದಂತೆ, ಬಳ್ಳಾರಿ ಜಿಲ್ಲೆಯು ೧೯೩೦ ರಿಂದಲೂ ಮದ್ರಾಸ್ ವಿಶ್ವವಿದ್ಯಾಲಯದ ಕ್ಷೇತ್ರದಲ್ಲಿದೆ ಬಳ್ಳಾರಿ ಜಿಲ್ಲೆ ಮತ್ತು ದತ್ತಮಂಡಲದ ಇತರ ಜಿಲ್ಲೆಗಳು ಆಂಧ್ರ ವಿಶ್ವವಿದ್ಯಾಲಯದ ಕ್ಷೇತ್ರದಲ್ಲಿ ಸಮಾವೇಶಗೊಳಿಸಲ್ಪಡಲು ಮದ್ರಾಸ್ ಸರ್ಕಾರವು ಅನುಕೂಲವಿದ್ದಂತೆ ಕಾಣುತ್ತದೆ ನಾವು ಜಾಗೃತರಾಗಿ ಜನಾಭಿಪ್ರಾಯವನ್ನು ಏಕೀಕೃತಗೊಳಿಸಿ, ಈ ಯೋಜನೆಯನ್ನು ಪ್ರತಿಭಟಿಸಬೇಕಾಗಿದೆ.

ಈ ಸಭೆಯ ಕಾರ್ಯಕಲಾಪಗಳು ಯಶಶ್ವಿಯಾಗಲೆಂದು ನಾನು ಹೃತ್ಪೂರ್ವಕವಾಗಿ ಕೋರುತ್ತೇನೆ.

190

10

Guarranteed Pure Pyra Gingelly oil

Best for Pickles, Cooking & Cooling

DISTRIBUTORS:—

1 M/S. V. M. GIRI & SONS,
(Pro:- M. S Acharya) Car Street, Bellary
2 M/S. . HUSANJEE RAO. M VENKOJI RAO
General Merchants, Car Street Bellary.

ಶುದ್ಧ ! ಗ್ಯಾರಂಟಿಯಾದ್ದು !! ಸತ್ಕಾರಿ !!!

—ಪೈರ ಎಳ್ಳೆಣ್ಣೆ—

ಕಣ್ಣಿಗೆ ಬಹಳ ತಂಪಾದ್ದು. ಅಡಿಗೆಯ ಎಲ್ಲಾ ಪದಾರ್ಥಗಳಿಗೆ ಬಳಸಲು ಶ್ರೇಷ್ಠವಾದ ಎಣ್ಣೆಯಿದು.
ಉಪ್ಪಿನಕಾಯಿಗೆ ಈ ಎಣ್ಣೆಯನ್ನು ಪಯೋಗಿಸುವದರಿಂದ ಬಹಳಕಾಲ ಕೆಡದಂತಿಡಬಹುದು.

ಹಂಚಲಧಿಕಾರ ಉಳ್ಳವರು. 1) ವಿ ಎಂ. ಗಿರಿ ಆಂಡ್ ಸನ್ಸ್-ತೇರು ಬೀದಿ, ಬಳ್ಳಾರಿ. (ಎಂ. ಎಸ್. ಆಚಾರ್ಯ)
2) ಎಂ. ಹುಸೇಂಜಿರಾವ್, ಎಂ. ವೆಂಕೋಬರಾವ್. ತೇರುಬೀದಿ, ಬಳ್ಳಾರಿ.

ಸುಭಾಸ್
ರಾಷ್ಟ್ರಗೀತೆ.

ಸಿದ್ಧವಾಯಿತು— **ಕ್ರಯ ೦—೮—೦'**

ಸುಂದರ ಮುದ್ರಣ— ಇಡ್ಲಿಯವರಿಗೆ ಪ್ರಭಾತ ಫೇರಿ ರಾಷ್ಟ್ರೀಯ ಸಮಾವೇಶಗಳಲ್ಲಿ ಹಾಡಲ್ಪಟ್ಟ ಎಲ್ಲಾ ಮುಖ್ಯ ದೇಶಭಕ್ತ ಕವಿಗಳ ಕನ್ನಡ ಮತ್ತು ಹಿಂದೀ ಭಾಷೆಯಲ್ಲಿನ ರಾಷ್ಟ್ರಗೀತೆಗಳ ಸಮಗ್ರ ಸಂಗ್ರಹ. ಕರ್ನಾಟಕದಲ್ಲಿ ರಾಷ್ಟ್ರ ಗೀತೆಗಳ ಇಷ್ಟುದೊಡ್ಡ ಸಂಗ್ರಹವು ಇದುವರೆಗೆ ಪ್ರಕಟವಾಗಿಲ್ಲ. ಸ್ವಲ್ಪೇ ಪ್ರತಿಗಳು ಪ್ರಕಟವಾಗಿವೆ. ಹೆಚ್ಚು ಕೊಳ್ಳುವವರಿಗೆ ಕಮಿಷನ್ ಕೊಡಲಾಗುತ್ತದೆ.

'ನವಭಾರತ' ಕಾರ್ಯಾಲಯ ಬಳ್ಳಾರಿ.

—ರಾಷ್ಟ್ರೀಯ ಪುಸ್ತಕಗಳು.—
—ಕಾಂಗ್ರೆಸ್ ಸ್ವರೂಪ ದರ್ಶನ—

ರಾಷ್ಟ್ರೀಯ ಶಿಕ್ಷಣ	0—8—0
ಅಸ್ಪೃಶ್ಯತಾ-ನಿವಾರಣೆ	0—12—0
ಪ್ರಾಂತಭಾಷೆ-ರಾಷ್ಟ್ರಭಾಷೆ	0—6—0
ಖಾದಿ	0—8—0
ಕಾಂಗ್ರೆಸ್ ಮತ್ತು ಸ್ವಯಂಸೇವಕದಳ	0-10-0
ಸತ್ಯಾಗ್ರಹ (ಇತಿಹಾಸ-ತಂತ್ರ)	0—8—0

ವಿ. ಪಿ. ಖರ್ಚುಬೀರೆ. ಇನ್ನು ಅನೇಕ ಪುಸ್ತಕಗಳು ದೊರೆಯುತ್ತವೆ —

ನವಭಾರತ ಕಾರ್ಯಾಲಯ, ಬಳ್ಳಾರಿ.

NAVA BHARAT. BELLARY. Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು. **Subscription Rates**

ವರ್ಷಕ್ಕೆ	5-0-0	One Year	5—0—0
6 ತಿಂಗಳಿಗೆ	3-0-0	Six months	3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ		Subscription will not be accepted for less than 6 months.	

To

SRI..... ....

....

....

Printed at Krishna Press Bellary QH NO. B 17 FOR (Q.H. NO. B-5.)
Edited & Published by T. B. KRS HAVARAO

ಹಿಂದಿ Reg. No. M. 4746

ನವಚಾರಕ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಕ ಪ ಟ
ಸಂಚಿಕೆ ೧೬ ಬಳ್ಳಾರಿ ಏಪ್ರೆಲ್ ೨೧ ಸೋಮವಾರ ೧೯೪೭ ಸಂಪಾದಕ ಮತ್ತು ಪ್ರಕಾಶಕ
ಟಿ. ಬಿ. ಕೇಶವರಾವ್.

ಶ್ರೀ ಜಯ ಪ್ರಕಾಶನಾರಾಯಣ ಕ ಮ ಲಾ ದೇ ವಿ.

ಅಖಿಲಭಾರತ ಸಾಮ್ಯವಾದೀ ಪಕ್ಷದ ಧುರೀಣರಾದ ಜಯಪ್ರಕಾಶನಾರಾಯಣ, ಕಮಲಾದೇವಿಯವರು ತಮ್ಮ ಕರ್ನಾಟಕ ಸಂಚಾರದಲ್ಲಿ ಬಳ್ಳಾರಿಯನ್ನು ೧-೫-'೪೭ ನೆಯ ಗುರುವಾರ ಸಂದರ್ಶಿಸಲಿದ್ದಾರೆ. ಅಂದು ಅವರನ್ನು ಸಾರ್ವಜನಿಕ ಸಭೆಯಲ್ಲಿ ಸನ್ಮಾನಿಸಬೇಕಾಗಿದೆ. ಜಯಪ್ರಕಾಶರು, ಭಾರತ ಸ್ವಾತಂತ್ರಕ್ಕಾಗಿ ಅದ್ಭುತತ್ಯಾಗ ಮಾಡಿ ಅಪಾರ ಕಷ್ಟಗಳನ್ನನುಭವಿಸಿ ತರುಣ ಭಾರತೀಯರ ಪ್ರೇಮಾದರಗಳಿಗೆ ಪಾತ್ರರಿರುವರು.

ವಿದ್ಯಾರ್ಥಿಗಳು, ಕೂಲಿಕಾರರು ಹೋಟಲ ಮತ್ತು ಮೋಟಾರ ಕೆಲ್ಸಗಾರರು ಅವರಿಗೆ ಮಾನಪತ್ರಗಳನ್ನು ಕೊಡಲು ಮತ್ತು ಸಮತಾವಾದ ಪ್ರಸಾರಕ್ಕೆ ನಿಧಿಯನ್ನರ್ಪಿಸಲು ಕೋರುತ್ತೇವೆ.

ಹೋಟೆಲ, ಮೇಳಭಜಂತ್ರಿ, ಕ್ಷೌರಿಕ ವಗೈರೆಯವರಿಗೆ ಸೂಚನೆ.

ಮದ್ರಾಸ್ ಸರ್ಕಾರದವರು ೧-೪-'೪೭ ರಿಂದ ಸಾಮೂಜಿಕ ಹಕ್ಕುಗಳ ಸ್ಥಾಪನೆಗಾಗಿ ಒಂದು ಕಾಯ್ದೆ ಮಾಡಿರುವರು. ಇದರಿಂದ ಹರಿಜನರಿಗೆ ಹೋಟಲ್, ಮೇಳಭಜಂತ್ರಿ, ಕ್ಷೌರಿಕರು ಸಮಾನವರ್ತನೆಯನ್ನು ತೋರಿಸಬೇಕಾಗಿದೆ. ಇಲ್ಲವಾದರೆ ಅವರು ಶಿಕ್ಷೆಗೆ ಪಾತ್ರರಾಗುವರು. ಈ ಕಾಯ್ದೆಗೆ ಶರಣು ಹೋಗದೆ, ಸವರ್ಣ ಹಿಂದುಗಳು ಹರಿಜನರನ್ನು ಸಮಾನ ಬಂಧುಗಳಂತೆ ನಡೆಸಿಕೊಳ್ಳಲು ನಮ್ಮ ಬೇಡಿಕೆ.

(ಟಿ. ಬಿ. ಕೇಶವರಾವ್,
ಕಾರ್ಯದರ್ಶಿ-ಜಿಲ್ಲಾ ಹರಿಜನ ಸೇವಕಸಂಘ)

ಮುಂಗೆ ನಿಲ್ಲಿಸಿರಿ. ಗಾಂಧಿ-ಜಿನ್ನಾರ ಪ್ರಕಟನೆ.

ವೈಸರಾಯರ ಪ್ರಯತ್ನವೆಂಬ ಮಹಾತ್ಮ ಗಾಂಧಿ ಮತ್ತು ಜಿನ್ನಾರವರು ಈ ಕೆಳಗಿನ ಪ್ರಕಟನೆಯೊಂದನ್ನು ಹೊರಡಿಸಿ ಅದನ್ನು ಪ್ರಸಿದ್ಧಿಸಲು ವೈಸರಾಯರಿಗೆ ಅಧಿಕಾರಕೊಟ್ಟಿರುವರು "ಹಿಂದುಸ್ತಾನದ ಒಳ್ಳೆ ಹೆಸರು ಕೆಡಿಸಿ ಅದಕ್ಕೆ ಕಲಂಕವನ್ನು ತಂದ ಹಾಗು ನಿರಪರಾಧಿ ಜನರಿಗೆ ಹೆಚ್ಚಿನ ಸಂಕಟವನ್ನು ಉಂಟುಮಾಡಿದ ಇತ್ತೀಚಿನ ಪುಂಡಾಟಿಕೆ ಹಾಗು ಹಿಂಸೆಯ ಕೃತ್ಯಗಳನ್ನು ನಾವು ಅಪ್ರಗಳನ್ನು ಎಸಗಿದವರು ಹಾಗು ಅವುಗಳಿಗೆ ಆಹುತಿಯಾದವರು ಯಾರೇ ಇದ್ದರೂ ಬಲವಾಗಿ ಖಂಡಿಸುತ್ತೇವೆ.

ರಾಜಕೀಯಗುರಿ ಸಾಧಿಸಿಕೊಳ್ಳಲು ಹಿಂಸೆಯನ್ನು ಉಪಯೋಗಿಸುವುದು ಯಾವಾಗಲೂ ಖಂಡನೀಯವಾಗಿರುವುದೆಂದು ನಮ್ಮ ಅಭಿಪ್ರಾಯವಿದೆ. ಹಿಂದುಸ್ತಾನದ ಎಲ್ಲಾ ಸಮಾಜಗಳಿಗೆ ನಾವು ಅವರು ಯಾವುದೇ ಬಲವಿನವರಿರಲಿ ಹಿಂಸೆ ಹಾಗು ಶಾಂತಿಯೋಕ್ಯತ್ಯಗಳಿಂದ ದೂರ ಇರಲು ಕೇಳಿಕೊಳ್ಳುವದಲ್ಲದೆ ಭಾಷಣ ಹಾಗೂ ಲೇಖನಗಳಿಂದಲು ಹಿಂಸೆಹಾಗು ಅಶಾಂತಿಯನ್ನು ಪ್ರಚೋದಿಸದಿರಲು ಕೇಳುವೆವು

ಲೀಗ್ ಮುಸಲ್ಮಾನರ ಪುಂಡಾಟಿಕೆ

ಸರಹದ ಪ್ರಾಂತದಲ್ಲಿ ಮುಂಸ್ಲಿಂಸ್ತ್ರೀಯರು ಬೊಂಬಾಯಿ ಎಕ್ಸಪ್ರೆಸ್ ನಿಲ್ಲಿಸಹೋಗಿ ಗಾಯಗೊಂಡನಂತರ ಸಿಶಾವರದಲ್ಲಿ ಕೊಲೆ ಸುಲಿಗೆ ನಡೆಯಿತು.

ಡೇರಾ ಇಸ್ಮಾಯಿಲ ಖಾನದಲ್ಲಿ ನಿನ್ನಿನ ಗಲಭೆಗಳಲ್ಲಿ ೮ ಜನರು ಸತ್ತಿದ್ದವರು. ಊರಿನ ಅನೇಕ ಭಾಗಗಳಲ್ಲಿ ಬೆಂಕಿ ಹಚ್ಚಲಾಗಿದೆ-ಪಾರೊವಾ ಹಳ್ಳಿಯಲ್ಲಿ ೨೦ಮೂವರನ್ನುಕೊಂದು ೫೪ ಅಂಗಡಿಗಳಿಗೆ ಬೆಂಕಿ ಹಚ್ಚಿದ್ದಾರೆ.

ಕಲಕತ್ತಾ ನಗರದಲ್ಲಿ ಸ್ತ್ರೀಯರ ವಿನಯಭಂಗ ಮಾಡಿ ಗಂಡಸರನ್ನು ಹೊಡೆದರೆಂಬ ಆರೋಪಗಳು ಮಾಡಲ್ಪಟ್ಟಿವೆ. ಪೋಲೀಸರು ಹ್ಯಾರಿಸನ್ ಬೀದಿಯಲ್ಲಿನ ಮನೆಗೆ ಮುತ್ತಿಗೆ ಹಾಕಿದ ದುರ್ಘಟನೆಯ ನಂತರ ೪ ಹೆಂಗಸರು, ೧೧ ಗಂಡಸರು ಆಸ್ಪತ್ರೆಗೆ ಹಾಕಲ್ಪಟ್ಟಿದ್ದು ಅವರ ಹೇಳಿಕೆ ತೆಗೆದುಕೊಳ್ಳಲಾಗಿದೆ.

ಬಂಗಾಲ ಮತ್ತು ಪಂಜಾಬಗಳ ವಿಭಜನೆ ಮಾಡಿ ಹಿಂದೂಗಳ ಮಂತ್ರಿಮಂಡಳ ರಚಿಸಲು ಬೇಂಬಲ ದೊರೆಯುತ್ತಲಿದೆ.

ಜಿಲ್ಲಾ ಪ್ರಾಥಮಿಕ ಶಾಲೋಪಾಧ್ಯಾಯರ ಸಭೆ

(4-5-47 ಭಾನುವಾರ)

ಅಧ್ಯಕ್ಷರು ಶ್ರೀ. ಮಹಾಬಲೇಶ್ವರಪ್ಪನವರು. ಒಳ್ಳಾರಿ ಜಿಲ್ಲೆಯಲ್ಲಿನ ಏಡೆಡ್, ಬೋರ್ಡ್. ಮುನಿಸಿಪಾಲಿಟಿ, ಲೇಬರ್, ಮಿಷನ್ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ಸಮಾವೇಶವು ಬಳ್ಳಾರಿಯಲ್ಲಿ 4-೫-47 ನೆಯ ಭಾನುವಾರ ಸೇರಲು ನಿಶ್ಚಯವಾಗಿದೆ-ಈಗಿನ ಆಹಾರ ಬಟ್ಟೆದು ಭಯಂಕರ ಅಭಾವದಲ್ಲಿ, ಉಪಾಧ್ಯಾಯರು ತಮ್ಮ ಅಲ್ಪವೇತನದಲ್ಲಿ ತುಟ್ಟಿಯ ಪ್ರಸ್ತುಗಳನ್ನು ಕೊಳ್ಳಲಾರದೆ ಅವರ ಪರಿಸ್ಥಿಯು ಕರುಣಾಜನಕವಾಗಿದೆ. ಅವರ ಹಿತಸಂಬಂಧವಾಗಿ ಆಲೋಚಿಸಿ ನಿರ್ಣಯಕ್ಕೆ ಬರಬೇಕಾಗಿದೆ. ಎಲ್ಲಾ ಉಪಾಧ್ಯಾಯರು ಒಂದು ರೂಪಾಯಿ ಪ್ರತಿನಿಧಿ ಶುಲ್ಕವನ್ನು ಕೊಟ್ಟು ಅಂದು ಸಭೆಗೆ ಆಗಮಿಸಲು ನಮ್ರ ಮತ್ತ ಆಗ್ರಹದ ವಿನಂತಿ—

(ಜಿ. ಯಸ್. ಮುಸ್ತಾನಸಾಹೇಬ್—ವ್ಯವಸ್ಥಾಪಕ.)

ಕೊಡ್ಲಿಗೆ

ರಾಷ್ಟ್ರೀಯ ಸಪ್ತಾಹದ ಮೂರನೆಯ ದಿನ ಶ್ರೀ ಟಿ. ಸುಬ್ರಹ್ಮಣ್ಯಂರವರ ಸ್ಫೂರ್ತಿದಾಯಕ ಭಾಷಣವಾಯಿತು. ಶ್ರೀ ಸಾಗರಾಜು ವೆಂಕೋಬರಾಯರ ಭಾಷಣಗಳಾದವು. ಕೊನೆಯ ದಿನ ೨೪ ಘಂಟೆ ಎಡೆಬಿಡದೆ ಸೂತ್ರಯಜ್ಞವು ಸಾಗಿತು. ಶ್ರೀ ಚನ್ನಪ್ಪವಾಲಿಯವರು ೧೯೪೨ ಚಲೇಜಾವ ಚಳುವಳಿಯ ಸಮಗ್ರ ಇತಿಹಾಸವನ್ನು ಹೇಳಿ ಜಾತಿಯ ಐಕ್ಯತೆಯ ಅವಶ್ಯಕತೆಯನ್ನು ಸೂಚಿಸಿದರು.

ಅ. ಭಾ. ಪುರೋಗಾಮಿ ಪಕ್ಷದ ಪ್ರಚಾರ ಕಾರ್ಯ

ಬಳ್ಳಾರಿಯಲ್ಲಿ ಆಜಾದ್‌ಕ್ಲಬ್‌ನಾಶ್ರಯದಲ್ಲಿ ಸಭೆ

ಅಖಿಲಭಾರತ ಪುರೋಗಾಮೀಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶೀಲಭದ್ರಯಾಜಿಯವರು ಕರ್ನಾಟಕ ವ್ಯವಸ್ಥಾಪಕರಾದ ಶ್ರೀ ಮರುಳಾರಾಧ್ಯ ಶಾಸ್ತ್ರಿಗಳೊಡನೆ ಗಿಳಿ ನೆಯ ದಿನಾಂಕ ಬಳ್ಳಾರಿಗೆ ಬಂದು ರಾತ್ರಿ ಸಾಂಬಮೂರ್ತಿ ಮೈದಾನದಲ್ಲಿ ಶ್ರೀ ಟಿ. ಸುಬ್ರಹ್ಮಣ್ಯಂರವರ ಅಧ್ಯಕ್ಷತೆಯಲ್ಲಿ ಪಕ್ಷದ ಧ್ಯೇಯ ಸದ್ಯದ ರಾಜಕೀಯ ಪರಿಸ್ಥಿತಿಯನ್ನು ಕುರಿತು ಭಾಷಣವಿತ್ತರು. ಶ್ರೀ ಶಾಸ್ತ್ರಿಗಳು ಯಾಜಿಯವರ ಪರಿಚಯ ಮಾಡುತ್ತಾ ಪುರೋಗಾಮಿಪಕ್ಷಕ್ಕಾಗಿ ಅವರುಮಾಡಿದ ತ್ಯಾಗಗಳ ಪ್ರಶಂಸೆಮಾಡಿದರು. ಸರ್ದಾರ ಶಾರ್ದೂಲಸಿಂಗರು, ಪಂಜಾಬಿನಲ್ಲಿ ಜಾತೀಯಕಲಹದಿಂದುಂಟಾದ ಬೇಗೆಯನ್ನು ಶಾಂತಮಾಡುವ ಕಾರ್ಯದಿದ್ದಕಾರಣ ಬರಲಾಗಲಿಲ್ಲವೆಂದು ತಿಳಿಸಿದರು. ಶ್ರೀ ಶೀಲಭದ್ರಯಾಜಿಯವರು ತಮ್ಮ ಭಾಷಣದಲ್ಲಿ ಹೀಗೆ ಹೇಳಿದರು.

"ನಾನೊಬ್ಬ ಕ್ರಾಂತಿಕಾರ. ನನಗೆ ಭಾಷಣಮಾಡಲು ಬಾರದು. ಯೋಧನಂತೆ ಕಾರ್ಯಮಗ್ನನಾಗಬಲ್ಲೆ. ಈಗ ಭಾರತದ ರಾಜಕೀಯದಲ್ಲಿ ಗೊಂದಲವಿದೆ. ಪರರಾಷ್ಟ್ರೀಯರೊಡನೆ ಸಂಧಿಯ ಮಾತುಗಳು ನನಗೆ ರುಚಿಸುವುದಿಲ್ಲ. ಇದರಿಂದ ನಮಗೆ ಪೂರ್ಣ ಸ್ವರಾಜ್ಯವೆಂತು ಲಭಿಸಬೇಕು? ಪ್ರಪಂಚ ಚರಿತ್ರೆಯನ್ನವಲೋಕಿಸಿದರೆ ಕ್ರಾಂತಿ, ರಕ್ತ ಪಾತವಿಲ್ಲದೆ ಸ್ವಾತಂತ್ರ್ಯಪ್ರದಾನವಾಗಿಲ್ಲ. ಭಾರತದ ಘಟನಾಸಮಿತಿಯು ಸಾರ್ವಭೌಮಿಕವಾದುದಲ್ಲ ಅದು ತಯಾರಿಸಿದ ಘಟನೆಗೆ ಬ್ರಿಟಿಷ್ ಪಾರ್ಲಿಮೆಂಟರಿ ಒಪ್ಪಿಗೆ ಬೇಕು ಕೊನೆಯ ವೈಸ್ರಾಯರೆಂದು ಹೇಳಿಕೊಳ್ಳುವವರೊಡನೆ ನಮ್ಮ ಮುಖಂಡರು ಸಂಧಿಯ ಮಾತುಕತೆಸಡೆಸಿರುವರು. ಅವರು ನಡೆಸಿಕೊಳ್ಳಲಿ, ಅವರು ಮಾಡುವ ಕಾರ್ಯಗಳಲ್ಲಿ ನಾವು ಆತಂಕಗಳನ್ನೊಡ್ಡುವುದುಬೇಡ. ಹಿಂದೂ ಮುಸ್ಲಿಂ ಕಲಹಗಳಿಗೆ ಅಧಿಕಾರ ಲಾಲಸೆಯೇ ಕಾರಣ. ಲೀಗ್, ಅತ್ಯಾಚಾರಗಳಿಗೆ ಕಾರಣವಾಗಿದ್ದರೂ, ಕಾಂಗ್ರೆಸ್‌ನವರು ಜನತಾಬೆಂಬಲವನ್ನು ಸಂಪಾದಿಸಲು ತೊಡಗಲಿಲ್ಲ. ಅದು ದೊಡ್ಡಸಂಸ್ಥೆಯಾಗಿ ಬಿರ್ಲಾ ಡಾಲ್ಮಿಯಾ ಟಾಟಾರಂಥವರಿಗೆ ಅದರಲ್ಲಿ ಸ್ಥಾನವಿದೆ ನಮ್ಮಮುಖಂಡರಾದ ನೇತಾಜಿಯವರು ಹಾಕಿಕೊಟ್ಟ ಕಾರ್ಯಕ್ರಮದ ಪ್ರಕಾರಕ್ಕೆ ನಾವು ಕೆಲಸ ಸಾಗಿಸಬೇಕಾಗಿದೆ. ವಿದ್ಯಾರ್ಥಿಗಳು, ರೈತರು, ಕೂಲಿಕಾರರ ಸಂಘಟನೆಮಾಡುವದವಶ್ಯ ನಮ್ಮ ಪಕ್ಷವು ಯಾವ ರಾಜಕೀಯ ಪಕ್ಷದ ವಿರುದ್ಧವೂಇಲ್ಲ. ನಮ್ಮಧ್ಯೇಯವು ಭಾರತದ ಪೂರ್ಣ ಸ್ವಾತಂತ್ರ್ಯವಾಗಿದ್ದು ರಾಜ್ಯಾಡಳಿತದಲ್ಲಿ ಬಡವರಿಗೂ ನಿರ್ಧನಿಗಳಿಗೂ ಭಾಗ ದೊರಕಿಸುವುದಾಗಿದೆ. ನಾವೆಲ್ಲರೂ ಜಾಗೃತರಾಗಬೇಕು" ಅಧ್ಯಕ್ಷರಾದ ಶ್ರೀ ಟಿ ಸುಬ್ರಹ್ಮಣ್ಯಂರವರು:- "ಕಾಂಗ್ರೆಸ್ ಮತ್ತು ಪುರೋಗಾಮಿಪಕ್ಷಗಳಲ್ಲಿ ಧ್ಯೇಯಸಾಧನೆಗಳ ಅಂತರವಿದೆ. ಆದರೂ ಪ್ರತಿಯೊಂದು ಪಕ್ಷಕ್ಕೂ, ತನ್ನಧ್ಯೇಯ ಸಾಧನೆಗಳ ಪ್ರಚಾರವು ಅಗತ್ಯ. ನಾವು ಎಲ್ಲರ ಅಭಿಪ್ರಾಯಗಳನ್ನು ಶಾಂತವಾಗಿ ಅರಿತು ದೇಶದ ಸದ್ಯದ ಪರಿಸ್ಥಿತಿಯಲ್ಲಿ ಹೇಗೆವರ್ತಿಸಬೇಕೆಂಬುದನ್ನು ಅರಿಯಬೇಕು-" ಎಂದು ಹೇಳಿದರು

ಶ್ರೀ ರೇವಣಸಿದ್ದಪ್ಪನವರು ವಂದನಾರ್ಪಣ ಮಾಡಿದನಂತರ, ಅರಾತ್ರಿಯೇ ಅವರು ಗದಗಿಗೆ ಪ್ರಯಾಣಬೆಳಸಿದರು. ಧ್ವನಿವಾಹಕ ಯಂತ್ರದ ವ್ಯವಸ್ಥೆಮಾಡಲಾಗಿತ್ತು

ಕಾರ್ಖಾನೆಗಳಲ್ಲಿ ಮಕ್ಕಳನ್ನು ಕೆಲಸಕ್ಕೆ ನೇಮಿಸುವುದನ್ನು ತಡೆಯುವುಕ್ಕೋಸ್ಕರ ಮದ್ರಾಸ್ ಸರಕಾರವು ಒಂದು ಮಸೂದೆ ತರಲಿದೆ.

ಹಿಂದುಸ್ತಾನದಲ್ಲಿ ಬರುವ ೧೦ ವರ್ಷಗಳಲ್ಲಿ 45 ಹೊಸ ಸಕ್ಕರೆ ಕಾರ್ಖಾನೆಗಳು ನಿರ್ಮಿಸಲ್ಪಡಲಿವೆ.

ನವಭಾರತಕ್ಕೆ ಚಂದಾದಾರರಾಗಿರಿ

ಪುಂಗೆ ನಿಲ್ಲಿಸಿರಿ. ಗಾಂಧಿ-ಜಿನ್ನಾರ ಪ್ರಕಟನೆ.

ವೈಸರಾಯರ ಪ್ರಯತ್ನವಿಂದ ಮಹಾತ್ಮ ಗಾಂಧಿ ಮತ್ತು ಜಿನ್ನಾರವರು ಈ ಕೆಳಗಿನ ಪ್ರಕಟನೆಯೊಂದನ್ನು ಹೊರಡಿಸಿ ಅದನ್ನು ಪ್ರಸಿದ್ಧಿಸಲು ವೈಸರಾಯರಿಗೆ ಅಧಿಕಾರ ಕೊಟ್ಟಿರುವರು "ಹಿಂದುಸ್ತಾನದ ಒಳ್ಳೆ ಹೆಸರು ಕೆಡಿಸಿ ಅದಕ್ಕೆ ಕಲಂಕವನ್ನು ತಂದ ಹಾಗು ನಿರಪರಾಧಿ ಜನರಿಗೆ ಹೆಚ್ಚಿನ ಸಂಕಟವನ್ನು ಉಂಟುಮಾಡಿದ ಇತ್ತೀಚಿನ ಪುಂಡಾಟಿಕೆ ಹಾಗು ಹಿಂಸೆಯ ಕೃತ್ಯಗಳನ್ನು ನಾವು ಅವುಗಳನ್ನು ಎಸಗಿದವರು ಹಾಗು ಅವುಗಳಿಗೆ ಆಹುತಿಯಾದವರು ಯಾರೇ ಇದ್ದರೂ ಬಲವಾಗಿ ಖಂಡಿಸುತ್ತೇವೆ.

ರಾಜಕೀಯಗುರಿ ಸಾಧಿಸಿಕೊಳ್ಳಲು ಹಿಂಸೆಯನ್ನು ಉಪಯೋಗಿಸುವುದು ಯಾವಾಗಲೂ ಖಂಡನೀಯವಾಗಿರುವುದೆಂದು ನಮ್ಮ ಅಭಿಪ್ರಾಯವಿದೆ. ಹಿಂದುಸ್ತಾನದ ಎಲ್ಲಾ ಸಮಾಜಗಳಿಗೆ ನಾವು ಅವರು ಯಾವುದೇ ಬಲವಿನವರಿರಲಿ ಹಿಂಸೆ ಹಾಗು ಶಾಂತಿಯುಕ್ತಗಳಿಂದ ದೂರ ಇರಲು ಕೇಳಿಕೊಳ್ಳುವುದಲ್ಲದೆ ಭಾಷಣ ಹಾಗೂ ಲೇಖನಗಳಿಂದಲು ಹಿಂಸೆಪಾಗು ಅಶಾಂತಿಯನ್ನು ಪ್ರಚೋದಿಸದಿರಲು ಕೇಳುವೆವು

ಲೀಗ್ ಮುಸಲ್ಮಾನರ ಪುಂಡಾಟಿಕೆ

ಸರಹದ ಪ್ರಾಂತದಲ್ಲಿ ಮುಂಸ್ಲಿಂಸ್ತ್ರೀಯರು ಬೊಂಬಾಯಿ ಎಕ್ಸಪ್ರೆಸ್ ಸಿಲ್ಲಿಸಹೋಗಿ ಗಾಯಗೊಂಡನಂತರ ನಿಶಾವ್ಹರದಲ್ಲಿ ಕೊಲೆ ಸುಲಿಗೆ ನಡೆಯಿತು.

ಡೇರಾ ಇಸ್ಮಾಯಿಲ ಖಾನದಲ್ಲಿ ನಿಶ್ಚಿನ ಗಲಭೆಗಳಲ್ಲಿ ೮ ಜನರು ಸತ್ತಿರುವರು. ಊರಿನ ಅನೇಕ ಭಾಗಗಳಲ್ಲಿ ಬೆಂಕಿ ಹಚ್ಚಲಾಗಿದೆ-ವಾರೊವಾ ಹಳ್ಳಿಯಲ್ಲಿ ೩ಮೂವರನ್ನುಕೊಂದು ಇಳ ಅಂಗಡಿಗಳಿಗೆ ಬೆಂಕಿ ಹಚ್ಚಿದ್ದಾರೆ.

ಕಲಕತ್ತಾ ನಗರದಲ್ಲಿ ಸ್ತ್ರೀಯರ ವಿನಯಭಂಗ ಮಾಡಿ ಗಂಡಸರನ್ನು ಹೊಡೆದವೆಂಬ ಆರೋಪಗಳು ಮಾಡಲ್ಪಟ್ಟಿವೆ. ಪೋಲೀಸರು ಹ್ಯಾರಿಸನ್ ಬೀದಿಯಲ್ಲಿನ ಮನೆಗೆ ಮುತ್ತಿಗೆ ಹಾಕಿದ ದುರ್ಘಟನೆಯ ನಂತರ ೪ ಹೆಂಗಸರು, ೧೧ ಗಂಡಸರು ಆಸ್ಪತ್ರೆಗೆ ಹಾಕಲ್ಪಟ್ಟಿದ್ದು ಅವರ ಹೇಳಿಕೆ ತೆಗೆದುಕೊಳ್ಳಲಾಗಿದೆ.

ಬಂಗಾಲ ಮತ್ತು ಪಂಜಾಬಗಳ ವಿಭಜನೆ ಮಾಡಿ ಹಿಂದೂಗಳ ಮಂತ್ರಿಮಂಡಳ ರಚಿಸಲು ಬೇಂಬಲ ದೊರೆಯುತ್ತಲಿದೆ.

ಜಿಲ್ಲಾ ಪ್ರಾಥಮಿಕ ಶಾಲೋಪಾಧ್ಯಾಯರ ಸಭೆ

(4-5-47 ಭಾನುವಾರ)

ಅಧ್ಯಕ್ಷರು ಶ್ರೀ. ಮಹಾಬಲೇಶ್ವರಪ್ಪನವರು. ಬಳ್ಳಾರಿ ಜಿಲ್ಲೆಯಲ್ಲಿನ ವಿಡೆಡ್, ಬೋರ್ಡು. ಮುನಿಸಿಪಾಲಿಟಿ, ಲೋಕಲ್, ಮಿಷನ್ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ಸಮಾವೇಶವು ಬಳ್ಳಾರಿಯಲ್ಲಿ 4-5-47 ನೆಯ ಭಾನುವಾರ ಸೇರಲು ನಿಶ್ಚಯವಾಗಿದೆ-ಈಗಿನ ಆಹಾರ ಬಟ್ಟೆದು ಭಯಂಕರ ಅಭಾವದಲ್ಲಿ, ಉಪಾಧ್ಯಾಯರು ತಮ್ಮ ಅಲ್ಪವೇತನದಲ್ಲಿ ತುಟ್ಟಿಯ ವಸ್ತುಗಳನ್ನು ಕೊಳ್ಳಲಾರದೆ ಅವರ ಪರಿಸ್ಥಿತಿಯು ಕರುಣಾಜನಕವಾಗಿದೆ. ಅವರ ಹಿತಸಂಬಂಧವಾಗಿ ಆಲೋಚಿಸಿ ನಿರ್ಣಯಕ್ಕೆ ಬರಬೇಕಾಗಿದೆ. ಎಲ್ಲಾ ಉಪಾಧ್ಯಾಯರು ಒಂದು ರೂಪಾಯಿ ಪ್ರತಿನಿಧಿ ಶುಲ್ಕವನ್ನು ಕೊಟ್ಟು ಅಂದು ಸಭೆಗೆ ಆಗಮಿಸಲು ನಮ್ಮ ಮತ್ತ ಆಗ್ರಹದ ವಿನಂತಿ—

(ಜಿ. ಯಸ್. ಮಸ್ತಾನಸಾಹೇಬ್—ವ್ಯವಸ್ಥಾಪಕ.)

ಕೊಡ್ಲಿಗೆ

ರಾಷ್ಟ್ರೀಯ ಸಪ್ತಾಹದ ಮೂರನೆಯ ದಿನ ಶ್ರೀ ಟಿ. ಸುಬ್ರಹ್ಮಣ್ಯಂರವರ ಸ್ಫೂರ್ತಿದಾಯಕ ಭಾಷಣವಾಯಿತು. ಶ್ರೀ ನಗರಾಜು ವೆಂಕೋಬರಾಯರ ಭಾಷಣಗಳಾದವು. ಕೊನೆಯ ದಿನ ತಳ ಹುಂಟೆ ಎಡೆಬಿಡದೆ ಸೂತ್ರಯಜ್ಞವು ಸಾಗಿತು. ಶ್ರೀ ಚನ್ನಪ್ಪವಾಲಿಯವರು ಗಳತ ಚಲೇಜಾವ ಚಳುವಳಿಯ ಸವಿನ ಇತಿಹಾಸವನ್ನು ಹೇಳಿ ಜಾತಿಯ ಐಕ್ಯತೆಯ ಅವಶ್ಯಕತೆಯನ್ನು ಸೂಚಿಸಿದರು.

ಅ. ಬಾ. ಪುರೋಗಾಮಿ ಪಕ್ಷದ ಪ್ರಚಾರ ಕಾರ್ಯ

ಬಳ್ಳಾರಿಯಲ್ಲಿ ಆಜಾದ್‌ಳ್ಳಬ್‌ನಾಶ್ರಯದಲ್ಲಿ ಸಭೆ

ಅಖಿಲಭಾರತ ಪುರೋಗಾಮೀಪಕ್ಷದ ಪ್ರಧಾನ ಕಾಯದರ್ಶಿಗಳಾದ ಶ್ರೀ ಶೀಲಭದ್ರಯಾಜಿಯವರು ಕರ್ನಾಟಕ ವ್ಯವಸ್ಥಾಪಕರಾದ ಶ್ರೀ ಮರುಳಾರಾಧ್ಯ ಶಾಸ್ತ್ರಿಗಳೊಡನೆ ೧೫ ನೆಯ ದಿನಾಂಕ ಬಳ್ಳಾರಿಗೆ ಬಂದು ರಾತ್ರೆ ಸಾಂಬಮೂರ್ತಿ ಮೈದಾನದಲ್ಲಿ ಶ್ರೀ ಟಿ. ಸುಬ್ರಹ್ಮಣ್ಯಂರವರ ಅಧ್ಯಕ್ಷತೆಯಲ್ಲಿ ಪಕ್ಷದ ಧ್ಯೇಯ ಸದ್ಯದ ರಾಜಕೀಯ ಪರಿಸ್ಥಿತಿಯನ್ನು ಕುರಿತು ಭಾಷಣವಿತ್ತರು. ಶ್ರೀ ಶಾಸ್ತ್ರಿಗಳು ಯಾಜಿಯವರ ಪರಿಚಯ ಮಾಡುತ್ತಾ ಪುರೋಗಾಮಿಪಕ್ಷಕ್ಕಾಗಿ ಅವರುಮಾಡಿದ ತ್ಯಾಗಗಳ ಪ್ರಶಂಸೆಮಾಡಿದರು. ಸರ್ದಾರ ಶಾರ್ದೂಲಸಿಂಗರು, ಪಂಜಾಬಿನಲ್ಲಿ ಜಾತೀಯಕಲಹದಿಂದುಂಟಾದ ಬೇಗೆಯನ್ನು ಶಾಂತಮಾಡುವ ಕಾರ್ಯದಲ್ಲಿದ್ದಕಾರಣ ಬರಲಾಗಲಿಲ್ಲವೆಂದು ತಿಳಿಸಿದರು. ಶ್ರೀ ಶೀಲಭದ್ರಯಾಜಿಯವರು ತಮ್ಮ ಭಾಷಣದಲ್ಲಿ ಹೀಗೆ ಹೇಳಿದರು.

"ನಾನೊಬ್ಬ ಕ್ರಾಂತಿಕಾರ. ನನಗೆ ಭಾಷಣಮಾಡಲು ಬಾರದು. ಯೋಧನಂತೆ ಕಾರ್ಯಮಗ್ನನಾಗಬಲ್ಲೆ. ಈಗ ಭಾರತದ ರಾಜಕೀಯದಲ್ಲಿ ಗೊಂದಲವಿದೆ. ಪರರಾಷ್ಟ್ರೀಯರೊಡನೆ ಸಂಧಿಯ ಮಾತುಗಳು ನನಗೆ ರುಚಿಸುವುದಿಲ್ಲ. ಇದರಿಂದ ನಮಗೆ ಪೂರ್ಣ ಸ್ವರಾಜ್ಯವೆಂತು ಲಭಿಸಬೇಕು? ಪ್ರಪಂಚ ಚರಿತ್ರೆಯನ್ನವಲೋಕಿಸಿದರೆ ಕ್ರಾಂತಿ, ರಕ್ತ ಪಾತವಿಲ್ಲದೆ ಸ್ವಾತಂತ್ರ್ಯಪ್ರದಾನವಾಗಿಲ್ಲ. ಭಾರತದ ಘಟನಾಸಮಿತಿಯು ಸಾರ್ವಭೌಮಿಕವಾದುದೆಲ್ಲ. ಅದು ತಯಾರಿಸಿದ ಘಟನೆಗೆ ಬ್ರಿಟಿಷ್ ಪಾರ್ಲಿಮೆಂಟರಿ ಒಪ್ಪಿಗೆ ಬೇಕು ಕೊನೆಯ ವ್ಯಾಖ್ಯಾಯರೆಂದು ಹೇಳಿಕೊಳ್ಳುವವರೊಡನೆ ನಮ್ಮ ಮುಖಂಡರು ಸಂಧಿಯ ಮಾತುಕತೆನಡೆಸಿರುವರು. ಅವರು ನಡೆಸಿಕೊಳ್ಳಲಿ, ಅವರು ಮಾಡುವ ಕಾರ್ಯಗಳಲ್ಲಿ ನಾವು ಆತಂಕಗಳನ್ನೊಡ್ಡುವುದುಬೇಡ. ಹಿಂದೂ ಮುಸ್ಲಿಂ ಕಲಹಗಳಿಗೆ ಅಧಿಕಾರಲಾಲಸೆಯೇ ಕಾರಣ. ಲೀಗ್, ಅತ್ಯಾಚಾರಗಳಿಗೆ ಕಾರಣವಾಗಿದ್ದರೂ, ಕಾಂಗ್ರೆಸ್‌ನವರು ಜನತಾಬೆಂಬಲವನ್ನು ಸಂಪಾದಿಸಲು ತೊಡಗಲಿಲ್ಲ. ಅದು ದೊಡ್ಡಸಂಸ್ಥೆಯಾಗಿ ಬಿರ್ಲಾ ಡಾಲ್ಮಿಯಾ ಟಾಟಾರಂಥವರಿಗೆ ಅದರಲ್ಲಿ ಸ್ಥಾನವಿದೆ. ನಮ್ಮಮುಖಂಡರಾದ ನೇತಾಜಿಯವರು ಹಾಕಿಕೊಟ್ಟ ಕಾರ್ಯಕ್ರಮದ ಪ್ರಕಾರಕ್ಕೆ ನಾವು ಕೆಲಸ ಸಾಗಿಸಬೇಕಾಗಿದೆ. ವಿದ್ಯಾರ್ಥಿಗಳು, ರೈತರು, ಕೂಲಿಕಾರರ ಸಂಘಟನೆಮಾಡುವ ಅವಶ್ಯ ನಮ್ಮ ಪಕ್ಷವು ಯಾವ ರಾಜಕೀಯ ಪಕ್ಷದ ವಿರುದ್ಧವೂಇಲ್ಲ. ನಮ್ಮಧ್ಯೇಯವು ಭಾರತದ ಪೂರ್ಣ ಸ್ವಾತಂತ್ರ್ಯವಾಗಿದ್ದು ರಾಜ್ಯಾಡಳಿತದಲ್ಲಿ ಬಡವರಿಗೂ ನಿರ್ಧನರಿಗೂ ಭಾಗ ದೊರಕಿಸುವುದಾಗಿದೆ. ನಾವೆಲ್ಲರೂ ಜಾಗೃತರಾಗಬೇಕು" ಅಧ್ಯಕ್ಷರಾದ ಶ್ರೀ ಟಿ. ಸುಬ್ರಹ್ಮಣ್ಯಂರವರು— "ಕಾಂಗ್ರೆಸ್ ಮತ್ತು ಪುರೋಗಾಮಿಪಕ್ಷಗಳಲ್ಲಿ ಧ್ಯೇಯಸಾಧನೆಗಳ ಅಂತರವಿದೆ. ಆದರೂ ಪ್ರತಿಯೊಂದು ಪಕ್ಷಕ್ಕೂ, ತನ್ನಧ್ಯೇಯ ಸಾಧನೆಗಳ ಪ್ರಚಾರವು ಅಗತ್ಯ. ನಾವು ಎಲ್ಲರ ಅಭಿಪ್ರಾಯಗಳನ್ನು ಶಾಂತವಾಗಿ ಅರಿತು ದೇಶದ ಸದ್ಯದ ಪರಿಸ್ಥಿತಿಯಲ್ಲಿ ಹೇಗೆವರ್ತಿಸಬೇಕೆಂಬುದನ್ನು ಅರಿಯಬೇಕು—" ಎಂದು ಹೇಳಿದರು

ಶ್ರೀ ರೇವಣಸಿದ್ದಪ್ಪನವರು ವಂದನಾರ್ಪಣ ಮಾಡಿದನಂತರ, ಆರಾತ್ರೆಯೇ ಅವರು ಗದಗಿಗೆ ಪ್ರಯಾಣಬೆಳಸಿದರು. ಧ್ವನಿವರ್ಧಕ ಯಂತ್ರದ ವ್ಯವಸ್ಥೆಮಾಡಲಾಗಿತ್ತು.

ಕಾರ್ಖಾನೆಗಳಲ್ಲಿ ಮಕ್ಕಳನ್ನು ಕೆಲಸಕ್ಕೆ ನೇಮಿಸುವುದನ್ನು ತಡೆಯುವುಕ್ಕೋಸ್ಕರ ಮದ್ರಾಸ್ ಸರ್ಕಾರವು ಒಂದು ಮಸೂದೆ ತರಲಿದೆ.

ಹಿಂದುಸ್ತಾನದಲ್ಲಿ ಬರುವ ೧೦ ವರ್ಷಗಳಲ್ಲಿ ೪೦ ಹೊಸ ಸಕ್ಕರೆ ಕಾರ್ಖಾನೆಗಳು ನಿರ್ಮಿಸಲ್ಪಡಲಿವೆ.

ನವಭಾರತಕ್ಕೆ ಚಂದಾದಾರರಾಗಿರಿ

ಪುಂಡರನ್ನೆದುರಿಸಿದ ಮುಸ್ಲಿಂ ಧೀರ

ವಿಕಾಕಿಯಾಗಿ ಹಿಂದುಗಳನ್ನು ರಕ್ಷಿಸಿದ

ಕಾಲಾರಾ ಬಳಿಯಲ್ಲಿಯ ಅರಾಝಿ ಬ್ರಹ್ಮನ ಎಂಬ ಹಿಂದೂ ಬಹುಸಂಖ್ಯಾಕ ಹಳ್ಳಿಯು ಇತ್ತೀಚಿನ ಜಾತೀಯ ಗಲಭೆಗಳಲ್ಲಿ ಜಿಲ್ಲಾಜೋರ್ಡಿನ ಸಭಾಸದರಾದ ಚೌಧರಿ ಚಮನ ಖಾನರ ಪ್ರಯತ್ನದ ಫಲವಾಗಿ ಗಲಭೆಯಿಂದ ಉಳಿದದ್ದು ತಿಳಿದುಬರುತ್ತದೆ.

ಅವರು ಹಳ್ಳಿಯಲ್ಲಿಯ ಸೀಖ ಹಾಗು ಹಿಂದುಗಳ ಸಂರಕ್ಷಣೆಯ ಭಾರವನ್ನು ಹೊತ್ತುಕೊಂಡು ಅವರನ್ನೆಲ್ಲ ತಮ್ಮ ಮನೆಗೆ ಕರೆದುಕೊಂಡುಬಂದು ಬಾಗಿಲದಲ್ಲಿ ಬಂದೂಕ ಸಹಿತ ಒಬ್ಬನನ್ನು ಬಾಗಿಲ ತೆಗೆಯಬಾರದೆಂದು ಹೇಳಿ ನಿಲ್ಲಿಸಿ ದಾಳಿಗಾರರನ್ನು ಎದುರಿಸಲು ತಾವು ಸ್ವಲ್ಪದೂರದಲ್ಲಿ ಬಂದೂಕ ಸಹಿತ ನಿಂತುಕೊಂಡರು.

ದಾಳಿಗಾರರು ನೂರು ಸಲ ಏರಿಬಂದರೂ ತಮ್ಮನ್ನು ಕೊಂದ ಹೊರತು ಮನೆಯಲ್ಲಿ ಕಾಲಿಡುವದು ಶಕ್ಯವಿಲ್ಲೆಂದು ಚಮನಖಾನರು ಅವರನ್ನು ಪ್ರತಿಭಟಿಸಿ ಹಿಂದಟ್ಟಿದರು. ಮೂರುದಿವಸ ಈ ರೀತಿ ನಡೆದಮೇಲೆ ಚೌಧರಿ ಚಮನಖಾನರು ನಿರಾಶ್ರಿತರನ್ನು ಗಂಡಾಂತರ ಪ್ರದೇಶದಿಂದ ಸುರಕ್ಷಿತ ಸ್ಥಳಕ್ಕೆ ಕಳಿಸಿದರು.

ಜಿಲ್ಲಾ ಕಾಂಗ್ರೆಸ ಕಮೀಟಿ ಕಾರ್ಯದರ್ಶಿಗಳಾದ ಬಿಶನದಾಸ ಭಾಟಿಯಾ ಅವರು ಒಂದು ಪ್ರಕಟನೆ ಹೊರಡಿಸಿ ಚೌಧರಿ ಚಮನಖಾನರು ತಮ್ಮ ಮತದಾರ ಸಂಘದ ನಿಜವಾದ ಸೇವೆ ಮಾಡಿದ ಬಗ್ಗೆ ಅವರನ್ನು ಅಭಿನಂದಿಸಿದ್ದಾರೆ.

ಅಮೆರಿಕಾದ ಟೆಕ್ಸಾಸ ನಗರದಲ್ಲಿ ಬೊಂಬಾಯಿ ನಗರದಲ್ಲಾದಂಥ ಸ್ಫೋಟವಾಗಿ ಸಾವಿರ ಜನರು ಮರಣಹೊಂದಿ ೪ ಸಾವಿರಜನರು ಗಾಯಗೊಂಡಿರುವರು. ಹಡಗಳು ಉರಿಯುತ್ತಲಿವೆ. ವಿಷವಾಯು ಕೆಲಬೀದಿಗಳಲ್ಲಿ ಬೀಸುತ್ತಲಿದೆ.

Woolen Coatings, Silk Sarees, Benares and other latest designs Handloom and Mill made Clothes Et .
Colours Guaranteed. Prices very reasonable Trial Solicited

G. GOPAL SING & SON.,
CLOTH MERCHANT
No. 15 Old Market BELLARY.
ಜಿ. ಗೋಪಾಲ ಸಿಂಗ್ ಅಂಡ್ ಸನ್,
ಜವಳಿ ವ್ಯಾಪಾರಿ, ನಂ. 15
ಹಳೇ ಮಾರ್ಕೆಟ್, ಬಳ್ಳಾರಿ.

ಉಲನ್ ಕೋಟಿಂಗ್ ಬಟ್ಟೆ, ಬನಾರಸ್ ಜರಿ, ಶಿಲ್ಕು-ಟಿಶ್ಶು ಸೀರೆ ಜಾಕೆಟ್ ಲೇಸ್ ಬಾರ್ಡರ್ ಮತ್ತು ಇತರ ಅನೇಕ ವಿವಿಧ ಅತ್ಯಂತ ಆಧುನಿಕ ಉಡುಪಿನ ಬೇಡಿಕೆಯನ್ನು ನಾವು ಪೂರೈಸಲಿದ್ದೇವೆ. ಕೈ ನಯ್ಗದ ಮಿಲ್ ಬಟ್ಟೆಗಳು ಖಚಿತವಾಗಿ ಬೆಲೆಗೆ ಮೋಸವಿಲ್ಲ. ಬಣ್ಣ ಗ್ಯಾರಂಟಿ, ಬೆಲೆ ಸರಿಯೊದ್ದು. ಪರೀಕ್ಷಿಸಿ ಮನಗಾಣಿರಿ.

ನಿಕ್ಕಲಿನ ರೂಪಾಯಿ.

ಸದ್ಯಕ್ಕಿರುವ ಬೆಳ್ಳಿಯ ರೂಪಾಯಿಗಳನ್ನು ಹಿಂದೆಗೆದುಕೊಂಡು ನಿಕ್ಕಲರೂಪಾಯಿಗಳನ್ನು ಬಳಕೆಯಲ್ಲಿ ತರಬೇಕೆಂದು ಕೇಂದ್ರನಿಧಿಮಂಡಲವು ಗೊತ್ತುವಳಿ ಮಾಡಿದೆ. ಯುದ್ಧಕಾಲದಲ್ಲಿ ಭಾರತವು ೬೭೦ ಕೋಟಿ ನಾಣ್ಯಗಳನ್ನು ಅಚ್ಚುಹಾಕಿತ್ತು. ಬೆಳ್ಳಿಯ ರೂಪಾಯಿಗಳೆಲ್ಲಿನ ಬೆಳ್ಳಿಯನ್ನು ಇತರ ಅವಶ್ಯಕ ಕೆಲಸಗಳಿಗೆ ಉಪಯೋಗಿಸುವರಂತೆ.

ಬ್ರಿಟಿಷರು ತಮ್ಮ ಸೈನ್ಯವನ್ನು ಇರಾಕದಿಂದ ತೆರವು ಮಾಡಲಿರುವರು

ಜರ್ಮನಿಯ ನಿಶ್ಶಸ್ತ್ರೀಕರಣದ ಬಗ್ಗೆ ಚತುರಾಷ್ಟ್ರಗಳಲ್ಲಿ (ಅಮೆರಿಕಾ-ರಷ್ಯಾ-ಫ್ರಾನ್ಸ-ಇಂಗ್ಲೆಂಡು) ಒಡಂಬಡಿಕೆಯಾಗಿಲ್ಲ.

ಹಳ್ಳಿಯ ವೈದ್ಯಕ್ಕೆ ಪ್ರೋತ್ಸಾಹ

ಹಳ್ಳಿಯ ಜನರಿಗೆ ವೈದ್ಯಕೀಯ ಸಹಾಯದ ಏರ್ಪಾಡನ್ನು ಪುನಃ ಒದಗಿಸುವ ಸಂಬಂಧ ದೇಶೀಯ ವೈದ್ಯರನ್ನು ಅಂಗೀಕರಿಸುವ ಯೋಜನೆ ಒಂದನ್ನು ಸರಕಾರವು ಮುಂಚೂರು ಮಾಡಿದೆ. ಈ ಯೋಜನೆ ಪ್ರಕಾರ ಇಂಥ ವೈದ್ಯರ ಪದವಿಯನ್ನೂ ಯೋಗ್ಯತೆಗಳನ್ನೂ ಸುಧಾರಿಸಲಾಗುವುದಲ್ಲದೆ, ಕ್ರಮಬದ್ಧವಾದ ರೀತಿಯಲ್ಲಿ ಹಳ್ಳಿಯವರಿಗೆ ಇವರ ಸಹಾಯ ಸೇವೆಗಳು ದೊರೆಯುವಂತೆಯೂ ಮಾಡಲಾಗುವುದು. ೧೫೦೦ ಅಥವಾ ಹೆಚ್ಚಿಗೆ ಜನಸಂಖ್ಯೆ ಇರುವ ಗ್ರಾಮಗಳಲ್ಲಿ ಅತಿ ಯೋಗ್ಯವಾದ ಖಾಸಗಿ ವೈದ್ಯರನ್ನು ಜಿಲ್ಲಾ ಕಲೆಕ್ಟರರು ಆರಿಸಿ ಅವರನ್ನು ಗ್ರಾಮದ ವೈದ್ಯರೆಂದಾಗಲೀ ಹಕೀಮರೆಂದಾಗಲೀ ಒಪ್ಪಿಕೊಳ್ಳಲಾಗುವುದು. ಒಂದು ಗ್ರಾಮಕ್ಕೆ ಇಂಥ ಒಬ್ಬ ವೈದ್ಯನಿರುವನು. ಇವರನ್ನು ಹಿಂದೀ ವೈದ್ಯರ ಕೇಂದ್ರ ಬೋರ್ಡಿನವರು ರಿಜಿಸ್ಟರ್ ಮಾಡುವರು. ಈವರೆಗೆ ರಿಜಿಸ್ಟರ್ ಮಾಡದವರನ್ನು ಕಲೆಕ್ಟರರು ಆರಿಸಿದರೆ, ವಿಧಿಸಿದ ಫೀಸನ್ನು ತೆತ್ತು ಅವರು ರಿಜಿಸ್ಟರ್ ಮಾಡಬೇಕಾಗಿದೆ. ಸಾಕಷ್ಟು ಹಣವಿದೆಯೆಂದಾದರೆ ಸಂಬಂಧಪಟ್ಟ ಪಂಚಾಯತ್ ಅಥವಾ ಜಿಲ್ಲಾ ಬೋರ್ಡುಗಳು ಅಂಗೀಕರಿಸಲ್ಪಟ್ಟ ಅಂಥ ವೈದ್ಯರಿಗೆ ಗೌರವ ಸಂಭಾವನೆ (ಆನರೇರಿಯಂ) ಕೊಡಬಹುದು. ಅಲ್ಲದೆ ಇಂತಹ ಸಹಾಯವು ಅವರು ಹಳ್ಳಿಗರ ಸೇವೆಯನ್ನು ತೃಪ್ತಿಕರವಾಗಿ ನಡೆಸುವುದರ ಮೇಲೆ ಹೊಂದಿಕೊಂಡಿದೆ. ಇಂಥ ವೈದ್ಯರ ಕೆಲಸಗಳು ಅತೃಪ್ತಿಕರವೆಂದು ಕಂಡುಬಂದರೆ ಅಥವಾ ಅವರು ಕೇಳುವ ಫೀಸು ಅತ್ಯಧಿಕವೆಂದರೆ ಕೊಟ್ಟ ಅಂಗೀಕಾರವನ್ನು ನಿಲ್ಲಿಸಲಾಗುವುದು. ಹಳ್ಳಿಯ ವೈದ್ಯರನ್ನೂ ಹಕೀಮರನ್ನೂ ತರಬೇತು ಮಾಡುವುದಕ್ಕೋಸ್ಕರ ಸಹ ಒಂದು ಯೋಜನೆಯನ್ನು ತಯಾರಿಸಲಾಗುವುದು. ತರಬೇತಿನ ಕೊನೆಯಲ್ಲಿ ನಡೆಯುವ ಪರೀಕ್ಷೆಯಲ್ಲಿ ತೇರ್ಗಡೆಯಾದವರಿಗೆ ಯೋಗ್ಯತಾ ಪತ್ರಗಳನ್ನು ಕೊಡಲಾಗುತ್ತದೆ.

ದತ್ತಮಂಡಲ ಮತ್ತು ಆಂಧ್ರಪ್ರಾಂತದ ಬೇಡಿಕೆ

ರಾಯಲಸೀಮ ಭೂಷಣ ಶ್ರೀ ಜಿ. ಪದ್ಮನಾಭ ನಾಯಕರು ಈ ಕೆಳಗಿನ ಹೇಳಿಕೆಯನ್ನು ಕೊಟ್ಟಿರುತ್ತಾರೆ.

ಈ ತಿಂಗಳ 4 ನೆಯ ತಾ. ಮದ್ರಾಸಿನಲ್ಲಿ ನಡೆದ ಆಂಧ್ರಮಹಾಸಭೆಯ ಅಧ್ಯಕ್ಷಪದದಿಂದ ಭಾಷಣಮಾಡುತ್ತಾ, ರಾಯಲಸೀಮೆಯವರು ಆಂಧ್ರಪ್ರಾಂತವನ್ನು ವಿರೋಧಿಸಬಾರದೆಂದೂ ಎರಡು ಪಕ್ಷಗಳಲ್ಲಿನ ಸದ್ಭಾವನೆಯಿಂದ ಕಷ್ಟಗಳ ನಿವಾರಣೆಯಾಗುವುದು ಅಸಾಧ್ಯವಲ್ಲೆಂದೂ ಹೇಳಿದ್ದಾರೆ. ಸಭೆಗಳಾದಾಗ ತುಟಿಯ ಸಹಾನುಭೂತಿ ತೋರಿಸುವುದು ಇವರ ಪದ್ಧತಿಯಾಗಿದೆ. ನಂತರ ಇವರೇನೂ ಮಾಡುವುದಿಲ್ಲ. ಬಳ್ಳಾರಿಯಲ್ಲಿ ಆಂಧ್ರ ಮಹಾಸಭೆಯು ನಡೆದ ಕಾಲಕ್ಕೆ ಆಂಧ್ರರಲ್ಲಿ ಐಕಮತ್ಯವನ್ನು ಮೂಡಲು ನಿತ್ಯಮಂಡಲಿಯು ಯತ್ನಿಸಿ ವಿಫಲವಾಯಿತು. ರಾಯಲಸೀಮ ಪಕ್ಷದವರಾಗಲಿ, ಆಂಧ್ರಪಕ್ಷದವರಾಗಲಿ, ರಾಯಲಸೀಮೆಯವರಿಗೆ ಏನೂ ಒಳ್ಳೆಯದನ್ನು ಮಾಡಲಿಲ್ಲ ಸರ್ಕಾರಾಂಧ್ರರು ಆಂಧ್ರರಿಗಾಗಿ ಮೀಸಲಿಟ್ಟ ೫ ಮಂತ್ರಿ ಪದವಿಗಳಲ್ಲಿ, ತಾವು ನಾಲ್ಕನ್ನು ತೆಗೆದುಕೊಂಡು ರಾಯಲಸೀಮೆಯವರಿಗೆ ಒಂದನ್ನು ಮಾತ್ರ ಕೊಟ್ಟು ಪರಮ ಅನ್ಯಾಯವನ್ನು ಮಾಡಿರುತ್ತಾರೆ. ಈ ಕಾರಣಕ್ಕಾಗಿ ಪ್ರತ್ಯೇಕ ಪ್ರಾಂತದ ಬೇಡಿಕೆಗೆ ರಾಯಲಸೀಮೆಯವರ ಸಹಕಾರವಿಲ್ಲ. ಮದ್ರಾಸಿನಲ್ಲಿರಲಿ, ಆಂಧ್ರಪ್ರಾಂತದಲ್ಲಿರಲಿ, ಅವರ ಪರಿಸ್ಥಿತಿಯು ಸುಧಾರಿಸುವುದಿಲ್ಲವೆಂದು ಮನವರಿಕೆಯಾಗಿದೆ. ಸರ್ಕಾರಾಂಧ್ರರು ಪ್ರಾಮಾಣಿಕರಾಗಿದ್ದರೆ ರಾಯಲಸೀಮೆಯವರಿಗೆ ಮಂತ್ರಿವರ್ಗದಲ್ಲಿ ಮೂರು ಸ್ಥಾನಗಳನ್ನಾದರೂ ಕೊಡಬಹುದಾಗಿತ್ತು.

ಮಂತ್ರಿವರ್ಗದಲ್ಲಿ ಸ್ಥಾನಗಳನ್ನು ಸಮವಾಗಿ ಹಂಚಲು ಸರ್ಕಾರಾಂಧ್ರರು ಅವರ ಅಧ್ಯಕ್ಷರಾದ ವಯಸ್ಸಾಗಿಸಿ ರಾಜ ಕುಮಾರರೂ ಪ್ರಯತ್ನಿಸುವುದಾದರೆ ನಾವು ಪ್ರಾಂತೀಕರಣತ್ವವನ್ನು ವಿರೋಧಿಸುವುದಿಲ್ಲವೆಂದು ಈ ಮೂಲಕ ಭರವಸೆ ಕೊಡುತ್ತೇನೆ.

ಬಳ್ಳಾರಿ ಜಿಲ್ಲಾ ಪ್ರಥಮ ಕರ್ನಾಟಕ

ಏ ಕೀ ಕ ರ ಣ ಪ ರಿ ಷ ತ್ತು

ಬಳ್ಳಾರಿ ಜಿಲ್ಲಾ ಆದವಾನಿ ತಾಲೂಕು ಬನಸಹಾಳು ಗ್ರಾಮದಲ್ಲಿ ಪ್ರಥಮ ಕರ್ನಾಟಕ ಏಕೀಕರಣ ಪರಿಷತ್ತು ೧೩-೪-೪೭ ನೆಯ ಭಾನುವಾರ ವೈಭವದಿಂದ ನೆರವೇರಿತು. ಜಿಲ್ಲೆಯ ಎಲ್ಲಾ ಭಾಗಗಳಿಂದಲೂ ಪ್ರತಿನಿಧಿಗಳು (ಬಂದಿದ್ದರು.)ಕರ್ನಾಟಕ ಧುರೀಣರಾದ ಶ್ರೀಗಳಾದ ಆರ್. ವಿ. ಜಾಗಿರ್ದಾರ, ನೆಗಳೂರ ರಂಗನಾಥರವರು ಉದ್ಘಾಟಕರಾದ ಶ್ರೀ ಜಿನರಾಜ ಹೆಗ್ಡೆಯವರು ಬಾರದಕಾರಣ, ಶ್ರೀ ಆರ್. ವಿ. ಜಾಗಿರ್ದಾರರು ಉದ್ಘಾಟನೆಯನ್ನು ಮಾಡಿದರು ಶ್ರೀಗಳಾದ ಉರವಕೊಂಡ ಸ್ವಾಮಿಗಳು ದ. ಪ. ಕಾನುರ್ಕರ್, ಬೆಂಬಾಯಿ ಪ್ರಾಂತದ ಮಂತ್ರಿಗಳಾದ ಮಾನ್ಯ ಎಂ. ಪಿ. ಪಾಟೀಲ, ಮದ್ರಾಸ್ ಹರಿಜನೋದ್ಧಾರ ಮಂತ್ರಿಗಳಾದ ಶ್ರೀ ವಿ. ಕೂರ್ಮಯ್ಯನವರು, ಔಂಧ ಮಹಾರಾಜರು ಶ್ರೀ ಟಿ. ಸುಬ್ರಹ್ಮಣ್ಯಂ, ದೊಡ್ಡನಗೌಡ್ರು, ಲಿಂಗಾರೆಡ್ಡಿ, ದೊಡ್ಡಮೇಟಿ ಮುದುವೀಡು ಕೃಷ್ಣರಾಯರು ಶುಭಸಂದೇಶಗಳನ್ನು ಕಳುಹಿಸಿದ್ದರು-ರಾಷ್ಟ್ರಧ್ವಜವು ಶ್ರೀ ಅಸುಂಡಿ ತಿರುಮಲರಾಯರಿಂದಲೂ, ಕನ್ನಡಧ್ವಜವು ಶ್ರೀ ರೇವಣಸಿದ್ದಯ್ಯನವರಿಂದಲೂ ಆರೋಹಣವಾಯಿತು. ಅಧ್ಯಕ್ಷರ ಆಯ್ಕೆಯಾದನಂತರ ಸ್ವಾಗತಸಮಿತಿ ಅಧ್ಯಕ್ಷರಾದ ಶ್ರೀ ವಿ ಹರಿಶ್ಚಂದ್ರರೆಡ್ಡಿಯವರು ತಮ್ಮ ಭಾಷಣವನ್ನು ಕೊಟ್ಟರು [ಅಧ್ಯಕ್ಷ ಮತ್ತು ಸ್ವಾಗತಾಧ್ಯಕ್ಷರ ಭಾಷಣಗಳು ಪ್ರಕಟವಾಗಿವೆ.]

ಶ್ರೀ ಜಾಗಿರ್ದಾರರು ಸಭೆಯ ಉದ್ಘಾಟನೆ ಮಾಡುತ್ತ ಹೀಗೆ ಹೇಳಿದರು—

"ಕನ್ನಡಿಗರು ಬಹು ಮುಖ್ಯ ಸಮಸ್ಯೆಗಳೆನ್ನು ದುರಿಸಿ ಪ್ರಾಂತನಿರ್ಮಾಣವಾಕೊಳ್ಳಬೇಕಾಗಿದೆ. ದೇಶದರಾಜಕೀಯ ಪರಿಸ್ಥಿತಿಯೇ ಬದಲಾಗುತ್ತಲಿದೆ ಬ್ರಿಟಿಷರು ಬಂದು ಮಾಡಿದ ಅನ್ಯಾಯವನ್ನು ಅವರು ಹೋಗುವಾಗ ಆ ಅನ್ಯಾಯವನ್ನು ತಿದ್ದಿ ಛಿದ್ರವಾದ ಕರ್ನಾಟಕವನ್ನು ಏಕೀಕೃತವಾಡಿ ಸ್ವತಂತ್ರಹಿಂದೂ ಸ್ತಾನದಲ್ಲಿ ಸ್ವತಂತ್ರ ಕರ್ನಾಟಕದ ರಚನೆಯನ್ನು ಮಾಡಬೇಕಾಗಿದೆ. ಕನ್ನಡದಲ್ಲಿ ಶಿಕ್ಷಣ ಮತ್ತು ಜಾಗೃತಿ ಬೇರೆ ಪ್ರಾಂತಗಳ ತುಲನಾತ್ಮಕ ದೃಷ್ಟಿಯಿಂದ ಕಡಮೆಯೆಂದು ಹೇಳಬೇಕಾಗಿದೆ. ಜನಗಣನೆಯ ಅಧಿಕಾರಿಗಳ ವೋಸದಿಂದ ಉತ್ತರ ಕರ್ನಾಟಕದಲ್ಲಿನ ಕನ್ನಡಿಗರನೇಕರು ಮರಾಠೀಗರೆಂದೂ, ಬಳ್ಳಾರಿಯ ಕನ್ನಡಿಗರು ತೆಲುಗರೆಂದು ಗಣಿಸಲ್ಪಟ್ಟಿರುವರು.- ಈಗ ನಾವು ಜಾಗೃತರಾಗಬೇಕು. ನಿಮಗೆ ಸುರಿತ ಧುರೀಣರೊಬ್ಬರ—ನೇತೃತ್ವವು ದೊರಕುವುದಕ್ಕಾಗಿ ನನಗೆ ಸಂತೋಷವಾಗಿದೆ. ನಿಮ್ಮ ಕಾರ್ಯವು ಯಶಸ್ವಿಯಾಗಲಿ."

ವಿಷಯ- ನಿಯಾಮಕ ಸಮಿತಿಯಲ್ಲಿ ಚರ್ಚಿಸಲ್ಪಟ್ಟ ತೀರ್ಮಾನಗಳು ಸಭೆಯ ಮುಂದಿಡಲ್ಪಟ್ಟು ಸರ್ವಾನುಮತದಿಂದ ಸ್ವೀಕೃತವಾದುವು.

(೧) ಭಾಷಾವಾರ ಪ್ರಾಂತನಿರ್ಮಾಣ ತತ್ವವು ಸರ್ವಸಮ್ಮತವಾಗಿದ್ದು ಸದ್ಯಕ್ಕೆ ನೇರಿದ ಘಟನಾಸಮಿತಿಯು ಹೊಸ ಘಟನೆಯ ಅಂಗವಾಗಿಯೂ ಪ್ರತ್ಯೇಕ ಕರ್ನಾಟಕ ಪ್ರಾಂತರಚನೆಯನ್ನು ಮಾಡಬೇಕೆಂದೂ ನಮ್ಮ ಘಟನಾಸಮಿತಿ ಪ್ರತಿನಿಧಿಗಳು ಪ್ರತ್ಯೇಕ ಕರ್ನಾಟಕದ ಘಟನೆಗಾಗಿ ಒತ್ತಾಯ ಪಡಿಸಬೇಕೆಂದೂ, ಇದನ್ನೊಳಗೊಳ್ಳದ ಸೂತನ ಘಟನೆಯನ್ನು ಕನ್ನಡಿಗರೊಪ್ಪುವದಿಲ್ಲವೆಂದೂ ಈ ಸಭೆಯು ಸಾರುತ್ತದೆ.

(೨) ಘಟನಾಸಮಿತಿಯ ಸಲಹೆಗಾರರಾದ ಶ್ರೀ ಬಿ. ಯನ್. ರಾಯರ ಸೂಚನೆಗಳು ಸ್ವತಂತ್ರ

ಕರ್ನಾಟಕ ಪ್ರಾಂತಕ್ಕೆ ಘಾತಕವಾಗಿರುವ ಕಾರಣ ಈ ಯೋಜನೆಯನ್ನು ಈ ಸಭೆಯು ಖಂಡಿಸುತ್ತದೆ.

(೩) ಬಳ್ಳಾರಿ ಜಿಲ್ಲೆಯು ಪೂರ್ಣ ಕನ್ನಡವಿದ್ದು ಕೇವಲ ಅವಾರ್ಡು ತಪ್ಪುಗ್ರಹಿಕೆಯಿಂದ ಕೂಡಿ ತೀರ ಅನ್ಯಾಯದ್ದಾಗಿದೆ. ಜಿಲ್ಲೆಯ ಪ್ರತಿಯೊಂದು ಹಳ್ಳಿಯಲ್ಲಿ ಏಕೀಕರಣ ಸಂಘವನ್ನು ಸ್ಥಾಪಿಸಿ—ಪ್ರಚಾರಮಾಡಿ ಸಂಬಂಧಿಸಿದವರಿಗೆ ತಿಳುಹಿಸಲು ಈ ಸಭೆಯು ನಿರ್ಣಯಿಸುತ್ತದೆ.

(೪) ಮದ್ರಾಸ್ ಪ್ರಭುತ್ವದವರು ದತ್ತಮಂಡಲದಲ್ಲಿರುವ ಕಳಾಶಾಲೆ ಮತ್ತು ಇನ್ನಿತರ ವಿದ್ಯಾನಿಲಯಗಳನ್ನು ಆಂಧ್ರ ವಿಶ್ವವಿದ್ಯಾನಿಲಯದ ಅಧೀನತೆಗೆ ಸೇರಿಸಲು ಒಂದು ಸಮಿತಿಯನ್ನು ನಿರ್ಮಿಸಿರುವರು. ಬಳ್ಳಾರಿ- ಅನಂತಪುರ ಮುಕ್ತಿತರ ಕನ್ನಡ ಪ್ರದೇಶಗಳಲ್ಲಿನ ವಿದ್ಯಾಸಂಸ್ಥೆಗಳನ್ನು ಆಂಧ್ರಕ್ಷೇತ್ರಕ್ಕೆ ಸೇರಿಸಬಾರದೆಂದು ಈ ಸಭೆಯು ತೀರ್ಮಾನಿಸುತ್ತದೆ.

(೫) ಬಳ್ಳಾರಿಯಂಥ ಕನ್ನಡ ಜಿಲ್ಲೆಯಲ್ಲಿ ಮತ್ತು ಸಾಮಾನ್ಯವಾಗಿ ಎಲ್ಲ ಕನ್ನಡಜಿಲ್ಲೆಗಳಲ್ಲಿ ಕಳೆದ ಅನೇಕವರ್ಷಗಳಿಂದ ಏಕಕಂಠವಾಗಿ ಕನ್ನಡಿಗರು ಕೇಳಿಕೊಂಡರೂ, ಕನ್ನಡ ಅಧಿಕಾರಿಗಳನ್ನು ನಿಯಮಿಸದಿರುವ ಧೋರಣೆಯನ್ನು ಈ ಸಭೆಯು ತೀವ್ರವಾಗಿ ಖಂಡಿಸುವುದಲ್ಲದೆ ಕರ್ನಾಟಕವು ಪ್ರತ್ಯೇಕ ಪ್ರಾಂತವಾಗದಹೊರತು ನ್ಯಾಯ ದೊರೆಯುವುದಿಲ್ಲೆಂದೂ ಕೂಡಲೇ ಪ್ರಾಂತನಿರ್ಮಾಣವಾಗಬೇಕೆಂದೂ ಸೂಚಿಸುತ್ತದೆ.

(೬) ಭಾಷಾವಾರ ಪ್ರಾಂತ ಪುನರ್ರಚನೆ ತೀಕ್ಷ್ಣದಲ್ಲಿಯೇ ಕಾರ್ಯರೂಪದಲ್ಲಿ ಬರುವುದಿದ್ದುದರಿಂದ ಎರಡು ಬೇರೆ ಬೇರೆ ಭಾಷಾತ್ಮಕ ಪ್ರದೇಶಗಳಿಗೆ ಸಂಬಂಧಿಸಿದ ಆರ್ಥಿಕಯೋಜನೆಗಳನ್ನು ಸದ್ಯದ ಪ್ರಾಂತಿಕ ಸರಕಾರಗಳು ಕೈಕೊಳ್ಳಬಾರದೆಂದು ಅಭಿಪ್ರಾಯಪಟ್ಟು ಅದಕ್ಕೆ ಅನ್ವಯಿಸಿ ಸದ್ಯದ ತುಂಗಭದ್ರಾಯೋಜನೆಯ ಕೆಲಸವನ್ನು ತಡೆಯುವಂತೆ ಮದ್ರಾಸ್ ಮಂತ್ರಿಮಂಡಲಕ್ಕೂ ಕಾಂಗ್ರೆಸ್ ಅಧ್ಯಕ್ಷರಿಗೂ ತಿಳಿಸಿಕೊಳ್ಳಬೇಕು.

ಶ್ರೀ ಗಂಗಾವತಿಯವರ ತುಂಗಭದ್ರಾಯೋಜನೆಯ ಸಂಬಂಧದ ಈ ತೀರ್ಮಾನಕ್ಕೆ ಶ್ರೀ ಅಸುಂದಿ, ವೆಂಕೋಬಶೆಟ್ಟಿ ವಗೈರೆ ಅನೇಕ ಮಹನೀಯರ ಭಾಷಣಗಳಾಗಿ ಚರ್ಚೆಯ ನಂತರ ಸರ್ಕಾರದ ಕಡೆಯಿಂದ ತಕ್ಕಅಂಕೆ ಸಂಜೆಗಳನ್ನು ದೊರಕಿಸುವ ಆಶ್ವಾಸನೆ ಅಧ್ಯಕ್ಷರಾದ ಶ್ರೀ ಭೀಮರಾಯರು ಕೊಟ್ಟಕಾರಣ ಸೂಚಕರು ಇದನ್ನು ಮತಕ್ಕೆಹಾಕಲು ವಕ್ತಾಯಪಡಿಸಲಿಲ್ಲ.

(೭) ಆಲೂರು ಹೈಸ್ಕೂಲಿನಲ್ಲಿ ಕನ್ನಡ ಶಿಕ್ಷಣಕ್ಕೇರ್ಪಡಿಸಲು ಈ ಸಭೆಯು ಒತ್ತಾಯಪಡಿಸುತ್ತದೆ.

ಸಭೆಯು ಯಶಸ್ವಿಯಾದ್ದಕ್ಕೆ ಅಭಿನಂದನೆಯನ್ನು ಶ್ರೀ ರೇವಣಸಿದ್ದಯ್ಯನವರು ಅರ್ಪಿಸಿದರು ಸ್ವಾಗತಾಧ್ಯಕ್ಷರಾದ ಶ್ರೀ ಬಿ. ಹರಿಶ್ಚಂದ್ರಾ ರೆಡ್ಡಿಯವರೂ ಕಾರ್ಯದರ್ಶಿಗಳಾದ ಶ್ರೀ ರಂಗನಗೌಡರು, ರಾಜಯೋಗಿ ತಮ್ಮಿರೆಡ್ಡಿಯವರೂ ಅದ್ವೈತಾನಂದಾಶ್ರಮದಲ್ಲಿ ಬಂದ ಅತಿಥಿಗಳಿಗೆಲ್ಲಾ ಸತ್ಕಾರವನ್ನು ಉಚಿತವಾಗಿ ಏರ್ಪಡಿಸಿದ್ದರು ವಿನೋದಕಾರ್ಯಕ್ರಮವು ಬಳ್ಳಾರಿಯ 'ಮೇಧಾವಿ' ಇವರಿಂದ ನಡೆದು (ಭಗವದ್ಗೀತೆಯ ವಿಷಾದ ಪ್ರಕರಣ) ಮನರಂಜನೆಯ ಕಾರ್ಯಕ್ರಮವೂ ಸಾಂಗವಾಯಿತು.

ಬಳ್ಳಾರಿ ಜಿಲ್ಲಾ ಕರ್ನಾಟಕ ಏಕೀಕರಣ ಸಂಘ

ಬಳ್ಳಾರಿ ಜಿಲ್ಲಾ ಅದವಾನಿ ತಾಲೂಕು ಬದನಿಹಾಳಲ್ಲಿ ನಡೆದ ತೃತೀಯ ಕರ್ನಾಟಕ ಏಕೀಕರಣ ಸಮ್ಮೇಳನದ ಸಂದರ್ಭದಲ್ಲಿ ೧೯೪೭-೪೮ನೆಯ ವರ್ಷಕ್ಕಾಗಿ ಈ ಕೆಳಗಿನ ಅಧಿಕಾರೀವರ್ಗದವರು ಆರಿಸಲ್ಪಟ್ಟರು.

ಅಧ್ಯಕ್ಷರು:— **ಬಿ. ರಂಗನಗೌಡರು**

ಉಪಾಧ್ಯಕ್ಷರು:— **ವೀರನಗೌಡರು**

ಕಾರ್ಯದರ್ಶಿಗಳು:— ಕೊಟ್ಟಿಗಿ ಹನುಮಂತಪ್ಪ- ಸಿಂದ್ಗಿ ಗನಿಸಿದ್ದಪ್ಪ, ತಾಲೂಕಿಗೊಬ್ಬರಂತೆ ಸದ

ಸ್ಯರು:—ರಾಯಚೂರ್ಗದಿಂದ ಸಣ್ಣಬಸವನಗೌಡರು ಸಿರುಗುಪ್ಪೆಯಿಂದ ಓಬಳಶಾಸ್ತ್ರಿ, ಹರಪನಹಳ್ಳಿಯಿಂದ ಆರ್. ಯಸ್. ಹಯವದನ. ಕೊಟ್ಟೂರಿನಿಂದ ಟಿ ಯಚ್. ಗುರುಲಿಂಗಪ್ಪನವರು ಆರಿಸಲ್ಪಟ್ಟಿರುವರು. ಉಳಿದ ತಾಲೂಕುಗಳಿಂದ ಸದಸ್ಯರನ್ನಾರಿಸಲು, ಈ ಸಮಿತಿಗೆ ಅಧಿಕಾರ ಉಂಟು.

ಮದ್ರಾಸ್ ಸರ್ಕಾರದ ಆಜ್ಞೆಗಳು

ಗ್ರಾಮಾಧಿಕಾರಿಗಳು

ಪಟೇಲ ವಗೈರೆ ಗ್ರಾಮಾಧಿಕಾರಿಗಳು ಕೇವಲ ಇಡಿಹೊತ್ತಿನ ನೌಕರರಲ್ಲವಾದುದರಿಂದ ಅವರ ದೈನಂದಿನ ಕೆಲಸಗಳಿಗೆ ಅಡ್ಡಿಯಾಗದಿದ್ದರೆ. ಸಂಬಂಧಪಟ್ಟ ರೆವಿನ್ಯೂ ಡಿವಿಜನಲ್ ಆಫೀಸರರಿಂದ ಪರವಾನಗಿ ಮೂಲಕ ಮೊದಲಾಗಿ ಸಮ್ಮತಿಪಡಕೊಂಡರೆ ವ್ಯಾವಾರ ಕಂಟ್ರಾಕ್ಟ್ ಇತ್ಯಾದಿ ಕೆಲಸಗಳನ್ನು ಅವರ ಗ್ರಾಮದಲ್ಲಿ ವಹಿಸಿಕೊಳ್ಳಬಹುದು. ಅವರ ಗ್ರಾಮದಿಂದ ಹೊರಗೆ ಕಂಟ್ರಾಕ್ಟ್ ವಗೈರೆ ಕೆಲಸ ಕೈಗೊಳ್ಳುವುದಾದರೆ ಸರಕಾರದ ಅನುಮತಿ ಪಡೆಯಬೇಕು.

ಬಟ್ಟೆ-ನೂಲು ನಿಯಂತ್ರಣದ ಹೊಸ ಶಾಸನ

1946 ನೆ ಇಸವಿಯ ಶಾಸನವನ್ನು ರದ್ದು ಮಾಡಿ 1947 ನೇ ಹೊಸ ಕಾಯಿದೆಯು ಜಾರಿಗೆ ಬಂದಿದೆ. ಹತ್ತಿಬಟ್ಟೆ ಅಥವಾನೂಲು ಅಥವಾ ಇವೆರಡರಲ್ಲೂ ದಲಾಲಿ ವ್ಯಾಪಾರಮಾಡುವ ಎಲ್ಲಾ ಜನರನ್ನು ಹತೋಟಿಯಲ್ಲಿಡಲು ಯೋಗ್ಯವಾದ ಲೈಸನ್ಸ್‌ಕೊಡ್ವ ವಸತ್ಥಿಯನ್ನು ಜಾರಿಗೆ ತರುವುದೇ ಈ ಕಾಯಿದೆಯ ಉದ್ದೇಶ. ಇದರಿಂದ ಕಲೆಕ್ಟರನ್ನು ಅಥವಾ ಅವರಿಂದ ಅಧಿಕಾರ ಹೊಂದಿದ ಇತರ ಆಫೀಸರನ್ನು ಲೈಸನ್ಸ್‌ಕೊಡುವ ಬಗ್ಗೆ ಅಧಿಕಾರಿಯನ್ನಾಗಿ ಮಾಡಲಾಗಿದೆ. ಮುಂಚಿನ ಶಾಸನದಂತೆ ಕೈಕೊಂಡ ಎಲ್ಲಾ ಕಾರ್ಯಗಳೂ ಸಿಂಧುವಾಗಿರುವಂತೆ ಈ ಹೊಸ ಶಾಸನದಲ್ಲಿ ಅವಕಾಶ ಕೊಡಲಾಗಿದೆ.

ಕಾಗದ

ಬಿಳಿ ಮುದ್ರಣ ಕಾಗದ ಹೊರತು ಪರದೇಶದಿಂದ ತರಿಸಿದ ಇತರ ಎಲ್ಲಾ ಬಿಳಿಯ ಕಾಗದಗಳ ಮೇಲಿದ್ದ ನಿರ್ಬಂಧವು ತೆಗೆಯಲ್ಪಟ್ಟಿದೆರಿಂದ, ಕಾರ್ಡುದಾರರಲ್ಲದವರಿಗೂ ಈ ಕಾಗದಗಳನ್ನು ಒಮ್ಮೆಗೆ ಒಂದು ರೀಮಿನಂತೆ ಮಾರಬಹುದು. ಈ ದಯಾಯತಿಯು 1-3-47 ರಿಂದ 3 ತಿಂಗಳಕಾಲ ಇರುವುದು.

ಧಾನ್ಯ ರವಾನೆ

ಜಿಲ್ಲೆಯೊಳಗೆ ಅಹಾರ ಧಾನ್ಯ ಸಾಗಿಸುವ ಬಗ್ಗೆ ಪರ್ಮಿಟಿಗೆ ತರಬೇಕಾಗಿದ್ದ ಕೋರ್ಟ್ ಫೀಯನ್ನು ರದ್ದುಮಾಡಲಾಗಿದೆ.

ಮೊಟ್ಟೆ (ತತ್ತಿ)

1947 ನೇ ಇಸವಿಯ ಮೊಟ್ಟೆ (ಸಾಗಿಸುವ) ನಿಯಂತ್ರಣ ಆಜ್ಞೆಯ ವೇಳೆಗೆ ಸಿವಿಲ್ ಸಪ್ಲೈಸ್ ಕಮಿಷನರ ಪರ್ಮಿಟು ಇಲ್ಲದೆ ರೈಲು, ರಾಜರಸ್ತೆ, ನದಿ, ಕಾಲುವೆ, ಸಮುದ್ರ ಇವುಗಳ ಮೂಲಕ ಮೊಟ್ಟೆ ರವ್ತನಮಾಡಕೂಡದು. ಆದರೆ ನಿಜವಾದ ಪ್ರಯಾಣಿಕರು ಸ್ವಂತ ಉಪಯೋಗಕ್ಕೋಸ್ಕರ 6 ಕ್ಕಿಂತ ಹೆಚ್ಚಾಗದಷ್ಟು ಮೊಟ್ಟೆ ತೆಗೆದುಕೊಂಡು ಹೋಗಲು ಪರ್ಮಿಟು ಬೇಡ. **ಬೆಲ್ಲ**- ಮೂರಾಟಕ್ಕಾಗಿಟ್ಟಿರುವ ಬೆಲ್ಲವನ್ನು ಸರಕಾರವು ಗೊತ್ತುಮಾಡಿದ ಮಾರಾಟಕ್ಕೆ ಬೆಲೆ ತೆರಲು ಸಿದ್ಧರಿರುವವರಿಗೆ ಮಾರಲು ನಿರಾಕರಿಸಿದರೆ ಅವಶ್ಯಕ ಸರಬರಾಯಿ ಆಜ್ಞೆ ಪ್ರಕಾರ ಅಪರಾಧವಾಗಿರುತ್ತದೆ

ಬಟ್ಟೆಗೆ ಗುರುತು ಹಾಕುವ ಫೀಸ್

ಇನ್ಸ್‌ಪೆಕ್ಟರನಿಗೆ ಗುರುತು ಹಾಕುವುದಕ್ಕೋಸ್ಕರ ಒಪ್ಪಿಸುವ ಬೆಲೆಯು ಕೈ ಮಗ್ಗದ ವಸ್ತ್ರಕ್ಕೆ ತಯಾರಿಸುವ ಬೆಲೆಯ ಮೇಲೆ ರೂಪಾಯಿಗೆ ಒಂದು ಪೈಯಂತೆ ಗುರುತು ಹಾಕುವ (ಸ್ಟಾಂಪಿಂಗ್) ಫೀಸು ತರಬೇಕು. ನೇಕಾರರ ಸಹಕಾರ ಸಂಘವು ತಯಾರಿಸುವ ವಸ್ತ್ರಕ್ಕೆ ಈ ಫೀಸ್ ಇಲ್ಲ, ಆದರೆ ಆ ನೇಕಾರರ ಸಹಕಾರ ಸಂಘವು ಅಧಿಕೃತ ಅಥವಾ ಅನಧಿಕೃತ ಮೇನೇಜರನು ಅಂಥ ವಸ್ತ್ರದ ಬಗ್ಗೆ ಸ್ಟಾಂಪಿಂಗ್ ಇನ್ಸ್‌ಪೆಕ್ಟರಾಗಿ ನೇಮಕ ಹೊಂದಿರಬೇಕು.

ತಮ್ಮ ಶಾಂತಿ ರಾಯಭಾರದ ಬಗ್ಗೆ
ಗಾಂಧೀಜಿಯವರ ವಿಚಾರಗಳೇನು?

(ಬಿಹಾರದ ಒಂದು ನಿರಾಶ್ರಿತರ ಶಿಬಿರದಲ್ಲಿ ಗಾಂಧೀಜಿಯವರು ಸೇರಿಸಿದ ಸಭೆಯ ಕಾರ್ಯ ಕಲಾಪಗಳು "ಸರ್ಚ್ ಲೈಟ್" ಎಂಬ ಪಾಟ್ನಾ ಪತ್ರಿಕೆಯ ಮಾರ್ಚ್ ೩೦ ರ ಸಂಚಿಕೆಯಲ್ಲಿ ಪ್ರಕಟವಾಗಿದೆ. ನಿರಾಶ್ರಿತರ ಅನೇಕ ಬೇಡಿಕೆಗಳಿಗೆ ಅವರು ಕೊಟ್ಟ ಉತ್ತರಗಳನ್ನು ನೋಡಿದರೆ ಉಭಯ ಪಂಗಡಗಳಲ್ಲಿ ಶಾಂತಿ ಸೌಹಾರ್ದಗಳನ್ನು ಸ್ಥಾಪಿಸುವ ಪ್ರಶ್ನೆಯನ್ನು ಮಹಾತ್ಮರು ಯಾವರೀತಿ ಬಿಡಿಸಿರುವರೆಂಬದು ವ್ಯಕ್ತವಾಗುವದು.

ಮಹಾತ್ಮರ ಈ ಉತ್ತರಗಳ ಕಡೆಗೆ, ಶಾಂತಿ-ಸೌಹಾರ್ದಗಳ ಪ್ರಸ್ತಾವನೆಯನ್ನು ಧ್ಯೇಯವಾಗಿಟ್ಟುಕೊಂಡವರು ಬಹಳ ಲಕ್ಷ ಕೊಡಬೇಕು

— ಸಂ.)

"ನವಖಾಲಿಯ ಪರಿಸ್ಥಿತಿಯನ್ನು ನನ್ನ ಭಾಷಣಗಳಲ್ಲಿ ನಾನು ಸಾಧ್ಯವಾದಷ್ಟು ಎತ್ತಿಲ್ಲ ನೌಖಾಲಿಯ ಬಗ್ಗೆ ಮಾತಾಡಲು ನನಗೆ ಅವಕಾಶ ದೊರೆತಾಗಲೆಲ್ಲ ನಾನು ಬಹು ಸಂಯಮನದಿಂದ ಮಾತಾಡಿರುವೆನು. ನೌಖಾಲಿಯ ಮುಸಲ್ಮಾನರ ಅತ್ಯಾಚಾರಗಳ ಬದಲು ಬಿಹಾರದ ಹಿಂದುಗಳ ಅತ್ಯಾಚಾರಗಳನ್ನು ಕುರಿತು ನಾನು ಮಾತಾಡಬೇಕೆಂದು ಇಲ್ಲಿಯ ಮುಸಲ್ಮಾನರು ಇಷ್ಟಪಡುತ್ತಿರುವರೊ? ನಾನು ಅದರಂತೆ ಮಾಡಿದರೆ ಹೇಡಿಯಾಗುವೆನು. ನನ್ನ ದೃಷ್ಟಿಯಲ್ಲಿ ನೌಖಾಲಿಯ ಮುಸಲ್ಮಾನರ ಹಾಗೂ ಬೀಹಾರದ ಹಿಂದುಗಳ ಅತ್ಯಾಚಾರಗಳು ಅಷ್ಟೇ ಭೀಕರವಾಗಿರುವವು, ಮತ್ತು ಅಷ್ಟೆ ಖಂಡನೀಯವಾಗಿರುವವು" ಎಂದು ಗಾಂಧೀಜಿಯವರು ಮುಸ್ಲಿಂ ನಿರಾಶ್ರಿತರ ಲಿಖಿತ ಮನವಿಗೆ ಉತ್ತರ ಕೊಡುತ್ತ ಹೇಳಿದರು.

ಗಾಂಧೀಜಿಯವರು ನೌಖಾಲಿಯ ಅತ್ಯಾಚಾರಗಳನ್ನು ವರ್ಣಿಸಿರುವದರಿಂದ ಇಲ್ಲಿಯ ಹಿಂದುಗಳ ದ್ವೇಷವು ಅಳಿಯುವದರ ಬದಲು ಇನ್ನೂ ಹೆಚ್ಚಾಗುತ್ತಿದೆಂದು ಆ ಮನವಿಯಲ್ಲಿ ಸೂಚಿಸಲಾಗಿತ್ತು. ತಮ್ಮನ್ನು ಶತ್ರುವೆಂದು ಕೆಲ ಸಮಯ ಮುಸಲ್ಮಾನರು ಭಾವಿಸುವದರಿಂದ ತಾವು ಅವರೊಡನೆ ಅತಿ ಸಂಯಮನದಿಂದ ನೂತಾಡಬೇಕಾಗಿದೆಂದು ಗಾಂಧೀಜಿಯವರು ಹೇಳಿದರು. 'ಪಂಜಾಬದಲ್ಲಿ ಎಲ್ಲಕ್ಕೂ ಮಿಗಿಲಾದ ಅತ್ಯಾಚಾರಗಳು ಸಂಭವಿಸಿರುತ್ತವೆ. ನಾನು ಮೊದ ಮೊದಲು ಪತ್ರಿಕೆಗಳಲ್ಲಿ ಪ್ರಕಟವಾದ ಸುದ್ದಿಗಳನ್ನು ನಂಬಲಿಲ್ಲ. ಆದರೆ ವಿಚಾರಣೆ ನಡೆಸಿದನಂತರ ಪಂಜಾಬದಲ್ಲಿ ವೃತ್ತಪತ್ರಿಕೆಗಳಲ್ಲಿ ಪ್ರಕಟವಾಗಿದ್ದಕ್ಕಿಂತಲೂ ಹೆಚ್ಚು ತೀಕ್ಷ್ಣವಾದ ಅತ್ಯಾಚಾರಗಳು ನಡೆದಿವೆವಿಂದುನನಗೆ ಮನದಟ್ಟಾಯಿತು. ಈ ಅತ್ಯಾಚಾರಗಳಿಗೆ ಒಂದು ನಿರ್ದಿಷ್ಟ ಸಮೂಜದ ಜನರು ಕಾರಣರಾಗಿರುವದರಿಂದ ಆ ವಿಷಯವಾಗಿ ನಾನು ಮಾತಾಡಬಾರದೋ? ಇದನ್ನೆಲ್ಲ ನೋಡುತ್ತ ಕುಳಿತರೆ ನನ್ನ ರಾಯಭಾರವೆಂದಿಗೂ ಯಶಸ್ವಿಯಾಗುವದಿಲ್ಲ." ಎಂದರು.

ಸದ್ಯದ ಬಿಹಾರ ಮಂತ್ರಿ ಮಂಡಳದಲ್ಲಿ ತನುಗೆ ವಿಶ್ವಾಸವಿಲ್ಲೆಂಬ ಇನ್ನೊಂದು ಮನವಿಗೆ ಗಾಂಧೀಜಿಯವರು ಉತ್ತರ ಕೊಡುತ್ತ "ನೌಖಾಲಿಯ ಹಿಂದುಗಳ ವಿಷಯ ನಿಮಗೆ ಹೇಳಿರುವೆನು. ಅವರಾದರೂ ಬಂಗಾಲದ ಮುಖ್ಯಮಂತ್ರಿ ಶ್ರೀ ಶಹೀದ ಸುಪ್ರವರ್ದಿಯವರಲ್ಲಿ ತಮಗೆ ವಿಶ್ವಾಸವಿಲ್ಲೆಂದು ನನಗೆ ತಿಳಿಸಿದ್ದರು. ಶ್ರೀ ಶಹೀದರು ಭಿನ್ನ ಮತಧಾರ ಸಂಸ್ಥೆಗಳಿಂದ ಆರಿಸಿಬಂದಿರುವದರಿಂದ ಅವರನ್ನು ಮಂತ್ರಿ ಮಂಡಳದಿಂದ ಹೊರಗೆ ಹಾಕಲು ಬರುವದಿಲ್ಲೆಂದು ನಾನು ಅಲ್ಲಿಯ ಹಿಂದುಗಳಿಗೆ ಉತ್ತರವಿತ್ತೆ. ಶಹೀದ ಸಾಹೇ

ಬರು ಅವರ ಪಂಗಡದ ವಿಶ್ವಾಸಕ್ಕೆ ಪಾತ್ರರಾಗಿರುವ ಪರಿಗೆ ಅವನನ್ನು ಯಾರೂ ಹೊರಗೆ ಹಾಕಲಾರರು. ಅದರಂತೆ ಹಿಂದುಗಳಿಂದ ಆರಿಸಲ್ಪಟ್ಟ ಇಲ್ಲಿಯ ಮಂತ್ರಿಗಳನ್ನು ನೀವು ಹೇಗೆ ಹೊರಗೆ ಹಾಕಬಲ್ಲಿರಿ? ಜಾತೀಯವಾದದಾರ ಸಂಘಗಳಿರುವದರಿಂದಲೆ ಇಂಥ ಮಧ್ಯೆವಿ ಪರಿಸ್ಥಿತಿಯು ಉಂಟಾಗಿದೆ. ಈ ಮತದಾರ ಪದ್ಧತಿಗಳನ್ನು ಮೊದಲಿನಿಂದಲೂ ನಾನು ಖಂಡಿಸುತ್ತಿರುವದು ನಿಮಗೆ ಗೊತ್ತಿರಲಿಕ್ಕೆ ಸಾಕು ಡಾ. ಖಾನ ಸಾಹೇಬರು ಇತ್ತೀಚೆಗೆ ಇದೇ ಹೇಳಿರುವರು. ತಾವು ಪಠಾಣರ ಪ್ರತಿನಿಧಿಗಳಾಗಿರುವದರಿಂದ ಅವರ ವಿಶ್ವಾಸಕ್ಕೆ ಪಾತ್ರರಾಗಿರುವವರೆಗೆ ರಾಜೀನಾಮೆಯ ಪ್ರಶ್ನೆಯೆ ಉದ್ಭವಿಸುವದಿಲ್ಲೆಂದು ಅವರು ನುಡಿದಿರುವರು. ಒಂದು ವೇಳೆ ಮಂತ್ರಿಮಂಡಳ ಹೋದರೂ ಆಗುವದಾದರೇನು? ಅದರ ಸ್ಥಳಕ್ಕೆ ಪುನಃ ನಿರಂಕುಶ ಸರಕಾರವೊಂದು ಬರುವದು. ಅದು ಒತ್ತಟ್ಟಿಗಿರಲಿ. ಈ ಮಂತ್ರಿಗಳೊಡನೆ ನನ್ನ ಸ್ನೇಹ ಸಂಬಂಧವಿರುವದರಿಂದ ಅವರಿಂದ ಒಳ್ಳೆ ಕಾರ್ಯವನ್ನು ನಾನು ಮಾಡಿಸಬಲ್ಲೆ'' ಎಂದರು.

ಹೊಸ ಠಾಣೆಗಳಲ್ಲಿ ನೂರಕ್ಕೆ ಶಂಭರಷ್ಟು ಅಧಿಕಾರಿಗಳು ಹಾಗೂ ಪೋಲೀಸ ಸಿಪಾಯರು ಮುಸಲ್ಮಾನರಿರಬೇಕೆಂಬ ಬೇಡಿಕೆಗೆ ಗಾಂಧೀಜಿಯವರು ಉತ್ತರ ಕೊಡುತ್ತ ''ನೌಖಾಲಿಯ ಹಿಂದುಗಳು ಇದೇ ತರದ ಬೇಡಿಕೆಯನ್ನು ನನ್ನ ಮುಂದಿಟ್ಟಿದ್ದರು. ಇದಕ್ಕೆ ನಾನು ಸಮ್ಮತಿಸಲಿಲ್ಲ. ಇಂಥ ಬೇಡಿಕೆಯು ನನ್ನ ಶಾಂತಿ ರಾಯಭಾರಕ್ಕೆ ಅಡ್ಡಬರುವದು. ಈ ನನ್ನ ಬೇಡಿಕೆಯನ್ನು ಮನ್ನಿಸಿದರೆ ಬಿಹಾರವನ್ನು ತುಂಡು ತುಂಡಾಗಿ ವಿಭಾಗಿಸಿ ಅನೇಕ ಚಿಕ್ಕ ಪಾಕೀಸ್ತಾನಗಳನ್ನು ರಚಿಸಲು ಮುನ್ನಡೆ ಕೊಟ್ಟಂತಾಗುವದು. ನೀವು ಎಲ್ಲಿಯೇ ಇದ್ದರೂ ನಿಮ್ಮ ನೆರೆಹೊರೆಯವರೊಡನೆ ಪರಸ್ಪರ ಸೌಹಾರ್ದಹಾಗೂ ಮೈತ್ರಿಯನ್ನು ಬೆಳಿಸಿಕೊಂಡಿರಬೇಕಾಗುತ್ತದೆ. ಪಾಕೀಸ್ತಾನ ಪ್ರದೇಶಗಳಲ್ಲಾದರೂ ಬಹು ಸಂಖ್ಯಾಕರು ಅಲ್ಪ ಸಂಖ್ಯಾಕರ ವಿಶ್ವಾಸವನ್ನು ಗಳಿಸಬೇಕೆಂದು ಕಾಯದೆ ಅಜಮರು ಹಿಂದೊಮ್ಮೆ ಹೇಳಿರುವರು. ಅದರಂತೆ ನಿಮ್ಮ ವಿಶ್ವಾಸವನ್ನು ಗಳಿಸಲು ಇಲ್ಲಿಯ ಹಿಂದುಗಳಿಗೆ ನಾನು ಬಿನ್ನವಿಸುತ್ತಿದ್ದೇನೆ. ಹಿಂದೂಸ್ತಾನ-ಪಾಕಿಸ್ತಾನಗಳಲ್ಲಿ ಯಾವದಾದರೊಂದು ರಚಿಸಲ್ಪಟ್ಟರೂ ಅದಕ್ಕೆ ನ್ಯಾಯ ಮತ್ತು ಸಮತೆಯು ತಳಹದಿಯಾಗಿರಬೇಕು.'' ಎಂದರು

ಕೆಲ ಪ್ರತ್ಯೇಕ ಸ್ಥಳಗಳಲ್ಲಿ ಪುನಃ ನೆಲೆಸಲು ಮುಸಲ್ಮಾನರಿಗೆ ಅನುಮತಿ ಕೊಡಬೇಕೆಂಬ ಇನ್ನೊಂದು ಬೇಡಿಕೆಯ ಕಡೆಗೆ ಗಾಂಧೀಜಿಯವರು ಹೊರಳಿ ''ನಿರ್ದಿಷ್ಟ ಪ್ರತ್ಯೇಕ ಸ್ಥಳಗಳಲ್ಲಿ ನಿಮ್ಮನ್ನು ಇರಿಸಲು ಸರಕಾರನನ್ನು ನೀವು ಒತ್ತಾಯಪಡಿಸಲಾರಿರಿ. ನೌಖಾಲಿಯ ಹಿಂದುಗಳ ವಿಷಯದಲ್ಲಿ ನಾನು ಈ ರೀತಿ ಶಹೀದ ಸಾಹೇಬರಿಗೆ ಹೇಳಬಲ್ಲೆನೊ? ಇಂಥ ಮಾರ್ಗವನ್ನನುಸರಿಸಲು ನೌಖಾಲಿಯ ಹಿಂದುಗಳನ್ನು ನಾನೆಂದಿಗೂ ಪ್ರೋತ್ಸಾಹಿಸಿಲ್ಲ. ತಮಗೆ ಹೆದರಿಕೆಯಾದರೆ ಪರಿಹಾರ ದ್ರವ್ಯ ಸಿಕ್ಕಬಳಿಕ ಬೇಕಾದ ಸ್ಥಳಕ್ಕೆ ಹೊರಟು ಹೋಗಲು ಅಲ್ಲಿಯ ಹಿಂದುಗಳಿಗೆ ನಾನು ತಿಳಿಸಿರುವೆನು ಅವರಿಗೆ ಆಸ್ತಿ ಇರುವಾಗ ಸರಕಾರವು ಅವರಿಗೆ ಪರಿಹಾರ ಧನವನ್ನೇಕೆ ಕೊಡುವುದಿಲ್ಲ! ಅದರಂತೆ ನಿಮಗೆ ಸಾಕಷ್ಟು ಪರಿಹಾರ ದೊರೆತರೆ ನೀವಾದರೂ ಬೇಕಾದಲ್ಲಿಗೆ ತೆರಳಬಹುದು. ಅದರೆ ನನ್ನ ಅಪೇಕ್ಷೆಯು ಬೇರೆ ಇದೆ. ಇಂಥ ಸ್ಥಿತಿಯಲ್ಲಿ ನಿಮ್ಮ ಮನೆಮಾಯಿಗಳನ್ನು ಬಿಟ್ಟು ಹೋಗುವದು ಹೇಡಿತನ ಪರಿಹಾರವನ್ನು ಕೊಡಲು ಹಿಂಜರಿಯುವದು ಸರಕಾರಕ್ಕೆ ಭೂಷಣವಲ್ಲ. ಈ ಸರಕಾರವಾದರೂ ಹಾಗೆ ಮಾಡುವದೆಂದು ನನಗನಿಸುವದಿಲ್ಲ. ಹಿಂದುಗಳ ಮತದಿಂದ ಆರಿಸಿಬಂದಿರುವ ಮಂತ್ರಿಗಳೇ ಹಿಂದುಗಳು ತಮ್ಮ ಅಂಕೆ ಮೀರಿ ನಡೆದುಕೊಂಡಿರುವರೆಂದು ಹೇಳಹತ್ತಿದರೆ ಅವರು ಅಧಿಕಾರದಲ್ಲಿರುವವರೆಗಾದರೂ ಹಿಂದುಗಳು ಕೋವಾಗ್ನಿಯಲ್ಲಿ ಹಾರಿ ಕೊಳ್ಳುವದು ಒಳ್ಳಿತು. ಸರಕಾರವು ಅನ್ಯಾಯವನ್ನು ಕೊನೆಯವರೆಗೂ ಎಸಗಲಾರದು. ಅದು ನ್ಯಾಯಪರಿಪಾಲನೆ ಮಾಡಲೇಬೇಕಾಗುವದು'' ಎಂದರು.

The Rayalaseema Bank Limited, Bellary.
ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:— ಬಳ್ಳಾರಿ ಜಿಲ್ಲಾ:- ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ, ಬಳ್ಳಾರಿ, ಹಡಗಲಿ, ಕೂಡ್ಲಿಗಿ. ಬಿದವಾನಿ **ಅನಂತಪುರ:**- ಅನಂತಪುರ, ಬೆಳಗುಪ್ಪ, ಧರ್ಮಾವರಂ, ಕದಿರಿ, ಪಾಣಿಡಿ, ತಿಮ್ಮನಚೆರ್ಲ, ಉರವಕೊಂಡ, ಹಿಂದೂಪುರ, ಗುತ್ತಿ. **ಕರ್ನೂಲು:**- ಕರ್ನೂಲು ಪತ್ತಿಕೊಂಡ. **ಕಡಪ:**- ರಾಜಂಪೇಟೆ, ಕಡಪ. **ಚಿತ್ತೂರು:**- ಚಿತ್ತೂರು, ಮದನಪಲ್ಲಿ, ತಿರುಪತಿ, ನಗರಿ, ವಾಯಲ್ಪಾಡು

ಫಿಕ್ಸೆಡ್ ಡಿಪಾಜಿಟ್‌ನ ಬಡ್ಡೀದರ:— 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2ವರ್ಷಗಳಿಗೆ 3½%.
ಕರೆಂಟು ಅಕೌಂಟು: 1%, **ಸೇವಿಂಗ್ಸ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.
ಮಾಸಿಕ ಪ್ರಾವಿಡೆಂಟ್ ಫಂಡ ಡಿಪಾಜಿಟ್:- 3%. **ಬಿ ವಿ. ಶೇಷಗಿರಿರಾವ್, ಕಾರ್ಯದರ್ಶಿ.**

ಬಿಹಾರ ಗಲಭೆಯು ವಿಚಾರಣೆಮಾಡಲು ನ್ಯಾಯವೂ ರುಜೇನರು ಸೇವಕ ಹೊಂದಿರುವಬಗ್ಗೆ ಮುಸಲ್ಮಾನರು ಎತ್ತಿದ ಆಕ್ಷೇಪದ ಕಡೆಗೆ ಗಾಂಧೀಜಿಯವರು ತಿರುಗಿ ಇಂತೆಂದರು. ಶ್ರೀ ರುಜೇನರಲ್ಲಿ ಮುಸಲ್ಮಾನರಿಗೆ ವಿಶ್ವಾಸವಿಲ್ಲೆಂದು ಈ ಮನವಿಯಲ್ಲಿ ಹೇಳಲಾಗಿದೆ. ಆದರೆ ನಿಮಗೆ ಯಾರು ಬೇಕೆಂಬದನ್ನು ನೀವು ಹೇಳಿಲ್ಲ ಶ್ರೀ ರುಜೇಸರು ಮುಂಸ್ಲಿಮೇತರರಾಗಿರುವದರಿಂದ ಅವರಲ್ಲಿ ನಾವು ವಿಶ್ವಾಸವಿಡಬೇಕು. ಒಬ್ಬನೇ ಸದಸ್ಯನಿರುವ ಈ ವಿಚಾರಣಾ ಸಮಿತಿಯಿಂದ ನಿಮಗೆ ಏನೂ ಗಂಡಾಂತರವಿಲ್ಲ. ಬೇಕಾದರೆ ಮುಸಲ್ಮಾನರು ಹೆಸರುಗಳ ಯಾದಿಯನ್ನು ಒಪ್ಪಿಸಬಹುದು. ನಂತರ ಅದನ್ನು ನಾನು ಸರಕಾರಕ್ಕೆ ತಿಳಿಸುವೆನು ಎಂದರು.

ಅಪಹೃತ ಸ್ತ್ರೀಯರನ್ನು ಹಿಂದಕೊಪ್ಪಿಸಬೇಕೆಂಬ ಬೇಡಿಕೆಯ ಬಗ್ಗೆ ಗಾಂಧೀಜಿಯವರು ಬಿಹಾರಕ್ಕೆ ಬಂದಾಗಿನಿಂದ ನಾನು, ಅಪಹೃತ ಸ್ತ್ರೀಯರ ಹೆಸರುಗಳನ್ನು ಅವರು ತಮಗೆ ಹೇಗೆ ಸಂಬಂಧೀಕರಾಗಬೇಕೆಂಬದನ್ನು ನನಗೆ ತಿಳಿಸಲು, ನನ್ನ ಬಳಿ ಬಂದ ಮುಸಲ್ಮಾನರಿಗೆಲ್ಲ ಹೇಳುತ್ತಿರುವೆನು. ಈ ವಿವರಗಳು ನನ್ನ ಕೈಸೇರಿದರೆ ಅವರು ಜೀವಂತ ಇರುವರೊ ಇಲ್ಲವೊ ಎಂಬದನ್ನು ತಿಳಿದುಕೊಳ್ಳಲು ನನಗೆ ಸುಲಭವಾಗುವದು. ಆದರೆ ಇದುವರೆಗೂ ಒಬ್ಬನೂ ಒಂದು ಹೆಸರನ್ನೂ ನನಗೆ ಒಪ್ಪಿಸಿಲ್ಲ. ಈ ಅಭಾಗ್ಯ ಬಾಲಕಿಯರ ಹೆಸರುಗಳನ್ನೊಪ್ಪಿಸಲು ನಿಮ್ಮನ್ನು ನಾನು ಈಗ ಪುನಃ ಕೇಳಿಕೊಳ್ಳುವೆ ಎಂದರು

ನಿರಾಶ್ರಿತರ ಶಿಬಿರದಲ್ಲಿ ನಡೆದ ಈ ಸಭೆಯಲ್ಲಿ ಮಹಂತ ಭಾಗವತದಾಸ ಎಂ. ಎಲ್. ಎ. ಅವರು ಹಾಜರಿದ್ದರು. ಹಿಂದುಗಳನ್ನು ಗಲಭೆಗೆ ಪ್ರಚೋದಿಸಿದರೆಂದು ಮುಸಲ್ಮಾನರು ಇವರ ಮೇಲೆ ಆರೋಪ ಹೊರಿಸಿದ್ದರು ಭಾಗವತದಾಸರು ಎದ್ದು ನಿಂತು ತಾವು ನಿರ್ದೋಷಿಗಳೆಂದು ಗಾಂಧೀಜಿಯವರಿಗೆ ತಿಳಿಸಿದರಲ್ಲದೆ ತಮ್ಮ ಮೇಲಿನ ಆರೋಪಗಳ ಬಗ್ಗೆ ಒಂದೇ ನಿರ್ದಿಷ್ಟ ಉದಾಹರಣೆಯನ್ನು ಕೊಡಲು ಮುಸಲ್ಮಾನರಿಗೆ ಕೇಳಿಕೊಂಡರು. ಗಾಂಧೀಜಿಯವರಿಗೆ ಅತ್ಯಂತ ಸಮಾಧಾನವಾಗುವಂತೆ ಇವರು "ಗಾಂಧೀಜಿಯವರೇ ವಿಚಾರಣೆಯನ್ನು ಎದುರಿಸಲು ಸಿದ್ಧನಿರುವೆನು. ಬೇಕಾದರೆ ಮುಸಲ್ಮಾನರೇ ಒಂದು ವಿಚಾರಣಾ ಸಮಿತಿಯನ್ನು ನೇಮಿಸಿ ಗಲಭೆ ಕಾಲದ ನನ್ನ ವರ್ತನೆಯನ್ನು ನಿರ್ಣಯಿಸಲಿ. ನನ್ನ ಮೇಲೆ ಆರೋಪ ಹೊರಿಸುವವರಲ್ಲಿ ನನಗೆ ಪೂರ್ಣ ವಿಶ್ವಾಸವಿದೆ. ಅವರೇ ನನ್ನ ವಿಚಾರಣೆ ಮಾಡಲಿ" ಎಂದರು.

Guarranteed Pure Pyra Gingelly oil

Best for Pickles, Cooking & Cooling.

DISTRIBUTORS:—

1. M/S. V. M. GIRI & SONS,
(Pro:- M. S Acharya) Car Street, Bellary
2. M/S. . BUSANJEE RAO, M VENKOJI RAO
General Merchants, Car Street Bellary.

ಶುದ್ಧ ! ಗ್ಯಾರಂಟಿಯಾದ್ದು !! ಸತ್ಪಕಾರಿ !!!

—ಪೈರ ಎಳ್ಳೆಣ್ಣೆ—

ಕಣ್ಣಿಗೆ ಬಹಳ ತಂಪಾದ್ದು. ಅಡಿಗೆಯ ಎಲ್ಲಾ ಪದಾರ್ಥಗಳಿಗೆ ಬಳಸಲು ಶ್ರೇಷ್ಠವಾದ ಎಣ್ಣೆಯಿದು.
ಉಪ್ಪಿನಕಾಯಿಗೆ ಈ ಎಣ್ಣೆಯನ್ನು ಪಯೋಗಿಸುವದರಿಂದ ಬಹಳಕಾಲ ಕೆಡದಂತಿಡಬಹುದು.

ಹಂಚಲಧಿಕಾರ ಉಳ್ಳವರು. | 1) ವಿ ಎಂ. ಗಿರಿ ಅಂಡ್ ಸನ್ಸ್-ತೇರು ಬೀದಿ, ಬಳ್ಳಾರಿ. (ಎಂ. ಎಸ್. ಆಚಾರ್ಯ)
2) ಎಂ. ಹುಸೇಂಜಿರಾವ್, ಎಂ ವೆಂಕೋಬರಾವ್. ತೇರುಬೀದಿ, ಬಳ್ಳಾರಿ.

ಸು ಭಾ ಸ್
ರಾ ಷ್ಟ್ರ ಗೀ ತೆ.

ಸಿದ್ಧವಾಯಿತು— ಕ್ರಯ ೦—೮—೦

ಸುಂದರ ಮುದ್ರಣ — ಇಲ್ಲಿಯವರೆಗೆ ಪ್ರಭಾತ ಫೇರಿ ರಾಷ್ಟ್ರೀಯ ಸಮಾವೇಶಗಳಲ್ಲಿ ಹಾಡಲ್ಪಟ್ಟ ಎಲ್ಲಾ ಮುಖ್ಯ ದೇಶಭಕ್ತ ಕವಿಗಳ ಕನ್ನಡ ಮತ್ತು ಹಿಂದೀ ಭಾಷೆಯಲ್ಲಿನ ರಾಷ್ಟ್ರಗೀತೆಗಳ ಸಮಗ್ರ ಸಂಗ್ರಹ. ಕರ್ನಾಟಕದಲ್ಲಿ ರಾಷ್ಟ್ರ ಗೀತೆಗಳ ಇಷ್ಟುದೊಡ್ಡ ಸಂಗ್ರಹವು ಇದುವರೆಗೆ ಪ್ರಕಟವಾಗಿಲ್ಲ. ಸ್ವಲ್ಪೇ ಪ್ರತಿಗಳು ಪ್ರಕಟವಾಗಿವೆ. ಹೆಚ್ಚು ಕೊಳ್ಳುವವರಿಗೆ ಕಮಿಷನ್ ಕೊಡಲಾಗುತ್ತದೆ.

'ನವಭಾರತ' ಕಾರ್ಯಾಲಯ ಬಳ್ಳಾರಿ.

—ರಾಷ್ಟ್ರೀಯ ಪುಸ್ತಕಗಳು.—
—ಕಾಂಗ್ರೆಸ್ ಸ್ವರೂಪ ದರ್ಶನ—

ರಾಷ್ಟ್ರೀಯ ಶಿಕ್ಷಣ	0—8—0
ಅಸ್ಪೃಶ್ಯತಾ ನಿವಾರಣೆ	0—12—0
ಪ್ರಾಂತಭಾಷೆ-ರಾಷ್ಟ್ರಭಾಷೆ	0—6—0
ಖಾದಿ	0—8—0
ಕಾಂಗ್ರೆಸ್ ಮತ್ತು ಸ್ವಯಂಸೇವಕದಳ	0-10-0
ಸತ್ಯಾಗ್ರಹ (ಇತಿಹಾಸ-ತಂತ್ರ)	0—8—0

ವಿ. ಪಿ. ಖರ್ಚುಬೇರೆ. ಇನ್ನು ಅನೇಕ ಪುಸ್ತಕಗಳು ದೊರೆಯುತ್ತವೆ—

ನವಭಾರತ ಕಾರ್ಯಾಲಯ, ಬಳ್ಳಾರಿ.

NAVA BHARAT. BELLARY. Reg. No. M. 4746

ನವಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು.	Subscription Rates
ವರ್ಷಕ್ಕೆ 5-0-0	One Year 5—0—0
೬ ತಿಂಗಳಿಗೆ 3-0-0	Six months 3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

SRI..... .. ..

....

....

Printed at Krishna Press Bellary QH No. B 17 FOR (Q.H. No. B-5.)
Edited & Published by T. B. KESHAVARAO

205

ಜೈಹಿಂದ್

Reg. No. M. 4746

ನವಚೇತನ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಕ ವ ಟ
ಸಂಚಿಕೆ ೧೭

ಬಳ್ಳಾರಿ ಏಪ್ರೆಲ್ ೨೮ ಸೋಮವಾರ ೧೯೪೭

ಸಂಪಾದಕ ಮತ್ತು ಪ್ರಕಾಶಕ
ಟಿ. ಬಿ. ಕೇಶವರಾವ್.

Congress Socialist Leader comrade

Jai Prakash Narayan will be in Bellary on 29-4-'47

Public Meeting in

Sambamurthy Maidan at 6-30P.M

All are cordially invited.

Students, youths and all those who are interested in organising the leftist front in the congress are earnestly requestedto contribute their mite to the purse to be presented to him in the public meeting.

Reception Committee.

ಕಾಂಗ್ರೆಸ್ ಸಮತಾವಾದಿ ನಾಯಕರಾದ

ಶ್ರೀ ಜಯಪ್ರಕಾಶ ನಾರಾಯಣ

ಇವರು ೨೯-೪-೪೭ ಮಂಗಳವಾರ ಸಾಯಂಕಾಲ ಬರಲಿರುವರು

ಅಂದಿನ ಸಾಯಂಕಾಲ ೬-೩೦ ಘಂಟೆಗೆ ಸಾಂಬಮೂರ್ತಿ ಮೈದಾನದಲ್ಲಿ ಬಹಿರಂಗಸಭೆ. ಸಮತಾವಾದಿಪಕ್ಷದ ಸಂಘಟನೆಯಲ್ಲಿ ಇಚ್ಛುಕರಾದ ತರುಣ ಕಾರ್ಯಕರ್ತರ ಸಭೆಯಲ್ಲಿ ಶ್ರೀ ಜಯಪ್ರಕಾಶರು ತಮ್ಮ ಸಲಹೆಗಳನ್ನು ಕೊಡುವರು.

ವಿದ್ಯಾರ್ಥಿಗಳು, ಯುವಕರು ಮತ್ತು ಕಾಂಗ್ರೆಸ್ ಎಡಪಕ್ಷದ ಸಂಘಟನೆಯಲ್ಲಿ ಆಸಕ್ತಿಯುಳ್ಳವರೆಲ್ಲಾ ಬಹಿರಂಗ ಸಭೆಯಲ್ಲಿ ಅರ್ಪಿಸಲ್ಪಡುವ ನಿಧಿಯ ಸಮರ್ಪಣೆಗೆ ತಮ್ಮ ಶಕ್ತ್ಯಾನುಸಾರ ಸಹಾಯ ಮಾಡಲು ಕೋರುತ್ತೇವೆ.

ಸ್ವಾಗತಸಮಿತಿ.

Contribute Your Mite to

JAYAPRAKASH PURSE.

204

ಹರಿಜನರಕ್ಷಣೆ,

ಹರಿಜನೋದ್ಧಾರ ಮಂತ್ರಿಮೂಸ್ಕ

ಶ್ರೀ ವಿ. ಕೂರ್ಮಯ್ಯ ಇವರ ಭಾಷಣ

[ಕಳೆದ ಇಸವಿಯು ಮದ್ರಾಸ್ ಸರ್ಕಾರದ ನಾಗರಿಕ ನ್ಯೂನತಾ ಪರಿಹಾರಕ ಮಸೂದೆಯ (ತಿದ್ದುಪಡಿ) ವಿಷಯ ನ್ಯಾಯವಿಧಾಯಕ ಸಭೆಯಿಂದ ಮುಂಜೂರು ಮಾಡಲ್ಪಟ್ಟಂತೆ ಮದ್ರಾಸ್ ನ್ಯಾಯವಿಧಾಯಕ ಸಭೆಯಲ್ಲಿಯೂ ತಿರುಗಿ ಕಾರ್ಯಾಲೋಚಿಸಲ್ಪಟ್ಟು ಕಾ—ತ—ಳಕ್ಕೆ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು. ಈ ಮಸೂದೆಯು ಹರಿಜನರಿಗೆ ಇತರ ಹಿಂದುಗಳಿಗಿರುವ ಪಕ್ಕುಬಾಧ್ಯತೆಗಳನ್ನು ಮೊಗಸಿಕೊಟ್ಟು ಭಾರತಕ್ಕೇ ಒಂದು ಮಾದರ್ಶ ದರ್ಶಕವಾಗಿದೆ.]

ಈ ಮಸೂದೆ ಪ್ರಕಾರ ಹಿಂದೂ ಮತೀಯರಿಗೆ ಪ್ರವೇಶವುಳ್ಳ ವಿದ್ಯಾರ್ಥಿಭವನ, ಹೊಟೆಲ್, ಅಂಗಡಿ, ದೋಬಿಖಾನೆ, ಸ್ಮಶಾನ, ಜಲಚ್ಛತ್ರ ಮಂದಿರ, ಆಟದ ಬಯಲು, ನಾಟಕಶಾಲೆ ಇತ್ಯಾದಿ ಸಾರ್ವಜನಿಕ ಸ್ಥಳಗಳಿಗೆ ಹರಿಜನರನ್ನು ಪ್ರವೇಶಿಸದಂತೆ ತಡೆದರೆ ಆದು ಅಪರಾಧವಾಗುವುದು, ಅಂಥಹ ತಪ್ಪುಮಾಡಿದವರಿಗೆ ಮೊದಲಿನ ತಪ್ಪಿಗೆ ರೂ. ೫೦ ದಂಡನೆಯೂ, ಎರಡನೆಸಲದ ಹಾಗೂ ಆನಂತರದ ಅಪರಾಧಗಳಿಗೆ ರೂ ೧೦೦೦ ದ ದಂಡನೆಯೊಡನೆ ೬ ತಿಂಗಳ ತನಕ ಶಿಕ್ಷೆಯೂ ವಿಧಿಸಲ್ಪಡುವುದು.

ವೇದಗಳಲ್ಲಾಗಲಿ ಇತರ ಪುರಾತನ ಹಿಂದೂ ಧರ್ಮಶಾಸ್ತ್ರಗಳಲ್ಲಾಗಲೀ ಈಗಿನಂತೆ ದೇಶದ ಜನ ಸಂಖ್ಯೆಯಲ್ಲಿ ಐದರಲ್ಲಿ ಒಂದು ಪಾಲಷ್ಟು ಜನರಿಗೆ ನಾಗರಿಕ ಹಕ್ಕುಬಾಧ್ಯತೆಗಳಿಲ್ಲವೆಂದು ಮಾಡುವ ಜಾತಿ ಪದ್ಧತಿಯ ವಿಷಯವಾಗಿ ಏನೂ ಸೂಚಿಸಲ್ಪಡಲಿಲ್ಲ. ಆರ್ಯರು ಬಂದು ಇವರನ್ನಾಳಲು ಆರಂಭಿಸುವುದಕ್ಕೆ ಮೊದಲು ಇವರೇ ಈ ದೇಶವನ್ನೆಲ್ಲಾ ಆಳುತ್ತಿದ್ದರು. ನಾಗರೀಕ ಹಕ್ಕು ಬಾಧ್ಯತೆಗಳಲ್ಲಿ ಈ ಜಾತಿಯವರನ್ನು ಇತರ ಜಾತಿಯವರಿಗೆ ಸಮಾನತೆಯಲ್ಲಿ ಇರುವಂತೆ ಮಾಡುವುದೇ ಎಲ್ಲಾ ಸುಧಾರಕರ ಮತ್ತು ರಾಜನೀತಿಜ್ಞರ ಗುರಿಯಾಗಿತ್ತು. ವೇದಗಳು ಧರ್ಮವೇ ಶ್ರೇಷ್ಠವೆಂದು ಸಾರಿತು. ಅಸ್ಪೃಶ್ಯರೆಂದು ಹೇಳಿಸಿಕೊಳ್ಳುವವರನ್ನು ಅವರ ಸಮಾನರಾದ ಇತರರು ಪ್ರಾಣಿಗಳಿಗಿಂತಲೂ ನೀಚವಾಗಿ ನೋಡುತ್ತಿದ್ದರು. ಹಿಂದೆ ಇಂತಹ ಅಸಮಾನತೆಯು ಪ್ರಚಾರದಲ್ಲಿದ್ದಾಗಲೇ ಮಹಾತ್ಮ ನಾದ ಬುದ್ಧನು ಅವತಾರವೆತ್ತಿ ಅಸ್ಪೃಶ್ಯತೆಯ ನಿರ್ಮೂಲನಕ್ಕಾಗಿ ಯತ್ನಿಸಿದ್ದಾನೆ. ಆಮೇಲೆ ರಾಮಾನುಜಾಚಾರ್ಯರು ಹರಿಜನರ ದೇವಾಲಯ ಪ್ರವೇಶ ಚಳವಳಿಯನ್ನು ಪ್ರಾರಂಭಿಸಿದರು. ಅದನ್ನೇ ಈಗ ಮಹಾತ್ಮ ಗಾಂಧಿಯವರೂ ಕೈಗೊಂಡಿದ್ದಾರೆ. **ಇವರೆಲ್ಲಾ ಭಗವದ್ಗೀತೆಯ ಆದಾರದಿಂದಲೇ ಈ ಕಾರ್ಯವನ್ನು ಸಾಗಿಸಿದ್ದಾರೆ.** ಭಗವದ್ಗೀತೆಯಲ್ಲಿ ನಾಲ್ಕು ವರ್ಣಗಳನ್ನು ಗುಣ ಕರ್ಮಗಳಿಗನುಸಾರವಾಗಿ ರಚಿಸಲ್ಪಟ್ಟಿದೆಯೆಂದು ಸ್ಪಷ್ಟವಾಗಿ ಹೇಳಲ್ಪಟ್ಟಿದೆ ಆದರೆ ಈಗಿರುವ ಜಾತಿಗಳು ಗುಣ ಅಥವಾ ಕರ್ಮಗಳನ್ನು ಆಧಾರವಾಗಿಟ್ಟುಕೊಂಡಿಲ್ಲ. ಇಂತಹ ಜಾತಿಗೆ ಗೀತೆಯಲ್ಲಿ ಅವಕಾಶವೇ ಇಲ್ಲ.

ಅಸ್ಪೃಶ್ಯರ ನ್ಯೂನತೆಗಳನ್ನು ಪರಿಹರಿಸುವುದೇ ಜಾತಿ ಪದ್ಧತಿಯು ನಿರ್ಮೂಲನಗೆ ಪೊಟ್ಟವೆರಡಲನೆಯ ಕೆಲಸ. ಜಾತಿ ಪದ್ಧತಿಯು ಅತ್ಯಂತ ಹಾನಿಕರವೆಂದು ಎಲ್ಲರಿಗೂ ತಿಳಿದುಬರುತ್ತಿದೆ. ಗಾಂಧಿಯವರಿಂದ ಆರಂಭಿಸಲ್ಪಟ್ಟು ಕಾಂಗ್ರೆಸ್ ಹಾಗೂ ಇತರ ಪಕ್ಷದವರಿಂದ ಬೆಂಬಲ ಪಡೆದ ಚಳವಳಿಯ ಪರಿಣಾಮವಾಗಿ, ಇಂದು ಹರಿಜನನಾದ ನನಗೆ ನನ್ನ ಜಾತಿಯವರ ಸಂಪೂರ್ಣ ಹಕ್ಕುಬಾಧ್ಯತೆಗಳನ್ನೂ ಪಡೆಯುವುದಕ್ಕಾಗಿ ಈ ಮಸೂದೆಯನ್ನು ತರಲು ಸಾಧ್ಯವಾಯಿತು. ನನ್ನ ಜಾತಿಯವರೇ ಇಂದು ಈ ನ್ಯಾಯವಿಧಾಯಕ ಸಭೆಯ ಅಧ್ಯಕ್ಷರಾಗಿ ಕಾರ್ಯಕಲಾಪಗಳನ್ನು ನಿರ್ವಹಿಸುತ್ತಿರುವರೆಂದು ಹೇಳಲು ಹೆಮ್ಮೆಪಡುತ್ತೇನೆ.

ಈ ಮಸೂದೆಯಿಂದ ಹರಿಜನರಿಗೆ ಎಲ್ಲಾ ಸಾರ್ವಜನಿಕ ಸ್ಥಳಗಳಿಗೂ ಇತರ ಹಿಂದುಗಳಂತೆ ಇಷ್ಟಬಂದ ಕಾರ ಹೊಗಲು ಹರಿಜನರಿಗಾಗಿ ಹುಟ್ಟಿದುದೊಂದು ಅನ್ಯಾಯವಾಗಲಿಕ್ಕಿಲ್ಲ ಹಿಂದುಗಳೆಲ್ಲಾ ಒಂದಾಗಿ ತಮ್ಮ

ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕಾದರೆ ಹರಿಜನರ ಉದ್ಧಾರವಾಗದೆ ಬೇರೆ ಉಪಾಯವಿಲ್ಲ. ಜನತಾ ಸರಕಾರವು ಬಂದಮೇಲೆ ಹರಿಜನರ ಸ್ಥಿತಿಗತಿಗಳ ಸುಧಾರಣೆಗಾಗಿ ತುಂಬ ಕೆಲಸ ನಡೆದಿದೆ. ಹೀಗೆಯೇ ಸರಕಾರವು ಅನೇಕ ಕಾರ್ಯಕಲಾಪಗಳನ್ನು ಹರಿಜನರಿಗಾಗಿ ಕೈಕೊಳ್ಳಲಿದೆ. ಹರಿಜನರ ಏಳಿಗೆಗಾಗಿ ಎಲ್ಲಾ ವಿಧದಿಂದಲೂ ಸರಕಾರವು ಪ್ರಯತ್ನಿಸುವುದಲ್ಲದೆ ನಿರ್ದಾಕ್ಷಿಣ್ಯವಾಗಿ ಈ ಮುಸೂದೆಯು ಕಾನೂನಾಗಿ ಜಾರಿಗೆ ತರ್ಪಡುವುದು.

ದತ್ತ ಮಂಡಲಕ್ಕೆ ವಿದ್ಯುಚ್ಛಕ್ತಿ ಯೋಜನೆ.

ಬಳ್ಳಾರಿ, ಅನಂತಪುರ, ಕಡಪ, ಕರ್ನೂಲು ಜಿಲ್ಲೆಗಳಿಗೆ ವಿದ್ಯುಚ್ಛಕ್ತಿ ಪೂರೈಸುವ ಬಗ್ಗೆ ರೂ. ೫೦ ಲಕ್ಷದ ಯೋಜನೆಯು ಮಂಜೂರಾಗಿದೆ. ಜೋಗ್ ಜಲಪ್ರಪಾತದ ಹೈಡ್ರೊ-ಇಲೆಕ್ಟ್ರಿಕ್ ಯೋಜನೆಗಳು ಸಾರವಾಗಿ ತಯಾರಿಸಲ್ಪಡುವ ವಿದ್ಯುತ್ತನ್ನು ಮೈಸೂರು ಸರಕಾರದಿಂದ ತಕ್ಕೊಂಡು ತುಂಗಭದ್ರ ಅಣೆಕಟ್ಟು, ಹೊಸಪೇಟೆ, ಬಳ್ಳಾರಿ, ಗುಂತಕಲ್, ಈ ರೀತಿ ನಿರ್ಮಿಸಿದ ಪಲಕರಣೆ ಇತ್ಯಾದಿಗಳನ್ನು ಕೊನೆಗೆ ತುಂಗಭದ್ರ ಹೈಡ್ರೊ-ಇಲೆಕ್ಟ್ರಿಕ್ ಯೋಜನೆಗೆ ವರ್ಗಾಯಿಸಲಾಗುತ್ತದೆ. ಈ ಯೋಜನೆಗೆ ಹಾಲಿವರ್ಷದಲ್ಲಿ ರೂ. ೫೫೦೦೦ ಇಟ್ಟು ಪೂರೈಸಲಾಗುವುದು. ತುಂಗಭದ್ರ ಯೋಜನೆಯು ೧೯೫೨—೫೩ ರಲ್ಲಿ ಕೆಲಸಕ್ಕೆ ತೊಡಗಬಹುದು.

ದತ್ತಮಂಡಲ ಜಿಲ್ಲೆಗಳಲ್ಲಿ ಹೆಚ್ಚು ಸಮಯದಿಂದ ಬಲೇ ವಿದ್ಯುಚ್ಛಕ್ತಿಯ ಅವಶ್ಯಕತೆ ಇತ್ತು. ಈ ಜಿಲ್ಲೆಗಳಿಗೆ ಬೇಕಾದಷ್ಟು ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕಾಗಿಯೇ ತುಂಗಭದ್ರ ಹೈಡ್ರೊ-ಎಲೆಕ್ಟ್ರಿಕ್ ಯೋಜನೆಯು ಈ ಯೋಜನೆ ಪ್ರಕಾರ ವರ್ಷದಲ್ಲಿ ೬ ತಿಂಗಳುಗಳು ತನಕ ಸುಮಾರು ೨೧೯೦೦ ಕೆ. ವಿ ಗಳಷ್ಟು, ಉಳಿದ ೬ ತಿಂಗಳುಗಳಲ್ಲಿ ಸುಮಾರು ೬೯೦೦ ಕೆ. ವಿ. ಎ ಗಳಷ್ಟು ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಲಾಗುವುದು. ಆದರೆ ಇದರ ಕೆಲಸವು ೧೯೫೨—೫೩ ರೊಳಗೆ ಮಾತ್ರವೇ ಮುಗಿಯುವುದೆಂದು ನಿರೀಕ್ಷಿಸಲಾಗಿದೆ. ತನ್ಮಧ್ಯೆ ಈಗ ಬೇಕಾಗುವ ಶಕ್ತಿಯನ್ನು ಒದಗಿಸುವ ಉದ್ದಿಶ್ಯ ೧೯೪೮ ನೇ ಇಸವಿಯ ಮಧ್ಯಕಾಲದಿಂದ ಮೊದಲ್ಗೊಂಡು ಮೈಸೂರ್ ಜೋಗ್ ಹೈಡ್ರೊ-ಇಲೆಕ್ಟ್ರಿಕ್ ಯೋಜನೆಯಿಂದ ವಿದ್ಯುತ್ತನ್ನು ಕೊಂಡು ಕೊಂಡು, ತುಂಗಭದ್ರಾ, ಅಣೆಕಟ್ಟಿನ ಆಸುಪಾಸಿನ ಪ್ರದೇಶಗಳಿಗೂ, ಹೊಸಪೇಟೆ, ಹಗರಿಬೊಮ್ಮನಹಳ್ಳಿ, ಬಳ್ಳಾರಿ, ಗುಂತಕಲ್, ಈ ಕಡೆಗಳಿಗೂ ಹಂಚುವಂತೆ ನಿಶ್ಚಯಿಸಲಾಗಿದೆ. ವಿದ್ಯುಚ್ಛಕ್ತಿ ಸಾಗಿಸುವುದರ ಕುರಿತು ಸೈನ್ಯಾಧಿಪತಿಯು ಈಗಾಗಲೇ ಆರಂಭವಾಗಿದೆ.

Woolen Coatings, Silk Sarees. Benares and other latest desigus Handloom and Mill made Clothes Etc, Colours Guaranteed, Prices very reasonable. Trial Solicited.

G. GOPAL SING & SON.,
CLOTH MERCHANT
No. 15 Old Market BELLARY.
ಜಿ. ಗೋಪಾಲ ಸಿಂಗ್ ಅಂಡ್ ಸನ್,
ಜವಳಿ ವ್ಯಾಪಾರಿ, ನಂ. 15
ಹಳೇ ಮಾರ್ಕೆಟ್, ಬಳ್ಳಾರಿ.

ಉಲನ್ ಕೋಟಿಂಗ್ ಬಟ್ಟೆ, ಬನಾರಸ್ ಜರಿ, ಶಿಲ್ಕು-ಟಿಕ್ಕು ಸೀರೆ ಜಾಕೆಟ್ ಲೇಸ್ ಬಾರ್ಡರ್ ಮತ್ತು ಇತರ ಅನೇಕ ವಿವಿಧ ಅತ್ಯಂತ ಆಧುನಿಕ ಉಡುಪಿನ ಬೇಡಿಕೆಯನ್ನು ನಾವು ಪೂರೈಸಲಿದ್ದೇವೆ. ಕೈ ಮಗ್ಗದ ನಿಲ್ ಬಟ್ಟೆಗಳು ವಿಧಾಯಕ ಬೆಲೆಗೆ ದೊರೆಯುತ್ತವೆ. ಬಣ್ಣ ಗ್ಯಾರಂಟಿ, ಬೆಲೆ ಸರಿಯೂಮ್ಮ. ಪರೀಕ್ಷಿಸಿ ಮನವಾಗಿರಿ.



ಪ್ರಕಾಶನದ ೧೦ ನೆಯ ವರ್ಷ
೨೮-೪-೧೯೪೭

ಭಾರತದ ಪರಿಸ್ಥಿತಿ.

ಶಾಂತಿಸ್ಥಾಪನೆಯ ಯತ್ನಗಳು.

ಭಾರತದ ವೈಸ್ರಾಯರಾದ, ಲಾರ್ಡ ವೇವಲರ ನಿರ್ಗಮನವಾಗಿ, ಲಾರ್ಡ ಮೌಂಟ ಬಾ ಟ ನ್ ರ ಆಗಮನದ ನಂತರ ಭಾರತದ ರಾಜಕೀಯದಲ್ಲಿ ಕ್ರಾಂತಿಯಾಗಿದೆ–ಲಾ. ಮೌ. ಬ್ಯಾಟನರು ತಾವುಕೊನೆಯ ವೈಸ್ರಾಯರೆಂದೂ, ಭಾರತೀಯರಿಗೆ ಅಧಿಕಾರವನ್ನೊಪ್ಪಿಸಲು ಬಂದಿರುವರೆಂದೂ ಕೇಳಿ ಮಹಾತ್ಮಗಾಂಧಿ–ಜಿನ್ನಾ ಮೊದಲಾದ ಪ್ರಮುಖನಾಯಕರೊಡನೆ ಮಾತುಕತೆಗಳನ್ನು ನಡೆಸಿ ದೇಶದಲ್ಲಿ ಶಾಂತಿಯನ್ನು ಸ್ಥಾಪಿಸಲು ಈ ಪ್ರಕಟನೆಯನ್ನು ಹೊರಡಿಸುವಂತೆ ಮಾಡಿರುವುದು ಆಶೆಯನ್ನು ಹುಟ್ಟಿಸಿದೆ. ಹೊಸವೈಸ್ರಾಯರು ಎಲ್ಲಾ ಪ್ರಾಂತಗಳ ಗವರ್ನರರನ್ನು ಕರೆಸಿ ಅಧಿಕಾರ ಪ್ರದಾನಕ್ಕೆ ತಯಾರಾಗಬೇಕೆಂದು ಹೇಳಿರುವುದೂ ಶುಭಸೂಚನೆಯೇ

ಯಾವ ರಾಜಕೀಯ ಧ್ಯೇಯವನ್ನು ಸಾಧಿಸಬೇಕಾದರೂ, ಕೊಲೆ, ಹಿಂಸೆ, ಸುಲಿಗೆಗಳು ಸಾಧನಾ ಮಾರ್ಗಗಳಲ್ಲವೆಂದು ಲೀಗ್ ಮುಖಂಡರಿಗೆ ತಿಳಿದಿದ್ದರೂ, ಅವರ ಅನುಯಾಯಿಗಳು ಬಂಗಾಲಾ, ಪಂಜಾಬ್, ಸರಹದ್ದು ಪ್ರಾಂತಗಳಲ್ಲಿ ಅಲ್ಪಸಂಖ್ಯಾಕರಾದ ಹಿಂದೂ ಸಿಖ್ಖರುಮೇಲೆ ಭಯಂಕರ ಅತ್ಯಾಚಾರಗಳನ್ನು ನಡೆಸುತ್ತಿರುವುದು ದುರ್ದೈವ ಸಂಗತಿಯಾಗಿದೆ. ತಮ್ಮೊಡನೆ ಮಾತುಕತೆಯಾಡಿ ಒಪ್ಪಂದಕ್ಕೆ ಕಾರ್ಯಕಾರೀ ಸಮಿತಿಯು ತೀರ್ಮಾನಮಾಡಿ ಲೀಗ್ ಮುಖಂಡರಿಗೆ ಕಳುಹಿಸಿದ್ದರೂ ಅವರಿಂದ ಈವರಿವಿಗೆ ಉತ್ತರವೇ ಇಲ್ಲ. ಬ್ರಿಟಿಷರು ೧೯೪೮ ನೆಯ ಜೂನ್ ನೊಳಗಾಗಿ ಬಿಟ್ಟು ಹೋಗುವೆವೆಂದು ಹೇಳಿದ್ದರೂ ಮುಸಲ್ಮಾನರು ಹಿಂದೂಗಳೊಡನೆ ಒಪ್ಪಂದಕ್ಕೆ ಬರುವುದನ್ನು ಬಿಟ್ಟು ಬ್ರಿಟಿಷರ ಮೊರೆಹೋಗುತ್ತಿರುವುದು ವಿಚಿತ್ರವಾಗಿದೆ ನೆಹರೂರವರು ಹೇಳಿರುವಂತೆ ಭಾರತೀಯರಲ್ಲಿ ಒಪ್ಪಂದವಾಗುವುದಗತ್ಯ. ಪಾಕಿಸ್ತಾನ ಧ್ಯೇಯ ಸಾಧನೆಯಾಗಲು ಒಪ್ಪಂದದ ಮಾರ್ಗವೊಂದು, ಹೊಡೆದಾಡಿ ಶಕ್ತಿಯಿಂದ ಸಂಪಾದಿಸುವ ಮಾರ್ಗವೊಂದು, ಇದೆ. ಎರಡನೆಯ ಮಾರ್ಗವನ್ನು ಲೀಗಿನವರು ಅವಲಂಬಿಸಿರುವಂತಿದೆ

ಹಿಂದೂ ಮುಸಲ್ಮಾನರು ಸಾವಿರಾರು ವರ್ಷಗಳಿಂದ ಬಾಂಧವರಂತೆ ಈ ದೇಶದಲ್ಲಿ ಶಾಂತಿಯಿಂದ ಬಾಳಿ ಬದುಕಿರುವರು. ಹಿಂದೂ ಮುಸಲ್ಮಾನ್ ವೈಷಮ್ಯಮಾಡಿ ತಮ್ಮ ಸಾಮ್ರಾಜ್ಯವನ್ನು ಸ್ಥಿರವಾಗಿರಿಸಲು ಯತ್ನಿಸುತ್ತಿದ್ದ ಬ್ರಿಟಿಷರೇ ಹಿಂದುಸ್ತಾನಬಿಟ್ಟು ಹೋಗಲು ತಯಾರಾಗಿರುವಾಗ ಮುಸಲ್ಮಾನರು ಹಿಂದೂಗಳೊಡನೆ ಒಪ್ಪಂದಕ್ಕೆ ಬರಬೇಕಾಗುದುದು ಅತ್ಯಂತ ಅವಶ್ಯಕವಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಲೀಗ್ ಸಂಸ್ಥೆಗಳಲ್ಲಿ ರಾಜಿಯಾಗಿ ಭಾರತದಲ್ಲಿ ಶಾಂತಿನೆಲೆಗೊಳ್ಳಲೆಂದು ಆಶಿಸುವೆವು.

ಭೂಕಂದಾಯ.

ಜನವರಿ ಪರ್ಯಂತ ಸಿಮ್ಲಾದಲ್ಲಿ ನಡೆದ ಶಾಸನಸಭೆಯ ಅಧಿವೇಶನದಲ್ಲಿ ಭೂಕಂದಾಯವನ್ನು ಕಡಿಮೆಮಾಡುವ ವಿಷಯದಲ್ಲಿ ರೈತನಿಗೂ ಧನಿಗೂ ಇರುವ ಸಂಬಂಧವನ್ನು ನಿಶ್ಚಯವಾಗಿ ಲಿದೆ ಈ ವಿಷಯದಲ್ಲಿ ಆಸಕ್ತಿಯುಳ್ಳ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಅಭಿಪ್ರಾಯವನ್ನು ಸರಕಾರಕ್ಕೆ ತಿಳಿಸುವಂತೆ ಮಾನ್ಯ ಭೂಕಂದಾಯಮಂತ್ರಿ ಶ್ರೀ ಕಳಾ ವೆಂಕಟ್ರಾಯರು ಆಶಿಸುತ್ತಾರೆ.

ನನ್ನಾಕೆ.

ಮಲ್ಲಿಗೆ ಮುಡಿಯುತ
ಮುಗುಳನು ಬೀರುತ
ಹಾರುತ ಬಂದಳು ನನ್ನಾಕೆ॥

ಬಿಟ್ಟಿದ ಅರಗಿಳಿ ನನ್ನಾಕೆ
ಚಂದ್ರಾ ಲೇಪೆಯು ನನ್ನಾಕೆ
ವಸಂತ ವನವೂ ನನ್ನಾಕೆ॥

ಪ್ರೇಮ-ದೊಳಿದರನು ತರದಾಕೆ
ಮುತ್ತನು ಕೊಡುವಳು ನನ್ನಾಕೆ
ಪ್ರೇಮದ ಮಲ್ಲಿಗೆ ನನ್ನಾಕೆ॥

ಜಗಳದಿ ಕಾಲನು ಇದವಳು
ಜಗದಾ ಉನ್ನತಿ ಬಯಸುವಳು
ಮಗುವಿನ ಮಾತೆಯು ನನ್ನವಳು॥

ಕೋಪೆನೆ ಬರುತ
ಕನ್ನಡಿ ನೋಡುತ
ಕುಂಕುಮ ನಿಡುತ ನನ್ನಾಕೆ॥

ಜಡೆಯನು ನೋಡುತ
ಕುರುಳನು ತಿದ್ದುತ
ನೀರಿಗೆ ಹೊದೆಯುತ ನನ್ನಾಕೆ॥

ನನ್ನನು ಕಾಣದೆ
ಹಿಂದಕೆ ನೋಡದೆ
ನಿಂತಳು ಕನ್ನಡಿ ಮುಂದಾಕೆ॥

ಸಂತಸ ತಾಳುತ
ಮೆಲ್ಲನೆ ಏಳುತ
ಹೋಗುತಲಾನು ಅವಳಿಂದೆ॥

ಕಣ್ಣನು ಮುಚ್ಚುತ
"ನಾನಾರೆ"ನ್ನುತ
ಸಂತಸ ಪಟ್ಟಿನು ಕುಣಿಯುತ್ತ॥

"ನನ್ನವಳೆಂ"ದಳು
"ಬಂಗಾರೆಂ"ದಳು
ಕೈಯನು ಬಿಡಿಸುತ ನನ್ನಾಕೆ॥

"ನನ್ನವಳೆಂ"ದೆನು
ಮುತ್ತನು ಕೊಟ್ಟೆನು
ಸೆಳೆದಪ್ಪಿದಳಾಗಲೆ ನನ್ನಾಕೆ

ಮಲ್ಲಿಗೆ ಹೂವ್ವೆ
ಪ್ರೇಮದ ಹೂವ್ವೆ
ದುಂಬಿಯು ನಾನು ಎಂದಾನು॥

ಕುರುಳನು ತಿದ್ದುತ
ಕರವನು ಪಿಡಿಯುತ
ಮುಡಿದೆನು ಮಡದೀಹೂವನ್ನು.

[ನು ಹಿ. ಮು]

ಮಿಲ್ ಬಟ್ಟೆಯ ಪರಿಸ್ಥಿತಿ.

ಕಳೆದ 2 ತಿಂಗಳಿಂದ ಬೊಂಬಾಯಿಯಲ್ಲಿಯೇ 80 ಸಾವಿರ ಬೇಲುಗಳಷ್ಟು ಮಿಲ್‌ಬಟ್ಟೆ ಮಳಿದಿದೆ. ಇದರಲ್ಲಿ ಒರಟು ಬಟ್ಟೆಯೇ ಅಧಿಕವಾಗಿದೆ ವ್ಯಾಪಾರಿಗಳು ಒರಟು ಬಟ್ಟೆಯನ್ನು ಬಿಡುಗಡೆ ಮಾಡುತ್ತಿರುವುದರಿಂದ ಸಟ್ಟಾವ್ಯಾಪಾರಿಗಳು ಅದನ್ನು ಕೊಳ್ಳುತ್ತಲಿಲ್ಲ. ಹೀಗಾಗಿ ಜನರಿಗೆ ಕಷ್ಟವಾಗಿದೆ.

ಪ್ರಾಂತದಲ್ಲಿ ಅಕ್ಕಿ ಮತ್ತು ಎಣ್ಣೆ ಗಿರಣಿಗಳಲ್ಲಿ ಕೆಲಸಮಾಡುವವರು ಕೂಲಿ, ತುಟ್ಟಿಭತ್ತೆ, ರಜೆ ಇತ್ಯಾದಿ ವಿಷಯಗಳನ್ನು ವಿಚಾರಿಸುವುದಕ್ಕೋಸ್ಕರ ಮದ್ರಾಸಿನ ನಿವೃತ್ತ ಜಡ್ಜರಾದ ರಾವ್ ಬಹದೂರ್ ಶ್ರೀಯು. ರಾಮಸ್ವಾಮಯ್ಯನವರೊಬ್ಬರಿಂದ ಕೂಡಿದ ವಿಚಾರಣೆ ಸಮಿತಿಯೊಂದನ್ನು ನೇಮಿಸಲಾಗಿದೆ.

ಪರದೇಶದ ರಾಜಕೀಯ

ಪೊಲಿಸ್ತಾನದಲ್ಲಿ ಯಹೂದಿ ಕ್ರಾಂತಿಕಾರನಾದ ಡೊವಗ್ರುನರನನ್ನು ಗಲ್ಲಿಗೇರಿಸಲಾಯಿತು. ಅವನು ಯಹೂದಿ ಆಶಾಗೀತಗಳನ್ನು ಹಾಡುತ್ತ ಮರಣ ಹೊಂದಿದನು ಇದರ ಸಂಬಂಧವಾಗಿ ಲಂ ಬ್ರಿಟಿಷ್ ಅಧಿಕಾರಿಗಳ ಬಲಿತೆಗೆದುಕೊಳ್ಳುವೆವೆಂದು ಕ್ರಾಂತಿಕಾರರು ಪ್ರಕಟಿಸಿದ್ದಾರೆ.

ನವಭಾರತಕ್ಕೆ ಚಂದಾದಾರರಾಗಿರಿ

208

ಏಶಿಯಾ ಪರಿಷತ್ತು ಗಾಂಧೀಜೀ ಸಂದೇಶ,

ಒಂದೇ ಜಗತ್ತಿಗಾಗಿ ಹೆಣಗಿರಿ.

[ದಿಲ್ಲಿಯಲ್ಲಿದ್ದಾಗ ಮಹಾತ್ಮಾಗಾಂಧಿಯವರು ಎರಡುಸಾರಿ ಏಶಿಯಾ ಪರಿಷತ್ತಿಗೆ ಹೋಗಿದ್ದರು. ಮಂಗಳವಾರ (ತಾ. ೧—೪—೪೭) ಅವರು ಮೊದಲನೇ ಸಾರಿ ಪರಿಷತ್ತಿಗೆ ಹೋದರು. ಆಗ ಅವರು ಭಾಷಣ ಮಾಡಲಿಲ್ಲ. ಆದರೆ ಕೆಲವು ಪ್ರತಿನಿಧಿಗಳು ಕೇಳಿದ ಪ್ರಶ್ನೆಗಳಿಗೆ ಉತ್ತರಕೊಟ್ಟರು. ಈ ಪ್ರಶ್ನೋತ್ತರಗಳನ್ನು ಕೆಳಗೆ ಕೊಡಲಾಗಿದೆ.

ಬಹಿರಂಗಾಧಿವೇಶನದ ಅಧ್ಯಕ್ಷಸ್ಥಾನದಲ್ಲಿದ್ದ ಅಝುರ ಬೈಜಾನದ ಪ್ರತಿನಿಧಿಗಳು ಮಹಾತ್ಮರಿಗೆ ನಾಲ್ಕು ಮಾತು ಹೇಳಬೇಕೆಂದು ಬಿನ್ನವಿಸಿದರು.

ಗಾಂಧೀಜಿಯವರು ಎಪ್ರಿಲ ೨೩ಕ್ಕೆ ಪರಿಷತ್ತಿನ ಕೊನೆಯ ಅಧಿವೇಶನಕ್ಕೆ ಬಂದಾಗ ಭಾಷಣಮಾಡುವೆನೆಂದೂ ಸದ್ಯಕ್ಕೆ ಯಾರಾದರೂ ಪ್ರಶ್ನೆಗಳನ್ನು ಕೇಳಿದರೆ ಉತ್ತರ ಕೊಡುವೆನೆಂದೂ ಹೇಳಿದರು.]

ಕನಸು ನನಸಾಗಬಹುದು

ನೀವು ಒಂದೇ ಜಗತ್ತಿನ ತತ್ವಕ್ಕೆ ಒಪ್ಪುತ್ತೀರಾ? ಸದ್ಯದ ಪರಿಸ್ಥಿತಿಯಲ್ಲಿ ಇದು ಸಾಧ್ಯವಾಗಬಹುದೆ? ಎಂಬ ಪ್ರಶ್ನೆಗೆ ಗಾಂಧೀಜಿಯವರು ಈ ಉತ್ತರವನ್ನು ಕೊಟ್ಟರು, "ಈ ಜಗತ್ತು ಒಂದಾಗದಿದ್ದರೆ ಅದರಲ್ಲಿ ಇರಲು ನನಗೆ ಇಚ್ಛೆಯಿಲ್ಲ ನಶ್ವ ಜೀವಮಾನವಿರುವ ತನಕವಾಗಿಯೇ ಈ ಕನಸು ನನಸಾಗಲಿ.

"ಇಲ್ಲಿ ನೆರೆದ ಏಶಿಯಾ ರಾಷ್ಟ್ರಗಳ ಪ್ರತಿನಿಧಿಗಳು ಒಂದೇ ಜಗತ್ತಿನ ನಿರ್ಮಾಣಕ್ಕಾಗಿ ಶಕ್ಯವಿದ್ದಷ್ಟು ಪ್ರಯತ್ನಿಸಬೇಕು; ಧ್ಯೇಯವನ್ನು ಸಾಧಿಸಲು ಅವರು ತಕ್ಕ ಉಪಾಯಗಳನ್ನು ಯೋಚಿಸಬೇಕು.

"ದೃಢ ನಿಶ್ಚಯದಿಂದ ನೀವೆಲ್ಲ ಕಾರ್ಯಕ್ಕೆ ಕೊಂಡರೆ ಇದೇ ತಲೆಮಾರಿನಲ್ಲಿಯೇ ಈ ಕನಸು ನನಸಾಗಬಹುದು."

ಏಶಿಯಾ ಸಂಸ್ಥೆಯ ನಿರ್ಮಾಣದ ವಿಷಯವಾಗಿ ತಮ್ಮ ಅಭಿಪ್ರಾಯವನ್ನು ತಿಳಿಸಬೇಕೆಂದು ಚೀನದ ಡಾ. ಹಾನ ಲೀಪುರವರು ಬಿನ್ನವಿಸಿದರು.

ಗಾಂಧಿಜೀಯವರು ಕೆಳಗಿನ ಉತ್ತರವನ್ನು ಕೊಟ್ಟರು:- ಅತ್ಯುತ್ತಮ ಪ್ರಶ್ನೆ ಹಾಕಿದಿರಿ. ನಾನು ನನ್ನ ಅಜ್ಞಾನವನ್ನು ಒಪ್ಪಿಕೊಳ್ಳಬೇಕು. ನಿಜವಾಗಿ ಇದರ ಬಗ್ಗೆ ನಾನು ನಿಮ್ಮ ಕ್ಷಮೆ ಬೇಡಬೇಕು. ಈ ಪರಿಷತ್ತು ನೆರೆಯುವದು ನಿಶ್ಚಯವಾಗುವದಕ್ಕಿಂತ ಮೊದಲು ಪಂಡಿತ ನೆಹರೂರವರು ನಾನು ಈ ಪರಿಷತ್ತಿಗೆ ಹಾಜರಿರಬಹುದೆ ಎಂದು ಕೇಳಿದ್ದರು. ನಿರೀಕ್ಷಿಸಿದಕ್ಕಿಂತ ಈ ಪರಿಷತ್ತಿಗೆ ಹೆಚ್ಚು ಮಹತ್ವವಿದೆಯೆಂಬುದು ಸಿದ್ಧವಾಯಿತು. ಆಗ ನನಗೆ ಬರಲಿಕ್ಕೆ ಆಗುವದಿಲ್ಲ ಕ್ಷಮಿಸಬೇಕು ಎಂತಲೂ ನಾನು ತಿಳಿಸಬೇಕಾಯಿತು. ಆದರೆ ವೈಸರಾಯರಾದ ಲಾರ್ಡ ಮೌಂಟ ಬ್ಯಾಟನ್ನರು ಕರೆಕಳುಹಲು 'ಇಲ್ಲ' ಎಂದು ಹೇಳಲು ನನಗೆ ಅಶಕ್ಯವಾಯಿತು. ಹಾಗೆ ಹೇಳುವದು ನನ್ನ ಸ್ವಭಾವವಲ್ಲ. ನನ್ನನ್ನು ಏಶಿಯಾ ಪರಿಷತ್ತಿನ ವೇಳೆಗೆ ದಿಲ್ಲಿಗೆ ಕರೆತಂದ ಗೌರವ ತಮಗೇ ಸಲ್ಲುವದೆಂದು ವೈಸರಾಯರು ಈಗಾಗಲೇ ನನಗೆ ಹೇಳಿದ್ದಾರೆ. ನಾನು ವೈಸರಾಯರಿಗೆ ಹೇಳಿದ್ದೇನೆಂದರೆ "ನಾನು ನಿಮ್ಮ ಸೆರೆಯಾಳು, ನಿಮ್ಮ ಉಪಾಧ್ಯಕ್ಷರಾಗಿರುವ ಪಂಡಿತ ನೆಹರೂರವರ ಬಂಧನದಲ್ಲಿಯೂ ನಾನಿದ್ದೇನೆ"

ಪತ್ರವ್ಯವಹಾರದ ಮೂಲಕ ಜಗತ್ತಿನ ಎಲ್ಲಭಾಗಗಳ ಪರಿಚಯವು ನನಗಾಗಿದೆ. ಅಂತೆಯೇ ವಿಶೇಯದ ಪರಿಚಯವು ಕೂಡ ಆಗಿದೆ. ಆದರೂ ನಿಮ್ಮೊಳಗಿನ ತೀರ ಸ್ವಲ್ಪ ಜನರ ವೈಯಕ್ತಿಕ ಪರಿಚಯವು ನನಗಿರಬಹುದು. ಇರಲಿಕ್ಕಿಲ್ಲ ಕೂಡ. ಈ ಪ್ರಶ್ನೆಯ ಬಗ್ಗೆ ಉಪಯುಕ್ತವಾದದ್ದನ್ನು ನಾನು ಹೇಳಬಹುದು ಅಥವಾ ಹೇಳಲಿಕ್ಕಿಲ್ಲ, ಆದರೆ ಪ್ರಶ್ನೆಯುಮಾತ್ರ ನನ್ನ ಮನಸ್ಸಿಗೆ ಒಪ್ಪುವಂತಹದಿದೆ. ಈಗ ನನಗೆ ಕೇಳಲಾದ ಪ್ರಶ್ನೆಯ ಕೆಲಭಾಗವನ್ನು ನಿನ್ನೆ ಪಂಡಿತ ನೆಹರೂರವರು ಚರ್ಚಿಸಿದ್ದಾರೆ ಇಂಥ ಪರಿಷತ್ತು ಈ ದೇಶದಲ್ಲಿ ನಡೆದುದು ಇತಿಹಾಸದಲ್ಲಿ ಇದೇ ಮೊದಲು. ಇದೊಂದು ದೊಡ್ಡ ಸಂಗತಿ.

ಸದ್ಯದ ಪರಿಸ್ಥಿತಿಯನ್ನು ನಾನು ಕೇಳಲೇ ಬೇಕಾಗಿದೆಂದು ನನಗೆ ವಿಷಾದವಾಗುತ್ತದೆ ಹೇಗೆ ಕೂಡಿಕೊಂಡು ಶಾಂತಿಯಿಂದಿರಬೇಕೆಂಬುದು ನಮಗೆ ಗೊತ್ತಿಲ್ಲ ನಮ್ಮ ನಮ್ಮಲ್ಲಿ ಎಷ್ಟೋ ಮತಭೇದಗಳಿವೆ. ಇವುಗಳನ್ನು ಸ್ನೇಹಭಾವದಿಂದ ಬಗೆಹರಿಸಿಕೊಳ್ಳುವದು ನಮ್ಮಿಂದಾಗಲೊಲ್ಲದು. ಪಶುನೀತಿಯ ಹೊರತು ಬೇರೆ ಮಾರ್ಗವಿಲ್ಲವೆಂದು ನಮಗೆ ಅನಿಸುತ್ತದೆ. ಈ ಸಂಗತಿಯನ್ನು ಮಾತ್ರ ನೀವು ಇಲ್ಲಿಯೇ ಹೂಳಿ ಹೋಗಬೇಕು. ನಿನ್ನೊಡನೆ ನಿಮ್ಮ ದೇಶಗಳಿಗೆ ಅದನ್ನು ಒಯ್ಯಬೇಡಿರಿ.

ಹಿಂದೂಸ್ತಾನವು ಸ್ವಾತಂತ್ರ್ಯದ ಹೊಸ್ತಿಲದೊಳಗೆ ಕಾಲಿಟ್ಟಿದೆ, ಈ ದೇಶವನ್ನು ಆಳಲಿಚ್ಛಿಸುವವರೊಡನೆ ಹಿಂದೂಸ್ತಾನವು ಸಂಬಂಧ ಕಡಿದುಕೊಳ್ಳಲಿಚ್ಛಿಸುತ್ತದೆ. ಕೇವಲ ಆಳುವವರ ಬದಲಾವಣೆ ನಮಗೆ ಬೇಡ. ನಮ್ಮ ದೇಶದಲ್ಲಿ ನಾವೇ ಆಳಬೇಕು. ಇದು ಹೇಗೆ ಕೈಗೂಡಬಹುದೆಂಬುದು ನಮಗಿನ್ನೂ ಸ್ಪಷ್ಟವಾಗಿಲ್ಲ.

ನಮ್ಮ ಕರ್ತವ್ಯವನ್ನು ನಾವು ಮಾಡಬೇಕೆಂಬುದಷ್ಟೇ ನಮಗೆ ಗೊತ್ತು. ಫಲಕೊಡುವದು ದೇವರ ಕೈಯಲ್ಲಿಲ್ಲ. ಮನುಷ್ಯನ ಭಾಗ್ಯವು ಅವನ ಕೈಯಲ್ಲಿರುತ್ತದೆಂದು ತಿಳಿಯಲಾಗುತ್ತದೆ. ಕೆಲಮಟ್ಟಿಗೆ ಮಾತ್ರ ಇದು ಸತ್ಯವಿದೆ. ಮಹಾಶಕ್ತಿಯು ಅವನ ಯೋಜನೆಗಳನ್ನೆಲ್ಲ ಬದಿಗೊತ್ತಿ ತನ್ನದೆ ತಾನು ಎಲ್ಲಿಯವರೆಗೆ ಸಾಧಿಸುವದಿಲ್ಲವೊ ಅಲ್ಲಿಯವರೆಗೆ ಮಾತ್ರ ಮನುಷ್ಯನು ತನ್ನ ಭಾಗ್ಯಾಧೀಶನು.

ಈ ಮಹಾ ಶಕ್ತಿಯನ್ನು ನಾನು ಅಲ್ಲಾ, ಖುದಾ, ಅಥವಾ ದೇವರು ಎಂಬ ಹೆಸರುಗಳಿಂದ ಕರೆಯುವದಿಲ್ಲ. ಅದಕ್ಕೆ ನಾನು ಸತ್ಯವೆಂದು ಅನ್ನುತ್ತೇನೆ. ಸತ್ಯವೇ ನನ್ನ ದೇವರು. ನಮ್ಮ ಎಲ್ಲ ಯೋಜನೆಗಳ ಮೇಲೆ ಅದರದೇ ಅಧಿಕಾರ. ಸಂಪೂರ್ಣ ಸತ್ಯವು ಆ ಸತ್ಯಶಕ್ತಿಯ ಹೃದಯದಲ್ಲಿಯೇ ಮನೆ ಮಾಡಿಕೊಂಡಿದೆ. ಬಾಲ್ಯದಿಂದಲೂ ನಾನು ಸತ್ಯವು ದುಃಸಾಧ್ಯ ನಾವು ಸತ್ಯನನ್ನು ಮುಟ್ಟಲಾರೆವೆಂದು ಕಲಿತಿದ್ದೇವೆ. ಓರ್ವ ಅಂತ್ಯ ಮಹಾಶಯನು ದೇವರನ್ನು ತಿಳಿಯುವದು ಅತಕ್ಯವೆಂಬುದರಲ್ಲಿ ವಿಶ್ವಾಸವಿಡಲು ನನಗೆ ಕಲಿಸಿದನು. ದೇವರನ್ನು ತಿಳಿಯಬಹುದು ಅಂದರೆ ನನ್ನ ಸುಸಂಸ್ಕಾರಿತ ಬುದ್ಧಿಶಕ್ತಿಯಿಂದ ಅವನನ್ನು ಎಷ್ಟು ತಿಳಿಯುವದು ಸಾಧ್ಯವಿದೆಯೋ ಅಷ್ಟೇ ತಿಳಿಯಬಹುದು.

ಏಷ್ಯಾದ ವಿವಿಧ ಭಾಗಗಳಿಂದ ನೀವೆಲ್ಲ ಬಂದಿದ್ದಿರಿ. ಇದೇ ಪ್ರಕಾರ ಇಷ್ಟೇ ಉತ್ಸಾಹದಿಂದ ವರ್ಷಕ್ಕೊಮ್ಮೆ ಎರಡು ಅಥವಾ ಮೂರು ವರ್ಷಗಳಿಗೊಮ್ಮೆ ಇಂಥ ಪರಿಷತ್ತು ನೆರೆಯಬೇಕು. ಈ ಪರಿಷತ್ತಿನ ಸವಿನೆನಪುಗಳನ್ನು ನಿಮ್ಮ ಸಂಗಡ ಒಯ್ಯಿರಿ. ಸತ್ಯದ ಮಹಾ ಕಟ್ಟಡ ಕಟ್ಟುವದಕ್ಕಾಗಿ ಎಲ್ಲ ವಿಧದಲ್ಲಿಯೂ ಪ್ರಯತ್ನಿಸಿರಿ.

ಬಲಾತ್ಕಾರವು ಸದುದ್ದೇಶವಲ್ಲ

ಇಲ್ಲಿ ಏಷ್ಯಾದ ಎಲ್ಲ ಪ್ರತಿನಿಧಿಗಳೂ ಸೇರಿದ್ದೀರಿ ಏಕೆ? ಯೂರೋಪದ ವಿರುದ್ಧ ಯುದ್ಧ ಹೂಡಲು? ಅಮೆರಿಕಾ ಅಥವಾ ಏಷ್ಯೇತರ ಜನರಮೇಲೆ ಏರಿ ಹೋಗಲು? "ಅಲ್ಲ ಎಂದೂ ಅಲ್ಲ" ಎಂದು ಒತ್ತಿ ಹೇಳುವೆ. ಇದು ಹಿಂದೂಸ್ತಾನದ ರೀತಿಯಲ್ಲ. ಅಹಿಂಸಾತ್ಮಕ

210

ಹೋರಾಟದಿಂದ ಸ್ವರಾಜ್ಯವನ್ನು ಗಳಿಸಿಕೊಂಡು ಆ ಸ್ವರಾಜ್ಯದಬಲದಿಂದ ಹಿಂದೂಸ್ತಾನದ ಮೇಲೆ ಆಕ್ರಮಣ ಮಾಡಿದರೆ ನನಗೆ ಬಹಳ ದುಃಖವಾಗುವದು ಯೂರೋಪಿಯನ್ನರು ಏಷ್ಯಾ ಖಂಡದ ವಿವಿಧ ಜನಾಂಗಗಳನ್ನು ಸುಲಿದಿದ್ದಾರೆ.

ಏಷ್ಯಾ ಬಾಳುವದು. ನಶ್ಚಿಮಾತ್ಯ ರಾಷ್ಟ್ರಗಳಷ್ಟೇ ಸ್ವತಂತ್ರವಾಗಿ ಅದು ಬಾಳಬೇಕು ಎಂದು ನಿರ್ಧಾರ ಮಾಡದೇ ನಾವು ಇಲ್ಲಿಂದಎದ್ದು ಹೋಗಬಾರದು. ಪರಿಷತ್ತು ನಿಯಮಿತವಾಗಿ ನೆರೆಯಬೇಕೆಂದು ಈಗ ಹೇಳಿದೆ. ಎಲ್ಲಿ ಎಂದು ಕೇಳಿದರೆ ಹಿಂದೂಸ್ತಾನವೇ ಅದಕ್ಕೆ ತಕ್ಕಸ್ಥಳವೆಂದು ಉತ್ತರಕೊಡುವೆ.

ಗ್ರಾಮೋದ್ಯೋಗಗಳ ಅಭಿವೃದ್ಧಿ

[ಜೆ. ಸಿ. ಕುಮಾರಪ್ಪ]

ಗ್ರಾಮೋದ್ಯೋಗಗಳ ಉತ್ಕರ್ಷಕ್ಕಾಗಿ ಶ್ರೀಮನು ಸುಬೇದಾರರ ಅಧ್ಯಕ್ಷತೆಯಲ್ಲಿ ನೇಮಕನಾದ ಮುಂಬಯಿ ಸಮಿತಿಯು ಪ್ರಶಂಸನೀಯವಾದ ದಕ್ಷತೆಯಿಂದ ತನ್ನ ವರದಿಯನ್ನು ಒಪ್ಪಿಸಿದೆ. ವ್ಯಾಪಾರಂಭದಲ್ಲಿಯೆ ಅದುಸ್ವಲ್ಪ ತಪ್ಪುದಾರಿ ಹಿಡಿದಂತೆ ತೋರುತ್ತದೆ ಈ ಸಮಿತಿಯನ್ನು ರಚಿಸಬೇಕೆಂಬ ಮುಂಬಯಿ ಸರಕಾರದ ಠರಾವು ಮೊದಲಿಗೇನೆ ತನ್ನ ಉದ್ದೇಶವನ್ನು ಸಾರಿದೆ. ಅದು ಹೀಗಿದೆ:

"ದೇಶದಲ್ಲಿ ಆರ್ಥಿಕ ಸಮಸ್ಥಿತಿಯನ್ನು ಸ್ಥಾಪಿಸಲು ಮತ್ತು ಹಳ್ಳಿಗಳಿಂದ ಕೂಲಿಕಾರರನ್ನೂ ಕಚ್ಚಾ ಮಾಲನ್ನು ತಂದು ಸಿದ್ಧ ಸರಕನ್ನು ಮತ್ತೆ ಹಳ್ಳಿಗಳಿಗೆ ಕಳಿಸುತ್ತಿರುವ ಕಾರಖಾನೆಗಳಲ್ಲಿ ಅಪಾರವಾಗಿ ಹಾಳಾಗುತ್ತಿರುವ ಕಚ್ಚಾಮಾಲನ್ನು ಉಳಿಸುವದಕ್ಕಾಗಿ, ಈ ಕಾರ್ಯಕ್ಕೆ ಬೇಕಾಗುವ ಮನುಷ್ಯ ಶಕ್ತಿ ಮತ್ತು ಸಾರಿಗೆ ಸೌಕರ್ಯಗಳನ್ನು ಅಪವ್ಯಯಗೊಳಿಸದಿರುವದಕ್ಕಾಗಿ ಗ್ರಾಮೋದ್ಯೋಗಗಳ ಪುನರುಜ್ಜೀವನ ಮತ್ತು ಅಭಿವೃದ್ಧಿ ಅವಶ್ಯವಾಗಿದೆ. ಇದಲ್ಲದೆ ಹಳ್ಳಿಗಳನ್ನು ಸಾಧ್ಯವಿದ್ದಷ್ಟು ಸ್ವಾವಲಂಬಿಯಾಗಿಸಬೇಕಾದುದು ಇಷ್ಟವಾಗಿದೆ."

ಕಾರಖಾನೆಗಳಲ್ಲಿ ಕೇಂದ್ರೀಭೂತವಾಗಿರುವ ವ್ಯಾಪಾರಗಳನ್ನು ಹಳ್ಳಿಗಳಿಗೆ ಹಂಚಿಕೊಡಬೇಕೆಂಬ ಉದ್ದೇಶವಿದೆಂದು ಇದರಿಂದ ಸ್ಪಷ್ಟವಾಗುತ್ತದೆ. ಕಚ್ಚಾಮಾಲು ಅಪಾರವಾಗಿ ಹಾಳಾಗದಿರುವಂತೆ ಅಂದರೆ ಉತ್ಪಾದನ ಬೆಲೆಯನ್ನು ತಗ್ಗಿಸುವಂತೆ ನೋಡಿಕೊಳ್ಳುವದೇ ಮುಖ್ಯ ಉದ್ದೇಶವಾಗಿದೆ. ಗ್ರಾಮಗಳ ಹಿತಚಿಂತನಕ್ಕೆ ದ್ವಿತೀಯಸ್ಥಾನ ದೊರೆತಿದೆ.

ಇದೇ ಧ್ಯೇಯ ದೂಷಿತವಾದ ಇಡೀ ವರದಿಯಲ್ಲಿ ನಿಜವಾದ ದೃಷ್ಟಿ, ಔಚಿತ್ಯಭಾವ ಕಂಡುಬರುವದಿಲ್ಲ. ಹಸಿದು ಕಂಗಾಲಾದ ದೇಶದಲ್ಲಿ ಆಹಾರೋತ್ಪಾದನೆಗಿಂತ ಬಿರಡೆಗಳನ್ನು ತಯಾರಿಸುವ ಉದ್ಯೋಗವೇ ಚಿತ್ತವನ್ನಾಕರ್ಷಿಸುತ್ತದೆ. ಅಕ್ಕಿ, ಗಿರಣಿ, ವನಸ್ಪತಿ ತುಪ್ಪದ ತಯಾರಿಕೆ, ಸಕ್ಕರೆ ಕಾರಖಾನೆಗಳು ಮುಂತಾದ ಸದ್ಯಮಹತ್ವದ ವಿಷಯಗಳ ಸಾಮಾನ್ಯ ಉಲ್ಲೇಖ ಕೂಡ ಇಲ್ಲ ವಿಶಿಷ್ಟ ಹಿತಸಂಬಂಧಗಳಿಂದ ಮೂಡಿದ ಮುಂಬಯಿ ವ್ಯಾಪಾರದಿಂದ ಬಂದ ಈ ವರದಿಯು ಅಕಸ್ಮಿಕವಾಗಿ ಈ ಪ್ರಮಾದ ಮಾಡಿದೆನ್ನುವದಕ್ಕಿಂತ ಸಾರ್ವಜನಿಕರನ್ನು ಅಡ್ಡದಾರಿ ಹಿಡಿಸಲೆಂದು ಮಾಡಿರಬಹುದೆಂಬ ಅನುಮಾನವಾಗದಿರದು

ಹಳ್ಳಿಗಳಲ್ಲಿಯ ಜೀವನ ಹಾಳಾಗಿಹೋಗುತ್ತಿರುವದನ್ನು ಕಂಡು ತೋರಿಕೆಗೆ ಕಣ್ಣೀರು ಸುರಿಸಿದ್ದೊಪ್ಪಿಕೊಂಡಿದೆ. ಮತ್ತು ಅವನ್ನು ಉತ್ತಮಗೊಳಿಸಬೇಕೆಂದು ಪುಸ್ತಕೀಯ ರೀತಿಯಲ್ಲಿ ಉದಾತ್ತ ವಿಚಾರಗಳನ್ನು ವ್ಯಕ್ತಪಡಿಸಿದ್ದೂ ಕೃತಕವೆಂಬ ಅಭಾಸವಾಗುತ್ತದೆ. ಬಹುಶಃ ಇವರಿಗೆ ದೊರೆತ ತಪ್ಪು ಸೂಚನೆಗಳೇ ಕಾರಣವಿರಬಹುದು.

"ಸ್ವಾವಲಂಬನ" ದಲ್ಲಿ ಈ ವರದಿಗೆ ಅಳವಾದ ವಿಶ್ವಾಸವಿಲ್ಲ. ಇದುವರೆಗೆ ವಸ್ತುಗಳನ್ನು ಕೊಂಡುಕೊಳ್ಳಲು ಸಾಧ್ಯವಿರದಿದ್ದ ಜನತೆಯ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವದು ಈ ವರದಿಯ ಮುಖ್ಯಉದ್ದೇಶವಾಗಿದೆ. ಹಳ್ಳಿಯ ಜೀವನದಲ್ಲಿಯ ತೊಡಕೆಲ್ಲ ಈಗ ಅಪಾರವಾಗಿ ಬೆಳೆದ ಹಣದ ಅರ್ಥಿಕ ವ್ಯವಸ್ಥೆಯಿಂದಲೇ ಉದ್ಭವಿಸಿದೆಂಬುದನ್ನು ಈ ಸಮಿತಿ ಅರಿತಂತೆ ತೋರುವದಿಲ್ಲ. ವಿನಿಮಯಕ್ಕಿಂತ ಸ್ವಂತ ಉಪಯೋಗಕ್ಕಾಗಿಯೆ ವಸ್ತುಗಳನ್ನು ಉತ್ಪಾದಿಸಲು ಹಳ್ಳಿಗರಿಗೆ ಉತ್ತೇಜನ ಕೊಡಬೇಕು. ಸ್ವಿಝರ್ಲಂಡ ಜಪಾನಗಳಲ್ಲಿಯ ಉತ್ಪಾದನೆಯ ಸುಂದರ ಚಿತ್ರಗಳಿಂದ ಈ ಸಮಿತಿಯು ಭ್ರಮೆಗೊಂಡಂತೆ ಕಾಣುತ್ತದೆ. ಆ ದೇಶಗಳಲ್ಲಿಯ ಪರಿಸ್ಥಿತಿ ಭಿನ್ನವಾಗಿದ್ದು ಅಲ್ಲಿಯ ಜೀವನರೀತಿಯೇ ಇಲ್ಲಿಗಿಂತ ಎಷ್ಟೋ ಬೇರೆಯಾಗಿದೆಂಬುದನ್ನು ಈ ಸಮಿತಿಯು ಗಮನಿಸಿದಂತೆ ತೋರುವದಿಲ್ಲ.

ಸದ್ಯಕ್ಕೆ ಸೂಚಿತವಾದ ಈ ಯೋಜನೆಯಂತೆ ಪ್ರತಿಯೊಂದು ಗ್ರಾಮೋದ್ಯೋಗ ಕೇಂದ್ರವು ಒಂದೇ ವಸ್ತುವಿನ ಉತ್ಪಾದನೆಯನ್ನು ದೊಡ್ಡಪ್ರಮಾಣದಲ್ಲಿ ಕೈಕೊಳ್ಳಬೇಕು. "ಕನಿಷ್ಠ ಪಕ್ಷಕ್ಕೆ ಮೂವರು ನುರಿತ ಕೆಲಸಗಾರರನ್ನು ಅವರಿಗೀಗ ದೊರೆಯುತ್ತಿರುವ ಸಂಬಳವನ್ನೂ ಉಚಿತವಾದ ಸೌಕರ್ಯವನ್ನೂ ಕೊಡುವ ಆಶ್ವಾಸನವಿತ್ತು ಪಟ್ಟಣಗಳಿಂದ ಕರೆತಂದು ಗ್ರಾಮೋದ್ಯೋಗ ಕೇಂದ್ರದಲ್ಲಿ ಸ್ಥಾಪಿಸಬೇಕು. ಇದೇ ದಿನ ಇದಕ್ಕಾಗಿಯೆ ದುಡಿಯಬಲ್ಲ ಸ್ತ್ರೀ ಪುರುಷರೂ ಈ ಉದ್ಯೋಗವನ್ನು ಸೇರಬಹುದು ಇವರು ಕೆಲಸಕ್ಕೆ ಬಂದ ಕೂಡಲೆ ದಿನಾಲು ಆಣ್ಣಾಣೆ ಕೂಲಿ ಜೊತೆಯಬೇಕು ತಮ್ಮ ಕೆಲಸದಲ್ಲಿ ನುರಿತ ಕೂಡಲೆ ಇವರ ಕೂಲಿಯನ್ನು ಪರಮಾವಧಿಯಿಂದರೆ ದಿನಕ್ಕೆ ಎಂಟಾಣೆಗೇರಿಸಬಹುದು. ಇವರು ದಿನಾಲೂ ಎಂಟು ತಾಸು ಕೆಲಸಮಾಡಬೇಕು." ಪಾಶ್ಚಾತ್ಯ ರಾಷ್ಟ್ರಗಳಲ್ಲಿರುವ 'ಪಾರ್ಮ್‌ಹೌಸ್'ನ ತಿದ್ದಿದ ಪ್ರತಿಯಿದು.

ಆಧುನಿಕತೆಯನ್ನು ಗಮನಿಸುವ ಈ ಸಮಿತಿಯು ಮೂಲ ಶಿಕ್ಷಣದ ಬೆಂಬಲಿಗರಿಗೆ ಸೌಕರ್ಯಕೋರಿಸುವದಕ್ಕಾಗಿ "ದಿನಾಲು ಒಂದಾಣೆ ಕೂಲಿಯಿಂದ ಪ್ರಾರಂಭಿಸಿ ನಾಲ್ಕಾಣೆಯವರೆಗೆ ಪಡೆಯುವ ಈ ಉದ್ಯೋಗದಲ್ಲಿ ಬಾಲಕರು ದಿನಾಲು ಅರ್ಧದಿನ ತೊಡಗಬಹುದೆ ಎಂಬುದನ್ನು ವಿಚಾರಿಸಬೇಕೆ"ಂದು ಸೂಚಿಸುತ್ತದೆ. ಇಂಥ ಔದ್ಯೋಗಿಕ ಕೇಂದ್ರಗಳಲ್ಲಿ ಬಾಲಕರಿಗೆ ಉಪಯುಕ್ತ ಜ್ಞಾನವೊರೆಯುವದು ಎಂದು ಅವರ ಹೇಳಿಕೆ.

ಬಿರಡಿಗಳನ್ನು ತಯಾರಿಸುವ ಔದ್ಯೋಗಿಕ ಗ್ರಾಮ ಕೇಂದ್ರವೊಂದರ ವೆಚ್ಚವನ್ನು ಕಂಡು ಹಿಡಿಯಲು ಈ ಸಮಿತಿಯವರು ಪ್ರಯತ್ನಿಸಿದ್ದಾರೆ. ಈ ಕೇಂದ್ರದಲ್ಲಿ ೪ ರೂಗಳ ದಿನಗೂಲಿಯ ಮೂವರು ನುರಿತ ಕೆಲಸಗಾರರು, ಎರಡಾಣೆ ದಿನಗೂಲಿಯ ೪ ಮಕ್ಕಳು, ಅರಾಣೆ ದಿನಗೂಲಿಯ ೪ ಸ್ತ್ರೀಯರು ಮತ್ತು ೪ ಪುರುಷರು ಇರುತ್ತಾರೆ. ಕಾಗದದಲ್ಲಿ ಯಾದರೂ ಸ್ತ್ರೀಪುರುಷರ ಸಮಾನತೆಯನ್ನು ಒಪ್ಪಿಕೊಂಡ ಈ ವರದಿಯವರನ್ನು ಅಭಿನಂದಿಸಬೇಕು. ತಮಗೆ ಬೇಕಾದ ಕೆಲಸ ಕೈಕೊಳ್ಳಬಹುದೆಂಬ ಭ್ರಮೆಯಲ್ಲಿದ್ದವರ ಭ್ರಮೆಯನ್ನು ಅವರು ನಿರಸನ ಮಾಡಿದ್ದಾರೆ. "ಎಲ್ಲ ಮನುಷ್ಯರ ದೈನಂದಿನ ಜೀವನ ಒಂದೇ ಆಗಿರಬೇಕೆಂದು ನಿಸರ್ಗದ ನಿಯಮವಾಗಿದೆ. ಆದರೆ ಈ ಉದ್ಯೋಗದ ವಿಷಯದಲ್ಲಿ ಮಾತ್ರ ಸಮಯಕ್ಕೊದಗಿದುದನ್ನು ಅವನು ಅಂಗೀಕರಿಸುತ್ತಾನೆ" ಈ ವಿಶಿಷ್ಟ ವಿಷಯದಲ್ಲಿ ದೇವರು ಬಿರಡಿ ತಯಾರಿಕೆಯ ಅವಕಾಶ ಒದಗಿಸಿದ್ದಾನೆ. ಈ ಉತ್ಪ್ರೇಕ್ಷೆ ವೇದಾಂತದಿಂದ ಅವರು ಒಮ್ಮೆಲೆ ಕೆಳಗಿನಂತೆ ಭೌತಿಕವಾದಕ್ಕಿಳಿಯುತ್ತಾರೆ- ಒಂದೇ "ಕೆಲಸವನ್ನು ಕೈಕೊಳ್ಳುವದರಿಂದ ಅದರಲ್ಲಿ ಹೆಚ್ಚು ಕೌಶಲ್ಯವಾಗುವದೆ, ಹಾಳುಮಾಡುವ ತರ ಕಡಿಮೆ ಅವಧಿಯಲ್ಲಿ ಸ್ವಾವಲಂಬನವನ್ನು ಪಡೆಯಲು ಹೆಚ್ಚಿಗೆ ಅವಕಾಶ ದೊರೆಯುತ್ತದೆ. ಒಂದೇ ವಸ್ತುವಿನ ತಯಾರಿಕೆಯಲ್ಲಿ ದೊಡ್ಡ ಪ್ರಮಾಣದಿಂದ ತೊಡಗಿಯವರಿಂದ ಕಾರಖಾನೆಗಳಲ್ಲಿ ತಯಾರಿಸಲಾಗುವ ಬಿದಾವಸ್ತುವಿನ ಉತ್ಪಾದನೆ ಬೆಲೆಗಿಂತ ಹಳ್ಳಿಗಳಲ್ಲಿ ತಯಾರಿಸುವ ವಸ್ತುವಿನ ಉತ್ಪಾದನೆ ಬೆಲೆ ಕಡಿಮೆಯಾಗಿರು

ಹುದು." ಕೂಲಿಕಾರರ ಧ್ಯೇಯಗಳನ್ನು ಇದಕ್ಕಿಂತ ಚನ್ನಾಗಿ ವ್ಯಕ್ತಪಡಿಸುವದೆಂತು?

ದೊಡ್ಡ ಪ್ರಮಾಣದ ಉತ್ಪಾದನೆಯಲ್ಲಿಯ ಸಾದಾ ಕೆಲಸದಿಂದ ಬೇಸರ ಬರುವದು ಎಂದು ಹೇಳುವದು ಸುಳ್ಳೆಂದು ಈ ಸಮಿತಿಯವರು ಸ್ಪಷ್ಟವಾಗಿ ಸಾರಿಹೇಳಿದ್ದಾರೆ. ಈ ಸಮಿತಿಯ ಅಧ್ಯಕ್ಷರನ್ನು ನಾವು ಒಂದು ಬೂಟಿನ ಕಾರಖಾನೆಗೆ ಕರೆದೊಯ್ಯಲಿಚ್ಛಿಸುತ್ತೇವೆ. ಅಲ್ಲಿ ಬೂಟುಗಳ ಒಳಭಾಗಕ್ಕೆ ಹಚ್ಚಬೇಕಾದ ಬಟ್ಟೆಯ ತುಂಡುಗಳನ್ನು ತಿರುಗಿಸುತ್ತಿರುವ ಪಟ್ಟಿಯೊಂದಿರುತ್ತದೆ. ಆ ಬಟ್ಟೆಯ ತುಂಡುಗಳಿಗೆ ಅಂಟನ್ನು ಹಚ್ಚುವದರಿಂದ ಪ್ರಾರಂಭಿಸಿ ಅದನ್ನು ಬೂಟಿಗೆ ಅಂಟಿಸುವವರೆಗೆ ಅಲ್ಲಿಯ ಕೆಲಸಗಾರರು ಅನೇಕ ಕ್ರಿಯೆಗಳನ್ನು ನಡೆಸಬೇಕಾಗುತ್ತವೆ. ಇಲ್ಲಿ ನಮ್ಮ ಅಧ್ಯಕ್ಷರನ್ನು ಪ್ರಥಮಸ್ಥಾನದಲ್ಲಿಡೋಣ. ತನ್ನೆದುರಿಗೆ ತಿರುಗುತ್ತಿರುವ ಬಟ್ಟೆ ತುಂಡುಗಳಿಗೆ ಬ್ರಶದಿಂದ ಅಂಟನ್ನು ಬಡಿಯುವ ಕೆಲಸ ನೋಡಲಿಗನದು. ಮುಂಜಾನೆ ಎಂಟು ಗಂಟೆಯಿಂದ ಸಂಜೆ ಐದು ಗಂಟೆಯವರೆಗೆ ಇದೇ ಕೆಲಸ ಅವನದು. ನಡುನೆ ಒಂದು ತಾಸು ಮಾತ್ರ ಊಟಕ್ಕೆ ಬಿಡವು ಇರುತ್ತದೆ. ಹೀಗೆ ಅವನು ೩೬೦ ದಿನವೂ ದುಡಿಯಬೇಕು. ಅವನಿಗೆ ಸಿಗುವದು ದಿನಕ್ಕೆ ಎಂಟಾಣೆ ಕೂಲಿ. ಈ ಸಮಿತಿಯ ಇತರ ಸದಸ್ಯರೇನು ಹೇಳುವರೆಂಬುದನ್ನು ನಾವಿನ್ನು ನೋಡುವ ಅಗತ್ಯವೇ ಇಲ್ಲ''. ''ಮನುಷ್ಯನು ಸ್ವೇಚ್ಛೆಯುಂತೆ ನಡೆಯುವದು ಇಲ್ಲಿ ಸೂಚಿತವಾದ ಯೋಜನೆಗೆ ಸಂಬಂಧವಾದುದು'' ಎಂದು ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಬಟ್ಟೆಯ ತುಂಡು ತನ್ನೆದುರು ಹಾಯ್ದು ಹೋಗುವಾಗ ನಮ್ಮ ಅಧ್ಯಕ್ಷರು ಅದರ ಅಂಟನ್ನು ಬಳಿಯದಿದ್ದರೆ ಕೊನೆಗೆ ಅದನ್ನು ಬೂಟಿಗೆ ಅಂಟಿಸುವದು ಅಸಾಧ್ಯವಾಗಿ ದೇವರ ಉದ್ದೇಶ ನಿಷ್ಫಲವಾಗುತ್ತದೆ. ಆದ್ದರಿಂದ ತನ್ನ ಇಚ್ಛೆಯಂತೆ ನಡೆಸಲು ಅಧ್ಯಕ್ಷರಿಗೆ ಅವಕಾಶ ಕೊಡುವದು ಅವಶ್ಯ. ಇದೇ ಸಿದ್ಧಾಂತ.

ಉದ್ಯೋಗಗಳ ಆಯ್ಕೆಯ ವಿಷಯದಲ್ಲಿ ಹಳ್ಳಿಗರಿಗೆ ಅವಶ್ಯಕವಾದ ಉದ್ಯೋಗಗಳಾವವು ಮತ್ತು ಪಟ್ಟಣಗಳಿಗೆ ಬೇಕಾಗುವ ಉದ್ಯೋಗಗಳಾವವು ಎಂಬುದನ್ನು ಬೇರ್ಪಡಿಸುವ ತೊಂದರೆಯನ್ನು ತಾವು ವಹಿಸಿಲ್ಲವೆಂದು ಅವರು ಸ್ಪಷ್ಟವಾಗಿ ಹೇಳಿದ್ದಾರೆ.

ಹಿಂದೀಯರೇ ಹಿಂದೀ ಪರಿಸ್ಥಿತಿಗೆ ಒಗ್ಗುವಂತೆ ತಯಾರಿಸಿದ ಯೋಜನೇ ತಮ್ಮದಾಗಿದೆ ಎಂದು ಅವರು ಹೇಳಿಕೊಳ್ಳುತ್ತಾರೆ. ಹಿಂದೀಯರ ಮಿದುಳೇ ಇದನ್ನು ರಚಿಸಿದೆ ಎಂಬಲ್ಲಿ ವಾದವಿಲ್ಲ. ಆದರೆ ಅವರು ಪರಿಸ್ಥಿತಿಯನ್ನು ಅರಿತುಕೊಂಡಿರುವ ವಿಷಯಕ್ಕೆ ಮಾತ್ರ ವಾದವಿದೆ. ತಮ್ಮ ಯೋಜನೆಯನ್ನು ಪ್ರಾರಂಭಿಸಲಿಲ್ಲವಾದರೆ ಹಳ್ಳಿಗಳು ಸ್ವಾವಲಂಬಿಗಳಾಗಲಾರವೆಂಬ ಹೆದರಿಕೆ ಅವರಿಗಿದೆ.

ಇನ್ನೂ ಅನೇಕ ಮನೋರಂಜಕ ರೀತಿಯಲ್ಲಿ ಅವರು ಆತ್ಮ ಸಮರ್ಥನೆ ಮಾಡಿಕೊಂಡಿದ್ದಾರೆ ಆದರೆ ಓದುಗರ ಹಿತವನ್ನು ಗಮನಿಸಿ ಆ ಅವತರಣಿಕೆಗಳನ್ನು ನಾವಿಲ್ಲಿ ಕೊಡುವುದಿಲ್ಲ. ತಾವು ಮಾಡಿರುವ ಸೂಚನೆಗಳು ಮುಂಬಯಿ ಪ್ರಾಂತಕ್ಕಷ್ಟೇ ಅಲ್ಲ, ಎಲ್ಲ ಪ್ರಾಂತಗಳಿಗೂ ಅನ್ವಯಿಸಬೇಕೆಂದು ಅವರು ಹೇಳಿ ತಮ್ಮ ಸ್ಪಷ್ಟ ವಕ್ತವ್ಯವನ್ನು ತೋರಿಸಿ ಕೊಟ್ಟಿದ್ದಾರೆ ಇದೊಂದು ಎಚ್ಚರಿಕೆಯೆ?

ದೊಡ್ಡಪ್ರಮಾಣದಿಂದ ನಡೆಯುವ ಗ್ರಾಮೋದ್ಯೋಗಗಳೆಂದರೆ ಗೋಮುಖ ವ್ಯಾಘ್ರವಿದ್ದಂತೆ ಸಾರ್ವಜನಿಕರೂ ಸರಕಾರವೂ ಈ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಸಕ್ಕರೆ ಹಚ್ಚಿದ ಕಹಿ ಗುಳಿಗೆಯನ್ನು ನುಂಗದಂತೆ ನೋಡಿಕೊಳ್ಳಬೇಕು.

ಹರಪನಹಳ್ಳಿ ಸಾಹಿತ್ಯ ಸಮ್ಮೇಳನ.

ಮಹಿಳಾ ಗೋಷ್ಠಿಯ ಅಧ್ಯಕ್ಷಸ್ಥಾನವನ್ನು ಶ್ರೀಮತಿ ಎಂ. ಎಸ್. ಪಾರ್ವತೀದೇವಿ ಕೇಸರಿಯವರು ವಹಿಸಲಿರುವರು. ಶ್ರೀಮತಿ ಟಿ ಯುಚ್. ಎಂ.

The Rayalaseema Bank Limited, Bellary.
ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೧೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:— **ಬಳ್ಳಾರಿ ಜಿಲ್ಲಾ:-** ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ ಬಳ್ಳಾರಿ, ಹಡಗಲಿ, ಕೂಡ್ಲಿಗಿ, ಆದವಾನಿ. **ಅನಂತಪುರ:-** ಅನಂತಪುರ, ಬೆಳಗುಪ್ಪ, ಧರ್ಮಾವರಂ, ಕದಿರಿ, ಪಾಮಿಡಿ, ತಮ್ಮನಚೆರ್ಲ, ಉರವಕೊಂಡ, ಹಿಂದೂಪುರ, ಗುತ್ತಿ. **ಕರ್ನೂಲು:-** ಕರ್ನೂಲು ಪತ್ತಿಕೊಂಡ. **ಕಡಪ:-** ರಾಜಂಪೇಟೆ, ಕಡಪ. **ಚಿತ್ತೂರು:-** ಚಿತ್ತೂರು, ಮದನಪಲ್ಲಿ, ತಿರುಪತಿ, ನಗರಿ, ಪಾಯಲ್ಪಾಡು

ಫಿಕ್ಸೆಡ್ ಡಿಪಾಜಿಟ್‌ನ ಬಡ್ಡೀದರ:- — 6 ತಿಂಗಳಿಗೆ ಶೇಕಡ ೨½% ವರ್ಷಕ್ಕೆ 3% 2 ವರ್ಷಗಳಿಗೆ 3½%.
ಕರೆಂಟು ಅಕೌಂಟು: 1%, **ಸೇವಿಂಗ್ಸ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.
ಮಾಪಿಳೆ ಪ್ರಾವಿಡೆಂಟ್ ಫಂಡ ಡಿಪಾಜಿಟ್:- 3%. ಬಿ. ವಿ. ಶೇಷಗಿರಿರಾವ್, **ಕಾರ್ಯದರ್ಶಿ.**

ಏರ್ಪಾಟುಗಳು ಭರದಿಂದ ಸಾಗಿವೆ. ಸಮ್ಮೇಳನವು ಜರುಗುವ ಭಾಗಕ್ಕೆ ಶ್ರೀ ಟಿ. ಪಿ. ಕೈಲಾಸಂ ರವರ ಜ್ಞಾಪಕಾರ್ಥವಾಗಿ "ಕೈಲಾಸ ನಗರ" ವೆಂದು ಹೆಸರಿಡಲಾಗಿದೆ

ಜನಪದ ಸಾಹಿತ್ಯಗೋಷ್ಠಿಗೆ ಶ್ರೀ ಬೆಟಗೇರಿ ಕೃಷ್ಣಶರ್ಮರು ಅಧ್ಯಕ್ಷರಾಗಲು ಒಪ್ಪಿರುತ್ತಾರೆ

ಸಮ್ಮೇಳನದಲ್ಲಿ **ಈ ಕೆಳಗಿನ ಸ್ಪರ್ಧೆಗಳನ್ನು** ಏರ್ಪಡಿಸಲಾಗಿದೆ.

1 ಕಾವ್ಯಗಾಯನ 2 ಆಶುಕವಿತಾರಚನೆ.

3 ಜನಪದ ಹಾಡುಗಳು (ಹೆಂಗಸುಮಕ್ಕಳಿಗಾಗಿ)

ಭಾಗ ತೆಗೆದುಕೊಳ್ಳಲು ಬಯಸುವವರು ಮೇ ಒಂದನೇ ತಾರೀಕಿನೊಳಗಾಗಿ ಸಮಿತಿಗೆ ಕಳಿಸಬೇಕು. ತಡವಾಗಿ ಬಂದ ಹೆಸರುಗಳನ್ನು ಒಪ್ಪಿವುದು ಸಮಿತಿಯವರ ಇಷ್ಟ

ಪ್ರಯಾಣ ಸೌಕರ್ಯಗಳು

ದಾವಣಗೆರೆ, ಹರಿಹರ ಮತ್ತು ಹೊಸಪೇಟೆಯ ನಿಲ್ದಾಣಗಳಲ್ಲಿ ಸ್ವಯಂ ಸೇವಕರು ಕಾದಿದ್ದು ಸಮ್ಮೇಳನಕ್ಕೆ ಬರುವವರನ್ನು ಸಮ್ಮೇಳನದ ವಸತಿಯಿಂದ ಏರ್ಪಡಿಸಲಾದ ವಿಶೇಷ ಮೋಟಾರುಗಳಲ್ಲಿ ಹರಪನಹಳ್ಳಿಗೆ ಕಳುಹಿಸುವಂತೆ ವ್ಯವಸ್ಥೆಮಾಡುವರು.

ಹವೆ ಮತ್ತು ಬಿಸಿಲು.

ಬಳ್ಳಾರಿ ಜಿಲ್ಲೆಯ ಇತರ ಊರುಗಳಿಗಿಂತಲೂ ಹರಪನಹಳ್ಳಿಯು ಸಮುದ್ರ ಮಟ್ಟದಿಂದ, ಹೆಚ್ಚು ಎತ್ತರವಿರುವದರಿಂದ ಹವೆಯು ತಂಪಾಗಿರುತ್ತದಲ್ಲದೆ, ಬಿಸಿಲಿನ ಬೇಗೆಯು ಹೆಚ್ಚು ತಾಪದಾಯಕವಾಗಿರುವದಿಲ್ಲ.

ಸೀಸನ ವಿಷಯಕ್ಕೆ ಹೆಚ್ಚುಗಮನದಿಂದ ಯಾಂತ್ರಿಕ ಮತ್ತು ಇತರ ಸೌಕರ್ಯಗಳಿಂದ ವ್ಯವಸ್ಥೆಮಾಡಲಾಗಿದೆ

ಕಂಚಿಕೆರೆ (ಹರಪನಹಳ್ಳಿ)

ಈ ತಿಂಗಳು ೧೪ ನೆಯ ದಿನಾಂಕ ಕಂಚಿಕೆರೆ ಉನ್ನತ ಪ್ರಾಥಮಿಕ ಪಾಠಶಾಲಾ ಸಮಿತಿಯ ಸಭೆಯು ಹರಪನಹಳ್ಳಿ ಭಾಗದ ಶಾಲೆಗಳ ಮೇಲ್ವಿಚಾರಕರಾದ ಶ್ರೀ ಕೃಷ್ಣಾಚಾರ್ಯರಧ್ಯಕ್ಷತೆಯಲ್ಲಿ ಸಮಾವೇಶವಾಗಿ ಇಲ್ಲಿಯ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ 'ಸಿದ್ಧೇಶ್ವರ ಭೋಜನಾಲಯ' ವನ್ನು ಸ್ಥಾಪಿಸಿದರು. ಈ ಭೋಜನಾಲಯದ ಉಪಯೋಗಪಡೆಯಲಿಚ್ಛಿಸುವ ವಿದ್ಯಾರ್ಥಿಗಳು ಮೇ ತಿಂಗಳ ಅಂತ್ಯದೊಳಗಾಗಿ ಶಾಲೆಯ ಮುಖ್ಯೋಪಾಧ್ಯಾಯರಿಗೆ ಪ್ರಾರ್ಥನಾಪತ್ರಗಳನ್ನು ವಿವರಗಳೊಂದಿಗೆ ಕಳುಹಿಸಬೇಕು.

(ಈ ಭೋಜನಾಲಯದಲ್ಲಿ ಕೊನೆಯಪಕ್ಷ ಒಬ್ಬಿಬ್ಬ ಹರಿಜನರಿಗಾದರೂ ಸ್ಥಳವನ್ನು ಕೊಡಲು ಕೋರುತ್ತೇವೆ—ಸಾಹಿತ್ಯ ನವಭಾರತ)

214



Guarranteed Pure Pyra Gingelly oil

Best for Pickles, Cooking & Cooling.

DISTRIBUTORS:—

1. M/S. V. M. GIRI & SONS,
(Pro:- M, S Acharya) Car Street, Bellary
2. M/S. . RUSANJEE RAO, M VENKOJI RAO
General Merchants, Car Street Bellary.

ಶುದ್ಧ! ಗ್ಯಾರಂಟಿಯಾದ್ದು !! ಸತ್ವಕಾರಿ!!

—ಪೈರ ಎಳ್ಳೆಣ್ಣೆ—

ಕಣ್ಣಿಗೆ ಬಹಳ ತಂಪಾದ್ದು. ಅಡಿಗೆಯ ಎಲ್ಲಾ ಪದಾರ್ಥಗಳಿಗೆ ಬಳಸಲು ಶ್ರೇಷ್ಠವಾದ ಎಣ್ಣೆಯಿದು. ಉಪ್ಪಿನಕಾಯಿಗೆ ಈ ಎಣ್ಣೆಯನ್ನು ಪಯೋಗಿಸುವದರಿಂದ ಬಹಳಕಾಲ ಕೆಡದಂತಿಡಬಹುದು.

ಹಂಚಲಧಿಕಾರ ಉಳ್ಳವರು. 1) ವಿ ಎಂ. ಗಿರಿ ಅಂಡ್ ಸನ್ಸ್-ತೇರು ಬೀದಿ, ಬಳ್ಳಾರಿ. (ಎಂ. ಎಸ್. ಆಚಾರ್ಯ)
2) ಎಂ. ಹುಸೇಂಜಿರಾವ್, ಎಂ. ವೆಂಕೋಬರಾವ್. ಕೇರುಬೀದಿ, ಬಳ್ಳಾರಿ.

ಸು ಭಾ ಸ್
ರಾ ಷ್ಟ್ರ ಗೀ ತೆ.

ಸಿದ್ಧವಾಯಿತು— ಕ್ರಯ ೦—೮—೦

ಸುಂದರ ಮುದ್ರಣ— ಇಲ್ಲಿಯವರೆವಿಗೆ ಪ್ರಭಾತ ಫೇರಿ ರಾಷ್ಟ್ರೀಯ ಸಮಾವೇಶಗಳಲ್ಲಿ ಹಾಡಲ್ಪಟ್ಟ ಎಲ್ಲಾ ಮುಖ್ಯ ದೇಶಭಕ್ತ ಕವಿಗಳ ಕನ್ನಡ ಮತ್ತು ಹಿಂದೀ ಭಾಷೆಯಲ್ಲಿನ ರಾಷ್ಟ್ರಗೀತೆಗಳ ಸಮಗ್ರ ಸಂಗ್ರಹ. ಕರ್ನಾಟಕದಲ್ಲಿ ರಾಷ್ಟ್ರ ಗೀತೆಗಳ ಇಷ್ಟುದೊಡ್ಡ ಸಂಗ್ರಹವು ಇದುವರೆಗೆ ಪ್ರಕಟವಾಗಿಲ್ಲ. ಸ್ವಲ್ಪೇ ಪ್ರತಿಗಳು ಪ್ರಕಟವಾಗಿವೆ. ಬೆಳ್ಳು ಕೊಳ್ಳುವವರಿಗೆ ಕಮಿಷನ್ ಕೊಡಲಾಗುತ್ತದೆ.

'ನವಭಾರತ' ಕಾರ್ಯಾಲಯ ಬಳ್ಳಾರಿ.

—ರಾಷ್ಟ್ರೀಯ ಪುಸ್ತಕಗಳು.—
—ಕಾಂಗ್ರೆಸ್ ಸ್ವರೂಪ ದರ್ಶನ—

ರಾಷ್ಟ್ರೀಯ ಶಿಕ್ಷಣ	0—8—0
ಅಸ್ಪೃಶ್ಯತಾ ನಿವಾರಣೆ	0—12—0
ಪ್ರಾಂತಭಾಷೆ-ರಾಷ್ಟ್ರಭಾಷೆ	0—6—0
ಖಾದಿ	0—8—0
ಕಾಂಗ್ರೆಸ್ ಮತ್ತು ಸ್ವಯಂಸೇವಕದಳ	0-10-0
ಸತ್ಯಾಗ್ರಹ (ಇತಿಹಾಸ-ತಂತ್ರ)	0—8—0

ವಿ. ಪಿ. ಖರ್ಚುಬೀರೆ. ಇನ್ನು ಅನೇಕ ಪುಸ್ತಕಗಳು ದೊರೆಯುತ್ತವೆ—

ನವಭಾರತ ಕಾರ್ಯಾಲಯ, ಬಳ್ಳಾರಿ.

NAVA BHARAT, BELLARY. Reg. No. M. 4746

ನವಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು.	Subscription Rates
ವರ್ಷಕ್ಕೆ 5-0-0	One Year 5—0—0
6 ತಿಂಗಳಿಗೆ 3-0-0	Six months 3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

SRI.....

.....

.....

Printed at Krishna Press Bellary QH No. B 17 FOR (Q.H. NO. B-5.)
Edited & Published by T B. KESHAVARAO